1929

ದ್ರವ್ಯ ಗುಣ ವಿಜ್ಞಾನ

(DRAVYA - GUNA - VIGNANA)

ಭಾಗ ೧

—: ಲೇಖಕರು :—

ಡಾ. ಕೆ. ಜೆ. ಹಿರೇಮಠ, G. F. A. M. (Bombay)
ಅಸಿಸ್ಟಂಟ್ ಸರ್ಜನ್, ಕ. ಆ. ವಿ. ಹಾಸ್ಪಿಟಲ್, ಖಾಸಬಾಗ–ಬೆಳಗಾಂವ.
ಪ್ರಾಧ್ಯಾಪಕ, ಆಯುರ್ವೇದ ಮಹಾವಿದ್ಯಾಲಯ ಮತ್ತು
ಆಯುರ್ವೇದಿಕ ಕಾಲೇಜ ಆನಂದವಾಡಿ, (ಬೆಳಗಾಂವ).

ಮೊದಲನೇ ಆವೃತ್ತಿ

೧೯೬೫

ಬೆಲೆ : Rs. 6/-

ದ್ರವ್ಯ ಗುಣ ವಿಜ್ಞಾನ

(Dravya-Guna Vijnana)

ಭಾಗ ೧

—: ಲೇಖಕರು :—

ಡಾ. ಕೆ. ಜಿ. ಹಿರೇಮಠ, G. F. A. M. (Bombay)
ಅಸಿಸ್ಟಂಟ್ ಸರ್ಜನ್, ಕ. ಆ. ವಿ. ಹಾಸ್ಪಿಟಲ್, ಖಾಸಬಾಗ–ಬೆಳಗಾಂವ.
ಪ್ರಾಧ್ಯಾಪಕ, ಆಯುರ್ವೇದ ಮಹಾವಿದ್ಯಾಲಯ ಮತ್ತು
ಆಯುರ್ವೇದಿಕ ಕಾಲೇಜ ಅನಂದವಾಡಿ. (ಬೆಳಗಾಂವ)

ಮೊದಲನೇ ಆವೃತ್ತಿ

೧೯೬೫

ಬೆಲೆ : Rs. 6/-

-: ಪ್ರಕಾಶಕರು :-

ಡಾ. ಕೆ. ಜಿ. ಹಿರೇಮಠ,

ಜಿ. ಎಫ್. ಐ. ಎನ್. (ಬೊಂಬೆ).

-: ಮುದ್ರಕರು :-

ಶ್ರೀ. ವ್ಹಿ. ಎಸ್. ದೇಶಪಾಂಡೆ,

ಸ್ವಸ್ತಿಕ ಪ್ರಿಂಟಿಂಗ ಪ್ರೆಸ್ ಬೆಳಗಾಂವ.

—ಃ ಅಭಿಪ್ರಾಯ ಃ—

ಡಾ. ಕೆ. ಜೆ. ಹಿರೇಮಠ, G.F. A. M.(Bom) ಇವರು ದ್ರವ್ಯ ಗುಣದಬಗ್ಗೆ ಗ್ರಂಥವನ್ನು ಬರೆದು ಆಯುರ್ವೇದ ಶಾಸ್ತ್ರದ ಅಧ್ಯಾಪನ ಕ್ಷೇತ್ರದಲ್ಲಿಯ ದೊಡ್ಡ ಕೊರತೆಯನ್ನು ತುಂಬಿಕೆಗೆದಿದ್ದಾರೆ. ದ್ರವ್ಯಗುಣದ ಬಗ್ಗೆ ಬೇರೆ ಬೇರೆ ಸಂಹಿತಾ ಗ್ರಂಥ ಗಳಲ್ಲಿಯ ವಿಷಯವನ್ನೆಲ್ಲ ಒಂದೆಡೆಗೆ ತಂದು ಒಂದು ಪಾಠ್ಯಗ್ರಂಥವನ್ನು ನಿರ್ಮಾಣ ಮಾಡಿ ಸಮಯೋಚಿತ ಕಾರ್ಯ ಮಾಡಿದ್ದಾರೆ. ಈ ಗ್ರಂಥದಲ್ಲಿ ಅನುಕ್ತಪರಿಭಾಷಾ, ಪರ್ಯಾಯದ್ರವ್ಯ, ದ್ರವ್ಯಸಂಗ್ರಹಕಾಲ ಮೊದಲುಗೊಂಡು ದ್ರವ್ಯಗುಣಗಳ ಸಂಪೂರ್ಣ ಪರಿಭಾಷೆಯಬಗ್ಗೆ ವಿವೇಚನ ಮಾಡುವ ಶ್ರಮಪಟ್ಟಿದ್ದರಿಂದ ದ್ರವ್ಯಗುಣ ಶಾಸ್ತ್ರದ ಸಂಪೂರ್ಣ ಅಭ್ಯಾಸ ಮಾಡುವದಕ್ಕಾಗಿ ಅಧ್ಯಾಪಕವರ್ಗ, ವಿದ್ಯಾರ್ಥಿವರ್ಗಕ್ಕೆ ಅತ್ಯಂತ ಉಪಯುಕ್ತವಾದ ಗ್ರಂಥವಾಗಿದೆ. ಕನ್ನಡ ಭಾಷೆಯಲ್ಲಿ ಈ ವಿಷಯದಲ್ಲಿ ಈ ಮಾದ ರಿಯ ಗ್ರಂಥವು ಇದೊಂದೇ ಎಂದು ನನ್ನ ಅಭಿಪ್ರಾಯ. ಆದ್ದರಿಂದ ಕರ್ನಾಟಕ ಪ್ರಾಂತದಲ್ಲಿಯ ಎಲ್ಲ ವಿದ್ಯಾಲಯಗಳ ಅಧ್ಯಾಪಕವರ್ಗದಿಂದ ಇದು ಪಾಠ್ಯಗ್ರಂಥ ವೆಂದು ಮನ್ನಣೆಹೊಂದುವಷ್ಟು ಯೋಗ್ಯತೆಯುಳ್ಳದ್ದೆಂದು ನಾನು ಅಭಿಪ್ರಾಯ ಪಡುತ್ತೇನೆ.

ಬೆಳಗಾಂವ

ರಾ. ಕೃ. ಕುಲಕರ್ಣಿ, (ಜಿನರಾಳಕರ)
ಆಯುರ್ವೇದಾಚಾರ್ಯ, G.A M.S.

ದ್ರವ್ಯಗುಣ ಈ ವಿಷಯವು ರೋಗ ಚಿಕಿತ್ಸೆ, ಸ್ವಾಸ್ಥ್ಯರಕ್ಷಣೆಗಳಲ್ಲಿ ಬಹು ಮಹತ್ವದ ಭಾಗವಿರುತ್ತದೆ. ಕನ್ನಡದಲ್ಲಿ ವೈದ್ಯಕೀಯ ಗ್ರಂಥಗಳ ಕೊರತೆಯಿದ್ದು ಅದನ್ನು ಪೂರೈಸಲು ಬಹಳ ಕಡಿಮೆ ಪ್ರಮಾಣದಲ್ಲಿ ವೈದ್ಯರು ಭಾಗತೆಗೆದುಕೊಂಡಿ ದ್ದಾರೆ. ಮೈಸೂರ ಪ್ರಾಂತದಲ್ಲಿ ಸುಮಾರು 10 ಆಯುರ್ವೇದ ಮಹಾವಿದ್ಯಾಲಯ ಗಳಿದ್ದು ಅಲ್ಲೆಲ್ಲಾ ವಿಷಯ ಪ್ರಧಾನವಾಗಿ ಕಲಿಸಲು ಗ್ರಂಥಗಳ ಕೊರತೆ ಇದ್ದೇಯಿದೆ. ಇಂಥ ಪ್ರಸಂಗದಲ್ಲಿ ಬೆಳಗಾಂವಿ ಆಯುರ್ವೇದ ವಿದ್ಯಾಪೀಠದ ಪ್ರಾಧ್ಯಾಪಕರಾದ ಡಾ. ಕೆ. ಜೆ. ಹಿರೇಮಠ, G. F. A. M. ಇವರು ದ್ರವ್ಯಗುಣ ವಿಷಯವನ್ನು ತಮ್ಮ ವಿದ್ಯಾರ್ಥಿಗಳಿಗೆ ಕಲಿಸುತ್ತ ಅನುಭವದಿಂದ ಈ ಗ್ರಂಥರಚನೆಗೆ ತೊಡಗಿ ಬಹು ಪ್ರಯಾಸಪಟ್ಟು ಪೂರ್ಣಗೊಳಿಸಿದ್ದಾರೆ.

ಈ ಗ್ರಂಥದ ಸದುಪಯೋಗ ಎಲ್ಲ ವಿದ್ಯಾಲಯಗಳಲ್ಲಿಯೂ ಆಗಲೆಂದು ವೈದ್ಯ ಬಂಧುಗಳು ತಮ್ಮ ಸಂಗ್ರಹದಲ್ಲಿ ಈ ಪುಸ್ತಕವನ್ನಿಟ್ಟುಕೊಳ್ಳುವರಾಗಿ ನಂಬಿದ್ದೇನೆ. ಡಾ. ಕೆ. ಜೆ. ಹಿರೇಮಠ, ಇವರಿಗೆ ಸರಿಯಾದ ಪ್ರೋತ್ಸಾಹನದೊರೆತು ಮುಂದೆ ಬೇರೆ ಗ್ರಂಥರಚನೆಗೆ ಧನ್ವಂತರಿಯು ಅನುಕೂಲ ಮಾಡಿಕೊಡಲೆಂದು ಹಾರೈಸುತ್ತೇನೆ.

ಬೆಳಗಾಂವಿ
ತಾ. ೨೨-೨-೬೫

ಅ. ವಿ. ಗದಗ,
ಪ್ರಾಚಾರ್ಯ
ಕ. ಆ. ವಿದ್ಯಾ ಪೀಠ.

ಕರ್ನಾಟಕದಲ್ಲಿ ಆಯುರ್ವೇದದ ಗ್ರಂಥಗಳು ವಿರಳ. ಅದರಲ್ಲಿಯೂ ದ್ರವ್ಯ ಗುಣದ ಗ್ರಂಥಗಳು ಒಂದೆರಡೂ ಸಿಕ್ಕರೂ ಸರ್ವವಿಷಯವನ್ನು ಒಳಗೊಂಡಿಲ್ಲ. ಕರ್ನಾಟಕ ಆಯುರ್ವೇದ ವಿದ್ಯಾಪೀಠದ, ಆಯುರ್ವೇದ ಮಹಾವಿದ್ಯಾಲಯದ, ದ್ರವ್ಯಗುಣ ಪ್ರಾಧ್ಯಾಪಕರಾದ ಡಾ. ಕೆ. ಜೆ. ಹಿರೇಮಠರವರು ದ್ರವ್ಯಗುಣ ವಿಷಯವನ್ನು ಆಳವಾಗಿ ಅಭ್ಯಸಿಸಿದವರೂ ಮತ್ತು ಈ ವಿಷಯದ ಅಧ್ಯಾಪಕರು. ಇವರ ಸತತ ಪರಿಶ್ರಮದಿಂದ ಈ "ದ್ರವ್ಯ ಗುಣ ವಿಜ್ಞಾನ" ಎಂಬ ಗ್ರಂಥದ ಮೊದಲನೇ ಭಾಗವು ಹೊರಬರುತ್ತದೆಂದು ಬರೆಯಲು ಸಂತೋಷವಾಗುತ್ತದೆ.

ಈ ಗ್ರಂಥವು ಆಯುರ್ವೇದ ಜಗತ್ತಿನಲ್ಲಿ ಅಮೂಲ್ಯವಾದುದು. ಇದು ವಿದ್ವತ್ ಪೂರ್ಣ ಸವಿಸ್ತಾರ ಗ್ರಂಥವು. ಈ ಗ್ರಂಥವು ಆಯುರ್ವೇದ ವಿದ್ಯಾರ್ಥಿಗಳಿಗೂ, ವೈದ್ಯ ಅಧ್ಯಾಪಕರಿಗೂ ಹಾಗೂ ಆಯುರ್ವೇದ ಮತ್ತು ಪಾಶ್ಚಿಮಾತ್ಯ ವೈದ್ಯಕದ ಚಿಕಿತ್ಸಕರಿಗೂ ಒಳ್ಳೇ ಸಂಗ್ರಾಹ್ಯ ಗ್ರಂಥವಾಗಿದೆ.

ಈ ಗ್ರಂಥದ ಎರಡನೆಯ ಭಾಗವು ತೀವ್ರನಾಗಿ ಹೊರಬೀಳುವಂತೆ ಎಲ್ಲರೂ ಸಹಕರಿಸಬೇಕಾಗುವದೆಂದು ಬೇರೆ ಹೇಳಬೇಕಾಗಿಲ್ಲ. ಶಿವನು ಇವರು ಕೈಕೊಂಡ ಕಾರ್ಯದಲ್ಲಿ ಯಶ ಕೊಡಲೆಂದು ಹಾರೈಸುವೆ.

ಸತ್ಯಂ ಶಿವಂ ಸುಂದರಂ

ಸಿ. ಬಿ. ಪುರಾಣಿಕ,
ಪ್ರಾಚಾರ್ಯ
ಆ. ಮ. ಬಿಜಾಪೂರ.

We get rare 'Ayurvedic' Books written in Kannada. Dr. K. J. **Hiremath,** with his vast knowledge and teaching experience, has written this 'Dravya Guana Vijnana' part I. In this book he has dealt completely with the fundamentals of Dravya Guna Vijnana in a systematic manner. The book is calueated to be of utmost use to the teachers and students of Ayurvedic Colleges, and deserves to be prescribed as a text book I congratulate Dr. K. J. Hiremath, for his sincere efferts made to publish this valuable book and also strongly hope that the second part of this book will be shortly published.

Dr. M. C. Modi.

"ಮೊದಲ ಮಾತು"



ಕನ್ನಡದಲ್ಲಿ ಆಯುರ್ವೇದ ಪುಸ್ತಕಗಳು ಸಿಗುವದು ವಿರಳ. ಆದರಿಂದಾಗಿ ಆಯುರ್ವೇದ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗುವದು ಸಹಜವಿದೆ. ಆದ್ದರಿಂದ ದ್ರವ್ಯಗುಣ ಶಾಸ್ತ್ರದ ಬಗ್ಗೆ ಒಂದು ಪುಸ್ತಕ ಬರೆಯಬೇಕೆಂದು ನನಗೆ ಬಹಳ ದಿನಗಳಿಂದ ಇದ್ದ ಹಂಬಲವು ಈ ಪುಸ್ತಕದಿಂದ ಸ್ವಲ್ಪ ಮಟ್ಟಿಗಾದರೂ ಈಡೇರಿತೆಂದು ತಿಳಿದಿದ್ದೇನೆ. ಈ ಐದು ವರುಷಗಳ ಪರಿಶ್ರಮದಿಂದ ದ್ರವ್ಯಗುಣದ ಮೊದಲನೆ ಭಾಗವು ನಿಮ್ಮ ಕೈಸೇರುತ್ತಲಿದೆ. ಆಯುರ್ವೇದ ಕಲಿಯಬೇಕಾದರೆ ಮತ್ತು ಅದರಲ್ಲಿ ಸಾಕಷ್ಟು ಅಭಿರುಚಿ ಹುಟ್ಟಬೇಕಾದರೆ ಒಬ್ಬ ಗುರುವಿನ ಅವಶ್ಯಕತೆ ಇದ್ದೇ ಇರಬೇಕಾಗುವದು. ನನಗೆ ವೈದ್ಯರತ್ನ **ಗೋ. ಅ. ಫಡಕೆಯವರು** ಆಯುರ್ವೇದದ ವಿಷಯವಾಗಿ ಸಾಕಷ್ಟು ಅಭಿರುಚಿ ಹುಟ್ಟಸಿರುವರೆಂದು ಬೇರೆ ಹೇಳ ಬೇಕಾಗಿಲ್ಲ.

ಈ ಪುಸ್ತಕದಲ್ಲಿ ದ್ರವ್ಯ, ಗುಣ, ರಸ, ವಿಪಾಕ, ವೀರ್ಯ, ಪ್ರಭಾವ, ಅನುಕ್ತ ಕಾಲಾದಿ ಪರಿಭಾಷಾ, ಮಾನ ಪರಿಭಾಷಾ ಇತ್ಯಾದಿ ವಿಷಯುಗಳ ಸಂಬಂಧವಾಗಿ ಸಾಕಷ್ಟು ಸಂಗ್ರಹಿಸಿ ಬರೆದದ್ದಾಗಿದೆ. ನಾವು ಒಂದು ರೋಗವನ್ನು ಚಿಕಿತ್ಸೆ ಮಾಡು ವಾಗ ನಮಗೆ ಆ ರೋಗದ ಜ್ಞಾನವಿರುವದು ಅವಶ್ಯವಿರುವದು. ಅದರಂತೆ ಆ ರೋಗದ ಮೇಲೆ ಉಪಯೋಗವಾಗುವ ದ್ರವ್ಯಗಳ ರಸಾದಿಗುಣಗಳ ಪರಿಚಯವೂ ಇರಬೇಕಾಗುವದು. ಉದಾಃ— ಗ್ರಹಣೀ ರೋಗದಲ್ಲಿ ಅಗ್ನಿವಿಕೃತಿ ಇರುವದು. ಅದರಿಂದ ಸುಕ್ತಪಾಕ, ವಿದಾಹಪಾಕ, ಅಪಚನ, ಅಪಕ್ವ ಮಲ ಬೀಳುವದು ಇತ್ಯಾದಿ ಲಕ್ಷಣಗಳು ಇರುವವು. ಈ ರೋಗದಲ್ಲಿ ಉಪಯೋಗವಾಗುವ ದ್ರವ್ಯಗಳು ಗ್ರಹಣಿ ಅವಯವದ ಮೇಲೆ ಕಾರ್ಯಮಾಡುವಂಥವುಗಳು ಇರಬೇಕಾಗುವವು. ಆದ್ದರಿಂದ ತಕ್ರವು ಗ್ರಹಣಿ ರೋಗದ ಮೇಲೆ ಉತ್ತಮ ಔಷಧವಿರುವದು. ಅಂದರೆ ಇದು ಗ್ರಹಣಿ ರೋಗದ ಸಂಪ್ರಾಪ್ತಿಯ ವಿರುದ್ಧ ಕಾರ್ಯಮಾಡುವದು. ಯಾವದೇ ಒಂದು ಔಷಧ ವನ್ನು ನಾವು ರೋಗದಮೇಲೆ ಪ್ರಯೋಗ ಮಾಡುವದಾದರೆ ನಮಗೆ ಮೊದಲು ರೋಗಿಯ ಶರೀರ ಮತ್ತು ರೋಗದ ಜ್ಞಾನ ಇರಬೇಕಾದುದು ಅತ್ಯವಶ್ಯವಿದೆ. ಒಂದು ಕೆಲಸ ಪೂರ್ಣವಾಗಬೇಕಾದರೆ ಅನೇಕ ಜನರ ಸಹಕಾರವಿಲ್ಲದೆ ಆಗುವದಿಲ್ಲ. ಈ ಪುಸ್ತಕವು ಪೂರ್ಣವಾಗಲಿಕ್ಕೆ ಮುಖ್ಯ ಸಹಾಯಕರಾದಂಥಹ ನನ್ನ ವಿದ್ಯಾರ್ಥಿ ಗಳಾದ ಡಾ. ಜಿ. ಎನ್. ಗೋಕಾವಿ ಹಾಗೂ ಡಾ. ಪಿ. ಕೆ. ಹಿರೇಮಠರವರಿಗೆ ನಾನು ಚಿರಋಣಿ ಇದ್ದೇನೆ. ಅದಲ್ಲದೆ ಕೆಲವು ಸಲಹೆ ಸೂಚನೆಗಳನ್ನು ಮಾಡಿದ್ದ ಕ್ಕಾಗಿ, ಡಾ. ಕೆ. ಜಿ. ಸಾಂಬ್ರೆಮಠ, ಪಂಡಿತ ವ್ಹಿ. ಕೆ. ದೇವಾಂಗಮಠ ಹಾಗೂ

ಡಾ. ಸಿ. ಪಿ. ಛಪ್ಪನ್ನಮಠ ಇವರಿಗೂ ನಾನು ಆಭಾರಿಯಿದ್ದೇನೆ. ಪ್ರೂಫ್ ತಿದ್ದಲಿಕ್ಕೆ ಸಾಕಷ್ಟು ಶ್ರಮವಹಿಸಿ ಕೆಲಸ ಮಾಡಿ ಕೊಟ್ಟದ್ದಕ್ಕಾಗಿ ನನ್ನ ವಿದ್ಯಾರ್ಥಿಗಳಾದ ಶ್ರೀಯುತ ಪಿ. ಎಸ್. ಹಿರೇಮಠ, ಬಿ. ಎಸ್. ಗೋನ್ವಾಳಮಠ, ಎಮ್. ಸಿ. ಛಪ್ಪನ್ನಮಠ, ಜಿ. ಜಿ. ಹಿರೇಮಠ ಮತ್ತು ಎಸ್. ಬಿ. ಹಿರೇಮಠ ಇವರಿಗೂ ನನ್ನ ಹೃತ್ಪೂರ್ವಕ ಅಭಿವಂದನೆಗಳನ್ನು ಸಲ್ಲಿಸದೇ ಇರಲಾರೆ.

ಈ ಪುಸ್ತಕಕ್ಕೆ ಅಭಿಪ್ರಾಯಗಳನ್ನು ಬರೆದುಕೊಟ್ಟ ಡಾ. ಪದ್ಮಶ್ರೀ ಎಮ್. ಸಿ. ಮೋದಿಯವರು, ಡಾ. ಸಿ. ಬಿ. ಪುರಾಣಿಕ ಪ್ರಿನ್ಸಿಪಾಲರು ಆಯುರ್ವೇದ ಕಾಲೇಜ ವಿಜಾಪೂರ, ಡಾ. ಆ. ವೀ. ಗದಗ ಪ್ರಿನ್ಸಿಪಾಲರು ಆಯುರ್ವೇದ ಕಾಲೇಜ ಬೆಳಗಾಂವ ಮತ್ತು ವೈದ್ಯ ರಾ. ಕೃ. ಕುಲಕರ್ಣಿ ಪ್ರಾಧ್ಯಾಪಕರು ಆಯುರ್ವೇದ ಕಾಲೇಜ ಬೆಳಗಾಂವ ಇವರೆಲ್ಲರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈ ಪುಸ್ತಕವನ್ನು ಯೋಗ್ಯವೇಳೆಯಲ್ಲಿ ಮುದ್ರಿಸಿ ಕೊಟ್ಟದ್ದಕ್ಕಾಗಿ ಸ್ವಸ್ತಿಕ ಪ್ರಿಂಟಿಂಗ ಪ್ರೆಸ್ ಮಾಲಕರಾದ ಶ್ರೀಯುತ ವ್ಹಿ. ಎಸ್. ದೇಶಪಾಂಡೆ, ಇವರಿಗೂ ನಾನು ಋಣಿ ಇದ್ದೇನೆ.

ಕೊನೆಯದಾಗಿ ನಾನು ಆಯುರ್ವೇದದ ಎಲ್ಲ ವಿದ್ಯಾರ್ಥಿ ಮತ್ತು ಶಿಕ್ಷಕ ವರ್ಗದವರಿಗೆ ವಿನಂತಿ ಮಾಡಿಕೊಳ್ಳುವುದೇನಂದರೆ ಈ ಪುಸ್ತಕದಬಗ್ಗೆ ಯೋಗ್ಯ ಸಲಹೆ ಸೂಚನೆಗಳನ್ನು ಮಾಡಿಕೊಟ್ಟದ್ದಾದರೆ ನಾನು ಅವರಿಗೆ ತುಂಬಾ ಉಪಕೃತನಾಗುವೆನು ಮತ್ತು ಅವುಗಳ ತಿದ್ದುಪಡೆಯನ್ನು ಮುಂದಿನ ಆವೃತ್ತಿಯಲ್ಲಿ ಅವಶ್ಯಮಾಡುವೆನು.

ಖಾಸಬಾಗ—ಬೆಳಗಾಂವ
ಫಾಲ್ಗುಣ ಶು. ೧
ಶಕೆ ೧೮೮೬

ತಮ್ಮೆಲ್ಲರ ನಮ್ರ,
ಡಾ. ಕೆ. ಜೆ. ಹಿರೇಮಠ,
G. F. A. M. (Bombay).

ಶ್ರೀ.

ಲಿಂ. ಶ್ರೀ ಬಾಲಲೀಲಾ ಸಂಗಮೇಶ್ವರ
ಶಿವಾಚಾರ್ಯ (ಶ್ರೀ ಹೂಲಿ ಅಜ್ಜನವರು)
ಸಂಬಯ್ಯನವರಮಠ ಹೂಲಿ,



ಇವರ ಪಾದಾರವಿಂದಗಳಲ್ಲಿ ಅರ್ಪಿಸಿದೆ.

ವಿಷಯಾನುಕ್ರಮಣಿಕೆ

ಪ್ರಕರಣ ೧

ದ್ರವ್ಯ ವಿಜ್ಞಾನ

ಪ್ರಕರಣ ೨

ಗುಣ ವಿಜ್ಞಾನ

ಪ್ರಕರಣ ೩

ರಸ ವಿಜ್ಞಾನ

ಪ್ರಕರಣ ೪

ವಿಪಾಕ ವಿಜ್ಞಾನ

ಪ್ರಕರಣ ೫

ವೀರ್ಯ ವಿಜ್ಞಾನ

ಪ್ರಕರಣ ೬

ಪ್ರಭಾವ ವಿಜ್ಞಾನ

ಪ್ರಕರಣ ೧೧

ಪಂಚವಿಧ ಕಷಾಯ ಕಲ್ಪನಾ ವಿಜ್ಞಾನೀಯ ಅಧ್ಯಾಯ

ಪ್ರಕರಣ ೧೨

ಮಾನ ಪರಿಭಾಷಾ ವಿಜ್ಞಾನ

ಪ್ರಕರಣ ೧

ದ್ರವ್ಯ ವಿಜ್ಞಾನ

ದ್ರವ್ಯಗುಣ ಶಾಸ್ತ್ರದಲ್ಲಿ ದ್ರವ್ಯ, ರಸ, ವಿಪಾಕ, ವೀರ್ಯ ಮತ್ತು ಪ್ರಭಾವ ಇತ್ಯಾದಿಗಳಲ್ಲಿ ದ್ರವ್ಯವೇ ಶ್ರೇಷ್ಠವಿರುವದರಿಂದ ಮೊದಲು ದ್ರವ್ಯದ ವಿವೇಚನೆಯನ್ನು ಮಾಡಿರುವರು: यत्राश्रिताः कर्म गुणाः कारणं समवायि यत् तद्द्रव्यम् । ಯಾವುದರಲ್ಲಿ ಕರ್ಮ ಮತ್ತು ಗುಣ ಇವೆರಡೂ ಸಮವಾಯ ಸಂಬಂಧದಿಂದಿರುವವೋ ಅದಕ್ಕೆ ದ್ರವ್ಯವೆನ್ನುವರು. ಕರ್ಮ ಅಂದರೆ ಕಾರ್ಯ ಮಾಡುವ ಶಕ್ತಿ ಮತ್ತು ಗುಣವೆಂದರೆ ವಿಶಿಷ್ಟ ಧರ್ಮ. ಕರ್ಮ ಹಾಗೂ ಗುಣ ಇವುಗಳಿಂದ ದ್ರವ್ಯದ ಪರಿಚಯ ಮಾಡಿಕೊಳ್ಳಲು ಬರುವದು. ದ್ರವ್ಯಗಳು ಒಟ್ಟು ಒಂಭತ್ತು ಇರುವವು. ಪೃಥ್ವಿ, ಆಪ್, ತೇಜ, ವಾಯು, ಆಕಾಶ, ಕಾಲ, ದಿಕ್, ಆತ್ಮಾ ಮತ್ತು ಮನ ಹೀಗೆ ಒಟ್ಟು ಒಂಭತ್ತು ನ್ಯಾಯಪ್ರತಿಪಾದಿತ ದ್ರವ್ಯಗಳಿರುವವು. ಇವುಗಳಲ್ಲಿ ಆತ್ಮಾ ಮತ್ತು ಮನ ಇವು ಆಧ್ಯಾತ್ಮ ದ್ರವ್ಯಗಳಿದ್ದು ಕಾಲ ಹಾಗೂ ದಿಕ್ ಇವು ಸಹಾಯಕ ನಿಮಿತ್ತ ದ್ರವ್ಯಗಳಿರುವವು. ಪೃಥ್ವಿ ಆದಿ ಪಂಚಮಹಾಭೂತಗಳಿಂದ ಸೃಷ್ಟಿಯಲ್ಲಿಯ ಎಲ್ಲ ದ್ರವ್ಯಗಳ ನಿರ್ಮಿತಿಯಾಗಿರುವದು. ಆದ್ದರಿಂದ ಅವುಗಳಿಗೆ ಪಂಚಭೌತಿಕ ದ್ರವ್ಯಗಳೆಂದು ಅಂದಿರುವರು. ಪಂಚಮಹಾಭೂತಗಳಿಂದ ನಿರ್ಮಿತವಾದ ಕಾರ್ಯ ದ್ರವ್ಯಗಳ ಜ್ಞಾನವನ್ನು ದ್ರವ್ಯಗುಣ ಶಾಸ್ತ್ರದಲ್ಲಿ ಮಾಡಿದ್ದಾರೆ.

खादीन्यात्मा मनः कालो दिशश्च द्रव्य संग्रहः ।

ಖಾದಿನಿ ಅಂದರೆ ಆಕಾಶ ಮೊದಲು ಮಾಡಿಕೊಂಡು ಅರ್ಥಾತ್ ಆಕಾಶ, ವಾಯು, ತೇಜ, ಆಪ್, ಪೃಥ್ವಿ, ಆತ್ಮಾ, ಮನ, ಕಾಲ ಮತ್ತು ದಿಶಾ ಹೀಗೆ ಒಂಭತ್ತು ಕಾರಣ ದ್ರವ್ಯಗಳಿರುವವು. ಈ ಒಂಭತ್ತು ಕಾರಣ ದ್ರವ್ಯಗಳಲ್ಲಿ ಐದು ಮಹಾಭೂತಗಳಿಂದ ಸೃಷ್ಟಿಯು ಮತ್ತು ಸೃಷ್ಟಿಯಲ್ಲಿರುವ ಸರ್ವ ಕಾರ್ಯಸ್ವರೂಪಿ ದ್ರವ್ಯಗಳ ನಿರ್ಮಿತಿಯಾಗಿರುವದು. ಆದ್ದರಿಂದ 'ಸರ್ವ ದ್ರವ್ಯಂ ಪಾಂಚಭೌತಿಕಮ್' ಎಂದು ಅಂದಿರುವರು.

ದ್ರವ್ಯದ ಲಕ್ಷಣ

यत्राश्रिताः कर्मगुणाः कारणं समवायि यत् (च. सू. अ. १)

क्रिया गुणवत् समवायि कारणं द्रव्यम् (सु. सू. ४०)

गुणकर्माश्रयः समवायि कारणं इति द्रव्यलक्षणम् (यो)

रसादीनां पञ्चानां भूतानां यदाश्रयभूतं तद् द्रव्यम् (भा)

द्रव्यमाश्रय लक्षणं पञ्चानाम् । (र. वै.)

ಯಾವುದರ ಆಧಾರದಿಂದ ಗುಣ ಮತ್ತು ಕರ್ಮಗಳು ಆಶ್ರಯರೂಪವಾಗಿ ಇರುವವೊ ಅದಕ್ಕೆ ದ್ರವ್ಯವೆನ್ನುವರು. ಗುಣ ಮತ್ತು ಕರ್ಮಗಳಿಗೆ ಸ್ವತಂತ್ರ ಅಸ್ತಿತ್ವ ವಿರುವದಿಲ್ಲ. ಅವು ದ್ರವ್ಯದಲ್ಲಿ ಸಮವಾಯ ಸಂಬಂಧದಿಂದಿರುವವು. ಹೆಚ್ಚು ವಿಸ್ತಾರವಾಗಿ ದ್ರವ್ಯದ ಲಕ್ಷಣವನ್ನು ಈ ರೀತಿಯಾಗಿ ಹೇಳಿರುವರು.

रसो गुणस्तथावीर्यं विपाकः शक्तिरेव च ।
पञ्चानां समाहारस्तद् द्रव्यमिति कथ्यते ॥

ರಸ, ಗುಣ, ವೀರ್ಯ, ವಿಪಾಕ ಮತ್ತು ಪ್ರಭಾವ ಇವುಗಳ ಆಶ್ರಯ ಯಾವುದರಲ್ಲಿರುವದೋ ಅದಕ್ಕೆ ದ್ರವ್ಯವೆನ್ನುವರು. ಗುರು, ಲಘು, ಉಷ್ಣ, ಶೀತ, ಸ್ನಿಗ್ಧ, ರೂಕ್ಷ ಇತ್ಯಾದಿ ಗುಣಗಳು ಹಾಗೂ ವಮನ, ವಿರೇಚನ ಇತ್ಯಾದಿ ಕರ್ಮಗಳು ದ್ರವ್ಯದಲ್ಲಿ ಸಮವಾಯ ಸಂಬಂಧದಿಂದ ಇರುವವು. ಯಾವ ಪ್ರಕಾರ ಮಣ್ಣು-ಗಡಿಗೆಗಳ ಮತ್ತು ಅರಿವೆ-ತಂತುಗಳ ಸಮವಾಯ ಸಂಬಂಧವಿರುವದೋ ಅದರಂತೆಯೇ ಕರ್ಮ ಮತ್ತು ಗುಣಗಳ ಸಮವಾಯ ಸಂಬಂಧವಿರುವದು. तन्तु समवेतं पटरूपं कार्यं उत्पद्यते । अतः तंतवः पटस्य समवायि कारणम् । ಅಂದರೆ ಯಾವುದರ ಸಹಾಯದಿಂದ ಕಾರ್ಯೋತ್ಪತ್ತಿಯಾಗುವದೋ ಅದು ಆ ಕಾರ್ಯದ ಸಮವಾಯಿ ಕಾರಣವಿರುವದು. ಉದಾ:– गंधवती पृथिवी; रूपरहित स्पर्शवान् वायुः; शीत स्पर्शवत्यः आपः; उष्ण स्पर्शवत्तेजः ।

ಪಂಚ ಮಹಾಭೂತಗಳಿಂದ ಕಾರ್ಯ ದ್ರವ್ಯಗಳ ಉತ್ಪತ್ತಿ:-

ಸೃಷ್ಟಿಯಲ್ಲಿರುವ ಎಲ್ಲ ದ್ರವ್ಯಗಳು ಪಂಚಭೌತಿಕ ಇರುವವು. ಪೃಥ್ವಿ, ಆಪ್, ತೇಜ, ವಾಯು ಮತ್ತು ಆಕಾಶ ಈ ಐದು ಮಹಾಭೂತಗಳ ಸಮುದಾಯದಿಂದ ಕಾರ್ಯ ದ್ರವ್ಯಗಳ ಉತ್ಪತ್ತಿಯಾಗಿರುವದು.

सर्वं द्रव्यं पाञ्चभौतिकमस्मिन्नर्थे । (च. सू. २६)
पञ्चभूतात्मकं तत्तु क्ष्मामधिष्ठाय जायते ।
अम्बु योन्यग्नि पवननभसां समवायतः ।
तन्निर्वृत्तिर्विशेषश्च व्यपदेशस्तु भूयसा ॥ (अ. हृ. सू. ९)

ಪಂಚಮಹಾಭೂತಗಳಲ್ಲಿ ಪೃಥ್ವಿಯು ಸರ್ವದ್ರವ್ಯಗಳ ಉತ್ಪತ್ತಿಗೆ ಆಶ್ರಯ ಸ್ಥಾನವಾಗಿರುವದು. ಆಪ್ ಮಹಾಭೂತವು ದ್ರವ್ಯ ನಿರ್ಮಿತಿಯ ಮುಖ್ಯ ಕಾರಣ ದ್ರವ್ಯವಿರುವದು. ಇದು ದ್ರವ್ಯದಲ್ಲಿರುವ ಅಣುಗಳನ್ನು ಕೂಡಿಸುವ ಕಾರ್ಯ ಮಾಡುವದು. ಉಳಿದ ತೇಜ, ವಾಯು, ಆಕಾಶ ಇವುಗಳ ಸಮವಾಯದಿಂದ ದ್ರವ್ಯಕ್ಕೆ ಸ್ವರೂಪ ಬರುವದು. ಪ್ರತಿಯೊಂದು ದ್ರವ್ಯದಲ್ಲಿ ಪಂಚಮಹಾಭೂತಗಳ ಮಿಶ್ರಣವು ಬೇರೆ ಬೇರೆ ರೀತಿಯಲ್ಲಿರುವದು. ಆದ್ದರಿಂದ ಎಲ್ಲ ದ್ರವ್ಯಗಳು ಒಂದೇ ತೆರನಾಗಿ ಇದ್ದದ್ದು ಕಂಡು ಬರುವದಿಲ್ಲ. ಪಂಚಮಹಾಭೂತಗಳ ಮಿಶ್ರಣವು ಬೇರೆಬೇರೆ ರೀತಿಯಲ್ಲಿ ಆಗಿರುವದರಿಂದ

ಪ್ರತಿಯೊಂದು ದ್ರವ್ಯಗಳ ಸ್ವರೂಪ ಭಿನ್ನತಾ, ಕಾರ್ಯ ಭಿನ್ನತಾ ಮತ್ತು ಗುಣ ಭಿನ್ನತಾ ಇದ್ದದ್ದು ಕಂಡು ಬರುತ್ತದೆ. ಈ ರೀತಿಯಾಗಿ ಪಂಚಮಹಾಭೂತಗಳ ಸಂಯೋಗ ತಾರತಮ್ಯ ಭೇದದಿಂದ ಅನೇಕ ದ್ರವ್ಯಗಳ ಉತ್ಪತ್ತಿಯಾಗುವದು. ಉದಾ:— ಕಾರ್ಯರೂಪಿ ಗಡಿಗೆ ತಯಾರಾಗಬೇಕಾದರೆ ಪಂಚಮಹಾಭೂತಗಳ ಸಮವಾಯ ಸಂಬಂಧವಿರಬೇಕಾಗುವದು. ಗಡಿಗೆ ತಯಾರಾಗಬೇಕಾದರೆ ಮಣ್ಣು (ಪೃಥ್ವಿ) ಅವಶ್ಯ ವಾಗಿ ಬೇಕೇಬೇಕು. ಅದನ್ನು ತೋಯಿಸಲಿಕ್ಕೆ ನೀರು (ಜಲ) ಬೇಕು. ನೀರಿನಿಂದ ಅಣುಗಳ ಸಂಯೋಗವಾಗುವದು. ಆದ್ದರಿಂದ ಜಲ ಯೋನಿ ರೂಪ ಅಂದರೆ ದ್ರವ್ಯ ದಲ್ಲಿರುವ ಅಣುಗಳನ್ನು ಕೂಡಿಸುವ ಕಾರ್ಯ ಮಾಡುವದು. ನಂತರ ಅದರ ಪಚನ ಮಾಡಬೇಕಾಗುವದು. ಪಚನ ಮಾಡದಿದ್ದರೆ ಮಣ್ಣಿನ ಕಣಗಳು ಒಂದಕ್ಕೊಂದು ಕೂಡಿಕೊಂಡು ಇರಲಾರವು. ಆದ್ದರಿಂದ ಅದರ ಪಚನ ಮಾಡಲಿಕ್ಕೆ ಬೆಂಕಿ (ತೇಜ) ಬೇಕಾಗುವದು. ವಾಯುವಿನಿಂದ ದ್ರವ್ಯಕ್ಕೆ ಕಠಿಣತ್ವ ಪ್ರಾಪ್ತವಾಗುವದು. ಆಕಾಶ ಈ ಮಹಾಭೂತದಿಂದ ಪೊಳ್ಳುತನ ನಿರ್ಮಾಣವಾಗುವದು. ಈ ಪ್ರಕಾರ ಪಂಚ ಮಹಾಭೂತಗಳ ಸಹಾಯದಿಂದ ಕಾರ್ಯಕಾರಿ ದ್ರವ್ಯಗಳ ಉತ್ಪತ್ತಿಯಾಗುವದು. ಸೃಷ್ಟಿಯಲ್ಲಿರುವ ಎಲ್ಲ ದ್ರವ್ಯಗಳು ಪಂಚಮಹಾಭೂತಗಳಿಂದ ನಿರ್ಮಿತಿಯಾಗುವವೆಂದ ಮೇಲೆ ಅವು ಒಂದೇ ರೀತಿಯಾಗಿರಬೇಕೆಂಬ ಸಂಶಯ ಬರುವದು ಸ್ವಾಭಾವಿಕವಾಗಿರು ವದು. ಆದರೆ "ವ್ಯಪದೇಶಸ್ತು ಭೂಯಸಾ" ಈ ನ್ಯಾಯದ ಪ್ರಕಾರ ಆಯಾ ದ್ರವ್ಯ ಗಳಲ್ಲಿರುವ ಮಹಾಭೂತಗಳ ಆಧಿಕ್ಯತೆಗನುಸಾರವಾಗಿ ಇವು ಪಾರ್ಥಿವ ದ್ರವ್ಯ, ಇವು ಆಪ್ಯ ದ್ರವ್ಯ, ಇವು ಆಗ್ನೇಯ ದ್ರವ್ಯಗಳೆಂದು ವಿಂಗಡಿಸಲು ಬರುವದು. "ವ್ಯಪದೇಶಸ್ತು ಭೂಯಸಾ" ಅಂದರೆ ಯಾವ ದ್ರವ್ಯದಲ್ಲಿ ಯಾವ ಮಹಾಭೂತ ಅಧಿಕವಿರುವದೋ ಆ ದ್ರವ್ಯವು ಆ ಮಹಾಭೂತದ್ದೆಂದು ತಿಳಿಯಬೇಕು.

ದ್ರವ್ಯ ಪ್ರಧಾನತ್ವಂ

द्रव्यमेव रसादीनां श्रेष्ठं ते हि तदाश्रयाः । अ. हृ. सू. ९

ರಸ, ವೀರ್ಯ, ವಿಪಾಕಗಳಿಗಿಂತ ದ್ರವ್ಯವೇ ಶ್ರೇಷ್ಠವಿರುವದು. ಯಾಕಂದರೆ ರಸ, ವೀರ್ಯಾದಿಗಳು ದ್ರವ್ಯದ ಆಶ್ರಯದಲ್ಲಿರುವವು. ರಸ, ವೀರ್ಯ ಮತ್ತು ವಿಪಾಕಗಳು ದ್ರವ್ಯದ ಗುಣಗಳಿದ್ದು; ಇವುಗಳಿಗೆ ದ್ರವ್ಯವನ್ನು ಹೊರತುಪಡಿಸಿ ಬೇರೆ ಸ್ವತಂತ್ರ ಕಾರ್ಯ ಮಾಡಲು ಬರುವದಿಲ್ಲ. ಹಾಗೂ ಅವುಗಳಿಗೆ ಸ್ವತಂತ್ರ ಅಸ್ತಿತ್ವವಿರುವದಿಲ್ಲ. ಇಂಥದೇ ರಸದ ಅಥವಾ ಇಂಥದೇ ವೀರ್ಯದ ಉಪಯೋಗವನ್ನು ವ್ಯಾಧಿಯಲ್ಲಿ ಮಾಡಲು ಹೇಳದೇ ವಿಶಿಷ್ಟ ರಸ, ವೀರ್ಯಾತ್ಮಕವುಳ್ಳ ದ್ರವ್ಯದ ಉಪಯೋಗ ಮಾಡಲು ಶಾಸ್ತ್ರ ದಲ್ಲಿ ಹೇಳಿರುವರು. ವಿಪಾಕ ಅಥವಾ ವಿಶಿಷ್ಟ ಪಾಕವು ದ್ರವ್ಯದ ಪಚನ ವ್ಯಾಪಾರ ದಲ್ಲಿ ನಿರ್ಮಾಣವಾಗುವದು. ಯಾವುದೇ ವಿಪಾಕದ ಕಾರ್ಯವನ್ನು ಹೇಳುವಾಗ ಅದು ಆ ವಿಪಾಕಾತ್ಮಕ ದ್ರವ್ಯದ ಕಾರ್ಯವೆಂದು ತಿಳಿಯಬೇಕು. ಆದ್ದರಿಂದ ರಸ, ವೀರ್ಯ, ವಿಪಾಕಗಳಿಗಿಂತ ದ್ರವ್ಯವು ಶ್ರೇಷ್ಠವಿರುವದು.

पाको नास्ति विना वीर्याद् वीर्यं नास्ति विना रसात् ।
रसो नास्ति विना द्रव्याद् द्रव्यं श्रेष्ठमतः स्मृतम् ॥
जन्म तु द्रव्य रसयोरन्योन्यापेक्षिकं स्मृतम् ।
अन्योन्यापेक्षिकं जन्म यथा स्याद् देह देहिनोः ॥
वीर्य संज्ञा गुणा ये ऽ ष्टौ ते ऽ पि द्रव्याश्रयाः स्मृता. ।
रसेषु न भवन्त्येते निर्गुणास्तु गुणाः स्मृताः ॥
द्रव्ये द्रव्याणि यस्माद्धि विपच्यन्ते न षड्साः ।
श्रेष्ठं द्रव्यमतो ज्ञेयं शेषा भावास्तदाश्रयाः ॥ (सु. सू. ४०)

ವೀರ್ಯದ ಹೊರತಾಗಿ ವಿಪಾಕವಿರುವದಿಲ್ಲ. ರಸವಿಲ್ಲದೆ ವೀರ್ಯವಿರುವದಿಲ್ಲ, ಮತ್ತು ಆಶ್ರಯಭೂತ ದ್ರವ್ಯವಿಲ್ಲದೆ ರಸವಿರುವದಿಲ್ಲ. ಆದ್ದರಿಂದ ರಸ, ವೀರ್ಯ, ವಿಪಾಕ ಗಳಿಗಿಂತ ದ್ರವ್ಯವು ಶ್ರೇಷ್ಠವಿರುವದು. ಯಾಕಂದರೆ ದ್ರವ್ಯವು ರಸ, ವೀರ್ಯ, ವಿಪಾಕ ಗಳ ಆಶ್ರಯಸ್ಥಾನವಿರುವದೇ ಕಾರಣವು.

ಯಾವ ರೀತಿಯಾಗಿ ದೇಹ ಮತ್ತು ದೇಹಿ (ಆತ್ಮಾ) ಇವುಗಳ ಆಶ್ರಯ-ಆಶ್ರಯಿ ಭಾವದಿಂದ ಜನ್ಮ ಉಂಟಾಗುವದೋ ಅದರಂತೆ ದ್ರವ್ಯ ಮತ್ತು ರಸಾದಿಗಳು ಆಶ್ರಯ ಆಶ್ರಯಿ ಭಾವದಿಂದ ಇರುವವು. ರಸಾದಿಗಳ ಆಶ್ರಯಸ್ಥಾನ ದ್ರವ್ಯವಿರುವದರಿಂದ ದ್ರವ್ಯದ ಉತ್ಪತ್ತಿಯಾಗುವಾಗ ತದಾಶ್ರಿತ ರಸಾದಿಗಳ ಉತ್ಪತ್ತಿಯಾಗುವದು.

ಶೀತ, ಉಷ್ಣ, ಸ್ನಿಗ್ಧ, ರೂಕ್ಷ, ಮೃದು, ತೀಕ್ಷ್ಣ, ಪಿಚ್ಛಿಲ ಮತ್ತು ವಿಶದ ಈ ವೀರ್ಯ ಸಂಜ್ಞಕ ಎಂಟು ಗುಣಗಳು ದ್ರವ್ಯಾಶ್ರಿತವಿರುವವು. ಈ ಗುಣಗಳು ರಸಾಶ್ರಿತ ವಿರುವದಿಲ್ಲ. ಯಾಕಂದರೆ ಗುಣ ಸ್ವತಃ ನಿರ್ಗುಣವಿರುವವು.

ಶರೀರದಲ್ಲಿ ಆಹಾರ ದ್ರವ್ಯಗಳ ಮತ್ತು ಔಷಧಿ ದ್ರವ್ಯಗಳ ಪಚನವಾಗುವದು. ಆದರೆ ರಸಾದಿಗಳ ಪಚನವಾಗುವದಿಲ್ಲ. ಯಾಕಂದರೆ ರಸಾದಿಗಳು ದ್ರವ್ಯದಲ್ಲಿ ಆಶ್ರಯ ಮಾಡಿಕೊಂಡು ಇರುವವು. ಆದ್ದರಿಂದ ರಸಾದಿಗಳಿಗಿಂತ ದ್ರವ್ಯವೇ ಶ್ರೇಷ್ಠವಿರುವದು.

ದ್ರವ್ಯ ಪ್ರಧಾನತ್ವವನ್ನು ಶಾಸ್ತ್ರಕಾರರು ಅನೇಕ ಕಾರಣಗಳಿಂದ ಸಿದ್ಧ ಮಾಡುವರು:—

೧) ವ್ಯವಸ್ಥಿತತ್ವಾತ್.

इह खलु द्रव्यं व्यवस्थितं न रसादयः; यथा आमे
फले ये रसादयस्ते पक्वे न सन्ति । (सु. सू. ४०)
व्यवस्थानादिति द्रव्यं व्यवस्थितं, गुणा ह्यनवस्थिताः । उक्तं च—
'दूर्वाङ्कुरनिभं भूत्वा फलं जम्ब्वास्ततः पुनः ।
मेचकं भजते वर्णं पुनरञ्जन संनिभम् ।'
इति एवं तद्गताश्च स्पर्शरस गंधाश्चानवस्थिताः ।
जम्बूफलमिति द्रव्यम् सामान्यम् । (भा).

ವ್ಯವಸ್ಥಿತ ಅಂದರೆ ಸ್ಥಿರ ಅಥವಾ ಅಪರಿವರ್ತನ ಶೀಲ. ದ್ರವ್ಯವು ಸ್ಥಿರವಿರುವದು. ಆದರೆ ದ್ರವ್ಯಾಶ್ರಿತ ಗುಣ ಮತ್ತು ಕರ್ಮಗಳು ಅವ್ಯವಸ್ಥಿತ ಅಂದರೆ ಅಸ್ಥಿರ ಇರುವವು. ದ್ರವ್ಯಾಶ್ರಿತ ರಸಾದಿಗಳು ಸ್ಥಿರವಿರುವದಿಲ್ಲ. ಉದಾಃ–ಮಾವು ಸಣ್ಣದಿದ್ದಾಗ ಕಷಾಯ ಮತ್ತು ಅಮ್ಲ ರಸಾತ್ಮಕ ಇರುವದು. ಅದು ಬೆಳೆಯುತ್ತ ಹೋದಂತೆ ಅಮ್ಲರಸ ಪ್ರಧಾನವುಳ್ಳದ್ದಾಗುವದು. ಮತ್ತು ಅದು ಪಕ್ವವಾದನಂತರ ಮಧುರ ರಸ ಪ್ರಧಾನ ಉಳ್ಳದ್ದಾಗುವದು. ಈ ಉದಾಹರಣೆಯನ್ನು ನೋಡಲಾಗಿ ದ್ರವ್ಯವಿರುವ ಮಾವು ಒಂದೇ ಸ್ಥಿರವಾಗಿ ಇದ್ದರೂ ಅದರಲ್ಲಿ ಆಶ್ರಯಿಸಿದ ರಸಾದಿ ಗುಣಗಳು ಬದಲಾಗುವವು. ಆದರೆ ದ್ರವ್ಯವು ಬದಲಾಗುವದಿಲ್ಲ. ಆದ್ದರಿಂದ ದ್ರವ್ಯ ಶ್ರೇಷ್ಠವಿರುವದು. ದ್ರವ್ಯದಲ್ಲಿರುವ ಗುಣ ಮತ್ತು ಕರ್ಮಗಳು ಪರಿವರ್ತಿತವಾಗುವವು. ಆದರೆ ದ್ರವ್ಯವು ಮಾತ್ರ ಬದಲಾಗದೇ ಸ್ಥಿರವಾಗಿ ಇರುತ್ತದೆ.

೨) ನಿತ್ಯತ್ವಾಚ್ಚ.

नित्यं हि द्रव्यमनित्या गुणाः, यथा कालादि प्रविभागात्तदेव संपन्न रस गंधं व्यापन्न रस गंध वा भवति। (सु. सू. ४०)
'नित्यत्वं च द्रव्याणां कालपरिणामेनान्यथा भावेऽपि तदेवेदमिति प्रत्यभिज्ञायमानत्वादवगंतव्यम्।' (हा)

ನಿತ್ಯ ಅಂದರೆ ಬದಲಾಗದೆ ಇರುವದು. ದ್ರವ್ಯವು ನಿತ್ಯವಿರುವದು. ಆದರೆ ಗುಣ, ಕರ್ಮಗಳು ಅನಿತ್ಯವಿರುವವು; ಅಂದರೆ ಬದಲಾಗುವವು. ಕಾಲ, ನೀರು, ವಾಯು ಮೊದಲಾದ ಕಾರಣಗಳಿಂದ ರಸಾದಿ ಗುಣಗಳು ನಷ್ಟವಾಗುತ್ತವೆ. ಆದರೆ ದ್ರವ್ಯವು ಅದೇ ಇರುತ್ತದೆ. ಯಾವುದಕ್ಕೆ ನಿತ್ಯವಿರುವದೆಂದು ಅನ್ನುವರೊ ಅದಕ್ಕೆ ಕಾಲ ಪರಿಣಾಮದ ಮೂಲಕ ಅನ್ಯಸ್ವರೂಪ ಬಂದರೂ ಕೂಡ ಅದು ಅದೇ ಇರುವದೆಂದು ಜ್ಞಾನವಾಗುವದು. ಕಾಲ, ನೀರು, ಹವೆ ಇತ್ಯಾದಿಗಳ ಪರಿಣಾಮವಾಗಿ ದ್ರವ್ಯದಲ್ಲಿರುವ ರಸ, ಗಂಧಾದಿ ಗುಣಗಳು ಇಲ್ಲವಾದರೂ ದ್ರವ್ಯಮಾತ್ರ ಅದೇ ಉಳಿಯುವದು. ಉದಾಃ– ಸಂಪಿಗೆ ಹೂ ಇದು ಕಾಲ ಪರಿಣಾಮದಿಂದ ಒಣಗಿದರೆ ಅದರ ಗಂಧ ಕಡಿಮೆಯಾಗುವದು. ಅಥವಾ ಪೂರ್ಣವಾಗಿ ಇಲ್ಲದಾಗುವದು. ಆದರೂ ಕೂಡ ಅದನ್ನು ನಾವು ನೋಡಿದರೆ ಅದು "ಸಂಪಿಗೆ ಹೂ" ಎಂದು ಜ್ಞಾನವಾಗುವದು. ಆದ್ದರಿಂದ ದ್ರವ್ಯ ಶ್ರೇಷ್ಠವಿರುವದು. ದ್ರವ್ಯವು ನಿತ್ಯವಿದ್ದು ಅದರಲ್ಲಿರುವ ರಸಾದಿ ಗುಣಗಳು ಅನಿತ್ಯವಿರುವವು. ನಿತ್ಯ ವಸ್ತುವು ಅನಿತ್ಯವಸ್ತುಗಳಿಗಿಂತ ಪ್ರಧಾನವಿರುತ್ತದೆ.

೩) ಸ್ವಜಾತ್ಯವಸ್ಥಾನಾಚ್ಚ.

यथा हि–पार्थिव द्रव्यमन्यताभावं न गच्छत्येवं शेषाणि। (सु. सू. ४०)

ದ್ರವ್ಯಗಳು ತಮ್ಮ ಜಾತಿಯನ್ನು ಬಿಡುವದಿಲ್ಲ. ಪರಿಣಾಮವಾದಾಗ್ಯೂ ಕೂಡಾ ದ್ರವ್ಯಗಳು ಪಾರ್ಥಿವಾದಿ ವಿಶಿಷ್ಟ ಜಾತಿಯಲ್ಲಿಯೇ ಇರುತ್ತವೆ. ಅಂದರೆ ಪಾರ್ಥಿವ ದ್ರವ್ಯವು ಪಾರ್ಥಿವ ಸ್ವರೂಪದ್ದಾಗಿಯೇ ಉಳಿಯುವದು. ಯಾವುದು ಆಪ್ಯ ದ್ರವ್ಯವಿರುವದೋ

ಅದು ಆಕ್ಯಸ್ವರೂಪದಲ್ಲಿಯೇ ಉಳಿಯುವದು. ಈ ಪ್ರಕಾರ ಉಳಿದ ವಾಯ್ವಾದಿ ದ್ರವ್ಯಗಳು ತಮ್ಮ ಜಾತಿಯನ್ನು ಬಿಡದೆ ತಮ್ಮ ತಮ್ಮ ಸ್ವರೂಪದಲ್ಲಿಯೇ ಇರುತ್ತವೆ. ಇದರಿಂದ ದ್ರವ್ಯವು ತನ್ನ ಮೂಲ ಧರ್ಮವನ್ನು ಬಿಡುವದಿಲ್ಲ. ಆದರೆ ರಸಾದಿ ಗುಣಗಳು ತಮ್ಮ ಜಾತಿಗಳ ಪರಿತ್ಯಾಗ ಮಾಡುವವು. ದ್ರವ್ಯವು ತನ್ನ ಮೂಲ ಧರ್ಮ ಬಿಟ್ಟು ಅನ್ಯ ಧರ್ಮ ಅಥವಾ ಜಾತಿಗಳಲ್ಲಿ ಪರಿವರ್ತನವಾಗುವದಿಲ್ಲ.

೪) ಪಂಚೇಂದ್ರಿಯ ಗ್ರಹಣಾಚ್ಚ.

पंचभिरिन्द्रियैर्गृह्यते द्रव्यं न रसादयः । (सु. सू. ४०)
सर्वैः श्रोत्रादिभिरिन्द्रियैर्द्रव्यं गृह्यते, रसादयो ह्येकेन्द्रिय ग्राह्याः ।
एकमनेकेन्द्रिय ग्राह्यत्वात् प्रधानं द्रव्यमिति । (भा).

ದ್ರವ್ಯವು ಪಾಂಚಭೌತಿಕವಿದ್ದ ಕಾರಣ ದ್ರವ್ಯ ಜ್ಞಾನವು ಐದೂ ಇಂದ್ರಿಯಗಳ ಮುಖಾಂತರವಾಗುವದು. ಆದರೆ ದ್ರವ್ಯದ ಗುಣಗಳಾದ ರಸ, ಗಂಧಾದಿಗಳ ಜ್ಞಾನವು ಒಂದೇ ವಿಶಿಷ್ಟ ಇಂದ್ರಿಯದಿಂದ ಆಗುವದು. ಪಂಚೇಂದ್ರಿಯಗಳಿಂದ ದ್ರವ್ಯದ ಗ್ರಹಣವಾಯಿತೆಂದರೆ ಆ ದ್ರವ್ಯದಲ್ಲಿರುವ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಈ ಗುಣಗಳ ಗ್ರಹಣವು ಕೂಡ ಸ್ವಾಭಾವಿಕವಾಗಿ ಆಗುವದು. ಶಬ್ದಾದಿ ಗುಣಗಳು ದ್ರವ್ಯಾಶ್ರಿತವಿರುವವು, ಆದ್ದರಿಂದ ದ್ರವ್ಯವು ಶ್ರೇಷ್ಠವು.

೫) ಆಶ್ರಯತ್ವಾಚ್ಚ.

द्रव्यमाश्रिता रसादयः । (सु. सू. ४०)
द्रव्यमाश्रय आश्रयिणो रसादयः इति । आश्रयभूतः प्रधानः
स्वामी दृष्ट इति । (भा).

ದ್ರವ್ಯವು ಆಶ್ರಯವಿರುವದು. ರಸಾದಿಗಳು ಆಶ್ರಯಿ ಇರುವವು. ಆಶ್ರಯವು ಸ್ವತಂತ್ರವಿದ್ದ ಮೂಲಕ ಪ್ರಧಾನವಿರುವದು. ಮತ್ತು ಆಶ್ರಯಿ ಪರತಂತ್ರವಿದ್ದ ಮೂಲಕ ಅಪ್ರಧಾನವಿರುವದು. ಅಂದರೆ ದ್ರವ್ಯವು ಸ್ವತಂತ್ರವಿರುವದು. ಹಾಗೂ ದ್ರವ್ಯಾಶ್ರಿತ ರಸಾದಿಗಳು ಪರತಂತ್ರವಿರುವವು. ಆದ್ದರಿಂದ ದ್ರವ್ಯವು ಶ್ರೇಷ್ಠವಿರುವದು. ದ್ರವ್ಯದ ಲಕ್ಷಣವನ್ನು ಹೇಳುವಾಗ 'ದ್ರವ್ಯಮಾಶ್ರಯ ಲಕ್ಷಣಂ ಪಂಚಾನಾಂ' ಎಂದು ಹೇಳಿರುವರು.

೬) ಆರಂಭ ಸಾಮರ್ಥ್ಯಾಚ್ಚ.

द्रव्याश्रित आरम्भः, यथा - विदारिगंधादिमाहृत्य संक्षुद्य विपचेत् इत्येवमादिषु न रसादिष्वारम्भः । (सु. सू. ४०)

आरम्भश्चिकित्सायां क्रियारम्भः — मूलमाहरेत्यादि तस्मिन् द्रव्यस्यैव सामर्थ्यं न रसादीनामारम्भ सामर्थ्यम् । अविकलेन्द्रियः पुरुषः प्रधानो दृष्टः पङ्गोरिति । (भा)

ಕುಟ್ಟುವದು, ಚೂರ್ಣಮಾಡುವದು, ಕುದಿಸುವದು ಇತ್ಯಾದಿ ವಿವಿಧ ಕರ್ಮಗಳು ಪ್ರತ್ಯೇಕ ವಾಗಿ ರಸ, ವೀರ್ಯ, ವಿಪಾಕಗಳ ಮೇಲೆ ಆಗದೆ ದ್ರವ್ಯದ ಮೇಲೆ ಆಗುವವು. ಉದಾ:–ವಿದಾರಿಗಂಧಾದಿ ಗಣದಲ್ಲಿಯ ದ್ರವ್ಯಗಳನ್ನು ಕುಟ್ಟುವದು, ಕುದಿಸುವದು ಇತ್ಯಾದಿ ಕ್ರಿಯೆಗಳು ಪ್ರತ್ಯಕ್ಷವಾಗಿ ಆ ದ್ರವ್ಯಗಳ ಮೇಲೆಯೇ ಆಗುವವು. ಆದರೆ ಅವುಗಳ ರಸ, ವೀರ್ಯ, ವಿಪಾಕಗಳ ಮೇಲೆ ಆಗುವದಿಲ್ಲ. "ಜೀರಿಗೆಯನ್ನು ತೆಗೆದುಕೊಂಡು ಬಾ" ಎಂದು ಹೇಳಿದರೆ ದ್ರವ್ಯವನ್ನೇ ತರುವರು. ಆದರೆ ರಸಾದಿಗಳನ್ನಲ್ಲ, ರಸಾದಿಗಳು ಪಂಗು ಇರುವದರಿಂದ ಅವುಗಳನ್ನು ತರಲಿಕ್ಕೆ ಬರುವದಿಲ್ಲ. ದ್ರವ್ಯದ ಆಧಾರದ ಮೇಲೆಯೇ ರಸಾದಿಗಳ ಗತಿಯು ಇರುತ್ತದೆ. ಸರ್ವೇಂದ್ರಿಯ ಸಂಪನ್ನ ಚೇತನಾವುಳ್ಳ ಪುರುಷನು ಕುಂಟನಿಗಿಂತ ಶ್ರೇಷ್ಠನಿರುವನು. ಆದ್ದರಿಂದ ದ್ರವ್ಯವು ಶ್ರೇಷ್ಠವಿರುವದು.

೭) ಶಾಸ್ತ್ರ ಪ್ರಾಮಾಣ್ಯಾಚ್ಚ.

शास्त्रे हि द्रव्यं प्रधानमुपदेशे हि योगानां, यथा–' मातुलुङ्गाग्निमन्थौ च ' इत्यादौ न रसादय उपदिश्यन्ते । (सु. सू. ४०)

ಪ್ರಕುಪಿತ ದೋಷಗಳ ಶಮನ ಮಾಡುವದರ ಸಲುವಾಗಿ ಶಾಸ್ತ್ರದಲ್ಲಿ ದ್ರವ್ಯಗಳ ನಿರ್ದೇಶ ಮಾಡಿರುವರು. ಉದಾ:–ವಾತಜ ಶೋಥದಲ್ಲಿ ಶಮನಕಾರಕ ಉಪಾಯ ವನ್ನು ಹೇಳುವಾಗ ಮಾತುಲುಂಗ ಮತ್ತು ಅಗ್ನಿಮಂಥ ಇತ್ಯಾದಿ ದ್ರವ್ಯಗಳ ನಿರ್ದೇಶ ಮಾಡಿರುವರು. ಆದರೆ ರಸಾದಿಗಳ ನಿರ್ದೇಶ ಮಾಡಿರುವದಿಲ್ಲ. ಇದನ್ನು ನೋಡ ಲಾಗಿ ಶಾಸ್ತ್ರದಲ್ಲಿ ಕೂಡ ದ್ರವ್ಯಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿದ್ದು ಗೊತ್ತಾಗು ವುದು. ವಾತಜ ಶೋಥದಲ್ಲಿ ವಾತನಾಶಕ ಮತ್ತು ಶೋಥನಾಶಕ ದಶಮೂಲವು ಉಪಯೋಗವಾಗುವದೆಂದು ಹೇಳಿರುವರು. ಆದರೆ ಇದರ ಚಿಕಿತ್ಸೆಯಲ್ಲಿ ಇಂಥದೇ ರಸಾದಿಗಳ ಉಪಯೋಗ ಮಾಡಲು ಹೇಳಿರುವದಿಲ್ಲ. ಆದ್ದರಿಂದ ದ್ರವ್ಯವು ಶ್ರೇಷ್ಠ ವಿರುವದು.

೮) ಕ್ರಮಾಪೇಕ್ಷಿತತ್ವಾಚ್ಚ.

क्रमापेक्षितत्वाच्च रसादीनां, रसादयो हि द्रव्यक्रममपेक्षन्ते यथा तरुणे तरुणाः सम्पूर्णे सम्पूर्णा इति । (सु सू. ४०)

ರಸಾದಿಗಳ ಸ್ಥಿತಿ ಅಥವಾ ಕ್ರಮ ಬದಲಾಗುವದು. ಆದರೆ ದ್ರವ್ಯ ಮಾತ್ರ ಅದೇ ಉಳಿಯುವದು. ರಸಾದಿಗಳು ದ್ರವ್ಯವನ್ನು ಅನುಸರಿಸುತ್ತವೆ. ಆದ್ದರಿಂದ ಅವುಗಳ ಕ್ರಮವು ದ್ರವ್ಯದ ಅವಸ್ಥಾಕ್ರಮವನ್ನು ಅವಲಂಬಿಸಿರುತ್ತದೆ. ದ್ರವ್ಯವು ಯಾವ ಸ್ಥಿತಿ ಯಲ್ಲಿರುವದೋ ಅದನ್ನಾಶ್ರಯಿಸಿದ ರಸಾದಿಗಳಾದರೂ ಅದೇ ಸ್ಥಿತಿಯಲ್ಲಿರುವವು. ಉದಾ:–ದ್ರವ್ಯವು ಅಪರಿಪಕ್ವಾವಸ್ಥೆಯಲ್ಲಿದ್ದರೆ ರಸಾದಿಗಳಾದರೂ ಅಪರಿಪಕ್ವಾವಸ್ಥೆ ಯಲ್ಲಿಯೇ ಇರುತ್ತವೆ. ದ್ರವ್ಯವು ಪಕ್ವಾವಸ್ಥೆಯಲ್ಲಿದ್ದರೆ ರಸಾದಿಗಳಾದರೂ ಪಕ್ವಾವಸ್ಥೆ ಯಲ್ಲಿರುತ್ತವೆ. ಪಿಪ್ಪಲಿಯು ಆರ್ದ್ರವಿದ್ದಾಗ ಮಧುರ ರಸದ್ದಿರುವದು. ಅದು ಒಣಗಿದ ನಂತರ ಕಟು ರಸದ್ದಾಗುವದು. ಆದ್ದರಿಂದ ದ್ರವ್ಯವು ಶ್ರೇಷ್ಠವು.

೯) ಏಕದೇಶ ಸಾಧ್ಯತ್ವಾಚ್ಚ;

द्रव्याणामेकदेशेनापि व्याधयः साध्यन्ते न रसादिभिः कस्मात् ? निरवयव त्वात्; यथा महावृक्ष क्षीरेणेति; तस्मात् द्रव्यं प्रधानम् (सु. सू. ४०)

ದ್ರವ್ಯಗಳ ಒಂದೊಂದೇ ಭಾಗವನ್ನು ಉಪಯೋಗಮಾಡಿ ಪ್ರಕುಪಿತ ದೋಷಗಳ ಚಿಕಿತ್ಸೆಯನ್ನು ಮಾಡಲು ಬರುವದು. ಆದರೆ ರಸಾದಿಗಳಿಗೆ ದ್ರವ್ಯದಂತೆ ಅವಯವ ಗಳಿರುವದಿಲ್ಲವಾದ್ದರಿಂದ; ರಸಾದಿಗಳ ಒಂದೊಂದೇ ಅಂಗದಿಂದ ಪ್ರಕುಪಿತ ದೋಷ ಗಳ ಮೇಲೆ ಚಿಕಿತ್ಸೆಯನ್ನು ಮಾಡಲು ಬರುವದಿಲ್ಲ. ಉದಾ:- ಸ್ನುಹಿಯ ಹಾಲಿ ನಿಂದಲೇ ಅನೇಕ ರೋಗಗಳ ಚಿಕಿತ್ಸೆಯು ಮಾಡಲ್ಪಡುತ್ತದೆ. ಆದ್ದರಿಂದ ಬೇರೆ ಬೇರೆ ಅಂಗಗಳ ಪ್ರಯೋಗವು ಚಿಕಿತ್ಸೆಯಲ್ಲಿ ಮಾಡಲ್ಪಡುವದರಿಂದ ದ್ರವ್ಯವು ಶ್ರೇಷ್ಠವಿರು ತ್ತದೆ.

ಇವುಗಳಲ್ಲದೆ ನಾಗಾರ್ಜುನನು ದ್ರವ್ಯವು ಶ್ರೇಷ್ಠವಿದೆ ಎಂಬುದಕ್ಕೆ ಕೆಳಗಿನ ಯುಕ್ತಿಗಳನ್ನು ಹೇಳಿರುವನು.

೧೦) ತರತಮ ಯೋಗಾನುಪಲಬ್ಧಿ;

तर तम योगानुपलब्धेः (र. वै. सू. १. १००)

तर तम योगो रसादिषु दृष्टः । मधुरतरो, मधुरतमः, शीततरः, शीततमः। छर्दनीयतरं, छर्दनीयतमं, लघुतरः, लघुतमः, कर्षतरं, कर्षतमम् इति । द्रव्येषु नास्ति यष्टीमधुकतरो यष्टीमधुकतम इति । तस्मात् तर तम योगाभावात् रसा-दिभ्यो द्रव्यं प्रधानमिति । (भा).

ರಸಾದಿಗಳಲ್ಲಿ ತರ ತಮ ಭಾವವಿರುತ್ತದೆ. ಆದರೆ ದ್ರವ್ಯದಲ್ಲಿ ತರ ತಮ ಭಾವವಿರುವ ದಿಲ್ಲ. ದ್ರವ್ಯದ ಗುಣಗಳಾದ ರಸಾದಿಗಳು ಅನಿಯತವಿರುವದರಿಂದ ಅವುಗಳ ಪ್ರಮಾಣ ದಲ್ಲಿ ತರ ತಮ ಪ್ರತ್ಯಯಗಳ ಪ್ರಯೋಗವನ್ನು ಮಾಡಬೇಕಾಗುತ್ತದೆ. ಆದರೆ ದ್ರವ್ಯವು ವ್ಯವಸ್ಥಿತ ರೀತಿಯಿಂದಿರುವದರಿಂದ ಅದಕ್ಕೆ ತರ, ತಮ ಪ್ರತ್ಯಯಗಳನ್ನು ಹಚ್ಚಲಾಗುವದಿಲ್ಲ. ಉದಾ:-ಮಧುರ ತರ, ಮಧುರ ತಮ ಮೊದಲಾದ ಶಬ್ದಗಳ ಪ್ರಯೋಗವು ಹೆಚ್ಚಾಗಿ ಕಂಡು ಬರುತ್ತದೆ. ಆದರೆ ಯಷ್ಟಿಮಧು ತರ, ಯಷ್ಟಿಮಧು ತಮ ಇಂಥ ಶಬ್ದಗಳ ಪ್ರಯೋಗವು ಇರುವದಿಲ್ಲ. ಆದ್ದರಿಂದ ದ್ರವ್ಯವು ಶ್ರೇಷ್ಠವಿರುತ್ತದೆ.

೧೧) ವಿಕಲ್ಪ ಸಾಮರ್ಥ್ಯ;

विकल्प सामर्थ्यात् (र. वै. सू.)

विविधः कल्पो विकल्पः कल्क कषायादि भेदेन. तस्मिन् विकल्पे सामर्थ्यात् तत् सर्वं द्रव्यस्यैव नान्यस्येति । (भा).

ಕಲ್ಕ, ಕಷಾಯಾದಿ ವಿವಿಧ ಕಲ್ಪಗಳನ್ನು ದ್ರವ್ಯದಿಂದ ತಯಾರಿಸುವರು. ಆದರೆ ರಸಾದಿಗಳಿಂದ ತಯಾರಿಸಲಾಗುವದಿಲ್ಲ. ಆದ್ದರಿಂದ ದ್ರವ್ಯವು ಶ್ರೇಷ್ಠವು.

೧೨) ಪ್ರತಿಘಾತ ಸಾಮರ್ಥ್ಯ;

प्रतिघात सामर्थ्यात् (र. वै. सू. १)

प्रतिघात आवरणं तस्मिन् सामर्थ्यं द्रव्यस्यैव भवति, मूर्त्तिमत्त्वात्। प्रतिघात सामर्थ्यात् स्वस्थानेऽन्यस्यानवकाशदानात् इति। रसादयः संपृक्तास्तिष्टन्तीति। आवराणार्थोऽपि स एव घटते यः स्वस्मिन् स्थानेऽन्यस्यावकाशं निरुणद्धि स प्रधानो दृष्टः चक्रवर्त्तीति। (भा).

ದ್ರವ್ಯವು ಮೂರ್ತಿಮಾನ್ ಇರುವದರಿಂದ ಆವರಣಾತ್ಮಕ ಅರ್ಥಾತ್ ಅವಕಾಶವನ್ನು ತುಂಬುವಂಥದಿರುತ್ತದೆ. ಯಾವುದೇ ಸ್ಥಾನದಲ್ಲಿ ಒಂದು ದ್ರವ್ಯವನ್ನು ಇಟ್ಟರೆ ಅದೇ ಸ್ಥಾನದಲ್ಲಿ ಮತ್ತೊಂದು ದ್ರವ್ಯವನ್ನು ಇಡಲು ಶಕ್ಯವಾಗುವದಿಲ್ಲ. ಆದರೆ ರಸಾದಿಗಳು ಅಮೂರ್ತವಿರುವದರಿಂದ ಆವರಣಾತ್ಮಕವಿರುವದಿಲ್ಲ. ಯಾವುದರಲ್ಲಿ ಆವರಣಾತ್ಮಕ ಶಕ್ತಿ ಇರುತ್ತದೆಯೋ ಅದು ಪ್ರಧಾನವು. ಹಾಗೂ ಆವರಣಾತ್ಮಕ ಶಕ್ತಿಯು ಯಾವುದರಲ್ಲಿ ಇಲ್ಲವೋ ಅದು ಅಪ್ರಧಾನವು. ಇಲ್ಲಿ ದ್ರವ್ಯವು ಆವರಣಾತ್ಮಕ ವಿರುವದರಿಂದ ಅದು ಶ್ರೇಷ್ಠವಿರುತ್ತದೆ. ಹಾಗೂ ರಸಾದಿಗಳು ಆವರಣಾತ್ಮಕವಿರುವದಿಲ್ಲವಾದ್ದರಿಂದ ಅವು ಅಪ್ರಧಾನವಿರುತ್ತವೆ.

ದ್ರವ್ಯಗಳ ವರ್ಗೀಕರಣ

ಕಾರ್ಯರೂಪಿ ದ್ರವ್ಯಗಳು ಸೃಷ್ಟಿಯಲ್ಲಿ ಅನೇಕ ಇರುವವು. ಅವೆಲ್ಲ ದ್ರವ್ಯಗಳನ್ನು ಒಂದೊಂದನ್ನಾಗಿಯೇ ಬೇರೆ ಬೇರೆಯಾಗಿ ಅಧ್ಯಯನ ಮಾಡುವದು ಸಾಧ್ಯವಾಗಲಾರದು. ಅಲ್ಲದೆ ನಮಗೆ ಗೋಚರವಾಗುವ ದ್ರವ್ಯಗಳಲ್ಲಿ ಯಾವುದಾದರು ಒಂದು ಅಭ್ಯಂತರ ಸಾಧರ್ಮ್ಯವು ಇದ್ದೇ ಇರುತ್ತದೆ. ಆದ್ದರಿಂದ ಅವುಗಳ ಸಾಮಾನ್ಯ ಜ್ಞಾನವಾಗುವದರ ಸಲುವಾಗಿ ಯಾವ ಯಾವ ದ್ರವ್ಯಗಳ ಗುಣಧರ್ಮ ಒಂದೇ ಇರುವದೋ ಅಂಥ ದ್ರವ್ಯಗಳ ವರ್ಗವನ್ನು ಶಾಸ್ತ್ರಕಾರರು ಮಾಡಿರುವರು. ಅದರಿಂದ ಅವುಗಳ ಜ್ಞಾನವು ಅಧಿಕ ರೀತಿಯಿಂದ ಆಗುವದು.

ಕಾರ್ಯ ಕಾರಣ ಭೇದ.

ಕಾರ್ಯ, ಕಾರಣ ಭೇದದಿಂದ ದ್ರವ್ಯಗಳು ಎರಡು ಪ್ರಕಾರ.

i) ಕಾರಣ ದ್ರವ್ಯ ii) ಕಾರ್ಯ ದ್ರವ್ಯ.

i) ಕಾರಣ ದ್ರವ್ಯ:– ಈ ದ್ರವ್ಯಗಳು ಸೃಷ್ಟಿಯಲ್ಲಿರುವ ಎಲ್ಲ ದ್ರವ್ಯಗಳ ಉತ್ಪತ್ತಿಗೆ ಕಾರಣೀಭೂತವಾಗಿವೆ. ಇವು ಒಂಭತ್ತು ದ್ರವ್ಯಗಳಿದ್ದು ಪಂಚಮಹಾಭೂತಗಳು, ಆತ್ಮಾ, ಮನ, ಕಾಲ ಮತ್ತು ದಿಕ್.

ii) ಕಾರ್ಯ ದ್ರವ್ಯ:– ಮೇಲಿನ ಒಂಭತ್ತು ಕಾರಣ ದ್ರವ್ಯಗಳಿಂದ ಉತ್ಪನ್ನವಾಗುವ ಸೃಷ್ಟಿಯಲ್ಲಿಯ ಎಲ್ಲ ದ್ರವ್ಯಗಳಿಗೆ ಕಾರ್ಯ ದ್ರವ್ಯಗಳೆನ್ನುವರು, ಉದಾ:– ಘಟ, ಪಟ, ಗುಡೂಚಿ, ಗೋಧೂಮ, ಲವಣ ಇತ್ಯಾದಿ,

ಚೇತನ ಅಚೇತನ ಭೇದ.

ಚೇತನ, ಅಚೇತನ ಭೇದದಿಂದ ದ್ರವ್ಯಗಳು ಎರಡು ಪ್ರಕಾರ.

तत् (द्रव्यं) चेतनावदचेतनञ्च ।
सेंद्रियं चेतनं द्रव्यं निरिन्द्रियमचेतनम् । च. सू. १.

i) ಚೇತನ ದ್ರವ್ಯ ii) ಅಚೇತನ ದ್ರವ್ಯ.

i) ಚೇತನ ದ್ರವ್ಯ:–ಇಂದ್ರಿಯ ಸಹ ವಾಸ್ತವ್ಯ ಮಾಡುವ ಜೀವಚ್ಛರೀರ ರೂಪ ದ್ರವ್ಯಗಳಿಗೆ ಚೇತನಾ ಅಥವಾ ಸಚೇತನ ದ್ರವ್ಯಗಳೆಂದು ಅನ್ನುವರು. ಸೇಂದ್ರಿಯ ದ್ರವ್ಯಗಳೆಂತಲೂ ಕರೆಯುವರು.

"ಚೇತನಾವಾನ್ ಸತಶ್ಚಾತ್ಮಾ ತತಃಕರ್ತಾ ನಿರೂಚ್ಯತೆ" (ಚ. ಸೂ. ೧.) ಆತ್ಮಕ್ಕೆ ಚೇತನವಿರುವದು. ಅದ್ದರಿಂದ ಅದಕ್ಕೆ ಸಚೇತನ ದ್ರವ್ಯಗಳ ಕರ್ತಾ ಎಂದು ಅನ್ನುವರು. ಆತ್ಮದ ಸಚೇತನವು ಶರೀರ ಇಂದ್ರಿಯಗಳ ಮುಖಾಂತರ ವಾಗುವದು. ಚೇತನ ದ್ರವ್ಯಗಳಲ್ಲಿ i) ಅಂತಶ್ಚೇತನ ii) ಬಹಿರಂತಶ್ಚೇತನ ವೆಂದು ಎರಡು ಪ್ರಕಾರಗಳನ್ನು ಮಾಡಿರುವರು. ಅಂತಶ್ಚೇತನ ದ್ರವ್ಯಗಳೆಂದರೆ ಔದ್ಭಿದ (ಸ್ಥಾವರ) ದ್ರವ್ಯಗಳು, ಬಹಿರಂತಶ್ಚೇತನ ದ್ರವ್ಯಗಳೆಂದರೆ ಜಂಗಮ ದ್ರವ್ಯಗಳು.

ii) ಅಚೇತನ ದ್ರವ್ಯ:–ಯಾವ ದ್ರವ್ಯಗಳಲ್ಲಿ ಆತ್ಮಾ ಇರುವದಿಲ್ಲವೊ ಅಂಥ ದ್ರವ್ಯಗಳಿಗೆ ಅಚೇತನ ದ್ರವ್ಯಗಳೆನ್ನುವರು. ಅಚೇತನ ದ್ರವ್ಯಗಳಿಗೆ ನಿರಿಂದ್ರಿಯ ದ್ರವ್ಯಗಳೆಂತಲೂ ಅನ್ನುವರು.

न संति इंद्रियाणि यस्य तन्निरिंद्रियम् ।
निरिंद्रियं द्रव्यं जीवच्छरीर व्यतिरिक्तमन्यत् सर्वमचेतनम् ।

ಈ ದ್ರವ್ಯಗಳಿಗೆ ಇಂದ್ರಿಯಗಳಿರುವದಿಲ್ಲ. ಇವು ಚೇತನಾವಿರಹಿತ ಹಾಗೂ ಶಬ್ದ ವಿರಹಿತ ವಿರುವವು. ಉದಾ:– ಸುವರ್ಣ, ರೌಪ್ಯ, ಲೋಹ, ಮೃತ್ತಿಕಾ ಇತ್ಯಾದಿ.

ಈ ರೀತಿಯಾಗಿ ಕಾರ್ಯರೂಪಿ ದ್ರವ್ಯಗಳು ಸೇಂದ್ರಿಯ (ಸಜೀವ) ಮತ್ತು ನಿರಿಂದ್ರಿಯ (ನಿರ್ಜೀವ) ಎಂದು ಎರಡು ಪ್ರಕಾರವವಿರುವವು

ಪಾಂಚಭೌತಿಕ ಭೇದ.

ಸರ್ವ ಕಾರ್ಯರೂಪಿ ದ್ರವ್ಯಗಳು ಪಂಚಮಹಾಭೂತಗಳಿಂದ ಉತ್ಪನ್ನ ವಾಗಿದ್ದರೂ, ಯಾವ ದ್ರವ್ಯವು ಯಾವ ಮಹಾಭೂತದ ಆಧಿಕ್ಯದಿಂದ ಉತ್ಪನ್ನ ವಾಗಿರುವದೋ ಅದಕ್ಕೆ ಆ ಮಹಾಭೂತ ದ್ರವ್ಯವೆಂದು ಅನ್ನುವರು. ಮಹಾಭೂತ ಗಳು ಐದು ಇರುವದರಿಂದ ದ್ರವ್ಯಗಳಲ್ಲಿರುವ ಅವುಗಳ ಆಧಿಕ್ಯತೆಗನುಸರಿಸಿ ಐದು ಪ್ರಕಾರದ ದ್ರವ್ಯಗಳನ್ನು ಮಾಡಿರುವರು.

i) ಪಾರ್ಥಿವ ದ್ರವ್ಯ ಗುಣಕರ್ಮಃ—

तत्र द्रव्याणि गुरु–खर–कठिन–मंद–स्थिर–विशद–सांद्र–स्थूल–गंध गुण बहुलानि; तान्युपचय सङ्घात गौरव स्थैर्यकराणि । च. सू. २६.

तत्र द्रव्यं गुरु स्थूल स्थिर गंध गुणोल्बणम् ।
पार्थिवं गौरवस्थैर्य संघातोपचयावहम् ॥ अ. हृ. सू. ९.

तत्र स्थूल सांद्र मंद स्थिर गुरु कठिन गंध बहुलमीषत् कषायं प्रायशो मधरमिति पार्थिवं, तत् स्थैर्य बल गौरव संघातोपचयकरं विशेषतश्चाधो गति स्वभावमिति । सु. सू. ४१.

ಪಾರ್ಥಿವ ದ್ರವ್ಯಗಳು ಗುರು, ಖರ, ಕಠಿನ, ಮಂದ, ಸ್ಥಿರ, ವಿಶದ, ಸಾಂದ್ರ ಈ ಗುಣಗಳುಳ್ಳವಿರುವವು. ಗುರು ಗುಣವಿರುವದರಿಂದ ಪಚನಕ್ಕೆ ಜಡವಿರುತ್ತವೆ ಹಾಗು ಚಿರಪಾಕಿ ಇರುತ್ತವೆ. ಈ ದ್ರವ್ಯಗಳು ಗಂಧ ಗುಣ ಪ್ರಧಾನವುಳ್ಳವಿರುವವು. ಈ ದ್ರವ್ಯಗಳ ಸೇವನೆಯಿಂದ ಶರೀರವಲ್ಲಿ ಸ್ಥಿರತಾ, ಬಲ, ಗುರು, ಸಂಘಾತ ಇತ್ಯಾದಿ ಗುಣಗಳ ವರ್ಧನೆಯಾಗುವದು. ಪಾರ್ಥಿವ ದ್ರವ್ಯಗಳು ಸ್ವಲ್ಪ ಕಷಾಯರಸದವಿದ್ದು ಹೆಚ್ಚಾಗಿ ಮಧುರ ರಸದವಿರುತ್ತವೆ. ಈ ದ್ರವ್ಯಗಳು ವಿಶೇಷವಾಗಿ ಅಧೋಗಾಮಿ ಸ್ವಭಾವವುಳ್ಳವಿರುವವು.

ii) ಆಪ್ಯದ್ರವ್ಯ ಗುಣಕರ್ಮಃ—

द्रव स्निग्ध शीत मंद मृदु पिच्छिल रसगुण बहुलान्याप्यानि, तान्युपक्लेद स्नेह बंध विष्यंद मार्दव प्रह्लादकराणि । च. सू. २६.

द्रव शीत गुरु स्निग्ध मंद सांद्र रसोल्बणम् ।
आप्यं स्नेहन विष्यंद क्लेद प्रह्लाद बंध कृत् ॥ (अ. हृ. सू. ९.)

रस बहुलमीषत्कषायाम्ल लवणं मधुर रस प्रायमाप्यं, तत् स्नेहन ह्लादन क्लेदन बंधन विष्यंदनकरमिति ॥ सु, सू. ४१.

ಆಪ್ಯ ದ್ರವ್ಯಗಳು ದ್ರವ, ಸ್ನಿಗ್ಧ, ಶೀತ, ಮಂದ, ಮೃದು, ಪಿಚ್ಛಿಲ, ಮತ್ತು ರಸ ಗುಣ ಅಧಿಕವುಳ್ಳವಿರುವವು. ಈ ದ್ರವ್ಯಗಳು ಕ್ಲೇದನ, ಸ್ನೇಹನ, ಬಂಧನ, ವಿಷ್ಯಂದನ, ಪ್ರಹ್ಲಾದನ ಹಾಗೂ ಮಾರ್ದವ ಈ ಕಾರ್ಯಗಳನ್ನು ಮಾಡುವವು. ಆಪ್ಯ ದ್ರವ್ಯಗಳು ಹೆಚ್ಚಾಗಿ ಮಧುರ ರಸ ಪ್ರಧಾನವುಳ್ಳವಿದ್ದು; ಅಲ್ಪ ಪ್ರಮಾಣದಲ್ಲಿ ಕಷಾಯ, ಅಮ್ಲ, ಲವಣ ರಸವುಳ್ಳವಿರುವವು.

iii) ಆಗ್ನೇಯ ದ್ರವ್ಯ ಗುಣಕರ್ಮ.

उष्ण तीक्ष्ण सूक्ष्म लघु रूक्षविशद रूप गुण बहुलान्याग्नेयानि, तानि दाह पाक प्रभा प्रकाश वर्ण कराणि । च. सू. २६ .

रूक्ष तीक्ष्णोष्ण विशद सूक्ष्म रूप गुणोल्बणम् ।
आग्नेयं दाह भा वर्ण प्रकाश पचनात्मकम् । अ. हृ. सू. ६.

उष्ण तीक्ष्ण सूक्ष्म रूक्ष खर लघु विशद रूपबहुलमीषद् अम्ल लवणं कटुक रस प्रायं विशेषतश्चोर्ध्व गति स्वभावमिति तैजसं; तद्दहन पचन दारण तापन प्रकाशन प्रभा वर्ण करमिति । सु. सू. ४१.

ಆಗ್ನೇಯ ದ್ರವ್ಯಗಳು ಉಷ್ಣ, ತೀಕ್ಷ್ಣ, ಸೂಕ್ಷ್ಮ, ಲಘು, ರೂಕ್ಷ, ವಿಶದ, ಖರ ಮತ್ತು ರೂಪ ಗುಣ ಅಧಿಕವುಳ್ಳವಿರುವವು. ಈ ದ್ರವ್ಯಗಳು ಕಟು ರಸ ಪ್ರಧಾನವುಳ್ಳವಿದ್ದು; ಅಲ್ಪಪ್ರಮಾಣದಲ್ಲಿ ಅಮ್ಲ, ಲವಣ ರಸವುಳ್ಳವಿರುವವು. ಇಂಥ ದ್ರವ್ಯಗಳನ್ನು ಸೇವಿಸುವದರಿಂದ ಶರೀರದಲ್ಲಿ ದಾಹ, ಪಾಕ, ಪ್ರಭಾ, ಪ್ರಕಾಶ, ವರ್ಣ, ದಾರಣ (ಕೊರೆಯುವದು) ಇತ್ಯಾದಿ ಕಾರ್ಯಗಳು ಉಂಟಾಗುವವು. ಈ-ದ್ರವ್ಯಗಳು ಲಘು ಗುಣದವಿರುವದರಿಂದ ಪಚನಕ್ಕೆ ಹಗುರು ಇರುವವು. ಅಲ್ಲದೆ ಊರ್ಧ್ವ ಗತಿಯುಳ್ಳವಿರುವವು.

iv) ವಾಯವ್ಯದ್ರವ್ಯ ಗುಣಕರ್ಮಃ—

लघु शीत रूक्ष खर विशद सूक्ष्म स्पर्श गुण बहुलानि वायव्यानि; तानि रौक्ष्य ग्लानि विचार वैशद्य लाघवकराणि । च. सू. २६.

वायव्यं रूक्ष विशदं लघु स्पर्श गुणोल्बणम् ।
रौक्ष्य लाघव वैशद्य विचार ग्लानिकारकम् । अ. हृ. सू. ९.

सूक्ष्म रूक्ष खर शिशिर लघु विशदं स्पर्शबहुलमीषत् तिक्तं विशेषतः कषायमिति वायवीयं; तद्वैशद्य लाघव ग्लपन विरुक्षण विचारणकरमिति ।
सु. सू. ४१.

ವಾಯವ್ಯ ದ್ರವ್ಯಗಳು ಲಘು, ಶೀತ, ರೂಕ್ಷ, ಖರ, ವಿಶದ, ಸೂಕ್ಷ್ಮ ಮತ್ತು ಸ್ಪರ್ಶ ಗುಣ ಅಧಿಕವುಳ್ಳವಿರುವವು ಅಲ್ಲದೆ ವ್ಯವಾಯಿ, ವಿಕಾಶಿ ಗುಣಯುಕ್ತವಿರುವವು. ಈ ದ್ರವ್ಯಗಳು ಪ್ರಾಮುಖ್ಯವಾಗಿ ಕಷಾಯ ರಸದವಿದ್ದು; ಅಲ್ಪ ಪ್ರಮಾಣವಲ್ಲಿ ತಿಕ್ತ ರಸದವಿರುವವು. ಇಂಥ ದ್ರವ್ಯಗಳ ಸೇವನೆಯಿಂದ ಶರೀರದಲ್ಲಿ ರೂಕ್ಷತಾ, ಗ್ಲಾನಿ, ವಿಚಾರ, ವಿಶದತಾ, ಲಘುತಾ ಮತ್ತು ಕೃಶತಾ ಇತ್ಯಾದಿ ಕಾರ್ಯಗಳು ಉತ್ಪನ್ನವಾಗುವವು.

v) ಆಕಾಶ ದ್ರವ್ಯ ಗುಣಕರ್ಮಃ—

मृदु लघु सूक्ष्म श्लक्ष्ण शब्द गुण बहुलान्याकाशात्मकानि, तानि मार्दव सौषिर्य लाघव कराणि । (च. सू. २६.)

नाभसं सूक्ष्म विशद लघु शब्द गुणोल्बणम् ।
सौषिर्यं लाघवकरम् । (अ. हृ. सू. ९.)

श्लक्ष्ण सूक्ष्म मृदु व्यवायि विशद विविक्तमव्यक्त रसं शब्द बहुलमाकाशीयं; तन्मार्दव सौषिर्यं लाघवकरमिति । (सु. सू. ४१.)

ಆಕಾಶ ದ್ರವ್ಯಗಳು ಮೃದು, ಲಘು, ಸೂಕ್ಷ್ಮ, ಶ್ಲಕ್ಷ್ಣ, ಶಬ್ದ ಗುಣ ಅಧಿಕವುಳ್ಳವಿರುವವು. ಅಲ್ಲದೆ ಅವು ವ್ಯವಾಯಿ, ವಿಶದ ಮತ್ತು ವಿವಿಕ್ತ ಗುಣವುಳ್ಳವಿರುವವು. ಈ ದ್ರವ್ಯಗಳು ಅವ್ಯಕ್ತ ರಸಾತ್ಮಕವಿರುವವು. ಇಂಥ ದ್ರವ್ಯಗಳ ಸೇವನೆಯಿಂದ ಶರೀರದಲ್ಲಿ ಮೃದುತಾ, ಸುಷಿರತಾ ಮತ್ತು ಲಘುತಾ ಇತ್ಯಾದಿ ಕಾರ್ಯಗಳು ಆಗುವವು.

ಪ್ರಭಾವ ಭೇದ.

किंचिद्दोष प्रशमनं किंचिद्धातु प्रदूषणम् ।

स्वस्थवृत्तौ मतं किंचित् त्रिविधं द्रव्यमुच्यते । च. सू. १.

किंचिद्रव्यं धातून् विषमान् समीकरोति । किंचित् समान् विषमीकरोति किंचित् समान् धातून् प्रकृतौ वर्तयति, इति द्रव्यं त्रिविधमुच्यते । (यो)

शमनं कोपनं स्वस्थहितं द्रव्यमिति त्रिधा ।

ಪ್ರಭಾವ ಭೇದದಿಂದ ಮೂರು ಪ್ರಕಾರದ ದ್ರವ್ಯಗಳಿರುವವು. 1) ದೋಷ ಪ್ರಶಮನ 2) ಧಾತು ಪ್ರದೂಷಣ 3) ಸ್ವಸ್ಥಹಿತ.

1) ದೋಷ ಪ್ರಶಮನ (ಶಮನ ದ್ರವ್ಯ) :—

ಯಾವ ದ್ರವ್ಯಗಳು ತಮ್ಮ ಪ್ರಭಾವದಿಂದ ವಾತಾದಿ ದೋಷಗಳನ್ನು ಮತ್ತು ಅವುಗಳಿಂದ ದೂಷಿತವಾದಂತಹ ರಸ–ರಕ್ತಾದಿ ಧಾತುಗಳನ್ನು ಹಾಗೂ ದೂಷಿತ ಮಲಗಳನ್ನು ಶಮನ ಮಾಡುವವೋ ಅವಕ್ಕೆ ಶಮನ ದ್ರವ್ಯಗಳೆನ್ನುವರು.

यत् कुपितान् वातादीन् दोषान् शमयति, तच्छमनम् ।

ಈ ದ್ರವ್ಯಗಳು ತ್ರಿದೋಷಗಳನ್ನು ಶಮನ ಮಾಡುವದರಿಂದ ದೋಷಕ್ಕನುಸಾರವಾಗಿ ಶಮನ ದ್ರವ್ಯಗಳಲ್ಲಿ ಮೂರು ಪ್ರಕಾರಗಳನ್ನು ಮಾಡಿರುವರು. i) ವಾತ ಸಂಶಮನ, ii) ಪಿತ್ತ ಸಂಶಮನ, iii) ಕಫ ಸಂಶಮನ.

i) **ವಾತ ಸಂಶಮನ:–** ಮಧುರ, ಆಮ್ಲ, ಲವಣ ರಸಗಳುಳ್ಳ ಮಧುರ, ಆಮ್ಲ ವಿಪಾಕದ ಮತ್ತು ಉಷ್ಣ ವೀರ್ಯದ ಹಾಗೂ ವಾತದ ವಿಪರೀತ ಗುಣಗಳಾದ ಸ್ನಿಗ್ಧಾದಿ ಗುಣಗಳಿಂದ ಯುಕ್ತವಿರುವ ದ್ರವ್ಯಗಳು ವಾತ ಸಂಶಮನ ಮಾಡುವವು.

ii) **ಪಿತ್ತ ಸಂಶಮನ:–** ಕಷಾಯ, ತಿಕ್ತ, ಮಧುರ ರಸಗಳುಳ್ಳ; ಮಧುರ ವಿಪಾಕದ ಮತ್ತು ಶೀತ ವೀರ್ಯದ ಹಾಗೂ ಪಿತ್ತದ ವಿಪರೀತ ಗುಣಗಳಾದ ರೂಕ್ಷ, ಮೃದು, ಶೀತ ಮೊದಲಾದ ಗುಣಗಳುಳ್ಳ ದ್ರವ್ಯಗಳು ಪಿತ್ತವನ್ನು ಶಮನ ಮಾಡುವವು.

iii) **ಕಫ ಸಂಶಮನ:–** ಕಟು, ತಿಕ್ತ, ಕಷಾಯ ರಸಗಳುಳ್ಳ; ಕಟು ವಿಪಾಕದ, ಉಷ್ಣ ವೀರ್ಯದ ಹಾಗೂ ಕಫದ ವಿಪರೀತ ಗುಣಗಳಾದ ಲಘ್ವಾದಿ ಗುಣಗಳುಳ್ಳ ದ್ರವ್ಯಗಳು ಕಫವನ್ನು ಶಮನ ಮಾಡುತ್ತವೆ.

2) ಧಾತು ಪ್ರದೂಷಣ ಅಥವಾ ಕೋಪನ ದ್ರವ್ಯ :—

ಕೆಲವು ದ್ರವ್ಯಗಳು ಸಮಸ್ಥಿತಿಯಲ್ಲಿದ್ದಂತಹ ದೋಷ, ಧಾತು, ಮಲಗಳನ್ನು ದೂಷಿತ ಮಾಡುವವು. ಆದ್ದರಿಂದ ಅವುಗಳಿಗೆ ಧಾತು ಪ್ರದೂಷಣ ಅಥವಾ ಕೋಪನ ದ್ರವ್ಯಗಳೆಂದು ಅನ್ನುವರು.

यद्वातादीन् दोषान् रसादीन् धातून्
मूत्रादीन्मलांश्च कोपयति तत् कोपनम् ।

ವಾತ, ಪಿತ್ತ, ಕಫ ದೋಷಗಳನ್ನು ಕೋಪನ ಮಾಡುವದರ ಮೇಲಿಂದ ಕೋಪನ ದ್ರವ್ಯಗಳು ಮೂರು ಪ್ರಕಾರದವಿರುತ್ತವೆ.

i) ವಾತ ಕೋಪನ ii) ಪಿತ್ತ ಕೋಪನ iii) ಕಫ ಕೋಪನ

i) **ವಾತ ಕೋಪನ** :— ಕಟು, ತಿಕ್ತ, ಕಷಾಯ ರಸಗಳುಳ್ಳ ಕಟು ವಿಪಾಕದ ಮತ್ತು ಶೀತ ವೀರ್ಯದ ಹಾಗೂ ವಾತಕರ ರೂಕ್ಷಾದಿ ಗುಣಗಳಿಂದ ಯುಕ್ತ ದ್ರವ್ಯಗಳು ವಾತಕೋಪನ ಮಾಡುತ್ತವೆ. ಉದಾ :— ಮಸೂರ.

ii) **ಪಿತ್ತ ಕೋಪನ** :— ಆಮ್ಲ, ಲವಣ, ಕಟು ರಸಗಳುಳ್ಳ; ಆಮ್ಲ, ಕಟು ವಿಪಾಕದ ಮತ್ತು ಉಷ್ಣ ವೀರ್ಯದ ಹಾಗೂ ಪಿತ್ತಕರ ತೀಕ್ಷ್ಣೋಷ್ಣಾದಿ ಗುಣಗಳಿಂದ ಯುಕ್ತ ದ್ರವ್ಯಗಳು ಪಿತ್ತಕೋಪನ ಮಾಡುತ್ತವೆ. ಉದಾ :— ಮರಿಚ.

iii) **ಕಫ ಕೋಪನ** :— ಮಧುರ, ಆಮ್ಲ, ಲವಣ ರಸಗಳುಳ್ಳ; ಮಧುರ ವಿಪಾಕದ ಮತ್ತು ಶೀತ ವೀರ್ಯ ಹಾಗೂ ಕಫಕಾರಕ ಸ್ನಿಗ್ಧಾದಿ ಗುಣಗಳಿಂದ ಯುಕ್ತ ದ್ರವ್ಯಗಳು ಕಫಕೋಪನ ಮಾಡುತ್ತವೆ. ಉದಾ :— ಅನೂಪ ಮಾಂಸ.

3) ಸ್ವಸ್ಥಹಿತ ದ್ರವ್ಯ :—

ಕೆಲವು ದ್ರವ್ಯಗಳು ವಾತಾದಿ ದೋಷಗಳ ಶಮನ ಅಥವಾ ಕೋಪನ ಮಾಡದೇ ಶರೀರಕ್ಕೆ ಹಿತಕಾರಿಯಾಗಿರುವವು. ಅಂಥ ದ್ರವ್ಯಗಳಿಗೆ ಸ್ವಸ್ಥಹಿತ ದ್ರವ್ಯಗಳು ಎಂದೆನ್ನುವರು. ನಾವು ನಿತ್ಯ ತೆಗೆದುಕೊಳ್ಳುವ ಆಹಾರ ದ್ರವ್ಯಗಳು ಸ್ವಸ್ಥಹಿತ ದ್ರವ್ಯಗಳಾಗಿವೆ. ಉದಾ :— ರಕ್ತಶಾಲಿ, ಗೋದಿ, ತುಪ್ಪ, ಅಕ್ಕಿ, ಇತ್ಯಾದಿ; ಇವು ಹುಟ್ಟಿದಂದಿನಿಂದಲೇ ಶರೀರಕ್ಕೆ ಸಾತ್ಮ್ಯವಿರುವವು ಮತ್ತು ಶರೀರ ಸ್ವಾಸ್ಥ್ಯವನ್ನು ರಕ್ಷಿಸುವವು. ಆದ್ದರಿಂದ ಇಂಥ ದ್ರವ್ಯಗಳಿಗೆ "ಸ್ವಸ್ಥಹಿತ ದ್ರವ್ಯ" ಗಳೆನ್ನುವರು.

ಯೋನಿ ಭೇದ.

ಕಾರ್ಯರೂಪಿ ದ್ರವ್ಯಗಳನ್ನು ಮತ್ತೆ ಮೂರು ಪ್ರಕಾರವಾಗಿ ವಿಂಗಡಿಸುವರು. ಅವುಗಳ ಉತ್ಪತ್ತಿಯ ಮೇಲಿಂದ ಈ ಪ್ರಕಾರ ವಿಭಾಗ ಮಾಡಿರುವರು.

1) ಜಂಗಮ ದ್ರವ್ಯ 2) ಔದ್ಭಿಜ ದ್ರವ್ಯ 3) ಪೃಥ್ವಿಜನ್ಯ ದ್ರವ್ಯ.

1) **ಜಂಗಮ ಅಥವಾ ಪ್ರಾಣಿಜ ದ್ರವ್ಯ** :—

ಯಾವುದಕ್ಕೆ ಗತಿ ಇರುವದೋ ಅದಕ್ಕೆ ಜಂಗಮ ಅನ್ನುವರು. ಅಂದರೆ ಪ್ರಾಣಿಗಳಿಗೆ ಗತಿ ಇರುವದರಿಂದ ಪ್ರಾಣಿಗಳು ಹಾಗೂ ಅವುಗಳಿಂದ ಹುಟ್ಟಿದ ಸರ್ವ ದ್ರವ್ಯಗಳಿಗೆ ಜಂಗಮ ಅಥವಾ ಪ್ರಾಣಿಜ ದ್ರವ್ಯಗಳೆಂದು ಅನ್ನುವರು. ಉದಾ :—

मधूनि गोरसाः पित्तं वसा मज्जाऽसृगामिषम् ।
विण्मूत्र चर्म रेतोऽस्थि स्नायु श्रृंग नखाः खुरः ॥
जंगमेभ्यः प्रयुज्यन्ते केश लोमानि रोचनाः च. सू. १.

ಜೇನುತುಪ್ಪ, ಗೋರಸ (ಹಾಲು, ತುಪ್ಪ ಇತ್ಯಾದಿ), ಪಿತ್ತ, ವಸಾ (ನೆಣ), ಮಜ್ಜಾ, ರಕ್ತ, ಮಾಂಸ, ಮಲ, ಮೂತ್ರ, ಚರ್ಮ, ಶುಕ್ರ, ಅಸ್ಥಿ, ಸ್ನಾಯು, ಕೋಡು, ಉಗುರು, ಖುರ, ಕೂದಲು ಮತ್ತು ಗೋರೋಚನ ಇತ್ಯಾದಿ ಜಂಗಮ ದ್ರವ್ಯಗಳು.

ಜಂಗಮ ದ್ರವ್ಯಗಳಲ್ಲಿಯ ಭೇದಃ–

i) ಜರಾಯುಜ ii) ಅಂಡಜ iii) ಸ್ವೇದಜ iv) ಉದ್ಭಿಜ.

i) **ಜರಾಯುಜಃ**– ಗರ್ಭಾಶಯದಿಂದ ಉತ್ಪನ್ನವಾಗುವ ಪ್ರಾಣಿಗಳಿಗೆ ಜರಾಯುಜ ದ್ರವ್ಯಗಳೆನ್ನುವರು. ಉದಾಃ– ಪಶು, ಮನುಷ್ಯ.

ii) **ಅಂಡಜ**:– ತತ್ತಿಯಿಂದ ಜನ್ಮವೆತ್ತಿದ ದ್ರವ್ಯಗಳಿಗೆ ಅಂಡಜ ದ್ರವ್ಯಗಳೆನ್ನುವರು. ಉದಾಃ– ಹಾವು, ಪಕ್ಷಿ.

iii) **ಸ್ವೇದಜಃ**– ಬೆವರಿನಿಂದ ಉತ್ಪನ್ನವಾಗುವ ದ್ರವ್ಯಗಳಿಗೆ ಸ್ವೇದಜ ದ್ರವ್ಯಗಳೆನ್ನುವರು. ಉದಾಃ–ಕ್ರಿಮಿ, ಕೀಟಕ ಇತ್ಯಾದಿ.

iv) **ಉದ್ಭಿಜಃ**–

उद्भिद्य पृथिवीं जायत इति औद्भिदं वृक्षादि ।

ಪೃಥ್ವಿಯಿಂದ ಉತ್ಪನ್ನವಾಗುವ ದ್ರವ್ಯಗಳಿಗೆ ಉದ್ಭಿಜ ದ್ರವ್ಯಗಳೆಂದು ಅನ್ನುವರು. ಉದಾಃ–ಇಂದ್ರಗೋಪ ಹುಳ, ಕಪ್ಪೆ.

ಈ ಪ್ರಕಾರವಾಗಿ ಜಂಗಮ ದ್ರವ್ಯಗಳಲ್ಲಿ ನಾಲ್ಕು ಪ್ರಕಾರಗಳು ಇರುವವು.

2) **ಔದ್ಭಿಜ ಅಥವಾ ವನಸ್ಪತಿಜ ದ್ರವ್ಯ**:–

ಪೃಥ್ವಿಯಿಂದ ಹುಟ್ಟುವ ದ್ರವ್ಯಗಳಿಗೆ ಔದ್ಭಿಜ ದ್ರವ್ಯಗಳೆಂದು ಅನ್ನುವರು.

ಉದಾಃ– मूल त्वक् सार निर्यास नाल स्वरस पल्लवाः ।
क्षारः क्षीरं फलं पुष्पं भस्म तैलानि कण्टकाः ।
पत्राणि शुङ्गा कंदाश्च प्ररोहाश्चोद्भिदो गणः : च. सू. १.

ಬೇರು, ತೊಗಟೆ, ಸಾರ, ನಿರ್ಯಾಸ, ನಾಲ, ಸ್ವರಸ, ಪಲ್ಲವ, ಕ್ಷಾರ, ಕ್ಷೀರ, ಫಲ, ಪುಷ್ಪ, ಭಸ್ಮ, ತೈಲ, ಮುಳ್ಳು, ಎಲೆ, ಅಂಕುರ, ಗಡ್ಡೆ ಮತ್ತು ಪ್ರರೋಹ ಇವು ಔದ್ಭಿಜ ಅಥವಾ ವನಸ್ಪತಿಜ ಗಣದಲ್ಲಿಯ ದ್ರವ್ಯಗಳಿರುವವು.

ಔದ್ಭಿಜ ಭೇದಃ– ಔದ್ಭಿಜ ಅಥವಾ ವನಸ್ಪತಿಜ ದ್ರವ್ಯಗಳು ಮತ್ತೆ ನಾಲ್ಕು ಪ್ರಕಾರದವಿರುವವು.

औद्भिदं तु चतुर्विधम् ।
वनस्पतिस्तथा वीरूध्वानस्पत्यस्तथौषधिः ।

फलैर्वनस्पतिः पुष्पैर्वानस्पत्यः फलेरपि ॥
औषध्यः फल पाकान्ताः प्रतानैर्वीरुधः स्मृताः । च. सू. १.

i) ವನಸ್ಪತಿ ii) ವಾನಸ್ಪತ್ಯ iii) ವೀರುಧ. vi) ಔಷಧಿ.

i) ವನಸ್ಪತಿಃ–

ಯಾವ ಗಿಡಗಳಿಗೆ ಹಣ್ಣುಗಳು ಆಗುನವು; ಆದರೆ ಹೂಗಳು ಇರುವದಿಲ್ಲವೋ ಅವುಗಳಿಗೆ 'ವನಸ್ಪತಿ' ಅನ್ನುವರು. ಹೂಗಳು ಇರುವದಿಲ್ಲವೆಂದು ಅನ್ನಲು ಬರುವದಿಲ್ಲ ಯಾಕಂದರೆ ಪುಷ್ಪವಿಲ್ಲದೆ ಫಲವಿರುವದಿಲ್ಲ. ಆದ್ದರಿಂದ ಇಲ್ಲಿ ಪುಷ್ಪವಿರುವದಿಲ್ಲವೆಂದರೆ ಅವು (ಪುಷ್ಪ) ಸೂಕ್ಷ್ಮ ಸ್ವರೂಪದಲ್ಲಿರುನವೆಂದು ತಿಳಿಯಬೇಕು. ಮತ್ತು ಅವು ಬರಿಗಣ್ಣಿನಿಂದ ಕಾಣುವದಿಲ್ಲ. ಉದಾಃ– ಉದುಂಬರ, ವಟ ವೃಕ್ಷ ಇತ್ಯಾದಿ.

ii) ವಾನಸ್ಪತ್ಯಃ–

ಯಾವ ಗಿಡಗಳಿಗೆ ಮೊದಲು ಹೂಗಳು ಬಿಡುನವು ಮತ್ತು ಆ ಮೇಲೆ ಫಲಗಳಾಗುನವೋ ಅಂಥ ಗಿಡಗಳಿಗೆ 'ವಾನಸ್ಪತ್ಯ' ಎನ್ನುವರು. ಇಂಥ ಗಿಡಗಳಿಗೆ ಮೊದಲು ಹೂಗಳಾಗದಿದ್ದರೆ ಫಲಗಳಾಗುವದಿಲ್ಲ. ಉದಾಃ–ಮಾವು, ದಾಳಿಂಬ, ಅಡಿಕೆ.

iii) ವೀರುಧಃ–

प्रतानैर्वीरुधः स्मृतः ।

ವೀರುಧ ಅಂದರೆ ಬಳ್ಳಿಗಳು ಇವು ಮತ್ತೊಂದು ಗಿಡವನ್ನು ಆಶ್ರಯಿಸಿ ಬೆಳೆಯುತ್ತವೆ. ಅಲ್ಲದೆ ಕೆಲವು ಭೂಮಿಯ ಮೇಲೆ ಪಸರಿಸುತ್ತವೆ, ಅಂಥವುಗಳಿಗೆ "ವೀರುಧ" ಎಂದು ಅನ್ನುವರು. ಉದಾಃ– ಕೂಷ್ಮಾಂಡ, ಪಟೋಲ.

iv) ಔಷಧಿಃ–

ಹಣ್ಣುಗಳು ಪಕ್ವವಾದ ನಂತರ ಕೆಲವು ಗಿಡಗಳ ಆಯುಸ್ಯವು ಮುಗಿಯುವದು. ಅಂಥವುಗಳಿಗೆ ಔಷಧಿ ದ್ರವ್ಯವೆಂದು ಅನ್ನುವರು. ಅಂದರೆ ಕೆಲವು ಗಿಡಗಳ ಆಯುಸ್ಯವು ಅಲ್ಪವಿದ್ದು ಒಮ್ಮೆ ಫಲಕೊಟ್ಟನಂತರ ಅವುಗಳ ಆಯುಸ್ಯ ನಾಶವಾಗುನದು. ಆದ್ದರಿಂದ ಅವುಗಳಿಗೆ "ಔಷಧಿ" ಅನ್ನುವರು. ಉದಾಃ–ಲಶುನ, ಶುಂಠಿ, ಜೋಳ, ಕಡಲೆ ಇತ್ಯಾದಿ.

3) ಪೃಥ್ವಿಜನ್ಯ ದ್ರವ್ಯಃ–

ಜಂಗಮ ಮತ್ತು ಔದ್ಭಿಜ ಅಥವಾ ವನಸ್ಪತಿಜ ದ್ರವ್ಯಗಳನ್ನು ಬಿಟ್ಟು ಉಳಿದ ದ್ರವ್ಯಗಳು ಅಂದರೆ ಪೃಥ್ವಿಯಿಂದ ಸಿಗುವ ದ್ರವ್ಯಗಳಿಗೆ ಪಾರ್ಥಿವ ದ್ರವ್ಯಗಳೆನ್ನುವರು.

ಉದಾಃ– सुवर्णं समलाः पंचलोहाः ससिकताः सुधा ।
मन शिलाले मणयो लवणं गैरिकांजन ॥

ಸುವರ್ಣ, ಪಂಚಲೋಹ (ಬೆಳ್ಳಿ, ತಾಮ್ರ, ಸೀಸ, ಕಥಿಲ, ಕಬ್ಬಿಣ,) ಉಸುಕು. ಸುಣ್ಣ, ಮನಶಿಲಾ, ಮಣಿಗಳು, ಉಪ್ಪು, ಗೈರಿಕ ಮತ್ತು ಅಂಜನ ಮೊದಲಾದವು ಪೃಥ್ವಿಜನ್ಯ ದ್ರವ್ಯಗಳು.

ಔಷಧ ಆಹಾರ ಭೇದದಿಂದ ದ್ರವ್ಯಗಳು ಎರಡು ಪ್ರಕಾರಃ—

द्रव्यं तावद् द्विविधं वीर्यप्रधानमौषध द्रव्यं, रसप्रधानमाहारद्रव्यं च ।

च. सू. २.

ದ್ರವ್ಯವು i) ಔಷಧಿ ದ್ರವ್ಯ ii) ಆಹಾರ ದ್ರವ್ಯ ವೆಂದು ಎರಡು ಪ್ರಕಾರದ್ದಿರುತ್ತದೆ. ಔಷಧಿ ದ್ರವ್ಯಗಳು ವೀರ್ಯ ಪ್ರಧಾನವಿರುವವು. ಮತ್ತು ಆಹಾರ ದ್ರವ್ಯಗಳು ರಸ ಪ್ರಧಾನವಿರುವವು. ವೀರ್ಯ ಪ್ರಧಾನ ದ್ರವ್ಯಗಳ ಸೇವನೆಯಿಂದ ಶರೀರದಲ್ಲಿ ವಿಶೇಷ ವಾಗಿ ಶೀತ, ಉಷ್ಣ ಮೊದಲಾದ ಗುಣಗಳ ಉತ್ಪತ್ತಿಯಾಗುತ್ತದೆ. ಆವುಗಳಿಂದ ರಸಾದಿ ಧಾತುಗಳ ಪೋಷಣೆಯು ಪ್ರಾಮುಖ್ಯವಾಗಿ ಆಗುವದಿಲ್ಲ ಆದ್ದರಿಂದ ಅಂಥ ದ್ರವ್ಯಗಳಿಗೆ ಔಷಧಿ ಅಥವಾ ವೀರ್ಯಪ್ರಧಾನ ದ್ರವ್ಯಗಳೆಂದು ಅನ್ನುವರು. ಉದಾ:— ತ್ರಿಕಟು, ಚಿತ್ರಕ, ದಂತಿ ಇತ್ಯಾದಿ.

तत्राप्यौषध द्रव्यं त्रिविधं वीर्यभेदात्—तीक्ष्ण वीर्यं यथा शुण्ठयादि, मध्यवीर्यं बिल्वाग्निमंथादि, मृदुवीर्यञ्चामलकादि । सु. सू. २.

ಔಷಧಿ ದ್ರವ್ಯಗಳಲ್ಲಿ ಮತ್ತೆ ಮೂರು ಪ್ರಕಾರ ಇರುತ್ತವೆ.

i) ತೀಕ್ಷ್ಣ ವೀರ್ಯ ದ್ರವ್ಯ—ಶುಂಠಿಯಂಥ ದ್ರವ್ಯಗಳು.

ii) ಮಧ್ಯವೀರ್ಯ ದ್ರವ್ಯ—ಬಿಲ್ವ, ಅಗ್ನಿಮಂಥದಂಥ ದ್ರವ್ಯಗಳು.

iii) ಮೃದುವೀರ್ಯ ದ್ರವ್ಯ—ಆಮಲಕಿಯಂಥ ದ್ರವ್ಯಗಳು.

ಔಷಧಿ ದ್ರವ್ಯಗಳನ್ನು ಪ್ರಾಮುಖ್ಯವಾಗಿ ರೋಗ ನಾಶ ಮಾಡುವದರ ಸಲುವಾಗಿ ಉಪಯೋಗಿಸುವರು. ಈ ದ್ರವ್ಯಗಳು ವೃದ್ಧಿಯಾದ ಮತ್ತು ಕುಪಿತವಾದ ದೋಷ ಗಳನ್ನು ಶಮನಮಾಡಿ ಸಮಸ್ಥಿತಿಗೆ ತರುತ್ತವೆ ಹಾಗೂ ಆರೋಗ್ಯದ ರಕ್ಷಣೆಯನ್ನು ಮಾಡುತ್ತವೆ. ಧಾತುಕ್ಷೀಣ ಲಕ್ಷಣಗಳಿದ್ದಾಗ ವೀರ್ಯಪ್ರಧಾನ ದ್ರವ್ಯಗಳ ಉಪ ಯೋಗವು ಅಷ್ಟೊಂದು ಆಗುವದಿಲ್ಲ.

ಕೆಲವು ದ್ರವ್ಯಗಳ ಉಪಯೋಗದಿಂದ ರಸಾದಿ ಧಾತುಗಳು ಪುಷ್ಟವಾಗುತ್ತವೆ. ಆದರೆ ಶೀತ, ಉಷ್ಣ ಮೊದಲಾದ ಗುಣಗಳ ಉತ್ಪತ್ತಿಯಾದದ್ದು ಕಂಡು ಬರುವದಿಲ್ಲ. ಅಂಥ ದ್ರವ್ಯಗಳಿಗೆ " ಆಹಾರ ದ್ರವ್ಯ " ಗಳೆಂದು ಅನ್ನುವರು. ಉದಾಃ-ಅಕ್ಕಿ, ಗೋಧಿ, ಹಾಲು, ತುಪ್ಪ ಇತ್ಯಾದಿ. ಆಹಾರ ದ್ರವ್ಯಗಳು ಪ್ರಾಮುಖ್ಯವಾಗಿ ಬಲವರ್ಧನದ ಸಲು ವಾಗಿ ಮತ್ತು ಧಾತುಕ್ಷೀಣತೆಯಲ್ಲಿ ಉಪಯೋಗಿಸಲ್ಪಡುತ್ತವೆ. ರೋಗಾವಸ್ಥೆಯಲ್ಲಿ ವೀರ್ಯಪ್ರಧಾನ ದ್ರವ್ಯಗಳನ್ನು ಉಪಯೋಗಿಸಿ ದೋಷಗಳ ಬಲವನ್ನು ಕಡಿಮೆಮಾಡಿದ ನಂತರ ರಸಾದಿ ಧಾತುಗಳಿಗೆ ಉಂಟಾದ ದೌರ್ಬಲ್ಯವನ್ನು ದೂರ ಮಾಡುವದರ ಸಲು ವಾಗಿ ಆಹಾರ ದ್ರವ್ಯಗಳನ್ನು ಉಪಯೋಗ ಮಾಡಲು ಅಡ್ಡಿ ಇಲ್ಲ.

ರಸಭೇದದಿಂದ ದ್ರವ್ಯಗಳ ಭೇದ:—

ಮಧುರಾದಿ ರಸಗಳ ಭೇದದಿಂದ ದ್ರವ್ಯಗಳು ಆರು ಪ್ರಕಾರದವಿರುತ್ತವೆ.

1) ಮಧುರ ವರ್ಗ ದ್ರವ್ಯ 2) ಅಮ್ಲ ವರ್ಗ ದ್ರವ್ಯ 3) ಲವಣ ವರ್ಗ ದ್ರವ್ಯ 4) ಕಟು ವರ್ಗ ದ್ರವ್ಯ 5) ತಿಕ್ತ ವರ್ಗ ದ್ರವ್ಯ 6) ಕಷಾಯ ವರ್ಗ ದ್ರವ್ಯ.

1) ಮಧುರ ವರ್ಗದ ದ್ರವ್ಯಗಳು:—

घृत हेम गुड क्षोड मोच चोच परूषकम् ।
अभीरु वीरा पनस राजादन बलत्रयम् ॥
मेदे चतस्रः पर्णिन्यौ जीवंति जीवकर्षभौ ।
मधूकं मधुकं बिंबि विदारि श्रावणी युगम् ॥
क्षीर शुक्ला तुगाक्षीरि क्षीरिण्यौ काश्मरी सहे ।
क्षीरेक्षु गोक्षुर क्षौद्र द्राक्षादिर्मधुरो गणः ॥ (अ. हृ. सू. १०.)

ತುಪ್ಪ, ಬಂಗಾರ, ಬೆಲ್ಲ, ಅಕ್ರೋಡ, ಬಾಳೆ, ಟೆಂಗು, ದಡಸಲ ಹಣ್ಣು, ಶತಾವರಿ (ಹಲವು ಮಕ್ಕಳ ಬೇರು), ಕಾಕೋಲಿ, ಹಲಸು, ರಾಜದನ, ಮೂರು ಪ್ರಕಾರದ ಬಲಾಗಳು (ಬಲಾ, ಅತಿಬಲಾ, ನಾಗಬಲಾ), ಮೇದಾ, ಮಹಾಮೇದಾ, ಮೂರೆಲೆ ಹೊನ್ನೆ, ಒಂದೆಲೆ ಹೊನ್ನೆ, ಅಡವಿ ಉದ್ದು, ಅಡವಿ ಹೆಸರು, ಸೀಹಾಲೆ, ಜೀವಕ, ಋಷಭಕ, ಇಪ್ಪೀ ಹೂ, ಜೇಷ್ಟಮಧು, ತೊಂಡಿ, ನೆಲಗುಂಬಳ, ಶ್ರಾವಣಿ (ಮುಂಡಿ), ಮಹಾಶ್ರಾವಣಿ (ಮಹಾಮುಂಡಿ), ಹಾಲುಗುಂಬಳ, ವಂಶಲೋಚನ (ಬಿದಿರು ಸುಣ್ಣ), ಕ್ಷೀರ ಕಾಕೋಲಿ, ಮುಗ್ದಿಕಾ, ಕಾಶ್ಮರಿ (ಶಿವನಿ ಹಣ್ಣು), ಕ್ಷುದ್ರಸಹಾ, ಮಹಾಸಹಾ, ಹಾಲು, ಕಬ್ಬು, ನೆಗ್ಗಿಲು ಮುಳ್ಳು, ಜೇನುತುಪ್ಪ ಮತ್ತು ದ್ರಾಕ್ಷೆ ಇವು ಮಧುರ ವರ್ಗದ ದ್ರವ್ಯಗಳು.

2) ಆಮ್ಲ ವರ್ಗದ ದ್ರವ್ಯಗಳು:—

आम्लो धात्रि फलाम्लिका मातुलुङ्गाम्लवेतसम् ।
दाडिमं रजतं तक्रं चुक्रं पालेवतं दधि ।
आम्रमाम्रातकं भव्यं कपित्थं करमर्दकम् । (अ. हृ. सू. १०.)

ನೆಲ್ಲಿಕಾಯಿ, ಹುಣಿಸೆ, ಮಾದಾಳ, ಅಮ್ಲವೇತಸ, ದಾಳಿಂಬ, ಬೆಳ್ಳಿ, ಮಜ್ಜಿಗೆ, ಚುಕ್ರ (ಶುಕ್ರ), ಪಾಲೇವತ, ಮೊಸರು, ಮಾವು, ಪುಂಡಿ, ನಿಂಬೆ, ಬೆಳವಲಕಾಯಿ ಮತ್ತು ಕವಳಿ ಇವು ಆಮ್ಲ ವರ್ಗದ ದ್ರವ್ಯಗಳು.

3) ಲವಣ ವರ್ಗದ ದ್ರವ್ಯಗಳು:—

वरं सौवर्चलं कृष्णं विडं सामुद्रमौद्भिदम् ।
रोमकं पांसुजं सीसं क्षारश्च लवणो गणः ॥ (अ. हृ. सू. १०.)

ಸೈಂಧವ, ಸೌವರ್ಚಲ(ಕಾಚಲವಣ), ಕೃಷ್ಣ, ಬಿಡ, ಸಾಮುದ್ರ, ಔದ್ಭಿದ, ರೋಮಕ, ಪಾಂಸುಜ ಲವಣಗಳು ಸೀಸ ಮತ್ತು ಕ್ಷಾರ ಇವು ಲವಣ ವರ್ಗದ ದ್ರವ್ಯಗಳು.

4) ಕಟು ವರ್ಗದ ದ್ರವ್ಯಗಳು:—

कटुको हिंगु मरिच कृमिजित्पंचकोलकम् ।
कुठेराद्या हरितकाः पित्तं मूत्रमरुष्करम् । (अ. हृ. सू. १०.)

ಇಂಗು, ಮೆಣಸು, ವಾಯುವಿಡಂಗ, ಪಂಚಕೋಲ, ಕುತೇರ, ಹರಿತಕ (ಹಸಿರು) ವರ್ಗದ ಪಲ್ಲೆಗಳು, ಪಿತ್ತ, ಮೂತ್ರ ಮತ್ತು ಕೇರು ಇತ್ಯಾದಿ ದ್ರವ್ಯಗಳು ಕಟು ವರ್ಗದವಿರುತ್ತವೆ.

5) ತಿಕ್ತ ವರ್ಗದ ದ್ರವ್ಯಗಳು:—

तिक्तः पटोली त्रायंती वालकोशीर चंदनम् ।
भूनिंब निंब कटुका तगरागुरु वत्सकम् ।
नक्तमाल द्विरजनी मुस्त मूर्वाटरूषकम् ।
पाठापामार्ग कांस्यायो गुडूची धन्वयासकम् ॥
पंचमूलं महद् व्याघ्रौ विशालाऽतिविषा वचा । (अ. हृ. सू. १०.)

ಕಹಿಪಡುವಲ, ತ್ರಾಯಮಾಣ, ಬಿಳಿ ಬಾಳದಬೇರು, ಕರಿ ಬಾಳದಬೇರು, ಚಂದನ, ಚಿರಾಯುತ, ಬೇವು, ಕಟುಕರೋಹಿಣಿ, ತಗರ, ಅಗುರು, ವತ್ಸಕ, ಹುಲಗಲ, ಅರಿಷಿಣ, ಮರದರಿಷಿಣ, ಜೇಕಿನ ಗಡ್ಡೆ, ಹೆಗ್ಗರುಟಿ, ಅಡಸಲ, ಅಗಳುಕುಂಠಿ, ಉತ್ತರಾಣಿ, ಕಂಚು, ಕಬ್ಬಿಣ, ಅಮೃತಬಳ್ಳಿ, ನೆಲ ಇಂಗಳು, ಬೃಹತ್ ಪಂಚಮೂಲ, ನೆಲಗುಳ್ಳ, ಹೆಬ್ಬಗುಳ್ಳ, ವಿಶಾಲಾ, ಅತಿವಿಷಾ ಮತ್ತು ಬಜೆ ಇವು ತಿಕ್ತ ವರ್ಗದ ದ್ರವ್ಯಗಳು.

6) ಕಷಾಯ ವರ್ಗದ ದ್ರವ್ಯಗಳು:—

वर्गः कषायः पथ्याऽक्षं शिरीषः खदिरो मधु ।
कदम्बोदुम्बरं मुक्ता प्रवालांजन गैरिकम् ।
बालं कपित्थं खर्जूरं विस पद्मोत्पलादि च ॥ (अ. हृ. सू. १०.)

ಹರಿತಕಿ (ಅಣಲೆಯ ಕಾಯಿ), ಬಿಭಿತಕಿ (ತಾರಿಕಾಯಿ), ಸಿರಸಲ, ಖದಿರ, ಜೇನುತುಪ್ಪ, ಕದಂಬ, ಅತ್ತಿ, ಮುತ್ತು, ಪ್ರವಾಳ, ಅಂಜನ, ಗೈರಿಕ, ಬೆಳವಲಕಾಯಿ, ಖರ್ಜೂರ, ಕಮಲದೇಟು, ಶ್ವೇತಕಮಲ, ಕೃಷ್ಣ ಕಮಲ ಇತ್ಯಾದಿ ದ್ರವ್ಯಗಳು ಕಷಾಯ ವರ್ಗದವು ಇರುತ್ತವೆ.

ವಿಪಾಕ ಭೇದದಿಂದ ದ್ರವ್ಯ ಭೇದ:—

विपाकस्त्रिधा स्वाद्वम्ल कटुकात्मकः ।

ವಿಪಾಕಗಳು ಮೂರು ಇರುತ್ತವೆ. 1) ಮಧುರ ವಿಪಾಕ 2) ಅಮ್ಲ ವಿಪಾಕ 3) ಕಟು ವಿಪಾಕ. ಸುಶ್ರುತಾಚಾರ್ಯರ ಪ್ರಕಾರ ವಿಪಾಕಗಳು ಎರಡು ಇವೆ. 1) ಗುರು ವಿಪಾಕ 2) ಲಘು ವಿಪಾಕ. ಸುಶ್ರುತರ ಈ ದ್ವಿವಿಧ ವಿಪಾಕಗಳಾದರೂ ಚರಕಾಚಾರ್ಯರ ಮೂರು ವಿಧ ವಿಪಾಕಗಳಲ್ಲಿ ಸಮಾವೇಶವಾಗುತ್ತವೆ. ಹೇಗೆಂದರೆ ಪಂಚಮಹಾಭೂತಗಳಲ್ಲಿ ಪೃಥ್ವಿ ಮತ್ತು ಜಲ ಇವು ಗುರು ಗುಣ ಪ್ರಾಧಾನ್ಯವಾಗಿದ್ದು ಉಳಿದ ಮಹಾಭೂತಗಳು ಲಘು ಗುಣ ಪ್ರಾಧಾನ್ಯವುಳ್ಳವಿರುವವು. ಆದ್ದರಿಂದ ಪೃಥ್ವಿ ಮತ್ತು ಜಲ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳ ವಿಪಾಕವು ಗುರು ಆಗುತ್ತದೆ.

ಹಾಗೂ ಉಳಿದ ಆಗ್ನೇಯಾದಿ ಮಹಾಭೂತಗಳು ಪ್ರಾಧಾನ್ಯವುಳ್ಳ ದ್ರವ್ಯಗಳ ವಿಪಾಕವು ಲಘು ಆಗುತ್ತದೆ. ಈ ರೀತಿಯಾಗಿ ವಿಪಾಕಗಳ ಭೇದದಿಂದ ದ್ರವ್ಯಗಳ ವರ್ಗೀಕರಣ ಮಾಡಲು ಬರುವದು.

ವೀರ್ಯ ಭೇದದಿಂದ ದ್ರವ್ಯದ ಭೇದಃ—

ಉಷ್ಣ ಮತ್ತು ಶೀತವೆಂಬ ವೀರ್ಯವು ಎರಡು ಪ್ರಕಾರದ್ದಿರುತ್ತದೆ. ಈ ವೀರ್ಯದ ಮೇಲಿಂದ ಉಷ್ಣ ವೀರ್ಯದ ದ್ರವ್ಯಗಳು ಮತ್ತು ಶೀತ ವೀರ್ಯದ ದ್ರವ್ಯಗಳೆಂದು ಭೇದ ಮಾಡಿರುವರು. ಕೆಲವರು ಎಂಟು ಪ್ರಕಾರದ ವೀರ್ಯಗಳಿರುವವೆಂದು ಹೇಳಿರುವರು. ಅವರ ಪ್ರಕಾರ ವೀರ್ಯ ಸಂಖ್ಯೆಗನುಸರಿಸಿ ದ್ರವ್ಯಗಳಾದರೂ ಅಷ್ಟ (ಎಂಟು) ಪ್ರಕಾರದವಿರುತ್ತವೆ.

1) ಗುರು ವೀರ್ಯ ದ್ರವ್ಯ. 2) ಲಘು ವೀರ್ಯ ದ್ರವ್ಯ. 3) ಸ್ನಿಗ್ಧ ವೀರ್ಯ ದ್ರವ್ಯ 4) ರೂಕ್ಷ ವೀರ್ಯ ದ್ರವ್ಯ 5) ಮೃದು ವೀರ್ಯ ದ್ರವ್ಯ 6) ತೀಕ್ಷ್ಣ ವೀರ್ಯ ದ್ರವ್ಯ 7) ಶೀತ ವೀರ್ಯ ದ್ರವ್ಯ 8) ಉಷ್ಣ ವೀರ್ಯ ದ್ರವ್ಯ.

ಕಾರ್ಯದ ಮೇಲಿಂದ ದ್ರವ್ಯಗಳ ಭೇದಃ-

ಜೀವನೀಯ ವರ್ಗಃ—

ಮನುಷ್ಯನ ಆರೋಗ್ಯವನ್ನು ಸದೃಢ ಮತ್ತು ಆರೋಗ್ಯ ಸ್ಥಿತಿಯಲ್ಲಿ ಇಡುವ ದ್ರವ್ಯಗಳಿಗೆ "ಜೀವನೀಯ" ದ್ರವ್ಯಗಳೆಂದು ಅನ್ನುವರು. ಶರೀರಕ್ಕೆ ಹಿತಕರ ಅರ್ಥಾತ್ ಶರೀರದಲ್ಲಿಯ ಧಾತುಗಳಿಗೆ ಹಿತಕರವಿರುವಂಥ ದ್ರವ್ಯಗಳಿಗೆ ಜೀವನೀಯ ದ್ರವ್ಯಗಳೆಂದು ಅನ್ನುವರು. ಈ ದ್ರವ್ಯಗಳು ಪ್ರಾಣಧಾರಣ ಕಾರ್ಯ ಮಾಡುವವು ಮತ್ತು ಶರೀರದ ಸವಕಳಿಯನ್ನು ಪೂರೈಸುವವು. ಉದಾಃ-ತುಪ್ಪ, ಹಾಲು, ಅಕ್ಕಿ, ಗೋದಿ ಇತ್ಯಾದಿ.

ಜೀವನೀಯ ದ್ರವ್ಯಗಳು ಹೆಚ್ಚಾಗಿ ಮಧುರ ರಸದವಿರುತ್ತವೆ. ಮಧುರ ರಸದಿಂದ ರಸಾದಿ ಸಪ್ತ ಧಾತುಗಳ ಪೋಷಣೆ ಮತ್ತು ಬೃಂಹಣ ಕಾರ್ಯವಾಗುವದು. ಈ ದ್ರವ್ಯಗಳು ಹುಟ್ಟಿದಂದಿನಿಂದಲೇ ಶರೀರಕ್ಕೆ ಸಾತ್ಮ್ಯ ಇರುವವು.

पृथिव्यापां गुणैर्युक्तं जीवनीयमिति स्थितिः।

ಜೀವನೀಯ ದ್ರವ್ಯಗಳು ಪ್ರಾಮುಖ್ಯವಾಗಿ ಪೃಥ್ವಿ ಮತ್ತು ಜಲ ಮಹಾಭೂತ ಪ್ರಾಧಾನ್ಯವುಳ್ಳವುಗಳಿರುತ್ತವೆ. ಪೃಥ್ವಿ ಮತ್ತು ಜಲ ದ್ರವ್ಯಗಳ ಗುಣಕರ್ಮಗಳೇ ಜೀವನೀಯ ದ್ರವ್ಯಗಳ ಗುಣಕರ್ಮಗಳಿರುವವು.

ಗಣ :— जीवंति काकोल्यौ मेदे द्वे मुद्ग माष पर्ण्यौ च।
ऋषभक जीवक मधुकं चेति गणो जीवनीयाख्यः॥

(अ. हृ. सू. १५)

जीवकर्षभकौ मेदा महामेदा काकोली क्षीरकाकोली मुद्ग माष
पर्ण्यौ जीवंति मधुकमिति दशेमानि जीवनीयानि । (च. सू. ४)
ಜೀವಕ, ಋಷಭಕ, ಮೇದಾ, ಮಹಾಮೇದಾ, ಕಾಕೋಲಿ, ಕ್ಷೀರಕಾಕೋಲಿ, ಮುದ್ಗ ಪರ್ಣಿ (ಅಡವಿ ಹೆಸರು), ಮಾಷಪರ್ಣಿ (ಅಡವಿ ಉದ್ದು), ಜೀವಂತಿ ಮತ್ತು ಮಧುಕ ಇವು ಹತ್ತು ಜೀವನೀಯ ಗಣದಲ್ಲಿಯ ದ್ರವ್ಯಗಳು.

ಬೃಂಹಣೀಯಂ:—

बृंहणं यद् बृहत्वाय । (अ. हृ. सू. १४)
बृंहणं तदुच्यते यद्देहस्य बृहत्वाय भवति ।
यद्देहस्य बृहत्वाय स्थौल्याय तद् बृंहणम् ॥

ಶರೀರವನ್ನು ಪುಷ್ಟಿಗೊಳಿಸುವ ದ್ರವ್ಯಗಳಿಗೆ ಬೃಂಹಣ ದ್ರವ್ಯಗಳೆಂದು ಅನ್ನುವರು. ಬೃಂಹಣ ಕಾರ್ಯವು ಮಾಂಸ ಧಾತುವಿನ ಪುಷ್ಟಿಯಮೇಲೆ ಅವಲಂಬಿಸಿರುವದು. ಯಾವ ದ್ರವ್ಯಗಳು ಮಾಂಸ ಸಮಾನ ಇರುವವೋ ಅವುಗಳಿಂದ ಶರೀರ ಪುಷ್ಟವಾಗುವದು.

बृंहणं शमनं त्वेव वायोः पित्तानिलस्य च । (अ. हृ. सू. १४)
ವಾತ ಮತ್ತು ಪಿತ್ತ ದೋಷಗಳ ಶಮನ ಮಾಡಲಿಕ್ಕೆ ಬೃಂಹಣವೇ ಯೋಗ್ಯವಿರುವದು. ರೋಗದಿಂದ, ಸ್ತ್ರಿಸಂಗದಿಂದ, ದುಃಖದಿಂದ ಕೃಶರಾದವರನ್ನು, ಉರಕ್ಷತ ರೋಗಿಗಳನ್ನು, ವಾತರೋಗಿಗಳನ್ನು ಬೃಂಹಣ ದ್ರವ್ಯಗಳಿಂದ ಉಪಚರಿಸಬೇಕು. ಬೃಂಹಣ ದ್ರವ್ಯಗಳನ್ನು ಪ್ರಮೇಹ, ಆಮದೋಷ, ಜ್ವರ, ಊರುಸ್ತಂಭ ಇತ್ಯಾದಿ ರೋಗಗಳಲ್ಲಿ ಕೊಡಬಾರದು. ಕೃಶನಿಗೆ ಬೃಂಹಣವಾದ ಎಲ್ಲ ಪಾನ, ಆಹಾರ ಮತ್ತು ಔಷಧಗಳನ್ನು ಕೊಡಬೇಕು. ಬೃಂಹಣವು ಮನಸ್ಸಿನ ಮೇಲೆಯೂ ಅವಲಂಬಿಸಿರುವದು. ನಿಶ್ಚಿಂತತೆ, ಆನಂದಗಳಿಂದ ಶರೀರವು ಪುಷ್ಟವಾಗುವದು.

न हि मांस समं किंचिदन्यद्देहबृहत्त्वकृत् ।
मांसादमांसं मांसेन संभृतत्वाद्विशेषतः ॥ (अ. हृ. सू. १४)
बृंहणं पृथिव्यम्बु गुण भूयिष्ठम् । (सु. सू. ४०)
गुरु शीतं मृदु स्निग्धं बहलं स्थूल पिच्छिलम् ।
प्रायो मंद स्थिरं श्लक्ष्णं द्रव्यं बृंहणमुच्यते ॥ (च. सू.)

ಬೃಂಹಣ ದ್ರವ್ಯಗಳು ಪ್ರಾಮುಖ್ಯವಾಗಿ ಪೃಥ್ವಿ ಮತ್ತು ಜಲ ಮಹಾಭೂತ ಪ್ರಾಧಾನ್ಯವುಳ್ಳವಿರುತ್ತವೆ. ಈ ದ್ರವ್ಯಗಳು ಹೆಚ್ಚಾಗಿ ಗುರು, ಶೀತ, ಮೃದು, ಸ್ನಿಗ್ಧ, ಬಹಲ, ಸ್ಥೂಲ, ಪಿಚ್ಛಿಲ, ಮಂದ, ಸ್ಥಿರ ಮತ್ತು ಶ್ಲಕ್ಷ್ಣ ಗುಣಾತ್ಮಕವುಳ್ಳವಿದ್ದು ಮಧುರ ರಸದವಿರುತ್ತವೆ. ಇವುಗಳಿಂದ ಸಪ್ತ ಧಾತುಗಳ ಪೋಷಣ ಕಾರ್ಯವಾಗುತ್ತದೆ. ಬೃಂಹಣ ಕಾರ್ಯವು ಮಾಂಸ ಧಾತುವಿನ ಪುಷ್ಟಿಯನ್ನು ಅವಲಂಬಿಸಿದೆ. ಮಾಂಸ

ಸಮಾನ ದ್ರವ್ಯಗಳಿಂದ ಮಾಂಸ ಧಾತುವಿನ ವೃದ್ಧಿಯಾಗುತ್ತದೆ. ಮಾಂಸ ಧಾತುವಿನ ವೃದ್ಧಿಯಾಗುವದರಿಂದ ಬೃಂಹಣ ಕಾರ್ಯವು ಸ್ವಾಭಾವಿಕವಾಗಿ ಆಗುತ್ತದೆ.

ಗಣ :— क्षीरिणी राजक्षवकाश्वगंधा काकोली क्षीरकाकोली वाट्यायनी भद्रौदनी भारद्वाजी पयस्यर्ष्यगंधा इति दशेमानि बृंहणीयानि भवंति । (च. सू. ४)

ಕ್ಷೀರಿಣಿ, ರಾಜಕ್ಷವಕ, ಅಶ್ವಗಂಧಾ, ಕಾಕೋಲಿ, ಕ್ಷೀರಕಾಕೋಲಿ, ವಾಟ್ಯಾಯನಿ (ಕಳ್ಳಂಗಡಲೆ), ಭದ್ರೌದನಿ, ಭಾರದ್ವಾಜಿ (ಕರಿಯಹತ್ತಿ), ಪಯಸ್ಯಾ (ಹಾಲು ನೆಲ ಗುಂಬಳ), ಋಷ್ಯಗಂಧಾ (ಆಷಾಢಿ ಬೇರು) ಈ ಹತ್ತು ಬೃಂಹಣೀಯ ದ್ರವ್ಯಗಳಿರುತ್ತವೆ.

ಲೇಖನೀಯವು:—

धातून्मलान्वा देहस्य विशोष्योल्लेखयेच्च यत् । लेखनं तद्यथा क्षौद्रं नीरमुष्णं वचा यवाः ॥ (शा. सं.) लेखनं पत्तलीकरणम् ।
लेखनं कर्षनं, तस्मै हितं लेखनीयम् । (यो. र.)
लेखनं अनिल गुण भूयिष्ठम् । (सु. सू.)

ಯಾವ ದ್ರವ್ಯಗಳಿಂದ ಶರೀರ ಕೃಶವಾಗುವದೋ ಅಂಥ ದ್ರವ್ಯಗಳಿಗೆ ಲೇಖನ ದ್ರವ್ಯಗಳೆಂದು ಅನ್ನುವರು. ಈ ದ್ರವ್ಯಗಳು ಶರೀರದ ಪುಷ್ಟಿ ಮತ್ತು ಸ್ಥೂಲತ್ವವನ್ನು ನಾಶ ಮಾಡುವವು. ರಸಾದಿ ಧಾತುಗಳನ್ನು ಮತ್ತು ಮಲಗಳನ್ನು, ವಿಶೇಷವಾಗಿ ಕಫ ಮತ್ತು ಮೇದವನ್ನು ಶೋಷಣ ಮಾಡುವವು. ಅದರಿಂದ ಶರೀರವು ಕೃಶವಾಗುವದು.

ಲೇಖನ ದ್ರವ್ಯಗಳು ಅಗ್ನಿ ಮತ್ತು ವಾಯುಗುಣ ಪ್ರಾಧಾನ್ಯವುಳ್ಳವಿರುವವು. ಹೆಚ್ಚಾಗಿ ಕಟು, ತಿಕ್ತ ಮತ್ತು ಕಷಾಯ ರಸದವಿದ್ದು ಕಟು ವಿಪಾಕದವಿರುತ್ತವೆ. ಅಲ್ಲದೆ ಲಘು, ರೂಕ್ಷ, ತೀಕ್ಷ್ಣ, ಉಷ್ಣ ಗುಣದವಿರುತ್ತವೆ.

ಧಾತುಗಳ ವೃದ್ಧಿಯನ್ನು ದೂರಗೊಳಿಸಲು ಲೇಖನ ಕರ್ಮವನ್ನು ಮಾಡಬೇಕಾಗುತ್ತದೆ. ಹೆಚ್ಚಾಗಿ ಮಾಂಸ ಮತ್ತು ಮೇದ ಧಾತುಗಳು ವೃದ್ಧಿಯಾದಾಗ ಲೇಖನ ಕರ್ಮವನ್ನು ಮಾಡುವರು. ಲೇಖನ ದ್ರವ್ಯಗಳು ಅಗ್ನಿ ಗುಣ ಭೂಯಿಷ್ಠ ಮತ್ತು ಉಷ್ಣ ವೀರ್ಯದವಿರುವದರಿಂದ ಮಾಂಸ ಮತ್ತು ಮೇದ ಧಾತುಗಳ ಅಗ್ನಿಯನ್ನು ವೃದ್ಧಿಮಾಡಿ ಧಾತು ಪಚನ ಮಾಡುತ್ತವೆ. ರೂಕ್ಷ ಗುಣದಿಂದ ಧಾತುಗಳ ಶೋಷಣೆಯನ್ನು ಮಾಡುತ್ತವೆ. ಇದರಿಂದ ಧಾತುಗಳ ವೃದ್ಧಿಯು ದೂರವಾಗುತ್ತದೆ.

ಗಣ :— मुस्त कुष्ठ हरिद्रा दारूहरिद्रा वचातिविषा कटुकरोहिणी चित्रक चिरबिल्व हैमवत्य इति दशेमानि लेखनीयानि भवंति । (च. सू. ४)

ಮುಸ್ತಾ (ಜೇಕಿನ ಗಡ್ಡಿ), ಕುಷ್ಠ, ಹರಿದ್ರಾ (ಅರಿಷಿಣ), ದಾರು ಹರಿದ್ರಾ (ಮರದರಿಷಿಣ), ವಚಾ (ಬಜೆ), ಅತಿವಿಷಾ, ಕಟುಕರೋಹಿಣಿ, ಚಿತ್ರಕ, ಚಿರಬಿಲ್ವ ಮತ್ತು ಹೈಮವತಿ ಇವು ಹತ್ತು ಲೇಖನೀಯ ಗಣದಲ್ಲಿಯ ದ್ರವ್ಯಗಳಿರುವವು.

ಭೇದನೀಯಮ್:—

मलादिकमबद्धं च बद्धं वा पिण्डितं मलैः ।
भित्वाऽधः पातयति तद्भेदनं कटुकी यथा ॥ (शा. सं.)
भेदनं पिण्डित मलानां द्रवीकृत्य बहिःसारणं तस्मै हितम् ॥ (यो.)

ಸಂಚಿತವಾದ ಮಲವನ್ನು ತೆಳ್ಳಗೆಮಾಡಿ ಹೊರಗೆ ಹಾಕುವ ಕ್ರಿಯೆಗೆ ಭೇದನ ಅನ್ನುವರು. ಮತ್ತು ಅಂಥ ದ್ರವ್ಯಗಳಿಗೆ ಭೇದನೀಯ ದ್ರವ್ಯಗಳೆಂದು ಅನ್ನುವರು. ಈ ದ್ರವ್ಯಗಳು ಕರುಳಿನಲ್ಲಿ ಕ್ಷೋಭೆಯನ್ನುಂಟು ಮಾಡುತ್ತವೆ. ಆದರಿಂದ ಅಂತ್ರಮಾರ್ಗದಲ್ಲಿ ಕಫ ಮತ್ತು ಪಿತ್ತಗಳ ಸ್ರಾವವು ಹೆಚ್ಚು ಆಗುತ್ತದೆ. ವಾಯುವಿನ ಕ್ಷೋಭವಾಗಿ ಅಂತ್ರಗಳ ಕಡೆಗೆ ರಸ, ರಕ್ತಾದಿ ದ್ರವ ಧಾತುಗಳಲ್ಲಿಯ ಜಲಾಂಶವು ಬರುತ್ತದೆ. ಇದರಿಂದ ಪಕ್ವಾಶಯದ ಕ್ಷೋಭವಾಗಿ ಮಲಭೇದನ ಕಾರ್ಯವಾಗುತ್ತದೆ ಅದರಿಂದ ದ್ರವ ಮಲ ಪ್ರವೃತ್ತಿಯು ಆಗುತ್ತದೆ. ಅವಷ್ಟಂಭ ಇರಲಿ ಅಥವಾ ಇರದೇ ಇರಲಿ ಭೇದನೀಯ ದ್ರವ್ಯಗಳು ಮಲವನ್ನು ತೆಳ್ಳಗೆ ಮಾಡಿ ಅಧೊ ಮಾರ್ಗದಿಂದ ಹೊರಗೆ ಹಾಕುತ್ತವೆ.

ಗಣ :— सुवहार्कोरूबूकाग्निमुखी चित्रा चित्रक चिरबिल्व शंखिनी शकुलादनी स्वर्णक्षीरिण्य इति दशेमानि भेदनीयानि भवंति । (च. सू. ४)

ನಿಶೋತ್ತರ (ತಿಗಡೆ), ಅರ್ಕ (ಎಕ್ಕೆ), ಏರಂಡ (ಔಡಲ), ಲಾಂಗಲಿ (ಅಗ್ನಿಮುಖಿ), ಚಿತ್ರಾ (ದಂತಿ), ಚಿತ್ರಕ, ಚಿರಬಿಲ್ವ, ಶಂಖಿನಿ (ಕಾಲಮೇಘ), ಶಕುಲಾದಿನಿ (ಕಟುಕರೋಹಿಣಿ) ಮತ್ತು ಸ್ವರ್ಣಕ್ಷೀರಿ (ಗೊಳಗೊಳಿಕೆ) ಇವು ಹತ್ತು ಭೇದನೀಯ ಗಣದಲ್ಲಿಯ ದ್ರವ್ಯಗಳು.

ಸಂಧಾನೀಯಮ್:—

संघानाय भग्न संयोजनाय हितं संघानीयम् । (ग. यो.)
संधानीयं भग्न संधानकारकम् । (डल्हण)
संधानकं शरीरेऽन्तःसंहतिकरं भावानाम् । (इंदुः)

ಎರಡು ಅಥವಾ ಹೆಚ್ಚು ಅಣುಗಳನ್ನು ಒಂದೆಡೆಗೆ ಕೂಡಿಸುವ ಕ್ರಿಯೆಗೆ ಸಂಧಾನ ಅನ್ನುವರು. ಈ ಕ್ರಿಯೆಯನ್ನು ಮಾಡುವ ದ್ರವ್ಯಗಳಿಗೆ ಸಂಧಾನೀಯ ದ್ರವ್ಯಗಳೆನ್ನುವರು. ಮುರಿದ ಎಲುವುಗಳನ್ನು ಕೂಡಿಸುವ ಕ್ರಿಯೆಗೆ ಭಗ್ನ ಸಂಧಾನವೆಂದು ಅನ್ನುವರು. ಸಂಧಾನ ಕಾರ್ಯವು ಪ್ರಾಮುಖ್ಯವಾಗಿ ಕಷಾಯ ಮತ್ತು ಮಧುರ ರಸ ದ್ರವ್ಯಗಳಿಂದ ಆಗುತ್ತದೆ. ಕಷಾಯ ರಸದ ದ್ರವ್ಯಗಳು ಗ್ರಾಹಿ ಮತ್ತು ಪೀಡನ ಕಾರ್ಯ ಮಾಡಿ ಧಾತುಗಳ ಸಾನ್ನಿಧ್ಯವನ್ನು ತರುತ್ತವೆ ಅಲ್ಲದೆ ಕಷಾಯ ರಸದ ದ್ರವ್ಯಗಳು ರಕ್ತಶೋಧನ ಕಾರ್ಯ ಮಾಡುತ್ತವೆ. ಧಾತು ಘಟಕಗಳ ಕ್ಷೀಣತೆ ಇದ್ದಲ್ಲಿ ಮಧುರ ರಸ ದ್ರವ್ಯಗಳನ್ನು ಉಪಯೋಗ ಮಾಡಬೇಕಾಗುವದು. ಮಧುರ ರಸ ದ್ರವ್ಯಗಳಿಂದ ಧಾತು ಪುಷ್ಟಿಯಾಗಿ ಸಂಧಾನ ಕಾರ್ಯವಾಗುವದು. ಮತ್ತು ಶುದ್ಧ ವ್ರಣಗಳು ಶೀಘ್ರ

ತುಂಬಿ ಬರುವವು. ಕಷಾಯ ರಸದ ದ್ರವ್ಯಗಳು ರಕ್ತದಲ್ಲಿಯ ದೋಷ ದುಷ್ಟಿಯನ್ನು ಹೋಗಲಾಡಿಸಿ ವೃಣಗಳಿಗೆ ಶುದ್ಧ ರಕ್ತದ ಪೂರೈಕೆಯನ್ನು ಮಾಡುವವು. ವೃಣದಲ್ಲಿಯ ಕ್ಲೇದವು ಕಷಾಯ ರಸ ದ್ರವ್ಯಗಳ ರೂಕ್ಷ ಗುಣದಿಂದ ದೂರವಾಗಿ ವೃಣಗಳು ತೀವ್ರ ತುಂಬಿಬರುವವು.

ಗಣ :- मधुक मधुपर्णी पृश्निपर्ण्यम्बष्ठकी समंगामोचरसधातकीलोध्रप्रियंगु कट्फलानीति दशेमानि संधानीयानि भवंति । (च. सू. ४)

ಯಷ್ಟಿಮಧು, ಗುಡೂಚಿ, ಪೃಶ್ನಿಪರ್ಣಿ, ಪಾಠಾ, ಲಜ್ಜಾಲು, ಮೋಚರಸ, ಧಾತಕಿ, ಲೋಧ್ರ, ಪ್ರಿಯಂಗು ಮತ್ತು ಕಟ್ಫಲ ಇವು ಹತ್ತು ಸಂಧಾನೀಯ ಗಣದಲ್ಲಿಯ ದ್ರವ್ಯಗಳಿರುವವು.

ದೀಪನೀಯಮ್:—

दीपनीयं वह्नेर्दीपनाय हितम् । (ग)
दीपनमंतराग्नेः संधुक्षणं, तस्मै हितं दीपनीयम् । (यो)
पचेन्नामं वह्निकृच्च दीपनं तद्यथा मिशिः । (शा. सं.)
दीपनमग्निगुण भूयिष्ठम्, तत्समानत्वात् । (सु. सू. ४१)

ಅಗ್ನಿ ಪ್ರದೀಪ್ತ ಮಾಡುವ ದ್ರವ್ಯಗಳಿಗೆ ದೀಪನೀಯ ದ್ರವ್ಯಗಳೆಂದು ಅನ್ನುವರು. ಯಾವ ದ್ರವ್ಯಗಳು ಆಮರಸವನ್ನು ಪಚನ ಮಾಡದೇ ಅಗ್ನಿಯನ್ನು ವರ್ಧನಮಾಡುತ್ತವೆಯೋ ಅಂಥ ದ್ರವ್ಯಗಳಿಗೆ ದೀಪನೀಯ ದ್ರವ್ಯಗಳೆನ್ನುವರು. ಈ ದ್ರವ್ಯಗಳು ಅಗ್ನಿಗುಣ ಭೂಯಿಷ್ಠವಿರುತ್ತವೆ. ದೀಪನೀಯ ದ್ರವ್ಯಗಳು ಅಗ್ನಿ ಗುಣ ಭೂಯಿಷ್ಠವಿರುವದರಿಂದ ಶರೀರದಲ್ಲಿ ಅಗ್ನಿವರ್ಧನ ಕಾರ್ಯವು ಆಗುತ್ತದೆ. ಈ ದ್ರವ್ಯಗಳು ಪ್ರಾಯಃ ಕಟು ವಿಪಾಕದವಿರುತ್ತವೆ. ಅಲ್ಲದೆ ಲಘು, ಉಷ್ಣ ಗುಣಾತ್ಮಕವುಳ್ಳವಿರುತ್ತವೆ. ಇದರಿಂದ ಇವು ಜಾಠರಾಗ್ನಿ ಮತ್ತು ಧಾತ್ವಗ್ನಿಗಳನ್ನು ವರ್ಧನ ಮಾಡುತ್ತವೆ.

पिप्पली पिप्पलीमूल चव्य चित्रक शृंगवेराम्लवेतस मरिचाजमोदा भल्लातकास्थि हिंगुनिर्यासा इति दशेमानि दीपनीयानि भवंति । (च. सू. ४)

ಹಿಪ್ಪಲಿ, ಹಿಪ್ಪಲಿಮೂಲ (ಮೋಡಿ ಕಡ್ಡಿ), ಚವ್ಯ, ಚಿತ್ರಕ, ಶೃಂಗವೇರ (ಆರ್ದ್ರಕ) ಅಮ್ಲವೇತಸ, ಮೆಣಸು, ಅಜವಾನ, ಭಲ್ಲಾತಕಾಸ್ಥಿ ಮತ್ತು ಹಿಂಗುನಿರ್ಯಾಸ ಇವು ಹತ್ತು ದೀಪನೀಯ ಗಣದಲ್ಲಿಯ ದ್ರವ್ಯಗಳು.

ಬಲ್ಯಮ್:—

बलाय हितं बल्यम् ।

ಶರೀರಕ್ಕೆ ಶಕ್ತಿಯನ್ನು ತಂದುಕೊಡುವ ದ್ರವ್ಯಗಳಿಗೆ ಬಲ್ಯ ದ್ರವ್ಯಗಳೆಂದು ಅನ್ನುವರು. ಬಲವು ಸರ್ವ ಧಾತುಗಳ ಮೇಲೆ ಅವಲಂಬಿಸಿರುವದು. ಯಾವ ದ್ರವ್ಯ

ಗಳು ಯಾವ ಯಾವ ಧಾತುಗಳ ವರ್ಧನ ಮಾಡುವವೊ ಆ ಧಾತುಗಳಿಗೆ ಅವು ಕ್ರಮವಾಗಿ ಬಲ್ಯವೆಂದು ಕಾರ್ಯ ಮಾಡುವವು. ಬಲವು ಸಾತ್ವಿಕ ಗುಣದ ಮೇಲೆ ಅವಲಂಬಿಸಿರುವದು.

ಬಲ್ಯ ದ್ರವ್ಯಗಳು ಪೃಥ್ವಿ ಮತ್ತು ಜಲ ಮಹಾಭೂತಾಧಿಕ್ಯವುಳ್ಳವಿರುತ್ತವೆ. ಇವು ಪ್ರಾಯಃ ಮಧುರ ರಸಾತ್ಮಕವಿರುತ್ತವೆ. ಯಾಕಂದರೆ ಮಧುರ ರಸ ದ್ರವ್ಯಗಳು ಸಪ್ತ ಧಾತುಗಳ ವರ್ಧನೆಯನ್ನು ಮಾಡುತ್ತವೆ. ಬಲ್ಯ ದ್ರವ್ಯಗಳು ಪ್ರಾಯಃ ಮಧುರ ವಿಪಾಕದವಿರುತ್ತವೆ ಅಲ್ಲದೆ ಗುರು, ಸ್ನಿಗ್ಧ, ಮಂದ, ಸ್ಥಿರ ಮತ್ತು ಪಿಚ್ಛಿಲ ಇತ್ಯಾದಿ ಗುಣಾಧಿಕ್ಯವುಳ್ಳವಿರುತ್ತವೆ. ಬಲ್ಯ ದ್ರವ್ಯಗಳು ಕಫವರ್ಧಕವಿರುತ್ತವೆ. ಕಾರಣ ಶರೀರದ ಬಲವು ಕಫ ದೋಷದಮೇಲೆ ಅವಲಂಬಿಸಿರುವದು.

ಬಲ್ಯ ದ್ರವ್ಯಗಳು ವಾತರೋಗ, ರಾಜಯಕ್ಷ್ಮಾ, ಕ್ಷತಕ್ಷೀಣ, ಧಾತುದೌರ್ಬಲ್ಯ ಮತ್ತು ಇಂದ್ರಿಯ ದೌರ್ಬಲ್ಯ ಇತ್ಯಾದಿ ವಿಕಾರಗಳಲ್ಲಿ ಉಪಯುಕ್ತವಿರುವವು.

ಗಣ :– ऐन्द्र्यृषभ्यतिसर्थ्य प्रोक्ता पयस्याश्वगंधा स्थिरारोहिणी बलातिबला इति दशेमानि बल्यानि भवंति । (च. सू. ४)

ಐಂದ್ರಿ, ಋಷಭಿ (ಕಪಿಕಚ್ಛು), ಜೇಷ್ಠಮಧು, ಶತಾವರಿ, ಹಾಲುಗುಂಬಳ, ಅಶ್ವಗಂಧಾ, ಶಾಲಿಪರ್ಣಿ, ಕುಟಕಿ, ಬಲಾ ಮತ್ತು ಅತಿಬಲಾ ಇವು ಹತ್ತು ಬಲ್ಯ ಗಣದಲ್ಲಿಯ ದ್ರವ್ಯಗಳು.

ವರ್ಣ್ಯಮ್ :–

वर्णाय हितं वर्ण्यम् ।

ಯಾವ ದ್ರವ್ಯಗಳ ಸೇವನೆಯಿಂದ ಶರೀರದ ವರ್ಣವೃದ್ಧಿ, ಶರೀರದ ಕಾಂತಿ ವೃದ್ಧಿ ಮತ್ತು ರೋಗದಿಂದ ತ್ವಚೆಯ ಬದಲಾದ ಬಣ್ಣವು ಪುನಃ ಸ್ವಾಭಾವಿಕ ಸ್ಥಿತಿಗೆ ಬರುವದೋ ಅಂಥ ದ್ರವ್ಯಗಳಿಗೆ ವರ್ಣ್ಯ ದ್ರವ್ಯಗಳೆನ್ನುವರು.

ಈ ದ್ರವ್ಯಗಳು ಪಿತ್ತದ ಮೇಲೆ; ರಕ್ತ ಧಾತುವಿನ ಮೇಲೆ ಮತ್ತು ಓಜದ ಮೇಲೆ ಕಾರ್ಯಮಾಡಿ ವರ್ಣ್ಯಂ ಎಂಬ ಕಾರ್ಯವನ್ನು ಮಾಡುವವು. ವರ್ಣ್ಯ ದ್ರವ್ಯಗಳು ತ್ವಚೆಯ ಮೇಲೆ ಕಾರ್ಯಮಾಡುವವು. ತ್ವಚೆಯು ಮಾಂಸ ಧಾತುವಿನ ಉಪಧಾತುವಿದೆ. ಮಧುರ ರಸ ದ್ರವ್ಯಗಳು ಮಾಂಸಾದಿ ಶರೀರ ಧಾತುಗಳನ್ನು ವರ್ಧನ ಮಾಡಿ ತ್ವಚೆಗೆ ಪೋಷಣೆ ಕೊಡುತ್ತವೆ ಮತ್ತು ಓಜ ವೃದ್ಧಿಯಾಗಿ ತ್ವಚೆಗೆ ಕಾಂತಿಯುತ್ಪನ್ನವಾಗುತ್ತದೆ. ತ್ವಚೆಯು ಭ್ರಾಜಕ ಪಿತ್ತದ ಸ್ಥಾನವು. ಹರಿದ್ರಾ, ಮಂಜಿಷ್ಠಾ, ಹರಿತಕಿ ಮೊದಲಾದ ದ್ರವ್ಯಗಳು ಭ್ರಾಜಕ ಪಿತ್ತದ ಕಾರ್ಯವನ್ನು ಸುಧಾರಿಸಿ ಶರೀರಕ್ಕೆ ಕಾಂತಿಯನ್ನು ಬೆಳೆಸುವವು. ರಂಜಕ ಪಿತ್ತ ವೃದ್ಧಿಯಾಗುವದರಿಂದಲೂ ಕಾಂತಿಯುತ್ಪನ್ನವಾಗುತ್ತದೆ.

ವರ್ಣ್ಯ ದ್ರವ್ಯಗಳು ಹೆಚ್ಚಾಗಿ ಮಧುರ ಮತ್ತು ಕಷಾಯ ರಸಾತ್ಮಕವುಳ್ಳವಿರುತ್ತವೆ. ಕಷಾಯ ರಸದ ದ್ರವ್ಯಗಳು ರಕ್ತ ಶೋಧನಮಾಡಿ ಶುದ್ಧ ರಕ್ತದ ಪೂರೈಕೆಯನ್ನು ಮಾಡಿ ವರ್ಣ್ಯ ಕ್ರಿಯೆಯನ್ನು ಮಾಡುತ್ತವೆ. ಉದಾಃ– ಕಮಲ, ಪ್ರವಾಳ, ಗೈರಿಕ ಇತ್ಯಾದಿ.

ಈ ದ್ರವ್ಯಗಳು ಜಲ ಮತ್ತು ತೇಜ ಮಹಾಭೂತ ಪ್ರಾಧಾನ್ಯವುಳ್ಳವಿರುತ್ತವೆ.

ಗಣ ಃ– चंदन तुंग पद्मकोशीर मधुक मंजिष्ठा सारिवा पयस्या सितालता इति दशेमानि वर्ण्यानि भवंति । (च. सू.)

ಚಂದನ (ಗಂಧ), ತುಂಗ (ಪುನ್ನಾಗ), ಕಮಲ, ಉಶೀರ, ಜೇಷ್ಠಮಧು, ಮಂಜಿಷ್ಠಾ, ಸಾರಿವಾ, ಪಯಸ್ಯಾ (ಹಾಲುಗುಂಬಳ), ಶ್ವೇತದೂರ್ವಾ ಮತ್ತು ಶ್ಯಾಮದೂರ್ವಾ ಇವು ಹತ್ತು ವರ್ಣ್ಯ ಗಣದಲ್ಲಿಯ ದ್ರವ್ಯಗಳು ಇವಲ್ಲದೆ ಬೆಣ್ಣೆ, ಹಾಲು, ತುಪ್ಪ ಮತ್ತು ಜೇನುತುಪ್ಪ ಇವೂ ವರ್ಣನ ಕಾರ್ಯ ಮಾಡುತ್ತವೆ.

ಕಂಠ್ಯಮ್:—

कण्ठाय हितं कण्ठ्यम्। (यो.)

कण्ठस्थित स्वराय हितं कण्ठ्यम्। (ग)

ಕಂಠದಲ್ಲಿಯ ವಿಕೃತಿಯನ್ನು ಹೋಗಲಾಡಿಸಿ ಸ್ವರವನ್ನು ಸುಧಾರಿಸುವ ದ್ರವ್ಯಗಳಿಗೆ ಕಂಠ್ಯವೆಂದು ಅನ್ನುವರು. ಕಂಠವು ಕಫಸ್ಥಾನವಿರುವದರಿಂದ ಅಲ್ಲಿ ಕಾರ್ಯ ಮಾಡುವ ದ್ರವ್ಯಗಳು ಬಹುಶಃ ಕಫಘ್ನವಿರಬೇಕಾಗುವದು. ರಸವರ್ಧಕ ಮತ್ತು ಓಜ ವರ್ಧಕ ದ್ರವ್ಯಗಳು ಕಂಠಕ್ಕೆ ಹಿತಕರವಿರುವವು. ಉದಾನ ವಾಯುವಿನ ಪ್ರಕೋಪವಾಗಿ ಅದರ ಪರಿಣಾಮವಾಗಿ ಕಂಠಸ್ಥಾನದಲ್ಲಿಯ ಸ್ರೋತಸ್ಸುಗಳ ಸಂಕೋಚ ಉಂಟಾಗಿ ರೂಕ್ಷತಾ ನಿರ್ಮಾಣವಾಗಿದ್ದರೆ ಅಲ್ಲಿ ರೂಕ್ಷತೆಯನ್ನು ನಾಶಮಾಡಿ ಕಂಠಕ್ಕೆ ಹಿತಕರವೆಂದು ಜೇಷ್ಠಮಧು, ಶತಾವರಿಯಂಥ ದ್ರವ್ಯಗಳನ್ನು ಕೊಡುವರು.

ಮಧುರ ರಸದ ದ್ರವ್ಯಗಳು ಕಂಠಕ್ಕೆ ಹಿತಕರವಿರುತ್ತವೆ. ಈ ದ್ರವ್ಯಗಳು ಕಂಠದಲ್ಲಿ ಉಂಟಾದ ಧಾತುಕ್ಷಯವನ್ನು ಹೋಗಲಾಡಿಸಿ ಕಂಠ್ಯವೆಂದು ಕಾರ್ಯಮಾಡುವವು.

ಗಣ ಃ– सारिवेक्षुमूल मधुक पिप्पली द्राक्षा विदारी कैडर्य हंसपादी बृहती कण्टकारिका इति दशेमानि कण्ठ्यानि भवंति । (च. सू. ४)

ಸಾರಿವಾ (ಅನಂತಮೂಲ), ಇಕ್ಷುಮೂಲ (ಕಬ್ಬಿನ ಬೇರು), ಜೇಷ್ಠಮಧು, ಹಿಪ್ಪಲಿ, ದ್ರಾಕ್ಷೆ, ವಿದಾರಿಕಂದ, ಕೈಡರ್ಯ (ಕಟ್ಫಲ), ಹಂಸಪಾದಿ, ಬೃಹತಿ ಮತ್ತು ಕಂಟಕಾರಿ ಇವು ಹತ್ತು ಕಂಠ್ಯ ದ್ರವ್ಯಗಳಿರುತ್ತವೆ.

ಹೃದ್ಯಮ್:—

हृदयाय मनसे हितं हृद्यम्। (ग, यो)

ಯಾವ ದ್ರವ್ಯಗಳು ಹೃದಯಕ್ಕೆ ಹಿತಕರವಿರುವವೋ ಅಂಥವುಗಳಿಗೆ ಹೃದ್ಯ ದ್ರವ್ಯಗಳೆಂದು ಅನ್ನುವರು. ಈ ದ್ರವ್ಯಗಳು ಪ್ರಾಯಃ ಅಮ್ಲ ರಸಾತ್ಮಕವಿರುತ್ತವೆ. ಗರ್ಭಿಣಿಯರ ಮೊದಲನೆಯ ಬಯಕೆಯು ಅಮ್ಲರಸದ್ದೇ ಇರುವದು.

ಹೃದಯವು ವ್ಯಾನವಾತ, ಸಾಧಕಪಿತ್ತ ಮತ್ತು ಅವಲಂಬಕ ಕಫಗಳ ಆಶ್ರಯ ಸ್ಥಾನವಾಗಿದೆ. ಈ ದೋಷಗಳ ವಿಕೃತಿಯಾದರೆ ಹೃದಯ ವಿಕೃತಿಯಾಗುತ್ತದೆ ಇಂಥ ಅವಸ್ಥೆಯಲ್ಲಿ ಈ ದೋಷಗಳ ಮೇಲೆ ಕಾರ್ಯಮಾಡುವಂಥ ದ್ರವ್ಯಗಳನ್ನು ಕೊಡ ಬೇಕಾಗುತ್ತದೆ. ಹೃದಯವು ಶೋಣಿತ ಪ್ರಸಾದಜವಿರುವದರಿಂದ ರಕ್ತಸಮಾನ ದ್ರವ್ಯಗಳು ಹೃದಯಕ್ಕೆ ಹಿತಕರವಿರುತ್ತವೆ. ಹೃದಯವು ರಸಧಾತುವಿನ ಸ್ಥಾನವಿದ್ದು ರಸಧಾತುವಿನಿಂದ ಹೃದಯದ ಪೋಷಣೆಯಾಗುತ್ತದೆ. ಹೃದಯವು ಮನಸ್ಸಿನ ಸ್ಥಾನ ಸ್ಥಾನವಿರುವದರಿಂದ ಹೃದ್ಯ ದ್ರವ್ಯಗಳು ಬಹುಶಃ ಮನಸ್ಸಿಗೆ ಸೇರುವಂಥವು ಇರುತ್ತವೆ. ಅಮ್ಲ ಮತ್ತು ಮಧುರ ರಸಾತ್ಮಕ ದ್ರವ್ಯಗಳು ಹೃದ್ಯವಿರುತ್ತವೆ.

ಗಣ :- आम्राम्रातक लकुच करमर्द वृक्षाम्लवेतस कुवल बदर दाडिम मातु-
लुंगानीति दशेमानि हृद्यानि भवंति (च. सू. ४)

ಆಮ್ರ (ಮಾವು). ಆಮ್ರಾತಕ, ಲಕುಚ, ಕರಮರ್ದ (ಕವಳಿ), ವೃಕ್ಷಾಮ್ಲ (ಹುಣಿಸೆ), ಅಮ್ಲವೇತಸ, ಕುವಲ (ದೊಡ್ಡ ಬೋರೆ), ಬದರ (ಬೋರೆ), ದಾಡಿಮ ಮತ್ತು ಮಾತುಲುಂಗ ಇವು ಹತ್ತು ಹೃದ್ಯ ಗಣದಲ್ಲಿಯ ದ್ರವ್ಯಗಳು. ಸುಶ್ರುತನು ಪರೂಷಕಾದಿ ಗಣವನ್ನು ಹೃದ್ಯವೆಂದು ಹೇಳಿರುವನು.

ತೃಪ್ತಿಘ್ನಮ್ :—

तृप्तिं हंतीति तृप्तिघ्नम्, अन्नाभिनंदनात् तृप्तिरिव तृप्तिररोचकः, स च श्लेष्मजो विकारः। (यो)

तृप्तिः श्लेष्मविकारः येन तृप्तिमिवात्मनं मन्यते, तद्घ्नं तृप्तिघ्नम्।
(चं. द.)

ತೃಪ್ತಿ ಇದೊಂದು ಶ್ಲೇಷ್ಮವಿಕಾರವಿದ್ದು ಇದರಲ್ಲಿ ಮನುಷ್ಯನು ತಾನು ತೃಪ್ತನಾದಂತೆ ಅನುಭವವನ್ನು ಹೊಂದುತ್ತಾನೆ. ಈ ರೋಗವನ್ನು ನಷ್ಟ ಮಾಡುವಂಥ ದ್ರವ್ಯಗಳಿಗೆ ತೃಪ್ತಿಘ್ನ ದ್ರವ್ಯಗಳೆನ್ನುವರು. ತೃಪ್ತಿ ಎಂದರೆ ಊಟ ಮಾಡಬೇಕೆಂಬ ಇಚ್ಛೆಯಾಗ ದಿರುವಿಕೆ; ಇದನ್ನು ನಷ್ಟ ಮಾಡುವ ದ್ರವ್ಯಗಳಿಗೆ ತೃಪ್ತಿಘ್ನ ದ್ರವ್ಯಗಳೆನ್ನುವರು. ಕಫ ವೃದ್ಧಿಯಾಗುವದರಿಂದ ಊಟ ಮಾಡಬೇಕೆಂಬ ಇಚ್ಛೆಯುಂಟಾಗುವದಿಲ್ಲ. ಸೇವಿಸಿದ ಆಹಾರವು ಸರಿಯಾಗಿ ಪಚನವಾಗಿರುವದಿಲ್ಲ. ಮತ್ತು ಜಾಡ್ಯತೆ ಉತ್ಪನ್ನವಾಗಿರುತ್ತದೆ. ಇದರಿಂದ ತೃಪ್ತಿಯಾದಂತೆ ಅನಿಸುತ್ತದೆ ಇದನ್ನು ಹೋಗಲಾಡಿಸಲು ಕಫನಾಶಕ ಚಿಕಿತ್ಸೆಯನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಕಟು ರಸಾತ್ಮಕವಿರುವ, ಉಷ್ಣ ವೀರ್ಯದ ಮತ್ತು ಲಘು, ಉಷ್ಣ ಇತ್ಯಾದಿ ಗುಣಗಳುಳ್ಳ ದ್ರವ್ಯಗಳನ್ನು ಕೊಡ

ಬೇಕಾಗುತ್ತದೆ. ಈ ದ್ರವ್ಯಗಳು ಕಫ ವೃದ್ಧಿಯಿಂದುತ್ಪನ್ನವಾದ ಅಗ್ನಿಮಾಂದ್ಯವನ್ನು ಹೋಗಲಾಡಿಸಿ ಅಗ್ನಿ ಪ್ರದೀಪನ ಕಾರ್ಯ ಮಾಡುತ್ತವೆ ಮತ್ತು ಆಮಾಶಯದಲ್ಲಿ ಸಂಚಿತವಾದ ಆಮವನ್ನು ಪಚನ ಮಾಡುತ್ತವೆ. ತೃಪ್ತಿಘ್ನ ದ್ರವ್ಯಗಳು ತೃಪ್ತಿಯನ್ನು ನಷ್ಟಮಾಡಿ ಊಟ ಮಾಡಬೇಕೆಂಬ ಇಚ್ಛೆಯನ್ನುಂಟು ಮಾಡುತ್ತವೆ. ಮತ್ತು ಅರುಚಿಯನ್ನು ಕಳೆಯುತ್ತವೆ. ಸೇವಿಸಿದ ಆಹಾರದ ಸಮ್ಯಕ್ ಪಾಚನ ಮಾಡಿ; ಶೋಷಣ ಮತ್ತು ಅಭಿಸರಣ ಕಾರ್ಯವನ್ನು ಮಾಡುತ್ತವೆ.

ಗಣ :– नागर चव्य चित्रक विडंग मूर्वा गुडूची वचा मुस्त पिप्पली पटोलानीति दशेमानि तृप्तिघ्नानि भवंति । (च. सू. ४)

ಶುಂಠಿ, ಚವ್ಯ, ಚಿತ್ರಕ, ವಿಡಂಗ, ಮೂರ್ವಾ, ಅಮೃತಬಳ್ಳಿ, ಬಜೆ, ಜೇಕಿನಗಡ್ಡೆ, ಹಿಪ್ಪಲಿ ಮತ್ತು ಪಟೋಲ ಇವು ಹತ್ತು ತೃಪ್ತಿಘ್ನ ಗಣದಲ್ಲಿಯ ದ್ರವ್ಯಗಳು.

ಅರ್ಶೋಘ್ನಮ್ :—

अर्शांसि हंतीति अर्शोघ्नम् ।

ಮೂಲವ್ಯಾಧಿಯನ್ನು ನಾಶಮಾಡುವ ದ್ರವ್ಯಗಳಿಗೆ ಅರ್ಶೋಘ್ನ ದ್ರವ್ಯಗಳೆನ್ನುವರು. ಮಿಥ್ಯಾಹಾರ, ವಿಹಾರಾದಿ ಕಾರಣಗಳಿಂದ ಪ್ರಕುಪಿತವಾದ ವಾತಾದಿ ದೋಷಗಳು ತ್ವಕ್, ಮಾಂಸ ಮತ್ತು ಮೇದ ಧಾತುಗಳನ್ನು ದೂಷಿತಮಾಡಿ ಗುದ ಮಾರ್ಗದಲ್ಲಿ ಮಾಂಸಾಂಕುರಗಳನ್ನು ಉತ್ಪನ್ನ ಮಾಡುತ್ತವೆ. ಈ ಮಾಂಸಾಂಕುರಗಳಿಗೆ ಅರ್ಶ (ಮೂಲವ್ಯಾಧಿ) ಎಂದು ಅನ್ನುವರು. ಅರ್ಶ ಉತ್ಪನ್ನವಾಗಲು ಅಗ್ನಿಮಾಂದ್ಯ ಮತ್ತು ಮಲಾವರೋಧ ಇವು ಮುಖ್ಯ ಕಾರಣಗಳಿರುತ್ತವೆ. ಇವನ್ನು ಹೋಗಲಾಡಿಸುವದರ ಸಲುವಾಗಿ ಅಂದರೆ ಅಗ್ನಿಮಾಂದ್ಯವನ್ನು ದೂರ ಮಾಡಲು ಅಗ್ನಿದೀಪನ ಮಾಡುವಂಥ ದ್ರವ್ಯಗಳನ್ನು ಕೊಡಬೇಕಾಗುತ್ತದೆ. ಮತ್ತು ಮಲಾವರೋಧವನ್ನು ಕಳೆಯಲು ಮಲ ನಿಃಸಾರಕ ದ್ರವ್ಯಗಳನ್ನು ಕೊಡಬೇಕಾಗುತ್ತದೆ. ಅಗ್ನಿದೀಪಕ ಮತ್ತು ಮಲ ನಿಃಸಾರಕ ದ್ರವ್ಯಗಳನ್ನು ಕೊಡುವದರಿಂದ ಅರ್ಶರೋಗೋತ್ಪಾದಕ ಕಾರಣಗಳು ನಷ್ಟವಾಗುವದರಿಂದ ಅರ್ಶ ರೋಗವಾದರೂ ನಷ್ಟವಾಗುತ್ತದೆ. ಅರ್ಶವು ವಿಶೇಷವಾಗಿ ಗುದ ಮಾರ್ಗದಲ್ಲಿ ಆಗುವ ರೋಗವಾಗಿರುವದರಿಂದ ಅಧೋ ಭಾಗದಲ್ಲಿ ಕಾರ್ಯ ಮಾಡುವ ದ್ರವ್ಯಗಳ ಉಪಯೋಗವು ಇಲ್ಲಿ ಆಗುತ್ತದೆ.

ಗಣ :– कुटज बिल्व चित्रक नागरातिविषाभया धन्वयासक दारुहरिद्रा वचा चव्यानीति दशेमान्यर्शोघ्नानि भवंति । (च. सू. ४)

ಕುಟಜ, ಬಿಲ್ವ, ಚಿತ್ರಕ, ಶುಂಠಿ, ಅತಿವಿಷಾ, ಅಭಯಾ (ಹರಿತಕಿ), ಧನ್ವಯಾಸ, ದಾರುಹರಿದ್ರಾ (ಮರದರಿಶಿಣ), ವಚಾ (ಬಜೆ) ಮತ್ತು ಚವ್ಯ ಇವು ಹತ್ತು ಅರ್ಶೋಘ್ನ ಗಣದಲ್ಲಿಯ ದ್ರವ್ಯಗಳು.

ಕುಷ್ಠಘ್ನಮ್‌ಃ—

कुष्ठं हंतीति कुष्ठघ्नम् ।

ಕುಷ್ಠ ರೋಗವನ್ನು ನಾಶ ಮಾಡುವ ದ್ರವ್ಯಗಳಿಗೆ ಕುಷ್ಠಘ್ನ ದ್ರವ್ಯಗಳೆಂದು ಅನ್ನುವರು. ವಿರುದ್ಧಾಶನ, ವಿಷಮಾಶನ, ಅತಿಸ್ನಿಗ್ಧ, ಗುರು ಮತ್ತು ದ್ರವ ಆಹಾರ ಸೇವನೆಯಿಂದ ಪ್ರಕುಪಿತವಾದ ವಾತಾದಿ ದೋಷಗಳು ತ್ವಕ್, ರಕ್ತ ಮತ್ತು ಮಾಂಸ ಧಾತುಗಳಲ್ಲಿ ಸ್ಥಾನಸಂಶ್ರಯಮಾಡಿ ಕುಷ್ಠರೋಗವನ್ನುತ್ಪನ್ನ ಮಾಡುತ್ತವೆ. ಇಲ್ಲಿ ವಿಶೇಷವಾಗಿ ರಕ್ತ ಧಾತುವಿನ ವಿಕೃತಿ ಇರುತ್ತದೆ. ಶರೀರದಲ್ಲಿ ಕ್ಲೇದ ಹೆಚ್ಚು ಬೆಳೆದಿರುತ್ತದೆ. ಇಂಥಲ್ಲಿ ರಕ್ತ ಶೋಧನ ಮತ್ತು ಕ್ಲೇದಹರಣ ಮಾಡುವಂಥ ಔಷಧ ದ್ರವ್ಯಗಳನ್ನು ಕೊಡಬೇಕಾಗುತ್ತದೆ. ಆದರಿಂದ ಈ ರೋಗದಲ್ಲಿ ಹೆಚ್ಚು ಉಪಯೋಗವಾಗುವದು. ಕುಷ್ಠಹರ ದ್ರವ್ಯಗಳು ಹೆಚ್ಚಾಗಿ ಕಷಾಯ, ಕಟು ಮತ್ತು ತಿಕ್ತ ರಸದವಿರುತ್ತವೆ. ಕಷಾಯ ರಸಾತ್ಮಕ ದ್ರವ್ಯಗಳು ದೂಷಿತ ರಕ್ತದ ಶೋಧನೆಯನ್ನು ಮಾಡುತ್ತವೆ. ಕಟು, ತಿಕ್ತ ರಸಾತ್ಮಕ ದ್ರವ್ಯಗಳು ತಮ್ಮಲ್ಲಿಯ ರೂಕ್ಷಗುಣದಿಂದ ಕುಷ್ಠದಲ್ಲಿಯ ಕ್ಲೇದವನ್ನು ಹರಣ ಮಾಡುತ್ತವೆ. ಕ್ರಿಮಿಗಳಿಂದ ಕುಷ್ಠರೋಗ ಉತ್ಪನ್ನವಾಗಿದ್ದರೆ ಆಗ ಅಲ್ಲಿ ಕ್ರಿಮಿನಾಶಕ ಮತ್ತು ಕುಷ್ಠರೋಗ ಹರವಿರುವ ದ್ರವ್ಯಗಳನ್ನು ಕೊಡಬೇಕಾಗುತ್ತದೆ. ಉದಾಃ- ವಿಡಂಗ.

खदिराभयामलक हरिद्रारुष्कर सप्तपर्णारग्वध करवीर विडंग जाती प्रवाला इति दशेमानि कुष्ठघ्नानि भवंति (च. सू. ४)

ಖದಿರ (ಕಾಚು), ಅಭಯಾ (ಹರಿತಕಿ), ಆಮಲಕಿ, ಹರಿದ್ರಾ (ಅರಿಷಿಣ), ಅರುಷ್ಕರ (ಕೇರು), ಸಪ್ತಪರ್ಣಿ, ಆರಗ್ವಧ (ಕಕ್ಕೇಕಾಯಿ), ಕರವೀರ (ಕಣಗಿಲ), ವಾಯುವಿಡಂಗ, ಜಾಜಿಯ ಎಲೆ (ಜಾತಿ) ಇವು ಹತ್ತು ಕುಷ್ಠಘ್ನ ಗಣದಲ್ಲಿಯ ದ್ರವ್ಯಗಳು.

ಕಂಡೂಘ್ನಮ್:—

कण्डूं हंतीति कण्डूघ्नम् ।

ಯಾವ ದ್ರವ್ಯಗಳು ತುರಿಕೆ (ತಿಂಡಿ) ಯನ್ನು ಕಡಿಮೆ ಮಾಡುವವೋ ಅವುಗಳಿಗೆ ಕಂಡೂಘ್ನ ದ್ರವ್ಯಗಳೆಂದು ಅನ್ನುವರು.

ಕಂಡೂ ಇದು ಕಫ ದೋಷದ ಲಕ್ಷಣವಾಗಿದ್ದು ಇದನ್ನು ನಾಶ ಮಾಡುವಂಥ ದ್ರವ್ಯಗಳು ಕಫ ಹರವಿರಬೇಕಾಗುತ್ತದೆ. ಕಫದೋಷ, ಮೇದಧಾತು ಮತ್ತು ಸ್ವೇದ ಮಲ ಇವುಗಳಿಂದ ಕಂಡೂ ಉತ್ಪನ್ನವಾಗುತ್ತದೆ. ಕಾರಣ ಕಫದೋಷ, ಮೇದ ಧಾತು ಮತ್ತು ಸ್ವೇದಮಲ ಇವುಗಳ ಮೇಲೆ ಕಾರ್ಯ ಮಾಡುವ ಕಟು, ತಿಕ್ತ, ಕಷಾಯ ರಸಾತ್ಮಕಗಳುಳ್ಳ ಚಂದನ, ನಿಂಬ, ಸರ್ಷಪದಂತಹ ದ್ರವ್ಯಗಳು ಕಂಡೂವನ್ನು ಕಳೆಯಲು ಉಪಯುಕ್ತವಿರುತ್ತವೆ.

ಗಣ :- चंदन नलद कृतमाल निम्ब कुटज सर्षप मधुक दारूहरिद्रा मुस्तानीति दशेमानि कण्डूघ्नानि भवंति। (च. सू. ४)

ಚಂದನ, ನಲದ (ಉಶೀರ), ಕೃತಮಾಲ (ಆರಗ್ವಧ), ನಕ್ತಮಾಲ (ಕರಂಜ), ನಿಂಬ (ಬೇವು), ಕುಟಜ, ಸರ್ಷಪ (ಸಾಸಿವೆ), ಮಧುಕ (ಜೇಷ್ಟಮಧು), ದಾರು ಹರಿದ್ರಾ (ಮರದರಿಷಿಣ) ಮತ್ತು ಮುಸ್ತಾ (ಜೇಕಿನ ಗಡ್ಡೆ) ಇವು ಹತ್ತು ಕಂಡೂಘ್ನ ಗಣ ದಲ್ಲಿಯ ದ್ರವ್ಯಗಳು.

ಕ್ರಿಮಿಘ್ನಮ್:—

कृमीन् हंतीति कृमिघ्नम्।

ಅಭ್ಯಂತರ ಕ್ರಿಮಿಗಳನ್ನು ಇಲ್ಲವೆ ಬಾಹ್ಯ ಕ್ರಿಮಿಗಳನ್ನು ನಾಶ ಮಾಡುವಂಥ ದ್ರವ್ಯಗಳಿಗೆ ಕ್ರಿಮಿಘ್ನ ದ್ರವ್ಯಗಳೆಂದು ಅನ್ನುವರು. ಈ ದ್ರವ್ಯಗಳು ಕ್ರಿಮಿಗಳಿಂದುತ್ಪನ್ನ ವಾಗುವ ಅನೇಕ ತರದ ವಿಕಾರಗಳನ್ನು ನಷ್ಟಮಾಡುತ್ತವೆ. ಮಧುರ ರಸಾತ್ಮಕ ದ್ರವ್ಯ, ಗುಡ, ಪಿಷ್ಟದಂತಹ ಪದಾರ್ಥಗಳ ಸೇವನೆಯಿಂದ ಕ್ರಿಮಿಗಳು ಉತ್ಪನ್ನವಾಗುತ್ತಿದ್ದು ಇವುಗಳನ್ನು ನಾಶ ಮಾಡಲು ಕಟು ರಸಾತ್ಮಕ ದ್ರವ್ಯಗಳು ಹೆಚ್ಚು ಉಪಯುಕ್ತ ವಿರುವವು.

ಗಣ :- अक्षीव मरिच गण्डीर केवुक विडंग निर्गुण्डी किणिही श्वदंष्ट्रा वृषपर्णिकाऽऽखुपर्णिका इति दशेमानि कृमिघ्नानि भवंति। (च. सू. ४)

ಅಕ್ಷೀವ (ಶೋಭಾಂಜನ, ನುಗ್ಗೆ), ಮೆಣಸು, ಸ್ನುಹಿ, ಕೇವುಕ, ವಿಡಂಗ, ನಿರ್ಗುಂಡಿ, ಅಪಾಮಾರ್ಗ, ಗೋಕ್ಷುರ, ವೃಷಪರ್ಣಿ ಮತ್ತು ಆಖುಪರ್ಣಿ ಇವು ಹತ್ತು ಕ್ರಿಮಿಘ್ನ ಗಣದಲ್ಲಿಯ ದ್ರವ್ಯಗಳು.

ವಿಷಘ್ನಮ್:—

विषं नाशयतीति विषघ्नम्।

ಯಾವ ದ್ರವ್ಯಗಳು ವಿಷವನ್ನು ನಾಶಮಾಡುತ್ತವೆಯೋ ಅಂಥ ದ್ರವ್ಯಗಳಿಗೆ ವಿಷಘ್ನವೆಂದು ಅನ್ನುವರು. ವಿಷವು ಓಜದ ವಿಪರೀತ ಗುಣಗಳುಳ್ಳದ್ದಿದ್ದು ತೀಕ್ಷ್ಣ, ಉಷ್ಣ, ರೂಕ್ಷ, ಸೂಕ್ಷ್ಮ, ಆಶು, ವ್ಯವಾಯಿ, ವಿಕಾಶಿ, ವಿಶದ, ಲಘು ಮತ್ತು ಅಪಾಕ ಈ ಹತ್ತು ಗುಣಗಳುಳ್ಳದ್ದಿರುತ್ತದೆ. ವಿಷನಾಶಕ ದ್ರವ್ಯಗಳು ಈ ಹತ್ತು ಗುಣಗಳ ವಿರುದ್ಧ ಗುಣಗಳುಳ್ಳವಿರಬೇಕಾಗುತ್ತದೆ. ತಿಕ್ತ, ಕಷಾಯ, ಮಧುರ ರಸಾತ್ಮಕ ದ್ರವ್ಯ ಗಳು ವಿಶೇಷವಾಗಿ ವಿಷಘ್ನವೆಂದು ಉಪಯೋಗವಾಗುತ್ತವೆ. ತಿಕ್ತರಸ ದ್ರವ್ಯಗಳು ವಾಯು, ಆಕಾಶ ಮಹಾಭೂತಾಧಿಕ್ಯವುಳ್ಳವಿರುವದರಿಂದ ಇವು ಲಘು ಮತ್ತು ಸೂಕ್ಷ್ಮ ಸ್ರೋತೋಗಾಮಿ ಇರುವವು. ತಿಕ್ತರಸ ದ್ರವ್ಯಗಳು ತಮ್ಮ ಲಘು, ಸೂಕ್ಷ್ಮ, ಮತ್ತು ಶೀತವೀರ್ಯಗಳಿಂದ ಪಿತ್ತ ಮತ್ತು ಕಫ ಭೂಯಿಷ್ಠ ವಿಷವನ್ನು ನಾಶ ಮಾಡುವವು.

ಉದಾಃ–ನಿಂಬ ಮತ್ತು ಚಂದನ. ಇದರಂತೆ ಕಷಾಯ ರಸ ದ್ರವ್ಯಗಳು ತಮ್ಮ ಶೀತ ವೀರ್ಯದಿಂದ ಕಫ, ಪಿತ್ತ ಭೂಯಿಷ್ಠ ವಿಷದ ನಾಶ ಮಾಡುವವು. ಮಧುರ ರಸದ ದ್ರವ್ಯಗಳು ತಮ್ಮ ಮಧುರ ರಸ, ಮಧುರ ವಿಪಾಕ, ಶೀತವೀರ್ಯ, ಸ್ನಿಗ್ಧ ಇತ್ಯಾದಿ ಗುಣಗಳಿಂದ ಹೃದ್ಯವೆಂದು ಕಾರ್ಯಮಾಡಿ ವಿಷನಾಶನ ಮಾಡುವವು. ಮಧುರ ರಸ ದ್ರವ್ಯಗಳಿಂದ ರಸ ಧಾತುವಿನ ವರ್ಧನೆಯಾಗಿ ವಿಷದ ಶಮನ ಕಾರ್ಯವಾಗುವದು. ಮತ್ತು ಓಜದ ರಕ್ಷಣೆಯಾಗುವದು.

ಗಣ ಃ– हरिद्रा मंजिष्ठा सुवहा सूक्ष्मैला पालिंदी चंदन कतक शिरीष सिंधुवार श्लेष्मातका इति दशेमानि विषघ्नानि भवंति । (च. सू. ४)

ಹರಿದ್ರಾ (ಅರಿಷಿಣ), ಮಂಜಿಷ್ಠಾ, ಸುವಹಾ (ರಾಸ್ನಾ), ಸೂಕ್ಷ್ಮ ಏಲಕ್ಕಿ, ಪಾಲಿಂದಿ (ಅನಂತಮೂಲ), ಚಂದನ, ಕತಕ (ಚಿಲ್ಲದ ಬೀಜ), ಶಿರೀಷ (ಸಿರಸಲ), ಸಿಂಧುವಾರ (ಲಿಕ್ಕಿ) ಮತ್ತು ಶ್ಲೇಷ್ಮಾತಕ (ಚಳ್ಳೆ ಗಿಡ) ಇವು ಹತ್ತು ವಿಷಘ್ನ ಗಣದಲ್ಲಿಯ ದ್ರವ್ಯಗಳು.

ಸ್ತನ್ಯಜನನಮ್:—

स्तन्यं जनयतीति स्तन्यजननम् । (यो)

ಸ್ತನ್ಯ ನಿರ್ಮಿತಿ ಮಾಡುವ ದ್ರವ್ಯಗಳಿಗೆ ಸ್ತನ್ಯಜನನ ದ್ರವ್ಯಗಳೆಂದು ಅನ್ನುವರು. ಉದಾಃ–ಹಾಲು, ಶತಾವರಿ.

ಸ್ತನ್ಯವು ರಸಧಾತುವಿನ ಉಪಧಾತುವಿರುವದರಿಂದ ರಸಧಾತುವರ್ಧಕ ದ್ರವ್ಯಗಳು ಸ್ವಾಭಾವಿಕವಾಗಿ ಸ್ತನ್ಯದ ನಿರ್ಮಿತಿಯನ್ನು ಮಾಡುವವು. ಪ್ರಸೂತಿಯಾದ ನಂತರ ಮಗುವಿಗೆ ಕುಡಿಸಲು ಸ್ತನ್ಯವು ಕಡಿಮೆ ಬಿದ್ದರೆ ಸ್ತನ್ಯ ನಿರ್ಮಾಣ ಮಾಡುವ ದ್ರವ್ಯಗಳನ್ನು ಉಪಯೋಗಿಸಬೇಕು. ಮಧುರ ರಸ, ಶೀತವೀರ್ಯ ಮತ್ತು ಮಧುರ ವಿಪಾಕದ ದ್ರವ್ಯಗಳು ಸ್ತನ್ಯಜನನ ಮಾಡುತ್ತವೆ. ಮಿಥ್ಯಾಹಾರ ವಿಹಾರಗಳ ಪರಿಣಾಮವಾಗಿ ಶರೀರವಲ್ಲಿ ಸೋಮಧಾತುವಿನ ಕ್ಷಯವಾಗುವದರಿಂದ ಸ್ತನ್ಯವು ಕ್ಷೀಣವಾಗುತ್ತದೆ. ಆಗ ಸ್ತನ್ಯಜನನ ಮಾಡುವಂಥ ಹಾಲು, ಇಕ್ಷುವಂತಹ ದ್ರವ್ಯಗಳನ್ನು ಕೊಟ್ಟು ಸ್ತನ್ಯವರ್ಧನ ಮಾಡಬೇಕು.

ಗಣ ಃ– वीरण शालि षष्टिकेक्षुवालिका दर्भ कुश काश गुन्द्रेत्कटक तृणमूलानीति दशेमानि स्तन्यजननानि भवंति । (च. सू. ४)

ವೀರಣ (ಲಾಮಂಚ), ಶಾಲಿ (ಶಾಲಿ ಭತ್ತ), ಷಷ್ಟಿಕ (60 ದಿವಸಗಳ ಅಕ್ಕಿ), ಕಬ್ಬಿನ ಬೇರು, ದರ್ಭೆಯ ಬೇರು, ಕುಶ (ಗಂಡು ಹಂಚಿಕಡ್ಡಿಯ ಬೇರು), ಕಾಶ, ಗುಂದ್ರಾ (ಜಲಜ), ಉತ್ಕಟಕ (ಶರ) ಮತ್ತು ತೃಣಮೂಲ (ರೋಹಿಷ) ಇವು ಹತ್ತು ಸ್ತನ್ಯಜನನ ಗಣದಲ್ಲಿಯ ದ್ರವ್ಯಗಳು.

ಸ್ತನ್ಯ ಶೋಧನಮ್ಃ—

दोषदूषितं स्तन्यं शोधयतीति स्तन्य शोधनम् ।

ಯಾವ ದ್ರವ್ಯಗಳು ವಾತಾದಿ ದೋಷಗಳಿಂದ ದೂಷಿತವಾದ ಸ್ತನ್ಯದ ಶುದ್ಧಿಯನ್ನು ಮಾಡುವವೋ ಅಂಥವುಗಳಿಗೆ 'ಸ್ತನ್ಯಶೋಧನ' ದ್ರವ್ಯಗಳೆನ್ನುವರು.

ವಾತದೋಷದೂಷಿತ ಸ್ತನ್ಯವು ರೂಕ್ಷ, ಲಘು, ಶೀತ ಸ್ವಭಾವದ ಆಹಾರ ವಿಹಾರ ಮಾಡುವದರಿಂದ ಮತ್ತು ವ್ಯಾಯಾಮ, ಅತಿಕ್ಲೇಶ ಇತ್ಯಾದಿ ಕರ್ಮಗಳಿಂದ ದೂಷಿತವಾಗುತ್ತದೆ. ಇಂಥ ದೂಷಿತ ಸ್ತನ್ಯದ ಸೇವನೆಯನ್ನು ಮಗುವು ಪಾನ ಮಾಡಿದರೆ ಅದು ಕೃಶ, ರೂಕ್ಷ ಮತ್ತು ಶುಷ್ಕವಾಗುವದು, ಮಲಮೂತ್ರ ಪ್ರವೃತ್ತಿಯು ಸರಿಯಾಗಿ ಆಗುವದಿಲ್ಲ.

ಇಂಥ ವಾತದೋಷ ದೂಷಿತ ಸ್ತನ್ಯದ ಶೋಧನ ಮಾಡಬೇಕಾಗಿದ್ದರೆ ವಾತ ಶಮನ ಮಾಡತಕ್ಕ ದ್ರವ್ಯಗಳಾದ ದೇವದಾರು, ವಚಾ, ಕುಷ್ಠ, ಪಾಠಾ, ಭಾಂಗಿ, ಹಿಪ್ಪಲಿ, ಚಿತ್ರಕ, ಶುಂಠಿ, ಮರಿಚ, ದಶಮೂಲ, ಚಿತ್ರಕ, ಬಜೆ, ಪಾಠಾ, ಕುಟಕಿ ಮತ್ತು ಕುಷ್ಠದಂಥ ದ್ರವ್ಯಗಳನ್ನು ಕೊಡಬೇಕಾಗುತ್ತದೆ. ಈ ದ್ರವ್ಯಗಳಿಂದ ಅಗ್ನಿವರ್ಧನವಾಗುವದು. ಅದರಿಂದ ವಾತಶಮನವಾಗುವದು, ಮಲನಿಃಸರಣವಾಗುವದು. ಹಾಗು ವಾತ ದೋಷ ದೂಷಿತ ಸ್ತನ್ಯಶೋಧನವಾಗುವದು.

ಪಿತ್ತದೋಷ ದೂಷಿತ ಸ್ತನ್ಯವು ಕಟು, ಅಮ್ಲ ಮತ್ತು ಲವಣ ರಸಾತ್ಮಕವಿರುವದು. ಸ್ಪರ್ಶಕ್ಕೆ ಉಷ್ಣವಿರುವದು, ದುರ್ಗಂಧಯುಕ್ತವಿರುವದು. ಇಂಥ ಸ್ತನ್ಯವನ್ನು ಸೇವಿಸಿದರೆ ಜ್ವರ, ಅತಿಸಾರ, ಸ್ವೇದ, ಮುಖಪಾಕದಂಥ ರೋಗಗಳಾಗುತ್ತವೆ. ಆಗ ಗುಡೂಚಿ, ಶತಾವರಿ, ನಿಂಬ, ಚಂದನ, ಪಟೋಲ, ಮುಸ್ತಾ, ಭೂನಿಂಬ, ಕುಟಕಿಯಂಥ ದ್ರವ್ಯಗಳ ಸೇವನೆ ಮಾಡಬೇಕು. ಈ ದ್ರವ್ಯಗಳು ತಿಕ್ತ, ಕಷಾಯ ಮತ್ತು ಮಧುರ ರಸಾತ್ಮಕ ಹಾಗು ಶೀತವೀರ್ಯಾತ್ಮಕವಿರುವದರಿಂದ ಪಿತ್ತದೋಷದ ವಿಕೃತಿಯನ್ನು ಹೋಗಲಾಡಿಸಿ ಸ್ತನ್ಯಶೋಧನ ಮಾಡುತ್ತವೆ.

ಕಫದೋಷ ದೂಷಿತ ಸ್ತನ್ಯವು ಅತಿಶುಕ್ಲ, ಅತಿ ಮಧುರ, ಲವಣರಸ, ಅತಿಸ್ನಿಗ್ಧ, ಪಿಚ್ಛಿಲ ಮತ್ತು ಸಾಂದ್ರವಿದ್ದು ಸ್ಪರ್ಶಕ್ಕೆ ಶೀತವಿರುತ್ತದೆ. ಹಾಗೂ ನೀರಿನಲ್ಲಿ ಹಾಕಿದರೆ ತಳದಲ್ಲಿ ಕೂಡ್ರುತ್ತದೆ. ಇಂಥ ಹಾಲನ್ನು ಮಗುವು ಸೇವಿಸಿದರೆ ಅದು ಅತಿಸ್ನಿಗ್ಧ ಮತ್ತು ಅತಿಸ್ಥೌಲ್ಯವಾಗುತ್ತದೆ; ಅಗ್ನಿಮಾಂದ್ಯ ಉಂಟಾಗುತ್ತದೆ. ಆಗ ಖದಿರ, ಅಭಯಾ, ನಿಂಬ ಮುಸ್ತಾ, ಹರಿದ್ರಾ, ಕಟುಕರೋಹಿಣಿ ಮತ್ತು ಶುಂಠಿಯಂಥ ದ್ರವ್ಯಗಳನ್ನು ಕೊಡಬೇಕು. ಈ ದ್ರವ್ಯಗಳು ಕಟು, ತಿಕ್ತ, ಕಷಾಯ ರಸಾತ್ಮಕವಿರುವದರಿಂದ ಕಫ ದೋಷದ ವಿಕೃತಿಯನ್ನು ಹೋಗಲಾಡಿಸಿ ಸ್ತನ್ಯಶೋಧನ ಮಾಡುತ್ತವೆ.

ರಸಧಾತುವಿನ ಉಪಧಾತು ಸ್ತನ್ಯವಿರುವದರಿಂದ ಸ್ತನ್ಯದುಷ್ಟಿಯಾದಾಗ ರಸಧಾತುವಿನ ದುಷ್ಟಿಯಾದರೂ ಆಗಿರುತ್ತದೆ. ಆಗ ರಸಧಾತುವಿನ ಶುದ್ಧಿಗಾಗಿ ಪಟೋಲ ಪತ್ರ, ನಿಂಬಪತ್ರ, ಇಂದ್ರಯವ, ಕಟುಕರೋಹಿಣಿಯಂಥ ದ್ರವ್ಯಗಳನ್ನು ಕೊಡಬೇಕು.

ಸ್ತನ್ಯಶುದ್ಧಿಗಾಗಿ ಶತಾವರಿ, ಅನಂತಮೂಲ, ಕ್ಷೀರಿವೃಕ್ಷ, ಅಗಳುಶುಂಠಿ ಮತ್ತು ಅಮೃತಬಳ್ಳಿಗಳು ಉಪಯುಕ್ತವಿರುತ್ತವೆ.

ಗಣ :– पाठा महौषध सुरदारु मुस्त मूर्वा गुडूची वत्सकफल किराततिक्त कटुरोहिणी सारिवा चेति दशेमानि स्तन्यशोधनानि भवंति ।

(च. सू. ४)

ಪಾಠಾ (ಅಗಳು ಶುಂಠಿ), ಮಹೌಷಧ (ಶುಂಠಿ), ಸುರದಾರು (ದೇವದಾರು), ಮುಸ್ತ (ಜೇಕಿನ ಗಡ್ಡೆ), ಮೂರ್ವಾ (ಕೊರಟಗೆಯ ಬೇರು), ಗುಡೂಚಿ (ಅಮೃತಬಳ್ಳಿ), ವತ್ಸಕ ಫಲ (ಕೊಡಸಿಗೆಯ ಬೀಜ), ಕಿರಾತ ತಿಕ್ತ (ನೆಲಬೇವು), ಕಟುಕರೋಹಿಣಿ ಮತ್ತು ಸಾರಿವಾ ಇವು ಹತ್ತು ಸ್ತನ್ಯಶೋಧನ ಗಣದಲ್ಲಿಯ ದ್ರವ್ಯಗಳು.

ಶುಕ್ರ ಜನನಮ್ :—

शुक्रं (वीर्यं) जनयति उत्पादयति इति शुक्रजननम् ।
यस्माच्छुक्रस्य वृद्धिः स्याच्छुक्रलं च तदुच्यते ॥
यथाऽश्वगंधा मुसली शर्करा च शतावरी । (शा. सं.)

ಪುರುಷನ ಶುಕ್ರಧಾತುವನ್ನು ಉತ್ಪನ್ನ ಮಾಡುವ ಮತ್ತು ವೃದ್ಧಿ ಮಾಡುವಂಥ ದ್ರವ್ಯಗಳಿಗೆ ಶುಕ್ರಜನನ ಅಥವಾ ಶುಕ್ರಲ ದ್ರವ್ಯಗಳೆಂದು ಅನ್ನುವರು. ಉದಾ:–ಜೀವಕ, ಋಷಭಕ, ಕಾಕೋಲಿ, ತುಪ್ಪ ಇತ್ಯಾದಿ.

ಶುಕ್ರಲ ದ್ರವ್ಯಗಳು ಶುಕ್ರಸಮಾನ ಗುಣಾತ್ಮಕವಿರುತ್ತವೆ. ಶುಕ್ರವು ಶುಕ್ಲ, ಗುರು, ಸ್ನಿಗ್ಧ, ಬಹಲ, ದ್ರವ ಗುಣಾತ್ಮಕವಿದ್ದು ಮಧುರ ರಸದ್ದು ಮತ್ತು ಜೇನುತುಪ್ಪದ ವಾಸನೆಯುಳ್ಳದ್ದು ಇರುತ್ತದೆ. ಶುಕ್ರಲ ದ್ರವ್ಯಗಳಾದರೂ ಶುಕ್ರದ ಗುಣಗಳಾದ ಶುಕ್ಲ, ಗುರ್ವಾದಿ ಗುಣಾತ್ಮಕವಿರಬೇಕಾಗುತ್ತದೆ. ಶುಕ್ರ ಕ್ಷಯವಾದಾಗ ಇಂಥ ದ್ರವ್ಯಗಳನ್ನು ಕೊಡುವದರಿಂದ ಶುಕ್ರಜನನ ಮತ್ತು ಶುಕ್ರವರ್ಧನ ಕಾರ್ಯವಾಗುತ್ತದೆ.

ಶುಕ್ರಲ ದ್ರವ್ಯಗಳು ಎರಡು ಪ್ರಕಾರವಿರುವವು. 1) ಶುಕ್ರಸಮಾನ ದ್ರವ್ಯಗಳು 2) ಶುಕ್ರಧರಾ ಕಲೆಗೆ ಪೋಷಕವಾದ ದ್ರವ್ಯಗಳು. ಶುಕ್ರಸಮಾನ ದ್ರವ್ಯಗಳೆಂದರೆ ಗುರು, ಸ್ನಿಗ್ಧ, ದ್ರವ ಗುಣಾತ್ಮಕ ಮತ್ತು ಮಧುರ ರಸಾತ್ಮಕ ಹಾಲು, ಉದ್ದು ಮುಂತಾದ ದ್ರವ್ಯಗಳು. ಶುಕ್ರಧರಾ ಕಲೆಗೆ ಪೋಷಣೆ ಕೊಡುವ ದ್ರವ್ಯಗಳೆಂದರೆ ಕಪಿಕಚ್ಛು ಭೂಕೂಷ್ಮಾಂಡ, ಶತಾವರಿ ಇತ್ಯಾದಿ.

ಗಣ :– जीवकर्षभक काकोली क्षीरकाकोली मुद्गपर्णी माषपर्णी मेदा वृद्धरुहा जटिला कुलिंगा इति दशेमानि शुक्रजननानि भवंति । (च. सू. ४)

ಜೀವಕ, ಋಷಭಕ, ಕಾಕೋಲಿ, ಕ್ಷೀರಕಾಕೋಲಿ, ಮುದ್ಗಪರ್ಣಿ, ಮಾಷಪರ್ಣಿ, ಮೇದಾ, ವೃದ್ಧರುಹಾ (ಶತಾವರಿ), ಜಟಿಲಾ (ಜಟಾಮಾಂಸಿ) ಮತ್ತು ಕುಲಿಂಗಾ (ಗುಲಗಂಜಿಯಬೇರು) ಇವು ಹತ್ತು ಶುಕ್ರಜನನ ಗಣದಲ್ಲಿಯ ದ್ರವ್ಯಗಳು.

ಶುಕ್ರ ಶೋಧನಮ್ :—

दोष दूषितं शुक्रं शोधयतीति शुक्रशोधनम् ।

ವಾತಾದಿ ದೋಷಗಳಿಂದ ದೂಷಿತವಾದ ಶುಕ್ರ ಧಾತುವನ್ನು ಶುದ್ಧ ಮಾಡುವ ದ್ರವ್ಯಗಳಿಗೆ ಶುಕ್ರಶೋಧನ ದ್ರವ್ಯಗಳೆನ್ನುವರು. ಯಾವ ದೋಷದಿಂದ ಶುಕ್ರ ದೂಷಿತ ವಾಗಿರುವದೋ ಅಂಥ ದೋಷನಾಶಕ ದ್ರವ್ಯಗಳನ್ನುಪಯೋಗಿಸಿ ಶುಕ್ರಶೋಧನ ವನ್ನು ಮಾಡಬೇಕು.

ಶುಕ್ರವು ವಾತದೋಷದಿಂದ ದೂಷಿತವಾಗಿದ್ದರೆ ಕೃಷ್ಣ, ರೂಕ್ಷವಾಗಿಯೂ, ಪಿತ್ತ ದೋಷದಿಂದ ದೂಷಿತವಾಗಿದ್ದರೆ ಪೀತ, ದಾಹವುಳ್ಳದ್ದೂ; ಕಫ ದೋಷದಿಂದ ದೂಷಿತ ವಾಗಿದ್ದರೆ ಗ್ರಂಥಿಯುಕ್ತ ಮತ್ತು ಮಂದ ಮಂದವಾಗಿ ಇರುವದು. ಎರಡೆರಡು ದೋಷ ಗಳ ಸಂಸರ್ಗದಿಂದ ಶುಕ್ರ ದುಷ್ಟಿಯು ಇರಬಹುದು. ಹಾಗು ಮೂರು ದೋಷಗಳ ಸನ್ನಿಪಾತಿಕ ಶುಕ್ರ ದುಷ್ಟಿಯು ಇರಬಹುದು. ಆಗ ಇಂಥ ಅವಸ್ಥೆಯಲ್ಲಿ ಯಾವ ದೋಷದಿಂದ ಶುಕ್ರ ದುಷ್ಟವಾಗಿರುತ್ತದೆಯೋ ಆ ದೋಷನಾಶಕ ಮತ್ತು ಶುಕ್ರಶೋಧಕ ವಿರುವ ಔಷಧಿ ದ್ರವ್ಯವನ್ನು ಕೊಡಬೇಕಾಗುತ್ತದೆ.

ಗಣ :— कुष्ठैलवालुक कट्फल समुद्रफेन कदम्बनिर्यासेक्षुकाण्डेक्ष्विक्षुरक वसुकोशीराणीति दशेमानि शुक्रशोधनानि भवंति (च. सू. ४)

ಕುಷ್ಠ (ಜಂಗಲ್‌ಕೋಷ್ಠ), ಏಲವಾಲುಕ, ಕಟ್ಫಲ (ಮಾಪಾಳದ ಕಾಯಿ), ಸಮುದ್ರದ ನೊರೆ, ಕದಂಬ ನಿರ್ಯಾಸ (ಈಚಲಗೋಂದು), ಇಕ್ಷು (ಕಬ್ಬು), ಕಾಂಡೇಕ್ಷು (ಜೇಣ ಕಬ್ಬಿನ ಬೇರು), ಇಕ್ಷುರಕ (ಕೊಳವಳಿಕೆಯ ಬೀಜ), ವಸುಕ (ಶಿವಮಲ್ಲಿಗೆ) ಮತ್ತು ಉಶೀರ ಇವು ಹತ್ತು ಶುಕ್ರಶೋಧಕ ಗಣದಲ್ಲಿಯ ದ್ರವ್ಯಗಳು.

ಸುಶ್ರುತನು ಮುಷ್ಕಕಾದಿ, ವಿದಾರ್ಯಾದಿ, ಕರಮರ್ದಾದಿ ಮೊದಲಾದ ಗಣ ಗಳನ್ನು ಶುಕ್ರಶೋಧಕವೆಂದು ಗಣಿಸಿರುವನು.

ಸ್ನೇಹೋಪಗಮ್ :—

स्नेहनस्य सर्पिरादेः स्नेहनक्रियायां सहायत्वेनोपगच्छतीति स्नेहोपगम्।
मृद्वीकादि स्नेहोपगयुक्तस्य सर्पिरादेः स्नेहने प्रकर्षवती शक्तिर्भवतीत्यर्थः।
(च. द.)

स्नेहमुपगच्छति स्नेहनक्रियायां सहायीभवतीति स्नेहोपगम् । (यो.)

ಯಾವ ದ್ರವ್ಯಗಳು ಸ್ನೇಹನ ದ್ರವ್ಯಗಳಿಗೆ ಸಹಾಯ ಮಾಡಿ ಸ್ನೇಹನ ಶಕ್ತಿಯನ್ನು ಹೆಚ್ಚು ಮಾಡುವವೋ ಅಂಥ ದ್ರವ್ಯಗಳಿಗೆ ಸ್ನೇಹೋಪಗ ದ್ರವ್ಯಗಳೆನ್ನುವರು. ಉದಾ:- ಮೃದ್ವೀಕಾ.

ಘೃತ, ತೈಲ, ವಸಾ ಮತ್ತು ಮಜ್ಜಾ ಇವು ಸ್ನೇಹನ ದ್ರವ್ಯಗಳಿದ್ದು, ಮೃದ್ವೀಕಾ ಮಧುಕ, ಮಧುಪರ್ಣಿಯಂಥ ದ್ರವ್ಯಗಳು ಸ್ನೇಹೋಪಗವೆಂದು ಕಾರ್ಯಮಾಡುವವು.

ಈ ದ್ರವ್ಯಗಳನ್ನು ಘೃತಾದಿ ಸ್ನೇಹನ ದ್ರವ್ಯಗಳೊಡನೆ ಉಪಯೋಗಿಸಿದರೆ ದೇಹದಲ್ಲಿ ಸ್ನೇಹನ ಕಾರ್ಯವು ಅಧಿಕ ಪ್ರಮಾಣದಿಂದಾಗುವದು. ಸ್ನೇಹೋಪಗ ದ್ರವ್ಯಗಳು ಸ್ವತಃ ಸ್ನೇಹನ ಕಾರ್ಯವನ್ನು ಮಾಡದೇ; ಸ್ನೇಹನ ದ್ರವ್ಯಗಳೊಂದಿಗೆ ಕೊಟ್ಟಾಗ ಸ್ನೇಹನ ವರ್ಧನ ಕಾರ್ಯ ಮಾಡಿದ್ದು ಕಂಡು ಬರುವದು.

ಗಣ :- मृद्वीका मधुक मधुपर्णी मेदा विदारी काकोली क्षीरकाकोली जीवक जीवंती शालपर्ण्य इति दशेमानि स्नेहोपगानि भवंति । (च. सू. ४)

ಮೃದ್ವೀಕಾ (ದ್ರಾಕ್ಷೆ), ಮಧುಕ (ಜೇಷ್ಠಮಧು), ಮಧುಪರ್ಣಿ (ಅಮೃತಬಳ್ಳಿ) ಮೇದಾ, ವಿದಾರಿ (ನೆಲಗುಂಬಳ), ಕಾಕೋಲಿ, ಕ್ಷೀರ ಕಾಕೋಲಿ, ಜೀವಕ, ಜೀವಂತಿ (ಸಿಹಿ ಹಾಲೆಯ ಬಳ್ಳಿ), ಮತ್ತು ಶಾಲಪರ್ಣಿ (ಮೂರೆಲೆ ಹೊನ್ನೆ) ಇವು ಹತ್ತು ಸ್ನೇಹೋಪಗ ಗಣದಲ್ಲಿಯ ದ್ರವ್ಯಗಳು.

ಸ್ವೇದೋಪಗಮ್:-

स्वेदन द्रव्यस्य अग्न्यादेः स्वेदनक्रियायां सहायत्वेनोपगच्छतीति स्वेदोपगम् ।

ಯಾವ ದ್ರವ್ಯಗಳು ಸ್ವೇದನ ದ್ರವ್ಯಗಳಿಗೆ ಸಹಾಯ ಮಾಡಿ ಸ್ವೇದನ ಶಕ್ತಿಯನ್ನು ಹೆಚ್ಚಿಸುವವೋ ಅಂಥ ದ್ರವ್ಯಗಳಿಗೆ ಸ್ವೇದೋಪಗ ದ್ರವ್ಯಗಳೆಂದು ಅನ್ನುವರು. ಈ ದ್ರವ್ಯಗಳು ಆಗ್ನೇಯ ಗುಣಾತ್ಮಕವಿರುವವು. ಅಂದರೆ ಇವು ಉಷ್ಣ, ತೀಕ್ಷ್ಣ, ಲಘು ಗುಣಾತ್ಮಕವಿದ್ದು ಪಿತ್ತವರ್ಧಕವಿರುತ್ತವೆ. ಈ ದ್ರವ್ಯಗಳು ಹೆಚ್ಚಾಗಿ ಕಟು ರಸದವಿದ್ದು ಉಷ್ಣ ವೀರ್ಯದವಿರುತ್ತವೆ. ಇಂಥ ದ್ರವ್ಯಗಳನ್ನು ಸೇವಿಸುವದರಿಂದ ಮೇದ ಧಾತ್ವಗ್ನಿಯು ವೃದ್ಧಿಯಾಗಿ ಅದು ಮೇದ ಧಾತುವಿನ ಪಚನವನ್ನು ಅಧಿಕ ಪ್ರಮಾಣದಿಂದ ಮಾಡುತ್ತದೆ. ಇದರಿಂದ ಮೇದ ಧಾತುವಿನ ಮಲವಾದ ಸ್ವೇದವಾದರೂ ಹೆಚ್ಚು ಪ್ರಮಾಣದಲ್ಲಿ ನಿರ್ಮಾಣವಾಗುತ್ತದೆ.

ಗಣ :- शोभांजनैरण्डार्क वृश्चीर पुनर्नवा यव तिल कुलत्थ माष बदराणीति दशेमानि स्वेदोपगानि भवंति । (च. सू. ४)

ಶೋಭಾಂಜನ (ನುಗ್ಗೆ), ಏರಂಡ (ಔಡಲ), ವೃಶ್ಚೀರ (ಎಕ್ಕೆ), ಪುನರ್ನವಾ (ಬಿಳಿಗಣಜಲಿ), ಯವ (ಜವೆಗೋದಿ), ತಿಲ (ಎಳ್ಳು), ಕುಲತ್ಥ (ಹುರಳಿ), ಮಾಷ (ಉದ್ದು) ಮತ್ತು ಬದರ (ಬೋರೆ) ಇವು ಹತ್ತು ಸ್ವೇದೋಪಗ ಗಣದಲ್ಲಿಯ ದ್ರವ್ಯಗಳು.

ವಮನೋಪಗಮ್:—

वमनद्रव्यस्य मदनफलादेर्वमनक्रियायां सहायत्वेनोपगच्छतीति वमनोपगम् ।

ಮದನಫಲದಂತಹ ವಮನಕಾರಕ ದ್ರವ್ಯಗಳೊಡನೆ ಯಾವ ದ್ರವ್ಯಗಳನ್ನು ಕೊಡುವದರಿಂದ ವಮನ ಕಾರ್ಯಕ್ಕೆ ಸಹಾಯವಾಗುವದೋ ಅಂಥ ದ್ರವ್ಯಗಳಿಗೆ ವಮನೋಪಗ ದ್ರವ್ಯಗಳೆಂದು ಅನ್ನುವರು.

ವಾಮಕ ದ್ರವ್ಯಗಳು ಅಗ್ನಿ ಮತ್ತು ವಾಯು ಗುಣ ಭೂಯಿಷ್ಠವಿರುವವು. ಮತ್ತು ಅವು ಶರೀರದ ಊರ್ಧ್ವಭಾಗದಲ್ಲಿ ಅಂದರೆ ಆಮಾಶಯದ ಮೇಲೆ ಕಾರ್ಯ ಮಾಡುವಂಥವಿರುವವು. ಕೆಲವು ದ್ರವ್ಯಗಳು ಆಮಾಶಯದಲ್ಲಿ ಕ್ಷೋಭೆಯನ್ನುತ್ಪನ್ನಮಾಡಿ ವಾಂತಿಯನ್ನುಂಟು ಮಾಡುವವು. ಮತ್ತೆ ಕೆಲವು ದ್ರವ್ಯಗಳು ಉದಾನ ಮತ್ತು ವ್ಯಾನ ವಾಯುವಿನ ಪ್ರಕೋಪಮಾಡಿ ವಾಂತಿಯನ್ನುಂಟು ಮಾಡುವವು.

ಗಣ :— मधु मधुक कोविदार कर्बुदार नीप विदुल बिम्बी शणपुष्पी सदापुष्पा प्रत्यक्पुष्प्य इति दशेमानि वमनोपगानि भवंति । (च. सू. ४)

ಜೇನುತುಪ್ಪ, ಅತಿಮಧುರ, ಕೆಂಪುಕಂಚವಾಳ, ಬಿಳಿಕೆಂಚುವಾಳ, ಈಚಲ, ಹಬ್ಬೆಯ ಬೇರು, ತೊಂಡೆ, ಪುಂಡೀಗಿಡ, ಎಕ್ಕೆ ಮತ್ತು ಉತ್ತರಾಣಿ ಇವು ಹತ್ತು ವಮನೋಪಗ ಗಣದಲ್ಲಿಯ ದ್ರವ್ಯಗಳು.

ವಿರೇಚನೋಪಗವಮ್ :—

विरेचन द्रव्यस्य त्रिवृदादेर्विरेचन क्रियायां सहायत्वेनोपगच्छतीति विरेचनोपगम् ।

ನಿಶೋತ್ತರದಂತಹ ವಿರೇಚಕ ದ್ರವ್ಯಗಳೊಡನೆ ಕೊಟ್ಟ ಕೆಲವು ದ್ರವ್ಯಗಳು ವಿರೇಚನ ಕ್ರಿಯೆಗೆ ಸಹಾಯ ಮಾಡುವವು. ಅಂಥ ದ್ರವ್ಯಗಳಿಗೆ ವಿರೇಚನೋಪಗ ದ್ರವ್ಯಗಳೆಂದು ಅನ್ನುವರು. ಈ ದ್ರವ್ಯಗಳು ಪೃಥ್ವಿ ಮತ್ತು ಆಪ್ ಮಹಾಭೂತಾಧಿಕ್ಯವುಳ್ಳವಿರುವವು.

ಗಣ :- द्राक्षा काश्मर्यफल परूषक अभया आमलक बिभीतक कुवल बदर कर्कन्धु पीलूनीति दशेमानि विरेचनोपगानि भवन्ति । (च. सू. ४)

ದ್ರಾಕ್ಷೆ, ಶಿವನಿ, ಕಾಡುಖರ್ಜೂರ, ಅಳಲೆಕಾಯಿ, ನೆಲ್ಲಿಕಾಯಿ, ತಾರೆಕಾಯಿ, ಮೃದು ಬೋರೆ, ಕಾಶಿಯ ಬೋರೆ, ಸಣ್ಣ ಬೋರೆ, ಅಡವಿ ಅಕ್ರೋಡ ಇವು ಹತ್ತು ವಿರೇಚನೋಪಗ ಗಣದಲ್ಲಿಯ ದ್ರವ್ಯಗಳು.

ಆಸ್ಥಾಪನೋಪಗವಮ್ :—

आस्थापन द्रव्याणां पाटलादीनामास्थापन क्रियायां सहायत्वेनोपगच्छतीति आस्थापनोपगम् ।

ಆಸ್ಥಾಪನ ಇದೊಂದು ಬಸ್ತಿ ಪ್ರಕಾರವಿರುವದು. ಆಸ್ಥಾಪನ ಬಸ್ತಿಯಲ್ಲಿ ಉಪಯೋಗಿಸಲ್ಪಡತಕ್ಕ ದ್ರವ್ಯಗಳ ಸಂಗಡ ಇತರ ಕೆಲವು ದ್ರವ್ಯಗಳನ್ನು ಕೊಡುವದರಿಂದ ಆಸ್ಥಾಪನ ಕಾರ್ಯಕ್ಕೆ ಸಹಾಯವಾಗುವದು. ಅಂಥ ದ್ರವ್ಯಗಳಿಗೆ ಆಸ್ಥಾಪನೋಪಗ

ದ್ರವ್ಯಗಳೆಂದು ಅನ್ನುವರು. ಆಸ್ಥಾಪನ ಬಸ್ತಿಯಿಂದ ದೋಷಗಳು ತಮ್ಮ ತಮ್ಮ ಸ್ಥಾನದಲ್ಲಿ ಉಳಿಯುವವು. ಮತ್ತು ಆಯುಷ್ಯವರ್ಧನ ಕಾರ್ಯವಾಗುವದು. ಆದ್ದರಿಂದ ಇದಕ್ಕೆ ಆಸ್ಥಾಪನ ಬಸ್ತಿ ಎಂದು ಅನ್ನುವರು.

ಗಣ :- त्रिवृत् बिल्व पिप्पली कुष्ठ सर्षप वचा वत्सकफल शतपुष्पा मधुक मदनफलानीति दशेमानि आस्थापनोपगानि भवंति । (च. सू. ४)

ನಿಶೋತ್ತರ, ಬಿಲ್ವ, ಪಿಪ್ಪಲಿ, ಚಾಂಗಲಕೋಷ್ಠ, ಸಾಸಿವೆ, ಬಜೆ, ಇಂದ್ರಜವ, ಬಡಿಸೇಪ, ಜೇಷ್ಠಮಧು ಮತ್ತು ಮಂಗಾರೆಕಾಯಿ ಇವು ಹತ್ತು ದ್ರವ್ಯಗಳಿಗೆ ಆಸ್ಥಾಪನೋಪಗ ದ್ರವ್ಯಗಳೆಂದು ಅನ್ನುವರು.

ಅನುವಾಸನೋಪಗವು :—

अनुवासनोपग द्रव्याणां अनुवासन क्रियायां सहायत्वेनोपगच्छतीति अनुवासनोपगम् ।

ಅನುವಾಸನ ಬಸ್ತಿಗೆ ಕೊಡತಕ್ಕ ದ್ರವ್ಯಗಳ ಸಂಗಡ ರಾಸ್ನಾ, ದೇವದಾರು ಮುಂತಾದ ದ್ರವ್ಯಗಳನ್ನು ಕೂಡಿಸಿ ಕೊಡುವದರಿಂದ ಅನುವಾಸನ ಕ್ರಿಯೆಗೆ ಸಹಾಯವಾಗುವದು. ಅನುವಾನ ಬಸ್ತಿಯು ಸ್ನಿಗ್ಧ ಬಸ್ತಿ ಇರುವದು. ಶರೀರವನ್ನು ಸ್ನಿಗ್ಧ ಮಾಡುವದಕ್ಕಾಗಿ ಅನುವಾಸನ ಬಸ್ತಿಯನ್ನು ಕೊಡುವರು.

ಗಣ :- रास्ना सुरदारु बिल्व मदन शतपुष्पा वृश्चीर पुनर्नवा श्वदंष्ट्रा अग्निमंथ श्योनाकां इति दशेमानि अनुवासनोपगानि भवंति । (च. सू. ४)

ರಾಸ್ನಾ (ರಾಶ್ನೆ), ದೇವದಾರು, ಬಿಲ್ವ, ಮದನಫಲ, ಬಡಿಶೇಪ, ಬಿಳೆಗಣಜಲಿ, ಕೆಂಪುಗಣಜಲಿ, ನೆಗ್ಗಿಲು, ಅಗ್ನಿಮಂಥ ಮತ್ತು ಹೆಮ್ಮರ ಈ ಹತ್ತು ದ್ರವ್ಯಗಳಿಗೆ ಅನುವಾಸನೋಪಗ ದ್ರವ್ಯಗಳೆಂದು ಅನ್ನುವರು.

ಶಿರೋ ವಿರೇಚನೋಪಗವು :—

शिरोविरेचनोपगे तु शिरोविरेचन प्रधानान्येव द्रव्याणि बोध्यव्यानि । (च. द.)

ಶಿರೋವಿರೇಚನ ಕರ್ಮದಲ್ಲಿ ಪ್ರಾಧಾನ್ಯವಾಗಿ ಉಪಯೋಗವಾಗುವ ದ್ರವ್ಯಗಳಿಗೆ ಶಿರೋವಿರೇಚನೋಪಗ ಅಥವಾ ಶಿರೋವಿರೇಚನ ದ್ರವ್ಯಗಳೆಂದು ಅನ್ನುವರು. ಈ ದ್ರವ್ಯಗಳಿಂದ ಶಿರೋಭಾಗದ ಮತ್ತು ಜತ್ರುಭಾಗದ ದೋಷಗಳು ಹೊರಗೆ ಹಾಕಲ್ಪಡುವವು.

ಗಣ :- ज्योतिष्मती क्षवक मरिच पिप्पली विडंग शिग्रु सर्षप अपामार्ग तण्डुल श्वेता महाश्वेता इति दशेमानि शिरोविरेचनोपगानि भवंति । (च. सू. ४)

ಜ್ಯೋತಿಷ್ಮತಿ, ಕ್ಷವಕ, ಮೆಣಸು, ಹಿಪ್ಪಲಿ, ವಾಯುವಿಡಂಗ, ನುಗ್ಗೆ, ಸಾಸಿವೆ, ಉತ್ತ ರಾಣೆ, ಬಿಳಿಯ ಗಿರಿಕರ್ಣಿಕೆಯ ಬೀಜ, ನೀಲ ಗಿರಿಕರ್ಣಿಕಾ ಈ ಹತ್ತು ದ್ರವ್ಯಗಳಿಗೆ ಶಿರೋ ವಿರೇಚನೋಪಗ ದ್ರವ್ಯಗಳೆಂದು ಅನ್ನುವರು.

ಛರ್ದಿ ನಿಗ್ರಹಣಮ್:—

छर्दिं निगृह्णाति स्तम्भयतीति छर्दि निग्रहणम् ।

ಯಾವ ದ್ರವ್ಯಗಳು ವಾಂತಿಗೆ ಕಾರಣೀಭೂತ ದೋಷಗಳನ್ನು ಶಾಂತಮಾಡಿ ವಾಂತಿಯನ್ನು ತಡೆಯುವವೋ ಅಂಥ ದ್ರವ್ಯಗಳಿಗೆ ಛರ್ದಿ ನಿಗ್ರಹಣ ದ್ರವ್ಯಗಳೆನ್ನುವರು. ಈ ದ್ರವ್ಯಗಳು ಆಮಾಶಯದ ಮೇಲೆ ಕಾರ್ಯಮಾಡುವವು. ಆಮಾಶಯದಲ್ಲಿಯ ಕ್ಷೋಭ ಮತ್ತು ವಾತಪ್ರಕೋಪಗಳನ್ನು ಶಮನ ಮಾಡುವವು. ವಾತಜ ಛರ್ದಿಯಲ್ಲಿ ಘೃತ ಸೈಂಧವ ಕೊಡಬೇಕು. ಪಿತ್ತಜ ಛರ್ದಿಯಲ್ಲಿ ಆಮಲಕಿ, ದ್ರಾಕ್ಷೆ, ಜೇಷ್ಠಮಧು, ರಕ್ತಚಂದನದಂಥ ಪಿತ್ತಶಾಮಕ ದ್ರವ್ಯಗಳನ್ನು ಕೊಡಬೇಕು. ಕಫಜ ಛರ್ದಿಯಲ್ಲಿ ದಾಲಚಿನ್ನಿ, ತಮಾಲಪತ್ರ, ಮಧು ಇತ್ಯಾದಿ ದ್ರವ್ಯಗಳನ್ನು ಕೊಡಬೇಕು.

ಗಣ :— जम्बु आम्रपल्लव मातुलुङ्ग अम्लबदर दाडिम यव यष्टिका उशीर मृत् लाजा इति दशेमानि छर्दि निग्रहणानि भवंति । (च. सू. ४)

ನೇರಿಲ, ಮಾವಿನ ಚಿಗುರು, ಮಾದಾಳ ಕಾಯಿ, ಹುಳಿಬೋರೆ, ದಾಳಿಂಬ, ಜವಗೋಧಿ, ಜೇಷ್ಠಮಧು, ಬಾಳದ ಬೇರು, ಗೋಪಿಚಂದನ (ಕೆಮ್ಮಣ್ಣು) ಮತ್ತು ಅರಳು ಇವು ಹತ್ತು ಛರ್ದಿನಿಗ್ರಹಣ ದ್ರವ್ಯಗಳಿರುತ್ತವೆ.

ತೃಷ್ಣಾ ನಿಗ್ರಹಣಮ್:—

ನೀರಡಿಕೆಯನ್ನು ಕಡಿಮೆ ಮಾಡುವ ದ್ರವ್ಯಗಳಿಗೆ ತೃಷ್ಣಾ ನಿಗ್ರಹಣ ದ್ರವ್ಯಗಳೆಂದು ಅನ್ನುವರು. ಕಂಠವು ಈ ವಿಕಾರದ ಸ್ಥಾನವಿರುವದು. ಅನೇಕ ಕಾರಣಗಳಿಂದ ತೃಷ್ಣಾ ವಿಕಾರ ಉಂಟಾಗುವದು. ಕಾರಣ ಭೇದದಿಂದ ದ್ರವ್ಯಗಳ ಪ್ರಯೋಗ ಮಾಡಬೇಕು. ಉದಾ:– ವಾತಜ ತೃಷ್ಣಾದಲ್ಲಿ ಜೀವನೀಯ ಗಣ ದ್ರವ್ಯ; ಹಾಲು, ತುಪ್ಪ; ಪಿತ್ತಜ ತೃಷ್ಣಾದಲ್ಲಿ ಚಂದನ, ದ್ರಾಕ್ಷಾ, ಪದ್ಮಕಾಷ್ಟ; ಕಫಜ ತೃಷ್ಣಾದಲ್ಲಿ ತ್ರಿಕಟು, ವಚಾ, ಭಲ್ಲಾತಕ; ಆಮಜ ತೃಷ್ಣಾದಲ್ಲಿ ಬಿಲ್ವ, ಶುಂಠಿ, ವಚಾ; ಕ್ಷಯಜ ತೃಷ್ಣಾದಲ್ಲಿ ಹಾಲು, ತುಪ್ಪ, ಮಾಂಸರಸ ಇತ್ಯಾದಿ ದ್ರವ್ಯಗಳನ್ನು ಕೊಡಬೇಕು.

ಗಣ :— नागर धन्वयासक मुस्त पर्पट चंदन किराततिक्त गुडूची ह्रीबेर धान्यक पटोलानीति दशेमानि तृष्णा निग्रहणानि भवंति । (च. सू. ४)

ಶುಂಠಿ, ತುರುಚಿ, ಜೇಕಿನ ಗಡ್ಡೆ, ಕಲ್ಲು ಸಬ್ಬಸಿಗೆ, ಚಂದನ, ಕಿರಾತ ತಿಕ್ತ, ಅಮೃತ ಬಳ್ಳಿ, ಹ್ರೀಬೇರ, ಕೊತಂಬರಿ ಬೀಜ ಮತ್ತು ಕಹಿಪಡುವಲ ಈ ಹತ್ತು ದ್ರವ್ಯಗಳಿಗೆ ತೃಷ್ಣಾ ನಿಗ್ರಹಣ ದ್ರವ್ಯಗಳೆಂದು ಅನ್ನುವರು.

ಹಿಕ್ಕಾನಿಗ್ರಹಣವರ್ಗಃ—

ಬಿಕ್ಕನ್ನು ಕಡಿಮೆ ಮಾಡುವ ದ್ರವ್ಯಗಳಿಗೆ 'ಹಿಕ್ಕಾ ನಿಗ್ರಹಣ' ದ್ರವ್ಯಗಳೆನ್ನುವರು. ಬಿಕ್ಕು ಇದು ಪ್ರಾಣವಹ ಸ್ರೋತಸ್ಸುಗಳ ದುಷ್ಟಿಯಿಂದ ಉಂಟಾಗುವ ವಿಕಾರವು. ಆದ್ದರಿಂದ ಇದನ್ನು ದೂರಮಾಡಲು ಪ್ರಾಣವಹ ಸ್ರೋತಸ್ಸುಗಳ ಮೇಲೆ ಕಾರ್ಯ ಮಾಡುವ ದ್ರವ್ಯಗಳನ್ನು ಕೊಡಬೇಕು. ಹಾಗು ಇದು ವಾತ, ಕಫ ದೋಷಗಳ ವಿಕೃತಿಯಿಂದ ಉತ್ಪನ್ನವಾಗುವದರಿಂದ ಉಷ್ಣವೀರ್ಯದ ಮತ್ತು ವಾತ, ಕಫನಾಶಕ ಔಷಧಿ ದ್ರವ್ಯಗಳ ಪ್ರಯೋಗವನ್ನು ಮಾಡಬೇಕಾಗುತ್ತದೆ.

ಗಣ :- शटी पुष्करमूल बदरबीज कण्टकारिका बृहती वृक्षरूहाभया पिप्पली दुरालभा कुलीर श्रृङ्गय इति दशेमानि हिक्कानिग्रहणानि भवंति ॥

(च. सू. ४)

ಕಚೋರ, ಪುಷ್ಕರಮೂಲ, ಬದರ ಬೀಜ (ಎಲಚಿಯ ಬೀಜ), ನೆಲಗುಳ್ಳ, ಹೆಗ್ಗುಳ್ಳ, ಬಂದಣಿಕೆ, ಅಣಿಲೆಯ ಕಾಯಿ, ಹಿಪ್ಪಲಿ, ತುರುಚಕಸ ಬೇರು, ಕರ್ಕಟಶೃಂಗಿ ಈ ಹತ್ತು ದ್ರವ್ಯಗಳಿಗೆ ಹಿಕ್ಕಾ ನಿಗ್ರಹಣ ದ್ರವ್ಯಗಳೆಂದು ಅನ್ನುವರು.

ಪುರೀಷ ಸಂಗ್ರಹಣೀಯವರ್ಗಃ—

पुरीष संग्रहणं पुरीषस्य स्तम्भंन, तस्मै हितम् । पुरीषस्य अतिसरितः संग्रहणं संग्रहः, तत्र हितं पुरीष संग्रहणीयम् ।

ಯಾವ ದ್ರವ್ಯಗಳು ದ್ರವ ಮಲವನ್ನು ಮತ್ತು ಅತಿ ಪ್ರಮಾಣದಲ್ಲಿ ಮೇಲಿಂದ ಮೇಲೆ ಪ್ರವೃತ್ತವಾಗುವ ಮಲವನ್ನು ತಡೆಯುವವೋ ಅಂಥ ದ್ರವ್ಯಗಳಿಗೆ "ಪುರೀಷ ಸಂಗ್ರಹಣೀಯ" ದ್ರವ್ಯಗಳೆಂದು ಅನ್ನುವರು. ಈ ದ್ರವ್ಯಗಳು ಮುಖ್ಯವಾಗಿ ಮಹಾ-ಸ್ರೋತಸ್ಸಿನಲ್ಲಿ ಕಾರ್ಯ ಮಾಡುವವು. ಪುರೀಷ ಸಂಗ್ರಹಣೀಯ ಕಾರ್ಯವು ಸಾಮಾನ್ಯವಾಗಿ ಸ್ತಂಭನ ಮತ್ತು ಗ್ರಾಹಿ ಎಂದು ಎರಡು ರೀತಿಯಿಂದಾಗುವದು.

ಸ್ತಂಭನಃ—

स्तम्भनं स्तम्भयति यद् गतिमन्तं चलं ध्रुवम् ।
शीतं मंदं मृदु श्लक्ष्णं रूक्षं सूक्ष्मं द्रवं स्थिरम् ॥
यद् द्रव्यं लघु चोद्दिष्टं प्रायस्तत् स्तम्भनं स्मृतम् । (च. सू. २२)
रौक्ष्याच्छैत्यात्कषायत्वाल्लघुपाकाच्च यद् भवेत् ।
वातकृत् स्तम्भनं तत्स्याद्यथा वत्सक टुण्टुकौ ॥ (शा. सं.)

ಶರೀರದಿಂದ ಹೊರಗೆ ಹೋಗುವ ದೋಷಾದಿಗಳನ್ನು ಮತ್ತು ತೆಳುವಾದ ದ್ರವ್ಯಗಳನ್ನು ತಡೆದು ಹಿಡಿಯುವ ದ್ರವ್ಯಗಳಿಗೆ ಸ್ತಂಭನ ದ್ರವ್ಯಗಳೆಂದು ಅನ್ನುವರು. ಇವು ಶೀತ, ಮಂದ, ಮೃದು, ಶ್ಲಕ್ಷ್ಣ, ರೂಕ್ಷ, ಸೂಕ್ಷ್ಮ, ದ್ರವ, ಸ್ಥಿರ ಮತ್ತು ಲಘು ಗುಣಾತ್ಮಕವುಳ್ಳವಿರುವವು.

ಶೀತವೀರ್ಯ, ಕಷಾಯರಸ, ರೂಕ್ಷ ಗುಣ ಮತ್ತು ಲಘು ಪಾಕಿ ದ್ರವ್ಯಗಳು ವಾತಕರವಿರುವದರಿಂದ ಸ್ತಂಭನ ಕಾರ್ಯ ಮಾಡುವವು.

ವಾಯುವು ತನ್ನ ರೂಕ್ಷ ಗುಣದಿಂದ ಮಲದಲ್ಲಿಯ ದ್ರವಭಾಗವನ್ನು ಶೋಷಣ ಮಾಡುವದು. ಮತ್ತು ಆದರಿಂದ ಮಲಾವಷ್ಟಂಭನ ಕಾರ್ಯವಾಗುವದು. ಸ್ತಂಭನ ದ್ರವ್ಯಗಳು ಕಷಾಯರಸ, ರೂಕ್ಷಗುಣ. ಮತ್ತು ಶೀತ ವೀರ್ಯದವಿರುವದರಿಂದ ಸ್ರೋತಸ್ಸುಗಳ ಸಂಕೋಚನ ಕಾರ್ಯ ಮಾಡಿ ಅಂತ್ರದ ಗತಿಯನ್ನು ಕಡಿಮೆ ಮಾಡುವವು ಇದರಿಂದ ಮಲಸ್ತಂಭನ ಕಾರ್ಯವಾಗುವದು. ಉದಾ:- ಅಘು, ಖದಿರ, ಕುಟಜ. ಸ್ತಂಭನ ಔಷಧಗಳನ್ನು ಆಮಾವಸ್ಥೆಯಲ್ಲಿ ಕೊಡಲು ಬರುವದಿಲ್ಲ. ಯಾಕೆಂದರೆ ಇವು ಆಮದ ಪಚನ ಮಾಡದೇ ತಮ್ಮ ಕಷಾಯ, ರೂಕ್ಷ ಮತ್ತು ಶೀತ ಗುಣಗಳಿಂದ ಆಮದೋಷವನ್ನು ತಡೆ ಹಿಡಿಯುವವು. ತತ್ಪರಿಣಾಮವಾಗಿ ಅನೇಕ ಘಾತಕ ವಿಕಾರಗಳುಂಟಾಗುವ ಸಂಭವವಿರುವದು. ಆದ್ದರಿಂದ ಅತಿಸಾರದ ಪಕ್ವಾವಸ್ಥೆಯಲ್ಲಿ ಸ್ತಂಭನ ಔಷಧಿಗಳ ಪ್ರಯೋಗ ಮಾಡಬೇಕು. ಉದಾ:- ಸುಶ್ರುತರ ರೋಧ್ರಾದಿ ಗಣ.

ಗ್ರಾಹಿ:—

दीपनं पाचनं यत् स्यादुष्णत्वाद्द्रव शोषकम् ।
ग्राहि तच्च यथा शुण्ठी जीरकं गजपिप्पली ॥ (शा. सं.)
आग्नेय गुण भूयिष्ठाच्चोयांशं परिशोष्य यत् ।
संग्रहति मलं यत्तु ग्राहि शुण्ठ्यादयो यथा ॥ (भा. प्र,)

ಅಗ್ನಿ ಪ್ರದೀಪನ, ಆಮಪಾಚನ ಮತ್ತು ದ್ರವರೂಪ ಮಲಾದಿಗಳ ಶೋಷಣ ಈ ಕಾರ್ಯಗಳು ಯಾವ ದ್ರವ್ಯಗಳಿಂದ ಆಗುವವೋ ಅವುಗಳಿಗೆ "ಗ್ರಾಹಿ" ದ್ರವ್ಯಗಳೆನ್ನುವರು. ಉದಾ:- ಶುಂಠಿ, ಜೀರಕ, ಗಜಪಿಪ್ಪಲಿ, ಅಜವಾನ ಮುಂತಾದವುಗಳು.

ಗ್ರಾಹಿ ದ್ರವ್ಯಗಳು ಅಗ್ನಿ ಭೂಯಿಷ್ಠವಿರುವವು. ಅಗ್ನಿಮಾಂದ್ಯದ ಮೂಲಕ ಉಂಟಾದ ಗ್ರಹಣೀ, ಅತಿಸಾರಗಳ ಲಕ್ಷಣಗಳು ವ್ಯಕ್ತವಾದಾಗ ಗ್ರಾಹಿ ದ್ರವ್ಯಗಳನ್ನು ಉಪಯೋಗಿಸುವರು. ಈ ದ್ರವ್ಯಗಳು ಉಷ್ಣ ವೀರ್ಯದವಿರುವದರಿಂದ ಆಮ ಘಟಕಗಳನ್ನು ಪಚನ ಮಾಡುವವು, ಮತ್ತು ಪಾಚಕಾಗ್ನಿಯನ್ನು ಪ್ರದೀಪ್ತ ಮಾಡುವವು. ಆದುದರಿಂದ ಈ ದ್ರವ್ಯಗಳು ಆಮಾವಸ್ಥೆಯಲ್ಲಿಯೂ ಉಪಯೋಗವಾಗುತ್ತವೆ. ಇವು ಗ್ರಹಣೀ ಅವಯವಕ್ಕೆ ಗ್ರಹಣ ಮಾಡುವ ಶಕ್ತಿಯನ್ನು ಕೊಡುವವು.

ಭೇದ

ಗ್ರಾಹಿ ದ್ರವ್ಯ	ಸ್ತಂಭನ ದ್ರವ್ಯ
1) ಕಟು ರಸ ಪ್ರಧಾನ.	ಕಷಾಯ ರಸ ಪ್ರಧಾನ.
2) ಉಷ್ಣ ವೀರ್ಯ.	ಶೀತ ವೀರ್ಯ.
3) ಅಗ್ನಿ ಮಹಾಭೂತ ಪ್ರಧಾನ.	ವಾಯು ಮಹಾಭೂತ ಪ್ರಧಾನ.
4) ವಾತ ಶಾಮಕ.	ವಾತ ವರ್ಧಕ.
5) ಆಮ ಪಾಚಕ.	ಆಮ ಸ್ತಂಭಕ.

ಪುರೀಷ ಸಂಗ್ರಹಣೀಯ ಗಣಃ—

प्रियंग्वनंताम्रास्थि कट्वङ्ग लोध्र मोचरस समङ्गा धातकीपुष्प पद्मा पद्मकेशराणीति दशेमानि पुरीषसंग्रहणीयानि भवंति । (च. सू. ४).

ಪ್ರಿಯಂಗು (ನೆಳಲು), ಅನಂತಾ (ಸೋಗದೆಯ ಬೇರು), ಮಾವಿನ ಬೀಜ, ಕಟ್ವಂಗ (ಹೆಮ್ಮರ), ಲೋಧ್ರ, ಬೂರಲದ ಅಂಟು, ಸಮಂಗಾ (ಮುಚುಗ), ಧಾತಕಿ ಪುಷ್ಪ ಪದ್ಮಾ (ಗಂಟು ಪರಂಗಿ) ಮತ್ತು ಕಮಲಕೇಶರ ಈ ಹತ್ತು ದ್ರವ್ಯಗಳಿಗೆ ಪುರೀಷ ಸಂಗ್ರಹಣೀಯ ದ್ರವ್ಯಗಳೆಂದು ಅನ್ನುವರು.

ಪುರೀಷ ವಿರಜನೀಯವರ್ಗಃ—

पुरीषस्य विरजनं दोषसंबंधनिरासं करोतीति पुरीषविरजनीयम् ।
(च. द.)

पुरीषस्य विरजनं विगतं रजनं (रागः) राग संबंध निरासः तस्मै हितं पुरीष विरजनीयम् ।

ಯಾವ ದ್ರವ್ಯಗಳು ದೋಷಗಳಿಂದ ದೂಷಿತವಾದ ಪುರೀಷದ ದೋಷಗಳನ್ನು ಹೋಗಲಾಡಿಸಿ ಪುರೀಷಕ್ಕೆ ಅದರ ಸ್ವಾಭಾವಿಕ ಬಣ್ಣವನ್ನು ತಂದುಕೊಡುವವೋ ಅಂಥ ದ್ರವ್ಯಗಳಿಗೆ "ಪುರೀಷ ವಿರಜನೀಯ" ದ್ರವ್ಯಗಳೆನ್ನುವರು. ಪುರೀಷಕ್ಕೆ ವರ್ಣ ಸಂಬಂಧಿ ವಿಕಾರವು ಹೆಚ್ಚಾಗಿ ಪಿತ್ತದೋಷದಿಂದಾಗುವದು. ಯಾಕಂದರೆ ರಂಜನ (ಬಣ್ಣ ಕೊಡುವ) ಕರ್ಮವು ರಂಜಕಪಿತ್ತದ್ದಿರುವದು. ಆದ್ದರಿಂದ ಇಲ್ಲಿ ಪಿತ್ತ ಶಾಮಕ ದ್ರವ್ಯ ಗಳನ್ನುಪಯೋಗಿಸುವದರಿಂದ ಪಿತ್ತ ಶಮನವಾಗಿ ಅದು ತನ್ನ ಪ್ರಾಕೃತ ಕಾರ್ಯವನ್ನು ಮಾಡ ಹತ್ತುತ್ತದೆ. ಇದರಿಂದ ಮಲದ ವಿಕೃತ ಬಣ್ಣವು ದೂರವಾಗಿ ಅದಕ್ಕೆ ಪ್ರಾಕೃತ ಬಣ್ಣವು ಬರುವದು.

ಗಣ :- जम्बु शल्लकीत्वक् कच्छुरा मधुक शाल्मली श्रीवेष्टक भृष्टमृत् पयस्योत्पल तिल कणा इति दशेमानि पुरीषविरजनीयानि भवंति । (च. सू.)

ನೇರಿಲ, ಶಲ್ಲಕೀ ತ್ವಕ್ (ಮಾಡ್ಡಿ ಮರದ ತೊಗಟೆ), ಕಚ್ಛುರಾ (ನಸಗುನ್ನಿ ಬೀಜ), ಮಧುಕ (ಇಪ್ಪೆ), ಬೂರಲ, ಶ್ರೀವೇಷ್ಟಕ (ಧೂಪ), ಸುಟ್ಟ ಮಣ್ಣು, ವಿದಾರಿ ಕಂದ, ನೀಲ ಕಮಲ ಮತ್ತು ತಿಲ (ಎಳ್ಳು) ಈ ಹತ್ತು ದ್ರವ್ಯಗಳಿಗೆ ಪುರೀಷ ವಿರಜನೀಯ ದ್ರವ್ಯಗಳೆಂದು ಅನ್ನುವರು.

ಮೂತ್ರ ಸಂಗ್ರಹಣೀಯವರ್ಗಃ—

अतिमात्रं पुनः पुनश्च प्रवर्त्तमानं मूत्रं संगृह्णातीति मूत्र संग्रहणीयम् ।

ಅತಿಪ್ರಮಾಣದಲ್ಲಿ ಮೇಲಿಂದ ಮೇಲೆ ಪ್ರವೃತ್ತಿಯಾಗುವ ಮೂತ್ರವನ್ನು ತಡೆಯುವ ದ್ರವ್ಯಗಳಿಗೆ "ಮೂತ್ರ ಸಂಗ್ರಹಣೀಯ" ದ್ರವ್ಯಗಳೆನ್ನುವರು. ಮೂತ್ರ

ಸಂಗ್ರಹಣೀಯ ದ್ರವ್ಯಗಳಲ್ಲಿ ಕೆಲವು ಆಗ್ನೇಯ ದ್ರವ್ಯಗಳಿರುವದರಿಂದ ಅವು ಜಲಾಂಶ ವನ್ನು ಕಡಿಮೆ ಮಾಡಿ ಮೂತ್ರದ ಪ್ರಮಾಣವನ್ನು ಕಡಿಮೆ ಮಾಡುತ್ತವೆ. ಉದಾ:- ಭಲ್ಲಾತಕ, ವಟ ಇತ್ಯಾದಿ.

ಗಣ :- जम्ब्वाम्रप्लक्ष वट कपीतनोदुम्बराश्वत्थ भल्लातकाश्मंतक सोमवल्का इति दशेमानि मूत्रसंग्रहणीयानि भवंति। (च. सू. ४).

ನೇರಿಲ, ಮಾವು, ಬಸರಿ, ಆಲ, ಕಪೀತನ, ಅತ್ತಿ, ಅರಳೆಯ ಮರ, ಕೇರು (ಭಲ್ಲಾತಕ) ಆರೇಮರ, ಬಿಳಿ ಕಗ್ಗಲಿಮರದ ತೊಗಟೆ ಈ ಹತ್ತು ದ್ರವ್ಯಗಳಿಗೆ " ಮೂತ್ರ ಸಂಗ್ರಹ ಣೀಯ " ದ್ರವ್ಯಗಳೆನ್ನುವರು.

ಮೂತ್ರ ವಿರಜನೀಯಮ್ :—

मूत्रं विरजयति दोषसंबंधनिरासं कृत्वा प्रकृतौ स्थापयतीति मूत्र विरजनीयम्।

ಯಾವ ದ್ರವ್ಯಗಳು ದೋಷಗಳಿಂದ ದೂಷಿತವಾದ ಮೂತ್ರದ ದೋಷಗಳನ್ನು ಹೋಗಲಾಡಿಸಿ; ಮೂತ್ರಕ್ಕೆ ಅದರ ಸ್ವಾಭಾವಿಕ ಬಣ್ಣವನ್ನು ತಂದು ಕೊಡುವವೋ ಅಂಥ ದ್ರವ್ಯಗಳಿಗೆ " ಮೂತ್ರ ವಿರಜನೀಯ " ದ್ರವ್ಯಗಳೆನ್ನುವರು. ಪಿತ್ತದುಷ್ಟಿಯಿಂದ ಮೂತ್ರದ ಸ್ವಾಭಾವಿಕ ಬಣ್ಣವು ಬದಲಾಗುತ್ತದೆ. ಮಂಜಿಷ್ಠಮೇಹ, ಕಾಲಮೇಹ ಮತ್ತು ಹಾರಿದ್ರ ಮೇಹ ಇತ್ಯಾದಿ ಪಿತ್ತಜ ಪ್ರಮೇಹ ವಿಕಾರಗಳಲ್ಲಿ ಮೂತ್ರ ವರ್ಣವು ವಿಕೃತವಾದದ್ದು ಕಂಡು ಬರುತ್ತದೆ. ಈ ಮೂತ್ರದ ವಿಕೃತಿಯನ್ನು ಹೋಗಲಾಡಿಸಲು ಶೀತ ವೀರ್ಯದ ದ್ರವ್ಯಗಳ ಚಿಕಿತ್ಸೆಯನ್ನು ಮಾಡುವದರಿಂದ ಪಿತ್ತಶಮನವಾಗಿ ಮೂತ್ರಕ್ಕೆ ಪ್ರಾಕೃತ ವರ್ಣವು ಬರುವದು. ಕೋಷ್ಠಾಗ್ನಿ ಮತ್ತು ಧಾತ್ವಗ್ನಿಗಳು ಮಂದವಾಗಿ ಮೂತ್ರಕ್ಕೆ ವಿಕೃತ ವರ್ಣ ಉಂಟಾಗಿದ್ದರೆ; ಅಂಥ ಅವಸ್ಥೆಯಲ್ಲಿ ಅಗ್ನಿದೀಪಕ ಮತ್ತು ಆಮಪಾಚಕ ದ್ರವ್ಯಗಳ ಪ್ರಯೋಗವನ್ನು ಮಾಡ ಬೇಕು. ಉದಾ:- ಚಿತ್ರಕ.

ಗಣ :- पद्मोत्पल नलिन कुमुद सौगंधिक पुण्डरीक शतपत्र मधुक प्रियंगु धातकीपुष्पाणीति दशेमानि मूत्रविरजनीयानि भवंति। (च. सू. ४)

ಕಮಲ, ನೀಲಕಮಲ, ರಕ್ತ ಕಮಲ, ಕುಮುದ (ಕಲ್ಹಾರ ಪುಷ್ಪ). ಶ್ವೇತರಕ್ತ ಕಮಲ ಬಿಳಿ ಕಮಲ, ದೊಡ್ಡ ಕಮಲ, ಅತಿ ಮಧುರ (ಜೇಷ್ಟಮಧು). ನೆಳಲು ಮತ್ತು ಧಾತಕಿ ಪುಷ್ಪ ಈ ಹತ್ತು ದ್ರವ್ಯಗಳಿಗೆ " ಮೂತ್ರ ವಿರಜನೀಯ " ದ್ರವ್ಯಗಳೆನ್ನುವರು.

ಮೂತ್ರ ವಿರೇಚನೀಯಮ್ :—

मूत्रस्य विरेचनं करोतीति मूत्र विरेचनीयम्। (च. द.).

मूत्रस्य विरेचनं बहिःसारणं, तत्र हितम्। (यो).

ಮೂತ್ರ ಪ್ರವೃತ್ತಿಯನ್ನು ಹೆಚ್ಚು ಮಾಡುವಂಥ ದ್ರವ್ಯಗಳಿಗೆ "ಮೂತ್ರ ವಿರೇಚನೀಯ" ದ್ರವ್ಯಗಳೆನ್ನುವರು. ಇವಕ್ಕೆ ಬಸ್ತಿಶೋಧನ ಮತ್ತು ಮೂತ್ರಲ ದ್ರವ್ಯಗಳೆಂದೂ ಕರೆಯುವರು. ಮೂತ್ರವು ಜಲ ಮತ್ತು ಅಗ್ನಿ ಗುಣಾತ್ಮಕವಿರುವದು. वृद्धिः समानैः सर्वेषां ಎಂಬಂತೆ ಮೂತ್ರವನ್ನು ಹೆಚ್ಚುಮಾಡಿ; ಮೂತ್ರ ಪ್ರವೃತ್ತಿಯನ್ನುಂಟುಮಾಡುವಂಥ ದ್ರವ್ಯಗಳಾದರೂ ಜಲ ಮತ್ತು ಅಗ್ನಿ ಗುಣಾತ್ಮಕದವಿರಬೇಕಾಗುತ್ತದೆ. ಜಲೀಯ ದ್ರವ್ಯಗಳು ಮೂತ್ರದಲ್ಲಿ ಜಲದ ಪ್ರಮಾಣವನ್ನು ಹೆಚ್ಚಿಸಿ ಮೂತ್ರ ಪ್ರಮಾಣವನ್ನು ಹೆಚ್ಚು ಮಾಡುವವು. ಹಾಗು ಆಗ್ನೇಯ ದ್ರವ್ಯಗಳು ವೃಕ್ಕಗಳಲ್ಲಿ ಕ್ಷೋಭವನ್ನುಂಟುಮಾಡಿ ಮೂತ್ರಸ್ರಾವವನ್ನು ಹೆಚ್ಚಿಸುವವು. ಉದಾ:- ಜಲ, ಇಕ್ಷುರಸ, ಗೋಮೂತ್ರ, ತೃಣ ಪಂಚಮೂಲ, ಪುನರ್ನವಾ, ಮರಿಚ ಇತ್ಯಾದಿ.

ಇವಲ್ಲದೆ ಮಧುರ, ಅಮ್ಲ, ಲವಣ ರಸಾತ್ಮಕ ದ್ರವ್ಯಗಳು ಮತ್ತು ಅಭಿಷ್ಯಂದಿ ದ್ರವ್ಯಗಳು ಅಧಿಕ ಪ್ರಮಾಣದಲ್ಲಿ ಮೂತ್ರೋತ್ಪತ್ತಿಯನ್ನು ಮಾಡುವವು.

ಮೂತ್ರ ವಿರೇಚನೀಯ ದ್ರವ್ಯಗಳು ಶೋಥ, ಜಲೋದರ, ಮೂತ್ರಕ್ಷಯ, ಮೂತ್ರಾಶ್ಮರಿ ಇತ್ಯಾದಿ ರೋಗಗಳಲ್ಲಿ ಉಪಯುಕ್ತವಿರುತ್ತವೆ.

ಗಣ :- वृक्षादनी श्वदंष्ट्रा वसुक वशिर पाषाणभेद दर्भ कुश काश गुंद्रेत्कट-

मूलानीति दशेमानि मूत्रविरेचनीयानि भवंति । (च. सू. ४).

ಬದನಿಕೆ, ನೆಗ್ಗಿಲು, ಶಿವಮಲ್ಲಿಗೆ (ವಸುಕ), ಉತ್ತರಾಣಿ, ಪಾಷಾಣಭೇದ, ದರ್ಭೆ, ಕುಶ, ಬಿಳಿ ತೆನೆಬಿಡುವ ದರ್ಭೆ, ಜೊಂಡಿಯ ಹುಲ್ಲು (ನೀರಿನಲ್ಲಿ ಹುಟ್ಟುವ ದರ್ಭೆ), ಮತ್ತು ಕಬ್ಬಿನಬೇರು ಈ ಹತ್ತು ದ್ರವ್ಯಗಳಿಗೆ "ಮೂತ್ರ ವಿರೇಚನೀಯ" ದ್ರವ್ಯಗಳೆನ್ನುವರು.

ಕಾಸಹರಮ್ :—

कासं हरतीति कासहरम् । (यो.)

ಕೆಮ್ಮನ್ನು ಕಡಿಮೆ ಮಾಡುವಂಥ ದ್ರವ್ಯಗಳಿಗೆ "ಕಾಸಹರ" ದ್ರವ್ಯಗಳೆನ್ನುವರು. ಕಾಸ ಉಂಟಾಗಬೇಕಾದರೆ ದುಷ್ಟವಾದ ಪ್ರಾಣವಾಯುವು ಉದಾನವಾಯುವಿನೊಡನೆ ಕೂಡಿಕೊಂಡು ಊರ್ಧ್ವಗಾಮಿಯಾದರೆ ಕಾಸವುಂಟಾಗುತ್ತದೆ. ಇಲ್ಲಿ ಕಾಸೋತ್ಪತ್ತಿಗೆ ವಾತವಿಕೃತಿಯು ಕಾರಣವಾಗುವದರಿಂದ; ವಾತಶಮನ ಚಿಕಿತ್ಸೆಯನ್ನು ಮಾಡಿ ಕಾಸವನ್ನು ಕಳೆಯಬೇಕಾಗುತ್ತದೆ.

ಕಾಸವು ಕಂಠದಲ್ಲಾಗುವ ವಿಕಾರವು. ಕಂಠವು ಕಫ ಮತ್ತು ಮಾಂಸದ ಅವಯವವಾಗಿದೆ. ಆದ್ದರಿಂದ ಕಾಸದಲ್ಲಿ ಉಪಯೋಗಿಸಲ್ಪಡತಕ್ಕ ದ್ರವ್ಯಗಳು ಕಂಠ್ಯವಿರಬೇಕಾಗುತ್ತದೆ. ಅಲ್ಲದೆ ಕಾಸದ ಉತ್ಪತ್ತಿ ಕಾರಣಗಳ ಮೇಲಿಂದಲೂ ದ್ರವ್ಯಗಳ ಪ್ರಯೋಗವನ್ನು ಮಾಡಬೇಕಾಗುತ್ತದೆ. ಉದಾ:- ವಾತಜ, ಕಾಸದಲ್ಲಿ ಪಿಪ್ಪಲಿ,

ಕರ್ಕಟಶೃಂಗಿ, ಘೃತ, ಜೇಷ್ಠಮಧು ಮಸ್ತು ಸೈಂಧವ ಇತ್ಯಾದಿ ದ್ರವ್ಯಗಳನ್ನೂ; ಪಿತ್ತಜ ಕಾಸದಲ್ಲಿ ದ್ರಾಕ್ಷಾ, ಆಮಲಕ್ಯಾದಿ ದ್ರವ್ಯಗಳನ್ನೂ; ಕಫಜ ಕಾಸದಲ್ಲಿ ತುಲಸಿ, ಶುಂಠಿ, ಹಿಪ್ಪಲಿ, ಮೆಣಸು ಇತ್ಯಾದಿ ದ್ರವ್ಯಗಳನ್ನೂ; ಕ್ಷತಜ ಕಾಸವು ಆಗಂತುಸ್ವರೂಪಿಯಾದ್ದರಿಂದ ಧಾತುಕ್ಷಯ, ಉರಃಕ್ಷತ ಮೊದಲಾದ ಲಕ್ಷಣಗಳಿರುವವು. ಕಾರಣ ಇದರಲ್ಲಿ ಸಂಧಾನಕರ ಹಾಗೂ ಬೃಂಹಣ ದ್ರವ್ಯಗಳನ್ನು ಕೊಡಬೇಕಾಗುತ್ತದೆ. ಉದಾ: ಲಾಕ್ಷಾ, ದುಗ್ಧ, ನ್ಯಗ್ರೋಧ, ವಂಶಲೋಚನ, ಬಲಾ, ಶತಾವರಿ, ಕ್ಷಯಜ ಕಾಸದಲ್ಲಿ ಬೃಂಹಣೀಯ ಗಣದ ದ್ರವ್ಯಗಳನ್ನು ಹಾಗೂ ಅಗ್ನಿದೀಪಕ ದ್ರವ್ಯಗಳನ್ನು ಕೊಡಬೇಕಾಗುವದು.

ಗಣ :– द्राक्षामयामलक पिप्पली दुरालभाश्रृङ्गी कण्टकारिका वृश्चीर पुनर्नवा तामलक्य इति दशेमानि कासहराणि भवंति । (च. सू. ४)

ದ್ರಾಕ್ಷಿ, ಅಳಲೆಯಕಾಯಿ, ನೆಲ್ಲಿಕಾಯಿ, ಹಿಪ್ಪಲಿ, ತುರುಚನ ಬೇರು, ಕರ್ಕಟ ಶೃಂಗಿ, ನೆಲಗುಳ್ಳ, ವೃಶ್ಚೀರ (ಬಿಳಿಯ ಕೊಮ್ಮೆಯ ಮರ), ಪುನರ್ನವಾ (ಗಣಜಲಿ) ಮತ್ತು ನೆಲನೆಲ್ಲಿ (ತಾಮಲಕಿ) ಈ ಹತ್ತು ದ್ರವ್ಯಗಳಿಗೆ "ಕಾಸಹರ" ದ್ರವ್ಯಗಳೆನ್ನುವರು.

ಶ್ವಾಸಹರಮ್:—

श्वासं श्वासरोगं हरतीति श्वासहरम् ।

ದಮ್ಮನ್ನು ನಿವಾರಿಸುವಂಥ ದ್ರವ್ಯಗಳಿಗೆ "ಶ್ವಾಸಹರ" ದ್ರವ್ಯಗಳೆನ್ನುವರು. ಶ್ವಾಸ ಈ ರೋಗವು ಪ್ರಾಣವಹಸ್ರೋತಸ್ಸಿನಲ್ಲಿ ಉತ್ಪನ್ನವಾಗುವಂಥ ವಿಕಾರವಾಗಿದೆ. ಕಫದ ಪ್ರಾಧಾನ್ಯತೆಯಿಂದ ಯುಕ್ತವಾದ ವಾಯುವು ಯಾವಾಗ ಪ್ರಾಣವಹ ಸ್ರೋತಸ್ಸುಗಳನ್ನು ಅವರೋಧ ಮಾಡುವದೋ ಆಗ "ಶ್ವಾಸ" ಉತ್ಪನ್ನವಾಗುತ್ತದೆ. ಆದ್ದರಿಂದ ಶ್ವಾಸಹರ ದ್ರವ್ಯಗಳು ಉಷ್ಣವೀರ್ಯ ಮತ್ತು ಕಫ, ವಾತನಾಶಕವಿರ ಬೇಕಾಗುತ್ತದೆ.

ಗಣ :– शटी पुष्करमूलाम्लवेतस एला हिङ्गु अगरू सुरसा तामलकी जीवन्ती चण्डा इति दशेमानि श्वासहराणि भवंति । (च. सू. ४)

ಶಟಿ (ಕಚೋರ), ಪುಷ್ಕರಮೂಲ, ಅಮ್ಲವೇತಸ, ಯಾಲಕ್ಕಿ, ಹಿಂಗು, ಅಗರು, ತುಳಸಿ, ನೆಲನೆಲ್ಲಿ (ತಾಮಲಕಿ), ಜೀವಂತಿ (ಸಿಹಿ ಹಾಲೆ) ಮತ್ತು ಚಂಡಾ ಈ ಹತ್ತು ದ್ರವ್ಯಗಳಿಗೆ "ಶ್ವಾಸ ಹರ" ದ್ರವ್ಯಗಳೆನ್ನುವರು.

ಸುಶ್ರುತರು ವಿದಾರಿಗಂಧಾದಿ, ಸುರಸಾದಿ ಮತ್ತು ದಶಮೂಲ ಈ ಗಣಗಳು ಶ್ವಾಸಹರವೆಂದು ಹೇಳಿರುವರು.

ಶೋಥಹರಮ್:—

शोथं हरतीति शोथहरम् ।

ಬಾವನ್ನು ಕಳೆಯುವಂಥ ದ್ರವ್ಯಗಳಿಗೆ ಶೋಥಹರ ದ್ರವ್ಯಗಳೆನ್ನುವರು. ಪ್ರಕುಪಿತವಾದ ವಾಯುವು ರಸ, ಪಿತ್ತ ಮತ್ತು ಕಫಗಳನ್ನು ದೂಷಿತ ಮಾಡುವದರಿಂದ ರಸಧಾತುವಿನ ಗತಿಗೆ ಅಡ್ಡಿಯುಂಟಾಗುವದು. ಇದರ ಪರಿಣಾಮವಾಗಿ ತ್ವಕ್ ಮತ್ತು ಮಾಂಸಗಳಲ್ಲಿ ದೋಷಗಳ ಸಂಚಯವಾಗಲಾರಂಭಿಸಹತ್ತುವದು. ಹಾಗೂ ಶೋಥ ವಿಕಾರ ಉಂಟಾಗುವದು. ಸಾಮಾನ್ಯವಾಗಿ ರಸ ಧಾತುವು ಸರ್ವಧಾತುಗಳ ಪೋಷಣೆಯನ್ನು ಮಾಡುವದು. ಒಂದು ಧಾತುವನ್ನು ಪೋಷಣೆ ಮಾಡಿದ ನಂತರ ಅವಶಿಷ್ಟ ರಸವು ಸ್ರೋತಸ್ಸುಗಳ ಮುಖಾಂತರ ಉಳಿದ ಧಾತುಗಳ ಪೋಷಣೆಗಾಗಿ ಹೋಗುವದು. ಒಂದುವೇಳೆ ಪ್ರಕುಪಿತ ವಾಯುವಿನಿಂದ ಇದರ ಗತಿಗೆ ಅಡ್ಡಿಯುಂಟಾದರೆ "ಶೋಥ" ವಿಕಾರ ಉತ್ಪನ್ನವಾಗುವದು.

ಶೋಥವಿಕಾರದಲ್ಲಿ ಸ್ರೋತೋರೋಧ ಮತ್ತು ದೋಷಸಂಚಯ ಈ ಎರಡು ಮುಖ್ಯ ಲಕ್ಷಣಗಳು ಕಂಡುಬರುವವು. ಆದ್ದರಿಂದ ಇವುಗಳನ್ನು ಹೋಗಲಾಡಿಸಲು ದೀಪಕ, ಸಿರಾಬಲ್ಯ, ಸ್ರೋತೋರೋಧ ನಾಶಕ ಹಾಗು ದೋಷಸಂಚಯನಾಶಕ ದ್ರವ್ಯಗಳನ್ನು ಶೋಥದಲ್ಲಿ ಉಪಯೋಗಿಸಬೇಕಾಗುತ್ತದೆ. ಶೋಥವು ತ್ರಿದೋಷಜನ್ಯ ವಿಕಾರವಿರುವದರಿಂದ ತ್ರಿದೋಷಶಾಮಕ ಹಾಗೂ ಶೋಥಹರಣ ಮಾಡುವಂಥ ದಶಮೂಲವನ್ನು ಉಪಯೋಗಿಸಬೇಕು. ವಾತಜಶೋಥವಲ್ಲಿ ಏರಂಡಸ್ನೇಹ ಮತ್ತು ದಶಮೂಲಗಳನ್ನು ಕೊಡುವರು. ಪಿತ್ತಜ ಶೋಥದಲ್ಲಿ ಮಂಜಿಷ್ಠಾ, ಧನ್ವಯಾಸ, ನಿಶೋತ್ತರ, ದಶಮೂಲಗಳನ್ನು ಉಪಯೋಗಿಸುವರು. ಕಫಜ ಶೋಥದಲ್ಲಿ ದಶಮೂಲ, ರಾಸ್ನಾ, ಶುಂಠಿ, ಶಿಗ್ರು, ದೇವದಾರುಗಳನ್ನು ಉಪಯೋಗಿಸಬೇಕು. ಇವಲ್ಲದೆ ಸ್ವೇದಲ ಮೂತ್ರಲ ಹಾಗೂ ವಿರೇಚನ ದ್ರವ್ಯಗಳು ಶೋಥನಾಶಕವೆಂದು ಉಪಯೋಗವಾಗುವವು. ಈ ದ್ರವ್ಯಗಳು ಸಂಚಿತವಾದ ದೋಷಗಳನ್ನು ಆಯಾ ಮಾರ್ಗಗಳಿಂದ ಹೊರಗೆ ಹಾಕಿ ಶೋಥನಾಶನ ಕಾರ್ಯವನ್ನು ಮಾಡುವವು.

ಗಣ :— पाटला अग्निमंथ श्योनाक बिल्व काश्मर्य कण्टकारिका बृहती शालपर्णी पृश्निपर्णी गोक्षुरका इति दशेमानि शोथ हराणि भवंति । (च. सू. ४)

ಪಾದರಿಮರ, ನರುವಲ, ಹೆಮ್ಮತ್ತ್ರ, ಬಿಲ್ವ, ಶಿವನಿ, ನೆಲಗುಳ್ಳ, ಹೆಗ್ಗುಳ್ಳ, ಮೂರೆಲೆ ಹೊನ್ನೆ, ಒಂದೆಲೆ ಹೊನ್ನೆ ಹಾಗು ನೆಗ್ಗಿಲು ಈ ಹತ್ತು ದ್ರವ್ಯಗಳಿಗೆ "ಶೋಥಹರ" ದ್ರವ್ಯಗಳೆನ್ನುವರು. ಮತ್ತು ಇವುಗಳ ಸಮೂಹಕ್ಕೆ "ದಶಮೂಲ" ವೆಂಬ ಹೆಸರು ಇರುವದು.

ಜ್ವರಹರಮ್ :—

ज्वरं ज्वरसंतापं हरतीति ज्वरहरम् ।

ಜ್ವರವನ್ನು ನಿವಾರಿಸುವ ದ್ರವ್ಯಗಳಿಗೆ "ಜ್ವರಹರ" ಅಥವಾ "ಜ್ವರಘ್ನ" ದ್ರವ್ಯಗಳೆಂದು ಅನ್ನುವರು. ಜ್ವರದಲ್ಲಿ ಸ್ವೇದಾವರೋಧ, ಸಂತಾಪ ಮತ್ತು ಸರ್ವಾಂಗ ವೇದನಾ ಈ ಸಾಮಾನ್ಯ ಲಕ್ಷಣಗಳಿರುವದರಿಂದ ಜ್ವರದಲ್ಲಿ ಉಪಯೋಗಿಸಲ್ಪಡುವ

ದ್ರವ್ಯಗಳು ಸ್ವೇದಾವರೋಧನಾಶಕ, ಸಂತಾಪಹರ ಹಾಗೂ ವೇದನಾಸ್ಥಾಪಕ ವಿ ಬೇಕಾಗುತ್ತದೆ. ಜ್ವರದ ಆಮಾವಸ್ಥೆಯಲ್ಲಿ ತಿಕ್ತರಸದ ದ್ರವ್ಯಗಳು ಅತ್ಯುಪಯುಕ್ತ ವಿರುವವು. ತಿಕ್ತ ರಸಾತ್ಮಕ ದ್ರವ್ಯಗಳಲ್ಲಿ ವಾಯು ಹಾಗು ಆಕಾಶ ಮಹಾಭೂತ ಗಳಾಧಿಕ್ಯತೆಯಿರುವದರಿಂದ ಲಘು, ಸೂಕ್ಷ್ಮಸ್ರೋತೋಗಾಮಿ, ಶೀತ ಗುಣಗಳುಳ್ಳ ವಿದ್ದು; ಶೀತವೀರ್ಯಾತ್ಮಕವಿರುವವು. ತಿಕ್ತ ರಸದಿಂದ ಪಿತ್ತ, ಕಫಗಳು ಶಮನವಾಗು ವವು, ಮತ್ತು ಆಮವು ಪಚನವಾಗುವದು, ಶೀತ ವೀರ್ಯದಿಂದ ಜ್ವರದಲ್ಲಿಯ ಸಂತಾಪ ಲಕ್ಷಣವು ಕಡಿಮೆಯಾಗುವದು. ಉದಾಃ- ಜೇಕಿನ ಗಡ್ಡೆ, ಅಮೃತಬಳ್ಳಿ, ಕಿರಾತತಿಕ್ತ, ಪರ್ಪಟ.

ಜೀರ್ಣಜ್ವರ ಅಥವಾ ಧಾತುಕ್ಷೀಣತೆಯ ಮೂಲಕ ಉಂಟಾದ ಜ್ವರದಲ್ಲಿ ಮಧುರ ರಸಾತ್ಮಕ ಮತ್ತು ಧಾತುಪುಷ್ಟಿಕರ ದ್ರವ್ಯಗಳನ್ನು ಉಪಯೋಗಿಸಬೇಕು. ಉದಾಃ- ಘೃತ, ದುಗ್ಧ, ಆಮಲಕಿ, ದ್ರಾಕ್ಷಾ.

ಗಣ ಃ- सारिवा शर्करा पाठा मंजिष्ठा द्राक्षा पीलु परूषक अभया आमलक बिभीतकानीति दशेमानि ज्वरहराणि भवंति । (च. सू. ४)

ಸೋಗದೆಬೇರು, ಸಕ್ಕರೆ, ಅಗಳು ಶುಂಠಿ, ಮಂಜಿಷ್ಠಾ, ದ್ರಾಕ್ಷಿ, ಪೀಲು, ಪರೂಷಕ, ಈ ಳೆಯ ಕಾಯಿ, ನೆಲ್ಲಿಕಾಯಿ ಮತ್ತು ತಾರೆಕಾಯಿ ಈ ಹತ್ತು ದ್ರವ್ಯಗಳಿಗೆ " ಜ್ವರಹರ" ದ್ರವ್ಯಗಳೆನ್ನುವರು.

ಸುಶ್ರುತರು ಪಟೋಲಾದಿ ಹಾಗೂ ಸಾರಿವಾದಿ ಗಣಗಳಿಗೆ ಜ್ವರಹರ ಗಣಗಳೆಂದು ಹೇಳಿರುವರು.

ಶ್ರಮಹರಮ್ ಃ—

श्रमहरं श्रमनाशनम् । श्रमं हरतीति श्रमहरम् ।

ದಣಿವನ್ನು ದೂರ ಮಾಡುವ ದ್ರವ್ಯಗಳಿಗೆ " ಶ್ರಮಹರ " ದ್ರವ್ಯಗಳೆನ್ನುವರು. ಶ್ರಮದಿಂದ ಬಲ ಕ್ಷೀಣವಾಗುವದು, ಮತ್ತು ವಾತವೃದ್ಧಿಯಾಗುವದು. ಈ ವಾತ ವೃದ್ಧಿಯನ್ನು ಕಳೆಯಲು ಮಧುರ ರಸಾತ್ಮಕ, ಸ್ನಿಗ್ಧ ಗುಣಾತ್ಮಕ ಹಾಗೂ ವಾತನಾಶಕ ದ್ರವ್ಯಗಳನ್ನು ಉಪಯೋಗಿಸಬೇಕಾಗುವದು. ಶ್ರಮಹರ ದ್ರವ್ಯಗಳಿಂದ ಶರೀರದಲ್ಲಿ ಸ್ನಿಗ್ಧ ಗುಣದ ವೃದ್ಧಿಯಾಗುವದು.

ಗಣ ಃ- द्राक्षा खर्जूर प्रियाल बदर दाडिम फल्गु परूषकेक्षु यव षष्टिका इति दशेमानि श्रमहराणि भवंति । (च. सू. ४)

ದ್ರಾಕ್ಷಿ, ಖರ್ಜೂರ, ಪ್ರಿಯಾಲ, ಬೋರೆ (ಬದರ), ದಾಳಿಂಬರ, ಅಂಜೂರ, ಪರೂಷಕ, ಕಬ್ಬು, ಜವೆಗೋದಿ ಮತ್ತು ಷಷ್ಟಿಕಾ ಈ ಹತ್ತು ದ್ರವ್ಯಗಳಿಗೆ " ಶ್ರಮಹರ " ದ್ರವ್ಯ ಗಳೆನ್ನುವರು.

ದಾಹ ಪ್ರಶಮನಮ್ಃ—

दाहं प्रशमयतीति दाहप्रशमनम् ।

ಯಾವ ದ್ರವ್ಯಗಳು ಶರೀರದ ಬಾಹ್ಯ ಮತ್ತು ಅಭ್ಯಂತರ ದಾಹವನ್ನು ಶಾಂತ ಮಾಡುವವೋ; ಅಂಥ ದ್ರವ್ಯಗಳಿಗೆ " ದಾಹ ಪ್ರಶಮನ " ದ್ರವ್ಯಗಳೆನ್ನುವರು. ದಾಹ ಉತ್ಪನ್ನವಾಗಲು ಪಿತ್ತ ದೋಷದ ವಿಕೃತಿಯೇ ಮೂಲಕಾರಣ. ಪಿತ್ತಶಾಮಕ ದ್ರವ್ಯ ಗಳಿಂದ ಪಿತ್ತ ದೋಷದ ವಿಕೃತಿಯನ್ನು ದೂರ ಮಾಡುವದರಿಂದ ದಾಹವು ತನ್ನಿಂದ ತಾನೇ ದೂರವಾಗುವದು. ಆದುದರಿಂದ ಇಲ್ಲಿ ಶೀತ ವೀರ್ಯಾತ್ಮಕ ಹಾಗು ಕಷಾಯ, ತಿಕ್ತ, ಮಧುರ ರಸಾತ್ಮಕ ದ್ರವ್ಯಗಳು ದಾಹಶಾಮಕವೆಂದು ಉಪಯೋಗವಾಗುವವು. ಅಲ್ಲದೆ ಈ ದ್ರವ್ಯಗಳು ಮೃದು, ಸ್ನಿಗ್ಧ, ಶೀತ ಮತ್ತು ದ್ರವ ಗುಣಾತ್ಮಕ ವಿರಬೇಕಾಗು ವದು.

ಧಾತು ಕ್ಷೀಣ ಇಲ್ಲವೆ ಧಾತುಪಾಕದಿಂದುಂಟಾದ ದಾಹವಲ್ಲಿ ಮಧುರ ರಸಾತ್ಮಕ ಹಾಲು, ತುಪ್ಪ, ದ್ರಾಕ್ಷೆ ಇತ್ಯಾದಿ ದ್ರವ್ಯಗಳನ್ನು ಕೊಡಬೇಕು. ಪಿತ್ತದ ತೀಕ್ಷ್ಣ, ಉಷ್ಣ ಗುಣಗಳ ಪರಿಣಾಮ ರಕ್ತಧಾತುವಿನ ಮೇಲೆ ಆಗಿ ದಾಹ ಲಕ್ಷಣವಿದ್ದರೆ ತಿಕ್ತರಸ, ಶೀತ ವೀರ್ಯಾತ್ಮಕ ಹಾಗು ರಕ್ತಧಾತುವಿನ ಮೇಲೆ ಕಾರ್ಯಮಾಡುವ ದ್ರವ್ಯಗಳನ್ನು ಉಪಯೋಗ ಮಾಡಬೇಕಾಗುತ್ತದೆ. ಉದಾಃ—ಅನಂತಮೂಲ, ಕಮಲ ಇತ್ಯಾದಿ.

ಗಣ :— लाजा चंदन काश्मर्यफल मधूक शर्करा नीलोत्पल उशीर सारिवा गुडूची ह्रीवेराणीति दशेमानि दाहप्रशमनानि भवंति । (च. सू. ४)

ಭತ್ತದ ಅರಳು, ಚಂದನ, ಶಿವನಿಯ ಹಣ್ಣು, ಇಪ್ಪೇ ಹೂ, ಸಕ್ಕರೆ, ನೀಲಕಮಲ, ಬಾಳದ ಬೇರು, ಸೋಗದೆ ಬೇರು, ಅಮೃತ ಬಳ್ಳಿ ಮತ್ತು ಹ್ರೀಬೇರ (ಮುಡಿವಾಳ) ಈ ಹತ್ತು ದ್ರವ್ಯಗಳಿಗೆ " ದಾಹ ಪ್ರಶಮನ " ದ್ರವ್ಯಗಳೆನ್ನುವರು.

ಶೀತ ಪ್ರಶಮನಮ್ಃ—

शीतं प्रशमयतीति शीत प्रशमनम् ।

ಶರೀರವಲ್ಲಿ ಉಂಟಾದ ಶೈತ್ಯವನ್ನು ದೂರಮಾಡುವ ದ್ರವ್ಯಗಳಿಗೆ " ಶೀತ ಪ್ರಶಮನ " ದ್ರವ್ಯಗಳೆನ್ನುವರು. ಶೀತ ಇದು ವಾತ ದೋಷದ ಒಂದು ಗುಣವಾಗಿದೆ. ಹಾಗೂ ಕಫ ದೋಷದ ಒಂದು ಗುಣವೂ ಆಗಿದೆ. ಶರೀರವಲ್ಲಿ ವಾತ ಮತ್ತು ಕಫ ದೋಷಗಳು ವೃದ್ಧಿಯಾದಾಗ ಅವುಗಳ ಗುಣವಾದ ಶೀತವೂ ವೃದ್ಧಿಯಾಗಿ ಶರೀರ ದಲ್ಲಿ ಶೈತ್ಯತೆಯುಂಟಾಗುವದು. ಇವನ್ನು ನಿವಾರಿಸಲು ಉಷ್ಣವೀರ್ಯದ ಕಫ, ವಾತ ನಾಶಕ ದ್ರವ್ಯಗಳನ್ನು ಉಪಯೋಗಿಸಬೇಕಾಗುವದು.

ಗಣ :— तगरागुरू धान्यक शृङ्गवेर भूतिक वचा कण्टकार्यग्निमंथ श्योनाक पिप्पल्य इति दशेमानि शीतप्रशमनानि भवंति । (च. सू. ४)

ತಗರ, ಅಗರು, ಕೊತಂಬರಿ ಬೀಜ, ಅಲ್ಲ (ಹಸಿಶುಂಠಿ), ಭೂತಿಕ, ಬಜೆ (ವಚಾ), ನೆಲಗುಳ್ಳ, ಅಗ್ನಿಮಂಥ (ನರುವಲ), ಹೆಮ್ಮರ ಮತ್ತು ಹಿಪ್ಪಲಿ ಈ ಹತ್ತು ದ್ರವ್ಯಗಳಿಗೆ "ಶೀತ ಪ್ರಶಮನ" ದ್ರವ್ಯಗಳೆನ್ನುವರು.

ಉದರ್ದ ಪ್ರಶಮನಮ್ಃ—

उदर्दो वरटीदशाकारः शोथः, तत्प्रशमन उदर्द प्रशमनः ।

ಉದರ್ದ (ಶೀತಪಿತ್ತದ ಒಂದು ಭೇದ) ವನ್ನು ಶಾಂತಮಾಡುವಂಥ ದ್ರವ್ಯಗಳಿಗೆ "ಉದರ್ದ ಪ್ರಶಮನ" ದ್ರವ್ಯಗಳೆನ್ನುವರು. ಉದರ್ದವು ತ್ರಿದೋಷಜನ್ಯ ವಿಕಾರವಿದ್ದರೂ ಕಫದ ಪ್ರಾಧಾನ್ಯತೆ ಇರುವದು. ಇದರಲ್ಲಿ ತ್ವಚೆಯು ಮೇಲೆ ಮಂಡಲಗಳು ಏಳುವವು. ಕಫದ ಪ್ರಾಧಾನ್ಯತೆ ಇರುವದರಿಂದ ಇದರ ಪ್ರಶಮನಕ್ಕಾಗಿ ಕಫನಾಶಕ ದ್ರವ್ಯಗಳ ಪ್ರಯೋಗವನ್ನು ಮಾಡಬೇಕಾಗುವದು.

ಗಣ ಃ— तिंदुक प्रियाल बदर खदिर कदर सप्तपर्ण अश्वकर्ण अर्जुन असन अरिमेदा इति दशेमानि उदर्द प्रशमनानि भवंति । (च. सू. ४)

ತಿಂದುಕ (ಇಟ್ಟೀ ಬೀಜ), ಪ್ರಿಯಾಲ, ಬೋರೆ (ಬದರ), ಕಾಚಿನ ಗಿಡ, ಕದರ (ವಿಟ್ ಖದಿರ), ಏಳೆಲಗ, ಅಶ್ವಕರ್ಣ, ಮತ್ತಿ, ಅಸನ (ಕೆಂಪು ಹೊನ್ನೆ) ಮತ್ತು ಅರಿಮೇದ ಈ ಹತ್ತು ದ್ರವ್ಯಗಳಿಗೆ "ಉದರ್ದ ಪ್ರಶಮನ" ದವ್ಯಗಳೆನ್ನುವರು.

ಅಂಗಮರ್ದ ಪ್ರಶಮನಮ್ಃ—

ಮೈ ಮುರಿಯುವದು, ಮೈ ಜಜ್ಜಿದಂತಾಗುವದು, ವೇದನೆ ಉಂಟಾಗುವದು ಮುಂತಾದ ಲಕ್ಷಣಗಳನ್ನು ನಿವಾರಿಸುವ ದ್ರವ್ಯಗಳಿಗೆ "ಅಂಗಮರ್ದ ಪ್ರಶಮನ" ದ್ರವ್ಯಗಳೆನ್ನುವರು. ಉದಾಃ— ಲಘು ಪಂಚಮೂಲ, ಕಾಕೋಲಿ ಇತ್ಯಾದಿ. ಅಂಗಮರ್ದವು ವಾತದ ಒಂದು ಲಕ್ಷಣವಿದ್ದು; ಅದು ಶರೀರದ ಬಲವು ಕಡಿಮೆಯಾದಾಗ ಕಂಡು ಬರುವದು. ಆಗ ವಾತದ ವೃದ್ಧಿ ಇರುವದು. ಈ ವಾತದ ವೃದ್ಧಿಯನ್ನು ಹೋಗಲಾಡಿಸುವದರಿಂದ ಅಂಗ ಮರ್ದವು ತನ್ನಿಂದ ತಾನೇ ಶಾಂತವಾಗುವದು. ಕಾರಣ ಮಧುರ ಸ್ನಿಗ್ಧ ಹಾಗು ಗುರು ಇತ್ಯಾದಿ ವಾತದ ವಿರುದ್ಧ ಗುಣಗಳುಳ್ಳ ಔಷಧಿ ದ್ರವ್ಯಗಳ ಪ್ರಯೋಗವನ್ನು ಮಾಡಬೇಕಾಗುತ್ತದೆ. ಇಂಥ ದ್ರವ್ಯಗಳಿಂದ ವಾತ ಶಮನವಾಗುವದಲ್ಲದೇ ಶರೀರವು ಬಲಿಷ್ಠವಾಗುವದು.

ಗಣ ಃ— विदारीगंधा पृश्निपर्णी बृहती कण्टकारिकैरण्ड काकोली चंदनोशीरैला मधुकानीति दशेमान्यंगमर्दप्रशमनानि भवंति । (च. सू. ४)

ಶಾಲಿಪರ್ಣಿ (ವಿದಾರಿಗಂಧಾ), ಪೃಶ್ನಿಪರ್ಣಿ, ಹೆಗ್ಗುಳ್ಳ, ನೆಲಗುಳ್ಳ, ಔಡಲ, ಕಾಕೋಲಿ, ಚಂದನ, ಬಾಳದಬೇರು, ಯಾಲಕ್ಕಿ ಮತ್ತು ಜೇಷ್ಠಮಧು ಈ ಹತ್ತು ದ್ರವ್ಯಗಳಿಗೆ "ಅಂಗಮರ್ದ ಪ್ರಶಮನ" ದ್ರವ್ಯಗಳೆನ್ನುವರು.

ಶೂಲ ಪ್ರಶಮನಮ್ಃ—

ಶೂಲವನ್ನು ಶಾಂತ ಮಾಡುವಂಥ ದ್ರವ್ಯಗಳಿಗೆ "ಶೂಲ ಪ್ರಶಮನ" ದ್ರವ್ಯಗಳೆನ್ನುವರು. ವಾತ ದೋಷವು ಪ್ರಕುಪಿತವಾಗುವದರಿಂದ ಶೂಲ ಉಂಟಾಗುತ್ತದೆ. ಇದನ್ನು ನಿವಾರಿಸಲು ಉಷ್ಣವೀರ್ಯಾತ್ಮಕ, ದೀಪಕ, ಪಾಚಕ ಹಾಗು ವಾತಾನುಲೋಮಕವಿರುವ ದ್ರವ್ಯಗಳನ್ನು ಉಪಯೋಗಿಸಬೇಕಾಗುತ್ತದೆ. ಉದಾಃ— ಹಿಪ್ಪಲಿ, ಚಿತ್ರಕ, ಶುಂಠಿ. ವಾತಜ ಶೂಲಕ್ಕೆ ಸ್ನೇಹನ, ಸ್ವೇದನ ದ್ರವ್ಯ, ತಿಲಕಲ್ಕ, ಬಲಾದಿ ಕ್ವಾಥ ಹಾಗು ಕರಂಜ ತೈಲ ಕೊಡಬೇಕು. ಪಿತ್ತಜ ಶೂಲಕ್ಕೆ ಬೃಹತಿ, ತ್ರಿಫಳಾ, ಶತಾವರಿ ಮತ್ತು ಗುಡೂಚ್ಯಾದಿಗಳನ್ನು ಕೊಡಬೇಕು. ಕಫಜ ಶೂಲಕ್ಕೆ ತ್ರಿಲವಣಗಳನ್ನು ಕೊಡಬೇಕು.

ಗಣಃ— पिप्पली पिप्पलीमूल चव्यचित्रक शृङ्गवेर मरिच अजमोद अजगंधा अजाजी गण्डीराणीति दशेमानि शूलप्रशमनानि भवंति। (च. सू. ४)

ಹಿಪ್ಪಲಿ, ಮೋಡಿ, ಚವ್ಯ, ಚಿತ್ರಮೂಲ, ಶುಂಠಿ, ಮೆಣಸು, ಅಜವಾನ, ಅಡವಿಯವಾನಿ, ಜೀರಿಗೆ ಮತ್ತು ಮುಂಡುಗಳ್ಳಿ ಈ ಹತ್ತು ದ್ರವ್ಯಗಳಿಗೆ "ಶೂಲ ಪ್ರಶಮನ" ದ್ರವ್ಯಗಳೆನ್ನುವರು.

ಶೋಣಿತ ಸ್ಥಾಪನಮ್:—

शोणितस्य दुष्टस्य दुष्टिमपहृत्य तत् प्रकृतौ स्थापयतीति शोणित-स्थापनम्। (च. ६).
शोणितं स्थापयति अतिप्रवृत्तं स्तम्भयतीति शोणित स्थापनम्। (यो).
रूधिरसंस्थापनं पुरुषस्य रुधिर वृद्धिस्थैर्यकरम्। (इन्दु).

ದುಷ್ಟವಾದ ರಕ್ತದ ದೋಷಗಳನ್ನು ಹೋಗಲಾಡಿಸಿ ಅದನ್ನು ಪ್ರಾಕೃತ ಸ್ಥಿತಿಗೆ ತರುವ; ಅತಿ ಪ್ರವೃತ್ತವಾಗುವ ರಕ್ತವನ್ನು ತಡೆಯುವ, ರಕ್ತವರ್ಧನ ಹಾಗು ರಕ್ತದ ಸ್ಥಿರತೆಯನ್ನು ಮಾಡುವಂಥ ದ್ರವ್ಯಗಳಿಗೆ "ಶೋಣಿತ ಸ್ಥಾಪನ" ದ್ರವ್ಯಗಳೆನ್ನುವರು. ಈ ದ್ರವ್ಯಗಳು ರಕ್ತಧಾತುವಿನ ಮೇಲೆ ಕಾರ್ಯಮಾಡುವವು. ತಿಕ್ತ, ಕಷಾಯ, ಮಧುರ ರಸಗಳುಳ್ಳ, ಶೀತ ವೀರ್ಯದ ದ್ರವ್ಯಗಳು ಪ್ರಾಧಾನ್ಯವಾಗಿ ರಕ್ತ ಧಾತುವಿನ ಮೇಲೆ ಕಾರ್ಯ ಮಾಡುವವು. ಅಂದರೆ ದುಷ್ಟ ರಕ್ತದ ಶುದ್ಧಿಯನ್ನು ಮಾಡಿ ರಕ್ತಪ್ರಸಾದನ ಮಾಡುವವು. ಉದಾಃ— ಸಾರಿವಾ. ಇದು ತನ್ನ ಸ್ನಿಗ್ಧ, ಶೀತ ಗುಣಗಳಿಂದ ರಕ್ತದಲ್ಲಿ ಬೆಳೆದ ಉಷ್ಣ ಮತ್ತು ತೀಕ್ಷ್ಣ ಗುಣಗಳನ್ನು ಶಮನ ಮಾಡಿ ರಕ್ತ ಪ್ರಸಾದನ ಕಾರ್ಯವನ್ನು ಮಾಡುವದು. ರಕ್ತ ಧಾತುವಿನ ವಿಕೃತಿಯಲ್ಲಿ ಸಾರಿವಾ ದ್ರವ್ಯವು ಪಿತ್ತಶಾಮಕ, ದಾಹ ಶಾಮಕ, ಉಷ್ಣ ಶಾಮಕ ಹಾಗು ವಿಷಘ್ನವೆಂದು ಉಪಯೋಗವಾಗುವದು. ವಾಸಾ ಇದಾದರೂ ರಕ್ತ ದುಷ್ಟಿಯಲ್ಲಿ ಉಪಯುಕ್ತವಿದೆ. ಇದು ತನ್ನ ತಿಕ್ತರಸ, ಶೀತ ವೀರ್ಯಗಳಿಂದ ರಕ್ತ ಪಿತ್ತದಲ್ಲಿ ಬೆಳೆದ ತೀಕ್ಷ್ಣ, ಉಷ್ಣ ಗುಣಗಳನ್ನು ಕಡಿಮೆ ಮಾಡಿ

7

ರಕ್ತ ಪ್ರಸಾದನ ಹಾಗು ಸ್ತಂಭನ ಕಾರ್ಯವನ್ನು ಮಾಡುವದು. ಕಷಾಯ ರಸಾತ್ಮಕ ದ್ರವ್ಯಗಳು ರಕ್ತಸ್ರಾವವಾಗುತ್ತಿದ್ದರೆ; ರಕ್ತ ಸ್ತಂಭನ ಕಾರ್ಯವನ್ನು ಮಾಡುವವು. ಉದಾಃ- ಲಾಕ್ಷಾ, ಲೋಧ್ರ ಇತ್ಯಾದಿ. ಇವು ಸ್ರೋತಸ್ಸುಗಳ ಸಂಕೋಚಮಾಡಿ ರಕ್ತಸ್ತಂಭನ ಮಾಡುವವು.

ರಕ್ತ ಧಾತುವು ಕ್ಷೀಣವಾಗಿ ಅದರ ಕ್ಷೀಣ ಲಕ್ಷಣಗಳು ಕಂಡು ಬರುತ್ತಿದ್ದರೆ ಆಗ ರಕ್ತವರ್ಧನ ಮಾಡುವ ದ್ರವ್ಯಗಳನ್ನು ಕೊಡಬೇಕಾಗುತ್ತದೆ. 'रक्तं तेजो जलात्मकम्' ರಕ್ತವು ಪಾಂಚಭೌತಿಕವಿದ್ದು ಜಲ ಮತ್ತು ಅಗ್ನಿ ಮಹಾಭೂತ ಪ್ರಾಧಾನ್ಯವುಳ್ಳದ್ದಿರುವದರಿಂದ ಅದು ಕ್ಷೀಣವಾದಾಗ ಜಲ ಮತ್ತು ಅಗ್ನಿ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳನ್ನು ಉಪಯೋಗಿಸಬೇಕಾಗುತ್ತದೆ. ಅದರಿಂದ ರಕ್ತವೃದ್ಧಿಯಾಗಿ ಶೋಣಿತಸ್ಥಾಪನ ಕಾರ್ಯವಾಗುವದು. ಉದಾಃ- ಘೃತ, ಚಂದನ, ರಕ್ತ.

ಗಣ ಃ- मधु मधुक रुधिर मोचरस मृत्कपाल लोध्र गैरिक प्रियंगु शर्करा लाजा इति दशेमानि शोणितस्थापनानि भवंति । (च. सू. ४).

ಜೇನುತುಪ್ಪ, ಜೇಷ್ಠಮಧು, ರಕ್ತ (ಕೇಸರಿ, ಕುಂಕುಮ), ಬೂರಲ ಅಂಟು, ಗೋಪಿಚಂದನ (ಮೃತ್ಕಪಾಲ), ಲೋಧ್ರ, ಕ್ಯಾವಿ, ಪ್ರಿಯಂಗು, ಸಕ್ಕರೆ ಮತ್ತು ಭತ್ತದ ಅರಳು ಈ ಹತ್ತು ದ್ರವ್ಯಗಳಿಗೆ "ಶೋಣಿತ ಸ್ಥಾಪನ" ದ್ರವ್ಯಗಳೆನ್ನುವರು.

ವೇದನಾ ಸ್ಥಾಪನಮ್ಃ-

वेदनायां संभूतायां तां निहत्य शरीरं प्रकृतौ स्थापयतीति वेदना-स्थापनम् । (च. द.).

ಶರೀರದಲ್ಲಾಗುವ ವೇದನೆಗಳನ್ನು ಕಡಿಮೆ ಮಾಡುವ ದ್ರವ್ಯಗಳಿಗೆ "ವೇದನಾ ಸ್ಥಾಪನ" ದ್ರವ್ಯಗಳೆನ್ನುವರು. ವೇದನಾ ಇದು ಕುಪಿತ ವಾತದ ಒಂದು ಲಕ್ಷಣವಿದ್ದು; ವಾತಶಾಮಕ, ಉಷ್ಣ, ಸ್ನಿಗ್ಧ ಗುಣಗಳುಳ್ಳ ದ್ರವ್ಯಗಳಿಂದ ಶಮನವಾಗುವದು. ಉದಾಃ- ಗುಗ್ಗುಳು, ವತ್ಸನಾಭ, ಶತಾವರಿ ಇತ್ಯಾದಿ.

ಗಣ ಃ- शाल कट्फल कदम्ब पद्मक तुङ्ग मोचरस शिरीष वंजुल एलवालुक अशोका इति दशेमानि वेदना स्थापनानि भवंति । (च. सू. ४).

ಶಾಲ (ಸರ್ಜವೃಕ್ಷ), ಮಾಪಾಳಕಾಯಿ, ಕದಂಬ, ಪದ್ಮಕಾಷ್ಟ, ತುಂಗ, ಬೂರಲ ಅಂಟು, ಶಿರಸಲ, ನೀರಂಜಿಯ ಮರ, ಏಲವಾಲುಕ ಮತ್ತು ಅಶೋಕ ಈ ಹತ್ತು ದ್ರವ್ಯಗಳಿಗೆ "ವೇದನಾ ಸ್ಥಾಪಕ" ದ್ರವ್ಯಗಳೆನ್ನುವರು.

ಸಂಜ್ಞಾ ಸ್ಥಾಪನಮ್:-

संज्ञां ज्ञानं स्थापयतीति संज्ञास्थापनम् । (च. द.).

ಜ್ಞಾನವನ್ನುಂಟು ಮಾಡುವಂಥ ದ್ರವ್ಯಗಳಿಗೆ "ಸಂಜ್ಞಾ ಸ್ಥಾಪನ" ದ್ರವ್ಯಗಳೆನ್ನುವರು. ಈ ದ್ರವ್ಯಗಳು ಎಚ್ಚರ ತಪ್ಪಿದವರನ್ನು ಪುನಃ ಪ್ರಜ್ಞೆಗೆ ಬರುವಂತೆ

ಮಾಡುವವು. ಇವುಗಳ ಕಾರ್ಯವು ಮಜ್ಜಾ ಮತ್ತು ಹೃದಯದ ಮೇಲಾಗುವದು. ತಮೋಗುಣದ ಪರಿಣಾಮವಾಗಿ ಸಂಜ್ಞಾನಾಶ ಲಕ್ಷಣ ಉಂಟಾಗಿದ್ದರೆ, ತಮೋ ಗುಣವನ್ನು ನಾಶ ಮಾಡುವಂಥ ದ್ರವ್ಯಗಳನ್ನು ಪಯೋಗಿಸಬೇಕಾಗುತ್ತದೆ. ಅಂಥ ದ್ರವ್ಯಗಳು ತೀಕ್ಷ್ಣಗುಣ ಹಾಗು ಉಷ್ಣ ವೀರ್ಯಾತ್ಮಕವಿರುವವು. ಇವುಗಳಿಂದ ತಮೋ ಗುಣದ ನಾಶವಾಗಿ ಹೃದಯಕ್ಕೆ ಬಲ ಮತ್ತು ಚೈತನ್ಯ ಉಂಟಾಗುತ್ತದೆ. ಒಂದು ವೇಳೆ ಪಿತ್ತಪ್ರಕೋಪದ ಪರಿಣಾಮವಾಗಿ ಸಂಜ್ಞಾನಾಶವಾಗಿದ್ದರೆ; (ಮೂರ್ಛಾ, ಭ್ರಮ ಇತ್ಯಾದಿ) ಅಂಥ ಅವಸ್ಥೆಯಲ್ಲಿ ಪಿತ್ತಶಾಮಕ ಹಾಗು ಶೀತ ವೀರ್ಯಾತ್ಮಕ ದ್ರವ್ಯಗಳನ್ನು ಉಪಯೋಗಿಸಬೇಕಾಗುವದು.

ಗಣ :— हिंगु कैडर्यारिमेद वचा चोरक वयस्था गोलोमी जटिला पलङ्कषाशोक-
रोहिण्य इति दशेमानि संज्ञास्थापनानि भवंति । (च. सू ४)

ಇಂಗು, ಕರಿಬೇವಿನ ತೊಪ್ಪಲು, ಅರಿಮೇದ, ಬಜೆ, ಚೋರಕ, ವಯಸ್ಥಾ (ಬ್ರಾಹ್ಮಿ), ಗೋಲೋಮಿ, ಜಟಾಮಾಂಸಿ, ಗುಗ್ಗುಳು ಮತ್ತು ಅಶೋಕರೋಹಿಣಿ (ಕಟುಕಾ) ಈ ಹತ್ತು ದ್ರವ್ಯಗಳಿಗೆ " ಸಂಜ್ಞಾ ಸ್ಥಾಪಕ " ದ್ರವ್ಯಗಳೆನ್ನುವರು.

ಪ್ರಜಾ ಸ್ಥಾಪನಮ್ :—

प्रजोपघातकं दोषं हृत्वा प्रजां स्थापयतीति प्रजास्थापनम् । (च. द.).
प्रजां गर्भे स्थापयति दोषं निरस्येति प्रजास्थापनम् । (यो).

ಗರ್ಭಧಾರಣೆಗೆ ಉಪಯೋಗವಾಗುವ ದ್ರವ್ಯಗಳಿಗೆ " ಪ್ರಜಾ ಸ್ಥಾಪನ " ದ್ರವ್ಯಗಳೆನ್ನುವರು. ಗರ್ಭಧಾರಣ ಕ್ರಿಯೆಯಲ್ಲಿ ಉಂಟಾದ ದೋಷಗಳನ್ನು ನಾಶಮಾಡಿ ಪ್ರಜಾಸ್ಥಾಪನ ಅರ್ಥಾತ್ ಗರ್ಭಸ್ಥಾಪನ ಕಾರ್ಯವನ್ನು ಮಾಡುವವು. ಉದಾ :— ಬ್ರಾಹ್ಮಿ, ಲಕ್ಷ್ಮಣ ಇತ್ಯಾದಿ. ಈ ದ್ರವ್ಯಗಳಿಂದ ಗರ್ಭಾಶಯಕ್ಕೆ ಬಲವು ದೊರೆಯುವದು. ಹಾಗು ಗರ್ಭಾಶಯಕ್ಕೆ ಪ್ರಾಪ್ತವಾದ ಶೈಥಿಲ್ಯವು ದೂರವಾಗುವದು. ಅಲ್ಲದೆ ಗರ್ಭವು ಉತ್ತಮ ರೀತಿಯಿಂದ ಬೆಳೆಯಲು ಸಹಾಯವಾಗುವದು. ಪ್ರಜಾ ಸ್ಥಾಪನ ದ್ರವ್ಯಗಳು ಮಧುರ, ಕಷಾಯ, ಸ್ನಿಗ್ಧ, ಶೀತ ಹಾಗೂ ಬಲ್ಯ ಗುಣಗಳುಳ್ಳವಿರುವವು.

ಗಣ :— ऐन्द्री ब्राह्मी शतवीर्या सहस्रवीर्याऽमोघाऽव्यथा शिवाऽरिष्टा वाट्यपुष्पी
विष्वक्सेनकांता इति दशेमानि प्रजास्थापनानि भवंति । (च. सू ४).

ಐಂದ್ರಿ (ಹಾವು ಮೆಕ್ಕೆಯ ಬೇರು), ಬ್ರಾಹ್ಮೀ, ಲಘು ಶತಾವರಿ, ಮಹಾ ಶತಾವರಿ, ಅಮೋಘಾ (ಪಾದರಿ, ನೆಲ್ಲಿಕಾಯಿ ಇಲ್ಲವೆ ಲಕ್ಷ್ಮಣಾ), ಅವ್ಯಥಾ (ಕದಲಿ, ಅಮೃತಬಳ್ಳಿ ಇಲ್ಲವೆ ಅಣಲೆಯಕಾಯಿ), ಹರಿತಕಿ, ಕಟುಕಾ, ಬಲಾ ಮತ್ತು ವಿಷ್ವಕ್ಸೇನಕಾಂತಾ (ಪ್ರಿಯಂಗು) ಈ ಹತ್ತು ದ್ರವ್ಯಗಳಿಗೆ " ಪ್ರಜಾ ಸ್ಥಾಪನ " ದ್ರವ್ಯಗಳೆನ್ನುವರು.

ವಯಃಸ್ಥಾಪನಮ್ :—

वयः तरुणं स्थापयतीति वयःस्थापनम् । (च. द. ४).
वयसे हितं वयस्यं, जरामिहत्य यौवनं रक्षति । (र. वै.)

ಯಾವ ದ್ರವ್ಯಗಳು ತಾರುಣ್ಯಾವಸ್ಥೆಯನ್ನು ಸ್ಥಿರವಾಗಿಡುವವೋ ಅಂಥ ದ್ರವ್ಯಗಳಿಗೆ "ವಯಃಸ್ಥಾಪನ" ದ್ರವ್ಯಗಳೆಂದು ಕರೆಯುವರು. ವೃದ್ಧಾವಸ್ಥೆಯಲ್ಲಿ ಇವುಗಳನ್ನು ಸೇವಿಸುವದರಿಂದ ತಾರುಣ್ಯದಂತೆ ಶಕ್ತಿಯು ಪ್ರಾಪ್ತವಾಗುವದು. ವಯಃಸ್ಥಾಪನ ದ್ರವ್ಯಗಳು ಸ್ನಿಗ್ಧ, ಸ್ಥಿರ, ಪಿಚ್ಛಿಲ ಹಾಗು ಶುಕ್ರಲ ಇತ್ಯಾದಿ ಗುಣಾತ್ಮಕವಿರುವವು. ಉದಾಃ– ನೆಲ್ಲಿಕಾಯಿ, ಶತಾವರಿ ಇತ್ಯಾದಿ. ಇಂಥ ದ್ರವ್ಯಗಳು ರಸಾಯನ ವರ್ಗದಲ್ಲಿಯೂ ಬರುವವು.

ಗಣ ಃ– अमृताऽभया धात्री मुक्ताश्वेता जीवंति अतिरसा मंडूकपर्णी स्थिरा पुनर्नवा इति दशेमानि वयःस्थापनानि भवंति । (च. सू. ४).

ಅಮೃತ ಬಳ್ಳಿ, ಅಣಿಲೆಯ ಕಾಯಿ, ನೆಲ್ಲಿ ಕಾಯಿ, ಮುಕ್ತಾ (ರಾಸ್ನಾ), ಶ್ವೇತಾ, ಸಿಹಿ ಹಾಲೆ, ಅತಿರಸಾ (ಶತಾವರಿ), ಮಂಡೂಕಪರ್ಣಿ, ಸ್ಥಿರಾ ಮತ್ತು ಪುನರ್ನವಾ ಈ ಹತ್ತು ದ್ರವ್ಯಗಳಿಗೆ "ವಯಃಸ್ಥಾಪನ" ದ್ರವ್ಯಗಳೆನ್ನುವರು.

ಲಂಘನಮ್ ಃ—

यत्किंचिल्लाघवकरं देहे तल्लंघन स्मृतम् ।
लघूष्णं तीक्ष्ण विशदं रूक्षं सूक्ष्मं खरं सरम् ।
कठिनं चैव यद्द्रव्यं प्रायस्तल्लंघनं स्मृतम् ॥ (च. सू. २२).

देहस्य यल्लाघवाय कल्पते तल्लंघनम् ।
आग्नेय वायव्य नाभसं लंघनमिति ॥ (इ).
शोधनं शमनं चेति द्विधा तत्रापि लंधनम् । (अ. हृ. सू. २४).

ಚಿಕಿತ್ಸೆಯನ್ನು ಪ್ರಮುಖವಾಗಿ ಎರಡು ರೀತಿಯಿಂದ ಮಾಡುವರು. ಒಂದು ಸಂತರ್ಪಣ ಚಿಕಿತ್ಸೆ; ಅಂದರೆ ಬೃಂಹಣ ಚಿಕಿತ್ಸೆ, ಎರಡನೆಯದು ಅಪತರ್ಪಣ ಚಿಕಿತ್ಸೆ; ಅಂದರೇನೇ ಲಂಘನ ಚಿಕಿತ್ಸೆಯು. ಯಾವ ದ್ರವ್ಯಗಳನ್ನು ಸೇವಿಸುವದರಿಂದ ಶರೀರಕ್ಕೆ ಲಘುತ್ವ ಉಂಟಾಗುವದೋ ಅಂಥ ದ್ರವ್ಯಗಳಿಗೆ "ಲಂಘನ" ದ್ರವ್ಯಗಳೆಂದೆನ್ನುವರು. ಈ ದ್ರವ್ಯಗಳು ಹೆಚ್ಚಾಗಿ ಲಘು, ಉಷ್ಣ, ತೀಕ್ಷ್ಣ, ವಿಶದ, ರೂಕ್ಷ, ಸೂಕ್ಷ್ಮ, ಖರ, ಸರ ಹಾಗೂ ಕಠಿಣ ಗುಣಗಳುಳ್ಳವಿರುವವು. ಅಲ್ಲದೆ ಇವುಗಳಲ್ಲಿ ಅಗ್ನಿ, ವಾಯು, ಆಕಾಶ ಮಹಾಭೂತಗಳ ಪ್ರಾಧಾನ್ಯತೆ ಇರುವದು. ಲಂಘನದಿಂದ ಶರೀರವು ಕೃಶವಾಗುವದು. ಇಂದ್ರಿಯಗಳು ನಿರ್ಮಲವಾಗುವವು. ದೇಹವು ಹಗುರಾಗುವದು. ಅನ್ನಕ್ಕೆ ರುಚಿ ಉಂಟಾಗುವದು. ಹೃದಯ, ಕಂಠ ಮತ್ತು ಉದ್ಗಾರಗಳು ಶುದ್ಧವಾಗುವವು.

ವಾಗ್ಭಟಾಚಾರ್ಯರು ಶೋಧನ, ಶಮನವೆಂದು ಲಂಘನದ ಎರಡು ಪ್ರಕಾರಗಳನ್ನು ಹೇಳಿರುವರು. ಚರಕಾಚಾರ್ಯರು 1) ವಮನ 2) ವಿರೇಚನ 3) ಶಿರೋವಿರೇಚನ 4) ನಿರೂಹ 5) ತೃಷ್ಣಾ 6) ವಾಯುಸೇವನೆ 7) ಆತಪ (ಬಿಸಿಲು) ಸೇವನೆ 8) ಪಾಚನ ಔಷಧ ದ್ರವ್ಯ ಸೇವನ 9) ಉಪವಾಸ 10) ವ್ಯಾಯಾಮ

ಎಂದು ಲಂಘನವು ಹತ್ತು ಪ್ರಕಾರದ್ದಿರುವದೆಂದು ಹೇಳಿರುವರು. ಇವುಗಳಲ್ಲಿ ಮೊದಲಿನ ನಾಲ್ಕು ಅಂದರೆ ವಮನ, ವಿರೇಚನ, ಶಿರೋವಿರೇಚನ ಮತ್ತು ನಿರೂಹ ಇವುಗಳಿಗೆ ಶೋಧನ ಚಿಕಿತ್ಸೆ ಎಂದು ಅನ್ನುವರು. ಹಾಗು ಉಳಿದವುಗಳಿಗೆ ಶಮನ ಚಿಕಿತ್ಸೆ ಎಂದು ಅನ್ನುವರು.

ಲಂಘನೀಯ ಪುರುಷಃ– ತ್ವಚಾರೋಗಿ, ಪ್ರಮೇಹ ರೋಗಿ, ಅತಿ ಸ್ನಿಗ್ಧ, ಅಭಿಷ್ಯಂದಿ ರೋಗ, ಯಾವನ ಶರೀರದ ಸ್ರೋತಸ್ಸುಗಳಲ್ಲಿ ಕಫವು ತುಂಬಿಕೊಂಡಿರುವದೋ; ಸ್ಥೂಲ ಹಾಗು ಜ್ವರ ಇತ್ಯಾದಿ ರೋಗಿಗಳಿಗೆ ಲಂಘನವನ್ನು ಕೊಡಬೇಕು.

ಲಂಘನ ದ್ರವ್ಯಗಳು :– ಯವ, ಜೇನುತುಪ್ಪ, ಬೃಹತ್ ಪಂಚಮೂಲ, ಗುಗ್ಗುಲು, ಶಿಲಾಜಿತ, ತ್ರಿಫಳಾ, ವಾಯುವಿಡಂಗ, ಚಿತ್ರಕ, ಕುಲತ್ಥ, ಮೆಣಸು ಇತ್ಯಾದಿ.

ರೂಕ್ಷಣಮ್ಃ—

रौक्ष्यं खरत्वं वैशद्यं यत् कुर्यात् तद्धि रुक्षणम् ।
रुक्षं लघु खरं तीक्ष्णमुष्णं स्थिरमपिच्छिलम् ॥
प्रायशः कठिनं चैव यद् द्रव्यं तद्धि रुक्षणम् ॥ (च. सू. २२).
कटु तिक्त कषायाणां सेवनं स्त्रीष्वसंयमः ।
खलिपिण्याक तक्राणां मध्वादीनां च रुक्षणम् ॥ (च. सू. २२).

ಯಾವ ದ್ರವ್ಯಗಳನ್ನು ಸೇವಿಸುವದರಿಂದ ಶರೀರವು ರೂಕ್ಷ, ಖರ (ಬಿರುಸು) ಮತ್ತು ವಿಶದವಾಗುವದೋ ಅಂಥ ದ್ರವ್ಯಗಳಿಗೆ "ರೂಕ್ಷ" ದ್ರವ್ಯಗಳೆನ್ನುವರು. ಇವುಗಳಲ್ಲಿ ರೂಕ್ಷ ಗುಣದ ಪ್ರಾಧಾನ್ಯತೆ ಇರುವದು. ಈ ದ್ರವ್ಯಗಳು ಹೆಚ್ಚಾಗಿ ರೂಕ್ಷ, ಲಘು, ಖರ, ತೀಕ್ಷ್ಣ, ಉಷ್ಣ, ಸ್ಥಿರ, ಅಪಿಚ್ಛಿಲ ಮತ್ತು ಕಠಿಣ ಗುಣಗಳುಳ್ಳವಿದ್ದು; ಕಟು, ತಿಕ್ತ, ಕಷಾಯ, ರಸಾತ್ಮಕವೂ ಉಷ್ಣ ವೀರ್ಯದವೂ ಹಾಗು ಕಟು ವಿಪಾಕದವು ಇರುತ್ತವೆ. ಉದಾಃ–ಸರ್ಷಪ ಖಲಿ, ತಿಲಖಲಿ, ತಕ್ರ (ಮಜ್ಜಿಗೆ), ಮಧು (ಜೇನು ತುಪ್ಪ) ಇತ್ಯಾದಿ.

ರೂಕ್ಷ ದ್ರವ್ಯಗಳು ಪಂಚಮಹಾಭೂತಾತ್ಮಕವಿದ್ದರೂ ವಾಯು ಮಹಾಭೂತ ಪ್ರಧಾನ ಉಳ್ಳವಿರುವವು. ಈ ದ್ರವ್ಯಗಳ ಸೇವನೆಯಿಂದ ವಾತ ದೋಷವು ವೃದ್ಧಿಯಾಗುವದಲ್ಲದೆ ಕಫ ದೋಷವು ಕ್ಷೀಣವಾಗುವದು. ಆದುದರಿಂದ ಇಂಥ ದ್ರವ್ಯಗಳನ್ನು ಪ್ರಮುಖವಾಗಿ ಊರುಸ್ತಂಭ, ಅಭಿಷ್ಯಂದಿ ಇತ್ಯಾದಿ ರೋಗಗಳಲ್ಲಿ ಉಪಯೋಗಿಸುವರು. ಈ ರೋಗಗಳಲ್ಲಿ ಕಫ ದೋಷವು ವೃದ್ಧಿಯಾಗುವದರಿಂದ ಅದನ್ನು ನಿರ್ಹರಿಸಲು ರೂಕ್ಷ ದ್ರವ್ಯಗಳನ್ನುಪಯೋಗಿಸಬೇಕಾಗುವದು.

ಸ್ನೇಹನಮ್ಃ—

स्नेहनं स्नेह विष्यंद मार्दव क्लेद कारकम् ।
द्रवं सूक्ष्मं सरं स्निग्धं पिच्छिलं गुरु शीतलम् ।
प्रायो मंदं मृदु च यद्द्रव्यं तत् स्नेहनं स्मृतम् ॥ (च. सू. २२).

ಯಾವ ದ್ರವ್ಯಗಳ ಸೇವನೆಯಿಂದ ಶರೀರದಲ್ಲಿ ಸ್ನಿಗ್ಧತಾ, ವಿಷ್ಯಂದ, ಮೃದುತಾ ಮತ್ತು ಕ್ಲೇದತ್ವಗಳುತ್ಪನ್ನವಾಗುವವೋ ಅಂಥ ದ್ರವ್ಯಗಳಿಗೆ " ಸ್ನೇಹನ ದ್ರವ್ಯ " ಗಳೆನ್ನುವರು. ಇವುಗಳಲ್ಲಿ ಸ್ನಿಗ್ಧ ಗುಣದ ಪ್ರಾಧಾನ್ಯತೆ ಇರುವದು. ಈ ದ್ರವ್ಯಗಳು ಹೆಚ್ಚಾಗಿ ದ್ರವ, ಸೂಕ್ಷ್ಮ ,ಸರ, ಸ್ನಿಗ್ಧ, ಪಿಚ್ಛಿಲ; ಗುರು, ಶೀತ, ಮಂದ ಮತ್ತು ಮೃದು ಗುಣಗಳುಳ್ಳವಿದ್ದು, ಮಧುರ ರಸದವು, ಶೀತ ವೀರ್ಯದವು ಹಾಗು ಮಧುರ ವಿಪಾಕದವಿರುತ್ತವೆ. ಉದಾ:— ಘೃತ, ವಸಾ, ಮಜ್ಜಾ, ಇತ್ಯಾದಿ.

ಸ್ನಿಗ್ಧ ದ್ರವ್ಯಗಳು ಪಂಚಮಹಾಭೂತಾತ್ಮಕವಿದ್ದರೂ ಅಪ್ ಮಹಾಭೂತ ಪ್ರಧಾನವುಳ್ಳವಿರುವವು. ಈ ದ್ರವ್ಯಗಳ ಸೇವನೆಯಿಂದ ಕಫ ದೋಷವು ವೃದ್ಧಿಯಾಗುವದು, ಹಾಗು ವಾತ ದೋಷದ ಶಮನವಾಗುವದು. ಸ್ನಿಗ್ಧ ಗುಣದ ದ್ರವ್ಯಗಳನ್ನು ಕಫ ಕ್ಷೀಣವಿದ್ದಾಗ ಹಾಗು ವಾತ ವೃದ್ಧಿಯಾದಾಗ ಹೆಚ್ಚಾಗಿ ಉಪಯೋಗಿಸಿದ್ದು ಕಂಡು ಬರುತ್ತದೆ. ಆದುದರಿಂದ ಇಂಥ ದ್ರವ್ಯಗಳನ್ನು ವಾತವ್ಯಾಧಿಯಲ್ಲಿ ಉಪಯೋಗಿಸುವರು

ಸ್ನೇಹನಾರ್ಹರು:— ಸ್ವೇದಕ್ಕೆ, ಶೋಧನಕ್ಕೆ ಅರ್ಹರಿದ್ದವರು, ಮದ್ಯಪಾನ ಮಾಡಿದವರು, ವ್ಯಾಯಾಮ ಮಾಡಿದವರು, ವೃದ್ಧರು, ಬಾಲಕರು, ಅಶಕ್ತರು, ಕೃಶರು, ರೂಕ್ಷರು, ರಕ್ತ, ಶುಕ್ರಗಳ ಕ್ಷಯವಿದ್ದವರು ಇತ್ಯಾದಿ.

ಸ್ವೇದನಮ್:—

स्तम्भ गौरव शीतघ्नं स्वेदनं स्वेदकारकम् ।
उष्णं तीक्ष्णं सरं स्निग्धं रुक्षं सूक्ष्मं द्रवं स्थिरम् ।
द्रव्यं गुरु च यत् प्रायस्तद्धि स्वेदनमुच्यते ॥ (च. सू. २२).

ಯಾವ ದ್ರವ್ಯಗಳ ಸೇವನೆಯಿಂದ ಶರೀರದ ನಿಶ್ಚಲೀಭಾವ (ಸ್ತಂಭ), ಜಾಡ್ಯತಾ ಹಾಗು ಶೀತಗಳ ನಾಶವಾಗುವದೋ ಅಂಥ ದ್ರವ್ಯಗಳಿಗೆ " ಸ್ವೇದನ " ದ್ರವ್ಯಗಳೆನ್ನುವರು. ಇವುಗಳಲ್ಲಿ ಉಷ್ಣ ಗುಣದ ಪ್ರಾಧಾನ್ಯತೆ ಇರುವದು. ಈ ದ್ರವ್ಯಗಳು ಹೆಚ್ಚಾಗಿ ಉಷ್ಣ, ತೀಕ್ಷ್ಣ, ಸರ, ಸ್ನಿಗ್ಧ , ರೂಕ್ಷ , ಸೂಕ್ಷ್ಮ , ದ್ರವ, ಸ್ಥಿರ ಮತ್ತು ಗುರು ಗುಣಗಳುಳ್ಳದವಿರುವವು. ಉದಾ:— ವಿಡಂಗ, ಮರಿಚ, ಶೋಭಾಂಜನ, ತುಲಸಿ ಇತ್ಯಾದಿ. ಸ್ವೇದನ ಕರ್ಮವನ್ನ ಶ್ವಾಸ, ಕಾಸ, ಹಿಕ್ಕಾ, ಶೂಲ, ಅರ್ದಿತ, ಪಕ್ಷವಧ, ಗ್ರಧ್ರಸಿ, ಆನಾಹ, ಹಾಗೂ ಮೂತ್ರಕೃಚ್ಛ್ರ ಮೊದಲಾದ ರೋಗಗಳಿಂದ ಪೀಡಿತರಾದವರಿಗೆ ಮಾಡುವರು.

ಸ್ವೇದನ ಮಾಡುವದರಿಂದ ಶೀತ, ಶೂಲಗಳು ಶಾಂತವಾಗುವವು. ಜಾಡ್ಯತಾ, ನಷ್ಟವಾಗುವದು, ಶರೀರವು ಕೋಮಲವಾಗುವದು, ಹಾಗು ಬೆವರು ಬರಲಾರಂಭಿಸುವದು. ವಾತ, ಕಫಜ ರೋಗಗಳಲ್ಲಿ ಇದು ಹೆಚ್ಚು ಉಪಯುಕ್ತವಿದೆ.

ಸ್ತಂಭನಮ್:—

(ಪುರೀಷ ಸಂಗ್ರಹಣೀಯದಲ್ಲಿ ನೋಡಿರಿ)

ಸಂಶಮನವರ್ಗಃ—

न शोधयति यद्दोषान् समान्नोदीरयत्यपि ।
समीकरोति विषमान् शमनं तच्च सप्तधा ॥
पाचनं दीपनं क्षुत्तृड् व्यायामातपमारुताः । अ. हृ. सू. १४
आकाश गुण भूयिष्ठं संशमनम् । सु. सू. ४२
न शोधयति नद्वेष्टि समान् दोषांस्तथोद्धतान् ।
समीकरोति विषमाञ्छमनं तद्यथाऽमृता ॥ शा. प्र. खं. ४

ಯಾವ ದ್ರವ್ಯಗಳು ಪ್ರಕುಪಿತವಾದಂಥ ದೋಷಗಳನ್ನು ವಮನ, ವಿರೇಚನ ಇತ್ಯಾದಿ ಶೋಧನ ಕರ್ಮಗಳ ಮುಖಾಂತರ ಹೊರಗೆ ಹಾಕದೇ ಶರೀರದಲ್ಲಿಯೇ ಅವುಗಳ ಶಮನ ಮಾಡುವವೋ ಅಂಥ ದ್ರವ್ಯಗಳಿಗೆ "ಸಂಶಮನ" ದ್ರವ್ಯಗಳೆನ್ನುವರು. ಈ ದ್ರವ್ಯಗಳು ಸಮಸ್ಥಿತಿಯಲ್ಲಿದ್ದಂಥ ದೋಷಗಳನ್ನು ಪ್ರಕೋಪ ಮಾಡುವದಿಲ್ಲ. ಆದರೆ ದೋಷಗಳು ವೃದ್ಧಿಯಾದಾಗ ಇಲ್ಲವೆ ಕ್ಷೀಣವಾದಾಗ ಅವುಗಳನ್ನು ಸಮಸ್ಥಿತಿಗೆ ತರುವ ಕಾರ್ಯವನ್ನು ಮಾಡುವವು. ಉದಾಃ- ಉಪವಾಸದಿಂದಿರುವದು, ಯವಾಗು ತಯಾರಿಸಿ ಕೊಡುವದು, ಹಾಗು ತಿಕ್ತ ರಸ ದ್ರವ್ಯಗಳನ್ನು ಕೊಡುವದು. ಈ ಪ್ರಕಾರ ಶಮನ ಚಿಕಿತ್ಸೆಯನ್ನು ಮಾಡುವದರಿಂದ ತರುಣ ಜ್ವರದಲ್ಲಿಯ ಪ್ರಕುಪಿತ ದೋಷಗಳು ಸಮಸ್ಥಿತಿಗೆ ಬರುವವು. ಆದರೆ ಇಲ್ಲಿ ಶೋಧನ ಚಿಕಿತ್ಸೆಯನ್ನು ಮಾಡಲು ಬರುವದಿಲ್ಲ.

ಸಂಶಮನ ದ್ರವ್ಯಗಳು ಹೆಚ್ಚಾಗಿ ಆಕಾಶ ಮಹಾಭೂತ ಪ್ರಾಧಾನ್ಯವುಳ್ಳವಿರುತ್ತವೆ. ಸಂಶಮನ ಚಿಕಿತ್ಸೆಯನ್ನು ವಾಗ್ಭಟಾಚಾರ್ಯರ ಮತದಂತೆ ಏಳು ವಿಧದಿಂದ ಮಾಡಲು ಬರುವದು. 1) ಪಾಚನ 2) ದೀಪನ 3) ಕ್ಷುಧಾ ನಿಗ್ರಹ (ಉಪವಾಸ ಮಾಡುವದು) 4) ತೃಷ್ಣಾ ನಿಗ್ರಹ 5) ವ್ಯಾಯಾಮ 6) ಬಿಸಿಲು ಕಾಸೋಣ 7) ವಾಯುಸೇವನೆ.

ಸುಶ್ರುತಾಚಾರ್ಯರು ಸಂಶಮನ ದ್ರವ್ಯಗಳ ವಾತ ಸಂಶಮನ, ಪಿತ್ತ ಸಂಶಮನ ಹಾಗು ಕಫ ಸಂಶಮನವೆಂದು ಮೂರು ವರ್ಗಗಳನ್ನು ಮಾಡಿರುವರು.

ವಾತಸಂಶಮನ ದ್ರವ್ಯ:- ದೇವದಾರು, ಹರಿದ್ರಾ, ಬಲಾ, ಅಗ್ನಿಮಂಥ, ಏರಂಡ, ಅರ್ಕ, ಶತಾವರಿ ಇತ್ಯಾದಿ.

ಪಿತ್ತ ಸಂಶಮನ ದ್ರವ್ಯ:-ಚಂದನ, ಉಶೀರ, ಮಂಜಿಷ್ಠ, ಶತಾವರಿ ಇತ್ಯಾದಿ.

ಕಫ ಸಂಶಮನ ದ್ರವ್ಯಃ- ಅಗರು, ಹರಿದ್ರಾ, ರಾಸ್ನಾ, ಗುಡೂಚಿ ಇತ್ಯಾದಿ.

ವಮನವರ್ಗಃ— (ಊರ್ಧ್ವಭಾಗಹರಮ್)

यानि तु खलु वमनादिषु भेषजद्रव्याण्युपयोगं गच्छन्ति तानि अनुव्याख्यास्यामः । (च. वि.)

दोषहरणमूर्ध्वं भागं वमनसंज्ञकम्। (च. क. २)

मदनं मधुकं निम्बं जीमूतं कृतवेधनम्।
पिप्पली कुटज इक्ष्वाकु एला धामार्गवानि च ॥
उपस्थिते श्लेष्मपित्ते व्याधावामाशयाश्रये।
वमनार्थं प्रयुञ्जीत भिषग्देहमदूषयन् ॥ (च. सू. २)

वमन द्रव्याण्यग्नि वायु गुण भूयिष्ठानि;
अग्नि वायु हि लघू, लघुत्वाच्च तान्यूर्ध्वमुत्तिष्ठन्ति
तस्माद्वमनूर्ध्वं गुण भूयिष्ठम्। (सु. सू. ४२)

अपक्व पित्त श्लेष्माणौ बलादूर्ध्वं नयेत्तु यत्।
वमनं तद्धि विज्ञेयं मदनस्य फलं यथा। (शा. सं.)

" तेजो वायुजमूर्ध्वगम् "

वमनं श्लेष्म हराणाम् श्रेष्ठम्।

तत्रोष्ण तीक्ष्ण सूक्ष्म व्यवायि विकाशीन्यौषधानि स्ववीर्येण हृदयमुपेत्य सौक्ष्म्याद् व्यवायित्वाच्च धमनीरनुसृत्य स्नेहेन मृदुकृत्यांतःशरीरे स्वोष्मणार्द्रे दारुवद्विष्यण्णे स्थूलाणुस्रोतोभ्यः सकलमपि दोषसंघातमौष्ण्यात् पुनर्विष्यन्दयन्ति। तैक्ष्ण्याद्विकाशित्वाच्च विच्छिन्दयन्ति। स विषण्णविच्छिन्नो दोषसङ्घातः पारिप्लवः स्नेहाक्तभाजनस्थ इवोदकांजलि रसजन्नणुप्लवण भावादामाशयमागम्योदान प्रणुन्नोऽग्नि वाय्वात्मकत्वादूर्ध्व भाग प्रभावात् च औषधस्योर्ध्वं प्रवर्तते। (अ. सं. सू. २७)

ವಾಂತಿ ಮಾಡಿಸುವ ದ್ರವ್ಯಗಳಿಗೆ ವಮನ ಅಥವಾ ಊರ್ಧ್ವಭಾಗಹರ ದ್ರವ್ಯಗಳೆಂದು ಅನ್ನುವರು. ವಮನ ದ್ರವ್ಯಗಳು ಶರೀರದ ದೋಷಗಳನ್ನು ಊರ್ಧ್ವಭಾಗದ ಮುಖಾಂತರ ಹೊರಗೆ ಹಾಕುವವು. ಉದಾ:- ಮದನಫಲ, ಜೇಷ್ಠಮಧು, ನಿಂಬ, ಜೀಮೂತ (ದೇವದಾಳಿ), ಕೃತವೇಧನ (ಆರಗ್ವಧ), ಹಿಪ್ಪಲಿ, ಕುಟಜ, ಇಕ್ಷ್ವಾಕು, ಯಾಲಕ್ಕಿ, ಧಾಮಾರ್ಗವ. ಕಫ, ಪಿತ್ತಗಳ ವೃದ್ಧಿಯಲ್ಲಿ ಮತ್ತು ಆಮಾಶಯದ ವಿಕಾರಗಳಲ್ಲಿ ಈ ವಮನ ದ್ರವ್ಯಗಳ ಪ್ರಯೋಗವನ್ನು ಮಾಡಬೇಕು.

ವಮನ ದ್ರವ್ಯಗಳು ಅಗ್ನಿ ಮತ್ತು ವಾಯು ಮಹಾಭೂತ ಗುಣ ಪ್ರಾಧಾನ್ಯವುಳ್ಳವಿರುವವು. ಅಗ್ನಿ, ವಾಯು ಮಹಾಭೂತಗಳು ಲಘು ಇರುವದರಿಂದ ಊರ್ಧ್ವಗತಿಯುಳ್ಳವಿರುವವು. ಆದ್ದರಿಂದ ವಮನ ದ್ರವ್ಯಗಳು ಊರ್ಧ್ವಗುಣ ಭೂಯಿಷ್ಠವಿರುವವು. ವಾಮಕ ದ್ರವ್ಯಗಳು ಅಪಕ್ವ ಸ್ಥಿತಿಯಲ್ಲಿದ್ದ ಕಫ, ಪಿತ್ತಗಳನ್ನು ಬಾಯಿಂದ ಹೊರಗೆ ಹಾಕುವವು. ಈ ದ್ರವ್ಯಗಳು ಉಷ್ಣ, ತೀಕ್ಷ್ಣ, ಸೂಕ್ಷ್ಮ, ವ್ಯವಾಯಿ ಮತ್ತು ವಿಕಾಶಿ ಗುಣಗಳುಳ್ಳ

ವಿರುವವು. ಅವು ತಮ್ಮ ಶಕ್ತಿಯಿಂದ ಹೃದಯದಲ್ಲಿ ಸೇರಿ; ಅಲ್ಲಿಂದ ತಮ್ಮಲ್ಲಿಯ ಸೂಕ್ಷ್ಮ ಹಾಗು ವ್ಯವಾಯಿ ಗುಣಗಳಿಂದ ಧಮನಿಗಳ ಮೂಲಕ ಶರೀರದ ತುಂಬ ಪಸರಿಸುವವು. ಮತ್ತು ಆಗ್ನೇಯ ಗುಣದಿಂದ ದೋಷಗಳನ್ನು ದ್ರವ ಮಾಡುವವು. ಹಾಗು ತೀಕ್ಷ್ಣ ಗುಣದಿಂದ ದೋಷಗಳನ್ನು ವಿಚ್ಛಿನ್ನ ಮಾಡುವವು. ಈ ರೀತಿಯಾಗಿ ದ್ರವೀಭೂತ ಮತ್ತು ವಿಚ್ಛಿನ್ನವಾದಂತಹ ವಾತಾದಿ ದೋಷಗಳು ಆಮಾಶಯದ ಕಡೆಗೆ ಬರುವವು. ಆಗ ಅಲ್ಲಿ ಉದಾನ ವಾಯುವು ಪ್ರೇರಿತವಾಗಿ ದೋಷಗಳನ್ನು ಊರ್ಧ್ವ ಭಾಗದಿಂದ ಹೊರಗೆ ಹಾಕುವದು.

ವಮನ ದ್ರವ್ಯಗಳನ್ನು ಕೊಡುವ ಮೊದಲು ಸ್ನಿಗ್ಧ ಆಹಾರ ಕೊಟ್ಟು ಶರೀರದ ದೋಷಗಳನ್ನು ಉತ್ಕ್ಲೇಶಿತಗೊಳಿಸಬೇಕಾಗುವದು. ಕಫದ ಮೇಲೆ ತೀಕ್ಷ್ಣ, ಉಷ್ಣ, ಕಟು ರಸವುಳ್ಳ ಔಷಧಗಳಿಂದ; ಪಿತ್ತದ ಮೇಲೆ ಮಧುರ ಔಷಧಗಳಿಂದ; ವಾತದಿಂದ ಕೂಡಿದ ಕಫಕ್ಕೆ ಸ್ನಿಗ್ಧ, ಅಮ್ಲ, ಲವಣ ಔಷಧಗಳಿಂದ ವಾಂತಿಯನ್ನು ಮಾಡಿಸಬೇಕು. ವಮನ ದ್ರವ್ಯಗಳ ಕಾರ್ಯವು ಸರಿಯಾಗಿ ಆದರೆ ಕ್ರಮವಾಗಿ ಕಫ-ಪಿತ್ತ-ವಾತ ಇವು ವಾಂತಿಯ ಮುಖಾಂತರ ಹೊರಗೆ ಹೋಗುವವು.

ವಿರೇಚನಮ್:—

दोष हरणमधो भागं विरेचन संज्ञकम् । (च. क. २).

विरेचन द्रव्याणि पृथिव्यम्बुगुण भूयिष्ठानि, पृथिव्यापो गुर्व्यः, ता गुरुत्वादधो गच्छन्ति; तस्माद्विरेचनमधोगुण भूयिष्ठमनुमानात् ।

(सु. सू. ४१)

विपक्वं यदपक्वं वा मलादि द्रवतां नयेत् ।
रेचयत्यपि तज्ज्ञेयं रेचनं त्रिवृता यथा ॥ (शा. सं.)

विरेचनं पित्तहराणां श्रेष्ठम् । (च. सू. २५).

पित्ते तु विरेकं श्लेष्म संसृष्टे वा तत्स्थानगते वा श्लेष्मणी इति । अ. सं. २७

तत्रोष्ण तीक्ष्ण सूक्ष्म व्यवायि विकाशीन्यौषधानि स्ववीर्येण हृदयमुपेत्य धमनीरनुसृत्य स्थूलाणुस्रोतोभ्यः केवलं शरीरगतं दोषसंघातमाग्नेयत्वाद्विष्यं-दयन्ति; तैक्ष्ण्यात् विच्छिदयंति, स विच्छिन्नः परिप्लवन् स्नेहभाविते काये स्नेहाक्तभाजनस्थमिव क्षौद्रमसज्जन्ननुप्रवणभावादामाशयमागम्योदान प्रणुन्नोऽग्नि वाय्वात्मकत्वादूर्ध्वं भाग प्रभावात् औषधस्योर्ध्वमुत्क्षिप्यते, सलिल पृथिव्यात्मकत्वादधो भाग प्रभावाच्चौषधस्याधः प्रवर्तते, उभयतश्चो-भय गुणत्वात् इति लक्षणोद्देशः । (च. क. २)

ಯಾವ ದ್ರವ್ಯಗಳು ಮಲಾದಿ ದೋಷಗಳನ್ನು ಗುದ ಮಾರ್ಗದಿಂದ ಹೊರಗೆ ಹಾಕುವವೋ ಅಂಥ ದ್ರವ್ಯಗಳಿಗೆ "ಅಧೋಭಾಗಹರ" ಅಥವಾ "ವಿರೇಚನ"

8

ದ್ರವ್ಯಗಳೆಂದು ಅನ್ನುವರು. ವಿರೇಚನ ದ್ರವ್ಯಗಳು ಪೃಥ್ವಿ ಮತ್ತು ಜಲ ಗುಣ ಭೂಯಿಷ್ಠವಿರುವವು. ಇವೆರಡು ಮಹಾಭೂತಗಳು ಗುರು ಗುಣಗಳುಳ್ಳವಿರುವದರಿಂದ ಹಾಗು ಗುರು ಗುಣವು ಅಧೋಗತಿ ಸ್ವರೂಪವುಳ್ಳದ್ದಿರುವದರಿಂದ; ಇಂಥ ದ್ರವ್ಯ ಗಳಿಂದ ವಿರೇಚನ ಕಾರ್ಯವಾಗುವದು. ವಿರೇಚನ ದ್ರವ್ಯಗಳು ಪಕ್ವ ಅಥವಾ ಅಪಕ್ವ ಮಲವನ್ನು ತೆಳ್ಳಗೆ ಮಾಡಿ ಹೊರಗೆ ಹಾಕುವವು. ಉದಾ:— ತ್ರಿವೃತ್, ಸ್ವರ್ಣಕ್ಷೀರಿ ಇತ್ಯಾದಿ. ಪಿತ್ತನಾಶನದ ಸಲುವಾಗಿ ವಿರೇಚನ ದ್ರವ್ಯಗಳು ಶ್ರೇಷ್ಠವಿರುವವು. ಇವು ಉಷ್ಣ, ತೀಕ್ಷ್ಣ, ಸೂಕ್ಷ್ಮ, ವ್ಯವಾಯಿ, ವಿಕಾಶಿ ಹಾಗು ಪ್ರಭಾವಗಳಿಂದ ಹೃದಯ ವನ್ನು ಸೇರಿ ಅಲ್ಲಿಂದ ಸಂಪೂರ್ಣ ದೇಹದಲ್ಲಿ ಪಸರಿಸುವವು. ದೇಹದ ಸಮಸ್ತ ಭಾಗ ದಲ್ಲಿದ್ದ ದೋಷ ಸಂಘಾತವನ್ನು ತಮ್ಮ ಆಗ್ನೇಯ ಗುಣದಿಂದ ಕರಗಿಸುವವು. ತೀಕ್ಷ್ಣ ಗುಣದಿಂದ ದೋಷಗಳನ್ನು ಭಿನ್ನ ಭಿನ್ನ ಮಾಡುವವು. ಯಾವ ರೀತಿಯಾಗಿ ಸ್ನೇಹ ಲಿಪ್ತ ಪಾತ್ರೆಯಲ್ಲಿ ಜೇನುತುಪ್ಪವು ಹತ್ತುವದಿಲ್ಲವೋ ಅದೇ ಪ್ರಕಾರ ವಿರೇಚನದ ಪೂರ್ವದಲ್ಲಿ ಶರೀರವು ಸ್ನೇಹ ಕರ್ಮವನ್ನು ಹೊಂದಿರುವದರಿಂದ ದೋಷಗಳು ಶರೀರ ದಲ್ಲಿ ನಿಲ್ಲದೆ ಶಾಖೆಯ ಕಡೆಯಿಂದ ಆಮಾಶಯದ ಕಡೆಗೆ ಬರುವವು.

ವಿರೇಚನ ದ್ರವ್ಯಗಳು ತಮ್ಮ ಪ್ರಭಾವದಿಂದ ದೋಷಗಳನ್ನು ಗುದ ಮಾರ್ಗದ ಮುಖಾಂತರ ಹೊರಗೆ ಹಾಕುವವು.

कषाय मधुरैः पित्ते विरेकः कटुकैः कफे । स्निग्धोष्ण लवणैर्वायौ ।

ಕಷಾಯ, ಮಧುರ ರಸದ ದ್ರವ್ಯಗಳಿಂದ ಪಿತ್ತ ರೋಗದಲ್ಲಿ; ಕಟು ರಸದ ದ್ರವ್ಯ ಗಳಿಂದ ಕಫ ರೋಗದಲ್ಲಿ ಹಾಗು ಸ್ನಿಗ್ಧ, ಉಷ್ಣ, ಲವಣ ರಸದ ದ್ರವ್ಯಗಳಿಂದ ವಾತ ರೋಗದಲ್ಲಿ ವಿರೇಚನ ಮಾಡಿಸಬೇಕು.

ವಿರೇಚನಾರ್ಹರು:—ಗುಲ್ಮ, ಮೂಲವ್ಯಾಧಿ, ವಿಸ್ಫೋಟ ವ್ಯಂಗ, ಕಾಮಲಾ, ಜೀರ್ಣಜ್ವರ, ಉದರ, ಕೃತ್ರಿಮವಿಷ, ಛರ್ದಿ, ಪ್ಲೀಹಾ, ಹಲೀಮಕ, ವಿದ್ರಧಿ, ತಿಮಿರ, ಕಾಚ, ಅಭಿಷ್ಯಂದಿ, ಪಕ್ವಾಶಯ ಬೇನೆ, ಯೋನಿ ರೋಗ, ಶುಕ್ರರೋಗ, ಕೃಮಿ, ವಾತರಕ್ತ, ಮಲಾವರೋಧ ಇತ್ಯಾದಿ ರೋಗಗಳಿಂದ ಬಳಲುವವರಿಗೆ ವಿರೇಚನವನ್ನು ಕೊಡಬೇಕು.

ಅನುಲೋಮನಮ್:—

सरोऽनुलोमनः प्रोक्तः। (सु. सू. ४६)
कृत्वा पाकं मलानां यद्भित्त्वा बंधमधो नयेत् ।
तच्चानुलोमनं ज्ञेयं यथा प्रोक्ता हरीतकी ॥ शा. सं.
अनुलोमनो वातमल प्रवर्तनः ।

ಯಾವ ದ್ರವ್ಯಗಳು ಮಲಗಳನ್ನು ಮತ್ತು ದೋಷಗಳನ್ನು ಪಚನ ಮಾಡಿ; ಅವುಗಳ ವಿಬಂಧವನ್ನು ಹೋಗಲಾಡಿಸಿ; ಅವುಗಳನ್ನು ಅಧೋ ಮಾರ್ಗದಿಂದ

ಹೊರಗೆ ಹಾಕುವವೋ ಅಂಥ ದ್ರವ್ಯಗಳಿಗೆ "ಅನುಲೋಮನ" ಇಲ್ಲವೆ "ಸರ" ದ್ರವ್ಯಗಳೆನ್ನುವರು. ಉದಾಃ–ಹರಿತಕಿ. ಇದು ವಾತ, ಮೂತ್ರ, ಪುರೀಷಾದಿಗಳ ಅಪ್ರವೃತ್ತಿಯನ್ನು ದೂರಮಾಡಿ, ಅವುಗಳನ್ನು ಗುದ ಮಾರ್ಗದಿಂದ ಹೊರಗೆ ಹಾಕುವದು.

ಸ್ರಂಸನಮ್:—

पक्तव्यं यदपक्त्वैव श्लिष्टं कोष्ठे मलादिकम् ।
नयत्यधः स्रंसनं तद्यथा स्यात् कृतमालकः ॥ शा. सं.

ಯಾವ ದ್ರವ್ಯಗಳು ಪಕ್ವವಿರಲಿ ಇಲ್ಲವೆ ಅಪಕ್ವವಿರಲಿ ಅಂಥ ಮಲಾದಿಗಳನ್ನು ಕೋಷ್ಠ (ಪಕ್ವಾಶಯ) ದಿಂದ ಹೊರಗೆ ಹಾಕುವವೋ ಅಂಥ ದ್ರವ್ಯಗಳಿಗೆ "ಸ್ರಂಸನ" ದ್ರವ್ಯಗಳೆನ್ನುವರು. ಉದಾಃ–ಆರಗ್ವಧ. ಯಾವ ದ್ರವ್ಯಗಳು ಕೋಷ್ಠದಲ್ಲಿರುವ ಪಚ್ಯಮಾನ ಮಲಾದಿಗಳನ್ನು ಪಚನ ಮಾಡದೇ ಹೊರಗೆ ಹಾಕುವವೋ ಅವುಗಳಿಗೂ "ಸ್ರಂಸನ" ದ್ರವ್ಯಗಳೆನ್ನುವರು.

ಶೋಧನಮ್: –(ಸಂಶೋಧನಮ್)

स्थानाद्बहिर्नयेदूर्ध्वमधश्च मल संचयम् । देह संशोधनं तत् स्याद्देवदाली फलं यथा ॥ शा. सं.

यदीरयेद्बहिर्दोषान्पंचधा शोधनं च तत् ।
निरूहो वमनं काय शिरोरेकोऽस्रविस्रुतिः ॥ अ. हृ. सू. २४
उभयतो भागं वमन विरेचनकरम् । सु सू ४१

तत्रोष्ण तीक्ष्ण सूक्ष्म व्यवायि विकाशीन्यौषधानिस्ववीर्येण हृदयमुपेत्य धमनीरनुसृत्य स्थूलाणुस्रोतोभ्यः केवलं शरीरगतं दोषसंघातमाग्नेयत्वाद् विष्यन्दयन्ति, तैक्ष्ण्यात् विच्छिन्दयन्ति, स विच्छिन्नः परिप्लवन् स्नेहभाविते काये स्नेहाक्तभाजनस्थमिव क्षौद्रमसज्जन्नणु प्रवण भावादामाशयमागम्य (उदान प्रणुन्नोऽग्नि वाय्वात्मकत्वादूर्ध्वभाग प्रभावात् च औषधस्योर्ध्वमुत्क्षिप्यते; सलिल–पृथिव्यात्मकत्वादधो भाग प्रभावाच्चौषधस्याधः प्रवर्तते) उभयतश्चोभय गुणत्वात् । (च. क. १)

मलापहं रोगहरं बलवर्ण प्रसादनम् ।
पीत्वा संशोधनं सम्यगायुषा युज्यते चिरम् ॥ च. सू. १५
बुद्धि-प्रसादं बलमिंद्रियाणां धातुस्थिरत्वं ज्वलनस्य दीप्तिम् ।
चिराच्चपाकं वयसः करोति संशोधनं सम्यगुपास्यमानम् ॥
अ. हृ. सू. १८

ಶರೀರದಲ್ಲಿಯ ಪ್ರಕುಪಿತ ದೋಷಗಳನ್ನು ಅಧೋ ಇಲ್ಲವೆ ಊರ್ಧ್ವ ಭಾಗದಿಂದ ಹೊರಗೆ ಹಾಕುವ ದ್ರವ್ಯಗಳಿಗೆ " ಸಂಶೋಧನ " ಅಥವಾ " ಶೋಧನ " ದ್ರವ್ಯಗಳೆಂದು ಅನ್ನುವರು. ಸಂಶೋಧನ ದ್ರವ್ಯಗಳಿಗೆ " ಉಭಯತೋ ಭಾಗಹರ " ದ್ರವ್ಯಗಳೆಂದು ಅನ್ನುವರು. ಉದಾ:-ದೇವದಾಲಿ ಫಲ. ಶೋಧನವು ನಿರೂಹ, ವಮನ, ವಿರೇಚನ, ಶಿರೋವಿರೇಚನ ಹಾಗು ರಕ್ತ ವಿಸ್ರುತಿ ಎಂದು ಐದು ವಿಧವಾಗಿರುವದು. ಅದರಲ್ಲಿ ಮುಖ್ಯವಾಗಿ ಶೋಧನ ಅಥವಾ ಸಂಶೋಧನವೆಂದರೆ ವಮನ ಮತ್ತು ವಿರೇಚನವೆಂದು ಗ್ರಹಣ ಮಾಡಬೇಕು. ಯಾಕಂದರೆ ಉಭಯತೋ ಭಾಗಹರ ದ್ರವ್ಯಗಳು ಅಧೋ ಮಾರ್ಗ (ವಿರೇಚನ ಮಾರ್ಗ) ಇಲ್ಲವೆ ಊರ್ಧ್ವ ಮಾರ್ಗ (ವಮನ ಮಾರ್ಗ) ಗಳಿಂದ ಶರೀರದಲ್ಲಿಯ ಕುಪಿತ ದೋಷಗಳನ್ನು ಹೊರಗೆ ಹಾಕುವವು.

ಈ ದ್ರವ್ಯಗಳಾದರೂ ಉಷ್ಣ, ತೀಕ್ಷ್ಣ, ಸೂಕ್ಷ್ಮ, ವ್ಯವಾಯಿ, ವಿಕಾಶಿ ಗುಣಗಳುಳ್ಳವಿರುವವು. ಇವು ತಮ್ಮ ಶಕ್ತಿ ಪ್ರಾಬಲ್ಯದಿಂದ ಹೃದಯವನ್ನು ಸೇರಿ ಅಲ್ಲಿಂದ ಅವು ತಮ್ಮ ಸೂಕ್ಷ್ಮ ಮತ್ತು ವ್ಯವಾಯಿ ಗುಣಗಳ ಮೂಲಕ ಧಮನಿಗಳಲ್ಲಿ ಸೇರಿ ಶರೀರದ ತುಂಬ ಪಸರಿಸುವವು. ಮತ್ತು ತೀಕ್ಷ್ಣ ಗುಣದಿಂದ ದೋಷಗಳನ್ನು ವಿಚ್ಛಿನ್ನ ಮಾಡುವವು. ಶೋಧನ ಚಿಕಿತ್ಸೆಯ ಮೊದಲು ಸ್ನೇಹನ ಕರ್ಮ ಮಾಡು ಮಾಡುತ್ತೇವಾದ್ದರಿಂದ ಶಾಖಾಗತ ದೋಷಗಳು ಕೋಷ್ಠದ ಕಡೆಗೆ ಬರುವವು. ಆಗ ಅಪಾನ ವಾಯು ಪ್ರೇರಿತವಾದರೆ ಅಧೋ ಮಾರ್ಗದಿಂದ; ಉದಾನವಾಯು ಪ್ರೇರಿತವಾದರೆ ಊರ್ಧ್ವಭಾಗದಿಂದ; ಎರಡೂ ವಾಯುಗಳು ಒಂದೇ ಕಾಲಕ್ಕೆ ಪ್ರೇರಿತವಾದರೆ ಎರಡೂ ಮಾರ್ಗಗಳಿಂದ ದೋಷಗಳು ಹೊರಗೆ ಹಾಕಲ್ಪಡುವವು. ಆದ್ದರಿಂದ ಶೋಧನ ದ್ರವ್ಯಗಳು ಪೃಥ್ವಿ, ಜಲ, ಅಗ್ನಿ ಮತ್ತು ವಾಯು ಮಹಾಭೂತ ಪ್ರಾಧಾನ್ಯವುಳ್ಳವಿರುವವು. ಇವಾದರೂ ತಮ್ಮ ಪ್ರಭಾವದಿಂದಲೇ ಕಾರ್ಯ ಮಾಡುವವು.

ಶೋಧನದ ಮಹತ್ವ:– ಸಂಶೋಧನವು ಪ್ರಕುಪಿತ ದೋಷಗಳಾದ ವಾತ, ಪಿತ್ತ, ಕಫ, ಮೂತ್ರ ಮತ್ತು ಪುರೀಷ ಇತ್ಯಾದಿಗಳನ್ನು ಹೊರಗೆ ಹಾಕುವದು. ರೋಗ ನಾಶಮಾಡುವದು. ಶರೀರದ ಬಲ, ವರ್ಣಗಳನ್ನು ಹೆಚ್ಚಿಸುವದು. ಮತ್ತು ಆಯುಷ್ಯದ ವೃದ್ಧಿಯಾಗುವದು. ಶೋಧನ ಕರ್ಮದಿಂದ ಬುದ್ಧಿಯ ವಿಕಾಸವಾಗುವದು. ಇಂದ್ರಿಯಗಳಿಗೆ ಬಲ ಸಿಗುವದು. ಧಾತುಗಳಿಗೆ ಸ್ಥಿರತಾ ಉಂಟಾಗುವದು, ಅಗ್ನಿ ದೀಪ್ತವಾಗುವದು, ಹಾಗು ವಾರ್ಧಕ್ಯವನ್ನು ಕಳೆಯುವದು.

ಛೇದನವು:–

> श्लिष्टान् कफादिकान् दोषानुन्मूलयति यद्बलात् ।
> छेदनं तद्यथा क्षारा मरिचानि शिलाजतु ॥ शा. सं.

ವಿಕೃತ ದೋಷ, ಮಲಗಳನ್ನು ಛಿನ್ನ ಭಿನ್ನ ಮಾಡಿ ಶರೀರದಿಂದ ಹೊರಗೆ ಹಾಕುವ ದ್ರವ್ಯಗಳಿಗೆ ಛೇದನ ದ್ರವ್ಯಗಳೆಂದು ಅನ್ನುವರು. ಉದಾ:– ಕ್ಷಾರ, ಮೆಣಸು, ಶಿಲಾಜತು ಇತ್ಯಾದಿ. ಈ ದ್ರವ್ಯಗಳು ಸಂಚಿತವಾದ ಹಾಗು ಮೆತ್ತಿಕೊಂಡಂಥ ಕಫಾದಿ ದೋಷಗಳನ್ನು ತಮ್ಮ ಪ್ರಭಾವದಿಂದ ನಿರ್ಮೂಲ ಮಾಡುತ್ತವೆ.

ರಸಾಯನವರ್ಗಃ—

रसायनं च तज्ज्ञेयं यज्जराव्याधि नाशनम् ।
यथाऽमृता रुदन्ती च गुग्गुलुश्च हरीतकी ॥ (शा. सं.)
दीर्घमायुः स्मृतिं मेधामारोग्यं तरुणं वयः ।
प्रभा वर्ण स्वरौदार्यं देहेंद्रिय बलं परम् ।
वाक्सिद्धिं प्रणतिं कांतिं लभते ना रसायनात् ।
लाभोपायो हि शस्तानां रसादीनां रसायनम् । (च. चि. १)
रसानां रस रक्तादीनामयनमाप्यायनं रसायनम् ।
अथवा रसानां रस वीर्य विपाकादीनां आयुः प्रभृति कारणानामायनं
विशिष्ठ लाभोपायो रसायनम् । (ड.)
यद्रव्यं जराव्याधि नाशनं भवति तद्रसायनं ज्ञेयम् ।
रसादीनां धातुनामयनमाप्यायनरूपं रसायनम् । (आ.)

ಯಾವ ದ್ರವ್ಯದಿಂದ ರಸ, ರಕ್ತಾದಿ ಧಾತುಗಳು, ಸ್ಮೃತಿ, ಮೇಧಾ, ಆರೋಗ್ಯ, ತಾರುಣ್ಯ, ಪ್ರಭಾ, ವರ್ಣ, ಸ್ವರ, ವಾಕ್‌ಸಿದ್ಧಿ, ಲೋಕವಂದನೀಯತಾ, ಕಾಂತಿ ಮತ್ತು ಶರೀರ, ಇಂದ್ರಿಯಗಳಿಗೆ ಉತ್ತಮ ಬಲ ಬರುವದೋ ಅಂಥ ದ್ರವ್ಯಕ್ಕೆ ರಸಾಯನ ದ್ರವ್ಯವೆನ್ನುವರು. ಹಾಗು ಈ ಕ್ರಿಯೆಗೆ ರಸಾಯನ ಕ್ರಿಯೆಯೆಂದು ಅನ್ನುವರು.

ಯಾವ ದ್ರವ್ಯಗಳು ಮುಪ್ಪನ್ನು ಹಾಗು ವ್ಯಾಧಿಯನ್ನು ದೂರ ಮಾಡುವವೋ ಅವುಗಳಿಗೆ ರಸಾಯನ ದ್ರವ್ಯಗಳೆಂದು ಅನ್ನುವರು. ಉದಾಃ-- ಅಮೃತ ಬಳ್ಳಿ, ರುದ್ರ ವಂತಿ; ಗುಗ್ಗುಳು, ಹರಿತಕಿ ಇತ್ಯಾದಿ.

ರಸಾಯನವು ಅಮೃತದಂತೆ ಇದ್ದು ದೇವತೆಗಳಿಗೂ ಹಿತಕರವಿರುವದು. ಅದರ ಪ್ರಭಾವ ಅಂಚಿತ್ಯ ಮತ್ತು ಅದ್ಭುತವಿರುವದು. ಇದರಿಂದ ಆಯುಷ್ಯ ಮತ್ತು ಆರೋಗ್ಯ ಇವುಗಳ ವೃದ್ಧಿಯಾಗುವದು. ಮುಪ್ಪು ಬರುವದಿಲ್ಲ, ನಿದ್ರೆ, ದಣಿವು, ಆಲಸ್ಯ ಮತ್ತು ಅಶಕ್ತತಾ ಇವು ದೂರವಾಗುವವು. ಇದು ವಾತ, ಪಿತ್ತ, ಕಫ ದೋಷಗಳನ್ನು ಸಮಸ್ಥಿತಿ ಯಲ್ಲಿಡುವದು. ಶರೀರ ದೃಢವಾಗುವದು, ಶಿಥಿಲ ಮಾಂಸ ಗಟ್ಟಿಯಾಗುವವು, ಜಠ ರಾಗ್ನಿಯು ಪ್ರದೀಪ್ತವಾಗುವದು. ತೇಜ, ವರ್ಣ ಮತ್ತು ಸ್ವರ ಉತ್ತಮವಾಗುವವು.

ಅನೇಕ ಕಾರಣಗಳಿಂದ ರೋಗೋತ್ಪತ್ತಿಯಾಗುತ್ತಿದ್ದು; ಅದರಿಂದ ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥ್ಯ ಉಳಿಯುವದಿಲ್ಲ. ಓಜ ಕ್ಷೀಣವಾಗುವದು. ಆಗ ನಿಷಿದ್ಧ ಆಹಾರ, ವಿಹಾರ ಬಿಟ್ಟು ರಸಾಯನ ಸೇವನೆಯನ್ನು ವಿಧಿವತ್ ಆಚರಿಸಬೇಕು.

ರಸಾಯನ ಪ್ರಕಾರಃ—

ಚರಕ ಮತ್ತು ವಾಗ್ಭಟರ ಪ್ರಕಾರ ರಸಾಯನವು ದ್ವಿ ವಿಧವಿದೆ. 1) ಕುಟ ಪ್ರಾವೇಶಿಕ 2) ವಾತಾತಪಿಕ.

1) **ಕುಟಿ ಪ್ರಾವೇಶಿಕಃ**– ರಾಜವೈದ್ಯ, ಬ್ರಾಹ್ಮಣ, ಸಾಧು, ಪುಣ್ಯಾತ್ಮ ಜನರು ಇರುವ ಸ್ಥಳದಲ್ಲಿ ಪೂರ್ವಕ್ಕೆ ಇಲ್ಲವೆ ಉತ್ತರಕ್ಕೆ ಮುಖಮಾಡಿ ಕುಟಿ ಪ್ರಾವೇಶಿಕ ಕಟ್ಟಬೇಕು. ಅದರ ಗೋಡೆಗಳು ದಪ್ಪವಿರಬೇಕು, ಅಲ್ಲಿ ಸ್ತ್ರೀಯರ ಸಂಪರ್ಕವಿರಬಾರದು, ನಂತರ ಶುಭ ಮುಹೂರ್ತ ನೋಡಿ ಕಾಮ, ಕ್ರೋಧಾದಿ ಸರ್ವ ಮಾನಸಿಕ ವಿಕಾರ ಬಿಟ್ಟು ಕುಟಿ ಪ್ರವೇಶ ಮಾಡಬೇಕು. ಕುಟಿ ಪ್ರವೇಶ ಮಾಡಿದನಂತರ ವಿಧಿಪೂರ್ವಕ ವಮನ, ವಿರೇಚನಾದಿಗಳಿಂದ ಶರೀರದ ಶೋಧನ ಮಾಡಬೇಕು. ನಂತರ ಶೋಧನದ ಯೋಗದಿಂದ ಬಂದಂತಹ ದಣಿವು ದೂರವಾದನಂತರ ರಸಾಯನದ ಪ್ರಯೋಗ ಆರಂಭಿಸಬೇಕು. ಈ ರಸಾಯನವು ವಾತಾತಪಿಕಕ್ಕಿಂತ ಶ್ರೇಷ್ಠವಿರುವದು.

2) **ವಾತಾತಪಿಕಃ**– ವಾತ=ಗಾಳಿ, ಆತಪ=ಬಿಸಿಲು.

ಈ ರಸಾಯನ ವಿಧಿಯಲ್ಲಿ ಗಾಳಿ ಮತ್ತು ಬಿಸಿಲಿನ ಸಂಬಂಧವಿದ್ದರೂ ನಡೆಯುವದು. ಆದ್ದರಿಂದ ಇದು ಕುಟಿ ಪ್ರಾವೇಶಿಕಕ್ಕಿಂತ ಕಡಿಮೆ ಶ್ರೇಷ್ಠವಿರುವದು.

ಸುಶ್ರುತನ ಪ್ರಕಾರ ರಸಾಯನವು ತ್ರಿವಿಧವಿದೆ.

1) ಕಾಮ್ಯ–ಬುದ್ಧಿ ಬೆಳವಣಿಗೆಯ ಸಲುವಾಗಿ. ಉದಾಃ–ಬ್ರಾಹ್ಮೀರಸಾಯನ.
2) ನೈಮಿತ್ತ್ಯಃ–ವ್ಯಾಧಿನಾಶನಾರ್ಥ. ಉದಾಃ–ಶಿಲಾಜತು.
3) ಅಜಸ್ರಿಕ್:– ಆಯುಷ್ಯವರ್ಧನದ ಸಲುವಾಗಿ. ಉದಾಃ–ದುಗ್ಧ, ಮಧು, ಶತಾವರಿಘೃತ.

ರಸಾಯನ ದ್ರವ್ಯ:– ಹರಿತಕಿ, ಆಮಲಕಿ, ಗುಡೂಚಿ, ಮಂಡೂಕಪರ್ಣಿ, ವಚಾ, ಭಲ್ಲಾತಕ, ಪಿಪ್ಪಲಿ, ಯಷ್ಟಿಮಧು, ಶಿಲಾಜತು, ಬ್ರಾಹ್ಮೀ, ಶತಾವರಿ, ವಿದಾರಿ, ಜೀವಂತಿ, ಪುನರ್ನವಾ, ಮೇದಾ, ಮಹಾಮೇದಾ ಇತ್ಯಾದಿ.

ವಾಜೀಕರಣಮ್:— (ವೃಷ್ಯಮ್)

वाजीवातिबलो येन यात्यप्रतिहतः स्त्रियः ।
भवत्यतिप्रियः स्त्रीणां येन येनोपचीयते ॥
तद्वाजीकरणं, तद्धि देहस्योजस्करं परम् ।। (अ. हृ. उ. ४०)
अ. सं. उ. ४०)

येन नारीषु सामर्थ्यं वाजीवल्लभते नरः ।
भवेच्चाभ्यधिकं येन वाजीकरणमेव तत् ॥ (च. चि. २)
सेव्यमानो यदौचित्याद्वाजीवात्यर्थ वेगवान् ।
नारीस्तर्पयते तेन वाजीकरणमुच्यते ॥ (सु. चि. २६)

ಯಾವುದರ ಬಲದಿಂದ ಪುರುಷನು ಕುದುರೆಯಂತೆ ಅತಿಶಯ ಬಲವಾನನಾಗಿ ದಣಿಯದೇ ಸ್ತ್ರೀಯ ಸಂಭೋಗ ಮಾಡುವನೋ ಮತ್ತು ಯಾವುದರಿಂದ ಶರೀರದ ಬಲ ಬೆಳೆಯುವದೋ ಅದಕ್ಕೆ 'ವಾಜೀಕರಣ' ಅನ್ನುವರು. ಇದು ಶರೀರಕ್ಕೆ ಅತಿಶಯ ಶಕ್ತಿ ಕೊಡುವದು.

ಸಂಯಮಿ ಅಥವಾ ಜಿತೇಂದ್ರಿಯ ಪುರುಷನು ಸತತ ವಾಜೀಕರಣದ ಸೇವನ ಮಾಡಬೇಕು. ಧರ್ಮ, ಅರ್ಥ, ಪ್ರೀತಿ ಮತ್ತು ಕೀರ್ತಿ ಇವು ವಾಜೀಕರಣ ಮಾಡುವವರ ಆಧೀನ ಇರುವವು.

ವಾಜೀಕರಣ ದ್ರವ್ಯಗಳುಃ—ಕಪಿಕಚ್ಛು, ಅಶ್ವಗಂಧಾ, ಘೃತ, ಕ್ಷೀರ, ಇಕ್ಷು, ಜೀವಂತಿ, ಜೀವಕ, ಶತಾವರಿ, ಮುಸಲಿ, ಗೋಕ್ಷುರ, ಶಾಲ್ಮಲಿ ಅಂಟು, ವಿದಾರಿ, ಕಂಟಕಾರಿ, ಬಲಾ, ರಾಸ್ನಾ, ಪುನರ್ನವಾ ಇತ್ಯಾದಿ.

ವ್ಯವಾಯಿಃ—

पूर्वं व्याप्याखिलं कायं ततः पाकं च गच्छति ।
व्यवायि, तद्यथा भंगा फेनं चाहिसमुद्भवम् ॥ (शा. सं. ४)
व्यवायि चाखिलं देहं व्याप्य पाकाय कल्पते । (सु. सू. ४६)
अपक्व एवाखिलं देहं व्याप्नोति पश्चान्मद्यविषवत् पाकं याति । (ड)

ಯಾವ ದ್ರವ್ಯವು ತನ್ನ ಪ್ರಭಾವದಿಂದ ಸರ್ವ ಶರೀರದಲ್ಲಿ ವ್ಯಾಪ್ತವಾಗಿ; ನಂತರ ಜಾಠರಾಗ್ನಿಯಿಂದ ಪಚನವಾಗುತ್ತದೆಯೋ ಅದಕ್ಕೆ "ವ್ಯವಾಯಿ" ಎನ್ನುವರು. ಈ ವ್ಯವಾಯಿ ದ್ರವ್ಯವು ಜಾಠರಾಗ್ನಿಯಿಂದ ಪಚನವಾಗುವದಕ್ಕಿಂತ ಮೊದಲೇ ತನ್ನ ಪ್ರಭಾವದಿಂದ ಸರ್ವ ಶರೀರವನ್ನು ವ್ಯಾಪಿಸಿ ತನ್ನ ಗುಣ ಕರ್ಮಗಳನ್ನು ತೋರಿಸುತ್ತದೆ. ಉದಾಃ- ಭಂಗಾ, ಅಹಿಫೇನ ಇತ್ಯಾದಿ.

ವಿಕಾಶಿಃ—

संधिबंधांस्तु शिथिलान् यत् करोति विकाशि तत् ।
विश्लिष्यौजश्च धातुभ्यो, यथा क्रमुककोद्रवाः ॥ (शा. सं. ४)
विकासी विकसन्नेवं धातुबंधान् विमोक्षयेत् । (सु. सू. ४६)
यद्द्रव्यं संधिबंधान् शिथिलीभूतान् करोति तद्विकाशि बोद्धव्यम् ।

ಯಾವ ದ್ರವ್ಯವು ಪಚನವಾಗುವದಕ್ಕಿಂತ ಮೊದಲೇ ಸಂಧಿ ಬಂಧಗಳನ್ನು ಶಿಥಿಲ ಮಾಡುತ್ತದೆಯೋ ಮತ್ತು ಧಾತುಗಳಿಂದ ಓಜವನ್ನು ಬೇರೆಮಾಡಿ ಧಾತುಗಳಲ್ಲಿ ಶೈಥಿಲ್ಯವನ್ನುಂಟು ಮಾಡುತ್ತದೆಯೋ ಅದಕ್ಕೆ 'ವಿಕಾಶಿ' ಎನ್ನುವರು. ಸಂಧಿ ಶಿಥಿಲವಾಗುವದರಿಂದ ದಣಿವು ಉಂಟಾಗುತ್ತದೆ. ಹಾಗು ಧಾತುಗಳಿಂದ ಓಜವು ಬೇರ್ಪಡುವದರಿಂದ ಓಜಕ್ಷಯವಾಗುವದು. ಕ್ರಮುಕ (ಅಡಿಕೆ) ಮತ್ತು ಕೋದ್ರವ (ಧಾನ್ಯ ವಿಶೇಷ) ಇವು ವಿಕಾಶಿ ಕಾರ್ಯವನ್ನು ಮಾಡುವ ದ್ರವ್ಯಗಳು.

ಪ್ರಮಾಥಿಃ—

निज वीर्येण यद्द्रव्यं स्रोतोभ्यो दोष संचयम् ।
निरस्यति प्रमाथि स्यात्, तद्यथा मरिचं वचा ॥ (शा. सं.)

यद्द्रव्यं निजवीर्येण स्वप्रभावेण, स्रोतोभ्यो रसवाहि सिरा मार्गेभ्यो, दोषसंचयं निरस्यति दूरीकरोति, तत् प्रमाथि स्यात् । (का)

ಯಾವ ದ್ರವ್ಯವು ತನ್ನಲ್ಲಿಯ ಶಕ್ತಿಯಿಂದ ರಸ, ರಕ್ತಾದಿಗಳನ್ನು ವಹನ ಮಾಡುವ ಸಿರೆಗಳಿಂದ ಮತ್ತು ಕರ್ಣ, ಮುಖ, ನಾಸಾ ಇತ್ಯಾದಿ ಛಿದ್ರಗಳಿಂದ ದೋಷಗಳ ಸಂಚಯವನ್ನು ದೂರ ಮಾಡುವದೋ ಅದಕ್ಕೆ ' ಪ್ರಮಾಥಿ ' ಎನ್ನುವರು. ಈ ದ್ರವ್ಯಗಳು ತನ್ನಲ್ಲಿಯ ವೀರ್ಯದಿಂದ ಮತ್ತು ಪ್ರಭಾವದಿಂದ ಸ್ರೋತಸ್ಸುಗಳಲ್ಲಿ ಸಂಚಿತವಾದ ದೋಷ ಸಂಚಯವನ್ನು ದೂರ ಮಾಡುವವು. ಉದಾಃ–ಕರಿಮೆಣಸು, ಬಜೆ ಇತ್ಯಾದಿ.

ಯೋಗವಾಹಿಃ—

गृह्णाति योगवाहि द्रव्यं संसर्गि वस्तु गुणान् । (भा)

योगवाहि परं मधु । (च सू. २८)

एतदेव हि योगवाहित्वं यत् स्वगुणापरित्यागेनांशेन साहश्यात् परस्य शक्तिपूरणम् । (इ)

योगवाही परं वायुः संयोगादुभयार्थकृत् ।
उष्णकृत्तेजसा युक्तः शीतकृत् सोमसंयुता ॥

ಯಾವ ದ್ರವ್ಯವು ತನ್ನಲ್ಲಿಯ ಗುಣಗಳನ್ನು ಬಿಡುವದಿಲ್ಲವೋ ಮತ್ತು ಅದರ ಸಂಸರ್ಗದಲ್ಲಿ ಬರುವ ದ್ರವ್ಯದ ಗುಣಗಳನ್ನು ಹೆಚ್ಚಿಸುವದೋ ಅಂಥ ದ್ರವ್ಯಕ್ಕೆ ' ಯೋಗವಾಹಿ ' ಎನ್ನುವರು. ಉದಾಃ- ಜೇನುತುಪ್ಪ, ಪಾರಜ ಇತ್ಯಾದಿ. ತ್ರಿದೋಷಗಳಲ್ಲಿ ವಾತದೋಷವು ಯೋಗವಾಹಿ ಇರುತ್ತದೆ.

ಸುಶ್ರುತೋಕ್ತ ರೋಗನಾಶಕ ಗಣಗಳು

(ವ್ಯಾಧಿ ಪ್ರತ್ಯಾನಿಕಗಣ)

ವಿದಾರಿಗಂಧಾದಿಗಣಃ –

तद्यथा–विदारिगन्धा विदारि विश्वदेवा सहदेवा श्वदंष्ट्रा पृथक्पर्णी शतावरी सारिवा कृष्णसारिवा जीवकर्षभकौ महासहा क्षुद्रसहा बृहत्यौ पुनर्नवैरंडो हंसपादी वृश्चिकाल्यृषभा चेति ॥

(सु सू. ३८)

ವಿದಾರಿ ಗಂಧಾದಿ ಗಣದಲ್ಲಿಃ-ವಿದಾರಿ ಗಂಧಾ (ಶಾಲಿಪರ್ಣಿ), ವಿದಾರಿ(ಭೂಕೂಷ್ಮಾಂಡ), ವಿಶ್ವದೇವಾ (ನಾಗಬಲಾ), ಸಹದೇವಾ (ಹಳದಿ ಹೂವಿನಬಲಾ), ಶ್ವದಂಷ್ಟ್ರಾ (ಗೋಕ್ಷುರ), ಪೃಥಕ್ ಪರ್ಣಿ, ಶತಾವರಿ, ಸಾರಿವಾ (ಅನಂತಮೂಲ), ಕೃಷ್ಣ ಸಾರಿವಾ

ಜೀವಕ, ಋಷಭಕ, ಮಹಾಸಹಾ (ಮಾಷಪರ್ಣಿ), ಕ್ಷುದ್ರಸಹಾ (ಮುದ್ಗಪರ್ಣಿ), ಬೃಹತಿ ದ್ವಯ, ಪುನರ್ನವಾ, ಏರಂಡ, ಹಂಸಪಾದಿ, ವೃಶ್ಚಿಕಾ, ಋಷಭಿ ಮೊದಲಾದವು ಗಳಿರುವವು.

ಗುಣಕರ್ಮಃ—

त्रिदारिगंधादिरयं गणः पित्तानिलापहः ।
शोष गुल्माङ्गमर्दोर्ध्वश्वास कास विनाशनः ॥ ५ ॥ सु. सू.

ಈ ಗಣವು ವಾತ ಮತ್ತು ಪಿತ್ತ ಪ್ರಕೋಪವನ್ನು ನಾಶಗೊಳಿಸುತ್ತದೆ. ಹಾಗು ರಾಜ ಯಕ್ಷ್ಮಾ, ಗುಲ್ಮ, ಅಂಗಮರ್ದ, ಊರ್ಧ್ವಶ್ವಾಸ ಮತ್ತು ಕಾಶನಾಶಕವಿರುವದು.

ಆರಗ್ವಧಾದಿ ಗಣಃ—

आरग्वध मदन गोपघोंटा कंटकी कुटज पाठा पाटला मूर्वा इन्द्रयव सप्तपर्ण निंब कुरुंटक दासीकुरुंटक गुडूची चित्रक शार्ङ्गष्टा करंजद्वय पटोल किराततिक्तकानि सुषवी चेति ॥ ६ ॥ सु. सू.

ಆರಗ್ವಧಾದಿ ಗಣದಲ್ಲಿಃ- ಆರಗ್ವಧ (ಕಕ್ಕೇಕಾಯಿ), ಮದನ (ಮಗ್ಗಾರೆಕಾಯಿ), ಗೋಪ ಘೊಂಟಾ (ಅಡಿಕೆಯ ಒಂದು ಭೇದ, ಹಾಲುಮಾಣಿಕ), ಕಂಟಕೀ (ಬಾರಿಗಿಡ), ಕುಟಜ (ಕೊಡಸಿಗ), ಪಾಠಾ (ಅಗಳು ಹುಂಬಿ), ಪಾಟಲಾ, ಮೂರ್ವಾ, ಇಂದ್ರಯವ (ಕೊಡಸಿ ಗನ ಬೀಜ), ಸಪ್ತಪರ್ಣ, ನಿಂಬ, ಕುರುಂಟಕ, ದಾಸಿಕುರುಂಟಕ, ಗುಡೂಚಿ, ಚಿತ್ರಕ, ಶಾಂರ್ಗಷ್ಟಾ (ಕಾಕಜಂಘಾ), ಕರಂಜದ್ವಯ, ಪಟೋಲ, ಕಿರಾತತಿಕ್ತ, ಸುಷವಿ (ಅಷವಿ ಹಾಗಲ) ಇವು ಆರಗ್ವಧಾದಿ ಗಣದಲ್ಲಿ ಬರುತ್ತವೆ.

ಗುಣಕರ್ಮಃ—

आरग्वधादिरित्येष गणः श्लेष्मविषापहः ।
मेहकुष्ठ ज्वर वमीकंडूघ्नो व्रण शोधनः ॥ ७ ॥ (सु. सू.)

ಎಲ್ಲ ಕಫ ರೋಗಗಳು, ವಿಷ ರೋಗಗಳು, ಪ್ರಮೇಹ, ಕುಷ್ಠ, ಜ್ವರ, ವಮನ, ಕಂಡು, ಮತ್ತು ವ್ರಣ ಶೋಧನ ಕಾರ್ಯವನ್ನು ಆರಗ್ವಧಾದಿ ಗಣವು ಮಾಡುವದು.

ವರುಣಾದಿಗಣಃ—

वरुणार्त्तगल शिग्रु मधुशिग्र तर्कारी मेषश्रृंगी पूतिक नक्तमाल मोरटाग्निमन्थ सैरेयकद्वय बिम्बी वसुक वसिर चित्रक शतावरी बिल्वाजश्रृंगी दर्भा बृहतीद्वयंचेति ॥८॥
(सु. सू.)

ವರುಣಾದಿ ಗಣದಲ್ಲಿಃ- ವರುಣ, ಆರ್ತಗಲ (ಮತ್ತಿ ಮರ), ಶಿಗ್ರು (ನುಗ್ಗೆ), ಮಧು ಶಿಗ್ರು (ಕೆಂಪು ನುಗ್ಗೆ), ತರ್ಕಾರಿ (ಜಯಂತಿ, ತಗ್ಗಿ ಗಿಡ), ಮೇಷಶೃಂಗಿ, ಪೂತಿಕ (ಹುಲಗಲಿ), ನಕ್ತಮಾಲ, ಮೋರಟ (ಮೂರ್ವಾ), ಅಗ್ನಿಮಂಥ, ರಕ್ತ ಸೈರೇಯಕ, ಪೀತ ಸೈರೇ

ಆಸ್ಫೋತ, ಬಿಂಬಿ (ತೊಂಡೆ), ವಸುಕ, ವಶಿರ (ಉತ್ತರಾಣಿ), ಚಿತ್ರಕ, ಶತಾವರಿ, ಬಿಲ್ವ, ಅಜಶೃಂಗಿ (ಆಡಿಬಜೆ), ದರ್ಭೆ, ಬೃಹತಿ ದ್ವಯ (ಹೆಗ್ಗುಳ್ಳ, ನೆಲಗುಳ್ಳ).

ಗುಣಕರ್ಮ:—

वरुणादिर्गणो ह्येष कफमेदो निवारणः ।

विनिहन्ति शिरःशूल गुल्माभ्यन्तरविद्रधीन् ॥ १ ॥ सु. सू.

ವರುಣಾದಿ ಗಣವು ಕಫ ಮತ್ತು ಮೇದನಾಶಕವಿದ್ದು, ಶಿರಃಶೂಲ, ಗುಲ್ಮ, ಅಂತಃ ವಿದ್ರಧಿಗಳನ್ನು ನಾಶ ಮಾಡುವದು.

ವೀರತರ್ವಾದಿ ಗಣ:—

वीरतरु सहचरद्वय दर्भवृक्षादनी गुंद्रानल कुश काशाश्मभेदकाग्निमन्थ मोरट वसुक वसिर भल्लूक कुरंटकेंदीवर कपोतवंका: श्वदंष्ट्रा चेति ॥ २० ॥ (सु. सू.)

ವೀರತರ್ವಾದಿ ಗಣದಲ್ಲಿ:— ವೀರತರು (ಅರ್ಜುನ), ಸಹಚರದ್ವಯ (ಬಿಳಿ ಮತ್ತು ನೀಲಿ ಮುಳ್ಳಜಾಜಿ), ದರ್ಭ, ವೃಕ್ಷಾದನಿ (ಬದನಿಕೆ), ಗುಂದ್ರಾ (ಹುಲ್ಲಿನ ಜಾತಿ), ನಲ (ದೇವನಲ), ಕುಶ (ಸಣ್ಣ ದರ್ಭೆ), ಕಾಶ (ವಿಶ್ವಾಮಿತ್ರ ದರ್ಭೆ), ಅಶ್ಮಭೇದಕ (ಪಾಷಾಣ ಭೇದ), ಅಗ್ನಿಮಂಥ (ನರುವಲ), ಮೋರಟ (ಮೂರ್ವಾ), ವಸುಕ (ಬಕಪುಷ್ಪ), ವಸಿರ (ಉತ್ತರಾಣಿ), ಭಲ್ಲೂಕ (ಶ್ಯೋನಾಕ), ಕುರಂಟಕ (ನೀಲಿ ಹೂವಿನ ಮುಳ ಜಾಜಿ), ಇಂದೀವರ (ನೀಲಕಮಲ), ಕಪೋತವಂಕ (ಬ್ರಾಹ್ಮಿ), ಶ್ವದಂಷ್ಟ್ರಾ (ಗೋಕ್ಷುರ).

ಗುಣಕರ್ಮ:—

वीरतर्वादिरित्येष गणो वातविकारनुत ।

अश्मरीशर्करा मूत्रकृच्छ्राघातरुजापहः ॥ २२ ॥ (सु. सू.)

ಈ ಗಣವು ವಾತವಿಕಾರಗಳನ್ನು ನಾಶಮಾಡುವದು. ಮೂತ್ರಾಶ್ಮರಿ, ಮೂತ್ರಶರ್ಕರಾ ಮೂತ್ರಕೃಚ್ಛ್ರ, ಮೂತ್ರಾಘಾತ ರೋಗಗಳನ್ನು ನಾಶಮಾಡುವದು.

ಸಾಲಸಾರಾದಿ ಗಣ:—

सालसाराजकर्ण खदिर कदर कालस्कंध, क्रमुक भूर्ज मेषश्रृंगी तिनिश चंदन कुचंदन शिंशपा शिरीषासनधवार्जुन ताल शाक नक्तमाल पूतीकाश्वकर्णागुरुणि कालीयकं चेति ॥ सु. सू. ३८

ಸಾಲಸಾರಾದಿ ಗಣದಲ್ಲಿ:— ಸಾಲಸಾರ (ಸರ್ಜರಸ), ಅಜಕರ್ಣ (ಶಾಲಭೇದ), ಖದಿರ (ಕಗ್ಗಲಿ, ಖೈರ), ಕದರ (ಸಣ್ಣ ಕಗ್ಗಲಿ ಅಥವಾ ಬಿಳೀ ಕಗ್ಗಲಿ), ಕಾಲಸ್ಕಂಧ (ಅರಿಮೇದ), ಕ್ರಮುಕ (ಅಡಿಕೆಗಿಡ), ಭೂರ್ಜ (ಭುಜಪತ್ರೆ ಗಿಡ, ಭೋಜಪತ್ರ).

ಮೇಷಶೃಂಗಿ (ಮೇಢಾಸಿಂಗಿ, ಚೇಳುಕೊಂಡಿ, ಗೆರಸೇಹಂಬು-ಗುಡಮಾರ್), ತಿನಿಶ (ಸಾದನ, ತೇರಿಗೆ ಹಾಕುವ ಅಚ್ಚಿನಮರ), ಚಂದನ (ಬಿಳಿ, ಕೆಂಪು ಚಂದನ), ಕುಚಂದನ (ಚಂದನ,ಅಗುರು), ಶಿಂಶಪಾ (ಬೀಟೆಮರ), ಶಿರೀಷ (ಬಾಗೆ ಮರ, ಸಿರಸಲ), ಅಸನ (ಕೆಂಪು ಹೊನ್ನೆ), ಧವ (ದಿಂಡಿಗದ ಮರ), ಅರ್ಜುನ, ತಾಲ (ತಾಳೇ ಮರ), ಶಾಕ (ತೇಗದ ಮರ, ಸಾಗವಾನಿ ಗಿಡ), ನಕ್ತಮಾಲ (ಕರಂಜ, ಹುಲಗಲಗಿಡ), ಪೂತೀಕ (ಪೂತಿಕರಂಜ, ತನಸನಮರ, ಗಜಗದ ಗಿಡ), ಅಶ್ವಕರ್ಣ (ಧೂಪನಮರ, ಸರ್ಜರಸದ ಭೇದ), ಅಗುರು (ಅಗಿಲು, ರಾಳದ ಮರ), ಕಾಲೀಯಕಂ (ಕರಿಯ ರಾಳದ ಮರ, ಛಾಗಕರ್ಣ).

ಗುಣಕರ್ಮ:—

> सालसारादिरित्येष गण: कुष्ठविनाशन: ।
> मेह पाण्ड्वामयहर: कफमेदो विशोषण: ॥ १३ ॥ (सु. सू.)

ಈ ಸಾಲಸಾರಾದಿ ಗಣವು ಕುಷ್ಠರೋಗವನ್ನು ನಾಶಮಾಡುತ್ತದೆ. ಅಲ್ಲದೆ ಇದು ಪ್ರಮೇಹ ಮತ್ತು ಪಾಂಡುರೋಗಗಳನ್ನು ನಾಶಮಾಡುತ್ತದೆ. ಕಫ ಹಾಗು ಮೇದ ಧಾತುವಿನ ಶೋಷಕವಿರುತ್ತದೆ.

ರೋಧ್ರಾದಿಗಣ:—

> रोध्र सावररोध्र पलाश कुटन्नटाशोक फञ्जी कट्फलैलवालुक शल्लकी
> जिङ्गिनी कदम्ब साला: कदली चेति ॥ २४ ॥ (सु. सू.)

ರೋಧ್ರಾದಿ ಗಣದಲ್ಲಿ:— ರೋಧ್ರ (ಕುಟ್ಟಕಾರೋಧ್ರ), ಸಾವರ ರೋಧ್ರ, (ಲೋಧ್ರ) ಪಲಾಶ (ಮುತ್ತಲಗಿಡ), ಕುಟನ್ನಟ (ಹೆಮ್ಮರ), ಅಶೋಕ ವೃಕ್ಷ, ಫಂಜೀ (ಗಂಟು ಪರಂಗಿ), ಕಟ್ಫಲ (ಕಿರಿಶಿವನಿ ಗಿಡ, ಮಾಪಾಳದ ಗಿಡ), ಏಲವಾಲುಕ (ಏಲವಾಯಿ ಎಂಬ ಗಂಧ ದ್ರವ್ಯ), ಶಲ್ಲಕಿ (ಬಿಳಿಯ ಧೂಪ), ಜಿಂಗಿನೀ (ಕರೆಬೂರಲ), ಕದಂಬ (ತಾಳೇಮರ), ಸಾಲಾ (ಸಾಲವೃಕ್ಷ), ಕದಳಿ (ಬಾಳೇಗಿಡ).

ಗುಣಕರ್ಮ:—

> एष रोध्रादिरित्युक्तो मेद: कफहरो गण: ।
> योनिदोषहर: स्तम्भी वर्ण्यो विषविनाशन: ॥ २५ ॥ (सु. सू.)

ಈ ರೋಧ್ರಾದಿ ಗಣವು ಮೇದ, ಕಫನಾಶಕವಿದ್ದು, ಯೋನಿ ದೋಷಗಳನ್ನು ನಾಶ ಮಾಡುವದು. ಮಲಸ್ತಂಭಕ, ವರ್ಣ್ಯ ಮತ್ತು ವಿಷನಾಶಕ ಗುಣ ಉಳ್ಳದ್ದಾಗಿದೆ.

ಅರ್ಕಾದಿಗಣ:—

> अर्कालर्क करञ्जद्वय नागदन्ती मयूरक भार्गी रास्नेन्द्रपुष्पी क्षुद्रश्वेता
> महाश्वेता वृश्चिकाल्यलवणास्तापसवृक्षश्चेति ॥ २६ ॥ (सु. सू.)

ಅರ್ಕಾದಿ ಗಣದಲ್ಲಿ:- ಅರ್ಕ (ಎಕ್ಕಿ, ಕೆಂಪು ಹೂವಿನ ಎಕ್ಕಿಗಿಡ), ಅಲರ್ಕ (ಮಂದಾರ, ಬಿಳಿ ಎಕ್ಕಿ), ನಾಗದಂತೀ (ಜಾಪಾಳ, ದಾಸಮೆಕ್ಕೇ ಜಾತಿ), ಕರಂಜದ್ವಯ (ಹೊಂಗೆ ಮರ, ತಪಸಿಯ ಮರ), ಮಯೂರಕ (ಉತ್ತರಾಣಿ, ಪ್ರತ್ಯಕ್‌ಪುಷ್ಪಿ), ಭಾರ್ಗೀ (ಗಂಟು ಪರಂಗಿ), ರಾಸ್ನಾ (ರೇಶಿಮೆ ಗಡ್ಡೆ), ಇಂದ್ರಪುಷ್ಪೀ (ವಿಶಲ್ಯಾ, ಕೋಳಿ ಕುಟುಮನ ಗಡ್ಡಿ, ದುಂಪರಾಶ್ಮೆ, ಮುಳ್ಳಿರುವ ಕರಿಯ ಹೂವಿನ ಹೊಂಗೆ), ಕ್ಷುದ್ರ ಶ್ವೇತಾ (ಕಿಣಿಹಿ, ಬಿಳಿಯ ಗಿರಿ ಕರ್ಣಿಕೆ), ಮಹಾಶ್ವೇತಾ (ನೀಲಿಯ ಗಿರಿಕರ್ಣಿಕೆ), ವೃಶ್ಚಿಕಾಲೀ (ಚೇಳುಬಾಲದ ಸೊಪ್ಪು, ಚೇಳುಕೊಂಡಿ), ಅಲವಣಾ (ಗಂಗುಂಗೆ ಬೀಜ, ಜ್ಯೋತಿಷ್ಮತಿ), ತಾಪಸವೃಕ್ಷ (ಇಂಗಳದ ಮರ).

ಗುಣಕರ್ಮ:—

अर्कादिको गणो ह्येष कफमेदो विषापहः ।
कृमि कुष्ठ प्रशमनो विषेषाद् व्रणशोधनः ॥ २७ ॥ (सु. सू.)

ಈ ಅರ್ಕಾದಿ ಗಣವು ಕಫ, ಮೇದ ಮತ್ತು ವಿಷಗಳನ್ನು ನಾಶ ಮಾಡುತ್ತದೆ. ಹಾಗು ಕೃಮಿ ಮತ್ತು ಕುಷ್ಠ ಶಾಮಕ ಇರುತ್ತದೆ. ಇದು ವಿಶೇಷವಾಗಿ ವ್ರಣಶೋಧನ ಕಾರ್ಯವನ್ನು ಮಾಡುತ್ತದೆ.

ಸುರಸಾದಿ ಗಣಃ—

सुरसा श्वेतसुरसा फणिज्झकार्जक भूस्तृण सुगंधक सुमुख कालमाल कासमर्द क्षवक खरपुष्पाविडंग कट्फल सुरसी निर्गुंडी कुलाहलोंदुरूकर्णिका फञ्जी प्राचीबल काकमाच्यो विषमुष्टिकश्चेति ॥ २८ ॥ (सु. सू.)

ಸುರಸಾದಿ ಗಣದಲ್ಲಿ:- ಸುರಸಾ (ಕೃಷ್ಣ ತುಳಸಿ), ಶ್ವೇತಸುರಸಾ (ಬಿಳೀ ತುಳಸಿ), ಫಣಿಜ್ಝಕ (मरुवक-ತೀಕ್ಷ್ಣಗಂಧವುಳ್ಳ ಕಾಮಕಸ್ತೂರಿ ಗಿಡ), ಅರ್ಜಕ (ಬಿಳೀ ಹೂವಿನ ಕಾಮಸ್ತೂರಿ ಗಿಡ), ಭೂಸ್ತೃಣ (ಮಜ್ಜಿಗೆಯ ಹುಲ್ಲು, ರೋಹಿಷ ಹುಲ್ಲು, ಗಂಜನೀ ಹುಲ್ಲು), ಸುಗಂಧಕ (ಪರಿಮಳ ಗಂಜಣಿ ಹುಲ್ಲು), ಸುಮುಖ (ಸಾಸಿವೆಯ ಗಿಡ), ಕಾಲಮಾಲ (ಕರಿಯ ಕಾಮುಕಸ್ತೂರಿ ಗಿಡ), ಕಾಸಮರ್ದ (ಎಸಗಳೆ ಗಿಡ), ಕ್ಷವಕ (ನಕಛಿಕಿನೀ, ಸೀನು ಬರಿಸುವ ಗಿಡ), ಖರಪುಷ್ಪಾ (ನಾರಂಬೇಳಿ ಗಿಡ, ಜೊಬ್ಬಡೆ), ವಿಡಂಗ (ವಾಯುವಿಡಂಗ), ಕಟ್ಫಲ (ಕಾಯಫಲ), ಸುರಸೀ (ಕಪಿತ್ಥ ಪತ್ರಾ ತುಲಸಿ ಇಲ್ಲವೆ ಶ್ವೇತನಿರ್ಗುಂಡಿ, ಬೇಲದ ಎಲೆಯಂತೆ ಇರುವ 'ಬಿಲ್ವನಾಸಿ' ಎಂದು ಪ್ರಸಿದ್ಧವಾದ ಗಿಡ), ನಿರ್ಗುಂಡಿ (ಲಕ್ಕಿ, ನೀಲಪುಷ್ಪಾ), ಕುಲಾಹಲ (ಮುಂಡಿಕಾ, ಮುಂಡಿ), ಉಂದುರುಕರ್ಣಿಕಾ (ಇಲಿಕಿವಿ ಗಿಡ, ವೃಷಕರ್ಣಿ), ಫಂಜೀ (ಗಂಟು ಪರಂಗಿ), ಪ್ರಾಚೀಬಲ (ಕಾಕಜಂಘಾ, ಹೊನಗನ್ನೆ ಸೊಪ್ಪು, ನದೀ ಹಿಪ್ಪಲಿ), ಕಾಕಮಾಚಿ (ಗಣಕೆಯ ಗಿಡ), ಮತ್ತು ವಿಷಮುಷ್ಟಿಕ (ಇಟ್ಟಿಯ ಗಿಡ) ಇವು ಸುರಸಾದಿ ಗಣದ ದ್ರವ್ಯಗಳು.

ಗುಣಕರ್ಮ:—

सुरसादिर्गणो ह्येष कफहृत् कृमिसूदनः ।
प्रतिश्यायारुचि श्वास कासघ्नो व्रणशोधनः ॥ २९ ॥ (सु. सू.)

ಈ ಸುರಸಾದಿ ಗಣವು ಕಫ ನಾಶಕ, ಕೃಮಿ ನಾಶಕವಿರುತ್ತದೆ. ಅಲ್ಲದೆ ಪ್ರತಿಶ್ಯಾಯ, ಅರುಚಿ, ಶ್ವಾಸ ಮತ್ತು ಕಾಸ ಇವುಗಳನ್ನು ನಷ್ಟ ಮಾಡುತ್ತದೆ. ಮತ್ತು ವ್ರಣಶೋಧಕ ವಿರುತ್ತದೆ.

ಮುಷ್ಕಕಾದಿ ಗಣ:—

मुष्कक पलाश धव चित्रक मदन वृक्षक शिंशपा वज्रवृक्षास्त्रिफलाचेति ॥ २० ॥

ಮುಷ್ಕಕಾದಿ ಗಣದಲ್ಲಿ:— ಮುಷ್ಕಕ (ಮುಳ್ಳುಮುತ್ತುಗ), ಪಲಾಶ (ಮುತ್ತಲ), ಧವ (ದಿಂಡಲ ಮರ), ಚಿತ್ರಕ (ಚಿತ್ರಮೂಲದ ಬೇರು), ಮದನ (ಮಗ್ಗಾರೆ ಕಾಯಿ), ವೃಕ್ಷಕ (ಕುಟಜ, ಕೊಡಸಿಗನಮರ, ಹಲಗತ್ತಿ), ಶಿಂಶಪಾ (ಬೀಟೆಯ ಮರ, ಕೃಷ್ಣ ಸಾರಾ), ವಜ್ರವೃಕ್ಷ (ಮುಂಡುಗಳ್ಳಿಯ ಗಿಡ, ಮೂರೇಣಿನ ಕಳ್ಳಿ), ತ್ರಿಫಲಾ (ಅಳಲೆಯಕಾಯಿ, ತಾರೇಕಾಯಿ, ನೆಲ್ಲಿಕಾಯಿ ಒಟ್ಟು ಸೇರಿರುವದು, ಫಲತ್ರಿಕ) ಇವು ಇರುವವು.

ಗುಣಕರ್ಮ:—

मुष्ककादिर्गणो ह्येष मेदोघ्नः शुक्रदोषहृत् ।
मेहार्शः पाण्डुरोगघ्नः शर्करानाशनः परः ॥ २२ ॥ (सु. सू.)

ಈ ಮುಷ್ಕಕಾದಿ ಗಣವು ಮೇದವೃದ್ಧಿ ಮತ್ತು ಶುಕ್ರದೋಷಗಳನ್ನು ನಾಶ ಮಾಡುತ್ತದೆ. ಅಲ್ಲದೆ ಪ್ರಮೇಹ, ಮೂಲವ್ಯಾಧಿ, ಪಾಂಡುರೋಗ, ಮೂತ್ರಶರ್ಕರಾ ನಾಶಕವಿರುತ್ತದೆ.

ಪಿಪ್ಪಲ್ಯಾದಿ ಗಣ: –

पिप्पली पिप्पलीमूल चव्य चित्रक शृङ्गवेर मरिच हस्तिपिप्पली हरेणुकैलाजमोदेन्द्रयव पाठा जीरक सर्षप महानिम्ब फल हिङ्गु भार्ङ्गी मधुरसातिविषा वचा विडङ्गानि कटुरोहिणी चेति ॥ २२ ॥ (सु. सू.)

ಪಿಪ್ಪಲ್ಯಾದಿ ಗಣದಲ್ಲಿ:— ಪಿಪ್ಪಲಿ (ಹಿಪ್ಪಲಿ), ಪಿಪ್ಪಲೀಮೂಲ (ಮೋಡಿ), ಚವ್ಯ (ಕಾಡುಮೆಣಸಿನ ಬೇರು), ಚಿತ್ರಕ (ಚಿತ್ರಮೂಲ), ಶೃಂಗವೇರ (ಹಸಿಯ ಶುಂಠಿ), ಮರಿಚ (ಮೆಣಸು), ಹಸ್ತಿಪಿಪ್ಪಲಿ (ಗಜಪಿಪ್ಪಲಿ), ಹರೇಣುಕ (ರೇಣುಕೆಯ ಬೀಜ), ಏಲಾ (ಯಾಲಕ್ಕಿಕಾಯಿ), ಅಜಮೋದಾ (ವಾದಕ್ಕಿ, ಅಜವಾನ), ಇಂದ್ರಯವ (ಕೊಡಸಿಗನ ಬೀಜ), ಪಾಠಾ (ಅಗಳು ಶುಂಠಿ), ಜೀರಕ (ಜೀರಿಗೆ), ಸರ್ಷಪ (ಸಾಸಿವೆ), ಮಹಾನಿಂಬ (ವಿಷಮುಷ್ಟಿ, ಹೆಬ್ಬೇವು), ಫಲ (ಮದನ ಫಲ), ಹಿಂಗು

(ಇಂಗು), ಭಾರ್ಗಿ (ಗಂಟುಪರಂಗಿ), ಮಧುರಸಾ (ಕೊರಟಿಗೆಯ ಹಂಬು), ಅತಿವಿಷಾ (ಅತಿಬಜೆ), ವಚಾ (ಬಜೆ), ವಿಡಂಗ (ವಾಯುವಿಡಂಗ), ಕಟುರೋಹಿಣಿ (ಕಟುಕರೋಹಿಣಿ).

ಗುಣಕರ್ಮ:—

पिप्पल्यादिः कफहरः प्रतिश्यायानिलारुचीः ।
निहन्याद्दीपनो गुल्म शूलघ्नश्चामपाचनः ॥ २३ ॥ (सु. सू.)

ಈ ಪಿಪ್ಪಲ್ಯಾದಿ ಗಣವು ಕಫಹರವಿರುತ್ತದೆ. ಅಲ್ಲದೆ ಪ್ರತಿಶ್ಯಾಯ, ವಾತವಿಕಾರ ಮತ್ತು ಅರುಚಿ ಇವುಗಳನ್ನು ದೂರ ಮಾಡುತ್ತದೆ. ಅಗ್ನಿದೀಪಕವಿರುತ್ತದೆ. ಗುಲ್ಮ ಮತ್ತು ಶೂಲನಾಶಕವಿರುತ್ತದೆ. ಹಾಗು ಆಮಪಾಚಕವಿರುತ್ತದೆ.

ಏಲಾದಿ ಗಣ:—

एला तगर कुष्ठ मांसी ध्यामक त्वक् पत्र नागपुष्प प्रियङ्गु हरेणुका व्याघ्रनख शुक्ति चण्डा स्थौणेयक श्रीवेष्टक चोच चोरक वालुक गुग्गुलु सर्जरस तुरुष्क कुन्दुरुकागरु स्पृक्कोशीर भद्रदारु कुङ्कुमानि पुन्नाग केशरञ्चेति ॥ २४ ॥ (सु. सू.)

ಏಲಾದಿ ಗಣದಲ್ಲಿ:– ಏಲಾ (ಸಣ್ಣ ಯಾಲಕ್ಕಿ), ತಗರ (ಗಂಧ ತಗರ), ಕುಷ್ಠ (ಕೋಷ್ಠ, ಚಂಗಲಕೋಷ್ಠ), ಮಾಂಸಿ (ಜಟಾಮಾಂಸಿ), ಧ್ಯಾಮಕ (ಪರಿಮಳ ಗಂಜಣಿ ಹುಲ್ಲು, ರೋಹಿಷ ಹುಲ್ಲು), ತ್ವಕ್ (ದಾಲಚಿನ್ನಿ), ಪತ್ರ (ಲವಂಗ ಪತ್ರೆ, ತಮಾಲ ಪತ್ರ), ನಾಗಪುಷ್ಪ (ನಾಗಕೇಸರಿ), ಪ್ರಿಯಂಗು (ನೆಳಲು, ಪ್ರೇಯಿಣ ದ್ರವ್ಯ), ಹರೇಣುಕ (ರೇಣುಕ ಬೀಜ), ವ್ಯಾಘ್ರನಖ (ಹುಲಿಯ ಉಗುರು), ಶುಕ್ತಿ (ಹುಲಿಯ ಚಿಕ್ಕದಾದ ಉಗುರು), ಚಂಡಾ (ಪಾರಸೀಕ, ಅಜವಾನವೆಂದೂ ಅನ್ನುವರು), ಸ್ಥೈಣೇಯಕ (ಮಾಚಿಯಪತ್ರೆ, ಮಂಚಪತ್ರಿ), ಶ್ರೀವೇಷ್ಟಕ (ಸಾಂಬ್ರಾಣಿ, ಸರಳ ದ್ರುಮ), ಚೋಚ (ಕಾಡುದಾಲಚಿನ್ನಿ), ಚೋರಕ (ಕಚೋರ), ವಾಲುಕ (ಮುಡಿವಾಳ, ಗುಗ್ಗುಲು), ಸರ್ಜರಸ (ರಾಳ), ತುರುಷ್ಕ (ಹಾಲುಮಡ್ಡಿ, ಗಹುಲಾ), ಕುಂದುರಕ (ನಾಯಿ ಬೇಲದ ಗೋಂದು), ಅಗರು (ಅಗಿಲು), ಸ್ಪೃಕ್ಕಾ (ಕಚೋರದ ಹೂವು, ಗಂಧ ದ್ರವ್ಯಜಾತಿ), ಉಶೀರ (ಲಾಮಾಂಚ, ಜಲಬಾಳದ ಬೇರು), ಭದ್ರದಾರು (ದೇವದಾರು), ಕುಂಕುಮ (ಕುಂಕುಮಕೇಸರಿ), ಪುನ್ನಾಗ (ಸುರಹೊನ್ನೆ), ಕೇಶರ (ಪಗಡೆಯ ಮರ, ನಾಗಕೇಶರ) ಇವು ಇರುವವು.

ಗುಣಕರ್ಮ:—

एलादिको वातकफौ निहन्याद्विषमेव च ।
वर्ण प्रसादनः कण्डू पिडका कोठनाशनः ॥ २५ ॥ (सु. सू.)

ಈ ಏಲಾದಿ ಗಣವು ವಾತ, ಕಫ ಮತ್ತು ವಿಷಗಳನ್ನು ನಾಶ ಮಾಡುತ್ತದೆ. ಇದು ವರ್ಣಪ್ರಸಾದನ ಕಾರ್ಯವನ್ನು ಮಾಡುತ್ತದೆ. ಅಲ್ಲದೆ ಕಂಡೂ, ಪಿಡಕಾ ಮತ್ತು ಕೋಠಗಳನ್ನು ನಷ್ಟ ಮಾಡುತ್ತದೆ.

ವಚಾದಿ ಗಣಃ—

वचा मुस्तातिविषामया भद्रदारूणि नागकेशरश्चेति ॥ २६ ॥ सु. सू.

ವಚಾದಿ ಗಣದಲ್ಲಿಃ— ಬಜೆ, ಜೇಕಿನ ಗಡ್ಡೆ (ನಾಗರಮೋಥಾ), ಅತಿವಿಷ, ಹರೀತಕಿ (ಅಳಲೆಯ ಕಾಯಿ), ದೇವದಾರು ಮತ್ತು ನಾಗಕೇಶರ ಈ ದ್ರವ್ಯಗಳು ವಚಾದಿ ಗಣದಲ್ಲಿ ಸಮಾವೇಶವಾಗುತ್ತವೆ.

ಗುಣಕರ್ಮಃ—

ಈ ವಚಾದಿ ಗಣವು ಸ್ತನ್ಯವಿಶೋಧಕವಿರುತ್ತದೆ. ಆಮಾತಿಸಾರ ಶಾಮಕವಿದೆ. ಮತ್ತು ವಿಶೇಷವಾಗಿ ಆಮದೋಷಗಳ ಪಾಚಕವಿರುತ್ತದೆ.

ಹರಿದ್ರಾದಿ ಗಣಃ—

हरिद्रा दारुहरिद्रा कलशी कुटजबीजानि मधुकं चेति ॥ २७ ॥ सु. सू.

ಹರಿದ್ರಾದಿ ಗಣದಲ್ಲಿಃ— ಹರಿದ್ರಾ (ಅರಿಷಿಣ), ಮರದರಿಷಣ, ಒಂದೆಲೆ ಹೊನ್ನೆ (ಬ್ರಾಹ್ಮಿ), ಇಂದ್ರಯವ, ಅತಿಮಧುರ (ಜೇಷ್ಠಮಧು) ಇವು ಸಮಾವೇಶವಾಗುವವು.

ಗುಣಕರ್ಮಃ—

एतौ वचाहरिद्रादि गणौ स्तन्यविशोधनौ ।
आमातीसारशमनौ विशेषाद्दोषपाचनौ ॥ २८ ॥ सु. सू.

ಹರಿದ್ರಾದಿ ಗಣವು ವಚಾದಿ ಗಣದಂತೆಯೇ ಕಾರ್ಯ ಮಾಡುತ್ತದೆ.

ಶ್ಯಾಮಾದಿ ಗಣಃ—

श्यामा महाश्यामा त्रिवृद्दन्ती शङ्खिनी तिल्वक कम्पिल्लक रम्यक क्रमुक पुत्रश्रेणी गवाक्षी राजवृक्ष करञ्जद्वय गुडूची सप्तला च्छगलान्त्री सुधाः सुवर्णक्षीरी चेति ॥ २९ ॥

ಶ್ಯಾಮಾದಿ ಗಣದಲ್ಲಿಃ— ಶ್ಯಾಮಾ (ಕೃಷ್ಣನಿಶೋತ್ತರ, ಕರೆ ತಿಗಡಿ, ಕೃಷ್ಣತ್ರಿವೃತ್), ಮಹಾಶ್ಯಾಮಾ (ವಿಧಾರಾ, ವೃದ್ಧದಾರುಕ), ತ್ರಿವೃತ್ (ಕೆಂಪು ತಿಗಡಿ), ದಂತೀ (ಜೇಪಾಳ), ಶಂಖಿನೀ (ಈಶ್ವರೀ ಗಿಡ, ಕಾಲಮೇಘ ಅಥವಾ ಕಾಲಾದಾನ), ತಿಲ್ವಕ (ಲೋಧ್ರ), ಕಂಪಿಲ್ಲಕ (ರೇವಚಿನ್ನೆ, ಕಪಿಲೆಯ ಹಿಟ್ಟು), ರಮ್ಯಕ (ಹೆಬ್ಬೇವು), ಕ್ರಮುಕ (ಅಡಿಕೆ), ಪುತ್ರಶ್ರೇಣಿ (ಇಲಿಕಿವಿ, ದಂತಿಭೇದ), ಗವಾಕ್ಷೀ (ಇಂದ್ರಾಯಣ, ಕಾಡಕವಡೆ ಕಾಯಿ, ಬಿಳಿಯ ಹೂವಿನ ದಾಸಮೆಕ್ಕೆ), ರಾಜವೃಕ್ಷ (ಕಕ್ಕೇಗಿಡ, ಅಮಲತಾಸ), ಕರಂಜ ದ್ವಯ [ಗಿಡ್ಡ ಹುಲಗಲ (ಹೊಂಗೆ), ತಾಪಸಿಯ ಗಿಡ (ಪೂತಿಕರಂಜ)],

ಗುಡೂಚಿ (ಅಮೃತಬಳ್ಳಿ, ಛಿನ್ನರುಹಾ), ಸಪ್ತಲಾ (ಸಾತಲಾ, ಶೀಗೆಕಾಯಿ), ಛಗಲಾಂತ್ರೀ (ವೃದ್ಧ ದಾರುಕಭೇದ), ಸುಧಾ (ಮುಂಡುಗಳ್ಳಿ), ಸುವರ್ಣಕ್ಷೀರಿ (ಗೋಳಿ ಗೊಳಿಕೆ).

ಗುಣಕರ್ಮ:—

उक्तः श्यामादिरित्येष गणो गुल्मविषापहः ।
आनाहोदर विड्भेदी तथोदावर्त्तनाशनः ॥ ३० ॥ सु. सू.

ಈ ಶ್ಯಾಮಾದಿ ಗಣವು ಗುಲ್ಮ, ವಿಷಗಳನ್ನು ದೂರ ಮಾಡುತ್ತದೆ. ಆಧ್ಮಾನ ಮತ್ತು ಉದರ ರೋಗದಲ್ಲಿ ಮಲದ ಭೇದನ ಕಾರ್ಯವನ್ನು ಮಾಡುತ್ತದೆ. ಅಲ್ಲದೆ ಇದು ಉದಾವರ್ತನಾಶಕವಿರುತ್ತದೆ.

ಬೃಹತ್ಯಾದಿ ಗಣ:—

बृहती कण्टकारिका कुटजफल पाठा मधुकञ्चेति ॥ ३२ ॥ सु. सू.

ಬೃಹತ್ಯಾದಿ ಗಣದಲ್ಲಿ:– ಹೆಗ್ಗುಳ್ಳ, ನೆಲಗುಳ್ಳ, ಇಂದ್ರಯವ, ಅಗಳುಶುಂಠಿ, ಅತಿಮಧುರ ಈ ಐದು ದ್ರವ್ಯಗಳ ಸಮೂಹವು ಬೃಹತ್ಯಾದಿ ಗಣವು.

ಗುಣಕರ್ಮ:—

पाचनीयो बृहत्यादिर्गणः पित्तानिलापहः ।
कफारोचक हृद्रोग मूत्रकृच्छ्र रुजापहः ॥ ३२ ॥

ಈ ಬೃಹತ್ಯಾದಿ ಗಣವು ಪಾಚನೀಯವಿರುತ್ತದೆ. ಪಿತ್ತ ಮತ್ತು ವಾತನಾಶಕವಿರುವದಲ್ಲದೆ ಕಫ, ಅರುಚಿ, ಹೃದಯರೋಗ ಮತ್ತು ಮೂತ್ರಕೃಚ್ಛ್ರದ ಪೀಡೆಯನ್ನು ನಷ್ಟ ಮಾಡುತ್ತದೆ.

ಪಟೋಲಾದಿ ಗಣ:—

पटोल चंदन कुचंदन मूर्वा गुडूची पाठाः कटुरोहिणी चेति ॥ ३३ ॥

ಪಟೋಲಾದಿ ಗಣದಲ್ಲಿ:– ಕಹಿ ಪಡುವಲ, ಶ್ವೇತಚಂದನ, ರಕ್ತಚಂದನ, ಹೆಗ್ಗುರುಟಿಗೆ, ಅಮೃತಬಳ್ಳಿ, ಅಗಳುಶುಂಠಿ, ಕುಟಕಿ (ಕಟುಕರೋಹಿಣಿ) ಈ ದ್ರವ್ಯಗಳು ಇರುತ್ತವೆ.

ಗುಣಕರ್ಮ:—

पटोलादिर्गणः पित्तकफारोचक नाशनः ।
ज्वरोपशमनो व्रण्यश्छर्दिकण्डू विषापहः ॥ ३४ ॥ सु. सू.

ಈ ಪಟೋಲಾದಿ ಗಣವು ಪಿತ್ತ, ಕಫ ಮತ್ತು ಅರೋಚಕ ನಾಶಕವಿರುತ್ತದೆ. ಜ್ವರ ಶಾಮಕವಿದೆ. ವ್ರಣದ ಶೋಧನಾದಿ ದೃಷ್ಟಿಯಿಂದ ಹಿತಕಾರಿ ಇರುತ್ತದೆ. ಛರ್ದಿ, ಕಂಡೂ ಮತ್ತು ವಿಷಗಳನ್ನು ದೂರ ಮಾಡುತ್ತದೆ.

ಕಾಕೋಲ್ಯಾದಿ ಗಣಃ—

काकोली क्षीरकाकोली जीवकर्षभक मुद्गपर्णी माषपर्णी मेदा महामेदा च्छिन्नरुहा कर्कटश्रृंगी तुगाक्षीरी पद्मक प्रपौण्डरीकर्द्धि वृद्धि मृद्वीका जीवन्त्यो मधुकञ्चेति ॥ ३४ ॥

सु. सू.

ಕಾಕೋಲ್ಯಾದಿ ಗಣದಲ್ಲಿ:- ಕಾಕೋಲಿ, ಕ್ಷೀರಕಾಕೋಲಿ, ಜೀವಕ, ಋಷಭಕ, ಕಾಡು ಹೆಸರು, ಮಾಷಪರ್ಣಿ (ಕಾಡು ಉದ್ದು), ಮೇದಾ, ಮಹಾಮೇದಾ, ಛಿನ್ನರುಹಾ (ಅಮೃತಬಳ್ಳಿ), ಕರ್ಕಟಶೃಂಗಿ (ಅತಿಬಜೆ, ಶೃಂಗೀ), ತುಗಾಕ್ಷೀರಿ (ವಂಶಲೋಚನ, ಬಿದಿರುಸುಣ್ಣ), ಪದ್ಮಕ (ಪದ್ಮಬೀಜ, ಕೆಂಪುಕಮಲ), ಪ್ರಪೌಂಡರೀಕ (ಬಿಳೀ ಕಮಲ), ಋದ್ಧಿ, ವೃದ್ಧಿ, ದ್ರಾಕ್ಷಾ, ಸೀಹಾಲೆ, ಅತಿಮಧುರ ಈ ದ್ರವ್ಯಗಳು ಸಮಾವೇಶವಾಗುತ್ತವೆ.

ಗುಣಕರ್ಮ:—

काकोल्यादिरयं पित्तशोणितानिल नाशनः ।
जीवनो वृंहणो वृष्यः स्तन्यश्लेष्मकरस्तथा ॥ ३६ ॥ सु. सू.

ಈ ಕಾಕೋಲ್ಯಾದಿ ಗಣವು ಪಿತ್ತ, ರಕ್ತ ಮತ್ತು ವಾತನಾಶಕವಿರುತ್ತದೆ. ಅಲ್ಲದೆ ಇದು ಜೀವನೀಯ, ಬೃಂಹಣೀಯ ಮತ್ತು ವೃಷ್ಯ ಇರುತ್ತದೆ. ಹಾಗು ಸ್ತನ್ಯಕರ, ಕಫಕರ ವಿರುತ್ತದೆ.

ಊಷಕಾದಿ ಗಣಃ—

ऊषक सैंधव शिलाजतु कासीसद्वय हिङ्गूनि तुत्यकञ्चेति ॥ ३७ ॥

ಊಷಕಾದಿ ಗಣದಲ್ಲಿ:–ಊಷಕ (ಕ್ಷಾರ ಮೃತ್ತಿಕಾ), ಸೈಂಧವ, ಶಿಲಾಜತು, ಕಾಸೀಸ ಮತ್ತು ಪುಷ್ಪಕಾಸೀಸ, ಇಂಗು, ನೀಲಿತುತ್ಥ ಎಂದು ಏಳು ದ್ರವ್ಯೌಷಧಿಗಳು ಇರುತ್ತವೆ.

ಗುಣಕರ್ಮ:—

ऊषकादिः कफं हन्ति गणो मेदोविशोषणः ।
अश्मरी शर्करामूत्रकृच्छ्र गुल्मप्रणाशनः ॥ ३८ ॥ सु. सू.

ಈ ಊಷಕಾದಿ ಗಣವು ಕಫವನ್ನು ನಷ್ಟಮಾಡುತ್ತದೆ. ಮೇದವೃದ್ಧಿಯಾಗಿದ್ದರೆ ವಿಶೋಷಣಕಾರ್ಯವನ್ನು ಮಾಡುತ್ತದೆ. ಹಾಗು ಅಶ್ಮರಿ, ಶರ್ಕರಾ, ಮೂತ್ರಕೃಚ್ಛ್ರ ಮತ್ತು ಗುಲ್ಮಗಳನ್ನು ನಾಶ ಮಾಡುತ್ತದೆ.

ಸಾರಿವಾದಿ ಗಣಃ—

सारिवा मधुक चंदन कुचंदन पद्मक काश्मरीफल मधूकपुष्पाण्युशीरञ्चेति ॥

ಸಾರಿವಾದಿ ಗಣದಲ್ಲಿ:– ಸಾರಿವಾ (ಅನಂತಮೂಲ, ಕರಿಬಂಟನ ಹುಲ್ಲು), ಮಧುಕ (ಜೇಷ್ಠಮಧು), ಚಂದನ (ಶ್ರೀಗಂಧ, ಶ್ವೇತಗಂಧ), ಕುಚಂದನ (ರಕ್ತಚಂದನ),

ಪದ್ಮಕ (ಕೆಂಪುಕಮಲ), ಕಾಶ್ಮರೀ (ಶಿವನೀ ಫಲ), ಮಧೂಕ ಪುಷ್ಪ (ಇಪ್ಪೇಹೂ), ಉಶೀರ (ಬಾಳದಬೇರು), ಹೀಗೆ ಎಂಟು ದ್ರವ್ಯಗಳು ಸಾರಿವಾದಿ ಗಣದಲ್ಲಿರುತ್ತವೆ.

ಗುಣಕರ್ಮ:—

सारिवादिः पिपासाघ्नो रक्तपित्तहरो गणः ।
पित्तज्वर प्रशमनो विशेषाद्दाहनाशनः ॥ ४० ॥ सु. सू.

ಈ ಸಾರಿವಾದಿ ಗಣವು ತೃಷ್ಣಾಹರ ಹಾಗು ರಕ್ತಪಿತ್ತನಾಶಕವಿರುತ್ತದೆ. ಪಿತ್ತ, ಜ್ವರ ಗಳನ್ನು ಶಮನ ಮಾಡುತ್ತದೆ. ವಿಶೇಷವಾಗಿ ದಾಹವನ್ನು ನಾಶಮಾಡುತ್ತದೆ.

ಅಂಜನಾದಿ ಗಣ:—

अंजन रसाञ्जन नागपुष्प प्रियङ्गु नीलोत्पल नलद नलिनकेशराणि मधुकञ्चेति ॥

ಅಂಜನಾದಿ ಗಣದಲ್ಲಿ:— ಅಂಜನ (ಸೌವೀರಾಂಜನ), ರಸಾಂಜನ (ಸ್ರೋತೋಂಜನ), ನಾಗಪುಷ್ಪ (ನಾಗಕೇಶರ), ಪ್ರಿಯಂಗು (ನೆಳಲು), ನೀಲೋತ್ಪಲ (ನೀಲಿ ಹೂವಿನ ತಾವರೆ), ನಲದ (ಮಾಂಸೀ, ಜಟಾಮಾಂಸೀ), ನಲಿನಕೇಶರ (ತಾವರೆಯ ಕುಸುಮ ದಲ್ಲಿಯ ಕೇಶರಿ), ಮಧುಕ (ಅತಿಮಧುರ) ಇವು ಇರುತ್ತವೆ.

ಗುಣಕರ್ಮ:—

अञ्जनादिर्गणो ह्येष रक्तपित्तनिबर्हणः ।
विषोपशमनो दाहं निहन्त्याभ्यंतरं तथा ॥ ४२ ॥ सु. सू.

ಈ ಅಂಜನಾದಿ ಗಣವು ರಕ್ತ, ಪಿತ್ತನಾಶಕವಿರುತ್ತದೆ. ವಿಷದ ಉಪಶಮನವನ್ನು ಮಾಡುತ್ತದೆ. ಶರೀರದೊಳಗಿನ ದಾಹವನ್ನು ದೂರ ಮಾಡುತ್ತದೆ.

ಪರೂಷಕಾದಿ ಗಣ:—

परुषक द्राक्षा कट्फल दाडिम राजादन कतकफल शाकफलानि त्रिफला चेति ॥ ४३ ॥ सु. सू.

ಪರೂಷಕಾದಿ ಗಣದಲ್ಲಿ:— ಪರೂಷಕ (ಖರ್ಜೂರಸದೃಶ ದಡಸಲ ಹಣ್ಣು ಎಂಬ ಫಲ, ಧನ್ವಪತ್ರಕ), ದ್ರಾಕ್ಷಾ (ದ್ರಾಕ್ಷಿ), ಕಟ್ಫಲ (ಕಿರಿಸಿವನಿ, ಮಾದಾಳದಕಾಯಿ), ದಾಡಿಮ (ದಾಳಿಂಬೆ ಹಣ್ಣು), ರಾಜಾದನ (ಅಂಜೂರ), ಕತಕಫಲ (ಚಿಲ್ಲದ ಬೀಜ), ಶಾಕಫಲ (ತೇಗದಹಣ್ಣು), ತ್ರಿಫಲಾ (ಹರಿತಕಿ, ಬಿಭತಕಿ, ಆಮಲಕಿ) ಇವು ಪರೂಷಕಾದಿ ಗಣ ದಲ್ಲಿಯ ದ್ರವ್ಯಗಳು ಇರುತ್ತವೆ.

ಗುಣಕರ್ಮ:—

परुषकादिरित्येष गणोऽनिल विनाशनः ।
मूत्रदोषहरो हृद्य. पिपासाघ्नो रुचिप्रदः ॥ ४४ ॥ सु. सू.

ಈ ಪರೂಷಕಾದಿ ಗಣವು ವಾತವನ್ನು ನಾಶಮಾಡುತ್ತದೆ. ಮೂತ್ರ ದೋಷಹರವಿದೆ. ಮತ್ತು ಹೃದಯಕ್ಕೆ ಹಿತಕರವಿದೆ. ತೃಷ್ಣೆಯನ್ನು ದೂರಮಾಡುವಂಥಾದ್ದು ಹಾಗು ರುಚಿ ಕಾರಕವಿದೆ.

ಪ್ರಿಯಂಗ್ವಾದಿ ಗಣಃ—

प्रियङ्गु समङ्गा धातकी पुन्नाग नागपुष्प चंदन कुचंदन मोचरस रसांजन कुम्भिक स्रोतोऽञ्जन पद्मकेसर योजनवल्यो दीर्घमूला चेति ॥ ४५ ॥ सु॰ सू.

ಪ್ರಿಯಂಗ್ವಾದಿ ಗಣದಲ್ಲಿಃ-ಪ್ರಿಯಂಗು, ಸಮಂಗಾ (ಒಳಮುಚ್ಚುಗ, ಲಜ್ಜಾಲು), ಧಾತಕಿ (ಧಾತಕೀ ಹೂ, ಇಪ್ಪೀ ಹೂ), ಪುನ್ನಾಗ (ಶುಂಗ, ಸುರಗಿ ಹೂ, ಸುರಹೊನ್ನಿ), ಮೋಚರಸ (ಬೂರಲ ಅಂಟು), ರಸಾಂಜನ, ಕುಂಭೀಕ (ಪಾದರೀ ಮರ), ಸ್ರೋತೋಂಜನ, ಪದ್ಮಕೇಶರ (ಕಮಲ ಕೇಶರ), ಯೋಜನವಲ್ಲಿ (ಮಂಜಿಷ್ಠಾ), ದೀರ್ಘಮೂಲಾ (ಶುರುಚನಬೇರು, ಮೂರೆಲೆ ಹೊನ್ನೆ), ಈ ದ್ರವ್ಯಗಳು ಪ್ರಿಯಂಗ್ವಾದಿ ಗಣದಲ್ಲಿ ಸಮಾವೇಶವಾಗುತ್ತವೆ.

ಅಂಬಷ್ಠಾದಿ ಗಣಃ—

अम्बष्ठा धातकीकुसुम समङ्गा कट्वङ्ग मधुक त्रिल्वपेशिका सावररोध्र पलाश नन्दीवृक्षाः पद्मकशेराणि चेति ॥ ४६ ॥ सु. सू.

ಅಂಬಷ್ಠಾದಿ ಗಣದಲ್ಲಿಃ-- ಅಂಬಷ್ಠಾ (ಅಗಳು ಶುಂಠಿ), ಧಾತಕೀ ಕುಸುಮ (ಇಪ್ಪೆಹೂ) ಸಮಂಗಾ (ಒಳಮುಚ್ಚುಗ), ಕಟ್ವಂಗ (ತಗ್ಗಿಮರ, ಹೆಮ್ಮರ, ಶ್ಯೋನಾಕ), ಮಧುಕ, (ಅತಿಮಧುರ), ಬಿಲ್ವಪೇಶಿಕಾ (ಪತ್ರೆಯ ತಿಳಿಲು) ಶಾಬರಲೋಧ್ರ, ಪಲಾಶ (ಮುತ್ತುಗದ ಮರ), ನಂದೀವೃಕ್ಷ (ನಂದೀಮರ), ಪದ್ಮಕೇಶರ (ಕಮಲಕೇಶರ) ಇವು ಅಂಬಷ್ಠಾದಿ ಗಣದಲ್ಲಿ ಇರುತ್ತವೆ.

ಗುಣಕರ್ಮಃ—

गणौ प्रियङ्ग्वम्बष्ठादी पक्वातीसार नाशनौ ।
संधानीयौ हितौ पित्ते व्रणानां चापि रोपणौ ॥ ४७ ॥ सु. सू.

ಪ್ರಿಯಂಗ್ವಾದಿ ಮತ್ತು ಅಂಬಷ್ಠಾದಿ ಗಣಗಳು ಪಕ್ವಾತಿಸಾರನಾಶಕ ಇರುತ್ತವೆ. ಭಗ್ನ ಅಸ್ಥಿಗಳ ಸಂಧಾನಕಾರ್ಯವನ್ನು ಮಾಡುತ್ತವೆ. ಹಾಗು ಪಿತ್ತವಿಕಾರಗಳಲ್ಲಿ ಹಿತ ಕರವಿರುತ್ತವೆ. ಮತ್ತು ವೃಣರೋಪಕ ಕಾರ್ಯವನ್ನು ಮಾಡುತ್ತವೆ.

ನ್ಯಗ್ರೋಧಾದಿ ಗಣ:—

न्यग्रोधोदुम्बराश्वत्थ प्लक्ष मधूक कपीतन ककुभाम्रकोशाम्र चोरकपत्र जम्बूद्वय प्रियाल मधुक रोहिणी वञ्जुल कदम्ब बदरी तिन्दुकी सल्लकी रोध्र सावररोध्र भल्लातक पलाशा नन्दीवृक्षश्चेति ॥ ४८ ॥

ನ್ಯಗ್ರೋಧಾದಿ ಗಣದಲ್ಲಿ:- ನ್ಯಗ್ರೋಧ (ಆಲ), ಉದುಂಬರ (ಸದಾಫಲ, ಅತ್ತಿ), ಅಶ್ವತ್ಥ (ಪಿಪ್ಪಲ, ಅರಳೆ), ಪ್ಲಕ್ಷ (ಬಸರಿಗಿಡ), ಮಧೂಕ (ಇಪ್ಪೇ ಗಿಡ,) ಕಪೀತನ (ಹೆಪ್ಪೇಜಾತಿಯ ಗಿಡ, ಆಮಟಿಯ ಮರ), ಕಕುಭ (ಅರ್ಜುನ, ಮತ್ತಿಯ ಮರ), ಆಮ್ರ (ಮಾವಿನ ಮರ), ಕೋಶಾಮ್ರ (ಜೂರಿಮಾವು), ಅರಗಿನ ಮರ, (ಲಾಕ್ಷಾ ವೃಕ್ಷ), ಜಂಬೂದ್ವಯ (1 ಸಣ್ಣ ಜಾತಿಯ ನೇರಲ 2 ದಪ್ಪ ನೇರಲೆಯ ಮರಗಳು), ಪ್ರಿಯಾಲ (ಚಾರುಸೊಪ್ಪು; ಸಾರದ್ರುಮ), ಮಧುಕ (ಅತಿಮಧುರ), ರೋಹಿಣಿ (ಕಟುಕರೋಹಿಣಿ, ಕುಟುಕಿ), ವಂಜುಲ (ಬೆತ್ತ, ವೇತಸ, ನೀರಂಜಿಯಮರ), ಕದಂಬ (ಕಡಬಲ), ಬದರಿ (ಬೋರೆ), ತಿಂದುಕಿ (ತೂಪರ ಗಿಡ), ಸಲ್ಲಕೀ (ನಾಯಿ ಬೇಲದ ಮರ), ಲೋಧ್ರ, ಸಾವರಲೋಧ್ರ (ಬಿಳೀಲೋಧ್ರ), ಭಲ್ಲಾತಕ (ಕೇರು), ಪಲಾಶ (ಮುತ್ತಲ), ನಂದೀವೃಕ್ಷ (ಪಾರಸಪೀಪಲ) ಇವೇ ಮೊದಲಾದ ಇಪ್ಪತ್ತೈದು ದ್ರವ್ಯಗಳ ಸಮುದಾಯಕ್ಕೆ ನ್ಯಗ್ರೋಧಾದಿ ಗಣವೆನ್ನುವರು.

ಗುಣಕರ್ಮ:—

न्यग्रोधादिर्गणो व्रण्यः संग्राही भग्नसाधकः ।
रक्तपित्तहरो दाहमेदोघ्नो योनिदोष हृत् ॥ ४९ ॥

ಈ ನ್ಯಗ್ರೋಧಾದಿ ಗಣವು ವ್ರಣಕ್ಕೆ ಹಿತಕಾರಿ ಇದೆ. ಸಂಗ್ರಾಹಿ ಕಾರ್ಯವನ್ನು ಮಾಡುತ್ತದೆ. ಅಸ್ಥಿಗಳ ಭಗ್ನಸಂಧಾನವನ್ನು ಮಾಡುವದು. ರಕ್ತಪಿತ್ತ, ದಾಹ, ಮೇದ ವೃದ್ಧಿಯನ್ನು ನಾಶಮಾಡುತ್ತದೆ. ಹಾಗು ಯೋನಿದೋಷ ಹರವಿದೆ.

ಗುಡೂಚ್ಯಾದಿ ಗಣ:—

गुडूची निम्ब कुस्तुम्बुरु चंदनानि पद्मकश्चेति ॥ ५० ॥

ಗುಡೂಚ್ಯಾದಿ ಗಣದಲ್ಲಿ:- ಗುಡೂಚಿ (ಛಿನ್ನರುಹಾ, ಅಮೃತಬಳ್ಳಿ), ನಿಂಬ (ಬೇವಿನ ಮರ), ಕುಸ್ತುಂಬುರು (ಕೊತಂಬರಿ), ಚಂದನ (ರಕ್ತಚಂದನ), ಪದ್ಮಕ (ತಾವರೆಯ ಬೀಜ, ಕೆಲವರು ಕೆಂಪು ಕಮಲಕ್ಕೆ ಪದ್ಮಕವೆಂದು ಅನ್ನುವರು). ಹೀಗೆ ಐದು ದ್ರವ್ಯಗಳು ಈ ಗಣದಲ್ಲಿ ಸಮಾವೇಶವಾಗುತ್ತವೆ.

ಗುಣಕರ್ಮ:—

एष सर्व ज्वरान् हन्ति गुडूच्यादिस्तु दीपनः ।
हृल्लासारोचक वमी पिपासा दाहनाशनः ॥ ५१ ॥

ಈ ಗುಡೂಚ್ಯಾದಿ ಗಣವು ಎಲ್ಲ ಪ್ರಕಾರದ ಜ್ವರಗಳನ್ನು ನಾಶ ಮಾಡುತ್ತದೆ. ದೀಪಕ ವಿದೆ ಹಾಗು ಹೃಲ್ಲಾಸ, ಅರುಚಿ, ಛರ್ದಿ ತೃಷ್ಣಾ ಮತ್ತು ದಾಹ ಇವುಗಳನ್ನು ದೂರ ಮಾಡುತ್ತದೆ.

ಉತ್ಪಲಾದಿ ಗಣ:—

उत्पल रक्तोत्पल कुमुद सौगंधिक कुवलय पुण्डरीकाणि मधुकश्चेति ।

ಉತ್ಪಲಾದಿ ಗಣದಲ್ಲಿ:- ಉತ್ಪಲ (ನೀಲಿಕಮಲ), ರಕ್ತೋತ್ಪಲ (ಕೆಂಪು ಕಮಲ), ಕುಮುದ (ಬಿಳಿಕಮಲ), ಸೌಗಂಧಿಕ (ನೀಲಿಯ ಕಮಲದಂತೆ ಇರುವ ಸುವಾಸನೆಯುಳ್ಳ ತಾವರೆ), ಕುವಲಯ (ಸ್ವಲ್ಪ ನೀಲಿ ಮತ್ತು ಬಿಳುಪು ಮಿಶ್ರವಾದ ತಾವರೆ), ಪುಂಡರೀಕ (ಅತಿ ಬಿಳಿಯ ತಾವರೆ), ಮಧುಕ (ಅತಿಮಧುರ) ಈ ಏಳು ದ್ರವ್ಯಗಳು ಉತ್ಪಲಾದಿ ಗಣದಲ್ಲಿ ಇರುತ್ತವೆ.

ಗುಣಕರ್ಮ:—

उत्पलादिरयं दाह पित्तरक्त विनाशनः ।
पिपासा विष हृद्रोग च्छर्दिमूर्च्छाहरो गणः ॥ ५३ ॥

ಈ ಉತ್ಪಲಾದಿ ಗಣವು ಶರೀರದ ದಾಹ, ರಕ್ತಪಿತ್ತ, ತೃಷ್ಣಾ, ವಿಷವಿಕಾರ, ಹೃದ್ರೋಗ, ಛರ್ದಿ ಹಾಗು ಮೂರ್ಛಾ ಇವುಗಳನ್ನು ನಷ್ಟ ಮಾಡುತ್ತದೆ.

ಮುಸ್ತಾದಿ ಗಣ:—

मुस्ता हरिद्रा दारुहरिद्रा हरीतक्यामलक बिभीतक कुष्ठ हैमवती वचा पाठा कटुरोहिणी शार्ङ्गष्टातिविषा द्राविडी भल्लातकानि चित्रकश्चेति ॥ ५४ ॥

ಮುಸ್ತಾದಿ ಗಣದಲ್ಲಿ:- ಮುಸ್ತಾ (ಕೊನ್ನಾರೆ ಗಡ್ಡೆ, ಜೇಕಿನ ಗಡ್ಡೆ), ಹರಿದ್ರಾ (ಅರಿಷಿಣ), ದಾರುಹರಿದ್ರಾ (ಮರದರಿಷಿಣ), ಹರೀತಕಿ (ಅಳಲೆಯ ಕಾಯಿ), ಆಮಲಕ (ನೆಲ್ಲೀ ಕಾಯಿ), ಬಿಭೀತಕ (ತಾರೇ ಕಾಯಿ), ಕುಷ್ಠ (ಜಂಗಲ್ ಕೋಷ್ಟ), ಹೈಮವತಿ, ವಚಾ (ಬಿಳಿಯ ಬಜೆ), ಪಾಠಾ (ಹಗಳು ಬಳ್ಳಿ), ಕಟುರೋಹಿಣಿ (ಕಟುಕರೋಹಿಣಿ), ಶಾರ್ಙ್ಗಷ್ಟಾ (ಎಲವು ಸಂಧಿ, ಚಿರಪೋಟಿಕಾ, ಕಾಕಜಂಘಾ), ಅತಿವಿಷಾ (ಅತಿಬಜೆ), ದ್ರಾವಿಡಿ (ಸಣ್ಣ ಯಾಲಕ್ಕಿ), ಭಲ್ಲಾತಕ (ಗೇರುಬೀಜ), ಚಿತ್ರಕ (ಚಿತ್ರಮೂಲ), ವಚಾ (ಬಜೆ) ಇವು ಮುಸ್ತಾದಿ ಗಣದಲ್ಲಿಯ ದ್ರವ್ಯಗಳು.

ಗುಣಕರ್ಮ:—

एष मुस्तादिको नाम्ना गणः श्लेष्मनिषूदनः ।
योनिदोषहरः स्तन्यशोधनः पाचनस्तथा ॥ ५५ ॥ सु. सू.

ಈ ಮುಸ್ತಾದಿ ಗಣವು:- ಕಫ ರೋಗಗಳನ್ನು ನಾಶಮಾಡುತ್ತದೆ. ಯೋನಿ ದೋಷನಾಶಕವಿದೆ. ಇದು ಸ್ತನ್ಯಶೋಧಕವಿರುವದಲ್ಲದೆ ಆಮ ದೋಷಗಳ ಪಾಚಕವಿರುತ್ತದೆ.

ತ್ರಿಫಲಾ:—

हरीतक्यामलक बिभीतकानि त्रिफला ॥ ५६ ॥ सु. सू.

ಹರೀತಕಿ (ಅಳಲೆಯಕಾಯಿ), ಆಮಲಕ (ನೆಲ್ಲಿಕಾಯಿ), ಬಿಭೀತಕ (ತಾರೆ ಕಾಯಿ) ಇವು ಮೂರು ದ್ರವ್ಯಗಳ ಸಮೂಹಕ್ಕೆ ತ್ರಿಫಲಾ ಅನ್ನುವರು.

ಗುಣಕರ್ಮ:—

त्रिफला कफपित्तघ्नी मेहकुष्ठविनाशिनी ।
चक्षुष्या दीपनी चैव विषमज्वरनाशिनी ॥ ५७ ॥

ತ್ರಿಫಲಾವು ಕಫ, ಪಿತ್ತಗಳನ್ನು ದೂರ ಮಾಡುತ್ತದೆ. ಅಲ್ಲದೆ ಪ್ರಮೇಹ, ಕುಷ್ಠಗಳನ್ನು ನಾಶ ಮಾಡುತ್ತದೆ. ಕಣ್ಣಿಗೆ ಹಿತಕರವಿದೆ, ದೀಪಕವಿದೆ ಮತ್ತು ವಿಷಮಜ್ವರವನ್ನು ನಾಶಮಾಡುತ್ತದೆ.

ತ್ರಿಕಟು:—

पिप्पली मरिच शृंगवेराणि त्रिकटुकम् ॥ ५८ ॥ सु. सू.

ಪಿಪ್ಪಲಿ, ಮರಿಚ ಹಾಗು ಶುಂಠಿ ಇವು ಮೂರಕ್ಕೆ ತ್ರಿಕಟು ಎನ್ನುವರು.

ಗುಣಕರ್ಮ:—

त्र्यूषणं कफमेदोघ्नं मेहकुष्ठत्वगामयान् ।
निहन्याद्दीपनं गुल्मपीनसाग्न्यल्पतामपि ॥ ५९ ॥ सु. सू.

ತ್ರಿಕಟು (ತ್ರ್ಯೂಷಣ, ವ್ಯೋಷ) ವು ಕಫಹರ, ಮೇದಹರವಿದೆ. ಪ್ರಮೇಹ, ಕುಷ್ಠ, ತ್ವಚೆಯರೋಗಗಳು, ಗುಲ್ಮ, ಪೀನಸ, ಅಗ್ನಿಮಾಂದ್ಯ ಮುಂತಾದ ವಿಕಾರಗಳನ್ನು ಗೆಲ್ಲುತ್ತದೆ. ಹಾಗು ಇದು ಅಗ್ನಿದೀಪಕವಿದೆ.

ಆಮಲಕ್ಯಾದಿ ಗಣ:—

आमलकी हरीतकी पिप्पल्यश्चित्रकश्चेति ॥ ६० ॥ सु. सू.

ಆಮಲಕ್ಯಾದಿ ಗಣದಲ್ಲಿ:- ಆಮಲಕಿ (ನೆಲ್ಲಿ ಕಾಯಿ), ಹರೀತಕಿ (ಅಳಲೆಯ ಕಾಯಿ), ಪಿಪ್ಪಲಿ (ಹಿಪ್ಪಲಿ), ಚಿತ್ರಕ (ಚಿತ್ರಮೂಲ) ಇರುತ್ತವೆ.

ಗುಣಕರ್ಮ:—

आमलक्यादिरित्येष गणः सर्वज्वरापहः ।
चक्षुष्यो दीपनो वृष्यः कफारोचकनाशनः ॥ ६१ ॥

ಈ ಆಮಲಕ್ಯಾದಿ ಗಣವು ಸರ್ವಜ್ವರಹರವಿದೆ. ಚಕ್ಷುವಿಗೆ ಹಿತಕರವಿದೆ, ಅಗ್ನಿದೀಪಕ ಹಾಗು ವೃಷ್ಯವಿದೆ. ಅಲ್ಲದೆ ಕಫ, ಅರುಚಿ ನಾಶಕವಿರುತ್ತವೆ.

ತ್ರಪ್ವಾದಿ ಗಣ:—

त्रपु सीस ताम्र रजत कृष्णलोह सुवर्णानि लोहमलाश्चेति ॥ ६२ ॥

ತ್ರಪ್ವಾದಿ ಗಣದಲ್ಲಿ:— ತ್ರಪು (ವಂಗ Zn.), ಸೀಸ (Lead. Pb), ತಾಮ್ರ (Copper, Cu), ರಜತ (ಬೆಳ್ಳಿ Silver), ಕಾಂತಲೋಹ (Fe. Iron)

ಸುವರ್ಣ (ಬಂಗಾರ Gold), ಮತ್ತು ಲೋಹಮಲ (ಮಂಡೂರ) ಇವು ತ್ರಪ್ವಾದಿ ಗಣದಲ್ಲಿ ಇರುತ್ತವೆ.

ಗುಣಕರ್ಮ:—

गणस्त्रप्वादिरित्येष गर क्रिमिहरः परः ।
पिपासा विष हृद्रोग पाण्डुमेह हरस्तथा ॥ ६३ ॥

ಈ ತ್ರಪ್ವಾದಿ ಗಣವು ಕೃತ್ರಿಮವಿಷ, ಜಂತು (ಕೃಮಿ) ನಾಶಕವಿದೆ. ನೀರಡಿಕೆ, ವಿಷ, ಹೃದ್ರೋಗ, ಪಾಂಡು, ಪ್ರಮೇಹ ರೋಗಹರವಿರುತ್ತದೆ.

ಲಾಕ್ಷಾದಿ ಗಣ:—

लाक्षारेवत कुटजाश्वमार कट्फल हरिद्राद्वय निम्ब सप्तच्छद मालत्यस्त्रायमाणा चेति ॥ ६४ ॥ सु. सू.

ಲಾಕ್ಷಾದಿ ಗಣದಲ್ಲಿ:– ಲಾಕ್ಷಾ (ಅರಗು), ಆರೇವತ (ಆರಗ್ವಧ, ಕಕ್ಕೇಡ), ಕುಟಜ (ಕೊಡಸಿಗನ ಮರ, ಹುಲಗತ್ತಿ), ಅಶ್ವಮಾರ (ಕಣಗಿಲೆ), ಕಟ್ಫಲ (ಮಾಪಾಳದ ಕಾಯಿ), ಹರಿದ್ರಾದ್ವಯ (ಅರಿಷಿಣ, ಮರದರಿಷಿಣ), ನಿಂಬ (ಬೇವು), ಸಪ್ತಚ್ಛದ (ಏಳೆಲಗ, ಮದ್ದಾಲೆ ಮರ), ಮಾಲತಿ (ಜಾಜಿಕಾಯಿ), ತ್ರಾಯಮಾಣಾ (ಕಹಿದ ಸರಿ) ಹೀಗೆ ಹನ್ನೊಂದು ಔಷಧಿಗಳು ಈ ಗಣದಲ್ಲಿ ಸಮಾವೇಶವಾಗಿವೆ.

ಗುಣಕರ್ಮ:—

कषायस्तिक्तमधुरः कफपित्तार्त्तिनाशनः ।
कुष्ठक्रिमिहरश्चैव दुष्ट व्रण विशोधनः ॥ ६६ ॥ सु. सू.

ಕಷಾಯರಸ ಪ್ರಧಾನವುಳ್ಳ, ತಿಕ್ತ ಮತ್ತು ಮಧುರ ರಸಗಳು ಅನುರಸವಿರುವಂತಹ ಈ ಲಾಕ್ಷಾದಿ ಗಣವು ಕಫಜನ್ಯರುಜ, ಪಿತ್ತಜನ್ಯರುಜ, ಕುಷ್ಠ, ಕ್ರಿಮಿಗಳನ್ನು ನಾಶ ಮಾಡುತ್ತದೆ. ಮತ್ತು ದುಷ್ಟ ವ್ರಣ ವಿಶೋಧನ ಕಾರ್ಯವನ್ನು ಮಾಡುತ್ತದೆ.

ಲಘು ಪಂಚಮೂಲ:—

तत्र त्रिकण्टक बृहतीद्वय पृथक् पर्ण्यो विदारीगंधा चेति कनीयः ॥ ६७ ॥

ತ್ರಿಕಂಟಕ (ಗೋಕ್ಷುರ, ನೆಗ್ಗಿಲು), ಬ್ರಹತೀದ್ವಯ (ಹೆಗ್ಗುಳ್ಳ. ನೆಲಗುಳ್ಳ), ಪೃಥಕ್ ಪರ್ಣಿ, ಶಾಲಪರ್ಣಿ (ಒಂದೆಲೆ ಹೊನ್ನೆ) ಹೀಗೆ ಐದು ದ್ರವ್ಯಗಳ ಸಮುದಾಯಕ್ಕೆ ಲಘು ಪಂಚಮೂಲ ಎನ್ನುವರು.

ಗುಣಕರ್ಮ:—

कषायतिक्तमधुरं कनीयः पञ्चमूलकम् ।
वातघ्नं पित्तशमनं बृंहणं बलवर्द्धनम् ॥ ६८ ॥ सु. सू.

ಲಘು ಪಂಚಮೂಲವು ಕಷಾಯ, ತಿಕ್ತ, ಮಧುರ ರಸಗಳುಳ್ಳದ್ದು ಇರುತ್ತದೆ. ವಾತ ನಾಶಕವಿದೆ, ಪಿತ್ತಶಾಮಕವಿದೆ, ಬೃಂಹಣ ಕಾರ್ಯವನ್ನು ಮಾಡುತ್ತದೆ. ಹಾಗು ಶರೀರದ ಬಲವನ್ನು ಹೆಚ್ಚಿಸುತ್ತದೆ.

ಬೃಹತ್ ಪಂಚಮೂಲಃ—

बिल्वाग्निमन्थ टिण्टुक पाटलाः काश्मर्यश्चेति महत् ॥ ६९ ॥

ಬಿಲ್ವ (ಬೆಲಪತ್ರಿ), ಅಗ್ನಿಮಂಥ (ತಗ್ಗಿಮರ), ಟಿಂಟುಕ (ಹೆಮ್ಮರ), ಪಾಟಲಾ (ಪಾದರಿ ಮರ), ಕಾಶ್ಮರ್ಯ (ಶಿವನಿಯ ಮರ) ಇವು ಐದು ದ್ರವ್ಯಗಳ ಸಮೂಹಕ್ಕೆ ಬೃಹತ್ (ಮಹತ್) ಪಂಚಮೂಲವೆನ್ನುವರು.

ಗುಣಕರ್ಮಃ—

सतिक्तं कफवातघ्नं पाके लघ्वग्निदीपनम् ।

मधुरानुरसञ्चैव पञ्चमूलं महत् स्मृतम् ॥ ७० ॥ सु. सू.

ಬೃಹತ್ ಪಂಚಮೂಲವು ತಿಕ್ತರಸ ಪ್ರಧಾನವುಳ್ಳದ್ದು ಹಾಗು ಮಧುರ ಅನುರಸವುಳ್ಳದ್ದು ಇದ್ದು, ಕಫ, ವಾತನಾಶಕವಿದೆ. ಪಾಕದಲ್ಲಿ ಲಘುವಿದೆ. ಹಾಗು ಅಗ್ನಿದೀಪಕವಿದೆ.

ದಶಮೂಲಃ—

अनयोर्दशमूलमुच्यते ॥ ७२ ॥ सु. सू.

ಲಘು ಪಂಚಮೂಲ, ಬೃಹತ್ ಪಂಚಮೂಲಗಳೆರಡೂ ಕೂಡಿ ದಶಮೂಲವೆಂಬ ಹೆಸರು.

ಗುಣಕರ್ಮಃ—

गणः श्वासहरो ह्येष कफपित्तानिलापहः ।

आमस्य पाचनश्चैव सर्वज्वर विनाशनः ॥ ७२ ॥

ದಶಮೂಲವು ಶ್ವಾಸಹರವಿದೆ. ಕಫ, ಪಿತ್ತ ಮತ್ತು ವಾತಹರವಿದೆ. ಆಮಪಾಚಕವಿದ್ದು ಸರ್ವ ಜ್ವರಗಳನ್ನು ನಾಶಮಾಡುತ್ತದೆ.

ವಲ್ಲೀ ಪಂಚಮೂಲಃ—

विदारी सारिवा रजनी गुडूच्योऽजश्रृङ्गी चेति वल्ली संज्ञः ॥ ७३ ॥

ವಿದಾರಿ (ನೆಲಗುಂಬಳ), ಸಾರಿವಾ (ಸೋಗದೆ ಬೇರು, ಕರಿಬಂಟನ ಬೇರು), ರಜನೀ (ಅರಿಷಿಣ, ಹರಿದ್ರಾ), ಗುಡೂಚಿ (ಅಮೃತಬಳ್ಳಿ), ಅಜಶೃಂಗೀ (ಚೇಳುಕೊಂಡೆ, ಗೆರಸೇಹಂಬು) ಇವು ಐವರ ಸಮೂಹಕ್ಕೆ ವಲ್ಲೀ ಪಂಚಮೂಲ ಎನ್ನುವರು.

ಗುಣಕರ್ಮಃ—

वल्लीजं पञ्चमूलन्तु प्रशस्तं कफनाशनम् ।

सृष्टमूत्रानिलहरं वृष्यमिन्द्रिय बोधनम् ॥

ಕಂಟಕ ಪಂಚಮೂಲ:—

करमर्द त्रिकण्टक सैरीयक शतावरी गृध्रनखय इति कण्टक संज्ञ: ॥ ७४ ॥

ಕರಮರ್ದ (ಕವಳೆ ಕಾಯಿ ಗಿಡ), ತ್ರಿಕಂಟಕ (ಗೋಕ್ಷುರು, ನೆಗ್ಗಿಲು), ಸೈರೀಯಕ (ಗೋರಂಟೆ ಗಿಡ), ಶತಾವರಿ (ಹಲವು ಮಕ್ಕಳ ಬೇರು, ಆಷಾಢಿ ಬೇರು), ಗೃಧ್ರನಖ್ಯ (ಬದರ ವೃಕ್ಷ, ಬಾರೇ ಗಿಡ) ಈ ಐದು ದ್ರವ್ಯಗಳ ಸಮುದಾಯಕ್ಕೆ ಕಂಟಕ ಪಂಚಮೂಲ ವೆನ್ನುವರು.

ಗುಣಕರ್ಮ:—

कण्टकाख्यं पञ्चमूलं कफानिलहरं परम् ।
मधुरानुरसञ्चैव पक्वाशय विशोधनम् ॥

ವಲ್ಲೀ ಪಂಚಮೂಲ, ಕಂಟಕ ಪಂಚಮೂಲಗಳ ಗುಣಕರ್ಮ:—

रक्तपित्तहरौ ह्येतो शोफ त्रयविनाशनौ ।
सर्वमेह हरौ चैव शुक्रदोष विनाशनौ ॥ ७५ ॥ सु. सू.

ವಲ್ಲೀ ಪಂಚಮೂಲ ಮತ್ತು ಕಂಟಕ ಪಂಚಮೂಲಗಳೆರಡೂ ರಕ್ತಪಿತ್ತಹರ ಇರುತ್ತವೆ. ಮೂರು ಪ್ರಕಾರದ ಅಂದರೆ ವಾತಿಕ, ಪೈತ್ತಿಕ ಹಾಗು ಶ್ಲೈಷ್ಮಿಕ ಶೋಫ (ಶೋಥ) ಗಳನ್ನು ನಾಶಮಾಡುತ್ತವೆ. ಎಲ್ಲ ಪ್ರಕಾರದ ಪ್ರಮೇಹನಾಶಕವಿವೆ ಹಾಗು ಶುಕ್ರದೋಷ ವನ್ನು ನಾಶ ಮಾಡುತ್ತವೆ.

ತೃಣ ಪಂಚಮೂಲ:—

कुश काश नल दर्भ काण्डेक्षुका इति तृण संज्ञकः ॥ ७६ ॥

ಕುಶ (ಸಣ್ಣ, ಮೃದುದರ್ಭೆ, ಸೂಜಿಯಂತಹ ಮೊನಚುಳ್ಳದ್ದು), ಕಾಶ (ವಿಶ್ವಾಮಿತ್ರ ದರ್ಭೆ, ಚಾಮರಪುಷ್ಪ, ಶ್ವೇತಚಾಮರಪುಷ್ಪ), ನಲ (ಸಣ್ಣಲಾಳ), ದರ್ಭ (ಒಟುಟೂ ಬಹಳ ಉದ್ದವಾದುದೂ ಆದ ದರ್ಭೆ), ಕಾಂಡೇಕ್ಷುಕಾ (ಸಣ್ಣದಾದ ಜೇಣಿಕಬ್ಬು) ಇವು ಐದು ಔಷಧೀ ವನಸ್ಪತಿಗಳು ತೃಣ ಪಂಚಮೂಲದಲ್ಲಿ ಸಮಾವೇಶವಾಗುತ್ತವೆ.

ಗುಣಕರ್ಮ:—

मूत्रदोष विकारञ्च रक्तपित्तं तथैव च ।
अन्त्य: प्रयुक्तः क्षीरेण शीघ्रमेव विनाशयेत् ॥ ७७ ॥

ಕೊನೆಯದಾದ ಈ ತೃಣ ಪಂಚಮೂಲವನ್ನು ಹಾಲಿನೊಡನೆ ಸೇವಿಸಿದರೆ ಮೂತ್ರ ದೋಷಗಳನ್ನೂ ಹಗು ರಕ್ತಪಿತ್ತವನ್ನು ಶೀಘ್ರವಾಗಿ ನಾಶಮಾಡುತ್ತದೆ.

ಚರಕಾಚಾರ್ಯರು ಶರ, ಇಕ್ಷು, ದರ್ಭ, ಕಾಶ ಮತ್ತು ಶಾಲಿಗಳಮೂಲ ಇವು ಐದಕ್ಕೆ ತೃಣ ಪಂಚಮೂಲವೆಂದು ಹೇಳಿದ್ದಾರೆ.

ಇನ್ನು ಮೇಲೆ ಹೇಳಿದ ಈ ಐದು ಪಂಚಮೂಲಗಳಲ್ಲಿಯ ಹಲವು ಗುಂಪುಗಳ ಕಾರ್ಯವನ್ನು ಹೇಳುತ್ತಾರೆ.

एषां वातहरावाद्यावन्त्यः पित्तविनाशनः ।
पञ्चकौ श्लेष्मशमनावितरौ परिकीर्तितौ ॥ ७८ ॥

ಮೊದಲಿನವೆರಡು (ಲಘು, ಬೃಹತ್) ಪಂಚಮೂಲಗಳು ವಿಶೇಷವಾಗಿ ವಾತನಾಶಕ ವಿರುತ್ತವೆ. ಕೊನೆಯದಾದ ತೃಣಪಂಚಮೂಲವು ಪಿತ್ತನಾಶಕವಿದೆ. ಹಾಗು ವಲ್ಲೀ ಮತ್ತು ಕಂಟಕ ಪಂಚಮೂಲಗಳು ಕಫಶಾಮಕ ಇರುತ್ತವೆ.

ಸುಶ್ರುತಸಂಹಿತಾ 39 ನೆಯ ಅಧ್ಯಾಯದಲ್ಲಿಯ ಗಣಗಳು.

ಊರ್ಧ್ವಭಾಗ ದೋಷಹರ ದ್ರವ್ಯಗಳು:—

मदन कुटज जीमूतकेक्ष्वाकु धामार्गव कृतवेधन सर्षप विडङ्ग पिप्पली करञ्ज प्रपुन्नाड कोविदार कर्बुदारारिष्टाश्वगन्धा विदुल बन्धुजीवक श्वेता शणपुष्पी बिम्बी वचा मृगेर्वारुश्चित्रा चेत्यूर्ध्वभागहराणि ।

तत्र कोविदार पूर्वाणां फलानि । कोविदारादीनां मूलानि ॥ ३ ॥

ಮದನ (ಮಗ್ಗಾರೆಕಾಯಿ), ಕುಟಜ (ಕೊಡಸಿಗನ ಗಿಡದ ತೊಗಟೆ) ಜೀಮೂತಕ (ದೇವದಾಳಿ ಹಣ್ಣು), ಇಕ್ಷ್ವಾಕು (ಕಹಿಸೋರೆ), ಧಾಮಾರ್ಗವ (ತುಪ್ಪಹೀರೆ, ಕೋಶಾತಕಿ, ಪೀತಪುಷ್ಪಾ), ಕೃತವೇಧನ (ಕಕ್ಕೆಯ ತಿರುಳು, ಕೋಶಾತಕಿಯ ಭೇದ), ಸರ್ಷಪ (ಬಿಳಿಸಾಸಿವೆ), ವಿಡಂಗ (ವಾಯುವಿಡಂಗ), ಪಿಪ್ಪಲಿ, ಕರಂಜ (ಹುಲಗಲ ಹೊಂಗೆಯ ತೊಗಟೆ), ಪ್ರಪುನ್ನಾಡ (ತಗಚಿ, ತಗಚೆಯಬೀಜ), ಕೋವಿದಾರ (ಕಂಚುವಾಳದ ಬೇರು), ಕರ್ಬುದಾರ (ಚೆಳ್ಳೆಪುರ, ಬಿಳಿಕಂಚುವಾಳ), ಅರಿಷ್ಟಾ (ಬೇವು), ಅಶ್ವಗಂಧಾ (ಹಿರೇಮದ್ದಿನ ಬೇರು), ವಿದುಲ (ವೇತಸವೃಕ್ಷ, ನೀರಂಜಿ, ವೇತಸ), ಬಂಧುಜೀವಕ (ಮಧ್ಯಾಹ್ನ ಮಲ್ಲಿಗೆ), ಶ್ವೇತಾ (ಬಿಳಿಬಜೆ), ಶಣಪುಷ್ಪಿ (ಅಡವಿ ಶಣಬು, ಪುಂಡಿ), ಬಿಂಬಿ (ತೊಂಡೆಗಿಡ), ವಚಾ (ಬಜೆ), ಮೃಗೇರ್ವಾರು (ಹಾವುಮೆಕ್ಕೇಗಿಡ, ಇಂದ್ರವಾರುಣಿ), ಚಿತ್ರಾ (ಕಾಡುಪಡುವಲ) ಇವೆಲ್ಲವು ಆಮಾಶಯಗತ ದೋಷಗಳನ್ನು ಬಾಯಿಂದ ಮುಖಾಂತರ ಹೊರಗೆ ಹಾಕುತ್ತವೆ. ಫುಪ್ಫುಸ ಶ್ವಾಸಮಾರ್ಗ, ನಾಸಾಮಾರ್ಗ ಮತ್ತು ತಲೆ ಇವುಗಳಲ್ಲಿಯೂ ಇದ್ದ ಕಫದೋಷ ಹರಣ ಮಾಡುತ್ತವೆ,

ಅಧೋಭಾಗಹರ ದ್ರವ್ಯಗಳು:— (ವಿರೇಚಕ ದ್ರವ್ಯಗಳು).

त्रिवृता श्यामा दन्ती द्रवन्ती सप्तला शङ्खिनी विषाणिका गवाक्षीच्छगलान्त्री-स्नुक्सुवर्णक्षीरि चित्रक किणिही कुश काश तिल्वक कम्पिल्लक रम्यक पाटला पूग हरीतक्यामलक विभीतक नीलिनी चतुरङ्गुलैरण्ड पूतीक महावृक्ष सप्तच्छदार्को ज्योतिष्मती चेत्यधो भागहराणि । तत्र तिल्वक पूर्वाणां मूलानि, तिल्वकादीनां पाटलान्तानां त्वचः, कम्पिल्लक फलरजः, पूगादीनामेरण्डान्तानां फलानि । पूतीकारग्वधयोः पत्राणि, शेषाणां क्षीराणीति ॥ ४ ॥

ತ್ರಿವೃತಾ (ಕೆಂಪು ತಿಗಡೆ), ಶ್ಯಾಮಾ (ಕರಿಯ ತಿಗಡೆ), ದಂತಿ (ಜೇಪಾಳ), ದ್ರವಂತಿ (ಇಲಿಕಿವಿ ಗಿಡ), ಸಪ್ತಲಾ (ಹಳದಿ ಹಾಲುಳ್ಳ ಮುಂಡುಗಳ್ಳಿ), ಸಾತಲಾ (ಶೀಗೆ ಕಾಯಿ), ಶಂಖಿನಿ (ಯವತಿಕ್ತಾ, ಕಾಲಮೇಘ, ಈಶ್ವರೀ ಗಿಡ, ಗಿರಿಕರ್ಣಿಕೆ, ನೆಲಬೇವಿನ ಜಾತಿ), ವಿಷಾಣಿಕಾ (ಬಲಮುರಿಕಾಯಿ, ವೃಶ್ಚಿಕಾಲೀ, ಮೇಢಶೃಂಗಿ), ಗವಾಕ್ಷಿ (ಬಿಳಿಹೂವಿನ ದಾಸಮೆಕ್ಕಿ, ಇಂದ್ರವಾರುಣಿ), ಛಗಲಾಂತ್ರಿ (ವೃದ್ಧದಾರುಕ ಭೇದ), ಸ್ನುಕ್ (ಮುಂಡುಗಳ್ಳಿ), ಸುವರ್ಣಕ್ಷೀರಿ (ಗೊಳಗೊಳಿಕೆ), ಚಿತ್ರಕ, ಕಿಣಿಹಿ (ಅಪಾಮಾರ್ಗ), ಕುಶ, ಕಾಶ, ತಿಲ್ವಕ (ಲೋಧ್ರ), ಕಂಪಿಲ್ಲಕ, ರಮ್ಯಕ, ಪಾಟಲಾ, ಪೂಗ (ಅಡಿಕೆ), ಹರಿತಕಿ, ಆಮಲಕಿ, ಬಿಭೀತಕಿ, ನೀಲಿನೀ (ನೀಲಿ ಗಿಡ), ಚತುರಂಗುಲ (ಆರಗ್ವಧ), ಏರಂಡ, ಪೂತಿಕ, ಮಹಾವೃಕ್ಷ, ಸಪ್ತಪರ್ಣ, ಅರ್ಕ (ಎಕ್ಕಿಯ ಗಿಡ), ಜ್ಯೋತಿಷ್ಮತಿ ಇತ್ಯಾದಿ ದ್ರವ್ಯಗಳು ಅಧೋಭಾಗ ದೋಷಹರ ದ್ರವ್ಯಗಳಿರುವವು. ತ್ರಿವೃತ್ ದ್ರವ್ಯದಿಂದ ತಿಲ್ವಕದವರೆಗಿನ ಮೊದಲಿನ ಔಷಧಿಗಳ ಮೂಲವನ್ನು ಉಪಯೋಗಿಸಬೇಕು. ತಿಲ್ವಕದಿಂದ ಪಾಟಲಾದವರೆಗಿನ ದ್ರವ್ಯಗಳ ತ್ವಕ್ಕನ್ನೂ, ಕಂಪಿಲ್ಲಕ ಫಲರಜವನ್ನು, ಪೂಗದ್ರವ್ಯದಿಂದ ಏರಂಡ ದ್ರವ್ಯದವರೆಗಿನ ಔಷಧಿಗಳ ಫಲವನ್ನು ಹಾಗು ಪೂತಿಕಾ, ಆರಗ್ವಧಗಳ ಪತ್ರಗಳನ್ನೂ; ಮತ್ತು ಉಳಿದವುಗಳ ಕ್ಷೀರವನ್ನು ವಿರೇಚನಕ್ಕಾಗಿ ಉಪಯೋಗಿಸಬೇಕು.

ಉಭಯ ಭಾಗ ದೋಷಹರ ದ್ರವ್ಯ:—

कोशातकी सप्तला शङ्खिनी देवदाली कारवेल्लिका
चेत्युभयतो भाग हराणि । एषां स्वरसा इति ॥ ५ ॥ सु. सू.

ಕೋಶಾತಕಿ (ಹೀರೆ), ಸಪ್ತಲಾ (ಹಳದಿ ಹಾಲಿನ ಮುಂಡುಗಳ್ಳಿ), ಶಂಖಿನಿ (ಗಿರಿಕರ್ಣಿಕೆ), ದೇವದಾಲಿ; ಕಾರವೇಲ್ಲಿಕಾ (ಕಹಿ ಹಾಗಲ) ಇವೆಲ್ಲವೂ ಉಭಯ ಭಾಗ ದೋಷಹರ ದ್ರವ್ಯಗಳಿರುತ್ತವೆ.

ಶಿರೋವಿರೇಚನ ದ್ರವ್ಯಗಳು:—

पिप्पली विडङ्गापामार्ग शिग्रु सिद्धार्थक शिरीष मरिच करवीर बिम्बी गिरिकर्णिका किणिही वचा ज्योतिष्मती करञ्जार्कालर्क लशुनातिविषाशृङ्गवेर तालीशतमाल सुरसार्जकेङ्गुदी मेषशृङ्गी मातुलुङ्गी सुरङ्गी पीलु जाती शाल ताल मधूक लाक्षा हिङ्गु लवण मद्य गोशकृद्रस मूत्राणीति शिरोविरेचनानि। तत्र करवीर पूर्वाणां फलानि, करवीरादीनामर्कान्तानां मूलानि, तालीशपूर्वाणां कन्दाः, तालीशादीनामर्कान्तानां पत्राणि। इङ्गुदी मेषशृङ्ग्योस्त्वचः। मातुलुङ्गी सुरङ्गी पीलुजातीनां पुष्पाणि, शाल ताल मधूकानां साराः, हिङ्गुलाक्षे निर्यासौ, लवणानि पार्थिवविशेषाः। मद्यान्यासुतसंयोगाः। शकृद्रसौ मलाविति ॥ ६ ॥

ಪಿಪ್ಪಲಿ (ಹಿಪ್ಪಲಿ), ವಿಡಂಗ (ವಾಯುವಿಡಂಗ), ಅಪಾಮಾರ್ಗ (ಉತ್ತರಾಣಿ), ಶಿಗ್ರು (ನುಗ್ಗೆ), ಸಿದ್ಧಾರ್ಥಕ (ಸಾಸಿವೆ), ಶಿರೀಷ (ಬಾಗೆ), ಮರಿಚ (ಮೆಣಸು), ಕರವೀರ (ಕಣಗಿಲ), ಬಿಂಬಿ (ತೊಂಡೆ), ಗಿರಿಕರ್ಣಿಕೆ, ಕಿಣಿಹಿ (ಅಪಾಮಾರ್ಗ), ವಚಾ (ಬಜೆ), ಜ್ಯೋತಿಷ್ಮತಿ (ಗಂಗುಂಗೆ ಗಿಡ), ಕರಂಜ (ಹುಲಗಲ, ಹೊಂಗೆ) ಮತ್ತು ಅರ್ಕ (ಎಕ್ಕೆಯ ಗಿಡ) ಮೇಲಿನ ಈ ಎಲ್ಲ ದ್ರವ್ಯಗಳ ಬೇರುಗಳನ್ನು ಉಪಯೋಗಿಸಬೇಕು.

ತಾಲೀಸಪತ್ರ, ತಮಾಲಪತ್ರ, ಸುರಸಾ (ತುಳಸೀ ಗಿಡ), ಅರ್ಜಕಾ (ಕಾಮಕಸ್ತೂರಿ), ಗಳ ಎಲೆಗಳು ಶಿರೋವಿರೇಚನಕ್ಕಾಗಿ ಉಪಯೋಗಿಸಲ್ಪಡುವವು.

ಇಂಗುದಿ (ಇಂಗಳ ಗಿಡ), ಮೇಷಶೃಂಗಿ (ಗೆರಸೆ ಹಂಬು) ಗಳ ತೊಗಟೆಯನ್ನು ಉಪಯೋಗಿಸಬೇಕು.

ಮಾತುಲುಂಗಿ (ಮಾದಾಳ), ಸುರಂಗಿ (ಕೆಂಪುನುಗ್ಗೆ), ಪೀಲು (ಬಗಿನಿ ಮರ) ಮತ್ತು ಜಾತಿ (ಜಾಜಿಗಿಡ) ಗಳ ಹೂವನ್ನು ಶಿರೋವಿರೇಚನೆಗಾಗಿ ಉಪಯೋಗಿಸಬೇಕು.

ಶಾಲ (ಸರ್ಜವೃಕ್ಷ), ತಾಲ (ತಾಳೇಮರ), ಮಧುಕ (ಜೇಷ್ಠಮಧು) ಇವುಗಳ ಅಂತಃಸಾರವನ್ನು ಉಪಯೋಗಿಸಬೇಕು.

ಹಿಂಗು (ಇಂಗು), ಲಾಕ್ಷಾ (ಅರಗು) ಇವುಗಳ ಅಂಟನ್ನು ಉಪಯೋಗಿಸಬೇಕು. ಲವಣಗಳಲ್ಲಿ ಖನಿಜಪಲ್ಲಿ ಹುಟ್ಟಿದವುಗಳು ಶ್ರೇಷ್ಠವು. ಬಹಳ ವೇಳೆಯ ವರೆಗೆ ಸಂಧಾನ ಮಾಡಿದಂತಹ ಮದ್ಯವು ಒಳ್ಳೇ ಶಿರೋವಿರೇಚಕವು.

ಗೋ ಶಕೃತ್, ಗೋಮೂತ್ರ, ಗೋರಸ ಇವುಗಳನ್ನು ಸಮಲವಾಗಿ ಉಪಯೋಗಿಸುವದರಿಂದ ಶಿರೋವಿರೇಚನಕಾರ್ಯವು ತೀವ್ರವಾಗಿ ಆಗುತ್ತದೆ.

ವಾತ ಸಂಶಮನ ವರ್ಗಃ—

भद्रदारु कुष्ठ हरिद्रा वरुण मेषश्रृङ्गी बलातिबलार्तगल कच्छुरा सल्लकी कुबेराक्षी वीरतरु सहचराग्निमन्थ वत्सादन्येरण्डाश्मभेदकालर्कार्क शतावरी पुनर्नवा वसुक वसिर काञ्चनक भार्ङ्गी कार्पासी वृश्चिकाली पत्तूरबदर यव कोल कुलत्थ प्रभृतीनि विदारिगन्धादिश्च द्वे चाद्ये पञ्चमूल्यौ समासेन वातसंशमनो वर्गः ॥ ७ ॥

ಭದ್ರದಾರು (ದೇವದಾರು), ಕುಷ್ಠ (ಜಂಗಲ ಕೋಷ್ಠ), ಹರಿದ್ರಾ (ಅರಿಷಿಣ), ವರುಣ (ಸುಟ್ಟಮಾವು), ಮೇಷಶೃಂಗೀ (ಗೆರಸೇ ಹಂಬು), ಬಲಾ (ಬುರ್ಲಿ, ಕಳ್ಳಂಗಡಲೆ), ಅತಿಬಲಾ (ಬೋಳಂಗಡಲೆ, ಮಹಾಬಲಾ), ಆರ್ತಗಲ, ಕಚ್ಛುರಾ (ನಸಗುನ್ನಿ ಬೀಜ), ಸಲ್ಲಕೀ, ಕುಬೇರಾಕ್ಷಿ (ಗಜಗ), ವೀರತರು (ಅರ್ಜುನ), ಸಹಚರಾ, ಅಗ್ನಿಮಂಥ, ವತ್ಸಾದನಿ, ಏರಂಡ (ಔಡಲ), ಅಶ್ಮಭೇದಕ, ಅಲರ್ಕ (ಬಿಳಿ ಎಕ್ಕೆ), ಅರ್ಕ (ಎಕ್ಕೆ), ಶತಾವರಿ (ಹಲವು ಮಕ್ಕಳ ಬೇರು), ಪುನರ್ನವಾ (ಗಣಜಲಿ), ವಸುಕ (ಶಿವ ಮಲ್ಲಿಗೆ), ವಸಿರ, ಕಾಂಚನಕ, ಭಾರ್ಗೀ (ಪರಂಗಿ), ಕಾರ್ಪಾಸಿ (ಹತ್ತಿ), ವೃಶ್ಚಿಕಾಲಿ, ಪತ್ತೂರ, ಬದರ (ಬಾರೆ), ಯವ (ಜವೆಗೋದಿ), ಕೋಲ (ಸಣ್ಣ ಎಲಚಿ, ಸಣ್ಣ ಬಾರೆ), ಕುಲತ್ಥ (ಹುರಳಿ) ಇತ್ಯಾದಿ ದ್ರವ್ಯಗಳು ವಾತಸಂಶಮನವಿರುವವು. ಇವು ಗಳಲ್ಲದೆ ವಿದಾರಿಗಂಧಾದಿ ಗಣ, ಲಘು ಪಂಚಮೂಲ, ಬೃಹತ್ ಪಂಚಮೂಲ ಇವೂ ಕೂಡಾ ವಾತಶಾಮಕ ಇರುವವು.

ಪಿತ್ತ ಸಂಶಮನ ವರ್ಗಃ—

चंदन कुचंदन ह्रीबेरोशीर मञ्जिष्ठा पयस्या विदारी शतावरी गुन्द्रा शैवल कह्लार कुमुदोत्पल कदली कन्दली दूर्वा मूर्वा प्रभृतीनिकाकोल्यादिः सारिवादिरञ्जनादिरुत्पलादि न्यग्रोधादिस्तृणपञ्चमूलमिति समासेन पित्तसंशमनो वर्गः ॥ ८ ॥

ಚಂದನ (ಗಂಧದ ಗಿಡ), ಕುಚಂದನ (ರಕ್ತ ಚಂದನ), ಹ್ರೀಬೇರ (ವಾಲಕ), ಉಶೀರ (ಬಾಳದ ಬೇರು), ಮಂಜಿಷ್ಠಾ, ಪಯಸ್ಯಾ (ಕ್ಷೀರ ಕಾಕೋಲಿ), ವಿದಾರಿ (ನೆಲ ಗುಂಬಳ), ಶತಾವರಿ (ಹಲವು ಮಕ್ಕಳ ಬೇರು), ಗುಂದ್ರಾ (ತೃಣಭೇದ), ಶೈವಲ, ಕಲ್ಹಾರ (ಶ್ವೇತ, ನೀಲ ಅಥವಾ ರಕ್ತ ಕಮಲ), ಕುಮುದ (ಶ್ವೇತಕಮಲ), ಉತ್ಪಲ (ಕಿಂಚಿತ್ ನೀಲ ಕಮಲ), ಕದಲಿ, ಕಂದಲಿ (ಪದ್ಮಬೀಜ), ದೂರ್ವಾ (ಕರಿಕೆ), ಮೂರ್ವಾ ಇತ್ಯಾದಿ ದ್ರವ್ಯಗಳು ಪಿತ್ತ ಸಂಶಮನ ದ್ರವ್ಯಗಳಾಗಿವೆ.

ಇವಲ್ಲದೆ ಕಾಕೋಲ್ಯಾದಿ ಗಣ, ಸಾರಿವಾದಿ ಗಣ, ಅಂಜನಾದಿ ಗಣ, ಉತ್ಪಲಾದಿ ಗಣ, ನ್ಯಗ್ರೋಧಾದಿ ಗಣ ಹಾಗೂ ತೃಣ ಪಂಚಮೂಲ ಇವು ಕೂಡಾ ಪಿತ್ತ ಶಾಮಕ ಗಳಾಗಿವೆ.

ಕಫ ಸಂಶಮನ ವರ್ಗಃ—


कालेयकागुरु तिलपर्णी कुष्ठ हरिद्रा शीतशिव शतपुष्पा सरला रास्ना प्रकीर्योदकीर्येङ्गुदी सुमनः काकादनी लाङ्गलकी हस्तिकर्ण मुञ्जातक लामज्जक प्रभृतीनि वल्लीकण्टक पञ्चमूल्यौ पिप्पल्यादिर्बृहत्यादिर्मुष्ककादिर्वचादिः सुरसादि- रारग्वधादिरिति समासेन श्लेष्म संशमनो वर्गः ॥ ९ ॥ सु. सू.

ಕಾಲೇಯಕ (ಹರಿಚಂದನ ಅಥವಾ ಪೀತಚಂದನ), ಅಗುರು (ಅಗಿಲು), ತಿಲಪರ್ಣಿ (ರಕ್ತಚಂದನ), ಕುಷ್ಠ (ಚಂಗಲಕೋಷ್ಠ), ಹರಿದ್ರಾ (ಅರಿಷಿಣ), ಶೀತಶಿವ (ಕರ್ಪೂರ, ಸೈಂಧವ, ಉಪ್ಪು, ಸಬ್ಬಸಿಗೆ), ಸರಲಾ, ರಾಸ್ನಾ, ಪ್ರಕೀರ್ಯ (ತವಸದ ಮರ), ಉದಕೀರ್ಯ (ಹುಲಗಲ), ಇಂಗುದಿ (ಇಂಗಳ ಗಿಡ), ಕಾಕಾದನಿ (ಗುಂಜಾ), ಲಾಂಗಲಕಿ (ಕಲಿಹಾರಿ), ಹಸ್ತಿಕರ್ಣ (ನೆಲಮುತ್ತುಲ ಅಥವಾ ರಕ್ತ ಏರಂಡ), ಮುಂಜಾತಕ, ಲಾಮಜ್ಜಕ (ಬಾಳದ ಬೇರಿನ ಭೇದ) ಇತ್ಯಾದಿ ದ್ರವ್ಯಗಳು ಕಫನಾಶಕಗಳಾಗಿವೆ. ಇವಲ್ಲದೆ ವಲ್ಲೀ ಪಂಚಮೂಲ, ಕಂಟಕ ಪಂಚಮೂಲ, ಪಿಪ್ಪಲ್ಯಾದಿ ಗಣ, ಬೃಹತ್ಯಾದಿ ಗಣ, ಮುಷ್ಕಕಾದಿ ಗಣ, ವಚಾದಿ ಗಣ, ಸುರಸಾದಿ ಗಣ ಮತ್ತು ಆರಗ್ವಧಾದಿ ಗಣ ಇವೂ ಕೂಡಾ ಕಫ ಸಂಶಮನ ಗಣಗಳಾಗಿವೆ.

ಭಾವಪ್ರಕಾಶ ನಿಘಂಟು ಪ್ರಕಾರ ದ್ರವ್ಯವರ್ಗಃ—


ಭಾವ ಪ್ರಕಾಶಕಾರನು ಕೆಳಗಿನಂತೆ ದ್ರವ್ಯಗಳ ವರ್ಗೀಕರಣ ಮಾಡಿರುವನು. 1) ಹರಿತಕ್ಯಾದಿ ವರ್ಗ 2) ಕರ್ಪೂರಾದಿ ವರ್ಗ 3) ಗುಡೂಚ್ಯಾದಿ ವರ್ಗ 4) ಪುಷ್ಪ ವರ್ಗ 5) ಫಲ ವರ್ಗ 6) ವಟಾದಿ ವರ್ಗ 7) ಧಾತು ವರ್ಗ 8) ಧಾನ್ಯ ವರ್ಗ 9) ಶಾಕ ವರ್ಗ 10) ವಾರಿ ವರ್ಗ 11) ದುಗ್ಧ ವರ್ಗ 12) ದಧಿ ವರ್ಗ 13) ತಕ್ರ ವರ್ಗ 14) ನವನೀತ ವರ್ಗ 15) ಘೃತ ವರ್ಗ 16) ಮೂತ್ರ ವರ್ಗ 17) ತೈಲ ವರ್ಗ 18) ಮಧು ವರ್ಗ 19) ಇಕ್ಷು ವರ್ಗ 20) ಸಂಧಾನ ವರ್ಗ 21) ಮಾಂಸ ವರ್ಗ.

ಈ ಪ್ರಕಾರ ಚರಕಾಚಾರ್ಯರು, ಸುಶ್ರುತಾಚಾರ್ಯರು ಮತ್ತು ಭಾವಪ್ರಕಾಶಕಾರರು ದ್ರವ್ಯಗಳ ವರ್ಗೀಕರಣವನ್ನು ಮಾಡಿರುವರು.




ದ್ರವ್ಯ ವರ್ಗೀಕರಣ


1 ಕಾರ್ಯಕಾರಣ ಭೇದ




2 ಚೇತನ ಅಚೇತನ ಭೇದ




3 ಪಾಂಚ ಭೌತಿಕ ಭೇದ




4 ಪ್ರಭಾವ ಭೇದ




5 ಯೋನಿ ಭೇದ




6 ಔಷಧಿ ಆಹಾರ ಭೇದ




7 ರಸ ಭೇದ




8 ವಿಪಾಕ ಭೇದ



9 ವೀರ್ಯ ಭೇದ



10 ಕರ್ಮ ಭೇದಃ— ಜೀವನೀಯ, ಬೃಂಹಣೀಯ, ಇತ್ಯಾದಿ ಅನೇಕ ವಿರುವವು.



ಪ್ರಕರಣ ೨

ಗುಣ ವಿಜ್ಞಾನ

ದ್ರವ್ಯಗುಣ ಶಾಸ್ತ್ರದಲ್ಲಿ ರಸ, ವಿಪಾಕ, ವೀರ್ಯ ಇವು ಗುಣರೂಪದಿಂದ ಇದ್ದರೂ ಇವುಗಳ ವಿಷಯವಾಗಿ ಕೂಲಂಕಷವಾಗಿ ತಿಳಿದುಕೊಳ್ಳಬೇಕಾಗಿದೆ. ಅದಕ್ಕಾಗಿ ಇವುಗಳ ಬಗ್ಗೆ ಪ್ರತ್ಯೇಕ ಅಧ್ಯಾಯವನ್ನು ಮಾಡಿ; ಆ ಅಧ್ಯಾಯದಲ್ಲಿ ಇವುಗಳ ಬಗ್ಗೆ ಸಂಪೂರ್ಣ ವಿವೇಚನೆಯನ್ನು ಕೊಡಲಾಗಿದೆ. ಈಗ ಈ ಅಧ್ಯಾಯದಲ್ಲಿ ರಸಾದಿಗಳನ್ನು ಹೊರತು ಪಡಿಸಿ ಉಳಿದ ಯಾವ ಗುಣಗಳನ್ನು ಆಯುರ್ವೇದ ಶಾಸ್ತ್ರಕ್ಕನುಸರಿಸಿ ತಿಳಿದುಕೊಳ್ಳ ಬೇಕಾಗಿದೆಯೋ ಅವುಗಳ ಬಗ್ಗೆ ಸವಿಸ್ತಾರವಾಗಿ ನಿರೂಪಣೆಯನ್ನು ಮಾಡಲಾಗುವದು.

ಆಯುರ್ವೇದ ಶಾಸ್ತ್ರದಲ್ಲಿ ಗುಣಗಳ ಮಹತ್ವವು ದರ್ಶನ ಶಾಸ್ತ್ರಕ್ಕಿಂತ ಭಿನ್ನವಿದೆ. ವೈಶೇಷಿಕ ದರ್ಶನಕಾರರ ಮತದ ಪ್ರಕಾರ ಗುಣ ಇದು ಕೇವಲ ಇಂದ್ರಿಯಾದಿಗಳಿಂದ ತಿಳಿಯುವಂತಹದಾಗಿದೆ. ಆದರೆ ಆಯುರ್ವೇದ ಶಾಸ್ತ್ರಕಾರರ ಪ್ರಕಾರ ಗುಣವು ಶರೀರದಲ್ಲಿ ತನ್ನ ವಿಶಿಷ್ಟ ಕಾರ್ಯವನ್ನು ಮಾಡುವಂಥದಾಗಿದೆ. ಶರೀರದಲ್ಲಿ ಯಾವ ಗುಣವರ್ಧಕ ಆಹಾರ ಇಲ್ಲವೆ ಔಷಧಿಗಳನ್ನು ಸೇವಿಸುತ್ತೇವೆಯೋ ಆ ಗುಣದ ವೃದ್ಧಿಯಾದದ್ದು ಕಂಡು ಬರುವದು. ಮತ್ತು ಯಾವ ಗುಣನಾಶಕ ಆಹಾರ ಇಲ್ಲವೆ ಔಷಧಿಗಳನ್ನು ಸೇವನೆ ಮಾಡುವೆವೋ ಆ ಗುಣನಾಶನ ಕಾರ್ಯವಾದದ್ದು ಕಂಡು ಬರುವದು.

द्रव्याश्रितत्वात् निश्चेष्टकारणत्वात्तथैव च ।
हेतुतोऽसमवयित्वाद् गौणत्वाद् गुणसंज्ञकाः ॥

ವಿವಿಧ ಕಾರ್ಯಗಳಲ್ಲಿ ದ್ರವ್ಯ ಪ್ರಯೋಗವು ಕಾರಣ ರೂಪದಲ್ಲಿ ಆಗುತ್ತದೆ. ಆದರೆ ದ್ರವ್ಯವು ಉಪಯುಕ್ತ ಗುಣಗಳಿಂದ ಯುಕ್ತವಿದ್ದರೆ ಅದು ತನ್ನ ಕಾರ್ಯ ಮಾಡಲು ಸಮರ್ಥವಾಗುತ್ತದೆ. ದ್ರವ್ಯದ ಕಾರ್ಯವು ಹೆಚ್ಚಾಗಿ ದ್ರವ್ಯಾಶ್ರಿತ ಗುಣಗಳಿಂದ ಆಗುತ್ತದೆ. ದ್ರವ್ಯವು ಆಶ್ರಯ ಸ್ಥಾನವಿದ್ದು ಗುಣವು ಆಶ್ರಯಿ ಇರುತ್ತದೆ. ಆಶ್ರಯವು ಮುಖ್ಯವಿರುತ್ತದೆ. ಮತ್ತು ಆಶ್ರಯಿಯು ಗೌಣವಿರುತ್ತದೆ. ಆದ್ದರಿಂದ ದ್ರವ್ಯವು ಗುಣ ಕರ್ಮಾಶ್ರಿತವಿರುವದರಿಂದ ಅದು ಪ್ರಧಾನವು ಮತ್ತು ಗುರ್ವಾದಿ ಗುಣಗಳು ದ್ರವ್ಯಾಶ್ರಿತವಿರುವದರಿಂದ 'ಗೌಣ' ವೆಂದು ತಿಳಿಯಲ್ಪಡುತ್ತವೆ. ಗೌಣವಿರುವದರಿಂದ ಇವುಗಳಿಗೆ 'ಗುಣ' ಗಳೆಂದು ಅನ್ನುವರು.

ಗುಣ ಲಕ್ಷಣ: —

समवायी तु निश्चेष्टः कारणं गुणः । (च. सू. अ. १)
द्रव्याश्रय्य गुणवान् संयोगविभागेष्वकारणमनपेक्ष इति गुण लक्षणम् ।
(वै. द. अ. १)

अथ द्रव्याश्रिता ज्ञेया निर्गुणा निष्क्रिया गुणाः ॥

विश्वलक्षणा गुणाः । (र. वै. अ. १. सू. १६८)

ಯಾವದು ಸಮವಾಯ ಸಂಬಂಧದಿಂದ ದ್ರವ್ಯದಲ್ಲಿ ಆಶ್ರಿತವಾಗಿರುವದೋ; ಕರ್ಮ ರಹಿತವಿರುವದೋ; ಗುಣ ರಹಿತವಿರುವದೋ; ಕ್ರಿಯಾರೂಪ ಕರ್ಮದಿಂದ ಯಾವದು ಭಿನ್ನವಿರುವದೋ; ಮತ್ತು ಸ್ವ ಸಮಾನ ಗುಣಗಳ ಉತ್ಪತ್ತಿಗೆ ಕಾರಣ ಭೂತ (ಸಮವಾಯಿ ಕಾರಣ) ವಾಗಿರುವದೋ ಅದಕ್ಕೆ "ಗುಣ" ವೆಂದು ಅನ್ನುವರು.

ಯಾವುದರ ಲಕ್ಷಣವು ವಿಶ್ವ (ವಿಕೀರ್ಣ, ಭಿನ್ನ) ವಿರುವದೋ ಅದು ಗುಣವು. ದ್ರವ್ಯ, ರಸ, ವಿಪಾಕ, ವೀರ್ಯ ಮತ್ತು ಕರ್ಮ ಇವುಗಳ ಬೋಧವು ಒಂದೊಂದು ಲಕ್ಷಣದಿಂದ ಆಗುವದು.

यथा:- शब्दादीनामाश्रयत्वं सर्व द्रव्य भेदानां तुल्यं, आस्वाद ग्राह्यावरोधश्च रस भेदानां, कर्मलक्षणावरोधत्वं वीर्याणां, विपाकयोश्च परिणामलक्षणावरोधस्तुल्यः; गुणानामेवमेकलक्षणावरोधो नास्ति । (भा)

ಶಬ್ದಾದಿಗಳ ಆಶ್ರಯ ದ್ರವ್ಯದಲ್ಲಿರುವದು; ರಸನೇಂದ್ರಿಯದಿಂದ ರಸದ ಗ್ರಹಣ ವಾಗುವದು. ಕರ್ಮ ಲಕ್ಷಣ ವೀರ್ಯ, ಪರಿಣಾಮ ಲಕ್ಷಣ ವಿಪಾಕ ಈ ಲಕ್ಷಣ ಗಳಿಂದ ದ್ರವ್ಯಭೇದ, ರಸಭೇದ, ವೀರ್ಯಭೇದ ಮತ್ತು ವಿಪಾಕ ಭೇದಗಳ ಅವ ರೋಧ ಅಥವಾ ಅಂತರ್ಭಾವವಾಗುವದು. ಆದರೆ ಗುಣದ ಯಾವದೇ ಲಕ್ಷಣದಿಂದ ಸರ್ವಗುಣಗಳ ಅಂತರ್ಭಾವವಾಗುವದಿಲ್ಲ. ಉದಾಃ- ಶೀತೋಷ್ಣಾದಿ ಗುಣಗಳು ಸ್ಪರ್ಶನೇಂದ್ರಿಯ ಗ್ರಾಹ್ಯವಿರುವವು. ಸ್ನಿಗ್ಧ ಮತ್ತು ರೂಕ್ಷ ಗುಣಗಳು ಚಕ್ಷುರಿಂದ್ರಿಯ ಗ್ರಾಹ್ಯ ಹಾಗು ಸ್ಪರ್ಶನೇಂದ್ರಿಯ ಗ್ರಾಹ್ಯವಿರುವವು. ಆದರೆ ಒಂದೇ ವಿಶಿಷ್ಟ ಲಕ್ಷಣ ದಿಂದ ಸರ್ವಗುಣಗಳ ಅಂತರ್ಭಾವ ಮಾಡಲು ಬರುವದಿಲ್ಲ. ಆದ್ದರಿಂದ ಗುಣವು ವಿಶ್ವಲಕ್ಷಣ (ಭಿನ್ನಲಕ್ಷಣ) ಉಳ್ಳದ್ದು ಇರುವದು.

ಈ ರೀತಿಯಾಗಿ ಅನೇಕ ವಿಧವಾಗಿ ಗುಣದ ವ್ಯಾಖ್ಯೆಯನ್ನು ಮಾಡುವರು.

ಗುಣವು ದ್ರವ್ಯದ ಅಭೇದಕ ಕಾರಣವಿರುವದು. ದ್ರವ್ಯದ ನಿರ್ಮಿತಿಯ ಸಂಗ ಡವೇ ಅದರ ನಿರ್ಮಿತಿಯಾಗುವದು. ಸ್ವತಂತ್ರ ಕಾರ್ಯ ಮಾಡಲಿಕ್ಕೆ ಅಸಮರ್ಥ ವಿರುವದು. ಮತ್ತು ಅದನ್ನು ದ್ರವ್ಯದಿಂದ ಬೇರ್ಪಡಿಸಲು ಬರುವದಿಲ್ಲ. ಅನೇಕ ರೀತಿಯಿಂದ ಗುಣದ ವ್ಯಾಖ್ಯೆಯನ್ನು ಮಾಡಿದರೂ ಅದರ ಸ್ಪಷ್ಟಕಲ್ಪನೆ ನಮಗೆ ಆಗದೇ ಇರುವದು ಸ್ವಾಭಾವಿಕವಾಗಿದೆ.

ಶರೀರವು ಪಾಂಚಭೌತಿಕವಿರುವದು. ಮತ್ತು ಸೃಷ್ಟಿಯಲ್ಲಿರುವ ಸರ್ವ ದ್ರವ್ಯ ಗಳು ಪಾಂಚಭೌತಿಕವಿರುವವು. ನಾವು ದಿನಾಲು ಆಹಾರವನ್ನು ಸೇವಿಸುವೆವು. ಅದು ಪಚನವಾಗಿ ರೂಪಾಂತರವಾಗಿ ಶರೀರ ಸಾತ್ಮ್ಯವಾಗುವದು. ಅರ್ಥಾತ್ ಶರೀರ ಪಂಚಭೌತಿಕಗಳಲ್ಲಿ ಅದರ ಸಮರಸವಾಗುವದು. ಮತ್ತು ಚೈತನ್ಯ ಪ್ರಾಪ್ತವಾಗುವದು. ಈ ರೀತಿಯಾಗಿ ದ್ರವ್ಯದಿಂದ ಶರೀರದಲ್ಲಿ ಉಂಟಾಗುವ ಪರಿಣಾಮಕ್ಕೆ ಗುಣವೆನ್ನಲು

ಅಡ್ಡಿಯಿಲ್ಲ. ಸತ್ವ, ರಜ, ತಮ ಇವು ಮೂರು ಪ್ರಕೃತಿಯ ಗುಣಗಳಿದ್ದು ಇವುಗಳಿಂದ ಗುರ್ವಾದಿ ಗುಣಗಳ ಉತ್ಪತ್ತಿಯಾಗುತ್ತದೆ.

ಉದಾಃ- 1) ಮೂಲ ರಜೋ ಗುಣವು ಚಲ ಮತ್ತು ಪ್ರವೃತ್ತಿ ಸ್ವರೂಪದ್ದಿರುವದರಿಂದ ಆಶು, ವಿಕಾಶಿ, ಸ್ಪರ್ಶ, ಇಚ್ಛಾ ಇತ್ಯಾದಿ ಗುಣಗಳು ಉತ್ಪನ್ನವಾಗುವವು.

2) ಮೂಲ ತಮೋ ಗುಣವು ಅಧೋಗಾಮಿ, ಜಡ, ಆವರಣ, ಸ್ಥಿರ, ಈ ಸ್ವರೂಪ ಉಳ್ಳದ್ದಿರುವದು. ಮತ್ತು ಇದರಿಂದ ಗುರು, ಮಂದ, ಕಠಿಣ, ಸ್ಥೂಲ, ಗಂಧ ಇತ್ಯಾದಿ ಗುಣಗಳು ಉತ್ಪನ್ನವಾಗುವವು. ಮತ್ತು ಇವು ಪೃಥ್ವಿ+ಜಲ ತತ್ವ ಪ್ರಾಧಾನ್ಯವುಳ್ಳವಿರುವವು.

3) ಮೂಲ ಸತ್ವ ಗುಣವು ಊರ್ಧ್ವಗಾಮಿ, ಲಘು, ಪ್ರಕಾಶ ಈ ಸ್ವರೂಪ ಉಳ್ಳದ್ದಿರುವದು. ಮತ್ತು ಇದರಿಂದ ಲಘು, ಶಬ್ದ ಇತ್ಯಾದಿ ಗುಣಗಳು ಉತ್ಪನ್ನವಾಗುವವು. ಮತ್ತು ಇವು ವಾಯು+ಆಕಾಶ+ಅಗ್ನಿ ತತ್ವ ಪ್ರಾಧಾನ್ಯವಿರುವವು.

ಗುಣ ಸಂಖ್ಯಾಃ—

सार्था गुर्वादयो बुद्धिः प्रयत्नान्ताः परादयः ।
गुणाः प्रोक्ताः ; (च॰ सू. अ. १)

ಗುಣಗಳು ಒಟ್ಟು 41 ಇದ್ದು; ಅವುಗಳಲ್ಲಿ

1) ಅಧ್ಯಾತ್ಮಿಕ ಗುಣಗಳು	6
2) ಗುರ್ವಾದಿ ಗುಣಗಳು	20
3) ಪರಾದಿ ಗುಣಗಳು	10
4) ವಿಶಿಷ್ಠ ಗುಣಗಳು	5
	41

ಹೀಗೆ ಒಟ್ಟು 41 ಗುಣಗಳಿರುತ್ತವೆ.

ಅಧ್ಯಾತ್ಮಿಕ ಗುಣಗಳುಃ—

ಇಚ್ಛಾ, ದ್ವೇಷ, ಸುಖ, ದುಃಖ, ಪ್ರಯತ್ನ ಮತ್ತು ಬುದ್ಧಿ ಇವು ಆರು ಆತ್ಮ ಗುಣಗಳು ಇಲ್ಲವೆ ಅಧ್ಯಾತ್ಮಿಕ ಗುಣಗಳಿರುವವು. ಸ್ಮೃತಿ, ಚೇತನಾ, ಧೃತಿ, ಅಹಂಕಾರಾದಿಗಳು ಬುದ್ಧಿ ವಿಶೇಷವಿರುವವರಿಂದ ಅವುಗಳನ್ನು ಬುದ್ಧಿಯಲ್ಲಿಯೇ ಅಂತರ್ಭಾವ ಮಾಡಿರುವರು.

ಗುರ್ವಾದಿ ಗುಣಗಳುಃ—

ಇವುಗಳಿಗೆ ಶಾರೀರಿಕ ಗುಣಗಳೆಂದು ಕರೆಯುವರು. ಇವು 20 ಇರುತ್ತವೆ.

गुरु मंद हिम स्निग्ध श्लक्ष्ण सांद्र मृदु स्थिरः ।
गुणाः ससूक्ष्म विशदा विंशतिः सविपर्ययाः ॥ (अ. हृ. सू. अ. १)

ಗುರು, ಲಘು, ಮಂದ, ತೀಕ್ಷ್ಣ, ಶೀತ, ಉಷ್ಣ, ಸ್ನಿಗ್ಧ, ರೂಕ್ಷ, ಶ್ಲಕ್ಷ್ಣ, ಖರ, ಸಾಂದ್ರ, ದ್ರವ, ಮೃದು, ಕಠಿಣ, ಸ್ಥಿರ, ಸರ, ಸೂಕ್ಷ್ಮ, ಸ್ಥೂಲ, ವಿಶದ ಮತ್ತು ಪಿಚ್ಛಿಲ ಇವು ಇಪ್ಪತ್ತು ಸಾಮಾನ್ಯ ಗುಣಗಳಿರುತ್ತವೆ.

ಪರಾದಿ ಗುಣಗಳು:—

ಇವು ಹತ್ತು ಗುಣಗಳಿರುತ್ತವೆ. ಇವಾದರೂ ಸಾಮಾನ್ಯ ಗುಣಗಳೇ ಇರುತ್ತವೆ.

परापरत्वे युक्तिश्च संख्या संयोग एव च ।
विभागश्च पृथक्त्वं च परिमाणमथापि च ॥
संस्कारोऽभ्यास इत्येते गुणाः ज्ञेयाः परादयः । च. सू.


ಪರ, ಅಪರ, ಯುಕ್ತಿ, ಸಂಖ್ಯಾ, ಸಂಯೋಗ, ವಿಭಾಗ, ಪೃಥಕ್ತ್ವ, ಪರಿಮಾಣ, ಸಂಸ್ಕಾರ ಮತ್ತು ಅಭ್ಯಾಸ ಇವು ಹತ್ತು ಪರಾದಿ ಗುಣಗಳಿರುತ್ತವೆ. ಇವುಗಳ ಜ್ಞಾನದಿಂದ ಚಿಕಿತ್ಸೆಯಲ್ಲಿ ಯಶವನ್ನು ಸಂಪಾದಿಸಲು ಸಾಧ್ಯವಾಗುತ್ತದೆ.

ವಿಶಿಷ್ಟ ಗುಣ:—

ಮಹಾಭೂತಗಳ ವಿಶಿಷ್ಟ ಗುಣಗಳಿಗೆ ಮತ್ತು ಪಂಚೇಂದ್ರಿಯಗಳ ವಿಶಿಷ್ಟ ವಿಷಯಗಳಿಗೆ ವಿಶಿಷ್ಟ ಗುಣಗಳೆಂದು ಅನ್ನುವರು. ಈ ಗುಣಗಳು ಐದು ಇರುತ್ತವೆ. ಅವು ಯಾವುವೆಂದರೆ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ. ಇವು ಐದು ಕ್ರಮಶಃ ಆಕಾಶಾದಿ ಪಂಚ ಮಹಾಭೂತಗಳ ವಿಶಿಷ್ಟ ಗುಣಗಳಿದ್ದು; ಶ್ರೋತ್ರಾದಿ ಪಂಚ ಜ್ಞಾನೇಂದ್ರಿಯಗಳ ವಿಶಿಷ್ಟ ವಿಷಯಗಳಿರುತ್ತವೆ.

ನ್ಯಾಯಶಾಸ್ತ್ರಕಾರರು 24 ಗುಣಗಳಿರುವವೆಂದು ಹೇಳಿರುವರು. 1) ಶಬ್ದ 2) ಸ್ಪರ್ಶ 3) ರೂಪ 4) ರಸ 5) ಗಂಧ 6) ಸಂಖ್ಯಾ 7) ಪರಿಮಾಣ 8) ಪೃಥಕ್ತ್ವ 9) ಸಂಯೋಗ 10) ವಿಭಾಗ 11) ಪರ 12) ಅಪರ 13) ಬುದ್ಧಿ 14) ಸುಖ 15) ದುಃಖ 16) ಇಚ್ಛಾ 17) ದ್ವೇಷ 18) ಪ್ರಯತ್ನ 19) ಗುರು 20) ದ್ರವ 21) ಸ್ನೇಹ 22) ಸಂಸ್ಕಾರ 23) ಧರ್ಮ 24) ಅಧರ್ಮ. ಹೀಗೆ 24 ಗುಣಗಳಿದ್ದು; ಮೇಲೆ ಹೇಳಿದ 41 ಗುಣಗಳನ್ನು ಈ 24 ಗುಣಗಳಲ್ಲಿಯೇ ಸಮಾವೇಶ ಮಾಡಲು ಬರುವದು.

ಗುಣ ಸಂಖ್ಯಾ ನಿರೂಪಣ



ಗುಣ ಸಂಖ್ಯಾ ವಿಷಯದಲ್ಲಿ ಬೇರೆ ಬೇರೆ ಆಚಾರ್ಯರ ಮತದ ಪ್ರಕಾರ ಭಿನ್ನ ಸಂಖ್ಯಾ ಇದ್ದದ್ದು ಕಂಡು ಬರುವದು.

ಚರಕಾಚಾರ್ಯರ ಪ್ರಕಾರಃ—

गुरु लघु शीत उष्ण स्निग्ध रुक्ष मंद तीक्ष्ण स्थिर सर मृदु कठिन विशद पिच्छिल श्लक्ष्ण खर स्थूल सूक्ष्म सांद्र द्रवाः विंशतिः । (च. सू. अ. २५)

ಗುರು, ಲಘು, ಶೀತ, ಉಷ್ಣ, ಸ್ನಿಗ್ಧ, ರೂಕ್ಷ, ಮಂದ, ತೀಕ್ಷ್ಣ, ಸ್ಥಿರ, ಸರ, ಮೃದು, ಕಠಿನ, ವಿಶದ, ಪಿಚ್ಛಿಲ, ಶ್ಲಕ್ಷ್ಣ, ಖರ, ಸ್ಥೂಲ, ಸೂಕ್ಷ್ಮ, ಸಾಂದ್ರ ಮತ್ತು ದ್ರವ ಹೀಗೆ ಇಪ್ಪತ್ತು ಗುಣಗಳಿರುತ್ತವೆ.

ಸುಶ್ರುತಾಚಾರ್ಯರ ಪ್ರಕಾರಃ—

ಶೀತ, ಉಷ್ಣ, ಸ್ನಿಗ್ಧ, ರೂಕ್ಷ, ಪಿಚ್ಛಿಲ, ವಿಶದ, ತೀಕ್ಷ್ಣ, ಮೃದು, ಗುರು, ಲಘು, ದ್ರವ, ಸಾಂದ್ರ, ಸ್ಥೂಲ, ಸೂಕ್ಷ್ಮ, ಶ್ಲಕ್ಷ್ಣ, ಕರ್ಕಶ, ಸುಗಂಧ, ದುರ್ಗಂಧ, ಸರ, ಮಂದ ಇವು ಇಪ್ಪತ್ತು ಗುಣಗಳು. ಇವಲ್ಲದೆ ವ್ಯವಾಯಿ, ವಿಕಾಶಿ, ಆಶುಕಾರಿ ಎಂಬ ಗುಣಗಳನ್ನು ಸುಶ್ರುತಾಚಾರ್ಯರು ಹೇಳಿರುವರು.

ವಾಗ್ಭಟಾಚಾರ್ಯರ ಪ್ರಕಾರಃ—

गुरु मंद हिम स्निग्ध श्लक्ष्ण सांद्र मृदु स्थिराः ।
गुणाः ससूक्ष्म विशदा विंशतिः सविपर्ययाः ॥ (अ. हृ. सू. अ. १)

ಗುರು, ಲಘು, ಮಂದ, ತೀಕ್ಷ್ಣ, ಶೀತ, ಉಷ್ಣ, ಸ್ನಿಗ್ಧ, ರೂಕ್ಷ, ಶ್ಲಕ್ಷ್ಣ, ಖರ, ಸಾಂದ್ರ, ದ್ರವ, ಮೃದು, ಕಠಿನ, ಸ್ಥಿರ, ಸರ, ಸೂಕ್ಷ್ಮ, ಸ್ಥೂಲ, ವಿಶದ, ಪಿಚ್ಛಿಲ ಇವು ಇಪ್ಪತ್ತು ಗುಣಗಳನ್ನು ವಾಗ್ಭಟಾಚಾರ್ಯರು ಹೇಳಿರುವರು.

ಭಾವ ಪ್ರಕಾಶಕಾರರ ಪ್ರಕಾರ:—

गुरुर्लघुः स्निग्ध रुक्षौ तीक्ष्णः श्लक्ष्णः स्थिरः सरः ।
पिच्छिलो विशदः शीत उष्णश्च मृदु कर्कशौ ॥
स्थूलः सूक्ष्मो द्रवः शुष्क आशुर्मन्दः स्मृता गुणाः । (भा. प्र.)

ಗುರು—ಲಘು, ಸ್ನಿಗ್ಧ—ರೂಕ್ಷ, ತೀಕ್ಷ್ಣ—ಶ್ಲಕ್ಷ್ಣ, ಸ್ಥಿರ—ಸರ, ಪಿಚ್ಛಿಲ—ವಿಶದ, ಶೀತ—ಉಷ್ಣ, ಮೃದು—ಕರ್ಕಶ, ಸ್ಥೂಲ—ಸೂಕ್ಷ್ಮ, ದ್ರವ—ಶುಷ್ಕ, ಆಶು—ಮಂದ ಈ ಇಪ್ಪತ್ತು ಗುಣಗಳನ್ನು ಭಾವ ಪ್ರಕಾಶಕಾರರು ಹೇಳಿರುವರು.

ಗುರ್ವಾದಿ ಗುಣ ಸ್ವರೂಪ ನಿರೂಪಣ

1) **ಗುರು ಗುಣಃ—**

सादोपलेप बलकृद् गुरुस्तर्पण बृंहणः । सु. सू. ४६
गुरु वातहरं पुष्टि श्लेष्मकृच्चिरपाकि च । (भा. प्र.)

यस्य द्रव्यस्य बृंहणे कर्मणि शक्तिः स. गुरुः । (हे)
गौरवं पार्थिवमाप्यंच । (र. वै. अ. ३ सू. ११६)
गौरवं जलभूम्योः पतनकारणम् । (प्रशस्त पाद भाष्य)
गुरु खर कठिन मंद स्थिर विशद सांद्र स्थूल गंध गुण बहुलानि पार्थिवानि।
(च. सू. अ. २६)

लघुर्गुरुस्तथा स्निग्धो रुक्षस्तीक्ष्ण इति क्रमात् ।
नभो भू वारि वातानां वह्नेरेते गुणाः स्मृताः ॥ (भा. प्र. पू. खं.)
स्निग्धः शीतो गुरुर्मन्दः श्लक्ष्णो मृत्स्नः स्थिरः कफः । (अ. हृ. सू. १)

1) ಗುರು ಗುಣ ಸ್ವರೂಪಃ—

ಯಾವ ದ್ರವ್ಯ ಸೇವನೆಯಿಂದ ಸಾದ, ಉಪಲೇಪ, ಬೃಂಹಣ, ತರ್ಪಣ ಮತ್ತು ಬಲಗಳ ವೃದ್ಧಿಯಾಗುವದೋ ಅದಕ್ಕೆ ಗುರು ದ್ರವ್ಯವೆಂದು ಅನ್ನುವರು. ವ್ಯವಹಾರದಲ್ಲಿ ಇದಕ್ಕೆ ಜಡ ಅಥವಾ (Heaviness) ಎಂದು ಅನ್ನುವರು. ಯಾವ ಗುಣದ ಮೂಲಕ ದ್ರವ್ಯವು ಅಧೋಗಾಮಿ ಅಥವಾ ಕೆಳಗೆ ಹೋಗುವದೋ ಆ ದ್ರವ್ಯವು ಗುರು ಗುಣಯುಕ್ತವಿರುವದು. ಈ ಗುಣದ ಭೌತಿಕ ಆಧಾರವು ಪೃಥ್ವಿ ಮತ್ತು ಆಪ್ ಮಹಾಭೂತಾಧಿಕ್ಯವುಳ್ಳದ್ದಿರುವದು. ಲವಣ ರಸ, ಕಷಾಯ ರಸ ಮತ್ತು ಮಧುರ ರಸ ಇವು ಉತ್ತರೋತ್ತರ ಗುರು ಗುಣಾಧಿಕ್ಯವಿರುವವು. ಮಧುರ ರಸವು ಪೃಥ್ವಿ ಮತ್ತು ಜಲ ಮಹಾಭೂತ ಪ್ರಾಧಾನ್ಯವುಳ್ಳದ್ದಿರುವದು. ಇಲ್ಲಿ ಪೃಥ್ವಿ ಮಹಾಭೂತವು ಪಂಚ ಮಹಾಭೂತಗಳಲ್ಲಿಯೇ ಅತ್ಯಧಿಕ ಗುರು ಇರುವದು. ಪೃಥ್ವಿಯ ನಂತರ ಆಪ್ ಮಹಾಭೂತವು ಸ್ವಲು ಕಡಿಮೆ ಗುರು ಇರುವದು. ಆದ್ದರಿಂದ ಇವೆರಡು ಮಹಾಭೂತಗಳ ಆಧಿಕ್ಯದಿಂದುಂಟಾದ ಮಧುರ ರಸವು ಅತ್ಯಂತ ಗುರು ಇರುವದು. ಲವಣ ಮತ್ತು ಕಷಾಯ ರಸ ದ್ರವ್ಯಗಳು ಅನುಕ್ರಮವಾಗಿ ಜಲ-ತೇಜ ಮತ್ತು ಪೃಥ್ವಿ-ವಾಯು ಮಹಾಭೂತ ಪ್ರಾಧಾನ್ಯವುಳ್ಳವಿರುವವು. ಆದ್ದರಿಂದ ಕಷಾಯ ರಸ ದ್ರವ್ಯಗಳು ಲವಣ ರಸ ದ್ರವ್ಯಗಳಿಗಿಂತ ಅಧಿಕ ಗುರು ಇರುತ್ತವೆ. ಗುರು ಗುಣವು ಅರ್ಥಾತ್ ಗುರು ಗುಣ ಯುಕ್ತ ದ್ರವ್ಯಗಳ ವಿಪಾಕವು ಪ್ರಾಯಶಃ ಗುರು ವಿಪಾಕ ಅಥವಾ ಮಧುರ ವಿಪಾಕವಾಗುವದು. ತ್ರಿದೋಷಗಳಲ್ಲಿ ಕಫ ದೋಷವು ಅಧಿಕ ಗುರು ಗುಣ ಸ್ವರೂಪದ್ದಿರುವದು.

ಗುರು ಗುಣ ಕಾರ್ಯಃ

सादः अंग ग्लानिः, उपलेपो मलवृद्धिः, बलं श्लेष्मा ।
गुरु गुणः । तर्पणः तृप्तिजनकः । बृंहणो देहवृद्धिकरः । (डल्हण)

ಗುರು ಗುಣ ದ್ರವ್ಯಗಳನ್ನು ಸೇವಿಸುವದರಿಂದ ಶರೀರದಲ್ಲಿ ಈ ಕೆಳಗಿನ ಕಾರ್ಯಗಳಾದದ್ದು ಕಂಡು ಬರುವದು.

ಸಾದ (ಅಂಗಗ್ಲಾನಿ), ಉಪಲೇಪ (ಮಲ ವೃದ್ಧಿ), ಬಲವರ್ಧನ, ತರ್ಪಣ (ತೃಪ್ತಿಜನಕ), ಬೃಂಹಣ (ಧಾತುಗಳ ಪುಷ್ಟಿ), ವಾತಹರ, ಕಫಹರ, ಚಿರಪಾಕಿ, ಸ್ಥೈರ್ಯ, ಗೌರವ, ಸಂಧಾನಕರ, ಸ್ನೇಹನ, ಆಹ್ಲಾದನ, ಕ್ಲೇದನ, ಸೃಷ್ಟ ವಿಟ್ಕತಾ, ಸೃಷ್ಟ ಮೂತ್ರತಾ ಇತ್ಯಾದಿ ಕಾರ್ಯಗಳಾದವು ಕಂಡು ಬರುವದು.

ಗುರು ಗುಣ ದ್ರವ್ಯ:—

ಗುರು ಗುಣದ ಭೌತಿಕ ಆಧಾರ ಪೃಥ್ವಿ ಮತ್ತು ಜಲ ಮಹಾಭೂತ ಆಧಿಕ್ಯ ಇರುವದರಿಂದ ಪಾರ್ಥಿವ ಮತ್ತು ಆಪ್ಯವರ್ಗ ದ್ರವ್ಯಗಳಲ್ಲಿ ಗುರು ಗುಣವು ಇರುವದು. ಉದಾ:-ದುಗ್ಧ, ದಧಿ, ಅನೂಪ ಮಾಂಸ, ಗೋಧೂಮ, ಜೀವನೀಯ ಗಣ, ಅಷ್ಟವರ್ಗ ಜೇಷ್ಠಮಧು, ಶತಾವರಿ ಇತ್ಯಾದಿ.

2) ಲಘು ಗುಣ:—

लघु पथ्यं परं प्रोक्तं कफघ्नं शीघ्रपाकि च । (भा. प्र.)
लङ्घने लघुः । (हे)
लघुस्तद्विपरीतः स्याल्लेखनो रोपणस्तथा । (सु. सू. अ. ४६)
लाघवमन्यदीयम् । (र. वै. सू. अ. ३)
तत्र रुक्षो लघुः शीतः खरः सूक्ष्मश्चलोऽनिलः । (अ. हृ. सू. १)
वातस्तु रुक्ष लघु चल बहुशीघ्र शीत परुष विशदः । (च. वि. अ. ८)
उष्ण तीक्ष्ण सूक्ष्म लघु रुक्ष विशद रुप गुण बहुलानि आग्नेयानि ।
लघु शीत रुक्ष खर विशद सूक्ष्म स्पर्श गुणबहुलानि वायव्यानि । मृदु लघु सूक्ष्म श्लक्ष्ण शब्द गुण बहुलानि आकाशात्मकानि । (च. वि. अ. ८)

ಲಘು ಗುಣ ಸ್ವರೂಪ:—

ಯಾವ ಗುಣವು ಗುರು ಗುಣದ ವಿಪರೀತಕಾರ್ಯ ಮಾಡುವದೋ; ಮತ್ತು ಕಫವ ಹ್ರಾಸ ಮಾಡಿ ಶರೀರವನ್ನು ಕರ್ಷಣ ಮಾಡುವದೋ ಅದಕ್ಕೆ ಲಘು ಗುಣ ವೆನ್ನುವರು. ವ್ಯವಹಾರದಲ್ಲಿ ಇದಕ್ಕೆ 'ಹಗುರ' ಎಂದು ಅನ್ನುವರು. ಲಘು ಗುಣದ ಭೌತಿಕ ಸ್ವರೂಪದ ಜ್ಞಾನವು ಚಕ್ಷುರಿಂದ್ರಿಯದಿಂದ ಆಗುವದು. ಆಕಾಶ, ವಾಯು ಮತ್ತು ತೇಜ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಲಘು ಗುಣಾತ್ಮಕವಿರುತ್ತವೆ. ವಾಗ್ಭಟನ ಪ್ರಕಾರ ಅಮ್ಲ, ಕಟು ಮತ್ತು ತಿಕ್ತ ರಸಾತ್ಮಕ ದ್ರವ್ಯಗಳು ಉತ್ತರೋತ್ತರ ಲಘು ಇರುವವು. ತಿಕ್ತ ರಸಾತ್ಮಕ ದ್ರವ್ಯಗಳು ಆಕಾಶ ಮತ್ತು ವಾಯು ಮಹಾಭೂತ ಪ್ರಾಧಾನ್ಯವುಳ್ಳವಿರುವವು. ಇವೆರಡು ಮಹಾಭೂತಗಳು ಲಘು ಇರುವದರಿಂದ ತಿಕ್ತ ರಸಾತ್ಮಕ ದ್ರವ್ಯಗಳು ಇತರ ದ್ರವ್ಯಗಳಿಗಿಂತ ಅಧಿಕ ಲಘು ಇರುವವು. ಕಟು ರಸ ದ್ರವ್ಯಗಳು ವಾಯು ಮತ್ತು ತೇಜ ಮಹಾಭೂತ ಪ್ರಾಧಾನ್ಯವುಳ್ಳವಿರುವವು. ತೇಜವು ಆಕಾಶಕ್ಕಿಂತ ಸ್ವಲ್ಪ ಗುರು ಇರುವದರಿಂದ ಕಟು ರಸಾತ್ಮಕ ದ್ರವ್ಯಗಳು ತಿಕ್ತ ರಸಾತ್ಮಕ

ದ್ರವ್ಯಗಳಿಗಿಂತ ಲಘುತ್ವದಲ್ಲಿ ಕಡಿಮೆ ಇರುವವು. ಅಮ್ಲ ರಸಾತ್ಮಕ ದ್ರವ್ಯಗಳು ಪೃಥ್ವಿ ಮತ್ತು ತೇಜ ಮಹಾಭೂತ ಪ್ರಾಧಾನ್ಯವುಳ್ಳವಿರುವದರಿಂದ; ಕಟು ರಸಾತ್ಮಕ ದ್ರವ್ಯಗಳಿಗಿಂತ ಲಘುತ್ವದಲ್ಲಿ ಕಡಿಮೆ ಇರುವವು. ಲಘು ಗುಣ ಅರ್ಥಾತ್ ಲಘು ಗುಣಾತ್ಮಕ ದ್ರವ್ಯಗಳು ಪ್ರಾಯಶಃ ಉಷ್ಣ ವೀರ್ಯಾತ್ಮಕವಿರುವವು. ಲಘು ಗುಣ ಯುಕ್ತ ದ್ರವ್ಯಗಳ ವಿಪಾಕವು ಪ್ರಾಯಶಃ ಲಘು ವಿಪಾಕ ಅಥವಾ ಕಟು ವಿಪಾಕ ವಾಗುವದು. ತ್ರಿದೋಷಗಳಲ್ಲಿ ವಾತ ಮತ್ತು ಪಿತ್ತ ದೋಷಗಳು ಲಘು ಗುಣ ಸ್ವರೂಪದವಿರುವವು.

ಲಘು ಗುಣ ಕಾರ್ಯ:—

लघु तद्विपरीत इति असाद अनुलेपादिकृत् कफहरश्च इत्यर्थः लेखनः पत्तली-करणः । (डल्हण)

ಲಘು ಗುಣ ದ್ರವ್ಯಗಳನ್ನು ಸೇವಿಸುವದರಿಂದ ಶರೀರದಲ್ಲಿ ಕೆಳಗಿನ ಕಾರ್ಯ ಗಳಾದದ್ದು ಕಂಡು ಬರುವದು.

ಅಸಾದ (ಸ್ಫೂರ್ತಿ ಮತ್ತು ಉತ್ಸಾಹ), ಅನುಪಲೇಪ (ಮಲಕ್ಷಯ), ಕಫಹರ, ಬಲಹಾನಿ, ಅಪತರ್ಪಣ, ಕರ್ಷಣ (ಕೃಶ), ಲೇಖನ, ವ್ರಣರೋಪಣ, ವಾತ ವರ್ಧನ, ಅಚಿರಪಾಕಿ, ಅಗ್ನಿದೀಪಕ, ಪಾಚನ, ರೂಕ್ಷಣ, ವೈಶದ್ಯ, ಸೌಷಿರ್ಯಕರ, ಬದ್ಧ ವಿಟ್ಕತಾ, ಬದ್ಧ ಮೂತ್ರತಾ, ಸ್ರೋತೋ ಶೋಧಕ ಇತ್ಯಾದಿ ಕಾರ್ಯಗಳಾದದ್ದು ಕಂಡು ಬರುವದು. ಅಲ್ಲದೆ ಈ ದ್ರವ್ಯಗಳು ಕಟು ಪೌಷ್ಟಿಕ, ಆಮಪಾಚಕ, ಜ್ವರಹರ, ಜಾಡ್ಯಹರ ವಿರುವವು.

ಲಘು ಗುಣ ದ್ರವ್ಯ:—

ಲಘು ಗುಣದ ಭೌತಿಕ ಆಧಾರ ವಾಯು, ಆಕಾಶ ಮತ್ತು ತೇಜ ಮಹಾಭೂತ ಗಳ ಆಧಿಕ್ಯವಿರುವದರಿಂದ ವಾಯವೀಯ, ಆಕಾಶೀಯ ಮತ್ತು ಆಗ್ನೇಯ (ತೈಜಸ) ವರ್ಗ ದ್ರವಗಳಲ್ಲಿ ಲಘು ಗುಣವು ಇರುವದು. ಉದಾ:—ಚಂದನ, ಉಶೀರ, ವಚಾ, ಜಾಂಗಲ ಪ್ರಾಣಿ ಮಾಂಸ, ಶಾಲಿ, ದಾಡಿಮ, ಹರಿಣ ಮಾಂಸ, ಜೀರಕ, ಮಸೂರ, ಶುಂಠಿ, ಪಿಪ್ಪಲಿ, ಕರ್ಪೂರ, ಪರ್ಪಟ, ನಿಂಬ, ಗುಗ್ಗುಲು, ತಾಲೀಸ, ಅಜಮೋದಾ ಯವಾನಿ ಇತ್ಯಾದಿ.

ಶೀತ ಗುಣ:—

स्तम्भने हिमः । (हे)
ह्लादनः स्तम्भनः शीतो मूर्च्छा तृट् स्वेद दाहजित् । (सु. सू. ४६)
शीतस्तु ह्लादनः स्तम्भी मूर्च्छा तृट् स्वेद दाहजित् । (भा. प्र.)
शीत स्पर्शवत्य आपः । (तर्क संग्रह)
शीत स्निग्ध गुरु पिच्छिलास्तत्राप्याः । (र. वै. सू. ३)

शीत स्तिमित स्निग्ध .... मधुर रस प्रायमाप्यम् । (सु. सू. ४६)
वर्णः शुक्लो रस स्पर्शौ जले मधुर शीतलौ । (का)

ಶೀತ ಗುಣ ಸ್ವರೂಪ:—

ಯಾವ ಗುಣ ದ್ರವ್ಯದ ಬಾಹ್ಯ ಮತ್ತು ಅಭ್ಯಂತರ ಉಪಯೋಗದಿಂದ ಪ್ರಸನ್ನತಾ ಮತ್ತು ಸ್ತಂಭನ ಉತ್ಪನ್ನವಾಗುವವೋ ಮತ್ತು ಮೂರ್ಛಾ, ತೃಷ್ಣಾ, ಸ್ವೇದ ಮತ್ತು ದಾಹ ಶಮನವಾಗುವವೋ ಅದಕ್ಕೆ "ಶೀತ" ಗುಣನೆಂದು ಅನ್ನುವರು. ವ್ಯವಹಾರದಲ್ಲಿ ಇದಕ್ಕೆ "ತಂಪು" "ತಣ್ಣಗೆ ಎಂದು ಅನ್ನುವರು. ಶೀತ ಗುಣದ ಭೌತಿಕ ಸ್ವರೂಪವು ಸ್ಪರ್ಶನೇಂದ್ರಿಯವಿರುವದು. ಜಲ, ಪೃಥ್ವಿ ಮತ್ತು ವಾಯು ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಶೀತ ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ತಿಕ್ತ, ಕಷಾಯ, ಮತ್ತು ಮಧುರ ರಸಗಳು ಉತ್ತರೋತ್ತರ ಶೀತ ಗುಣಾತ್ಮಕವಿರುತ್ತವೆ. ಶೀತ ಗುಣ ಅಥವಾ ಶೀತ ಗುಣಾತ್ಮಕ ದ್ರವ್ಯಗಳು ಪ್ರಾಯಃ ಶೀತ ವೀರ್ಯಾತ್ಮಕವಿರುವವು, ಹಾಗೂ ಹೆಚ್ಚಾಗಿ ಮಧುರ ವಿಪಾಕಿ ಇರುವವು. ತ್ರಿದೋಷಗಳಲ್ಲಿ ವಾತ ಮತ್ತು ಕಫಗಳು ಶೀತ ಗುಣ ಸ್ವಭಾವದವಿರುತ್ತವೆ.

ಶೀತ ಗುಣ ಕಾರ್ಯ:—

ಆಹ್ಲಾದನ (ಪ್ರಸನ್ನ), ಸ್ತಂಭನ (ಸ್ತಬ್ಧತಾ), ಮೂರ್ಛಾಹರ, ತೃಷ್ಣಾಹರ, ಸ್ವೇದಹರ, ದಾಹಶಾಮಕ, ಕಫಕರ, ವಾತಕರ, ಪಿತ್ತಶಾಮಕ, ಧಾತುವೃದ್ಧಿಕರ, ಮೂತ್ರಲ, ರಕ್ತ ಸ್ತಂಭನ ಇತ್ಯಾದಿ ಕಾರ್ಯಗಳು ಶೀತ ಗುಣಾತ್ಮಕ ದ್ರವ್ಯಗಳಿಂದ ಆದದ್ದು ಕಂಡು ಬರುವದು. ಅಲ್ಲದೆ ರಕ್ತಪಿತ್ತ ಮತ್ತು ಛರ್ದಿನಾಶಕವಿರುವವು.

ಶೀತ ಗುಣ ದ್ರವ್ಯ:—

ಆಪ್, ಪೃಥ್ವಿ ಮತ್ತು ವಾಯು ಮಹಾಭೂತ ಪ್ರಾಧಾನ್ಯ ದ್ರವ್ಯಗಳು ಪ್ರಾಯಃ ಶೀತ ಗುಣಾತ್ಮಕವಿರುತ್ತವೆ. ಉದಾ:- ಸೈಂಧವ, ಘೃತ, ಕೂಷ್ಮಾಂಡ, ಪ್ರವಾಳ, ಮೌಕ್ತಿಕ, ಸುವರ್ಣ, ಮುಸ್ತಾ, ಪರ್ಪಟ, ಉಶೀರ, ಚಂದನ, ಗೋಕ್ಷುರ, ಯಷ್ಟಿ ಮಧು, ಶತಾವರಿ, ಕುಮಾರಿ, ಧಾತಕಿ, ಅಮಲಕಿ ಇತ್ಯಾದಿ.

4) ಉಷ್ಣ ಗುಣ:—

स्वेदने उष्णः । (हे)
उष्णो भवति शीतस्य विपरीतश्च पाचनः । (भा. प्र.)
उष्णस्तद्विपरीतः स्यात् पाचनश्च विशेषतः । (सु. सू. अ. ४६)

उष्णस्पर्शवत्तेजः । (तर्क संग्रह)
पित्तमुष्णं तीक्ष्णं द्रवं विस्रमम्लं कटुकंच ।) च. वि. अ. ८)
तैजसमौष्ण्यं तैक्ष्ण्यं च । (र. वै. अ. ३)
पित्तं सस्नेह तीक्ष्णोष्णं लघु विस्रं सरं द्रवम् । (अ. हृ. सू. अ. १)

उष्ण तीक्ष्ण सूक्ष्म......ऊर्ध्वगतिस्वभावमिति तैजसम् । (सु. सू. अ. ४१)
उष्णः स्पर्शस्तेजसस्तु । (का)

ಉಷ್ಣ ಗುಣ ಸ್ವರೂಪಃ—

ಯಾವದು ಶೀತ ಗುಣದ ವಿಪರೀತ ಅಂದರೆ ಸ್ವೇದ, ಮೂರ್ಛಾ, ತೃಷ್ಣಾ, ದಾಹಗಳನ್ನು ಉತ್ಪನ್ನ ಮಾಡುವದೋ ಮತ್ತು ಪಚನ ಕ್ರಿಯೆಯನ್ನು ಬೆಳಿಸುವದೋ ಅದಕ್ಕೆ 'ಉಷ್ಣ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ ಬಿಸಿ ಅಥವಾ ಬೆಚ್ಚಗೆ ಎಂದು ಅನ್ನುವರು. ಇದರ ಭೌತಿಕ ಸ್ವರೂಪವು ಸ್ಪರ್ಶನೇಂದ್ರಿಯವಿರುವದು. ತೇಜ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಉಷ್ಣ ಗುಣಾತ್ಮಕವಿರುವವು. ಷಡ್ರಸಗಳಲ್ಲಿ ಕಟು, ಅಮ್ಲ ಮತ್ತು ಲವಣ ರಸಗಳು ಉತ್ತರೋತ್ತರ ಅಧಿಕ ಉಷ್ಣ ಇರುವವು. ಉಷ್ಣ ಗುಣ ಅಥವಾ ಉಷ್ಣ ಗುಣಾತ್ಮಕ ದ್ರವ್ಯಗಳು ಪ್ರಾಯಃ ಉಷ್ಣ ವೀರ್ಯಾತ್ಮಕ ವಿರುವವು. ಹಾಗೂ ಹೆಚ್ಚಾಗಿ ಕಟು ಮತ್ತು ಅಮ್ಲ ವಿಪಾಕಿ ಇರುವವು. ತ್ರಿದೋಷ ಗಳಲ್ಲಿ ಪಿತ್ತ ದೋಷವು ಉಷ್ಣ ಗುಣ ಸ್ವಭಾವದ್ದಿರುವದು.

ಉಷ್ಣ ಗುಣ ಕಾರ್ಯಃ—

ದೀಪನ, ಪಾಚನ, ಅನುಲೋಮನ, ಮೂರ್ಛನ, ತೃಷ್ಣಾಕರ, ಸ್ವೇದಲ ಮೂತ್ರಜನಕ, ದಾಹ, ವಾಮಕ, ಪಿತ್ತವರ್ಧಕ, ಕಫಶಾಮಕ, ವಾತಶಾಮಕ, ಧಾತು ಶೋಷಕ ಇತ್ಯಾದಿ ಕಾರ್ಯಗಳು ಉಷ್ಣ ಗುಣ ದ್ರವ್ಯಗಳಿಂದ ಆಗುವವು.

ಉಷ್ಣ ಗುಣ ದ್ರವ್ಯ:—

ತೇಜ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಉಷ್ಣ ಗುಣಾತ್ಮಕ ವಿರುತ್ತವೆ. ಉದಾಃ— ಲವಣ, ಗಂಧಕ, ಶುಂಠಿ, ಮರಿಚ, ಚಿತ್ರಕ, ಬಿಭಿತಕ, ದಂತಿ, ಏರಂಡ, ಲಶುನ, ರಾಸ್ನಾ, ಹರಿತಾಳ, ಮನಃಶಿಲಾ, ತುಲಸಿ ಇತ್ಯಾದಿ.

5) ಸ್ನಿಗ್ಧ ಗುಣ:—

यस्य क्लेदने शक्तिः स स्निग्धः । (हे)
स्निग्धं वातहरं श्लेष्मकारि वृष्यं बलावहम् । (भा. प्र.)
स्नेहमार्दवकृत् स्निग्धो बलवर्णकरस्तथा । (सु.)
स्निग्धमाप्यम् । (र. वै. अ. ३.)
स्निग्धः शीतो गुरुर्मंदः श्लक्ष्णो मृत्स्नः स्थिरः कफः । (अ. हृ. सू. अ. १)
स्नेहोऽपां विशेषगुणः । (प्र. पा. भा.)
स्नेहो जले स नित्योऽणावनित्योऽवयविन्यसौ । (का)
चूर्णादि पिण्डीभाव हेतुर्गुणः स्नेहः । स जलमात्र वृत्तिः । (तर्क संग्रह)

ಸ್ನಿಗ್ಧ ಗುಣ ಸ್ವರೂಪ:—

ಯಾವದರಿಂದ ಶರೀರಕ್ಕೆ ಬಲ, ವರ್ಣ, ಕಾಂತಿ, ಸ್ನಿಗ್ಧತಾ, ಮೃದುತಾ ಉತ್ಪನ್ನ ವಾಗುವವೋ ಅವಕ್ಕೆ 'ಸ್ನಿಗ್ಧ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ ಎಣ್ಣೆ ಯುಕ್ತ (Oily, Soothing) ಎಂದು ಅನ್ನುವರು. ಇದರ ಭೌತಿಕ ಸ್ವರೂಪವು ಚಕ್ಷುರಿಂದ್ರಿಯ ಮತ್ತು ಸ್ಪರ್ಶನೇಂದ್ರಿಯವಿರುವದು. ಇದು ರೂಕ್ಷ ಗುಣದ ವಿಪರೀತ ಭಾವವುಳ್ಳದ್ದಿರುವದು. ಜಲ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಸ್ನಿಗ್ಧ ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ಲವಣ, ಆಮ್ಲ ಮತ್ತು ಮಧುರ ರಸಗಳು ಉತ್ತರೋತ್ತರ ಅಧಿಕ ಸ್ನಿಗ್ಧವಿರುತ್ತವೆ. ಸ್ನಿಗ್ಧಗುಣ ಅಥವಾ ಸ್ನಿಗ್ಧ ಗುಣಾತ್ಮಕ ದ್ರವ್ಯಗಳು ಪ್ರಾಯಃ ಶೀತ ವೀರ್ಯಾತ್ಮಕವಿರುವವು. ಸ್ನಿಗ್ಧ ಗುಣ ಕರ್ಮವು ಶೀತ ಮತ್ತು ಉಷ್ಣ ಈ ಎರಡೂ ವೀರ್ಯಗಳ ಕರ್ಮಕ್ಕೆ ಸಾಮ್ಯ ವಿರುವದು. ಸ್ನಿಗ್ಧ ಗುಣಾತ್ಮಕ ದ್ರವ್ಯಗಳು ಪ್ರಾಯಃ ಮಧುರ ವಿಪಾಕಿ ಇರುವವು. ತ್ರಿದೋಷಗಳಲ್ಲಿ ಪಿತ್ತ ಮತ್ತು ಕಫ ದೋಷಗಳು ಸ್ನಿಗ್ಧ ಗುಣ ಸ್ವಭಾವದವಿರುತ್ತವೆ.

ಸ್ನಿಗ್ಧ ಗುಣ ಕಾರ್ಯ:—

ಸ್ನೇಹನ, ಮಾರ್ದವ, ಬಲಕರ, ವರ್ಣಕರ, ವಾತಹರ, ಕಫವರ್ಧಕ, ಕ್ಲೇದಕರ, ವಾಜೀಕರ, ಬೃಂಹಣ, ಮಲನಿಃಸರಣ, ಸಂಧಾನಕರ ಇತ್ಯಾದಿ ಕಾರ್ಯಗಳು ಸ್ನಿಗ್ಧ ಗುಣದಿಂದ ಆದದ್ದು ಕಂಡು ಬರುವದು.

ಸ್ನಿಗ್ಧ ಗುಣ ದ್ರವ್ಯ:—

ಜಲ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಸ್ನಿಗ್ಧ ಗುಣಾತ್ಮಕ ವಿರುತ್ತವೆ. ಉದಾ:— ತೈಲ, ಘೃತ, ವಸಾ, ಮಜ್ಜಾ, ಸೈಂಧವ, ಗೋಧೂಮ, ಅತಸಿ, ತಿಲ, ಗುಡ, ಬ್ರಾಹ್ಮೀ, ಶತಾವರಿ, ಭೃಂಗರಾಜ, ವಿದಾರಿಕಂದ, ಲಶುನ, ಇತ್ಯಾದಿ.

6) ರೂಕ್ಷ ಗುಣ:—

रूक्षं समीरणकरं परं कफहरं मतम् । (भा. प्र.)
रौक्ष्य वैशद्ये पार्थिव वायव्ये । (र. वै. अ. ३)
यस्य शोषणे शक्तिः स रूक्षः । (हे)
रूक्षस्तद्विपरीतः स्याद् विशेषात् स्तम्भनः खर । (सु.)

ರೂಕ್ಷ ಗುಣ ಸ್ವರೂಪ:—

ಯಾವದು ಸ್ನಿಗ್ಧ ಗುಣದ ವಿಪರೀತವಿದ್ದು ಕಾಠಿಣ್ಯ, ಸ್ತಂಭನ ಮತ್ತು ವಾತ ವೃದ್ಧಿಗಳನ್ನು ಮಾಡುವದೋ ಅದಕ್ಕೆ 'ರೂಕ್ಷ' ಗುಣವೆಂದು ಅನ್ನುವರು, ರೂಢಿ ಯಲ್ಲಿ ಇದಕ್ಕೆ 'ಒಣ' (Dryness) ಎಂದು ಅನ್ನುವರು. ಇದರ ಭೌತಿಕ ಸ್ವರೂಪವು ಚಕ್ಷುರಿಂದ್ರಿಯ ಮತ್ತು ಸ್ಪರ್ಶನೇಂದ್ರಿಯವಿರುವದು. ಇದು ಸ್ನಿಗ್ಧ ಗುಣದ ವಿಪರೀತ ಭಾವವುಳ್ಳದ್ದಿರುವದು. ವಾಯು ಮಹಾಭೂತ ಮತ್ತು ತೇಜ ಮಹಾಭೂತ ಪ್ರಾಧಾನ್ಯ

ವುಳ್ಳ ದ್ರವ್ಯಗಳು ಪ್ರಾಯಃ ರೂಕ್ಷ ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ತಿಕ್ತ, ಕಟು ಮತ್ತು ಕಷಾಯ ರಸಗಳು ಉತ್ತರೋತ್ತರ ಅಧಿಕ ರೂಕ್ಷವಿರುವವು. ರೂಕ್ಷ ಗುಣ ಅಥವಾ ರೂಕ್ಷ ಗುಣಾತ್ಮಕ ದ್ರವ್ಯಗಳು ಪ್ರಾಯಶಃ ಶೀತ ಮತ್ತು ಉಷ್ಣ ವೀರ್ಯಾತ್ಮಕವಿರುವವು. ಹಾಗೂ ಹೆಚ್ಚಾಗಿ ಈ ದ್ರವ್ಯಗಳು ಕಟುವಿಪಾಕಿ (ಲಘುಪಾಕ) ಇರುವವು. ತ್ರಿದೋಷಗಳಲ್ಲಿ ವಾತ ದೋಷವು ರೂಕ್ಷ ಗುಣ ಸ್ವಭಾವದ್ದಿರುತ್ತದೆ.

ರೂಕ್ಷ ಗುಣ ಕಾರ್ಯ:—

ರೂಕ್ಷತಾ, ಕಾಠಿಣ್ಯ, ಬಲಹರ, ವರ್ಣಹರ, ಸ್ತಂಭನ, ಕರ್ಕಶ, ವಾತವರ್ಧನ, ಕಫಹರ, ಮೇದಕ್ಷಯ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ರೂಕ್ಷ ಗುಣ ದ್ರವ್ಯ:—

ವಾಯು ಮತ್ತು ತೇಜ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಶಃ ರೂಕ್ಷ ಗುಣಾತ್ಮಕವಿರುತ್ತವೆ. ಉದಾ:– ಜಾಂಗಲ ಪ್ರಾಣಿ ಮಾಂಸ, ಪೂಗ, ಹರಿತಕಿ, ಬಿಭಿತಕಿ, ಕಿರಾತತಿಕ್ತ, ವಂಗ, ಯಶದ, ಲೋಹ, ಶಿಲಾಜತು ಇತ್ಯಾದಿ.

7) ಮಂದ ಗುಣ: –

यस्य शमने शक्तिः स मंदः। (हे)
स्थूल सांद्र मंदेत्यादि। (सु. सू. ४१)
मंदो मात्राकरः स्मृतः। (सु.)

ಮಂದ ಗುಣ ಸ್ವರೂಪ:—

ಯಾವದು ಶರೀರದಲ್ಲಿ ಹೋಗಿ ಸಾವಕಾಶವಾಗಿ ಕಾರ್ಯ ಮಾಡಿ ಅವಯವಗಳಲ್ಲಿ ಮಂದತೆಯನ್ನು ಉತ್ಪನ್ನ ಮಾಡುವದೋ, ಕಫ ವರ್ಧನ, ಪಿತ್ತ ಶಮನ ಹಾಗೂ ಧಾತು ವರ್ಧನ ಮಾಡಿ ಶರೀರವನ್ನು ಸ್ಥೂಲವನ್ನಾಗಿ ಮಾಡುವದೋ ಅದಕ್ಕೆ 'ಮಂದ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ 'ತಡ' (ತಡವಾಗಿ), 'ಸಾವಕಾಶ' (Dullness) ಎಂದು ಅನ್ನುವರು. ಇದರ ಭೌತಿಕ ಸ್ವರೂಪವು ಚಕ್ಷುರಿಂದ್ರಿಯವಿರುವದು. ಇದು ತೀಕ್ಷ್ಣ ಗುಣದ ವಿಪರೀತ ಧರ್ಮವುಳ್ಳದ್ದಿರುವದು. ಜಲ ಮತ್ತು ಪೃಥ್ವಿ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಶಃ ಮಂದ ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ಲವಣ, ಅಮ್ಲ, ಮಧುರ, ಕಷಾಯ ಮತ್ತು ತಿಕ್ತ ರಸಗಳು ಮಂದ ಗುಣಾತ್ಮಕವಿರುತ್ತವೆ. ಮಂದ ಗುಣ ಅಥವಾ ಮಂದ ಗುಣಾತ್ಮಕ ದ್ರವ್ಯಗಳು ಪ್ರಾಯಃ ಶೀತ ವೀರ್ಯಾತ್ಮಕವಿರುತ್ತವೆ. ಹಾಗೂ ಇವು ಮಧುರ ಅಮ್ಲ ವಿಪಾಕಿ ಇರುತ್ತವೆ. ಮುಖ್ಯವಾಗಿ ಮಧುರ ವಿಪಾಕದವಿದ್ದು ಅಮ್ಲ ವಿಪಾಕದಲ್ಲಿಯೂ ಮಂದ ಗುಣವಿರುವದು. ತ್ರಿದೋಷಗಳಲ್ಲಿ ಕಫ ದೋಷವು ಮಂದ ಗುಣ ಸ್ವಭಾವದ್ದಿರುತ್ತದೆ.

ಮಂದ ಗುಣ ಕಾರ್ಯಃ—

ಅವಸಾದಕ, ಚಿರಕಾರಿತ್ವ, ಶಮನ, ಬೃಂಹಣ ಅವಯುವಗಳಲ್ಲಿ ಮಂದತೆಯನ್ನು ಉತ್ಪನ್ನಮಾಡುವದು, ಕಫವರ್ಧನ, ಪಿತ್ತಶಮನ, ಧಾತು ವರ್ಧನ, ನಿದ್ರಾಕರ ಮತ್ತು ಶರೀರವನ್ನು ಸ್ಥೂಲವನ್ನಾಗಿ ಮಾಡುವದು ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ಮಂದ ಗುಣ ದ್ರವ್ಯ:—

ಜಲ ಮತ್ತು ಪೃಥ್ವಿ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಮಂದ ಗುಣಾತ್ಮಕವಿರುತ್ತವೆ. ಉದಾಃ- ದಧಿ, ಪರೂಷಕ, ಗುಗ್ಗುಲು, ಶ್ಲೇಷ್ಮಾತಕ ಇತ್ಯಾದಿ.

8) ತೀಕ್ಷ್ಣ ಗುಣಃ —

यस्य शोधने शक्तिः स तीक्ष्णः। (हे)
तीक्ष्णं पित्तकरं प्रायो लेखनं कफवातहृत्। (भा. प्र.)
तैजसमौष्ण्यं तैक्ष्ण्यं च। (र. वै. अ. ३)
दाह पाककरस्तीक्ष्णः स्रावणः। (सु.)
पित्तं सस्नेह तीक्ष्णोष्णं लघु विस्रं सरं द्रवम्। (अ. हृ. सू. अ. १)

ತೀಕ್ಷ್ಣ ಗುಣ ಸ್ವರೂಪಃ—

ಯಾವದು ದಾಹ, ಪಾಕಗಳನ್ನು ಮಾಡುವದೋ; ಶರೀರದಲ್ಲಿಯ ಮಲಾದಿಗಳನ್ನು ಹೊರಗೆ ಹಾಕಿ ಶರೀರ ಶೋಧನ ಮಾಡುವದೋ ಅದಕ್ಕೆ "ತೀಕ್ಷ್ಣ" ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ "ಚುರುಕು" (Sharpness) ಎಂದು ಅನ್ನುವರು. ಇದರ ಭೌತಿಕ ಸ್ವರೂಪವು ರಸನೇಂದ್ರಿಯ ಮತ್ತು ಸ್ಪರ್ಶನೇಂದ್ರಿಯ ವಿರುವದು. ಇದು ಮಂದ ಗುಣದ ವಿಪರೀತ ಧರ್ಮವುಳ್ಳದ್ದಿರುವದು. ತೇಜ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಶಃ ತೀಕ್ಷ್ಣ ಗುಣಾತ್ಮಕವಿರುತ್ತವೆ ಷಡ್ರಸಗಳಲ್ಲಿ ಕಟು, ಅಮ್ಲ ಮತ್ತು ಲವಣ ರಸಗಳು ತೀಕ್ಷ್ಣ ಗುಣ ಸ್ವಭಾವದವಿರುತ್ತವೆ. ತೀಕ್ಷ್ಣ ಗುಣ ಅಥವಾ ತೀಕ್ಷ್ಣ ಗುಣಾತ್ಮಕ ದ್ರವ್ಯಗಳು ಪ್ರಾಯಶಃ ಉಷ್ಣ ವೀರ್ಯಾತ್ಮಕವಿರುತ್ತವೆ. ಹಾಗೂ ಇವು ಹೆಚ್ಚಾಗಿ ಕಟು ಮತ್ತು ಅಮ್ಲ ವಿಪಾಕಿ ಇರುತ್ತವೆ. ತ್ರಿದೋಷಗಳಲ್ಲಿ ಪಿತ್ತ ದೋಷವು ತೀಕ್ಷ್ಣ ಗುಣ ಸ್ವಭಾವದ್ದಿರುತ್ತದೆ.

ತೀಕ್ಷ್ಣ ಗುಣ ಕಾರ್ಯಃ—

ದಹನ, ಪಾಚನ, ಸ್ರಾವಣ, ಪಿತ್ತವರ್ಧನ, ಲೇಖನ, ಕಫಹರ, ವಾತಹರ, ಶೋಧನ, ದಾರಣ, ಅಗ್ನಿದೀಪನ, ಸ್ಫೋಟಜನನ ಮತ್ತು ತೀವ್ರರೇಚನ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ತೀಕ್ಷ್ಣ ಗುಣ ದ್ರವ್ಯಃ—

ತೇಜ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ತೀಕ್ಷ್ಣ ಗುಣಾತ್ಮಕವಿರುತ್ತವೆ. ಉದಾ:- ಪಿಪ್ಪಲಿ, ಮರಿಚ, ಭಲ್ಲಾತಕ, ಸ್ನುಹಿಕ್ಷೀರ, ಚಿತ್ರಕ, ಶುಂಠಿ, ಗೋಮೂತ್ರ, ಬಿಡಲವಣ, ಯವಾನಿ, ಅಜಮೋದಾ, ಹಿಂಗು, ಲಶುನ, ದಂತಿ, ಅಗರು, ಅಪಾಮಾರ್ಗ, ಸರ್ಷಪ, ಕರಂಜ, ತಾಲೀಸಪತ್ರ ಇತ್ಯಾದಿ.

9) ಸ್ಥಿರ ಗಣ:—

यस्य धारणे शक्तिः स **स्थिरः** । (हे)

स्थिरो वात मल स्तम्भी । (भा. प्र.)

स्निग्धः शीतो गुरुर्मन्दः श्लक्ष्णः मृत्स्नो **स्थिरः** कफः । (अ हृ. सू. अ. १)

स्थूल सांद्र मंद **स्थिरेत्यादि** । (सु. सू. अ. ४१)

ಸ್ಥಿರ ಗಣ ಸ್ವರೂಪಃ—

ಯಾವದು ಶರೀರದಲ್ಲಿ ವಾತ, ಮಲ, ಮೂತ್ರಾದಿಗಳನ್ನು ಸ್ತಂಭನ ಮಾಡುವದೊ ಮತ್ತು ಧಾತುಗಳಲ್ಲಿ ಸ್ಥಿರತೆಯನ್ನು ಉತ್ಪನ್ನ ಮಾಡುವದೋ ಅದಕ್ಕೆ 'ಸ್ಥಿರ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ 'ಅಚಲ' 'ಗತಿಹೀನ' (Immobility) ಎಂದು ಅನ್ನುವರು. ಇದರ ಭೌತಿಕ ಸ್ವರೂಪವು ಚಕ್ಷುರಿಂದ್ರಿಯವಿರುವದು. ಇದು ಸರ ಗುಣದ ವಿಪರೀತ ಭಾವವುಳ್ಳದ್ದಿರುವದು. ಪೃಥ್ವಿ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಶಃ ಸ್ಥಿರ ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ಮಧುರ, ಅಮ್ಲ ಮತ್ತು ಕಷಾಯ ರಸಗಳು ಸ್ಥಿರ ಗುಣ ಸ್ವಭಾವದವಿರುತ್ತವೆ. ಸ್ಥಿರ ಗುಣ ಅಥವಾ ಸ್ಥಿರ ಗುಣಾತ್ಮಕ ದ್ರವ್ಯಗಳು ಪ್ರಾಯಃ ಶೀತ ವೀರ್ಯಾತ್ಮಕವಿರುತ್ತವೆ. ಹಾಗೂ ಇವು ಹೆಚ್ಚಾಗಿ ಮಧುರ ವಿಪಾಕಿ (ಗುರು ವಿಪಾಕಿ) ಇರುತ್ತವೆ. ತ್ರಿದೋಷಗಳಲ್ಲಿ ಕಫ ದೋಷವು ಸ್ಥಿರ ಗುಣ ಸ್ವಭಾವದ್ದಿರುತ್ತದೆ.

ಸ್ಥಿರ ಗುಣ ಕಾರ್ಯಃ—

ವಾತ, ಮಲ, ಮೂತ್ರಾದಿಗಳ ಧಾರಣ (ಸ್ತಂಭನ), ಕಫವರ್ಧನ. ವಾತಹರ, ಧಾತುವರ್ಧನ, ಬಲ್ಯ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ಸ್ಥಿರ ಗುಣ ದ್ರವ್ಯಃ—

ಪೃಥ್ವಿ ಮಹಾಭೂತ ಪ್ರಾಧನ್ಯವುಳ್ಳ ದ್ರವ್ಯಗಳು ಪ್ರಾಯಃ ಸ್ಥಿರ ಗುಣಾತ್ಮಕವಿರುತ್ತವೆ. ಉದಾಃ- ಸುಧಾ, ಪ್ರವಾಳ, ಬಬ್ಬೂಲ, ಖದಿರ, ಜಾತಿಫಲ ಇತ್ಯಾದಿ.

10) ಸರ ಗುಣಃ—

यस्य प्रेरणे शक्तिः स **सरः** । (हे)

सरोऽनुलोमनः प्रोक्तः । (सु.)

शीत स्तिमित स्निग्ध मंद गुरु सरेत्यादि । (सु.)

सरस्तेषां प्रवर्तकः । (भा. प्र.)

पित्तं सस्नेह तीक्ष्णोष्णं लघु विस्रं सरं द्रवम् । (अ. ह. सू. १)

ಸರ ಗುಣ ಸ್ವರೂಪಃ—

ಯಾವದು ವಾಯು ಮತ್ತು ಮಲಗಳ ಪ್ರವೃತ್ತ (ಪ್ರೇರಣೆ) ಮಾಡುವದೊ ಅದಕ್ಕೆ 'ಸರ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ 'ಚಲ' 'ಗತಿಶೀಲ' (Mobility) ಎಂದು ಅನ್ನುವರು. ಇದು ಚಿರಸ್ಥಾಯಿ ಇರದೆ ಸದಾ ಗತಿಶೀಲ ವಿರುವದು. ಈ ಗುಣವು ಸ್ಥಿರ ಗುಣದ ವಿಪರೀತ ಭಾವವುಳ್ಳದ್ದಿರುತ್ತದೆ. ಅಷ್ಟಾಂಗ ಸಂಗ್ರಹದಲ್ಲಿ ಸರ ಗುಣದ ಬದಲು ಚಲ ಗುಣವಿರುವದು. ಆದ್ದರಿಂದ ಸರ ಮತ್ತು ಚಲ ಗುಣದಲ್ಲಿ ಭೇದವಿರುವದಿಲ್ಲ. ಜಲ, ವಾಯು ಮತ್ತು ಆಕಾಶ ಮಹಾಭೂತ ಪ್ರಾಧಾನ್ಯ ವುಳ್ಳ ದ್ರವ್ಯಗಳು ಪ್ರಾಯಶಃ ಸರ ಗುಣಾತ್ಮಕವಿರುತ್ತವೆ. ಸರ ಗುಣವು ಪಿತ್ತವರ್ಧಕ ವಿದ್ದು ಷಡ್ರಸಗಳಲ್ಲಿ ಪಿತ್ತವರ್ಧಕ ರಸಗಳಾದ ಕಟು, ಆಮ್ಲ ಮತ್ತು ಲವಣ ರಸ ಗಳಲ್ಲಿ ಸರ ಗುಣವಿರುವದು. ಅಲ್ಲದೆ ಮಧುರ ರಸದಲ್ಲಿಂಊ ಸರ ಗುಣದ ಅಧಿಷ್ಠಾನ ವಿರುವದು. ಸರ ಗುಣ ಅಥವಾ ಸರಗುಣಾತ್ಮಕ ದ್ರವ್ಯಗಳು ಪ್ರಾಯಃ ಉಷ್ಣವೀರ್ಯ ವುಳ್ಳವಿರುತ್ತವೆ. ಹಾಗೂ ಇವು ಹೆಚ್ಚಾಗಿ ಕಟು ಮತ್ತು ಆಮ್ಲ ವಿಪಾಕಿ ಇರುತ್ತವೆ. ತ್ರಿದೋಷಗಳಲ್ಲಿ ಪಿತ್ತದೋಷವು ಸರ ಗುಣ ಸ್ವಭಾವದ್ದಿರುತ್ತದೆ.

ಸರ ಗುಣ ಕಾರ್ಯಃ—

ಅನುಲೋಮನ (ವಾಯು ಮತ್ತು ಮಲ, ಮೂತ್ರಾದಿಗಳ ಪ್ರವರ್ತನ), ಉತ್ತೇಜಕ, ಪಿತ್ತವರ್ಧನ, ಕಫವರ್ಧನ, ಧಾತುದ್ರವಣ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ಸರ ಗುಣ ದ್ರವ್ಯಃ—

ಜಲ, ವಾಯು ಮತ್ತು ಆಕಾಶ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಶಃ ಸರ ಗುಣಾತ್ಮಕವಿರುತ್ತವೆ. ಉದಾ:- ದುಗ್ಧ, ತಕ್ರ, ತಾಲಮಜ್ಜಾ, ಪ್ರಿಯಾಲ, ಗೋಧೂಮ, ಅಮ್ಲಿಕಾ, ಗೋಮೂತ್ರ, ರಜತ, ತ್ರಿಫಳಾ, ರಸೋನ, ಗುಗ್ಗುಳು, ತಾಂಬೂಲ, ದಂತಿ, ದ್ರವಂತಿ, ಇಂದ್ರಾಯಣ, ದುರಾಲಭಾ, ಬ್ರಾಹ್ಮಿ ಇತ್ಯಾದಿ.

11) ಮೃದು ಗುಣಃ—

यस्य श्लथने शक्तिः स मृदुः (हे)

मार्दवमांतरिक्षमाप्यं च । (र. वै. अ. ३)

मांसशोणित मेदो मज्ज हृत् नाभि यकृत् प्लीहान्त्र गुद प्रभृतीनि मृदूनि ।
(सु. शा. अ. ३)

मृदुरन्यथा । (सु.)

ಮೃದು ಗುಣ ಸ್ವರೂಪ:—

ಯಾವ ಗುಣದ ಬಾಹ್ಯ, ಅಭ್ಯಂತರ ಉಪಯೋಗದಿಂದ ಶರೀರದಲ್ಲಿ ಮೃದುತಾ ಅಥವಾ ಕೋಮಲತಾ ಉತ್ಪನ್ನವಾಗುವದೋ ಅದಕ್ಕೆ 'ಮೃದು' ಅನ್ನುವರು. ರೂಢಿಯಲ್ಲಿ ಇದಕ್ಕೆ 'ಮಿದುವು' 'ಮೆತ್ತಗೆ' 'ಕೋಮಲ' ಎಂದು ಅನ್ನುವರು. ಇದು ಕಠಿಣ ಗುಣದ ವಿಪರೀತ ಭಾವವುಳ್ಳದ್ದಿರುವದು. ಇದರ ಭೌತಿಕ ಸ್ವರೂಪವು ಸ್ಪರ್ಶನೇಂದ್ರಿಯ ವಿರುವದು. ಶರೀರದಲ್ಲಿಯ ಮಾಂಸ, ರಕ್ತ, ಮೇದ, ಮಜ್ಜಾ, ಹೃದಯ, ನಾಭಿ, ಯಕೃತ್, ಪ್ಲೀಹಾ, ಅಂತ್ರ, ಗುದ ಇತ್ಯಾದಿ ಅವಯವಗಳು ಮೃದು ಇರುವವು. ಜಲ ಮತ್ತು ಆಕಾಶ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಮೃದು ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ಮೃದು ಗುಣವು ಪ್ರಾಧಾನ್ಯವಾಗಿ ಮಧುರ ರಸದಲ್ಲಿ ಇರುತ್ತದೆ. ಮೃದು ಗುಣ ಅಥವಾ ಮೃದು ಗುಣಾತ್ಮಕ ದ್ರವ್ಯಗಳು ಪ್ರಾಯಶಃ ಶೀತ ವೀರ್ಯವುಳ್ಳವಿರುತ್ತವೆ. ಹಾಗೂ ಇವು ಹೆಚ್ಚಾಗಿ ಮಧುರ ವಿಪಾಕಿ ಇರುತ್ತವೆ. ತ್ರಿದೋಷಗಳಲ್ಲಿ ಕಫ ದೋಷವು ಮೃದು ಗುಣ ಸ್ವಭಾವದ್ದಿರುತ್ತದೆ.

ಮೃದು ಗುಣ ಕಾರ್ಯ:—

ದಾಹನಾಶಕ, ಧಾತುಶೈಥಿಲ್ಯಕರ, ಕಫವರ್ಧಕ, ಅಪಚನಕರ, ಮಾರ್ದವಕರ, ಶ್ಲಥನ (ವಿಶ್ಲೇಷಣ), ಮಲ ನಿರ್ಹರಣ, ಸ್ರಾವನಾಶನ ಇತ್ಯಾದಿ. ಕಾರ್ಯಗಳನ್ನು ಮಾಡುತ್ತದೆ.

ಮೃದು ಗುಣ ದ್ರವ್ಯ:—

ಘೃತ, ದುಗ್ಧ, ತೈಲ, ಯಷ್ಟಿಮಧು ಆರಗ್ವಧ ಇತ್ಯಾದಿ ಸಾಮಾನ್ಯವಾಗಿ ಜಲ ಮತ್ತು ಆಕಾಶ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳೆಲ್ಲವೂ ಮೃದು ಗುಣಾತ್ಮಕ ವಿರುತ್ತವೆ.

12) ಕಠಿನ ಗುಣ:—

यस्य दृढीकरणे शक्तिः स काठिनः। (हे)
कठिनत्वं पार्थिवम्। (र. वै. अ. ३)
स्थूल सांद्र मंद स्थिर गुरु कठिनमित्यादि। (सु. सू. अ. ४१)

ಕಠಿನ ಗುಣ ಸ್ವರೂಪ:—

ಯಾವ ಗುಣದಿಂದ ಶರೀರದಲ್ಲಿ ದೃಢತಾ ಅಥವಾ ಕಠಿಣತಾ ಉತ್ಪನ್ನವಾಗುವದೋ ಅದಕ್ಕೆ 'ಕಠಿಣ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ 'ಬಿರುಸು' 'ಗಟ್ಟಿ' ಎಂದು ಅನ್ನುವರು. ಇದು ಮೃದು ಗುಣದ ವಿಪರೀತ ಭಾವವುಳ್ಳದ್ದಿದ್ದು ಇದರ ಭೌತಿಕ ಸ್ವರೂಪವು ಸ್ಪರ್ಶನೇಂದ್ರಿಯವಿರುವದು. ಪೃಥ್ವಿ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಶಃ ಕಠಿನ ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ಕಟು, ತಿಕ್ತ, ಕಷಾಯ ರಸಾತ್ಮಕ ದ್ರವ್ಯಗಳು ಕಠಿನ ಗುಣಯುಕ್ತವಿರುವವು. ಯಾಕಂದರೆ

ಇವು ವಾತವರ್ಧನ ಕಾರ್ಯ ಮಾಡುವವು. ಕಠಿಣ ಗುಣ ಅಥವಾ ಕಠಿಣ ಗುಣಾತ್ಮಕ ದ್ರವ್ಯಗಳು ಪ್ರಾಯಶಃ ಉಷ್ಣವೀರ್ಯ ಸ್ವಭಾವದವಿರುತ್ತವೆ. ಹಾಗೂ ಇವು ಕಟು ವಿಪಾಕಿ ಇರುವವು. ತ್ರಿದೋಷಗಳಲ್ಲಿ ವಾತ ದೋಷವು ಕಠಿಣ ಗುಣದ ಅಧಿಷ್ಠಾನ ವಿರುವದು.

ಕಠಿಣ ಗುಣದ ಕಾರ್ಯ:—

ದೃಢನ (ದೃಢೀಕರಣ), ಮಲ, ಮೂತ್ರಾದಿಗಳ ಶೋಷಣ, ವಾತವೃದ್ಧಿ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ಕಠಿಣ ಗುಣ ದ್ರವ್ಯ:—

ಪಾರ್ಥಿವ ಮಹಾಭೂತ ಪ್ರಾಧಾನ್ಯ ದ್ರವ್ಯಗಳಲ್ಲಿ ಕಠಿಣ ಗುಣದ ಅಧಿಷ್ಠಾನ ವಿರುವದು. ಉದಾ:– ಸುಧಾ, ಪ್ರವಾಳ, ಬಬ್ಬೂಲ, ಪೂಗ, ಲೋಹ ಇತ್ಯಾದಿ.

13) ಪಿಚ್ಛಿಲ ಗುಣ:—

यस्य लेपने शक्तिः स **पिच्छिलः**। (हे)

पिच्छिलस्तुलो बल्यः संधानः श्लेष्मलो गुरुः। (भा. प्र.)

पिच्छिलो जीवनो बल्यः संधानः श्लेष्मलो गुरुः। (सु.)

शीत स्निग्ध गुरु **पिच्छिलास्त्वाप्याः**। (र. वै. अ. ३)

शीत स्तिमित स्निग्ध मंद गुरु सर सांद्र मृदु **पिच्छिलमित्यादि**।

(सु. सू. अ. ४१)

ಪಿಚ್ಛಿಲ ಗುಣ ಸ್ವರೂಪ:—

ಯಾವ ಗುಣವು ಬಲಕಾರಕ, ಕಫವರ್ಧಕ, ಸಂಘಾತಕಾರಕ ಮತ್ತು ಗುರುತಾ ಉತ್ಪನ್ನ ಮಾಡುವದೋ ಅದಕ್ಕೆ 'ಪಿಚ್ಛಿಲ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ 'ಜಿಗುಟು' 'ಅಂಟು' ಎಂದು ಅನ್ನುವರು. ಇದು ವಿಶದ ಗುಣದ ವಿಪರೀತ ಭಾವವುಳ್ಳದ್ದಿರುವದು. ಇದರ ಭೌತಿಕ ಸ್ವರೂಪವು ಚಕ್ಷುರಿಂದ್ರಿಯ ಮತ್ತು ಸ್ಪರ್ಶ ನೇಂದ್ರಿಯವಿರುವದು. ಜಲ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಪಿಚ್ಛಿಲ ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ಮಧುರ, ಅಮ್ಲ ಮತ್ತ ಲವಣ ರಸಗಳು ಪಿಚ್ಛಿಲ ಗುಣ ಯುಕ್ತವಿರುವವು. ಯಾಕಂದರೆ ಇವು ಕಫ ವರ್ಧನ ಕಾರ್ಯ ಮಾಡುವವು. ಪಿಚ್ಛಿಲ ಗುಣ ಅಥವಾ ಪಿಚ್ಛಿಲ ಗುಣಾತ್ಮಕ ದ್ರವ್ಯಗಳು ಪ್ರಾಯಶಃ ಶೀತ ವೀರ್ಯವುಳ್ಳವಿರುವವು. ಹಾಗೂ ಇವು ಹೆಚ್ಚಾಗಿ ಮಧುರ ವಿಪಾಕಿ ಇರುವವು. ತ್ರಿದೋಷಗಳಲ್ಲಿ ಕಫದೋಷವು ಪಿಚ್ಛಿಲ ಗುಣದ ಅಧಿಷ್ಠಾನವಿರುವದು.

ಪಿಚ್ಛಿಲ ಗುಣದ ಕಾರ್ಯ:—

ಜೀವನ, ಬಲ್ಯ, ಸಂಧಾನ, ಗೌರವ, ಕಫ ವರ್ಧನ, ಲೇಪನ, ಬೃಂಹಣ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ಪಿಚ್ಛಿಲ ಗುಣ ದ್ರವ್ಯಃ—

ಜಲ ಮಹಾಭೂತ ಪ್ರಾಧಾನ್ಯ ದ್ರವ್ಯಗಳು ಪ್ರಾಯಶಃ ಪಿಚ್ಛಿಲ ಗುಣಾತ್ಮಕ ವಿರುತ್ತವೆ. ಉದಾ:– ದಧಿ, ಅನೂಪ ಮಾಂಸ, ಏರಂಡತೈಲ, ತಿಲತೈಲ, ಯಷ್ಟಿ ಮಧು ಇತ್ಯಾದಿ.

14) ವಿಶದ ಗುಣ:—

यस्य क्षालने शक्तिः स **विशदः** । (हे)

क्लेदच्छेदकरः ख्यातो **विशदो** व्रणरोपणः । (भा. प्र.)

विशदो विपरीतोऽस्यात् क्लेदाचूषणरोपणः । (सु.)

रौक्ष्य वैशद्ये, पार्थिव वायव्ये । (र. वै. अ. ३)

उष्ण तीक्ष्ण सूक्ष्म रूक्ष खर लघु **विशद**मित्यादि । (सु. सू. अ. ४१)

श्लक्ष्ण सूक्ष्म मृदु व्यवायि **विशदे**त्यादि । (सु. सू. अ. ४१)

ವಿಶದ ಗುಣ ಸ್ವರೂಪ:—

ಯಾವ ಗುಣದಿಂದ ಶರೀರಗತ ಕ್ಲೇದದ ಶೋಷಣವಾಗುವದೋ ಮತ್ತು ವ್ರಣಾದಿಗಳು ಸ್ವಚ್ಛವಾಗುವವೋ ಅದಕ್ಕೆ 'ವಿಶದ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ 'ಸ್ವಚ್ಛ' 'ನಿರ್ಮಲ' ಎಂದು ಅನ್ನುವರು. ಇದು ಪಿಚ್ಛಿಲ ಗುಣದ ವಿಪರೀತ ಸ್ವರೂಪವುಳ್ಳದ್ದಿರುವದು. ಮತ್ತು ಇದರ ಭೌತಿಕ ಸ್ವರೂಪವು ಚಕ್ಷುರಿಂದ್ರಿಯ ಸ್ಪರ್ಶನೇಂದ್ರಿಯವಿರುವದು. ಪೃಥ್ವಿ, ವಾಯು, ತೇಜ ಮತ್ತು ಆಕಾಶ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ವಿಶದ ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ಕಟು, ತಿಕ್ತ ಮತ್ತು ಕಷಾಯ ರಸಗಳು ವಿಶದ ಗುಣಾಧಿಷ್ಠಿತವಿರುತ್ತವೆ. ಯಾಕಂದರೆ ಇವು ವಾತ ವರ್ಧಕವಿರುತ್ತವೆ. ವಿಶದಗುಣ ಅಥವಾ ವಿಶದ ಗುಣಾತ್ಮಕ ದ್ರವ್ಯಗಳು ಪ್ರಾಯಃ ಶೀತ ವೀರ್ಯವುಳ್ಳವಿರುತ್ತವೆ. ಹಾಗೂ ಹೆಚ್ಚಾಗಿ ಕಟು ವಿಪಾಕಿ ಇರುವವು. ತ್ರಿದೋಷಗಳಲ್ಲಿ ವಾತ ದೋಷವು ವಿಶದ ಗುಣದ ಅಧಿಷ್ಠಾನವಿರುವದು.

ವಿಶದ ಗುಣದ ಕಾರ್ಯಃ—

ಕ್ಲೇದಾಚೂಷಣ, ರೋಪಣ, ಅಜೀವನ, ಬಲಹಾನಿ, ಅಸಂಧಾನ, ಕಫನಾಶನ ಲಾಘವ, ಲೇಖನ, ಮಲಶೋಷಣ, ವಾತವೃದ್ಧಿ ಇತ್ಯಾದಿ ಕಾರ್ಯಗಳನ್ನು ಮಾಡುವದು. ಲಂಘನ ಚಿಕಿತ್ಸಾ ಉಪಕ್ರಮದಲ್ಲಿ ವಿಶದ ಗುಣ ದ್ರವ್ಯಗಳು ಉಪಯೋಗವಾಗುವವು.

ವಿಶದ ಗುಣ ದ್ರವ್ಯಃ—

ಪೃಥ್ವಿ, ತೇಜ, ವಾಯು ಮತ್ತು ಆಕಾಶ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಶಃ ವಿಶದ ಗುಣಾತ್ಮಕವಿರುತ್ತವೆ. ಉದಾ:– ಗುಗ್ಗುಲು, ಯವ, ಮಧು ಇತ್ಯಾದಿ.

10) ಶ್ಲಕ್ಷ್ಣ ಗುಣಃ—

यस्य रोपणो शक्तिः स श्लक्ष्णः । (हे)

श्लक्ष्णः स्नेहं विनाऽपि स्यात् कठिनोऽपि हि चिक्कणः । (भा. प्र.)

श्लक्ष्णः पिच्छिलवज्ज्ञेयः । (सु.)

तैजसं श्लक्ष्णत्वं नाम । (र. वै. अ. २)

स्निग्धः शीतो गुरुर्मन्दः श्लक्ष्णो मृत्स्नः स्थिरः कफः । (अ. हृ. अ. १)

श्लक्ष्ण सूक्ष्म मृदु .... शब्द बहुलमाकाशीयम् । (सु. सू. अ. ४१)

ಶ್ಲಕ್ಷ್ಣ ಗುಣ ಸ್ವರೂಪಃ—

ಯಾವ ಗುಣದ ಮೂಲಕ ಶರೀರದ ಕಫ, ಬಲ, ಶಕ್ತ್ಯಾದಿಗಳು ಬೆಳೆಯುವವೋ ಅವಕ್ಕೆ 'ಶ್ಲಕ್ಷ್ಣ' ಗುಣವೆಂದು ಅನ್ನುವರು. ಇದು ಪಿಚ್ಛಿಲ ಗುಣವಂತೆ ಕಾರ್ಯ ಮಾಡುವದು. ರೂಢಿಯಲ್ಲಿ ಇದಕ್ಕೆ 'ನುಣುಪು' 'ಹೊಳಪು' ಎಂದು ಅನ್ನುವರು. ಇದು ಖರ ಗುಣದ ವಿಪರೀತ ಸ್ವರೂಪವುಳ್ಳದ್ದಿರುತ್ತದೆ. ಇದರ ಭೌತಿಕ ಸ್ವರೂಪವು ಚಕ್ಷುರಿಂದ್ರಿಯ ಮತ್ತು ಸ್ಪರ್ಶನೇಂದ್ರಿಯವಿರುವದು. ಆಕಾಶ ಮತ್ತು ತೇಜ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಶ್ಲಕ್ಷ್ಣ ಗುಣಾತ್ಮಕ ವಿರುತ್ತವೆ. ಷಡ್ರಸಗಳಲ್ಲಿ ಮಧುರ, ಅಮ್ಲ, ಮತ್ತು ಲವಣ ರಸಗಳು ಶ್ಲಕ್ಷ್ಣಗುಣಾಧಿಷ್ಠಿತವಿರುತ್ತವೆ. ಶ್ಲಕ್ಷ್ಣಗುಣ ಅಥವಾ ಶ್ಲಕ್ಷ್ಣಗುಣಾತ್ಮಕ ದ್ರವ್ಯಗಳು ಶೀತ ಮತ್ತು ಉಷ್ಣ ಈ ಎರಡೂ ವೀರ್ಯಾತ್ಮಕವಿರುವವು. ಹಾಗೂ ಇವು ಮಧುರ, ಅಮ್ಲ ವಿಪಾಕಿ ಇರುವವು. ತ್ರಿದೋಷಗಳಲ್ಲಿ ಪ್ರಾಮುಖ್ಯವಾಗಿ ಕಫ ದೋಷವು ಶ್ಲಕ್ಷ್ಣ ಗುಣಾಧಿಷ್ಠಾನವಿರುತ್ತದೆ.

ಶ್ಲಕ್ಷ್ಣ ಗುಣದ ಕಾರ್ಯಃ—

ವ್ರಣರೋಪಣ, ಜೀವನ, ಸಂಧಾನ, ಕಫವರ್ಧನ, ಪಿತ್ತವರ್ಧನ, ಧಾತುವೃದ್ಧಿ ಸ್ತಂಭನ ಮತ್ತು ಬೃಂಹಣ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ಶ್ಲಕ್ಷ್ಣ ಗುಣ ದ್ರವ್ಯ:—

ಆಕಾಶ ಮತ್ತು ತೇಜ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಶ್ಲಕ್ಷ್ಣ ಗುಣಾತ್ಮಕವಿರುತ್ತವೆ. ಉದಾಃ- ಮೌಕ್ತಿಕ, ಗುಂಜಾಬೀಜ, ಸುವರ್ಣ, ರತ್ನಗಳು ಇತ್ಯಾದಿ.

16) ಖರ ಗುಣ:—

यस्य लेखने शक्तिः स खरः । (हे)

कर्कशत्वं वायव्यम् । (र. वै. अ. २)

तत्र रुक्षो लघु शीतः खर सूक्ष्मश्चलोऽनिलः । (अ. हृ. सू. अ. १)

उष्ण तीक्ष्ण सूक्ष्म रुक्ष खरेत्यादि । (सु. सू. अ. ४१)

ಖರ ಗುಣ ಸ್ವರೂಪಃ—

ಯಾವ ಗುಣದಿಂದ ಶರೀರದಲ್ಲಿ ಕರ್ಕಶತಾ ಉತ್ಪನ್ನವಾಗುವದೋ ಅದಕ್ಕೆ 'ಖರ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ 'ಹುರಬರುಕು' 'ಬಿರುಸು' ಎಂದು ಅನ್ನುವರು. ಇದು ಶ್ಲಕ್ಷ್ಣ ಗುಣದ ವಿಪರೀತ ಭಾವವುಳ್ಳದ್ದಿರುತ್ತದೆ. ಇದರ ಭೌತಿಕ ಸ್ವರೂಪವು ಸ್ಪರ್ಶನೇಂದ್ರಿಯುವಿರುವದು. ಸುಶ್ರುತನು ಖರ ಗುಣದ ಬದಲಾಗಿ ಕರ್ಕಶ ಗುಣವನ್ನು ಹೇಳಿರುವನು. ಪೃಥ್ವಿ ಮತ್ತು ವಾಯು ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಶಃ ಖರ ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ಕಟು, ತಿಕ್ತ ಮತ್ತು ಕಷಾಯ ರಸಗಳು ಖರ ಗುಣಯುಕ್ತವಿರುವವು. ಯಾಕಂದರೆ ಇವು ವಾತ ವರ್ಧಕವಿರುವವು. ಖರ ಗುಣ ಅಥವಾ ಖರ ಗುಣಾತ್ಮಕ ದ್ರವ್ಯಗಳು ಪ್ರಾಯಃ ಉಷ್ಣ ಮತ್ತು ಶೀತ ಈ ಎರಡೂ ವೀರ್ಯಾತ್ಮಕವಿರುತ್ತವೆ. ಯಾಕಂದರೆ ಅಧಿಕ ಶೀತ ಮತ್ತು ಅಧಿಕ ಉಷ್ಣ ಈ ಎರಡೂ ಖರ ಗುಣ ಉತ್ಪನ್ನ ಮಾಡುವವು. ಖರ ಗುಣಾತ್ಮಕ ದ್ರವ್ಯಗಳು ಪ್ರಾಯಃ ಕಟು ವಿಪಾಕಿ ಇರುವವು. ತ್ರಿದೋಷಗಳಲ್ಲಿ ವಾತ ದೋಷವು ಖರ ಗುಣ ಸ್ವಭಾವದ್ದಿರುತ್ತದೆ.

ಖರ ಗುಣದ ಕಾರ್ಯಃ—

ಲೇಖನ, ವಾತವರ್ಧನ, ಧಾತುಶೋಷಣ, ಮಲಶೋಷಣ, ಕ್ಲೇದಶೋಷಣ, ವ್ರಣರೋಪಣ, ಕಂಠ್ಯ, ಶಿರೋವಿರೇಚನ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ಖರ ಗುಣ ದ್ರವ್ಯಃ—

ಪೃಥ್ವಿ ಮತ್ತು ವಾಯು ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಶಃ ಖರ ಗುಣಾತ್ಮಕವಿರುತ್ತವೆ. ಉದಾ:— ಗೋಜಿವ್ಹಾ, ಸಮುದ್ರಫೇನ ಇತ್ಯಾದಿ.

17) ಸ್ಥೂಲ ಗುಣಃ—

- यस्य संवरणे शक्तिः स स्थूलः । (हे)

स्थूलः स्थौल्यकरो देहे स्रोतसामवरोधकृत् । (भा. प्र.)

ಸ್ಥೂಲ ಗುಣ ಸ್ವರೂಪಃ—

ಯಾವ ಗುಣವು ಶರೀರದಲ್ಲಿ ಸ್ಥೂಲತಾ ಮತ್ತು ಸ್ರೋತೋರೋಧ ಉತ್ಪನ್ನ ಮಾಡುವದೋ ಅದಕ್ಕೆ 'ಸ್ಥೂಲ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ 'ದೊಡ್ಡ' 'ದಪ್ಪ' ಎಂದು ಅನ್ನುವರು. ಇದು ಸೂಕ್ಷ್ಮ ಗುಣದ ವಿಪರೀತ ಸ್ವರೂಪದ್ದು ಇದ್ದು; ಇದರ ಭೌತಿಕ ಸ್ವರೂಪ ಜ್ಞಾನವು ಚಕ್ಷುರಿಂದ್ರಿಯದಿಂದಾಗುವದು. ಪೃಥ್ವಿ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಸ್ಥೂಲ ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ಮಧುರ, ಅಮ್ಲ ಮತ್ತು ಲವಣ ರಸಗಳಲ್ಲಿ ಸ್ಥೂಲ ಗುಣಾಧಿಷ್ಠಿತವಿರುತ್ತದೆ. ಯಾಕಂದರೆ ಇವು ಕಫ ವರ್ಧಕವಿರುತ್ತವೆ. ಸ್ಥೂಲ ಗುಣ ಅಥವಾ ಸ್ಥೂಲ ಗುಣಾತ್ಮಕ ದ್ರವ್ಯಗಳು ಪ್ರಾಯಶಃ ಶೀತ ವೀರ್ಯವುಳ್ಳವಿರುತ್ತವೆ. ಹಾಗೂ ಇವು

ಹೆಚ್ಚಾಗಿ ಮಧುರ ವಿಪಾಕಿ ಇರುವವು. ತ್ರಿದೋಷಗಳಲ್ಲಿ ಕಫ ದೋಷವು ಸ್ಥೂಲ ಗುಣಾಧಿಷ್ಠಾನವಿರುತ್ತದೆ.

ಸ್ಥೂಲ ಗುಣದ ಕಾರ್ಯ:—

ಬೃಂಹಣ, ಸಂವರಣ, ಸ್ರೋತಾವರೋಧ, ಕಫವರ್ಧನ, ಗುರುಪಾಕಿ, ಶರೀರ ಸ್ಥೂಲತಾ, ಸೃಷ್ಟವಿಟ್ಕತಾ, ಸೃಷ್ಟಮೂತ್ರತಾ, ಶರೀರಮಾರ್ದವತಾ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ಸ್ಥೂಲ ಗುಣ ದ್ರವ್ಯ:—

ಪಾರ್ಥಿವ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಸ್ಥೂಲ ಗುಣಾತ್ಮಕವಿರುತ್ತವೆ. ಉದಾ:–ದುಗ್ಧ, ದಧಿ, ಶತಾವರಿ, ಕದಲಿಫಲ ಇತ್ಯಾದಿ.

18) **ಸೂಕ್ಷ್ಮ ಗುಣ:—**

यस्य विवरणे शक्तिः स **सूक्ष्मः** ।

देहस्य सूक्ष्मच्छिद्रेषु विशेद्यत् **सूक्ष्ममुच्यते** । (भा. प्र.)

सुक्ष्मस्तु सौक्ष्म्यात् सूक्ष्मेषु स्रोतःस्वनुसरः स्मृतः । (सु.)

सूक्ष्मं तैजसम् । (सु.)

द्रव्याणि **सूक्ष्म** गुण बहुलानि वाय्वग्न्याकाशात्मकानि । (च.)

ಸೂಕ್ಷ್ಮ ಗುಣ ಸ್ವರೂಪ:—

ಯಾವ ಗುಣದ ಮೂಲಕ ದ್ರವ್ಯವು ಸೂಕ್ಷ್ಮ ಸ್ರೋತಸ್ಸುಗಳಲ್ಲಿ ಪ್ರವಿಷ್ಟ ಮಾಡುವದೋ ಅದಕ್ಕೆ 'ಸೂಕ್ಷ್ಮ' ಗುಣವೆಂದು ಅನ್ನುವರು. ಇದು ಸ್ಥೂಲ ಗುಣದ ವಿಪರೀತ ಸ್ವರೂಪವುಳ್ಳದ್ದಿರುವದರಿಂದ ಇದರ ಭೌತಿಕ ಸ್ವರೂಪ ಜ್ಞಾನವು ಚಕ್ಷು ರಿಂದ್ರಿಯದಿಂದ ಆಗುವದು. ಲಘು ಮಹಾಭೂತಗಳಾದಂಥ ಅಗ್ನಿ, ವಾಯು ಮತ್ತು ಆಕಾಶ ಮಹಾಭೂತಗಳು ಸೂಕ್ಷ್ಮ ಗುಣಾಧಿಷ್ಠಾನವಿರುವವು. ಷಡ್ರಸಗಳಲ್ಲಿ ಕಟು, ತಿಕ್ತ ಮತ್ತು ಕಷಾಯ ರಸಗಳು ಸೂಕ್ಷ್ಮ ಗುಣಾಧಿಷ್ಠಿತವಿರುತ್ತವೆ. ಯಾಕಂದರೆ ಇವು ವಾತ ವರ್ಧಕವಿರುತ್ತವೆ. ಸೂಕ್ಷ್ಮ ಗುಣ ಅಥವಾ ಸೂಕ್ಷ್ಮ ಗುಣಾತ್ಮಕ ದ್ರವ್ಯ ಗಳು ಪ್ರಾಯಶಃ ಉಷ್ಣ ವೀರ್ಯವುಳ್ಳವಿರುತ್ತವೆ. ಹಾಗೂ ಇವು ಹೆಚ್ಚಾಗಿ ಕಟು ವಿಪಾಕಿ ಇರುವವು. ತ್ರಿದೋಷಗಳಲ್ಲಿ ವಾತ ದೋಷವು ಸೂಕ್ಷ್ಮ ಗುಣಾಧಿಷ್ಠಾನ ವಿರುತ್ತದೆ.

ಸೂಕ್ಷ್ಮ ಗುಣದ ಕಾರ್ಯ:—

ಸೂಕ್ಷ್ಮ ಸ್ರೋತೋಪ್ರವೇಶ, ವಿವರಣ, ವಾತವೃದ್ಧಿ, ಧಾತುಹ್ರಾಸ, ಲಘು ಪಾಕಿ, ಮಲಶೋಷ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ಸೂಕ್ಷ್ಮ ಗುಣ ದ್ರವ್ಯಃ—

ಲಘು ಮಹಾಭೂತ ಪ್ರಾಧಾನ್ಯ ದ್ರವ್ಯಗಳು ಸೂಕ್ಷ್ಮ ಗುಣಾತ್ಮಕವಿರುತ್ತವೆ. ಉದಾಃ– ಮದ್ಯ, ವಿಷ, ಲವಣ, ಭಸ್ಮಗಳು, ತೈಲ, ಘೃತ, ಮಧು ಇತ್ಯಾದಿ.

19) ಸಾಂದ್ರ ಗುಣಃ—

यस्य प्रसादने शक्तिः स सांद्रः । (हे)

सांद्रः स्थूलः स्याद् बंधकारकः । (सु.)

ಸಾಂದ್ರ ಗುಣ ಸ್ವರೂಪಃ—

ಯಾವ ಗುಣವು ಶರೀರದಲ್ಲಿ ಸ್ಥೌಲ್ಯತಾ ಮತ್ತು ದೃಢತೆಯನ್ನು ಉತ್ಪನ್ನ ಮಾಡುವದೋ ಅದಕ್ಕೆ 'ಸಾಂದ್ರ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ 'ದಟ್ಟ' 'ಘನ' ಎಂದು ಅನ್ನುವರು. ಇದು ದ್ರವ ಗುಣದ ವಿಪರೀತ ಸ್ವರೂಪದ್ದಿದ್ದು ಇದರ ಭೌತಿಕ ಸ್ವರೂಪ ಜ್ಞಾನವು ಚಕ್ಷುರಿಂದ್ರಿಯ ಮತ್ತು ಸ್ಪರ್ಶನೇಂದ್ರಿಯದಿಂದಾಗುವದು. ಪೃಥ್ವಿ ಮತ್ತು ಜಲ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಶಃ ಸಾಂದ್ರ ಗುಣಾತ್ಮಕವಿರುತ್ತವೆ. ಭಾವಪ್ರಕಾಶಕಾರನು ಸಾಂದ್ರಗುಣದ ಬದಲಾಗಿ ಶುಷ್ಕ ಗುಣವನ್ನು ಹೇಳಿರುವನು. ಷಡ್ರಸಗಳಲ್ಲಿ ಮಧುರ, ಅಮ್ಲ ಮತ್ತು ಲವಣ ರಸಗಳಲ್ಲಿ ಪ್ರಾಯಃ ಸಾಂದ್ರ ಗುಣಾಧಿಷ್ಠಿತವಿರುತ್ತದೆ. ಯಾಕಂದರೆ ಈ ರಸಗಳು ಕಫ ವರ್ಧಕವಿರುತ್ತವೆ. ಸಾಂದ್ರ ಗುಣ ಅಥವಾ ಸಾಂದ್ರ ಗುಣಾತ್ಮಕ ದ್ರವ್ಯಗಳು ಪ್ರಾಯಃ ಶೀತ ವೀರ್ಯವುಳ್ಳವಿರುತ್ತವೆ. ಹಾಗೂ ಇವು ಹೆಚ್ಚಾಗಿ ಮಧುರ ವಿಪಾಕಿ ಇರುವವು. ತ್ರಿದೋಷಗಳಲ್ಲಿ ಕಫ ದೋಷವು ಸಾಂದ್ರ ಗುಣಾಧಿಷ್ಠಾನವಿರುತ್ತದೆ.

ಸಾಂದ್ರ ಗುಣದ ಕಾರ್ಯಃ—

ಬೃಂಹಣ, ಬಂಧನ, ಪ್ರಸಾದನ, ಕಫ ವರ್ಧನ, ಸಪ್ತಧಾತು ವರ್ಧನ, ಮಲಗಳನ್ನು ಗಟ್ಟಿ ಮಾಡುವಿಕೆ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ಸಾಂದ್ರ ಗುಣ ದ್ರವ್ಯಃ—

ಪೃಥ್ವಿ ಮತ್ತು ಜಲ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ಸಾಂದ್ರ ಗುಣಯುಕ್ತವಿರುತ್ತವೆ. ಉದಾಃ– ದಧಿ, ನವನೀತ ಇತ್ಯಾದಿ.

20) ದ್ರವ ಗುಣಃ—

यस्य विलोडने शक्तिः स द्रवः । (हे)

द्रवः क्लेदकरो व्यापी । (भा. प्र.)

द्रवः प्रक्लेदनः । (सु.)

द्रवत्वं स्यंदनकर्म कारणम् । (प्र. पा. भा.)

द्रवत्व स्यंदने हेतुः निमित्तं संग्रहे तु तत् । (कारिकावली)

ದ್ರವ ಗುಣ ಸ್ವರೂಪ:—

ಯಾವ ಗುಣವು ಶರೀರದಲ್ಲಿ ಕ್ಲಿನ್ನತಾ ಮತ್ತು ಆರ್ದ್ರತೆಯನ್ನು ಉತ್ಪನ್ನ ಮಾಡುವದೋ ಹಾಗೂ ಎಲ್ಲ ಕಡೆಗೂ ಪಸರಿಸುವದೋ ಅದಕ್ಕೆ 'ದ್ರವ' ಗುಣವೆಂದು ಅನ್ನುವರು. ರೂಢಿಯಲ್ಲಿ ಇದಕ್ಕೆ 'ತೆಳ್ಳಗೆ' 'ತಿಳುವು' ಎಂದು ಅನ್ನುವರು. ಇದು ಸಾಂದ್ರ ಗುಣದ ವಿಪರೀತ ಸ್ವರೂಪವುಳ್ಳದ್ದಿದ್ದು; ಇದರ ಭೌತಿಕ ಸ್ವರೂಪ ಜ್ಞಾನವು ಚಕ್ಷುರೇಂದ್ರಿಯ ಮತ್ತು ಸ್ಪರ್ಶನೇಂದ್ರಿಯಗಳಿಂದ ಆಗುವದು. ಜಲ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ದ್ರವ ಗುಣಾತ್ಮಕವಿರುತ್ತವೆ. ಷಡ್ರಸಗಳಲ್ಲಿ ಮಧುರ, ಅಮ್ಲ ಮತ್ತು ಲವಣ ರಸಗಳಲ್ಲಿ ಪ್ರಾಯಃ ದ್ರವ ಗುಣಾಧಿಷ್ಠಿತವಿರುವದು. ದ್ರವ ಗುಣ ಅಥವಾ ದ್ರವ ಗುಣಾತ್ಮಕ ದ್ರವ್ಯಗಳು ಪ್ರಾಯಃ ಉಷ್ಣ ಮತ್ತು ಶೀತ ಈ ಎರಡೂ ವೀರ್ಯವುಳ್ಳವಿರವವು. ಉಷ್ಣದಿಂದ ಸ್ವೇದ ಉತ್ಪನ್ನವಾಗಿ ಕ್ಲಿನ್ನತಾ ಉಂಟಾಗುವದು. ಶೀತದಿಂದ ಆರ್ದ್ರತಾ ಉತ್ಪನ್ನವಾಗುವದು. ದ್ರವ ಗುಣಾತ್ಮಕ ದ್ರವ್ಯಗಳ ವಿಪಾಕವು ಮಧುರ ಮತ್ತು ಅಮ್ಲ ವಾಗುವದು. ತ್ರಿದೋಷಗಳಲ್ಲಿ ಪಿತ್ತ ದೋಷವು ದ್ರವ ಗುಣಾಧಿಷ್ಠಾನವಿರುತ್ತದೆ.

ದ್ರವ ಗುಣದ ಕಾರ್ಯಃ—

ಪ್ರಕ್ಲೇದನ, (ಶರೀರದಲ್ಲಿ ಕ್ಲಿನ್ನತಾ ಅಥವಾ ಆರ್ದ್ರತಾ ಉತ್ಪನ್ನವಾಗುವದು); ವಿಲೋಡನ (ಶರೀರಗತ ದ್ರವ್ಯಗಳ ಮಿಶ್ರಣವಾಗುವದು); ವ್ಯಾಪ್ತಿ (ಶರೀರದಲ್ಲಿ ಪ್ರಸರಣ ಶೀಲತಾ ಉತ್ಪನ್ನವಾಗುವದು); ಕಫವರ್ಧನ, ಪಿತ್ತವರ್ಧನ, ರಸಾದಿ ದ್ರವ ಧಾತುವರ್ಧನ, ಮೂತ್ರಾದಿ ದ್ರವ ಮಲ ವರ್ಧನ ಮತ್ತು ಪ್ರವೃತ್ತವಾಗುವಿಕೆ ಇತ್ಯಾದಿ ಕಾರ್ಯಗಳನ್ನು ಮಾಡುತ್ತದೆ.

ದ್ರವ ಗುಣ ದ್ರವ್ಯ:—

ಜಲ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳು ಪ್ರಾಯಃ ದ್ರವ ಗುಣಯುಕ್ತವಿರುತ್ತವೆ. ಉದಾಃ– ದುಗ್ಧ, ಘೃತ, ತಕ್ರ, ತೈಲ, ಜಲ ಇತ್ಯಾದಿ.

ಮೇಲೆ ಹೇಳಿದ ಈ ಇಪ್ಪತ್ತು ಗುಣಗಳು ಚರಕ ಮತ್ತು ವಾಗ್ಭಟಾಚಾರ್ಯರ ಮತದ ಪ್ರಕಾರವಾಗಿದ್ದು; ಸುಶ್ರುತರು ಹೇಳಿದ ಕೆಲವು ಗುಣಗಳ ಸಮಾವೇಶವು ಈ ಇಪ್ಪತ್ತು ಗುಣಗಳಲ್ಲಿ ಇರುವದಿಲ್ಲ. ಆ ಉಳಿದ ಗುಣಗಳ ವಿವೇಚನೆಯನ್ನು ಇಲ್ಲಿ ಮಾಡುವಾ. ಅದರಂತೆ ಭಾವ ಪ್ರಕಾಶಕಾರರು ಹೇಳಿದ ಶುಷ್ಕ ಗುಣದ ವರ್ಣನೆಯನ್ನು ಇಲ್ಲಿ ಮಾಡಲಾಗುವದು.

1) ಸುಗಂಧಃ—

ಸುಖಾನುಬಂಧೀ ಸೂಕ್ಷ್ಮಶ್ಚ ಸುಗನ್ಧೋ ರೋಚನೋ ಮೃದುः । (ಸು. ಸೂ. ಅ. ೪೬)
ಸುಗಂಧ ಗುಣವು ಸುಖವನ್ನುಂಟುಮಾಡುವಂತಹದಿದ್ದು ಸೂಕ್ಷ್ಮವಾಗಿರುತ್ತದೆ. ಅಲ್ಲದೆ ಇದು ರುಚಿಕರ ಮತ್ತು ಹಿತಕರವಿರುತ್ತದೆ.

2) ದುರ್ಗಂಧಃ—

दुर्गन्धो विपरीतोऽस्माद् हृल्लासारुचिकारकः। (सु. सू. अ. ४६)
ದುರ್ಗಂಧ ಗುಣವು ಸುಗಂಧ ಗುಣದ ವಿಪರೀತವಿರುತ್ತದೆ. ಇದು ಹೃಲ್ಲಾಸ ಮತ್ತು ಅರುಚಿಗಳನ್ನು ಉತ್ಪನ್ನ ಮಾಡುತ್ತದೆ.

3) ಆಶುಕಾರಿಃ—

आशुकारी तथाशुत्वाद्धावत्यम्भसि तैलवत्। (सु. सू. अ. ४६)
ನೀರಿನ ಮೇಲೆ ತೈಲ ಬಿಂದುವನ್ನು ಹಾಕಿದ ಕೂಡಲೆ ಅದು ಯಾವ ಪ್ರಕಾರ ಪಸರಿಸುವದೋ; ಅದೇ ಪ್ರಕಾರ ಆಶು ಗುಣವು ಶರೀರದಲ್ಲಿ ಶೀಘ್ರ ವ್ಯಾಪಿಸಿ ತನ್ನ ಕಾರ್ಯವನ್ನು ಮಾಡುತ್ತದೆ. ಉದಾಃ- ವಿಷ. ವಿಷವು ಆಶುಗುಣಯುಕ್ತವಿರುತ್ತದೆ.

4) ವ್ಯವಾಯಿ ಗುಣಃ –

ಈ ಗುಣದ ವಿವೇಚನೆಯನ್ನು ದ್ರವ್ಯ ಪ್ರಕರಣದಲ್ಲಿ ಮಾಡಿದೆ.

5) ವಿಕಾಶಿ ಗುಣಃ—

ಈ ಗುಣದ ವಿವೇಚನೆಯನ್ನು ದ್ರವ್ಯ ಪ್ರಕರಣದಲ್ಲಿ ಮಾಡಲಾಗಿದೆ.

6) ಶುಷ್ಕ ಗುಣಃ—

शुष्कस्तद्विपरीतकः। (भा. प्र.)
ಭಾವ ಪ್ರಕಾಶಕಾರನು ದ್ರವ ಗುಣದ ವಿಪರೀತವೆಂದು ಶುಷ್ಕ ಗುಣವನ್ನು ಹೇಳಿರುವನು.

ಅಧ್ಯಾತ್ಮ ಗುಣಗಳು:—

ಸುಖಾದಿ ಪ್ರಯತ್ನಾಂತ ಗುಣಗಳು ಆತ್ಮನ ವಿಶಿಷ್ಟ ಗುಣಗಳಿರುವವು.

ಸುಖಮ್:—

ಅನ್ನಂಭಟ್ಟನು ಸುಖದ ಪರಿಭಾಷೆಯನ್ನು ಹೀಗೆ ಮಾಡಿರುತ್ತಾನೆ.

" सर्वेषामनुकूल वेदनीयं सुखम् "। (तर्क संग्रह)

ಎಲ್ಲ ಪ್ರಾಣಿಗಳಿಗೂ ಅನುಕೂಲವಾದುದೇ ಸುಖವು. ಅಥವಾ ಸುಖವು ಅಪೇಕ್ಷೆಗೆ ವಿಷಯ. ಇದು ಧರ್ಮದಿಂದ ಹುಟ್ಟುವದು.

ತರ್ಕಸಂಗ್ರಹ ದೀಪಿಕೆಯಲ್ಲಿ ಸುಖದ ಪರಿಭಾಷೆಯನ್ನು ಬೇರೆ ರೀತಿಯಿಂದ ಹೇಳಿದ್ದಾರೆ.

" सुख्यहमित्याद्यनुव्यवसायगम्यं सुखत्वादिकमेव लक्षणम् "।

ಯಾವ ಕಾರಣದಿಂದ ಆತ್ಮನಿಗೆ "ನಾನು ಸುಖಿ ಇದ್ದೇನೆಂದು" ಅನುಭವವಾಗುತ್ತದೆಯೋ ಅದು ಸುಖವಿರುತ್ತದೆ.

ಶಿವಾದಿತ್ಯನು ಸುಖದ ಲಕ್ಷಣವನ್ನು ಹೀಗೆ ಮಾಡಿರುತ್ತಾನೆ.

" सुखत्व सामान्यवन्तिरुपाध्यनुकूलवेद्यं सुखम् " ।

ಯಾವುದರಲ್ಲಿ ಸ್ವಾಭಾವಿಕವಾಗಿ (ನಿರುಪಾಧಿಕ) ಆನಂದದಾಯಕವಿರುವದೋ ಅದೇ ಸುಖವು ಎಂದು ಹೇಳಿರುತ್ತಾನೆ.

ಸುಖವು ಎರಡು ವಿಧ:—

1) ಸಂಸಾರಿಕ 2) ಸ್ವರ್ಗೀಯ.

ಸಾಂಸಾರಿಕ ಸುಖವು ಪ್ರಯತ್ನ ಸಾಧ್ಯವು. ಮತ್ತು ಸ್ವರ್ಗೀಯ ಸುಖವು ಇಚ್ಛೆಯ ಆಧೀನವಿರುತ್ತದೆ.

प्रयत्नोत्पाद्यसाधनाधीनं सुखं सांसारिकम् ।
इच्छायात्राधीन साधनसाध्यं सुखं स्वर्गः ॥

ದುಃಖಮ್—

प्रतिकूलतया वेदनीयं दुःखम् । (तर्क संग्रह)

ಎಲ್ಲರಿಗೂ ಪ್ರತಿಕೂಲವಾದುದೇ ದುಃಖವು ಅಥವಾ ಇದು ದ್ವೇಷಕ್ಕೆ ವಿಷಯ ಮತ್ತು ಅಧರ್ಮದಿಂದ ಹುಟ್ಟುವದು. ಸುಖವು ಮತ್ತೊಂದು ವಸ್ತುವಿನ ಅಪೇಕ್ಷೆಯಿಂದ ಅಪೇಕ್ಷೆಗೆ ವಿಷಯವಲ್ಲ. ಅದು ತನಗೋಸ್ಕರವೇ ಅಪೇಕ್ಷಿತವಾಗುವದು. ಇದರಂತೆಯೇ ದುಃಖವು ಇತರ ವಸ್ತುವನ್ನು ದ್ವೇಷಿಸುವದರ ಮೂಲಕ ದ್ವೇಷಕ್ಕೆ ವಿಷಯವಲ್ಲ. ಇದು ಸ್ವತಂತ್ರವಾಗಿಯೇ ದ್ವೇಷಕ್ಕೆ ವಿಷಯವಾಗುವದು. ಅಪೇಕ್ಷೆ ಪಡಲು ಇದು ತನಗೆ ಅನುಕೂಲವೆಂಬ ಜ್ಞಾನವು ಕಾರಣ. ದ್ವೇಷಿಸಲು ಇದು ತನಗೆ ಪ್ರತಿಕೂಲವಾದುದೆಂಬ ಜ್ಞಾನವು ಕಾರಣವು ಅಥವಾ ಸುಖದ ವಿರುದ್ಧವು ದುಃಖವಿರುವದು. ಯಾವುದರಿಂದ ಆತ್ಮನು ವಿಷಣ್ಣನಾಗುತ್ತಾನೋ ಮತ್ತು ದೀನತೆಯ ಭಾವವು ಉತ್ಪನ್ನವಾಗುತ್ತದೆಯೋ ಅದು ದುಃಖವು.

ಪ್ರಶಸ್ತಪಾದ ಭಾಷ್ಯದಲ್ಲಿ " उपघात लक्षणं दुःखम् " ಅತೀತಕಾಲದ ಅನಿಷ್ಟದ ಸ್ಮರಣದಿಂದ ಸ್ಮೃತಿಜ ದುಃಖವು ಮತ್ತು ಅನಾಗತ ಅನಿಷ್ಟದ ಆಶಂಕೆಯಿಂದ ಸಂಕಲ್ಪಜ ದುಃಖವು ಉತ್ಪನ್ನವಾಗುತ್ತದೆ.

ಇಚ್ಛಾ:—

" इच्छा कामः " ।

ಯಾವದೇ ವಸ್ತುವಿನ ಭಾವನೆಯು ಇಚ್ಛೆಯು. ಯಾವ ವಸ್ತುವು ಪ್ರಾಪ್ತವಿಲ್ಲವೋ ಅದು ಪ್ರಾಪ್ತವಾಗಲೆಂದು ಭಾವಿಸುವದೇ ಇಚ್ಛೆಯು ಇರುವದು.

ಇಚ್ಛೆಯ ವಿಷಯಗಳು:- ಅಭಿಲಾಷೆ, ಕಾಮ, ರಾಗ, ಸಂಕಲ್ಪ, ಕಾರುಣ್ಯ, ವೈರಾಗ್ಯ, ಉಪಧಾ, ಭಾವ, ಚಿಕೀರ್ಷಾ, ಜಿಘೃಕ್ಷಾ ಹೀಗೆ ಅನಂತ ವಿಷಯಗಳಿರುವವು. ಆತ್ಮ ಮತ್ತು ಮನಸ್ಸಿನ ಸಂಯೋಗದಿಂದ ಸುಖದ ಇಚ್ಛೆಯಾಗುತ್ತದೆ.

ದ್ವೇಷ:—

" ज्वलनात्मको द्वेषः " । (पदार्थ धर्मसंग्रह)

ಯಾವುದರಿಂದ ಆತ್ಮನು ದಗ್ಧವಾಗುವಂತೆ ಆಗುತ್ತಾನೋ ಆದಕ್ಕೆ ದ್ವೇಷ ವೆನ್ನುವರು. ಪ್ರಶಸ್ತಪಾದ ಭಾಷ್ಯದಲ್ಲಿ

यस्मिन् सति प्रज्वलित " मिवात्मनं मन्यते स द्वेषः । "

ಆತ್ಮ ಮತ್ತು ಮನಸ್ಸಿನ ಸಂಯೋಗದಿಂದ ದುಃಖವು, ಅಥವಾ ದುಃಖದ ಸ್ಮರಣ ದಿಂದ ದ್ವೇಷವು ಉತ್ಪನ್ನವಾಗುತ್ತದೆ.

ಇಚ್ಛೆಯಂತೆ ದ್ವೇಷವು ಪ್ರಯತ್ನ, ಸ್ಮೃತಿ ಮತ್ತು ಧರ್ಮಾಧರ್ಮದ ಮೂಲ ಕಾರಣವಿರುವದು. " ಅವನನ್ನು ನಾನು ಹೊಡೆಯುತ್ತೇನೆ ". ಇಂಥ ಪ್ರಯತ್ನವು ದ್ವೇಷದ ಕಾರಣದಿಂದಲೇ ಆಗುತ್ತದೆ. ಮತ್ತು ದ್ವೇಷವು ಸ್ಮೃತಿಗೆ ಕಾರಣವಾಗುತ್ತದೆ. ಹೇಗೆಂದರೆ ಯಾವನು ಯಾವನ ಮೇಲೆ ದ್ವೇಷಿಸುತ್ತಾನೋ ಅವನ ಸ್ಮರಣವು ನಿರಂತರ ವಾಗಿ ಇರುತ್ತದೆ. ನಿರ್ದೋಷ ವ್ಯಕ್ತಿಯಮೇಲೆ ದ್ವೇಷಿಸುವದು ಅಧರ್ಮವು.

ಕ್ರೋಧ, ದ್ರೋಹ, ಮನ್ಯು, ಅಕ್ಷಮಾ ಮತ್ತು ಅಮರ್ಷ ಇವು ದ್ವೇಷದ ಭಿನ್ನಾಭಿನ್ನ ಪ್ರಭೇದಗಳಿರುವವು.

ಪ್ರಯತ್ನ:—

" कृतिः प्रयत्नः " । (तर्क संग्रह)

ಕಾರ್ಯಾರಂಭ ಗುಣಕ್ಕೆ ಪ್ರಯತ್ನವೆನ್ನುತ್ತಾರೆ. ಸಂರಂಭ, ಉತ್ಸಾಹ ಇವು ಪರ್ಯಾಯಗಳು.

ಪ್ರಯತ್ನವು ಜೀವನ ಪೂರ್ವಕ ಮತ್ತು ಇಚ್ಛಾದ್ವೇಷ ಪೂರ್ವಕವೆಂದು ಎರಡು ವಿಧ.

1) **ಜೀವನ ಪೂರ್ವಕ:—** ಯಾವ ಪ್ರಯತ್ನವು ಆತ್ಮ ಮತ್ತು ಮನಸಂಯೋಗ ದಿಂದ ಉತ್ಪನ್ನವಾಗುತ್ತದೆಯೋ ಅದು ಜೀವನ ಪೂರ್ವಕ ಪ್ರಯತ್ನವು. ನ್ಯಾಯ ಕಂದಲೀಕಾರನು ಜೀವನದ ಪರಿಭಾಷೆಯನ್ನು ಹೀಗೆ ಮಾಡಿದ್ದಾನೆ.

सदेहस्यात्मनो विपच्यमान कर्माशयसहितरूप मनसा सह संयोगः संबन्धः जीवनम् ।

ಅವಶಿಷ್ಟ ಕರ್ಮದ ಫಲವನ್ನು ಭೋಗಿಸುವದಕ್ಕಾಗಿ ಸಶರೀರ ಆತ್ಮನ ಮನಸ್ಸಿನ ಕೂಡ ಸಂಯೋಗವೇ ಜೀವನವಿರುವದು. ಈ ಸಂಯೋಗದಿಂದ ಉತ್ಪನ್ನವಾಗುವ ಪ್ರಯ ತ್ನಕ್ಕೆ ಜೀವನ ಪೂರ್ವಕ ಪ್ರಯತ್ನವೆನ್ನುತ್ತಾರೆ. ಸುಷುಪ್ತ ಅವಸ್ಥೆಯಲ್ಲಿ ಶ್ವಾಸಾದಿ ಕ್ರಿಯೆಯು ಇದೇ ಪ್ರಯದಿಂದಲೇ ಆಗುತ್ತದೆ.

2) ಇಚ್ಛಾ ದ್ವೇಷಪೂರ್ವಕ:— ಅರ್ಥಾತ್ ಯಾವ ಪ್ರಯತ್ನವು ಇಚ್ಛೆಯಿಂದ ಮತ್ತು ದ್ವೇಷದಿಂದ ಉತ್ಪನ್ನವಾಗುತ್ತದೆಯೋ ಅದು ಇಚ್ಛಾದ್ವೇಷ ಪೂರ್ವಕವು.

ಹಿತಪ್ರಾಪ್ತಿಯ ನಿಮಿತ್ತ ಪ್ರವೃತ್ತಿಮೂಲಕ ಕಾರ್ಯ ಮಾಡಲ್ಪಡುವದೋ ಅದು ಇಚ್ಛಾಪೂರ್ವಕ ಪ್ರಯತ್ನವು.

ಅಹಿತ ಪರಿಹಾರಾರ್ಥವಾಗಿ ಯಾವ ಕ್ರಿಯೆಯು ಮಾಡಲ್ಪಡುತ್ತದೆಯೋ ಅದು ದ್ವೇಷಪೂರ್ವಕ ಪ್ರಯತ್ನವು.

हितासाधनोपादानेषु प्रयत्नः इच्छापूर्वकः ।
दुःखसाधन परित्यागे प्रयत्नो द्वेषपूर्वकः । (न्याय क.)

ಪ್ರಯತ್ನವು ವಿಹಿತ, ನಿಷಿದ್ಧ ಮತ್ತು ಉದಾಸೀನವೆಂದು ಮೂರು ವಿಧವು.

ಪರಾದಿ ಹತ್ತು ಗುಣಗಳು

परापरत्वे युक्तिश्च संख्या संयोग एव च ।
विभागश्च पृथक्त्वं च परिमाणमथापि च ॥
संस्कारोऽभ्यास इत्येत गुणा ज्ञेयाः परादयः ।
सिद्ध्युपायाश्चिकित्साया लक्षणैस्तान् प्रचक्ष्महे ॥ (च. सू. अ. २६)

ಪರತ್ವ, ಅಪರತ್ವ, ಯುಕ್ತಿ, ಸಂಖ್ಯಾ, ಸಂಯೋಗ, ವಿಭಾಗ, ಪೃಥಕ್ತ್ವ, ಪರಿಮಾಣ, ಸಂಸ್ಕಾರ ಮತ್ತು ಅಭ್ಯಾಸ ಇವು ಹತ್ತು ಪರಾದಿ ಗುಣಗಳಿರುವವು. ರೋಗ ಚಿಕಿತ್ಸೆಯಲ್ಲಿ ಈ ಹತ್ತು ಗುಣಗಳ ಜ್ಞಾನವಿರುವದು ಅವಶ್ಯವಿದೆ. ಇವುಗಳ ಜ್ಞಾನವಿಲ್ಲದಲೇ ರೋಗ ಚಿಕಿತ್ಸಾ ಮಾಡುವದು ಕಠಿಣವಾಗುವದು. ಇವುಗಳ ಲಕ್ಷಣವನ್ನು ಶಾಸ್ತ್ರಕಾರರು ಈ ರೀತಿಯಾಗಿ ಹೇಳಿರುವರು.

1) ಪರತ್ವ:—

तच्च परत्वं प्रधानत्वम् । (च. द.)

ಪರತ್ವವೆಂದರೆ ಪ್ರಧಾನ ಅಥವಾ ಉತ್ಕೃಷ್ಟವೆಂದು ಅರ್ಥವಾಗುವದು. ಒಂದೇ ರೀತಿಯಾಗಿರುವ ಅನೇಕ ವಸ್ತುಗಳಲ್ಲಿ ಯಾವದು ಪ್ರಮುಖ ಅಥವಾ ಶ್ರೇಷ್ಠವಿರುವದೋ ಅದಕ್ಕೆ 'ಪರ' ಎಂದು ಅನ್ನುವರು.

देश काल वयो मान पाक वीर्य रसादिषु परापरत्वे । (च. सू. अ. २६)
परत्वं सन्निकृष्टत्वम् उपयोगितामासन्नत्वम् । (यो)

तत्र देशो मरुः परः, कालो विसर्गः परः, वयस्तरुणं परम्, मानं च शरीरस्य यथावक्ष्यमाणं शारीरे परं, पाक वीर्य रसास्तु ये यस्य योगिनस्ते तं प्रति पराः ।
(च. द.)

ಈ ಗುಣದ ಪ್ರಯೋಗವು ಚಿಕಿತ್ಸಾ ಶಾಸ್ತ್ರದಲ್ಲಿ ದೇಶ, ಕಾಲ, ವಯ, ಮಾನ, ಪಾಕ, ವೀರ್ಯ ಮತ್ತು ರಸ ಮೊದಲಾದವುಗಳ ಸಂಬಂಧವಾಗಿ ಮಾಡಲ್ಪಡುವವು ಅಂದರೆ ದೇಶದಲ್ಲಿ ಮರುದೇಶ ಶ್ರೇಷ್ಠ ಅಥವಾ ಪರ ಇರುವದು. ಕಾಲಗಳಲ್ಲಿ ವಿಸರ್ಗ ಕಾಲವು ಶ್ರೇಷ್ಠ ಅಥವಾ ಪರ ಇರುವದು. ವಯಸ್ಸಿನಲ್ಲಿ ತರುಣಾವಸ್ಥೆಯು ಪರ ಅಥವಾ ಶ್ರೇಷ್ಠವಿರುವದು. ಮಾನ ವಿಷಯದಲ್ಲಿ ಶಾರೀರ ಸ್ಥಾನದಲ್ಲಿ ಯಾವ ಪ್ರಾಕೃತ ಮಾನವನ್ನು ಹೇಳಿರುವರೋ ಅದು ಪರ ಅಥವಾ ಶ್ರೇಷ್ಠವಿರುವದು. ವಿಪಾಕ, ವೀರ್ಯ, ರಸಗಳಲ್ಲಿ ಯಾವ ಶರೀರಕ್ಕೆ ಯಾವದು ಹಿತಕರವಿರುವದೋ ಅದು ಪರವಿರುವದು.

2) ಅಪರತ್ವ :–

अपरत्वं अप्रधानत्वम्। (च. द.)

तत्र अनूपोऽपरः आदानमपरः, अपरमितरत्, ततोऽन्यदपरं, अयौगिकात्त्व-
पराः। (च. द.)

एकदिक्काभ्यामेककालाभ्यां संनिकृष्ट विप्रकृष्टाभ्यां परमपरं च। (वै. द.)

ಅಪರತ್ವವೆಂದರೆ ಅಪ್ರಧಾನವುಳ್ಳದ್ದು ಎಂದು ಅರ್ಥವಾಗುವದು. ಪರತ್ವದ ವಿಪರೀತ ಭಾವವುಳ್ಳದ್ದು ಅಪರತ್ವವು. ಈ ಗುಣದ ಪ್ರಯೋಗವಾದರೂ ದೇಶ, ಕಾಲ, ವಯ, ಮಾನ, ಪಾಕ, ವೀರ್ಯ ಮತ್ತು ರಸಾದಿಗಳ ಸಂಬಂಧವಾಗಿಯೇ ಇರುವದು. ಅಂದರೆ ದೇಶದಲ್ಲಿ ಅನೂಪ ದೇಶ, ಕಾಲದಲ್ಲಿ ಆದಾನ ಕಾಲ, ವಯಸ್ಸಿನಲ್ಲಿ ವೃದ್ಧ ವಯಸ್ಸು, ಮಾನದಲ್ಲಿ ಅಪ್ರಾಕೃತ ಮಾನ ಮತ್ತು ಅಸಾತ್ಮ್ಯ ಪಾಕ, ವೀರ್ಯ, ರಸಾದಿಗಳು ಅಪರತ್ವ ಎಂದರೆ ಅಪ್ರಧಾನವಿರುವವು.

3) ಯುಕ್ತಿ :—

युक्तिश्च योजना या तु युज्यते। (च. सू. अ. २६)

योजना दोषाद्यपेक्षया भेषजस्य समीचीनकल्पना, अत एवोक्तं-या तु युज्यते; या कल्पना यौगिकी भवति सा तु युक्तिरुच्यते। (च. द.)

या युज्यते तादृशी दोष देश काल मात्राद्यपेक्षिणी योजना युक्तिः। (वै. द.)

मात्राकालाश्रया युक्तिः सिद्धिर्युक्तौ प्रतिष्ठिता।
तिष्ठत्युपरि युक्तिज्ञो द्रव्यज्ञानवतां सदा। (च.)

ದೋಷ, ದೇಶ, ಕಾಲ, ಪ್ರಕೃತಿ, ಬಲ ಮೊದಲಾದವುಗಳ ವಿಚಾರ ಮಾಡಿ ರೋಗಕ್ಕೆ ತಕ್ಕ ಔಷಧೋಪಚಾರ ಮಾಡುವದಕ್ಕೆ 'ಯುಕ್ತಿ' ಎಂದು ಅನ್ನುವರು. ಚಿಕಿತ್ಸಾ ದೃಷ್ಟಿಯಿಂದ ಇದಕ್ಕೆ ವಿಶೇಷ ಮಹತ್ವವಿರುವದು. ಯಾಕಂದರೆ ಸೃಷ್ಟಿಯಲ್ಲಿಯ ಎಲ್ಲ ದ್ರವ್ಯಗಳು ಔಷಧವೆಂದು ಉಪಯೋಗವಾಗುತ್ತಿದ್ದರೂ ಅವುಗಳ ಸಮ್ಯಕ್ ಯೋಜನಾ ಮಾಡುವದು ಅವಶ್ಯವಾಗಿರುವದು.

4) ಸಂಖ್ಯಾ:—

संख्या स्याद्गणितं। (च. सू. अ. २६)

गणितमिहैक द्वि त्र्यादि। (च. द.)

गणितं गणनाव्यवहार हेतुरेक द्वि त्र्यादि संख्या। (यो)

ಸಾಮಾನ್ಯ ಅರ್ಥದಲ್ಲಿ ಸಂಖ್ಯಾ ಎಂದರೆ ಎಣಿಕೆ ಎಂದು ಆಗುವದು. ರೋಗಗಳ ಮತ್ತು ದ್ರವ್ಯಗಳ ಭೇದಗಳು ಸಂಖ್ಯಾ ಮುಖಾಂತರವೇ ಮಾಡಲ್ಪಡುವವು. ಇದು ರೋಗ ಮತ್ತು ದ್ರವ್ಯಗಳ ಜ್ಞಾನ ಮಾಡಿಕೊಳ್ಳುವದರಲ್ಲಿ ಉಪಯೋಗವಾಗುವದು. ಎಣಿಕೆ ಎಂದರೆ ಒಂದು, ಎರಡು, ಮೂರು ಮೊದಲಾದವುಗಳಿಗೆ ಸಂಖ್ಯಾ ಎಂದು ಕರೆಯುವರು.

5) ಸಂಯೋಗ:—

योग: सह संयोग उच्यते।

द्रव्याणां द्वन्द्व सर्वैककर्मजोऽनित्य एव च॥ (च. सू. अ. २६)

सहेति मिलितानां द्रव्याणां योग: प्राप्तिरित्यर्थ:। सहेत्यनेनेहाकिंचित्करं परस्परसंयोगं निराकरोति। तद्भेदमाह—द्वन्द्वेत्यादि तत्र द्वन्द्वकर्मजो यथा—युध्यमानयोर्मेषयो:; सर्व कर्मजो यथा भाण्डे प्रक्षिप्यमाणानां माषाणां बहुलमाषक्रियायोगज:, एक कर्मजो यथा—वृक्ष वायसयो:। अनित्य इति संयोगस्य कर्मजत्वेनानित्यत्वं दर्शयति। (च. द.)

सह योग: परस्परेण सह योग: संहतीभाव:, स संयोग उच्यते।

संयोग: पुनर्द्वयोर्बहूनां वा द्रव्याणां संहतीभाव:, ॥ (च. वि. अ. १)

स च संयोगो द्रव्याणां द्वन्द्व सर्वैक कर्मज:। द्वन्द्वस्य द्वयो:, सर्वेषां बहूनां, एकस्य च कर्मण: जायते; तेन त्रिविध:।

वैशेषिकास्तु आहु:—अभ्यंतर कर्मज:, संयोगजश्च संयोग:। (वै. द.)

ಎರಡು ಅಥವಾ ಎರಡಕ್ಕಿಂತಲೂ ಹೆಚ್ಚು ದ್ರವ್ಯಗಳ ಸಂಬಂಧ ಬರುವದಕ್ಕೆ 'ಸಂಯೋಗ' ಅನ್ನುವರು. ಪದಾರ್ಥಗಳ ಸಂಯೋಗವು ಎರಡು ರೀತಿಯಿಂದಾಗುವದು. ಒಂದು ನಿತ್ಯ ಮತ್ತೊಂದು ಅನಿತ್ಯ. ದ್ರವ್ಯದಲ್ಲಿ ಗುಣ ಮತ್ತು ಕರ್ಮಗಳು ಸಮವಾಯ ಸಂಬಂಧದಿಂದಿರುವದು ನಿತ್ಯ ಸಂಯೋಗವೆನಿಸಿಕೊಳ್ಳುವದು. ಕೇವಲ ಅನೇಕ ದ್ರವ್ಯಗಳ ಸಮುದಾಯವು ಅನಿತ್ಯಸಂಯೋಗವೆನಿಸಿಕೊಳ್ಳುವದು. ಕಾರ್ಯ ಕಾರಣ ಭೇದದಿಂದ ಸಂಯೋಗವು ಮೂರು ಪ್ರಕಾರದ್ದಿರುವದು.

1) ದ್ವಂದ್ವ ಕರ್ಮಜ ಸಂಯೋಗ 2) ಸರ್ವಕರ್ಮಜ ಸಂಯೋಗ 3) ಏಕ ಕರ್ಮಜ ಸಂಯೋಗ.

1) ದ್ವಂದ್ವ ಕರ್ಮಜ ಸಂಯೋಗಃ—

ಎರಡು ವಸ್ತು ಅಥವಾ ದ್ರವ್ಯಗಳ ಸಂಬಂಧಕ್ಕೆ ದ್ವಂದ್ವಕರ್ಮಜ ಸಂಯೋಗ ವೆನ್ನುವರು. ಕದನ ಮಾಡುತ್ತಿರುವ ಎರಡು ಮೇಷಗಳ ಸಂಯೋಗಕ್ಕೆ ದ್ವಂದ್ವ ಕರ್ಮಜ ಸಂಯೋಗವೆನ್ನುವರು.

2) ಸರ್ವ ಕರ್ಮಜ ಸಂಯೋಗಃ—

ಎರಡಕ್ಕಿಂತಲೂ ಅಧಿಕ ದ್ರವ್ಯಗಳ ಸಮುದಾಯಕ್ಕೆ ಸರ್ವಕರ್ಮಜ ಸಂಯೋಗ ವೆನ್ನುವರು. ಉದಾಃ- ಒಂದು ಪಾತ್ರೆಯಲ್ಲಿ ಬಹಳಷ್ಟು ಉದ್ದನ್ನು ಹಾಕಿರುವ ಸಂಯೋಗಕ್ಕೆ ಸರ್ವಕರ್ಮಜ ಸಂಯೋಗವೆನ್ನುವರು. ಇಲ್ಲಿ ಪಾತ್ರೆಯಲ್ಲಿರುವ ಉದ್ದು ಗಳ ಸಂಖ್ಯೆಯು ಎರಡಕ್ಕಿಂತ ಅಧಿಕವಿರುತ್ತದೆ.

3) ಏಕ ಕರ್ಮಜ ಸಂಯೋಗಃ—

ಕಾಗೆ ಗಿಡದ ಮೇಲೆ ಕೂಡುವದು. ಇದು ಏಕ ಕರ್ಮಜ ಸಂಯೋಗವಾಗು ವದು. ಯಾಕಂದರೆ ಇಲ್ಲಿ ಕಾರ್ಯ ಕಾಗೆಯೊಂದರಿಂದಲೇ ಆಗುವದು.

ಸಂಯೋಗದ ವಿಭಾಗವಾದ ನಂತರ ಸಂಯೋಗದ ನಷ್ಟವಾಗುವದು.

6) ವಿಭಾಗಃ—

विभागस्तु विभक्तिः स्याद्वियोगो भागशो ग्रहः । (च. सू. अ. २६)

विभागो विभक्तिः विभक्तप्रत्यय निमित्त विभजनं, प्राप्तिपूर्विका अप्राप्तिः विभागः । संयोगवत् विभागोऽपि द्वन्द्व सर्वैक कर्मजः, अनित्यश्चापि ।

ಸಂಯೋಗದ ವಿಭಜನ ಅಥವಾ ನಷ್ಟವಾಗುವದಕ್ಕೆ ವಿಭಾಗ ಅನ್ನುವರು. ವಿಭ ಜನವಾಗುವದು, ಸಂಯೋಗದ ವಿಯೋಗವಾಗುವದು ಮತ್ತು ವಿಭಜನೆಯ ಗ್ರಹಣ ವಾಗುವದಕ್ಕೆ 'ವಿಭಾಗ' ವೆಂದು ಅನ್ನುವರು. ಇದಾದರೂ ಸಂಯೋಗದಂತೆ ದ್ವಂದ್ವ ಕರ್ಮಜ, ಸರ್ವಕರ್ಮಜ ಮತ್ತು ಏಕ ಕರ್ಮಜವೆಂದು ಮೂರು ಪ್ರಕಾರದ್ದಿರುತ್ತದೆ. ಸಂಯೋಗದಿಂದ ವಿಭಾಗದ ನಾಶವಾಗುತ್ತದೆ. ಆದ್ದರಿಂದ ವಿಭಾಗವು ಅನಿತ್ಯವಿರುತ್ತದೆ.

7) ಪೃಥಕ್ತ್ವಃ—

पृथक्त्वं स्यादसंयोगो वैलक्षण्यमनेकता । (च. सू. अ. २६)

'इदं द्रव्यं पटलक्षणं, घटात् पृथक्' इत्यादिका बुद्धिर्यतो भवति, तत् पृथक्त्वं भवति । (च. द.)

इदमस्मात् पृथक् अर्थांतरमिति पृथक् प्रत्यय निमित्तं पृथक्त्वम् । (यो)

ಒಂದು ದ್ರವ್ಯವನ್ನು ಮತ್ತೊಂದು ದ್ರವ್ಯದಿಂದ ವಿಂಗಡಿಸುವ ಗುಣಕ್ಕೆ 'ಪೃಥಕ್ತ್ವ' ಅನ್ನುವರು. 'ಪಟ' ಇದು 'ಘಟ' ಈ ದ್ರವ್ಯದಿಂದ ಬೇರೆ ಇರುವದು, ಎಂದು ಮುಂತಾಗಿ ಜ್ಞಾನ ಮಾಡಿಕೊಳ್ಳುವ ಗುಣಕ್ಕೆ ಪೃಥಕ್ತ್ವವೆನ್ನುವರು. ಪೃಥಕ್ತ್ವವು

ಮೂರು ಪ್ರಕಾರದ್ದಿರುತ್ತದೆ. 1) ಅಸಂಯೋಗ ಲಕ್ಷಣ 2) ವೈಲಕ್ಷಣ್ಯ ರೂಪ 3) ಅನೇಕತಾ ರೂಪ.

1) **ಅಸಂಯೋಗ ಲಕ್ಷಣಃ—**

ಯಾವುದರ ಸಂಯೋಗವು ಎಂದೂ ಆಗುವದಿಲ್ಲವೋ ಅದು ಅಸಂಯೋಗ ಪೃಥಕ್ತ್ವವು. ಉದಾಃ– ಮೇರು ಮತ್ತು ಹಿಮಾಚಲ ಪರ್ವತಗಳ ಪೃಥಕ್ತ್ವ.

2) **ವೈಲಕ್ಷಣ್ಯ ರೂಪಃ—**

ವಿಶಿಷ್ಟ ಲಕ್ಷಣಯುಕ್ತ ವಿಜಾತೀಯ ದ್ರವ್ಯಗಳ ಪೃಥಕ್ತ್ವವು. ಉದಾಃ– ಆಕಳು, ಎಮ್ಮೆ, ಆಡು, ಕುದುರೆ ಇತ್ಯಾದಿ.

3) **ಅನೇಕತಾ ರೂಪಃ—**

ಸಜಾತೀಯ ದ್ರವ್ಯಗಳಲ್ಲಿಯೇ ಒಂದು ಮತ್ತೊಂದರಲ್ಲಿಯ ಪೃಥಕ್ತ್ವವು. ಉದಾಃ– ಅನೇಕ ಉದ್ದುಗಳು ಸಜಾತೀಯವಿದ್ದರೂ ಒಂದು ಉದ್ದಿನ ಕಾಳನ್ನು ಮತ್ತೊಂದು ಉದ್ದಿನ ಕಾಳಿನಿಂದ ವಿಂಗಡಿಸಲು ಬರುತ್ತದೆ. ಇದಕ್ಕೆ ಅನೇಕತಾ ರೂಪ ಪೃಥಕ್ತ್ವವೆನ್ನುವರು.

8) **ಪರಿಮಾಣ:—**

परिमाणं पुनर्मानं । (च. सू. अ. २६)

मानं प्रस्थाढकादि तुलामेयम् । (च. द.)

परिमिति व्यवहारकारणं परिमाणं मानं प्रस्थाढकादि । (यो)

परिमाणं भवेन्मान व्यवहारस्य कारणम् । (कारिकावली)

ಅಳತೆ ಅಥವಾ ತೂಕಕ್ಕೆ ಮಾನವೆನ್ನುವರು. ಮಾನ ವ್ಯವಹಾರದ ಹೇತು ಭೂತ ಗುಣಕ್ಕೆ 'ಪರಿಮಾಣ' ವೆನ್ನುವರು. ಉದಾಃ– ಪ್ರಸ್ಥ, ಆಢಕ, ದ್ರೋಣ, ಪಲ ಇತ್ಯಾದಿ.

9) **ಸಂಸ್ಕಾರಃ—**

संस्कारः करणं मतम् । (च. सू अ. २६)

संस्कारो हि गुणांतराधानमुच्यते । (च. वि. अ. १)

करणं गुणांतराधायक संस्करणं संस्कारः । (यो)

करणं गुणांतराधायकत्वं संस्करणमित्यर्थः । (च. द.)

ಅರೆಯುವದು, ಭಾವನಾಕೊಡುವದು, ಪಚನ ಮಾಡುವದು ಇತ್ಯಾದಿ ಅನೇಕ ಪ್ರಕಾರದ ಕ್ರಿಯೆಗಳಿಂದ ದ್ರವ್ಯದ ಸ್ವಾಭಾವಿಕ ಗುಣದಲ್ಲಿ ಪರಿವರ್ತನೆಯಾದರೆ ಅದಕ್ಕೆ 'ಸಂಸ್ಕಾರ' ವೆಂದು ಅನ್ನುವರು. ಉದಾಃ–ಪಚನ ಕ್ರಿಯಾದ್ವಾರಾ ಶಾಲಿಯು ಓದನ (ಅನ್ನ), ಲಾಜಾ, ಚರ್ವಣ ಮೊದಲಾದವುಗಳಲ್ಲಿ ಪರಿಣತವಾಗಿ ಬೇರೆ ಬೇರೆ ಗುಣ ಧರ್ಮಗಳನ್ನು ಹೊಂದುತ್ತದೆ. ಇದಕ್ಕೆ ಸಂಸ್ಕಾರವೆನ್ನುವರು.

10) ಅಭ್ಯಾಸಃ—

भवाभ्यसनमभ्यासः शीलनं सततक्रिया । (च. सू. अ. २६)

भावस्य यष्टिकादेर्व्यायामादेश्चाभ्यसनमभ्यासः । (च. द.)

भावानामभ्यसनं पुनःपुनरनुष्ठानं सातत्येन करणमभ्यासः । (यो)

ಯಾವದೊಂದು ಪದಾರ್ಥವನ್ನು ನಿರಂತರ ಸೇವಿಸುವದಕ್ಕೆ 'ಅಭ್ಯಾಸ' ವೆನ್ನುವರು. ಶೀಲನ ಮತ್ತು ಸತತ ಕ್ರಿಯಾ ಇವು ಅಭ್ಯಾಸದ ಪರ್ಯಾಯಗಳಿರುತ್ತವೆ. ಇದು ಚಿಕಿತ್ಸಾ ಶಾಸ್ತ್ರದೃಷ್ಟಿಯಿಂದ ಅತ್ಯಂತ ಮಹತ್ವದ ಗುಣವಿದೆ.

समान गुणाभ्यासो हि धातूनां वृद्धिकारणमिति । च. सू. १२)

नत्ते संतर्पणाभ्यासाच्चिरक्षीणस्तु पुष्यति । (च. सू. २३)

त्यागाद् विषमहेतूनां समानां चोपसेवनात् ।

विषमा नानुबध्नंति जायन्ते धातवः समाः ॥ (च. सू. अ. १६)

ಎಷ್ಟೇ ಗುಣಕಾರಿ ಔಷಧ ದ್ರವ್ಯಗಳಿದ್ದರೂ ಅವುಗಳ ನಿರಂತರ ಸೇವನೆಯಿಂದ ಲಾಭವು ಕಂಡು ಬರುವದು. ಅವುಗಳನ್ನು ನಿರಂತರ ಸೇವಿಸದಿದ್ದರೆ ಲಾಭವಾಗಲಾರದು. ಹಿತಕರ ಪದಾರ್ಥಗಳನ್ನು ಕೆಲವು ದಿವಸಗಳವರೆಗೆ ನಿರಂತರ ಸೇವಿಸುವದರಿಂದ ದೋಷಗಳ ವಿಷಮತೆಯು ನಷ್ಟವಾಗಿ, ದೋಷಗಳು ಸಮಸ್ಥಿತಿಯಲ್ಲಿ ಉಳಿಯುತ್ತವೆ. ದೋಷಗಳು ಸಮಸ್ಥಿತಿಯಲ್ಲಿ ಉಳಿಯುವದರಿಂದ ಶರೀರವು ಆರೋಗ್ಯದಿಂದ ಇರುತ್ತದೆ.

ಈ ಪ್ರಕಾರ ಪರಾದಿ ಹತ್ತು ಗುಣಗಳನ್ನು ಹೇಳಿದ್ದು; ಇವುಗಳ ಯೋಗ್ಯ ಜ್ಞಾನವಿಲ್ಲದೆ ಚಿಕಿತ್ಸಾಕಾರ್ಯವು ಸಫಲವಾಗಲಾರದು. ಚಿಕಿತ್ಸಕನು ಇವುಗಳನ್ನು ತಿಳಿದುಕೊಂಡು ರೋಗ ಚಿಕಿತ್ಸೆ ಮಾಡಿದರೆ ಕರ್ಮಸಿದ್ಧಿಯುಂಟಾಗುವದು.

ಗುಣ ಪ್ರಧಾನತ್ವಃ—

गुणाः प्रधाना इति केचित् । (र. वै. अ. १)

ರಸ, ವೀರ್ಯ, ವಿಪಾಕಾದಿಗಳಿಗಿಂತ ಗುಣಗಳು ಪ್ರಧಾನವಿರುವವೆಂದು ಕೆಲವರು ಹೇಳಿರುವರು.

1) ರಸಾಭಿ ಭವಾತ್ಃ—

रसानभिभूय गुणाः स्वकार्यं निर्वर्त्तयन्ति । यथा उष्णोदकं श्लेष्माणं हरति माधुर्यमभिभूय, तथा पटोलश्च महत्पञ्चमूलं च पित्तमौष्ण्याद् वातं जयति । यद् येनाभिभूयते तत्तस्मादप्रधानं दृष्टम् । यथा—भानोर्नक्षत्रमिति । (भा)

ಗುಣಗಳು ರಸಗಳನ್ನು ಕಾರ್ಯಹೀನವನ್ನಾಗಿ ಮಾಡಿ ತಮ್ಮ ಕಾರ್ಯಗಳನ್ನು ಮಾಡುತ್ತವೆ. ಉದಾಃ– ನೀರು ಸ್ವಾಭಾವಿಕವಾಗಿ ಮಧುರವುಳ್ಳದ್ದಿರುವದರಿಂದ ಕಫಕಾರಕವಿದೆ. ಆದರೆ ಬಿಸಿ ನೀರು ಕಫಹರವಿದೆ. ಬಿಸಿ ನೀರಿನ ಉಷ್ಣಗುಣದಿಂದ ಕಫಹರ

ಕಾರ್ಯವಾಗುವದು. ಅದರಂತೆ ಪಟೋಲ ಮತ್ತು ಬೃಹತ್ ಪಂಚಮೂಲಗಳು ತಿಕ್ತ ರಸಾತ್ಮಕವಿದ್ದರೂ ತಮ್ಮ ಉಷ್ಣಗುಣದಿಂದ ವಾತಶಮನ ಕಾರ್ಯವನ್ನು ಮಾಡುವವು. ಯಾವದು ಯಾವದನ್ನು ಕಾರ್ಯಹೀನಮಾಡಿ ತನ್ನ ಕಾರ್ಯವನ್ನು ಪ್ರದರ್ಶಿಸುವದೊ ಅದು ಪ್ರಧಾನವೆಂದೂ; ಮತ್ತು ಯಾವದರ ಕಾರ್ಯ ನಷ್ಟ ಮಾಡಲ್ಪಟ್ಟಿರುವದೊ ಅದು ಅಪ್ರಧಾನದೆಂದು ತಿಳಿಯಲ್ಪಡುವದು. ಉದಾಃ- ಸೂರ್ಯನು ಪ್ರಧಾನ ಮತ್ತು ನಕ್ಷತ್ರಗಳು ಅಪ್ರಧಾನ. ಆದ್ದರಿಂದ ಗುಣ ಪ್ರಧಾನವಿರುತ್ತದೆ.

2) ವಿಪಾಕ ಕಾರಣತ್ವಾತ್:—

गुणा विपाकयोः कारणं; शीत स्निग्ध गुरु पिच्छिला गुरु विपाकस्य, लघु रूक्ष विशद तीक्ष्णा लघु विपाकस्येति । ....

रसानां कार्यनिर्वृत्तिः पाकायत्ता, स च पाको गुणायत्त इति । यदपेक्षयाऽन्यस्य वृत्तिस्तस्मात् तस्य प्राधान्यं दृष्टम् । यथा वायोर्दोष धातु मलानाम् । (भा)

ದ್ರವ್ಯದ ವಿಪಾಕವು ಗುಣಗಳ ಮೇಲೆ ಅವಲಂಬಿಸಿರುತ್ತದೆ. ಶೀತ, ಸ್ನಿಗ್ಧ, ಗುರು ಮತ್ತು ಪಿಚ್ಛಿಲ ಗುಣಾತ್ಮಕ ದ್ರವ್ಯಗಳ ವಿಪಾಕವು ಗುರು ಆಗುವದು. ಲಘು, ರೂಕ್ಷ, ವಿಶದ ಮತ್ತು ತೀಕ್ಷ್ಣ ಇತ್ಯಾದಿ ಗುಣಾತ್ಮಕ ದ್ರವ್ಯಗಳ ವಿಪಾಕವು ಲಘು ಆಗುವದು. ರಸಗಳ ಕರ್ಮವು ವಿಪಾಕದ ಮೇಲೆ ಮತ್ತು ವಿಪಾಕವು ಗುಣದ ಮೇಲೆ ಅವಲಂಬಿಸಿರುವದರಿಂದ ಗುಣವು ಶ್ರೇಷ್ಠವಿರುವದು. ಕಾರಣ ಪ್ರಧಾನವಿದ್ದು; ಕಾರ್ಯವು ಅಪ್ರಧಾನವಿರುವದು. ಹೇಗೆಂದರೆ ಶರೀರದ ದೋಷ, ಧಾತು ಮತ್ತು ಮಲ ಗಳ ಕಾರ್ಯವು ವಾತದ ಆಧೀನವಿರುವದರಿಂದ ವಾತವು ಪ್ರಧಾನವಿರುವದು.

3) ಸಂಖ್ಯಾ ಬಾಹುಲ್ಯಾತ್:—

रसेभ्यो बहवो गुणाः दृष्टाः रसाः षट्, गुणा दशेति, अल्पेभ्यो बहवो विशिष्टा इति लोक प्रसिद्धमेककर्मणि । (भा)

ಸಂಖ್ಯೆಯ ದೃಷ್ಟಿಯಿಂದ ನೋಡಲಾಗಿ ಗುಣಗಳು ರಸಾದಿಗಳಿಗಿಂತ ಅಧಿಕವಿರುವದರಿಂದ ಶ್ರೇಷ್ಠವಿರುವವು. ಬಹು ಸಂಖ್ಯಾ ಪ್ರಧಾನ ಮತ್ತು ಅಲ್ಪ ಸಂಖ್ಯಾ ಅಪ್ರಧಾನ.

4) ಕರ್ಮ ಬಾಹುಲ್ಯಾತ್:—

अनेक कर्मत्वात् । रसादिसहितास्तेषां तेषां तत्तत्कर्मणि साहचर्यकरणादनेककर्माण इति । (भा)

ಗುಣಗಳು ರಸಾದಿಗಳಿಗಿಂತ ಹೆಚ್ಚು ಕರ್ಮಗಳನ್ನು ಮಾಡುವದರಿಂದ ಶ್ರೇಷ್ಠವಿರುತ್ತವೆ. ಗುಣಗಳು ರಸಾದಿಗಳ ಸಂಗಡ ಇದ್ದುಕೊಂಡು; ರಸಾದಿಗಳ ಕೆಲಸಗಳಲ್ಲಿ ಇವು ಸಹಾಯ ಮಾಡುವದರಿಂದ, ಗುಣಗಳ ಅನೇಕ ವಿಧ ಕರ್ಮಗಳು ದೃಷ್ಟಿಗೋಚರ ವಾಗುತ್ತವೆ.

5) ಪ್ರಯೋಗ ಬಾಹುಲ್ಯಾತ್ಃ—

किं च बहुधाऽभ्यंग परिषेकावगाहरूपेण शीतादय उपयुज्यन्ते, रसास्तु मुखत एवेति गुणाः प्रधानाः । (भा)

ಶೀತ, ಉಷ್ಣ, ಸ್ನಿಗ್ಧ ಮೊದಲಾದ ಗುಣಗಳು ಅಭ್ಯಂಗ, ಪರಿಷೇಕ, ಅವಗಾಹ ಮೊದಲಾದ ಅನೇಕ ರೂಪಗಳಲ್ಲಿ ಉಪಯೋಗವಾಗುತ್ತವೆ. ಆದರೆ ಮಧುರಾದಿ ರಸಗಳು ಕೇವಲ ಬಾಯಿಯ ಮುಖಾಂತರವೇ ಉಪಯೋಗವಾಗುತ್ತವೆ. ಆದ್ದರಿಂದ ಅನೇಕ ಪ್ರಕಾರದ ಪ್ರಯೋಗಗಳಿಂದ ಉಪಯುಕ್ತವಿರುವ ಗುಣಗಳು ರಸಾದಿಗಳಿಗಿಂತ ಶ್ರೇಷ್ಠವಿರುತ್ತವೆ.

6) ವಿಷಯ ಬಾಹುಲ್ಯಾತ್ಃ—

ಗುಣಗಳ ವಿಷಯ (ಆಧಾರ ಭೂತ ದ್ರವ್ಯಗಳು) ಗಳು ಅನೇಕವಿರುವದರಿಂದ ಗುಣ ಪ್ರಧಾನವಿರುತ್ತವೆ. ಉದಾಃ— ಉಳಿದ ಇಂದ್ರಿಯಗಳಿಗಿಂತ ಮನಸ್ಸಿನ ವಿಷಯಗಳು ಅಧಿಕವಿರುವದರಿಂದ ಮನಸ್ಸು ಪ್ರಧಾನವಿರುತ್ತದೆ.

7) ರಸಾನುಗ್ರಹಾತ್:—

गुणानुगृहीतानां रसानां प्राधान्यात् । गुणैः शीतादिभिरनुगृहीता ये रसास्तेषां प्राधान्यदर्शनाद् रसेभ्यो गुणाः प्रधाना इति विद्धः । कथं " शैत्यात् स्नेहान्मार्दवाच्च पैच्छिल्यादविभागतः । मधुराणां घृतं श्रेष्ठं विपाके लाघवेन च । अविदाहान्मृदुत्वाच्च कषाय मधुरान्वयात् । अम्लेष्वामलकं श्रेष्ठं विपाके लाघवेन च । नात्युष्णत्वान्मृदुत्वाच्च स्नेहेनानुगमादपि । लवणानां स्मृतं श्रेष्ठमविदाहाच्च सैन्धवम् । मृदुत्वाच्च गुरुत्वाच्च वात पित्त प्रकोपणात् । कटुकानां स्मृताः श्रेष्ठाः पिप्पल्यो गुण संपदा । वृष्यत्वाच्च गुरुत्वाच्च मारुतस्याप्रकोपणात् । तिक्तानां तु स्मृतं श्रेष्ठं पैच्छिल्येन च कूलकम् । वृष्यत्वाद्बृंहणत्वाच्च हिक्कायां वातनिग्रहात् । कषायाणां स्मृतं श्रेष्ठं विविधैश्च गुणैर्मधु ॥ " (भा)

ಗುಣದಿಂದ ಅನುಗ್ರಹಿತವಾದ ರಸಗಳ ಕೆಲಸದಲ್ಲಿ ಉತ್ಕರ್ಷತೆಯುಂಟಾಗುತ್ತದೆ. ಆದ್ದರಿಂದ ಗುಣವು ಪ್ರಧಾನವಿರುತ್ತದೆ. ಉದಾಃ— ಮಧುರ ರಸ ದ್ರವ್ಯಗಳಲ್ಲಿ ತುಪ್ಪವು ಶ್ರೇಷ್ಠವಿರುತ್ತದೆ. ಯಾಕಂದರೆ ಅದು ಶೀತ, ಸ್ನಿಗ್ಧ, ಮೃದು ಮತ್ತು ಪಿಚ್ಛಿಲ ಗುಣಯುಕ್ತವಿರುವದು. ಹಾಗೂ ಲಘು ವಿಪಾಕಿ ಇರುವದು. ಅಮ್ಲರಸ ದ್ರವ್ಯಗಳಲ್ಲಿ ಆಮಲಕಿಯು (ನೆಲ್ಲಿಕಾಯಿ) ಶ್ರೇಷ್ಠವಿರುತ್ತದೆ. ಯಾಕಂದರೆ ಅದು ಮೃದು ಮತ್ತು ಶೀತ ಗುಣಯುಕ್ತವಿದ್ದು; ಲಘು ವಿಪಾಕಿ ಇರುವದು. ಲವಣ ರಸ ದ್ರವ್ಯಗಳಲ್ಲಿ ಸೈಂಧವ ಲವಣವು ಶ್ರೇಷ್ಠವಿರುತ್ತದೆ. ಸೈಂಧವವು ಮೃದು ಮತ್ತು ಸ್ನಿಗ್ಧವಿದ್ದು ಅತಿ ಉಷ್ಣವಿರುವದಿಲ್ಲ. ಪಿಪ್ಪಲಿಯು ಮೃದು ಮತ್ತು ಗುರು ಗುಣಗಳಿರುವದರಿಂದ ಕಟು ರಸ ದ್ರವ್ಯಗಳಲ್ಲಿ ಶ್ರೇಷ್ಠವಿರುತ್ತದೆ. ತಿಕ್ತ ರಸ ದ್ರವ್ಯಗಳಲ್ಲಿ ವೃಷ್ಯ, ಪಿಚ್ಛಿಲ ಮತ್ತು ಗುರು ಗುಣ

ಯುಕ್ತ ಪಟೋಲವು ಶ್ರೇಷ್ಠವಿರುತ್ತದೆ. ಇದೇ ಪ್ರಕಾರ ಜೇನುತುಪ್ಪವು ತನ್ನಲ್ಲಿಯ ಅನೇಕ ಗುಣಗಳಿಂದ ಮತ್ತು ವೃಷ್ಯ, ಬೃಂಹಣ ಕಾರ್ಯಗಳನ್ನು ಮಾಡುವದರಿಂದ ಕಷಾಯ ರಸ ದ್ರವ್ಯಗಳಲ್ಲಿ ಶ್ರೇಷ್ಠವೆಂದು ಹೇಳಿರುವರು. ಅನುಗ್ರಹ ಮಾಡುವದು ಪ್ರಧಾನ ಹಾಗೂ ಅನುಗ್ರಹೀತವಾದದ್ದು ಅಪ್ರಧಾನವಿರುವದರಿಂದ ಗುಣವು ಶ್ರೇಷ್ಠವಿದೆ.

8) ಉಪದೇಶಾತ್ಃ—

'तेषां गुरूष्णस्निग्धा वातघ्ना:' इत्यादिरुपदेश: ।

ಆಯುರ್ವೇದ ಶಾಸ್ತ್ರದಲ್ಲಿ ಗುಣಗಳನ್ನು ಪ್ರಧಾನ ರೂಪದಿಂದ ನಿರ್ದೇಶನ ಮಾಡಿರುವರು. ಉದಾ:– ಗುರು, ಉಷ್ಣ ಮತ್ತು ಸ್ನಿಗ್ಧ ಗುಣಗಳು ವಾತಹರವಿರುತ್ತವೆ ಎಂದು ಹೇಳಿರುವರು. ಆದ್ದರಿಂದ ಆಪ್ತೋಪದೇಶದಿಂದ ಗುಣವು ಪ್ರಧಾನವಿರುತ್ತದೆ.


9) ಅಪದೇಶಾತ್ಃ—

तीक्ष्णोऽयं पुरुष:, मृदुरयं गीत इति । (भा)

ದ್ರವ್ಯದ ಪರಿಚಯವನ್ನು ಗುಣಗಳಿಂದಲೇ ಮಾಡಿಕೊಡುವರು. ಉದಾಃ– ಈ ಪುರುಷನು ತೀಕ್ಷ್ಣನಿರುವನು. ಈ ಗೀತೆಯು (ಹಾಡು) ಮೃದುವಿರುತ್ತದೆ ಇತ್ಯಾದಿ ಗುಣಗಳಿಂದಲೇ ಮನುಷ್ಯನು ಪೂಜ್ಯನೀಯನಾಗುವನು. ಆದ್ದರಿಂದ ಗುಣವು ಪ್ರಧಾನವಿದೆ.

10) ಅನುಮಾನಾತ್:—

ಕಾರಣದಿಂದ ಕಾರ್ಯದ ಅನುಮಾನವಾಗುತ್ತದೆ. ಶೀತ, ಉಷ್ಣ ಮೊದಲಾದ ಗುಣಗಳಿಂದ ಪಿತ್ತಘ್ನ, ವಾತಘ್ನ ಮೊದಲಾದ ಕರ್ಮಗಳನ್ನು ಅನುಮಾನದಿಂದ ತಿಳಿದು ಕೊಳ್ಳಲಿಕ್ಕೆ ಆಗುತ್ತದೆ. ಈ ಪ್ರಕಾರ ಅನುಮಾನವು ವ್ಯವಹಾರಕ್ಕೆ ಆಧಾರವಾಗಿರುವದರಿಂದ ಗುಣವು ಪ್ರಧಾನವಿರುತ್ತದೆ.



ಪ್ರಕರಣ ೩

ರಸ ವಿಜ್ಞಾನ

ರಸ:—

ರಸವೆಂದರೆ ಅನೇಕ ಅರ್ಥಗಳಾಗುತ್ತವೆ. ಆಯುರ್ವೇದ ಶಾಸ್ತ್ರಕ್ಕನುಸರಿಸಿ ರಸದ ಅರ್ಥವನ್ನು ಮುಖ್ಯವಾಗಿ ನಾಲ್ಕು ವಿಧದಿಂದ ಮಾಡಲು ಬರುತ್ತದೆ. 1) ದೋಷ, ಧಾತು, ಮಲ ವಿಜ್ಞಾನದ ದೃಷ್ಟಿಯಿಂದ ರಸದ ಅರ್ಥವು 'ರಸ ಧಾತು' ವೆಂದು ಆಗುತ್ತದೆ. 2) ರಸ ಶಾಸ್ತ್ರದ ದೃಷ್ಟಿಯಿಂದ ರಸದ ಅರ್ಥವು 'ಪಾರದ' ವೆಂದು ಆಗುವದು. 3) ಔಷಧಿ ಕಲ್ಪದ ದೃಷ್ಟಿಯಿಂದ ವಿಚಾರ ಮಾಡಿದರೆ ರಸದ ಅರ್ಥವು 'ಸ್ವರಸ' ವೆಂದು ಆಗುವದು. 4) ದ್ರವ್ಯಗುಣ ಶಾಸ್ತ್ರದ ದೃಷ್ಟಿಯಿಂದ ವಿಚಾರ ಮಾಡಿದಾಗ ರಸದ ಅರ್ಥವು ರಸನೇಂದ್ರಿಯದಿಂದ ಗ್ರಹಣವಾಗುವ ಮಧುರಾದಿ ಷಡ್ರಸಗಳ ಬೋಧವಾಗುತ್ತದೆ. ಇಲ್ಲಿ ರಸನೇಂದ್ರಿಯದಿಂದ ಗ್ರಹಣವಾಗುವ ಮಧುರಾದಿ ಷಡ್ರಸಗಳ ವಿವೇಚನೆಯನ್ನು ಮಾಡುವಾ.

ಲಕ್ಷಣ:—

रसनार्थो रसस्तस्य द्रव्यमापः क्षितिस्तथा ।
निर्वृत्तौ च विशेषे च प्रत्ययाः खादयस्त्रयः ॥ (च. सू. अ. १)
रस्यते आस्वाद्यते इति रसः । (च. द.)
रसनेन्द्रियग्राह्यो योऽर्थः स रसः । (शि.)

ರಸನೇಂದ್ರಿಯದಿಂದ ಯಾವ ಒಂದು ಜ್ಞಾನವಾಗುವದೊ ಅದಕ್ಕೆ 'ರಸ' ಅನ್ನುವರು. ರಸದ ಜ್ಞಾನವಾಗಬೇಕಾದರೆ ಬೋಧಕ ಕಫದ ಅವಶ್ಯಕತೆ ಇರುವದು. ಅದರಂತೆ ಮನಸ್ಸು ಸ್ವಸ್ಥ ಇರುವದು; ರಸನೇಂದ್ರಿಯ ಸ್ವಸ್ಥವಿರುವದು; ಬೋಧಕ ಕಫ ಕಾರ್ಯಕಾರಿ ಇರುವದು ಮತ್ತು ದ್ರವ್ಯಗಳನ್ನು ಯೋಗ್ಯ ಪ್ರಮಾಣದಲ್ಲಿ ತೆಗೆದುಕೊಳ್ಳುವದು ಇತ್ಯಾದಿಗಳು ಸರಿಯಾಗಿ ಇದ್ದರೆ ರಸದ ಜ್ಞಾನವಾಗುವದು. ಒಂದು ವೇಳೆ ಮನಸ್ಸು ಅನ್ಯ ವಿಷಯದಲ್ಲಿ ಪ್ರವೃತ್ತವಾಗಿದ್ದರೆ, ರಸನೇಂದ್ರಿಯ ವಿಕೃತಗೊಂಡಿದ್ದರೆ ಮತ್ತು ಬೋಧಕ ಕಫ ಕಾರ್ಯಕಾರಿ ಇರದಿದ್ದರೆ ದ್ರವ್ಯಗಳ ರಸ ಜ್ಞಾನವಾಗುವದಿಲ್ಲ. ಯಾವುದೇ ದ್ರವ್ಯವು ಶರೀರದಲ್ಲಿ ಕಾರ್ಯ ಮಾಡುವ ಮೊದಲು ಶರೀರಸದೃಶವಾಗಬೇಕಾಗುವದು. ಪಂಚಭೌತಿಕ ದ್ರವ್ಯದ ಸಂಪರ್ಕವು ಜಿಹ್ವೇಂದ್ರಿಯಕ್ಕೆ ಆದ ಕೂಡಲೇ ಅದರಿಂದ ಒಂದು ಪ್ರಕಾರದ ವಿಶಿಷ್ಟ ಜ್ಞಾನ ಅಥವಾ ಪ್ರತಿಕ್ರಿಯಾ ಶರೀರದಲ್ಲುಂಟಾಗುವದು. ಪಂಚಮಹಾಭೂತಗಳ ಪರಿಣಾಮ ನಾಲಿಗೆಯ ಮೇಲೆ ಆಗುವದು. ಮತ್ತು ದ್ರವ್ಯಗಳ ರಸಜ್ಞಾನವಾಗುವದು. ಆದ್ದರಿಂದ 'ರಸನಾಗ್ರಾಹ್ಯೋ ರಸಃ' ಎಂದು ಅಂದಿರುವರು. ಪಂಚಮಹಾಭೂತದ ಸಮುದಾಯದಿಂದ ದ್ರವ್ಯದಲ್ಲಿ ರಸ ತಯಾರಾಗುವದು. ಮತ್ತು ಜಿಹ್ವೇಂದ್ರಿಯದ ಮುಖಾಂತರ ಅದರ ಜ್ಞಾನವಾಗುವದು.

ರಸ ಜಲ ಮಹಾಭೂತ ಪ್ರಧಾನವಿರುವದು. ಜಲ ಮತ್ತು ಪೃಥ್ವಿ ಇವೆರಡು ಮಹಾಭೂತಗಳು ರಸದ ಆಧಾರರೂಪ ಇರುವವು.

ರಸ ಸಂಖ್ಯಾ ಮತ್ತು ಪಂಚಭೌತಿಕ ಆಧಾರ:—

रसाः स्वाद्वम्ल लवण तिक्तोषण कषायकाः ।
षड् द्रव्यमाश्रितास्ते च यथा पूर्वं बलावहाः ॥ (अ. हृ. सू. अ. १)

रसास्तावत् षट् मधुराम्ल लवण कटु तिक्त कषायाः (च. वि. अ. १)

स्वादुरम्लोऽथ लवणः कटुकस्तिक्त एव च ।
कषायश्चेति षट्कोऽयं रसानां संग्रहः स्मृतः ॥ (च. सू अ. १)

ರಸಗಳು ಒಟ್ಟು ಆರು ಇರುವವು. ಮಧುರರಸ, ಅಮ್ಲರಸ, ಲವಣರಸ, ಕಟುರಸ, ತಿಕ್ತರಸ ಮತ್ತು ಕಷಾಯರಸ. ಈ ಆರು ರಸಗಳನ್ನು ಬಿಟ್ಟು ಏಳನೆಯ ರಸವಿರುವದಿಲ್ಲ. ಮತ್ತು ಆರಕ್ಕೆ ಕಡಿಮೆ ರಸಗಳಿಲ್ಲ. ಇವುಗಳಲ್ಲಿ ಮಧುರ ರಸ ಶ್ರೇಷ್ಠವಿರುವದು. ಮತ್ತು ಕಡೆಯ ಕಷಾಯ ರಸವು ಎಲ್ಲ ರಸಗಳಿಗಿಂತ ಕಡಿಮೆ ಬಲವುಳ್ಳದ್ದಿರುವದು. ಮಧುರ ರಸವು ಜನ್ಮ ಸಾತ್ಮ್ಯವಿರುವದು. ಮತ್ತು ಅದು ರಸ, ರಕ್ತ, ಮಾಂಸ, ಮೇದ, ಅಸ್ಥಿ, ಮಜ್ಜಾ ಮತ್ತು ಶುಕ್ರ ಈ ಸಪ್ತಧಾತುಗಳ ಪೋಷಣೆ ಮಾಡುವದು, ಆಯುಷ್ಯವರ್ಧನ ಮಾಡುವದು. ಆದ್ದರಿಂದ ಮಧುರ ರಸವು ಸರ್ವಶ್ರೇಷ್ಠವಿರುವದು.

ಷಟ್ ರಸಗಳ ದ್ರವ್ಯಗಳು:—

ಮಧುರ ರಸ ವರ್ಗ:—

जीवकर्षभकौ जीवन्ती वीरा तामलकी काकोली क्षीरकाकोली भीरु मुद्गपर्णी माषपर्णी शालपर्णी पृश्निपर्ण्यसनपर्णी मेदा महामेदा कर्कटशृङ्गी शृङ्गाटिका छिन्नरुहा छत्राऽतिछत्रा श्रावणी महाश्रावणी अलंबुषा सहदेवा विश्वदेवा शुक्ला क्षीरशुक्ला बलातिबला विदारी क्षीरविदारी क्षुद्रसहा महासहा ऋष्यगन्धाऽश्वगन्धा पयस्या वृश्चीरः पुनर्नवा बृहती कण्टकारिकैरंड मोरटः श्वदंष्ट्रा संहर्षा शतावरी शतपुष्पा मधूकपुष्पी यष्टीमधु मधूलिका मृद्वीका खर्जूरं परूषकमात्मगुप्ता पुष्करबीजं कशेरुकं राजकशेरुकं राजादनं कतकं काश्मर्यं शीतपाक्योदनपाकी ताल खर्जूर मस्तकेक्षिक्षुवालिका दर्भः कुशः काशः शालिर्गुन्द्रेत्कटकः शरमूलं राजक्षवकः ऋष्यप्रोक्ता द्वारदा भारद्वाजी वनत्रपुष्यभीरुपत्री हंसपादी काकनाशा कुलिङ्गाक्षी क्षीरवल्ली कपोलवल्ली कपोतवल्ली सोमवल्ली गोपवल्ली मधुवल्ली चेति मधुरस्कन्धः । (च. वि. अ. ८)

ಜೀವಕ, ಋಷಭಕ, ಜೀವಂತಿ, ವೀರಾ, ತಾಮಲಕಿ, ಕಾಕೋಲಿ, ಕ್ಷೀರಕಾಕೋಲಿ, ಮುದ್ಗಪರ್ಣಿ, ಭೀರು, ಮಾಷಪರ್ಣಿ, ಶಾಲಪರ್ಣಿ, ಪೃಶ್ನಿಪರ್ಣಿ, ಅಸನ

ಪರ್ಣಿ, ಮಧುಪರ್ಣಿ, ಮೇದಾ, ಮಹಾಮೇದಾ, ಕರ್ಕಟಶೃಂಗಿ, ಶೃಂಗಾಟಕಾ, ಗುಡೂಚಿ, ಛತ್ರಾ (ತಾಲಿಮಖಾನ), ಅತಿಛತ್ರಾ (ರಕ್ತ ತಾಲಿಮಖಾನ), ಶ್ರಾವಣಿ (ಗೋರಖ ಮುಂಡಿ), ಮಹಾ ಶ್ರಾವಣಿ, ಅಲಂಬುಷಾ, ಸಹದೇವಿ, ವಿಶ್ವದೇವಾ, ಶುಕ್ಲಾ, ಕ್ಷೀರಶುಕ್ಲಾ, ಬಲಾ, ಅತಿಬಲಾ, ವಿದಾರಿ, ಕ್ಷೀರವಿದಾರಿ, ಕ್ಷುದ್ರಸಹಾ, ಮಹಾಸಹಾ, ಋಷ್ಯಂಗಧಾ, ಅಶ್ವಗಂಧಾ, ವೃಶ್ಚೀರ (ಬಿಳಿಗಣಜಲಿ ಬೇರು), ಪುನರ್ನವಾ, ಬೃಹತಿ, ಕಂಟಕಾರಿ, ಉರುಬೂಕ, ಮೂರ್ವಾ, ಗೋಕ್ಷುರ, ಸಂಹರ್ಷಾ, ಶತಾವರಿ, ಶತಪುಷ್ಪಾ, ಮಧೂಕಪುಷ್ಪಿ, ಜೇಷ್ಟಮಧು, ಮಧೂಲಿಕಾ, ದ್ರಾಕ್ಷೆ, ಖರ್ಜೂರ, ಪರೂಷಕ, ಆತ್ಮಗುಪ್ತಾ, ಪುಷ್ಕರಬೀಜ, ಕಶೇರುಕ, ರಾಜಕಶೇರುಕ, ರಾಜಾದನ, ಕತಕ, ಕಾಶ್ಮರ್ಯ, ಶೀತಪಾಕಿ (ಗುಂಜಾ), ಓದನಪಾಕಿ, ತಾಲ ಮತ್ತು ಖರ್ಜೂರ ಮಸ್ತಕ, ಇಕ್ಷು, ಇಕ್ಷುವಾಲಿಕಾ, ದರ್ಭ, ಕುಶ, ಕಾಶ, ಶಾಲಿ, ಗುಂದ್ರಾ, ಇತ್ಕಟಕ, ಶರಮೂಲ, ರಾಜಕ್ಷವಕ, ಋಷ್ಯಪ್ರೋಕ್ತಾ, ದ್ವಾರದಾ, ಭಾರದ್ವಾಜಿ, ವನತ್ರಪುಷ್ಯ, ಭೀರುಪತ್ರಿ, ಹಂಸಪಾದಿ, ಕಾಕನಾಸಾ, ಕುತಂಗಾಕ್ಷಿ, ಕ್ಷೀರವಲ್ಲಿ, ಕಪೋಲವಲ್ಲಿ, ಕಪೋತವಲ್ಲಿ, ಸೋಮವಲ್ಲಿ, ಗೋಪವಲ್ಲಿ ಮತ್ತು ಮಧುವಲ್ಲಿ ಇವೆಲ್ಲವೂ ಮಧುರ ಸ್ಕಂಧದಲ್ಲಿಯ ದ್ರವ್ಯಗಳಿರುತ್ತವೆ.

ಅಮ್ಲ ರಸ ವರ್ಗ:—

आम्राम्रातक लकुच करमर्द वृक्षाम्ल अम्लवेतस कुवलबदर दाडिम मातुलुङ्ग गण्डीर आमलक नन्दीतक शीतक तिन्तिडीक दन्तशठ ऐरावतक कोषाम्र धन्वनानां फलानि, पत्राणि च आम्रातक अश्मन्तक चाङ्गेरीणां चतुर्विधानां चाम्लिकानां द्वयोश्च कोलयोश्चाम शुष्कयोर्द्वयोश्चैव शुष्काम्लिकयोर्ग्राम्यारण्ययोः, आसव द्रव्याणि च सुरा सौवीरतुषोदक मैरेयमेदक मदिरा मधुसीधुशुक्तदधि दधिमण्ड उदश्विद्धान्याम्लादीनि च इति अम्लस्कन्धः। (च. वि. अ. ८)

ಅಮ್ರ, ಆಮ್ರಾತಕ, ಲಕುಚ, ಕರಮರ್ದ, ವೃಕ್ಷಾಮ್ಲ, ಅಮ್ಲವೇತಸ, ಕುವಲ, ಬದರ, ದಾಡಿಮ, ಮಾತುಲುಂಗ, ಗಂಡೀರ, ಆಮಲಕಿ, ನಂದೀತಕ, ಶೀತಕ, ತಿಂತಿಡಿಕ, ದಂತಶಠ, ಐರಾವತ, ಕೋಶಾಮ್ರ, ಧನ್ವನ ಇವುಗಳ ಫಲಗಳು, ಆಮ್ರಾತಕ, ಅಶ್ಮಂತಕ, ಚಾಂಗೇರಿ ಇವುಗಳ ಎಲೆಗಳು; ನಾಲ್ಕು ಪ್ರಕಾರದ ಹುಣಸೆಯ (ಅಮ್ಲಿಕಾ) ಎಲೆಗಳು ಆಮ ಇಲ್ಲವೆ ಶುಷ್ಕವಿರುವ ಎರಡು ಪ್ರಕಾರದ ಬೋರೆಯ ಎಲೆಗಳು, ಗ್ರಾಮ್ಯ ಮತ್ತು ಅರಣ್ಯ ಎರಡೂ ಪ್ರಕಾರದ ಒಣ ಹುಣಿಸೆಯ ಎಲೆಗಳು, ಆಸವದ್ರವ್ಯ ಮತ್ತು ಸುರಾ, ಸೌವೀರ, ತುಷೋದಕ, ಮೈರೇಯ, ಮೇದಕ, ಮದಿರಾ, ಮಧು (ಮದ್ಯಭೇದ), ಸೀಧು, ಶುಕ್ತ, ಮೊಸರು, ಮೊಸರಿನ ಮೇಲಿನ ತಿಳಿನೀರು. ಉದಶ್ವಿ, ಧಾನ್ಯಾಮ್ಲ ಮೊದಲಾದವು ಅಮ್ಲಸ್ಕಂಧ ದ್ರವ್ಯಗಳು.

ಲವಣ ವರ್ಗ:—

ಸೈನ್ಧವ ಸೌವರ್ಚಲ ಕಾಲ ವಿಡ ಪಾಕ್ಯಾನೂಪ ಕೂಪ್ಯ ವಾಲುಕ ಎಲ ಮೌಲಕ ಸಾಮುದ್ರ ರೋಮ-ಕೌದ್ಭಿದೌಷರಪಾಟೇಯಕ ಪಾಂಶುಜಾನ್ಯೇವಂ ಪ್ರಕಾರಾಣಿ ಚಾನ್ಯಾನಿ ಲವಣ ವರ್ಗಪರಿಸಂಖ್ಯಾತಾನಿ ಇತಿ ಲವಣಸ್ಕನ್ಧಃ । (ಚ. ವಿ. ಅ. ೮)

सैन्धव सौवर्चल काल विड पाक्यानूप कूप्य वालुक एल मौलक सामुद्र रोम-कौद्भिदौषरपाटेयक पांशुजान्येवं प्रकाराणि चान्यानि लवण वर्गपरिसंख्यातानि इति लवणस्कन्धः । (च. वि. अ. ८)

ಸೈಂಧವ ಲವಣ, ಸೌವರ್ಚಲ ಲವಣ, ಕಾಲ ಲವಣ, ವಿಡ ಲವಣ, ಪಾಕ್ಯ, ಅನೂಪ, ಕೂಪ್ಯ, ವಾಲುಕ, ಏಲ, ಮೌಲಕ, ಸಾಮುದ್ರ, ರೋಮಕ, ಉದ್ಭಿದ, ಲವಣ, ಔಷರ, ಪಾಟೇಯಕ ಲವಣ, ಪಾಂಶುಜ ಇವೆಲ್ಲ ಲವಣಗಳನ್ನು ಮತ್ತು ಈ ಪ್ರಕಾರದ ಬೇರೆ ದ್ರವ್ಯಗಳು ಕೂಡ ಲವಣ ವರ್ಗದಲ್ಲಿ ಸಮಾವೇಶವಾಗುತ್ತವೆ.

ಕಟು ವರ್ಗಃ—

पिप्पली पिप्पलीमूल हस्तिपिप्पली चव्य चित्रक शृङ्गवेर मरिच अजमोदा आर्द्रक विडङ्ग कुस्तुम्बरु पीलु तेजोवती एला कुष्ठ भल्लातकास्थि हिंगुनिर्यास किलिम मूलक सर्षप लशुन करञ्ज शिग्रुक मधुशिग्रुक खरपुष्पा भूस्तृण सुमुख सुरस कुठेरक आर्जक गण्डीरक आलमालक पर्णास क्षवक फणिज्जक क्षार मूत्र पित्तानीति कटुक-स्कन्धः । (च. वि. अ. ८)

ಪಿಪ್ಪಲಿ, ಪಿಪ್ಪಲಿಯಮೂಲ, ಗಜ ಪಿಪ್ಪಲಿ, ಚವ್ಯ, ಚಿತ್ರಕ, ಶೃಂಗವೇರ, ಮರಿಚ, ಅಜಮೋದಾ, ಆರ್ದ್ರಕ, ವಿಡಂಗ, ಕುಸ್ತುಂಬರು, ಪೀಲು, ತೇಜೋವತಿ, ಯಾಲಕ್ಕಿ, ಕುಷ್ಠ, ಭಲ್ಲಾತಕಾಸ್ಥಿ, ಹಿಂಗು ನಿರ್ಯಾಸ, ಕಿಲಿಮ, ಮೂಲಂಗಿ, ಸಾಸಿವೆ, ಬಳ್ಳೊಳ್ಳಿ, ಹುಲಗಲ, ನುಗ್ಗೆ, ಮಧುಶಿಗ್ರು, ಖರಪುಷ್ಪ, ಭೂತೃಣ, ಸುಮುಖ, ಸುರಸ, ಕುಠೇರಕ, ಆರ್ಜಕ, ಗಂಡೀರಕ, ಆಲಮೂಲಕ, ಪರ್ಣಾಸ, ಕ್ಷವಕ, ಫಣಿಜ್ಜಕ, ಕ್ಷಾರ, ಮೂತ್ರ, ಪಿತ್ತ ಮೊದಲಾದವುಗಳು ಕಟು ವರ್ಗದಲ್ಲಿಯ ದ್ರವ್ಯಗಳು.

ತಿಕ್ತ ವರ್ಗಃ—

चंदन नलद कृतमाल नक्तमाल निम्ब तुम्बुरु कुटज हरिद्रा दारुहरिद्रा मुस्त मूर्वा किराततिक्तक कटुकरोहिणी त्रायमाणा कारवेल्लिका करीर करवीर केबुक कठिल्लक वृष मण्डूकपर्णी कर्कोटक वार्ताक कर्कश काकमाची काकोदुम्बरिका सुषवी अतिविषा पटोल कुलक पाठा गुडूची वेत्राग्र वेतस विकङ्कत वकुल सोमवल्क सप्तपर्ण सुमन अर्क अवल्गुज वचा तगर अगरु वालक उशीराणीति तिक्तस्कन्धः (च. वि. अ. ८)

ಚಂದನ, ನಲದ, ಕೃತಮೂಲ, ನಕ್ತಮೂಲ, ನಿಂಬ (ಬೇವು), ತುಂಬುರು, ಕುಟಜ, ಹರಿದ್ರಾ (ಅರಿಷಿಣ), ದಾರುಹರಿದ್ರಾ (ಮರದರಿಷಿಣ), ಮುಸ್ತ (ಜೇಕಿನ ಗಡ್ಡೆ), ಮೂರ್ವಾ, ಕಿರಾತತಿಕ್ತ, ಕಟುಕರೋಹಿಣಿ, ತ್ರಾಯಮಾಣ, ಕಾರವೆಲ್ಲಿ, ಕರೀರ,

ಕರವೀರ (ಕಣಗಿಲ), ಕೇಬುಕ, ಕರಿಲ್ಲಕ, ವೃಷ (ಅಡಸಲ), ಮಂಡೂಕಪರ್ಣಿ, ಕರ್ಕೋಟಕ, ವಾರ್ತಾಕ (ಬದನೆಯ ಕಾಯಿ), ಕರ್ಕಶ, ಕಾಕಮಾಚಿ, ಕಾಕೋದುಂಬರಿಕಾ, ಸುಷವಿ, ಅತಿವಿಷಾ, ಪಟೋಲ, ಕುಲಕ, ಪಾಠಾ, ಗುಡೂಚಿ, ವೇತ್ರಾಗ್ರ, ವೇತಸ, ವಿಕಂಕತ, ಬಕುಲ, ಸೋಮವಲ್ಕ (ಶ್ವೇತಖದಿರ), ಸಪ್ತಪರ್ಣ, ಸುಮನ, ಅರ್ಕ, ಅವಲ್ಗುಜ, ವಚಾ, ತಗರ, ಅಗರು, ವಾಲಕ, ಉಶೀರ ಮೊದಲಾದವುಗಳು ತಿಕ್ತವರ್ಗದಲ್ಲಿಯ ದ್ರವ್ಯಗಳು.

ಕಷಾಯ ವರ್ಗಃ—

प्रियङ्गु अनन्ता आम्रास्थि अम्बष्ठकी कट्वङ्ग लोध्र मोचरस समंगा धातकीपुष्प पद्मा पद्मकेशर जम्बु आम्र प्लक्ष वट कपीतन उदुम्बर अश्वत्थ भल्लातकास्थि अश्मन्तक शिरीष शिंशपा सोमवल्क तिन्दुक प्रियाल बदर खदिर सप्तपर्ण अश्वकर्ण स्यन्दन अर्जुन असन अरिमेद एलवालुक परिपेलव कदम्ब शल्लकी जिङ्गिनी काश कशेरुक राजकशेरुक कट्फल वंश पद्मक अशोक शाल धव सर्ज भूर्ज शण खरपुष्पा पुर शमी माचीक वरक तुङ्ग अजकर्ण अश्वकर्ण स्फूर्जक विभीतक कुम्भीक पुष्करबीज बिस मृणाल ताल खर्जूर तरुणानीति कषायस्कन्धः। (च. वि. अ. ८)

ಪ್ರಿಯಂಗು, ಅನಂತಮೂಲ, ಆಮ್ರಾಸ್ಥಿ, ಅಂಬಷ್ಠಕಿ, ಲೋಧ್ರ, ಮೋಚರಸ ಸಮಂಗಾ, ಧಾತಕಿಪುಷ್ಪ, ಪದ್ಮಾ, ಪದ್ಮಕೇಶರ, ಜಂಬು, ಆಮ್ರ, ಪ್ಲಕ್ಷ, ವಟ, ಕಪೀತನ, ಉದುಂಬರ, ಅಶ್ವತ್ಥ, ಭಲ್ಲಾತಕಾಸ್ಥಿ, ಅಶ್ಮಂತಕ, ಶಿರೀಷ, ಶಿಂಶಪಾ, ಸೋಮವಲ್ಕ, ತಿಂದುಕ, ಪ್ರಿಯಾಲ, ಬದರ, ಖದಿರ, ಸಪ್ತಪರ್ಣ, ಅಶ್ವಕರ್ಣ, ಸ್ಯಂದನ, ಅರ್ಜುನ, ಅಸನ, ಅರಿಮೇದ, ಏಲವಾಲುಕ, ಪರಿಪೇಲವ, ಕದಂಬ, ಶಲ್ಲಕಿ, ಜಿಂಗಿನಿ ಕಾಶ, ಕಶೇರುಕ, ರಾಜಕಶೇರು, ಕಟ್ಫಲ, ವಂಶ, ಪದ್ಮಕ, ಅಶೋಕ, ಶಾಲ, ಧವ, ಸರ್ಜ, ಭೂರ್ಜ, ಶಣ, ಖರಪುಷ್ಪಾ, ಪುರ, (ಗುಗ್ಗುಲು), ಶಮಿ (ಬನ್ನಿ ಗಿಡ), ಮಾಚಿ (ದೇವದಾರು), ವರಕ, ತುಂಗ, ಅಜಕರ್ಣ, ಅಶ್ವಕರ್ಣ, ಸ್ಫೂರ್ಜಕ, ಬಿಭೀತಕ, ಕುಂಭೀಕ, ಪುಷ್ಕರ ಬೀಜ, ಬಿಸ (ಕಮಲ ಮೂಲ), ಮೃಣಾಲ (ಕಮಲ ದಂಟು), ತಾಲ ಮತ್ತು ಖರ್ಜೂರ, ಅಂಕುರ ಮೊದಲಾದವುಗಳು ಕಷಾಯ ವರ್ಗದಲ್ಲಿಯ ದ್ರವ್ಯಗಳು.

ಪಂಚ ಮಹಾ ಭೂತಗಳಿಂದ ರಸಗಳ ಉತ್ಪತ್ತಿಃ—

द्रव्यस्य पाञ्चभौतिकत्वाद् तदाश्रित रसोऽपि पाञ्चभौतिकः। (यो)

सौम्याः खल्वापोऽन्तरिक्ष प्रभवाः प्रकृति शीता लघ्व्यश्चाव्यक्त रसाश्च तास्त्वन्तरिक्षाद् भ्रश्यमाना भ्रष्टाश्च पञ्चमहाभूत गुण समन्विता जङ्गमस्थावराणां भूतानां मूर्तीरभिप्रीणयन्ति, तासु मूर्तिषु षड्भिर्मूर्च्छन्ति रसाः। (च. सू. अ. २६)

ಅಂತರಿಕ್ಷದಲ್ಲಿ ಉತ್ಪನ್ನವಾದಂತಹ ಜಲವು ಸೌಮ್ಯ, ಶೀತ, ಲಘು ಮತ್ತು ಅವ್ಯಕ್ತರಸ ಈ ಗುಣಗಳಿಂದ ಕೂಡಿಕೊಂಡು ಅಂತರಿಕ್ಷದಿಂದ ಬೀಳುತ್ತಿರುವಾಗ ಮತ್ತು

ಬಿದ್ದ ನಂತರ ಅದು ಪಂಚಮಹಾಭೂತ ಗುಣಗಳಿಂದ ಸಂಯೋಗ ಹೊಂದಿ ಜಂಗಮ ಮತ್ತು ಸ್ಥಾವರ ಪ್ರಾಣಿಗಳ ಶರೀರವನ್ನು ತೃಪ್ತಿ ಮಾಡುವದು, ಮತ್ತು ಅವುಗಳ ಶರೀರದಲ್ಲಿ ಷಟ್‌ರಸಗಳ ನಿರ್ಮಿತಿ ಮಾಡುವದು. ಜಲ ಮಹಾಭೂತವು ರಸದ ಮುಖ್ಯ ಆಧಾರ ಭೂತವಿರುವದು. ಮತ್ತು ಪೃಥ್ವಿ ಮಹಾಭೂತವು ಸಮವಾಯಿ ಕಾರಣವಿರುವದು. ಉಳಿದ ಆಕಾಶ, ವಾಯು ಮತ್ತು ಅಗ್ನಿ ಇವೂ ಕೂಡಾ ರಸ ನಿರ್ಮಿತಿಯಲ್ಲಿ ಭಾಗ ತೆಗೆದು ಕೊಳ್ಳುವವು. ಜಲವು ಸ್ವತಃ ಅವ್ಯಕ್ತ ರಸವುಳ್ಳದ್ದಿರುವದು. ಆದರೆ ಅದು ಆಕಾಶದಿಂದ ಬೀಳುವಾಗ ಅನೇಕ ಮಹಾ ಭೂತಗಳ ಸಂಯೋಗವಾಗುವದು. ಮತ್ತು ಪೃಥ್ವಿಯ ಮೇಲೆ ಬಿದ್ದ ನಂತರ ಪೂರ್ಣ ಪಂಚ ಮಹಾಭೂತ ಗುಣಯುಕ್ತವಾಗುವದು. ಆಪ್ಯ ಮಹಾ ಭೂತವು ಇತರ ಮಹಾ ಭೂತಗಳ ಸಂಗಡ ಮಿಶ್ರವಾಗಿ ಷಟ್ ರಸಗಳ ನಿರ್ಮಿತಿ ಮಾಡುವದು. ರಸ ಗುಣವಿದ್ದು ದ್ರವ್ಯದ ಆಶ್ರಯ ಮಾಡಿಕೊಂಡು ಇರುವದು. ದ್ರವ್ಯದ ನಿರ್ಮಿತಿಯ ಸಂಗಡ ರಸದ ನಿರ್ಮಿತಿಯಾಗುವದು. ಈ ರೀತಿಯಾಗಿ ಪಂಚ ಮಹಾ ಭೂತಗಳಿಂದ ರಸದ ನಿರ್ಮಿತಿಯಾಗುವದು. ಆದ್ದರಿಂದ "ತಸ್ಮಾನ್ನೈಕರಸಂ ದ್ರವ್ಯಂ ಭೂತ ಸಂಘಾತ ಸಂಭವಾತ್" ಎಂದು ಅಷ್ಟಾಂಗ ಹೃದಯಕಾರರು ಹೇಳಿರುವರು.

तेषां षण्णां रसानां सोमगुणातिरेकान्मधुरो रसः, पृथिव्यग्नि भूयिष्ठत्वादम्लः सलिलाग्निभूयिष्ठत्वाल्लवणः, वाय्वग्नि भूयिष्ठत्वात्कटुकः, वाय्वाकाशातिरिक्तत्वात्तिक्तः, पवन पृथिवी व्यतिरेकात् कषाय इति । (च. सू. अ. २६)

एवमेषां रसानां षट्त्वमुपपन्नं न्यूनातिरेकविशेषान्महाभूतानां भूतानामिव स्थावर जङ्गमानां नानावर्णाकृतिविशेषाः । (च. सू. अ. २६)

क्षमाम्भोऽग्नि क्षमाम्बु तेजः ख वाय्वग्न्यनिलगोऽनिलैः ।
द्वयोल्बणैः क्रमाद् भूतैर्मधुरादि रसोद्भवः ॥ (अ. हृ. सू. अ. १०)

ಷಟ್ ರಸಗಳು ಪಂಚ ಮಹಾಭೂತಗಳಿಂದ ಉತ್ಪನ್ನವಾಗಿದ್ದರೂ ಎಲ್ಲ ರಸಗಳಲ್ಲಿ ಮಹಾಭೂತಗಳ ಸಂಯೋಗ ಒಂದೇ ರೀತಿಯಾಗಿ ಇರುವದಿಲ್ಲ. ಕೆಲವು ರಸಗಳಲ್ಲಿ ಪೃಥ್ವಿ ಮಹಾಭೂತ ಪ್ರಾಧಾನ್ಯವಿದ್ದರೆ ಮತ್ತೊಂದು ರಸದಲ್ಲಿ ಅಗ್ನಿ ಮಹಾಭೂತ ಪ್ರಾಧಾನ್ಯವಿರುವದು ಇತ್ಯಾದಿ.

ರಸ	ಚರಕ	ಸುಶ್ರುತ	ವಾಗ್ಭಟ	ನಾಗಾರ್ಜುನ
ಮಧುರ	ಸೋಮ ಅಧಿಕ	ಪೃಥ್ವಿ+ಜಲ	ಪೃಥ್ವಿ+ಜಲ	ಪೃಥ್ವಿ+ಜಲ
ಆಮ್ಲ	ಪೃಥ್ವಿ+ಅಗ್ನಿ	ಜಲ+ಅಗ್ನಿ	ಪೃಥ್ವಿ+ಅಗ್ನಿ	ಜಲ+ಅಗ್ನಿ
ಲವಣ	ಜಲ+ಅಗ್ನಿ	ಪೃಥ್ವಿ+ಅಗ್ನಿ	ಜಲ+ಅಗ್ನಿ	ಅಗ್ನಿ+ಜಲ
ಕಟು	ವಾಯು+ಅಗ್ನಿ	ವಾಯು+ಅಗ್ನಿ	ವಾಯು+ಅಗ್ನಿ	ವಾಯು+ಅಗ್ನಿ
ತಿಕ್ತ	ವಾಯು+ಆಕಾಶ	ವಾಯು+ಆಕಾಶ	ವಾಯು+ಆಕಾಶ	ವಾಯು+ಆಕಾಶ
ಕಷಾಯ	ವಾಯು+ಪೃಥ್ವಿ	ವಾಯು+ಪೃಥ್ವಿ	ವಾಯು+ಪೃಥ್ವಿ	ವಾಯು+ಪೃಥ್ವಿ

ರಸ ಸಂಖ್ಯಾ ವಿಷಯದಲ್ಲಿ ಮತಭೇದ ಮತ್ತು ಅವುಗಳ ಖಂಡನ:—

1) एक एव रस इत्युवाच भद्रकाप्यः—

यं पञ्चानामिन्द्रियार्थानामन्यतमं जिह्वावैषयिकं भावमाचक्षते कुशलाः, पुनरुदकादनन्य इति। (च. सू. अ. २६)

ಭದ್ರಕಾಪ್ಯ ಮುನಿಯ ಪ್ರಕಾರ ರಸ ಒಂದೇ ಇರುವದು. ಅದು ರಸನೇಂದ್ರಿಯದ ಭಾವರೂಪ ಇರುವದು. ಮತ್ತು ಅದು ಜಲದಿಂದ ಭಿನ್ನವಿರುವದಿಲ್ಲ.

ಈ ಮತದ ಖಂಡನ:—

ಮಧುರ, ಅಮ್ಲ, ಲವಣ, ಕಟು, ತಿಕ್ತ ಮತ್ತು ಕಷಾಯ ಈ ರೀತಿಯಾಗಿ ರಸಗಳು ಆರೇ ಇರುವವು. ಭದ್ರಕಾಪ್ಯ ಮುನಿಯ ಪ್ರಕಾರ ರಸ ಒಂದೇ ಇರುವದು ಮತ್ತು ಅದು ಜಲದಿಂದ ಭಿನ್ನವಿರುವದಿಲ್ಲವೆಂದು ಹೇಳಿರುವನು. ಆದರೆ ಜಲವು ರಸಗಳ ಆಧಾರ ಕಾರಣವಿರುವದು. ಆದ್ದರಿಂದ ರಸ ಒಂದೇ ಇರುವದಿಲ್ಲ. 'ಶೇಷಾಣಾಂ ಷಣ್ಣಾಂ ರಸಾನಾಂ ಯೋನಿರುದಕಂ' ಎಂದು ಹೇಳಿರುವರು.

2) द्वौ रसाविति शाकुन्तेयो ब्राह्मणः—

ಶಾಕುಂತೇಯ ಬ್ರಾಹ್ಮಣನ ಪ್ರಕಾರ ರಸಗಳು ಎರಡು ಇರುವವು. ಒಂದು ಛೇದನೀಯ ಮತ್ತೊಂದು ಉಪಶಮನೀಯ.

3) त्रयो रसा इति पूर्णाक्षो मौद्गल्यः—

छेदनीयोपशमनीय साधारणा इति। (च. सू. अ. २६)

ಪೂರ್ಣಾಕ್ಷ ಮೌದ್ಗಲ್ಯನ ಪ್ರಕಾರ ರಸಗಳು ಮೂರು ಇರುವವು. 1) ಛೇದನೀಯ 2) ಉಪಶಮನೀಯ 3) ಸಾಧಾರಣ. ಈ ರೀತಿಯಾಗಿ ರಸಗಳು ಮೂರು ಇರುವವೆಂದು ಹೇಳುವನು.

ಮೇಲಿನ 2–3 ಮತಗಳ ಖಂಡನೆ:—

छेदनोपशमने द्वे कर्मणी, तयोर्मिश्री भावात् साधारणत्वं। (च. सू. अ. २६)

ಛೇದನೀಯ ಮತ್ತು ಉಪಶಮನೀಯ ಇವು ರಸಗಳ ಎರಡು ಕರ್ಮಗಳಿರುವವು ಮತ್ತು ಸಾಧಾರಣ ಇದು ಎರಡರ ಮಿಶ್ರಣದಿಂದ ಆಗುವ ರಸದ ಕರ್ಮವಿರುವದು. ಆದ್ದರಿಂದ ಇವುಗಳಿಗೆ ರಸಗಳೆಂದು ಅನ್ನಲು ಬರುವದಿಲ್ಲ.

4) चत्वारो रसा इति हिरण्याक्षः कौशिकः—

स्वादुर्हितश्च, स्वादुरहितश्च, अस्वादुर्हितश्च, अस्वादुरहितश्चेति।

(च. सू. अ. २६)

ಹಿರಣ್ಯಾಕ್ಷ ಕೌಶಿಕನ ಪ್ರಕಾರ ರಸಗಳು ನಾಲ್ಕು ಇರುವವು. 1) ಸ್ವಾದುಹಿತ 2) ಸ್ವಾದು ಅಹಿತ 3) ಅಸ್ವಾದು ಹಿತ 4) ಅಸ್ವಾದು ಅಹಿತ. ಈ ರೀತಿಯಾಗಿ ರಸಗಳು ನಾಲ್ಕು ಇರುವವು.

ಈ ಮತದ ಖಂಡನೆಃ—

स्वाद्वस्वादुता भक्तिः, हिताहितौ प्रभावौ । (च. सू. अ. २६)

ಸ್ವಾದುತಾ ಮತ್ತು ಅಸ್ವಾದುತಾ ಇವು ರುಚಿಗಳ ಎರಡು ವಿಶೇಷ ರೂಪವಿರುವವು. ಹಿತ ಮತ್ತು ಅಹಿತಗಳು ರಸಗಳ ಪ್ರಭಾವವಿರುವವು. ಕೆಲವರಿಗೆ ಮಧುರವೆನಿಸಿದ ದ್ರವ್ಯಗಳು ಮತ್ತೊಬ್ಬರಿಗೆ ಮಧುರವೆನಿಸಲಿಕ್ಕಿಲ್ಲ. ಇವೆಲ್ಲವು ಶರೀರದ ದೋಷಗಳ ಮತ್ತು ಮನಸ್ಸಿನ ಸ್ಥಿತಿಯ ಮೇಲೆ ಅವಲಂಬಿಸಿರುವವು. ಆದ್ದರಿಂದ ಇವು ರಸಗಳಾಗುವದಿಲ್ಲ.

5) पञ्चरसा इति कुमारशिरा भरद्वाजः—

भौमौदकाग्नेय वायव्यान्तरिक्षाः । (च. सू. अ. २६)

ಕುಮಾರಶಿರಾ ಭರದ್ವಾಜನು ಐದು ರಸಗಳಿರುವವೆಂದು ಹೇಳಿರುವನು. ಪಾರ್ಥಿವ, ಆಪ್ಯ, ಆಗ್ನೇಯ, ವಾಯವೀಯ ಮತ್ತು ಆಕಾಶೀಯ ಈ ರೀತಿಯಾಗಿ ರಸಗಳು ಐದು ಇರುವವು.

ಈ ಮತದ ಖಂಡನೆಃ—

पञ्चमहाभूतविकारास्त्वाश्रयाः प्रकृति विकृति विचार देश काल वशाः ।
(च. सू. अ. २६)

ಮೇಲೆ ಹೇಳಿದ ಪಾರ್ಥಿವ, ಆಪ್ಯ, ಆಗ್ನೇಯ, ವಾಯವೀಯ ಮತ್ತು ಆಕಾಶೀಯ ಇವು ಪಂಚರಸಗಳಾಗುವದಿಲ್ಲ. ಯಾಕಂದರೆ ಪಂಚಮಹಾಭೂತಗಳ ವಿಕಾರ ರೂಪ ಪೃಥ್ವಿ ಮೊದಲಾದ ಕಾರ್ಯ ದ್ರವ್ಯಗಳು ರಸಗಳ ಆಶ್ರಯವಿರುವವು. ಅಲ್ಲದೆ ಪಾಂಚಭೌತಿಕ ವಿಕಾರ ರೂಪ ದ್ರವ್ಯಗಳು ಪ್ರಕೃತಿ, ವಿಕೃತಿ (ಸಂಸ್ಕಾರ), ವಿಚಾರ, ದೇಶ ಮತ್ತು ಕಾಲ ಇತ್ಯಾದಿಗಳ ಆಧೀನವಿರುವವು. ಆದ್ದರಿಂದ ಪಂಚಮಹಾಭೂತ ವಿಕಾರ ಸ್ವತಃ ರಸವಾಗುವದಿಲ್ಲ.

6) षड्रसा इति वार्योविदो राजर्षिः—

गुरु लघु शीतोष्ण स्निग्ध रूक्षाः । (च. सू. अ. २६)

ರಾಜರ್ಷಿ ವಾರ್ಯೋವಿದನ ಪ್ರಕಾರ ರಸಗಳು ಆರು ಇರುವವು. ಗುರು, ಲಘು, ಶೀತ, ಉಷ್ಣ, ಸ್ನಿಗ್ಧ ಮತ್ತು ರೂಕ್ಷ ಈ ರೀತಿಯಾಗಿ ರಸಗಳು ಆರು ಇರುವವೆಂದು ಹೇಳುವನು.

ಈ ಮತದ ಖಂಡನೆ:—

तेष्वाश्रयेषु द्रव्यसंज्ञकेषु गुणा गुरु लघु शीतोष्ण स्निग्ध रूक्षाद्याः ।
(च. सू. अ. २६)

ಗುರು, ಲಘು, ಶೀತ, ಉಷ್ಣ, ಸ್ನಿಗ್ಧ ಮತ್ತು ರೂಕ್ಷ ಇವು ರಸಗಳಿರದೆ ದ್ರವ್ಯಗಳಲ್ಲಿರುವ ಗುಣಗಳಾಗಿವೆ. ಆದ್ದರಿಂದ ಇವುಗಳಿಗೆ ರಸಗಳೆಂದು ಅನ್ನಲು ಬರುವದಿಲ್ಲ.

7) सप्त रसा इति निमिर्वैदेहः—

ವೈದೇಹ ನಿಮಿಯ ಪ್ರಕಾರ ಮಧುರ, ಅಮ್ಲ, ಲವಣ, ಕಟು, ತಿಕ್ತ, ಕಷಾಯ ಮತ್ತು ಕ್ಷಾರ ಹೀಗೆ ರಸಗಳು ಏಳು ಇರುವವು.

ಈ ಮತದ ಖಂಡನೆ:—

क्षरणात्क्षारः, नासौ रसः, द्रव्यं तदनेकरस समुत्पन्नमनेकरसं कटुकलवणभूयिष्ठमनेकेन्द्रियार्थ समन्वितं करणाभिनिर्वृत्तम्; । (च. सू. अ. २६)

ವೈದೇಹ ನಿಮಿಯು ಹೇಳಿದ ಮೊದಲಿನ ಆರು ಅಂದರೆ ಮಧುರ ರಸದಿಂದ ಕಷಾಯ ರಸದವರೆಗಿನ ರಸಗಳು ಸರ್ವರಿಗೂ ಮಾನ್ಯವಿರುವವು. ಆದರೆ ಕ್ಷಾರವು ರಸವಾಗುವದಿಲ್ಲ. ಕ್ಷಾರವು ದ್ರವ್ಯವಿರುವದು. ಮತ್ತು ಅದು ಅನೇಕ ರಸಗಳುಳ್ಳ ದ್ರವ್ಯಗಳಿಂದ ತಯಾರಾಗುವದು. ಅದು ಷಡ್ರಸಾತ್ಮಕವಿದ್ದು ಕಟು ಮತ್ತು ಲವಣ ರಸಾಧಿಕ್ಯವಿರುವದು. ಇದರ ಜ್ಞಾನವು ಜಿಹ್ವೇಂದ್ರಿಯ ಮತ್ತು ಸ್ಪರ್ಶನೇಂದ್ರಿಯಗಳಿಂದ ಆಗುವದು. ಆದರೆ ರಸಗಳ ಜ್ಞಾನವು ರಸನೇಂದ್ರಿಯದಿಂದ ಆಗುವದು. 'ಕ್ಷರಣಾತ್ ಕ್ಷಾರಃ' ಈ ರೀತಿಯಾಗಿ ಇದರ ಉತ್ಪತ್ತಿಯಾಗಿರುವದು. ಆದ್ದರಿಂದ ಇದು ರಸವಲ್ಲ. ಅದು ದ್ರವ್ಯವಿರುವದು. ಮತ್ತು ರಸವು ದ್ರವ್ಯಾಶ್ರಿತವಿರುವದು.

8) अष्टौ रसा इति बडिशो धामार्गवः,

मधुराम्ल लवण कटु तिक्त कषाय क्षाराव्यक्ताः । (च. सू. अ. २६)

ಬಡಿಶ ಧಾಮಾರ್ಗವನು ಮಧುರ, ಅಮ್ಲ, ಲವಣ, ಕಟು, ತಿಕ್ತ, ಕಷಾಯ, ಕ್ಷಾರ ಮತ್ತು ಅವ್ಯಕ್ತ ಈ ರೀತಿಯಾಗಿ ರಸಗಳು ಎಂಟು ಇರುವವೆಂದು ಹೇಳುವನು.

ಈ ಮತದ ಖಂಡನೆ:—

अव्यक्तीभावस्तु खलु रसानां प्रकृतौ भवत्यनुरसेऽनुरस समन्वितो वा द्रव्ये;

(च. सू. अ. २६)

ಮಧುರ, ಅಮ್ಲ, ಲವಣ, ಕಟು, ತಿಕ್ತ, ಕಷಾಯ ಈ ಷಡ್ರಸಗಳು ಎಲ್ಲರಿಗೂ ಮಾನ್ಯವಿರುವವು. ಕ್ಷಾರವು ದ್ರವ್ಯವಿರುವದು. ಮತ್ತು ಅದು ರಸವಲ್ಲವೆಂದು ಮೇಲೆ ವರ್ಣಿಸಿದೆ ಅವ್ಯಕ್ತವಾದರೂ ರಸವಿರುವದಿಲ್ಲ. ವ್ಯಕ್ತ ಮತ್ತು ಅವ್ಯಕ್ತ ಇವು ರಸಗಳ ಅವಸ್ಥೆ ಇರುವವು. ರಸವು ಜಲದಲ್ಲಿ, ಅನುರಸದಲ್ಲಿ ಮತ್ತು ಅನುರಸಯುಕ್ತ ದ್ರವ್ಯದಲ್ಲಿ ಅವ್ಯಕ್ತಾವಸ್ಥೆಯಲ್ಲಿರುತ್ತದೆ. ಆದ್ದರಿಂದ ಅವ್ಯಕ್ತ ಇದು ಬೇರೆ ರಸವಿರುವದಿಲ್ಲ.

9) अपरिसंख्येया रसा इति काङ्कायनो बाह्लीकभिषक्,

आश्रयगुण कर्म संस्वाद विशेषाणामपरिसंख्येयत्वात् । (च. सू. अ. २६)

ವೈದ್ಯ ಕಾಂಕಾಯನ ಬಾಹ್ಲೀಕನು ಅಸಂಖ್ಯ ದ್ರವ್ಯಗಳ ಅಸಂಖ್ಯ ರಸಗಳಿರುವವೆಂದು ಹೇಳುವನು. ರಸಗಳ ಆಶ್ರಯಭೂತ ದ್ರವ್ಯ, ಗುಣ, ಕರ್ಮ ಮತ್ತು ಸಂಸ್ವಾದ ಇವು ಅನೇಕ ಇರುವದರಿಂದ ರಸಗಳು ಅನೇಕ ಇರುವವೆಂದು ಇವನ ಮತ.

ಈ ಮತದ ಖಂಡನೆಃ --

अपरिसंख्येयत्वं पुनस्तेषामाश्रयादीनां भावानां विशेषापरिसंख्येयत्वान्न युक्तम्, एकैकोऽपि ह्येषामाश्रयादीनां भावानां विशेषानाश्रयते विशेषापरिसंख्येयत्वात्, न च तस्मादन्यत्वमुपपद्यते; परस्पर संसृष्टभूयिष्ठत्वान्न चैषामभिनिर्वृत्तेर्गुणप्रकृतीनामपरिसंख्येयत्वं भवति; तस्मान्न संसृष्टानां रसानां कर्मोपदिशन्ति बुद्धिमन्तः। (च. सू. अ. २६)

ಈ ಮತವಾದರೂ ಯೋಗ್ಯವಿರುವದಿಲ್ಲ. ಯಾಕಂದರೆ ಮಧುರಾದಿ ರಸಗಳ ಆಶ್ರಯ, ಗುಣ, ಕರ್ಮ ಮತ್ತು ಸಂಸ್ವಾದ ಮೊದಲಾದ ಭಾವಗಳ ವಿಶೇಷತೆಗಳು ಅಸಂಖ್ಯವಿದ್ದರೂ ಕೂಡ ರಸಗಳ ಸಂಖ್ಯೆಯಲ್ಲಿ ಅಂತರವಾಗುವದಿಲ್ಲ. ಯಾಕಂದರೆ ದ್ರಾಕ್ಷಾ, ದುಗ್ಧ, ಘೃತ ಮೊದಲಾದವುಗಳ ಆಶ್ರಯಗಳು ಗುರು, ಸ್ನಿಗ್ಧ, ಪಿಚ್ಛಿಲ ಮೊದಲಾದ ಗುಣಗಳೂ ಬೃಂಹಣ, ತರ್ಪಣ ಇತ್ಯಾದಿ ಕರ್ಮಗಳು ಮತ್ತು ಮಧುರತರ, ಮಧುರತಮ ಇತ್ಯಾದಿ ಸಂಸ್ವಾದಗಳಲ್ಲಿ ಅವಾಂತರ ಭೇದವಿದ್ದರೂ ಕೂಡ ಎಲ್ಲವುಗಳಲ್ಲಿ ಮಧುರತ್ವ ಜಾತಿಯು ಸಮಾನರೂಪದಿಂದ ಒಂದೇ ಇರುತ್ತದೆ. ಆದುದರಿಂದ ಮಧುರಾದಿ ರಸಗಳ ಆಶ್ರಯ, ಗುಣ, ಕರ್ಮ ಮತ್ತು ಸಂಸ್ವಾದಾದಿ ಭಾವಗಳ ವಿಶೇಷತೆಗಳು ಅಸಂಖ್ಯವಿದ್ದರೂ ರಸಗಳು ಒಟ್ಟು ಆರೇ ಇರುತ್ತವೆ. ಆರಕ್ಕಿಂತ ಹೆಚ್ಚು ಇರುವದಿಲ್ಲ.

ಮಧುರ ರಸಃ—

ಲಕ್ಷಣಃ—'तत्र यः परितोषमुत्पादयति, प्रह्लादयति, तर्पयति, जीवयति, मुखोपलेपं जनयति, श्लेष्माणं चाभिवर्धयति स मधुरः। (सु. सू. ४२)

'तेषां स्वादुरास्वाद्यमानो मुखमुपलिम्पति, इन्द्रियाणि प्रसादयति, देहं प्रह्लादयति, षट्पदपिपीलिकादीनामभीष्टतमः।' (अ. सं. सू.)

ಸಂತೋಷ ಉತ್ಪನ್ನಮಾಡುವದು, ಸುಖ ಕೊಡುವದು, ತೃಪ್ತಿ ಉತ್ಪನ್ನ ಮಾಡುವದು, ಪ್ರಾಣಧಾರಣ ಮಾಡುವದು, ಲಾಲಾಸ್ರಾವದ ವೃದ್ಧಿ ಮಾಡುವದು ಮತ್ತು ಕಫವೃದ್ಧಿ ಮಾಡುವದು ಇತ್ಯಾದಿಗಳ ಕಾರಣೀಭೂತ ರಸಕ್ಕೆ ಮಧುರ ರಸ ಅನ್ನುವರು. ಈ ರಸವನ್ನು ಸೇವಿಸುವಾಗ ಬಾಯಿಗೆ ಲೇಪಿಸಿದಂತೆ ಆಗುವದು. ಇದರ ರುಚಿಯಿಂದ ಆನಂದ ಉಂಟಾಗುವದು, ಇಂದ್ರಿಯಗಳು ಪ್ರಸನ್ನವಾಗುವವು, ಮಧುರ ರಸವು ಭ್ರಮರ ಮತ್ತು ಇರುವೆಗಳಿಗೆ ಪ್ರಿಯಕರವಿರುವದು. ಈ ಲಕ್ಷಣಗಳಿಂದ ಮಧುರ ರಸ ಇರುವದು.

ಗುಣಃ— 'तत्रमधुरो रसः........स्निग्धः शीतो गुरुश्च।' (च. सू. २६)

'स्निग्धः शीतो मृदुर्गुरुश्च।' (अ. सं. सू.)

ಮಧುರ ರಸವು ಸ್ನಿಗ್ಧ, ಶೀತ, ಹಗುರು ಮತ್ತು ಮೃದು ಗುಣಾತ್ಮಕವುಳ್ಳದ್ದು ಇರುವದು. ಇದರಲ್ಲಿಯ ಜಲತತ್ವದ ಮೂಲಕ ಸ್ನಿಗ್ಧ, ಶೀತ ಗುಣಗಳು ಮತ್ತು ಪೃಥ್ವಿ ತತ್ವದ ಮೂಲಕ ಗುರು ಗುಣವು ನಿರ್ಮಾಣವಾಗುವದು.

ಪಾಂಚಭೌತಿಕ ಆಧಾರಃ–

"सोमगुणतिरेकान्मधुरो रसः ।" (च. सू.)

'भूम्यम्बुगुणबाहुल्यान्मधुरः ।' (सु. सू.)

'क्ष्मां भू................' । (वा. सू.)

ಪೃಥ್ವಿ ಮತ್ತು ಜಲ ಈ ಎರಡು ಮಹಾಭೂತಗಳಿಂದ ಮಧುರ ರಸದ ನಿರ್ಮಿತಿಯಾಗುವದು.

ವಿಪಾಕಃ—

ನಿಯಮಪೂರ್ವಕವಾಗಿ ಮಧುರ ರಸದ ವಿಪಾಕ ಅರ್ಥಾತ್ ಮಧುರ ರಸ ದ್ರವ್ಯಗಳ ವಿಪಾಕವು ಪ್ರಾಯಃ ಮಧುರವಾಗುವದು. ಉದಾಃ– ದುಗ್ಧ, ಘೃತ, ಶತಾವರಿ ಇತ್ಯಾದಿ. ಇದಕ್ಕೆ ಕೆಲವು ದ್ರವ್ಯಗಳ ಅಪವಾದವಿರುವದರಿಂದ ಪ್ರಾಯಶಃ ಎಂದು ಹೇಳಿದೆ.

ವೀರ್ಯ:—'ಮಧುರೋಹಿ ರಸಃ ಶೀತೋ'

ಮಧುರ ರಸಾತ್ಮಕ ದ್ರವ್ಯಗಳ ವೀರ್ಯವು ಪ್ರಾಯಶಃ ಶೀತವಾಗುವದು. ಕೆಲವು ಆಚಾರ್ಯರ ಪ್ರಕಾರ ಎಲ್ಲ ರಸಗಳ ಎರಡು ಮುಖ್ಯ ಭಾಗ ಮಾಡುವರು. ಸೃಷ್ಟಿಯು ಅಗ್ನ್ಯಾತ್ಮಕ ಮತ್ತು ಜಲಾತ್ಮಕವಿರುವದರಿಂದ ಅದರಂತೆ ರಸಗಳು ಕೂಡಾ ಸೌಮ್ಯ ಮತ್ತು ಆಗ್ನೇಯ ಈ ರೀತಿಯಾಗಿ ಎರಡು ಪ್ರಕಾರ ಇರುವವು. ಮಧುರ ರಸದ ಅಂತರ್ಭಾವ ಸೌಮ್ಯ ಅಥವಾ ಶೀತ ಪ್ರಕಾರದಲ್ಲಿ ಬರುವದು.

केचिदाहुरग्नीषोमीयत्वाज्जगतो
रसा द्विविधाः सौम्या आग्नेयाश्च । (सु. सू. ४२)

ದೋಷದ ಮೇಲಿನ ಕಾರ್ಯ:—

ತತ್ರ ಮಧುರಾ........ವಾತಘ್ನಾಃ | ಸು. ಸೂ.
ತತ್ರಾದ್ಯಾ ಮಾರುತಂ ಘ್ನಂತಿ........ | ವಾ. ಸೂ.
ಮಧುರ........ಪಿತ್ತಘ್ನಾಃ | ಸು. ಸೂ.
ಮಧುರಾಃ ಪಿತ್ತಮನ್ಯೇತು ಕುರ್ವತೇ | ವಾ. ಸೂ.

'माधुर्य स्नेह गौरव पैच्छिल्यमार्दवशैत्यैः ' श्लेष्माणं वर्धयति मधुरः ।'
(र. वै.)

'माधुर्य स्नेह गौरव शैत्यपैच्छिल्यगुण लक्षणः श्लेष्मा, तस्य समानयोनिर्मधुरो रसः, सोऽस्य माधुर्यान्माधुर्यं वर्धयति, स्नेहात् स्नेहं, गौरवाद् गौरवं, शैत्याच्छैत्यं, पच्छिल्यात् पैच्छिल्यमिति ।' सु. सू. ४२

ಮಧುರ ರಸವು ವಾತ ಮತ್ತು ಪಿತ್ತ ಶಾಮಕವಿರುವದು. ಮತ್ತು ಕಫವರ್ಧಕವಿರುವದು. ಮಧುರ, ಸ್ನಿಗ್ಧ, ಗುರು, ಶೀತ ಮತ್ತು ಪಿಚ್ಛಿಲ ಈ ಗುಣಗಳ ಕಫ

ದೋಷದ ಮತ್ತು ಮಧುರ ರಸದ ಗುಣಗಳಾಗಿವೆ. ಆದ್ದರಿಂದ ಮಧುರ ರಸಸೇವನೆಯಿಂದ ಕಫದ ವರ್ಧನೆಯಾಗುವದು ಸ್ವಾಭಾವಿಕವಾಗಿದೆ.

ಧಾತುವಿನ ಮೇಲಿನ ಕಾರ್ಯ:—

ಮಧುರ ರಸವು ಸರ್ವಧಾತುವರ್ಧಕವಿರುವದು. ಸ್ತನ್ಯವರ್ಧಕವಿರುವದು.

ಮಲದ ಮೇಲಿನ ಕಾರ್ಯ:—

ಮಧುರ ರಸವು ಜಲತತ್ವ ಪ್ರಧಾನವಿರುವದರಿಂದ ಮಲ ಮತ್ತು ಮೂತ್ರ ಪ್ರವೃತ್ತಿಗೆ ಸಹಾಯಮಾಡುವದು.

ಕರ್ಮ:— ....मधुरो रसः ।

आजन्म सात्म्यात् कुरुते धातूनां प्रबलं बलम् ॥
बालवृद्धक्षत क्षीण वर्ण केशेन्द्रियौजसाम् ।
प्रशस्तो बृंहणः कण्ठ्यः स्तन्य संधान कृद्गुरुः ॥
आयुष्यो जीवनः स्निग्धः पित्तानिल विषापहः । (अ. हृ. सू.)

तत्र मधुरो रसः शरीरसात्म्याद्रस रुधिर मांस मेदोऽस्थि मज्जौजः शुक्राभिवर्धन, आयुष्यः षडिन्द्रिय प्रसादनो, बलवर्णकरः, पित्तविष मारुतघ्नः, तृष्णा दाह प्रशमनः त्वच्यः, केश्यः; कण्ठ्यो बल्यः प्रीणनो, जीवनः तर्पणो, बृंहणः स्थैर्यकरः क्षीणक्षत संधान करो, घ्राण मुख कण्ठोष्ठ जिह्वा प्रल्हादनो दाह मूर्च्छा प्रशमनः षट्पद पिपीलिकानामिष्टतमः । (च. सू. अ. २६)

ಮಧುರ ರಸ ಜನ್ಮ ಹುಟ್ಟಿದಂದಿನಿಂದಲೇ ಶರೀರಕ್ಕೆ ಸಾತ್ಮ್ಯ ಇರುವದು. ಆದ್ದರಿಂದ ರಸ, ರಕ್ತ, ಮಾಂಸ, ಮೇದ, ಅಸ್ಥಿ, ಮಜ್ಜಾ, ಓಜ ಮತ್ತು ಶುಕ್ರ ಈ ಸರ್ವ ಧಾತುಗಳ ಪೋಷಣೆ ಮಾಡುವದು. ಆಯುಷ್ಯ ವರ್ಧನ ಮಾಡುವದು. ಕರ್ಣ, ತ್ವಚಾ, ನೇತ್ರ, ನಾಸಾ, ಜಿವ್ಹಾ ಈ ಪಂಚೇಂದ್ರಿಯ ಮತ್ತು ಮನ ಇವುಗಳನ್ನು ಪ್ರಸನ್ನವಾಗಿಡುವದು. ಬಲ ಮತ್ತು ಕಾಂತಿಯನ್ನುಂಟುಮಾಡುವದು. ವಿಷ, ಪಿತ್ತ ಮತ್ತು ಪ್ರಕುಪಿತವಾತ ಇವುಗಳನ್ನು ನಾಶಮಾಡುವದು ತೃಷ್ಣಾ ಶಾಮಕವಿರುವದು. ತ್ವಚಾ, ಕೇಶ ಮತ್ತು ಸ್ವರಗಳಿಗೆ ಹಿತಕಾರಕವಿರುವದು. ಜೀವನಕ್ಕೆ ನಿತ್ಯ ಉಪಯೋಗಿ ಇರುವದು, ಶರೀರ ಪುಷ್ಟಮಾಡುವದು, ಶರೀರದ ಸ್ಥಿರತೆಯನ್ನು ಹೆಚ್ಚಿಸುವದು, ಕ್ಷೀಣ ಮನುಷ್ಯನ ಧಾತುಪುಷ್ಟಿಮಾಡಿ ಸಶಕ್ತನನ್ನಾಗಿ ಮಾಡುವದು. ಉರಕ್ಷತ ರೋಗ ನಾಶಕವಿರುವದು. ಮೂರ್ಛಾನಾಶಕವಿರುವದು. ಕೃಮಿ ಮತ್ತು ಕಫವನ್ನುಂಟು ಮಾಡುವದು.

ಮಧುರ ರಸದ ಅತಿಯೋಗದಿಂದ ಆಗುವ ಪರಿಣಾಮ:—

स एवं गुणोऽप्येक एवात्यर्थ मुपयुज्यमानः स्थौल्यं, मार्दवम्, आलस्यम् अतिस्वप्नं, गौरवम्, अनन्नाभिलाषम्, अग्नेर्दौर्बल्यम्, आस्य कण्ठ्योर्मांसाभिवृद्धिं,

श्वास कास प्रतिश्यायालसक शीत ज्वरानाहास्यमाधुर्य वमथु संज्ञा स्वरप्रणाश गलगण्ड गण्डमाला श्लीपद गलशोफ बस्ति धमनी गलोपलेपाक्ष्यामयाभिष्य न्दानीत्येवं प्रभृतीन् कफजान् विकारानुपजनयति । (च. सू.)

कुरुतेऽत्युपयोगेन स मेदः श्लेष्मजान् गदान् ।

स्थौल्याग्निसाद सन्यास मेह गण्डार्बुदादिकान् ॥ (अ. हृ. सू.)

ಮಧುರ ರಸವನ್ನು ಅತಿಯಾಗಿ ಸೇವನೆಮಾಡುವದರಿಂದ ಶರೀರದಲ್ಲಿ ಕೆಳಗೆ ಹೇಳಿದ ದೋಷಗಳು ಉತ್ಪನ್ನವಾಗುವವು.

ಶರೀರ ಸ್ಥೂಲವಾಗುವದು, ಶರೀರ ಮೃದು ಆಗುವದು, ಆಲಸ್ಯ, ಅತಿನಿದ್ರಾ, ಅರುಚಿ, ಅಗ್ನಿಮಾಂದ್ಯ, ಮುಖ ಮತ್ತು ಕಂಠಗಳಲ್ಲಿ ಮಾಂಸದ ಬೆಳವಣಿಗೆ, ಶ್ವಾಸ, ಕಾಸ, ಪ್ರತಿಶ್ಯಾಯ, ಅಲಸಕ, ಶೀತಜ್ವರ, ಆನಾಹ, ಛರ್ದಿ, ಸಂಜ್ಞಾನಾಶ, ಸ್ವರಭಂಗ ಗಲಗಂಡ, ಗಂಡಮಾಲಾ, ಶ್ಲೀಪದ, ಪ್ರಮೇಹ, ನೇತ್ರರೋಗ, ಕಫಜರೋಗ, ಕೃಮಿ, ಅರ್ಬುದ, ಉದರರೋಗ, ಮೇದೋವೃದ್ಧಿ ಮತ್ತು ಸಂನ್ಯಾಸ ಇತ್ಯಾದಿ ಅನೇಕ ವಿಕಾರ ಗಳು ಉತ್ಪನ್ನವಾಗುವವು.

ಅಮ್ಲ ರಸಃ—

ಲಕ್ಷಣ:- यो दन्तहर्षमुत्पादयति, मुखस्रावं जनयति

श्रद्धां चोत्पादयति सोऽम्लः । (सु. सू. ४२)

दन्तहर्षान्मुखास्रावात् स्वेदनान्मुखबोधनात् ।

विदाहाचास्य कण्ठस्य प्राश्यैवाम्लं रसं वदेत् ॥ च. सू.

ಅಮ್ಲರಸದ ಸೇವನೆಯಿಂದ ದಂತಹರ್ಷ, ಲಾಲಾಸ್ರಾವ ಉತ್ಪನ್ನವಾಗುವದು ಸ್ವೇದನ, ಮುಖಶುದ್ಧಿಯಾಗುವದು, ರುಚಿ ಉತ್ಪನ್ನವಾಗುವದು, ಮುಖ ಕಂಠಗಳ ದಾಹವಾಗುವದು ಮತ್ತು ರೋಮಾಂಚನ ವೇಳುವದು ಇವೇ ಮೊದಲಾದ ಲಕ್ಷಣ ಗಳು ಕಂಡು ಬರುವವು.

ಗುಣ:- अम्लो रसः.........लघुः उष्णः स्निग्धश्च ।

ಅಮ್ಲ ರಸವು ಲಘು, ಉಷ್ಣ ಮತ್ತು ಸ್ನಿಗ್ಧ ಗುಣಯುಕ್ತವಿರುವದು. ಇದರಲ್ಲಿಯು ಸ್ನಿಗ್ಧ ಗುಣದ ಮತ್ತು ಅಗ್ನಿ ತತ್ವದ ಮೂಲಕ ಉಷ್ಣ, ಲಘು ಗುಣಗಳು ಉತ್ಪನ್ನ ವಾಗುವವು.

ಪಾಂಚಭೌತಿಕ ಆಧಾರಃ—

पृथिव्यग्नि भूयिष्ठत्वादम्लः । च. सू.

ಅಮ್ಲರಸವು ಪೃಥ್ವಿ ಮತ್ತು ಅಗ್ನಿಮಹಾಭೂತಗಳಿಂದ ಉತ್ಪನ್ನವಾಗುವದು.

ವಿಪಾಕಃ— ಅಮ್ಲರಸದ ವಿಪಾಕ ಅಮ್ಲವಾಗುವದು.

ವೀರ್ಯ:– ಅಮ್ಲರಸದ ಅರ್ಥಾತ್ ಅಮ್ಲರಸ ದ್ರವ್ಯಗಳ ವೀರ್ಯವು ಪ್ರಾಯಶಃ ಉಷ್ಣವಾಗುವದು. ಯಾಕಂದರೆ ಅಮ್ಲರಸವು ಅಗ್ನಿ ತತ್ವದಿಂದ ಕೂಡಿದ್ದಾಗಿದೆ.

ದೋಷದ ಮೇಲಿನ ಕಾರ್ಯ:—

पित्तं भृश विदाहित्वात् उष्णत्वात् तीक्ष्णत्वाच्च विदाहयति कोपयति चाम्लः (र. वै. सू. ६८)

तन्नाद्या मारुतं घ्नंति (अ. हृ. सू.)

ಈ ರಸದಲ್ಲಿಯ ಎಲ್ಲ ಗುಣಗಳು ವಾತದ ವಿರೋಧವಿರುವವು. ಆದ್ದರಿಂದ ವಾತ ಶಮನ ಕಾರ್ಯವಾಗುವದು. ಅಮ್ಲದ ವಿದಾಹಿ, ಉಷ್ಣ ಹಾಗೂ ತೀಕ್ಷ್ಣ ಗುಣಗಳಿಂದ ಪಿತ್ತವರ್ಧನ ಹಾಗೂ ಕಫವರ್ಧನವಾಗುವದು.

ಧಾತುವಿನ ಮೇಲಿನ ಕಾರ್ಯ:—

रक्ताम्ले शिशिर प्रीतिः। करोति कफ पित्तास्रं।

ಅಮ್ಲ ರಸವು ಮುಖ್ಯವಾಗಿ ರಕ್ತಧಾತುವಿನ ಮೇಲೆ ಕಾರ್ಯಮಾಡುವದು. ರಕ್ತಧಾತುವಿನ ಆಶ್ರಯ ಸ್ಥಾನವು ಪಿತ್ತವು. ಆದ್ದರಿಂದ ಪಿತ್ತ ಹಾಗೂ ರಕ್ತ ಇವೆ ರಡೂ ಒಂದೇ ಗುಣದವು ಇರುವವು. ಅಂದರೆ ಪಿತ್ತವರ್ಧನವಾದರೆ ಪಿತ್ತದ ಆಶ್ರಯ ಧಾತು ರಕ್ತವು ಬೆಳೆಯುವದು.

ಅಮ್ಲರಸವು ಹೃದ್ಯ हृदयं तर्पयति, प्रीणयति ಅಂದರೆ ರಕ್ತದ ಸ್ಥಾನವು ಹೃದ ಯವು. ಅಮ್ಲ ರಸವು ರಕ್ತದ ಮೇಲೆ ಕಾರ್ಯಮಾಡುವದರಿಂದ ಹೃದ್ಯವಾಗುವದು. ಆದ್ದರಿಂದ ರಕ್ತಕ್ಷಯದಲ್ಲಿ ಅಮ್ಲೇಚ್ಛೆಯಾಗುವದು.

ಮಲದಮೇಲಿನ ಕಾರ್ಯ:—

पट्वम्लमधुराः स्निग्धाः सृष्टविण्मूत्रमारुताः। (अ. हृ. सू. १०)

ಅಮ್ಲ ರಸವು ಪೃಥ್ವಿ ಹಾಗೂ ಅಗ್ನಿಮಹಾಭೂತಾಧಿಕ್ಯ ಉಳ್ಳದ್ದು ಇರುವದು. ಆದ್ದರಿಂದ ಮೂತ್ರ, ಮಾರುತ, ಮಲಗಳ ಅನುಲೋಮನ ಕಾರ್ಯವಾಗುವದು.

ಕರ್ಮ:—

अम्लोऽग्नि दीप्ति कृत्स्निग्धो हृद्यः पाचन रोचनः।
उष्णवीर्यो हिमस्पर्शः प्रीणनः क्लेदनो लघुः।
करोति कफ पित्तास्रं मूढवातानुलोमनः॥ (अ. हृ. सू. १०)

अम्लो रसो भक्तं रोचयति। अग्नि दीपयति, देहं बृंहयति ऊर्जयति, मनो बोधयति, इंद्रियाणि दृढीकरोति, बलं वर्धयति, वातमनुलोमयति, हृदयं तर्पयति, आस्यमास्रावयति, भुक्तमपकर्षयति, क्लेदयति, जरयति, प्रीणयति।

ಅಮ್ಲ ರಸಸೇವನೆಯಿಂದ ಅನ್ನಕ್ಕೆ ರುಚಿ ಬರುತ್ತದೆ. ಜಠರಾಗ್ನಿ ಪ್ರದೀಪ್ತ ಮಾಡುತ್ತದೆ. ಬಲ್ಯ, ಶರೀರ ಪುಷ್ಟಿಕರ, ಇಂದ್ರಿಯಗಳಿಗೆ ಸ್ಥೈರ್ಯವನ್ನು ಕೊಡು

ತ್ತದೆ, ವಾತವನ್ನು ಅನುಲೋಮನ ಮಾಡುತ್ತದೆ. ಹೃದ್ಯ, ಬಾಯಿಯಿಂದ ಸ್ರಾವವನ್ನು ಮಾಡಿಸುವದು, ಅನ್ನವನ್ನು ಒಳಗೆ ತೆಗೆದುಕೊಳ್ಳಲು ಸಹಾಯ ಮಾಡುವದು, ಅನ್ನ ಸಂಘಾತ ಮತ್ತು ಅದರ ಜರಣ ಕಾರ್ಯ ಮಾಡಿ ಪ್ರೀಣನ ಕಾರ್ಯ ಮಾಡುತ್ತದೆ.

ಅಮ್ಲ ರಸದ ಅತಿಸೇವನೆಯಿಂದ ಆಗುವ ಪರಿಣಾಮಗಳು:—

सोऽत्यभ्यस्तस्तनो: कुर्याच्छैथिल्यं तिमिरं भ्रमम् ।

विसर्प कण्डु पाण्डुत्व शोफ विस्फोट तृड् ज्वरान् ॥ (अ. सू. अ. १०)

स एवं गुणोऽप्येक एवात्यर्थमुपयुज्यमानो दंतान् हर्षयति, तर्षयति, संमीलयत्यक्षिणी, संवेजयति लोमानि, कफं विलाययति, पित्तमभिवर्धयति, रक्तं दूषयति, मांसं विदहति, कायं शिथिलीकरोति, क्षीण-क्षत कृश, दुर्बलानां श्वयथुमापादयति, अपि च, क्षताभिहत–दष्टदग्ध, भग्न शून, प्रच्युतावमूत्रित, परिसर्पित, मर्दित, छिन्न, भिन्न विश्लिष्टोद्विद्धोत्पिष्टादीनि, पाचयत्याग्नेय–स्वभावात्, परिदहति, कण्ठमुरो हृदयं च । (च. सू. अ. २६)

ಅಮ್ಲ ರಸದ ಅತಿಸೇವನೆಯಿಂದ, ದಂತಹರ್ಷ, ತೃಷ್ಣಾ, ಕಣ್ಣು ಭಾರವಾಗಿ ಮುಚ್ಚುವದು, ರೋಮಹರ್ಷ, ಕಫವಿಲಯನ, ಪಿತ್ತಪ್ರಕೋಪ, ರಕ್ತವಿಕಾರ, ಮಾಂಸ ಪಚನ, ಶರೀರ ಶೈಥಿಲ್ಯ, ಕ್ಷೀಣ, ಕ್ಷತ, ಅಭಿಘಾತ, ವಿಷದಷ್ಟ, ಅಗ್ನಿದಗ್ಧ, ಅಸ್ಥಿಭಗ್ನ, ಮರ್ದಿತ, ಛಿನ್ನವೃಣ, ಭಿನ್ನವೃಣ, ಅಸ್ಥಿಶೈಥಿಲ್ಯದಲ್ಲಿ ಪೂಯ ಉತ್ಪನ್ನವಾಗುವದು. ಕಂಠ ಹಾಗೂ ಹೃದಯ, ಉರಸ್ಥಾನದಲ್ಲಿ ದಾಹ ಉತ್ಪನ್ನವಾಗುವದು.

ಕಂಡೂ, ಪಾಂಡು, ದೃಷ್ಟಿಮಾಂದ್ಯ, ವೀಸರ್ಪ, ರಕ್ತಪಿತ್ತ, ಭ್ರಮ ಜ್ವರ ಆದಿ ವಿಕಾರಗಳು ಉತ್ಪನ್ನವಾಗುವವು.

ಲವಣ ರಸ:—

ಲಕ್ಷಣ:—

प्रलीयन् क्लेदविष्यंद मार्दवं कुरुते मुखे ।

यः शीघ्रं लवणो ज्ञेयः स विदाहान् मुखस्य च । (च. सू. २६)

लवणो मुखं विष्यंदयति, कण्ठकपोलं विदहति, अन्नं प्ररोचयति ।

(अ. स. सू. १८)

ಆಶು ವಿಲಯನವಾಗುವಂಥ ಶರೀರದಲ್ಲಿ ಕ್ಲೇದ, ಅಭಿಷ್ಯಂದವನ್ನು ಮಾಡಿ ಮಾರ್ದವತೆಯನ್ನು ತರುವಂಥ ಹಾಗೂ ಮುಖದಲ್ಲಿ ಹಾಕಿದೊಡನೆ ಕಂಠ ಗಲಗಳಲ್ಲಿ ದಾಹ ಪ್ರತೀತಿ ಮಾಡುವಂಥ ರಸವೆಂದರೆ ಲವಣ ರಸವು. ಈ ರಸದಿಂದ ಅನ್ನಕ್ಕೆ ರುಚಿ ಬರುವದು.

ಗುಣ: —

लवणो रसः नात्यर्थं गुरुः स्निग्धः उष्णः च (च. सू. अ. २६)

लवणः नाति गुरुः तीक्ष्णोष्णश्च । (अ. स. सू.)

ಲವಣ ರಸವು ಜಲ ಹಾಗು ಅಗ್ನಿ ಮಹಾಭೂತಗಳಿಂದ ಒಳಗೊಂಡಿರುವದರಿಂದ ಇದರಲ್ಲಿ ಎರಡೂ ಮಹಾಭೂತಗಳ ಗುಣಗಳು ಕಂಡುಬರುತ್ತವೆ. ಇದು ಅಷ್ಟು ಗುರುವೂ ಅಲ್ಲ ಹಾಗೂ ಅಷ್ಟು ಲಘು ಅಲ್ಲದ ಗುಣವುಳ್ಳದ್ದಿರುತ್ತದೆ. ಸ್ನಿಗ್ಧ, ತೀಕ್ಷ್ಣ ಹಾಗೂ ಉಷ್ಣ ಗುಣವುಳ್ಳದ್ದು ಇರುತ್ತದೆ. ಜಲ ಮಹಾಭೂತದಿಂದ ಗುರು, ಸ್ನಿಗ್ಧಗುಣ ಮತ್ತು ಅಗ್ನಿ ಮಹಾಭೂತದಿಂದ ಲಘು, ತೀಕ್ಷ್ಣ, ಉಷ್ಣ ಗುಣಗಳು ಈ ರಸವಲ್ಲಿ ಬಂದಿರುತ್ತವೆ.

ಪಾಂಚಭೌತಿಕ ಆಧಾರ: —

सलिलाग्नि भूयिष्ठत्वात् लवणः । च. सू.

अंबु तेजः (अ. हृ. सू.)

लवणमग्नेरपां च । (र. वै.)

ಅಗ್ನಿ ಹಾಗೂ ಜಲ ಇವೆರಡು ಮಹಾಭೂತಗಳಿಂದ ಲವಣ ರಸದ ನಿರ್ಮಾಣ ವಾಗುವದು.

ವಿಪಾಕ: —

स्वादुपट्वश्च मधुरः

ಈ ನಿಯಮಕ್ಕನುಸಾರವಾಗಿ ಲವಣ ರಸದ ವಿಪಾಕವು ಮಧುರವಾಗುವದು.

ವೀರ್ಯ: —

लवणः नाति गुरुः तीक्ष्णोष्णश्च ।

ಲವಣ ರಸದಲ್ಲಿ ಅಗ್ನಿಮಹಾಭೂತವಿರುವದರಿಂದ ಇದರ ವೀರ್ಯವು ಉಷ್ಣ ಇರುವದು. ಲವಣ ರಸದ ಅಂತರ್ಭಾವವು ಆಗ್ನೇಯ ಪ್ರಕಾರದಲ್ಲಿ ಬರುವದು.

ದೋಷದ ಮೇಲಿನ ಕಾರ್ಯ: —

तत्राद्या मारुतं घ्नंति (अ. हृ. सू.)

कट्वम्ल लवणाः पित्तं जनयति (च. वि.)

विष्यंदयाति चैनं लवणः (र. वै.)

रसाः स्वयोनि वर्धना अन्ययोनि प्रशमनाश्च (सु. सू. ४२)

ಲವಣ ರಸದಲ್ಲಿ ವಾತದ ಗುಣಗಳ ವಿರುದ್ಧ ಗುಣಗಳು ಇರುವದರಿಂದ ವಾತವನ್ನು ಶಮನ ಮಾಡುತ್ತದೆ. ತೀಕ್ಷ್ಣ, ಉಷ್ಣ ಗುಣಗಳಿಂದ ಪಿತ್ತವನ್ನು ಅಭಿಷ್ಯಂದನ ಗುಣಗಳಿಂದ ಕಫವರ್ಧನ ಮಾಡುತ್ತದೆ.

ಧಾತುವಿನ ಮೇಲಿನ ಕಾರ್ಯ:—

ಲವಣ ರಸವು ಧಾತುಗಳ ನಾಶ ಮಾಡುವಂಥದು, ಧಾತುಗಳಲ್ಲಿ ಶಿಥಿಲತೆಯನ್ನುಂಟು ಮಾಡುವಂಥದು ಇರುತ್ತದೆ. ಇದು ಅವೃಷ್ಯವಿರುವದು.

ಮಲದ ಮೇಲಿನ ಕಾರ್ಯ:—

पट्वम्ल मधुराः स्निग्धाः सृष्ट विण्मूत्र मारुताः ।
स्वेदनः (च. सू. अ. २६)

ಲವಣ ರಸವು ಮಲ, ಮೂತ್ರ ಹಾಗೂ ವಾಯುವಿನ ಅನುಲೋಮನ ಮಾಡುವಂಥದು ಇರುತ್ತದೆ. ಲವಣ ರಸವು ಅಗ್ನಿ ಹಾಗೂ ಜಲ ಪ್ರಧಾನವಿರುವದರಿಂದ ಶರೀರದ ಮಲಗಳಲ್ಲಿ ಕ್ಲಿನ್ನತೆಯನ್ನು ತಂದು ಹೊರಗೆ ಹಾಕುತ್ತದೆ ಸ್ವೇದವನ್ನುಂಟು ಮಾಡುವಂಥದು ಇರುತ್ತದೆ.

ಕರ್ಮ:—

लवण: स्तंभ संघात बंध विध्मापनोऽग्निकृत् ।
स्नेहनः स्वेदनः तीक्ष्णो रोचनश्छेदभेदकृत् ॥ अ. हृ. सू. अ. १०)

लवणो रसः पाचनः क्लेदनो दीपनः च्यावनः छेदनो भेदनः तीक्ष्णः सरो विकासी अधःस्रंसी, अवकाशकरो वातहरः स्तंभ–बंध–संघात–विधमनः, सर्वरस प्रत्यनीकभूतः, आस्यमास्रावयति, कफं विष्यंदयति, मार्गान् विशोधयति, सर्व शरीरावयवान् मृदू करोति रोचयत्याहारं आहारयोगी । (च. सू. अ. २६)

ಲವಣ ರಸವು ಪಚನ ಮಾಡುವಂಥದು, ಕ್ಲಿನ್ನತೆಯನ್ನುಂಟು ಮಾಡುವಂಥದು, ಜಠರಾಗ್ನಿ ದೀಪ್ತಿ ಮಾಡುವಂಥದು, ಶರೀರಸ್ಥ ಧಾತುಗಳನ್ನು ಸ್ಥಾನಭ್ರಷ್ಟ ಮಾಡುವಂಥದು, ಛೇದನ, ಭೇದನ ಮಾಡುವಂಥದು, ತೀಕ್ಷ್ಣ, ಸರ, ವಿಕಾಶಿ, ಅನುಲೋಮನ ಮಾಡುವಂಥದು, ಸ್ರೋತಸ್ಸುಗಳಲ್ಲಿ ಸೇರಿ ಅಲ್ಲಿಗೆ ಶಿಥಿಲತೆಯನ್ನುಂಟು ಮಾಡುವಂಥದು, ವಾತಶಾಮಕ, ಮಲಮೂತ್ರಗಳ ಅವರೋಧವನ್ನು ದೂರ ಮಾಡುವಂಥದು, ಎಲ್ಲ ರಸಗಳ ಪ್ರತ್ಯನೀಕ ಅಂದರೆ ಸರ್ವರಸಗಳ ರುಚಿಯನ್ನು ನಾಶಮಾಡುವಂಥದು, ಮುಖದಲ್ಲಿ ಸ್ರಾವವನ್ನುಂಟು ಮಾಡುವಂಥದು, ಕಫವಿಲಯನ ಮಾಡಿ ಹೊರಗೆ ಹಾಕುವಂಥದು, ಸ್ರೋತೋ ಮಾರ್ಗವನ್ನು ಶುದ್ಧ ಮಾಡುವಂಥದು, ಆಹಾರಕ್ಕೆ ರುಚಿಯನ್ನು ಕೊಡುವಂಥದು ಹಾಗೂ ಆಹಾರದಲ್ಲಿ ಯಾವಾಗಲೂ ಉಪಯೋಗ ಬೀಳುವಂಥದು ಇರುತ್ತದೆ.

ಲವಣ ರಸದ ಅತಿ ಸೇವನೆಯಿಂದ ಆಗುವ ಪರಿಣಾಮಗಳು:—

सोऽतियुक्तोऽस्र पवनं खलतिं पलितं वलिम् ।
तृट् कुष्ठ विष विसर्पान् जनयेत् क्षपयेद्बलम् ॥ (अ. सू. अ. १०)

स एवं गुणोऽप्येक एवात्यर्थमुपयुज्यमानः पित्तं कोपयति, रक्तं वर्धयति, तर्षयति, मूर्च्छयति, तापयति, दारयति, कुष्णाति मांसानि, प्रगालयति कुष्ठानि, विषं वर्धयति,

शोफान् स्फोटयति, दंतान् चावयति पुंस्त्वमुपहंति, इंद्रियाण्युपरुणद्धि, वलि पलित खालित्यमापादयति, अपि च लोहित–पित्ताम्लपित्त–विसर्प, वातरक्त, विचर्चिकेन्द्रलुप्त, प्रभृतीन् विकारानुपजनयति। (च. सू अ. २६)

ಲವಣ ರಸದ ಅತಿ ಸೇವನೆಯಿಂದ ಪಿತ್ತಪ್ರಕೋಪ, ರಕ್ತಪ್ರಕೋಪ, ತೃಷ್ಣಾ, ಮೂರ್ಛಾ, ಖಲತ, ಪಲಿತ, ಶರೀರದ ಮೇಲೆ ನೀರಿಗೆ ಬೀಳುವದು, ಶರೀರವು ಸೀಳಿದಂತೆ ಆಗುವದು, ಮಾಂಸವು ಕೊಳೆಯುವದು, ಕುಷ್ಠದಲ್ಲಿ ಸ್ರಾವ ಉತ್ಪನ್ನವಾಗುವದು, ವಿಷ ಸೇವನೆ ಮಾಡಿದ್ದರೆ ಅದರ ವೃದ್ಧಿ, ಶೋಥವು ಒಡೆಯುವದು, ಹಲ್ಲುಗಳು ಉದುರುವವು, ನಪುಂಸಕತೆ, ಇಂದ್ರಿಯ ದೌರ್ಬಲ್ಯ, ತ್ವಚೆಯ ಮೇಲೆ ಸೀಳಿದಂತೆ ಆಗುವದು. ಕೂದಲು ಬೆಳ್ಳಗಾಗೋಣ, ರಕ್ತಪಿತ್ತ, ಅಮ್ಲಪಿತ್ತ, ವಿಸರ್ಪ, ವಿಚರ್ಚಿಕಾ, ಇಂದ್ರಲುಪ್ತ, ವಾತ ರಕ್ತ, ಕಂಡೂ, ಶೋಥ, ಶರೀರದ ವರ್ಣದಲ್ಲಿ ಬದಲಾವಣೆಯಾಗುವದು, ಇಂದ್ರಿಯ ತಾಪ, ಮುಖಪಾಕ, ನೇತ್ರಪಾಕ, ಅನ್ನವು ವಿದಾಹಿಯಾಗುವದು, ಬಲಕ್ಷಯ, ಓಜ ಕ್ಷಯ, ಕುಷ್ಠ ಆದಿ ವಿಕಾರಗಳು ಉತ್ಪನ್ನವಾಗುವವು.

ಕಟು ರಸ:—

ಲಕ್ಷಣ:—

यो जिह्वाग्रं बाधते, उद्वेगं जनयति, शिरो गृह्णीते, नासिकां च स्रावयति, स कटुकः। (सु. सू. ४२)

संवेजयेद्यो रसनं निपाते तुदतीव च।
विदहन्मुखनासाक्षिसंस्रावि स कटुः स्मृतः॥ (च. सू. २६)

कटुको भृशमुद्वेजयति जिह्वाग्रं चिमचिमायति, कण्ठ कपोलं स्रावयति, मुखाक्षिनासिकं विदहति देहम्। (अ. स. सू. अ. १८)

ಯಾವುದು ಬಾಯಿಯಲ್ಲಿ ಹಾಕಿಕೊಂಡ ಕೂಡಲೇ ನಾಲಿಗೆಯ ತುದಿಯಲ್ಲಿ ಸೂಜಿಯಿಂದ ಚುಚ್ಚಿದಂತೆ ವೇದನೆ ಮಾಡುತ್ತದೆಯೋ, ಉದ್ವೇಗವನ್ನು ಮಾಡು ವಂಥದು, ಮುಖ, ನಾಸಾ, ಅಕ್ಷಿಗಳಲ್ಲಿ ಸ್ರಾವವನ್ನು ಉಂಟು ಮಾಡುವಂಥದು ಹಾಗೂ ಕಂಠ, ನಾಸಾಕ್ಷಿ ದೇಹದಲ್ಲಿ ವಿದಾಹವನ್ನು ಮಾಡುವಂಥ ರಸವೆಂದರೆ ಅದು ಕಟು ರಸವು.

ಗುಣ:—

कटुको रसः..........लघुः उष्णो रूक्षश्च। (च. सू. २६)
कटुको..........लघु रूक्ष तीक्ष्णोष्णश्च॥ (अ. सं. सू.)

ಕಟು ರಸವು ಲಘು, ರೂಕ್ಷ, ಉಷ್ಣ ಹಾಗೂ ತೀಕ್ಷ್ಣ ಗುಣವುಳ್ಳದ್ದು ಇರುತ್ತದೆ. ಇದರಲ್ಲಿ ಅಗ್ನಿತತ್ವದ ಮೂಲಕ ತೀಕ್ಷ್ಣ ಹಾಗೂ ಉಷ್ಣ ಗುಣಗಳೂ ವಾಯು ಮಹಾ ಭೂತದಿಂದ ಲಘು ಹಾಗೂ ಸೂಕ್ಷ್ಮ ಗುಣಗಳು ಬಂದಿರುತ್ತವೆ.

ಪಾಂಚಭೌತಿಕ ಆಧಾರಃ—

वायु अग्नि भूयिष्ठत्वात् कटुकः (च. सू.)

वाय्वग्निगुण बाहुल्यात् कटुकः (सु. सू.)

वायु अग्निः (अ. हृ. सू.)

ಅಗ್ನಿ ಹಾಗೂ ವಾಯು ಇವೆರಡು ಮಹಾಭೂತಗಳಿಂದ ಕಟು ರಸದ ನಿರ್ಮಿತಿ ಯಾಗುವದು.

ವಿಪಾಕಃ—

तिक्तोषण कषायाणां विपाकः प्रायशः कटुः ।

विपाकस्तु प्रायः ... कटुः इतरेषां । (अ. स. सू. अ. १७)

ಪ್ರಾಯಶಃ ಕಟು ರಸದ ವಿಪಾಕವು ಕಟು ಆಗುತ್ತದೆ. ಉದಾಃ— ಚಿತ್ರಕ, ತ್ರಿಕಟು, ದಂತೀ ಹಿಂದೆ ಹೇಳಿದಂತೆ ಕೆಲವು ಕಟುರಸ ದ್ರವ್ಯಗಳ ಹೊರತಾಗಿ ಬಹುಶಃ ಎಲ್ಲ ಕಟುರಸ ದ್ರವ್ಯಗಳ ವಿಪಾಕವು ಕಟು ಆಗುತ್ತದೆ.

ವೀರ್ಯಃ—

ಕಟು ರಸವು ಆಗ್ನೇಯ ವರ್ಗದಲ್ಲಿ ಬರುವದರಿಂದ ಇದರ ವೀರ್ಯವು ಉಷ್ಣ ವಿರುತ್ತದೆ.

कट्वम्ल लवणाः आग्नेयाः । (सु. सू. ४२)

ದೋಷಗಳ ಮೇಲೆ ಕಾರ್ಯಃ—

त्रयः तिक्तादयः कफम् (अ. हृ. सू.)

रौक्ष्य लाघव काटुक्यैरेव वायुं कोपयति कटुकः (र. वै.)

तस्य पुनरन्ययोनिः कटुको रसः स श्लेष्मणः प्रत्यनीकत्वात् कटुकत्वात् माधुर्यमभिभवति, रौक्ष्यात् स्नेहं, लाघवात् गौरवम्, औष्ण्यात् शैत्यम् वैशद्यात् पैच्छिल्यत्वम्, इति ।

ಕಟು ರಸವು ಕಫನಾಶಕವಿರುವದು. ವಾತ ಹಾಗೂ ಪಿತ್ತ ವರ್ಧಕವಿರುವದು. ತನ್ನ ರೂಕ್ಷ ಹಾಗೂ ಲಘು ಗುಣಗಳಿಂದ ವಾತಪ್ರಕೋಪ ಮಾಡುವದು. ಶ್ಲೇಷ್ಮದ ಮಧುರತ್ವವನ್ನು ತನ್ನ ಕಟು ರಸದಿಂದ, ಸ್ನೇಹವನ್ನು ರೂಕ್ಷಗುಣದಿಂದ, ಗುರು ಗುಣ ವನ್ನು ಲಘು ಗುಣದಿಂದ, ತನ್ನ ಉಷ್ಣ ಗುಣದಿಂದ ಶೀತಗುಣವನ್ನು, ತನ್ನ ವಿಶದ ಗುಣದಿಂದ ಪಿಚ್ಛಿಲ ಗುಣವನ್ನು ನಾಶಮಾಡುವದರಿಂದ ಇದು ಶ್ಲೇಷ್ಮಘ್ನ ಇರುವದು.

ಧಾತುಗಳ ಮೇಲೆ ಕಾರ್ಯಃ—

ಕಟು ರಸವು ಧಾತುಗಳ ನಾಶ ಮಾಡುವಂಥದು, ಲೇಖನವಿದ್ದು ಅವೃಷ್ಯವಿರುವದು.

ಮಲಗಳ ಮೇಲೆ ಕಾರ್ಯ:—

तिक्तः कटुः कषायश्च रुक्षा बद्धमलास्तथा । अ. हृ. सू. अ १०)

स्वेद क्लेद मलानुपहंति । (च. सू.)

ಕಟು ರಸವು ಶರೀರದಲ್ಲಿ ಕ್ಲೇದ, ಸ್ವೇದ, ಮಲಗಳಲ್ಲಿಯ ಅಪ್ಯತತ್ವವನ್ನು ಶೋಷಣ ಮಾಡಿಕೊಳ್ಳುವದರಿಂದ ಶರೀರದಲ್ಲಿ ಎಲ್ಲೆಲ್ಲಿಗೆ ಮಲವಿರುತ್ತದೆಯೋ ಅದನ್ನು ಅಲ್ಲಿಯೇ ಶೋಷಣಮಾಡಿ ತಡೆಯುನ್ನುಂಟುಮಾಡುತ್ತದೆ.

ಕರ್ಮ:—

कटुको रसो वक्त्रं शोधयति, अग्निं दीपयति, भुक्तं शोषयति, घ्राणमास्रावयति चक्षुर्विरेचयति, स्फुटीकरोतींद्रियाणि, अलसक श्वयथूपचयोदर्दाभिष्यंद-स्नेह, स्वेद-क्लेद-मलानुपहंति, रोचयत्यशनं, कण्डूर्विनाशयति, व्रणानवसादयति, कृमीन् हिनस्ति मांसं विलिखति, शोणित संघातं भिनत्ति, बंधान्छिनत्ति, मार्गान् विवृणोति, श्लेष्माणंशमयति । (च. सू. अ. २६)

कटुर्गलामयोदर्द कुष्ठालसक शोफजित् ।
व्रणावसादनः स्नेह मेदः क्लेदोपशोषणः ॥
दीपनः पाचनो रुच्यः शोधनोऽन्नस्य शोषणः ।
छिनत्ति बंधान् स्रोतांसि विवृणोति कफापहः ॥ (अ. हृ. सू. १०)

ಕಟು ರಸವು ಮುಖಶೋಧನ ಮಾಡುವಂಥದು, ಅಗ್ನಿಪ್ರದೀಪ್ತ ಮಾಡುವಂಥದು, ಉಂಡ ಅನ್ನದ ಶೋಷಣೆ ಮಾಡುವಂಥದು, ನಾಸಾ, ಅಕ್ಷಿಗಳಲ್ಲಿ ನೀರನ್ನು ತರುವಂಥದು, ಇಂದ್ರಿಯಗಳಿಗೆ ಉತ್ತೇಜನ ನೀಯುವಂಥದು, ಅಲಸಕ (ಅಜೀರ್ಣದ ಒಂದು ಪ್ರಕಾರ) ಶ್ವಯಥು, ಸ್ಥೂಲತ್ವ, ಉದರ್ದ, ಅಭಿಷ್ಯಂದ, ಸ್ನೇಹ, ಸ್ವೇದ, ಮಲಗಳ ನಾಶಮಾಡುವಂಥದು ಇರುತ್ತದೆ. ಅನ್ನಕ್ಕೆ ರುಚಿಕೊಡುವದು, ಕಂಡೂನಾಶಕ, ವ್ರಣರೋಪಕ, ಕೃಮಿಘ್ನ, ಮಾಂಸಚ್ಛೇದಕ (ಕೃಶ ಮಾಡುವಂಥದು), ರಕ್ತವು ಗಟ್ಟಿಯಾಗಿದ್ದರೆ ಅದನ್ನು ಒಡೆಯುವಂಥದು, ಶರೀರದಲ್ಲಿ ಸ್ರೋತಸ್ಸುಗಳಲ್ಲಿ ಅವರೋಧವಾಗಿದ್ದರೆ ಅದನ್ನು ದೂರ ಮಾಡುವಂಥದು, ಸೂಕ್ಷ್ಮಸ್ರೋತೋಗಾಮಿ ಹಾಗೂ ಶ್ಲೇಷ್ಮಘ್ನ ವಿರುತ್ತದೆ.

ಕಟು ರಸದ ಅತಿಸೇವನೆಯಿಂದ ಆಗುವ ಪರಿಣಾಮಗಳು:—

स एवं गुणोऽप्येक एवात्यर्थमुपयुज्यमानो विपाकप्रभावात् पुंस्त्वमुपहंति, रस-वीर्य-प्रभावान्मोहयति, ग्लापयति, सादयति, कर्शयति, मूर्च्छयति, नमयति, तमयति भ्रमयति, कण्ठं परिदहति, शरीर तापमुपजनयति, बलं क्षिणोति तृष्णां जनयति, अपि च वाय्वग्नि गुण बाहुल्यात् भ्रम दवथु, कम्प तोद, भेदैश्चरण-भुज, पीछु, पार्श्व, पृष्ठ प्रभृतिषु मारुतजान् विकारान् उपजनयति । (च. सू. अ. २६)

ನಪುಂಸಕತ್ವ, ಮೋಹ, ಮೂರ್ಛೆ, ಗ್ಲಾನಿ, ಶಿಥಿಲತಾ, ಅವಸಾದ, ಕೃಶತಾ, ಭ್ರಮಣ, ಶರೀರವನ್ನು ಅಬಲಮಾಡಿ ಬಗ್ಗಿಸುವದು, ಕಂಠದಾಹ, ಶರೀರದಾಹ, ತಾಪ ವೃದ್ಧಿ, ಬಲಕ್ಷಯ, ತೃಷ್ಣಾ, ಕಂಪ, ಸೂಜಿಚುಚ್ಚಿದಂತೆ ವೇದನೆ, ಹಸ್ತ, ಪಾದ, ಪೃಷ್ಠ, ಪಾರ್ಶ್ವ ಆದಿಗಳ ವಿವಿಧ ವಾತವೇದನೆ, ಗಲ, ತಾಲು, ಓಷ್ಠಗಳು ಶುಷ್ಕವಾಗುವವು, ಶುಕ್ರಕ್ಷಯ, ಆದಿ ವಿಕಾರಗಳನ್ನುಂಟು ಮಾಡುವದು.

ಅಷ್ಟಾಂಗ ಹೃದಯದಲ್ಲಿ ಕಟು ರಸದ ಅತಿಸೇವನೆಯಿಂದ ಈ ಲಕ್ಷಣಗಳು ಉತ್ಪನ್ನವಾಗುತ್ತವೆಯೆಂದು ಹೇಳಿದ್ದಾರೆ.

कुरुते सोऽतियोगेन तृष्णां शुक्र बलक्षयम् ।
मूर्च्छामाकुञ्चनं कम्पं कटिपृष्ठादिषु व्यथाम् ॥ अ. हृ. सू. १०

ತಿಕ್ತ ರಸ—

ಲಕ್ಷಣಃ—

प्रतिहंति निपाते यो रसनं स्वदते न च ।
स तिक्तो मुख वैशद्य शोषप्रल्हाद कारकः ॥ च. सू. अ. २६

यो गले चोषमुत्पादयति, मुख वैशद्यं जनयति भक्तरुचिं चापादयति हर्षं, च स तिक्तः । सु. सू. ४२

तिक्तो विशदयति वदनं, विशोधयति कण्ठं प्रतिहंति रसनाम् ।
(अ. सं सू. १८)

तिक्तो रसः स्वयमरोचिष्णुरप्यरोचकघ्नः । (च. सू. अ. २६)

ಯಾವ ರಸದ ಸೇವನೆಯಿಂದ ಬೇರೆ ರಸಗಳ ರುಚಿ ತಿಳಿಯುವದಿಲ್ಲವೋ ಹಾಗೂ ಕಂಠದಲ್ಲಿ ಪೀಡೆಯನ್ನುಂಟು ಮಾಡುವಂಥ, ಗಲ ವಿಶೋಧನೆ ಮಾಡುವಂಥ, ಅರುಚಿಹರ ರಸವೆಂದರೆ ತಿಕ್ತರಸವು ಎಂದು ತಿಳಿಯಬೇಕು. ಇದು ಅಪ್ರಿಯವಿರುವದು.

ಗುಣಃ—

तिक्तो रसः ...... रूक्षः शीतो लघुश्च । च. सू.

ತಿಕ್ತ ರಸವು ರೂಕ್ಷ, ಶೀತ, ಲಘು ಗುಣಗಳುಳ್ಳದ್ದು ಇರುತ್ತದೆ. ಇದರಲ್ಲಿ ವಾಯು ಮಹಾಭೂತದಿಂದ ರೂಕ್ಷ ಹಾಗು ಶೀತ ಗುಣ; ಲಘು ಗುಣವು ಆಕಾಶದ್ದು ಇರುತ್ತದೆ.

ಪಾಂಚಭೌತಿಕ ಆಧಾರಃ—

वायु आकाशयोः तिक्तः (अ. सं.)
तिक्तं खस्य वायोश्च (र. वै.)
वायु आकाश गुण बाहुल्यात् तिक्तः (सु. सू. ४२)

ತಿಕ್ತ ರಸವು ವಾಯು ಹಾಗು ಆಕಾಶಗುಣ ಬಾಹುಲ್ಯದಿಂದ ನಿರ್ಮಿತವಾಗಿದೆ.

ವಿಪಾಕಃ—

तिक्तोषण कषायाणां विपाकः प्रायशः कटु :। (अ. सू. अ. ९)

ತಿಕ್ತ ರಸದ ವಿಪಾಕವು ಕಟು ಆಗುತ್ತದೆ.

ವೀರ್ಯಃ—

ತಿಕ್ತ ರಸದ ವೀರ್ಯವು ಶೀತವಿರುತ್ತದೆ.

ದೋಷಗಳ ಮೇಲೆ ಕಾರ್ಯ—

शैत्य रौक्ष्य वैशद्य लाघव मार्दवैरेनं कोपयति तिक्तः। (र. वै.)

ತಿಕ್ತ ರಸವು ಶೀತ, ರೂಕ್ಷ, ವಿಶದ, ಲಘು ಆದಿ ವಾಯುದೋಷದ ಸಮಾನ ಗುಣಗಳಿರುವದರಿಂದ ವಾಯುವನ್ನು ಕುಪಿತಗೊಳಿಸುತ್ತದೆ. ಶೀತ ಗುಣದಿಂದ ಪಿತ್ತ ವನ್ನು ಉಳಿದ ಎಲ್ಲ ಗುಣಗಳಿಂದ ಶ್ಲೇಷ್ಮನಾಶಕವಿರುತ್ತದೆ.

ಧಾತುವಿನ ಮೇಲೆ ಕಾರ್ಯಃ—

ತಿಕ್ತ ರಸವು ಧಾತುಗಳ ನಾಶ ಮಾಡುವಂಥದು ಇರುತ್ತದೆ. ಇದು ಅಸೃಕ್, ಮೇದ, ವಸಾ, ಮಜ್ಜಾ, ಲಸಿಕಾ ಇವುಗಳ ಶೋಷಣ ಮಾಡುತ್ತದೆ.

ಮಲಗಳ ಮೇಲೆ ಕಾರ್ಯಃ—

तिक्तः कटुः कषायश्च रुक्षाबद्धमलास्तथा। (अ. हृ. सू. अ. १०)

शकृन्मूत्रोप शोषणः। (अ. हृ.)

पूय-स्वेद-मूत्र, पुरीष, पित्त, श्लेष्मोप शोषणः। (च. सू. अ २६)

ತಿಕ್ತ ರಸವು ಮಲಬದ್ಧತೆಯನ್ನುಂಟು ಮಾಡುತ್ತದೆ. ಪೂಯ, ಸ್ವೇದ, ಮೂತ್ರ ಪುರೀಷ, ಪಿತ್ತ ಹಾಗೂ ಕಫಗಳ ಶೋಷಣೆಯನ್ನು ಮಾಡುತ್ತದೆ.

ಕರ್ಮಃ—

तिक्तो रसः स्वयमरोचिष्णुरप्यरोचकघ्नो विषघ्नः, कृमिघ्नो मूर्छा-दाह-कण्डू-कुष्ठ-तृष्णा प्रशमनः, त्वक्मांसयोः स्थिरीकरणो, ज्वरघ्नो, दीपनः, पाचनः, स्तन्यशोधनो, लेखनः, क्लेद-मेदो वसा, मज्जा लसीका पूय स्वेद-मूत्र-पुरीष-पित्त-श्लेष्मोपशोषणः। (च. सू. अ. २६)

तिक्तः स्वयमरोचिष्णुररुचिं कृमि विड् विषम्।
कुष्ठ मूर्च्छा ज्वरोत्क्लेश दाह पित्त कफान् जयेत्॥
क्लेद मेदो वसा मज्जा शकृन्मूत्रोपशोषणः।
लघुर्मेध्यो हिमो रूक्षः स्तन्य कण्ठ विशोधनः॥ अ. हृ. सू.

ತಿಕ್ತ ರಸವು ಅರುಚಿಯನ್ನು ಮಾಡುವಂಥದಿದ್ದರೂ: ಅರುಚಿನಾಶಕವಿರುವದು. ತಿಕ್ತರಸದಿಂದ ಶ್ಲೇಷ್ಮನಾಶವಾಗಿ ಮುಖವಿಶೋಧನೆಯಾಗುವದರಿಂದ ಇದು ಅನ್ನಕ್ಕೆ

ರುಚಿಯನ್ನುಂಟುಮಾಡುವದು. ತಿಕ್ತರಸದ ಅಂಶ ಬಾಯಿಯಲ್ಲಿರುವವರೆಗೆ ಇತರ ರಸಗಳ ಜ್ಞಾನವಾಗುವದಿಲ್ಲ. ವಾತ ಪ್ರಕೋಪದ ಮೂಲಕ ರಸಜ್ಞಾನ ಮಾಡುವ ಧಮನಿಗಳ ಜ್ಞಾನವು ಕೆಲವು ವೇಳೆಯವರೆಗೆ ನಾಶವಾಗುವದು. ಆದ್ದರಿಂದ ಇತರ ರಸಗಳ ಜ್ಞಾನವಾಗುವದಿಲ್ಲ.

ತಿಕ್ತ ರಸವು ವಿಷಘ್ನ, ಕೃಮಿಘ್ನ, ಮೂರ್ಛಾ, ದಾಹ, ಕಂಡೂ, ಕುಷ್ಠ ಹಾಗೂ ತೃಷ್ಣಾ ಶಾಮಕವಿರುವದು. ತ್ವಚಾ, ಮಾಂಸಗಳಿಗೆ ಸ್ಥೈರ್ಯವನ್ನು ಕೊಡುವದು. ಜ್ವರಘ್ನ ಅಗ್ನಿದೀಪನ ಮಾಡುವಂಥದು, ಪಾಚಕ, ದುಗ್ಧವಿಶೋಧಕ, ಸ್ಥೂಲತ್ವಹರವಿರುವದು, ಕ್ಲೇದ, ಮೇದ, ವಸಾ, ಮಜ್ಜಾ, ಲಸಿಕಾ, ಪೂಯ, ಮೂತ್ರ, ಪುರೀಷ, ಪಿತ್ತ ಹಾಗೂ ಕಫಗಳ ಶೋಷಣೆ ಮಾಡುವಂಥದು ಇರುತ್ತದೆ.

ತಿಕ್ತ ರಸದ ಅತಿಸೇವನೆಯಿಂದ ಆಗುವ ಪರಿಣಾಮಗಳು:—

स एवं गुणोऽप्येक एवात्यर्थमुपयुज्यमानो रौक्ष्यात् खर–विशद स्वभावाच्च रस-रुधिर-मांस-मेदोऽस्थि,–मज्जा शुक्राण्युच्छोषयति-स्रोतसां खरत्वमापादयति, बलमादत्ते,–कर्शयति–ग्लापयति–मोहयति–भ्रमयति–वदनमुपशोषयति,–अपरांश्च वात–विकारानुपजनयति। (च. सू. अ. २६)

धातुक्षयानिल व्याधीनतियोगात् करोति सः। (अ. हृ. सू. १०)

ತಿಕ್ತ ರಸದ ಅತಿಸೇವನೆಯಿಂದ ಅದು ರಸ, ರಕ್ತ, ಮಾಂಸ, ಮೇದ, ಅಸ್ಥಿ, ಮಜ್ಜಾ, ಶುಕ್ರ ಧಾತುಗಳನ್ನು ಶುಷ್ಕ ಮಾಡುತ್ತದೆ. ಈ ಕಾರ್ಯವು ತಿಕ್ತ ರಸದ ರೂಕ್ಷ, ಖರ, ವಿಶದ ಗುಣಗಳಿಂದ ಆಗುತ್ತದೆ. ಸ್ರೋತಸ್ಸುಗಳು ಕಠಿಣವಾಗುತ್ತವೆ. ಬಲಕ್ಷಯ, ಕೃಶತ್ವ, ಗ್ಲಾನಿ, ಶಿಥಿಲತಾ, ಮೂರ್ಛಾ, ಭ್ರಮ, ಮುಖಶೋಷ, ಮನ್ಯಾಸ್ತಂಭ, ಆಕ್ಷೇಪ, ಅರ್ದಿತ, ಶಿರಃಶೂಲ ಆದಿ ವಾತವಿಕಾರಗಳನ್ನುಂಟು ಮಾಡುತ್ತದೆ. ಮುಖವೈರಸ್ಯ, ಹಸ್ತ, ಪಾದ, ಪಾರ್ಶ್ವಗಳಲ್ಲಿ ವೇದನೆಯನ್ನುಂಟು ಮಾಡುತ್ತದೆ.

ಕಷಾಯ ರಸ:—

ಲಕ್ಷಣ:—

वैशद्यस्तंभजाड्यैर्यो रसनं योजयेद्रसः।
बध्नातीव च यः कण्ठं कषायः स विकास्यपि॥ (च. सू. अ. २६)

यो वक्त्रं परिशोषयति, जिव्हां स्तंभयति, कण्ठं बध्नाति, हृदयं कर्षति पीडयति स कषाय इति। (सु. सू. अ. ४२)

कषायस्य मुखपरिशोषः, श्लेष्म संवृत्तिः गौरवं स्तंभश्च। र. वै.

ಯಾವ ರಸದ ಆಸ್ವಾದನೆಯಿಂದ ಮುಖವಿಶದತಾ, ಕಂಠಜಾಡ್ಯ, ಜಿವ್ಹಾಸ್ತಂಭ ಕಂಠದಲ್ಲಿ ಕಟ್ಟಿದಂತೆ ಆಗುವದು, ಹೃದಯದಲ್ಲಿ ಪೀಡೆಯಾಗುವದೋ ಅದು ಕಷಾಯ ರಸವೆಂದು ತಿಳಿಯಬೇಕು.

ಗುಣ:-

कषायो रसः.........रूक्षः शीतोऽलघुश्च । (च. सू. २६)

ಕಷಾಯ ರಸವು ರೂಕ್ಷ, ಶೀತ, ಲಘು ಗುಣಾತ್ಮಕವಿರುವದು.

ಪಾಂಚಭೌತಿಕ ಆಧಾರಃ-

पवनपृथ्वी व्यतिरेकात् कषाय इति । (च. सू.)

क्ष्मा अनिलैः (अ. हृ.)

वाय्वूर्व्योः कषायः (अ. संग्रह).

पृथिव्यनिल गुण बाहुल्यात् कषायः (सु. सू.)

ಕಷಾಯ ರಸವು ಪೃಥ್ವಿ ಹಾಗೂ ವಾಯು ಮಹಾಭೂತಾಧಿಕ್ಯತೆಯಿಂದ ನಿರ್ಮಿತ ವಾಗಿದೆ.

ವಿಪಾಕ:—

तिक्तोषण कषायाणां विपाकः प्रायशः कटुः ।

ಕಷಾಯ ರಸದ ವಿಪಾಕವು ಕಟು ಆಗುವದು.

ವೀರ್ಯ:—

तत्र मधुर तिक्त कषायाः सौम्याः (सु. सू.)

ಕಷಾಯ ರಸದ ವೀರ್ಯವು ಸೌಮ್ಯ ಅಂದರೆ ಶೀತವಿರುತ್ತದೆ.

ದೋಷದ ಮೇಲಿನ ಕಾರ್ಯ:

तत्र शैत्य रौक्ष्य लाघव वैशद्य वैष्टभ्य गुण लक्षणो वायुः तस्य समानयोनिः कषायो रसः, सोऽस्य शैत्याच्छैत्यं वर्धयति, रौक्ष्याद्रौक्ष्यं, लाघवाल्लाघवं, वैशद्याद् वैशद्यं, वैष्टभ्याद् वैष्टभ्यमिति । (सु. सू. अ. ४२)

मधुर तिक्त कषायाः पित्तम् । (अ. हृ.)

ಕಷಾಯ ರಸವು ಪೃಥ್ವಿ ಹಾಗೂ ವಾಯು ಮಹಾಭೂತ ಪ್ರಧಾನವಿರುವದು. ಇದರ ಎಲ್ಲ ರೂಕ್ಷ, ಶೀತ ಆದಿ ಗುಣಗಳು ವಾತದೋಷದ ಸಮಾನ ಯೋನಿಯುಳ್ಳವು ಇರುವದರಿಂದ ವಾತವನ್ನು ಕುಪಿತಮಾಡುತ್ತದೆ. ತದ್ವಿರುದ್ಧ ಯೋನಿಗಳು ಪಿತ್ತ ಹಾಗೂ ಶ್ಲೇಷ್ಮ ದೋಷಗಳದ್ದು ಇರುವದರಿಂದ ಪಿತ್ತ ಹಾಗೂ ಕಫದೋಷನಾಶಕವಿರುವದು.

ಧಾತುವಿನ ಮೇಲೆ ಕಾರ್ಯ:—

ಕಷಾಯ ರಸವು ಸರ್ವಧಾತುಗಳ ಶೋಷಣ ಮಾಡುವಂಥದು ಹಾಗೂ ಲೇಖನ ಮಾಡುವಂಥದು ಇರುತ್ತದೆ. ವಿಶೇಷವಾಗಿ ರಕ್ತ ಹಾಗೂ ಮೇದ ಧಾತುಗಳ ಮೇಲೆ ಇದರ ಕಾರ್ಯವಾಗುವದು. ರಕ್ತಶೋಧಕ ಕಾರ್ಯವು ಕಷಾಯ ರಸದಿಂದ ಆಗುವದು. ಕಷಾಯ ರಸದ ರೂಕ್ಷ ಗುಣದ ಮೂಲಕ ಮೇದಕ್ಷಯ ಆಗುವದು.

ಮಲಗಳ ಮೇಲಿನ ಕಾರ್ಯ:—

तिक्तःकटुः कषायश्च रुक्षा बद्धमलास्तथा । (अ. हृ. सू.)

ಕಷಾಯ ರಸವು ಮಲಬದ್ಧತೆಯನ್ನುಂಟು ಮಾಡುವದು. ಇದು ಸಂಗ್ರಾಹಿ ಗುಣದ್ದು ಇರುವದರಿಂದ ಮಲದಲ್ಲಿಯ ದ್ರವ್ಯ ಹಾಗೂ ಸ್ನಿಗ್ಧ ಗುಣಗಳ ಶೋಷಣೆಯನ್ನು ಮಾಡಿ ಮಲದ ರೋಧವಾಗುವದು. ಮೂತ್ರ ಪ್ರವೃತ್ತಿಯೂ ಕಡಿಮೆಯಾಗುವದು.

ಕರ್ಮ:—

कषायो रसः संशमनः, संग्राही, संधानकरः, पीडनो, रोपणः, शोषणः, स्तंभनः, श्लेष्म-रक्त-पित्त-प्रशमनः, शरीर क्लेदस्योपयोक्ता । (च. सू. अ. २६)

कषायः पित्तकफहा गुरुरस्रविशोधनः ।
पीडनो रोपणः शीतः क्लेद मेदो विशोषणः ॥
आम संस्तंभनो ग्राही-रूक्षोऽतित्वक् प्रसादनः (अ. हृ. सू. १०)

ಕಷಾಯ ರಸವು ಸಂಶಮನ ಮಾಡುವಂಥದು ಅಂದರೆ ಪಿತ್ತಶಾಮಕವಿರುವದು. ಸಂಗ್ರಾಹಿ ಗುಣದಿಂದ ಮಲಾವರೋಧ ಮಾಡುವದು. ವೃಣದ ಪೀಡನ ಅಂದರೆ ವೃಣದಲ್ಲಿಯ ಕ್ಲೇದಭಾಗವನ್ನು ಶೋಷಣ ಮಾಡಿ ವೃಣಶುದ್ಧಿ ಮಾಡುವದು. ಕಷಾಯ ರಸವು ರೋಪಣ, ವೃಣಗಳ ರೋಪಣ ಕಾರ್ಯವನ್ನು ಮಾಡುವದು. ವೃಣರೋಪಣ ಕಾರ್ಯವು ಕಷಾಯ ರಸದ ಶ್ರೇಷ್ಠ ಕರ್ಮವಿರುವದು. ಕಷಾಯ ರಸದಿಂದ ವೃಣವು ಶುದ್ಧವಾಗುವದು.. ನಂತರ ಅಲ್ಲಿಗೆ ಸಂಧಾನ ಕಾರ್ಯವಾಗುವದು. ಕಷಾಯ ರಸದ ರೂಕ್ಷ ಗುಣದಿಂದ ಕ್ಲೇದದ ಶೋಷಣೆಯಾಗುವದು. ಕಷಾಯ ರಸವು ರಕ್ತಪ್ರಸಾದಕವಿರುವದರಿಂದ ವೃಣಕ್ಕೆ ಶುದ್ಧ ರಕ್ತದ ಪೂರೈಕೆಯಾಗಿ ವೃಣವು ತುಂಬಿಬರುವದು.

ಕ್ಲೇದ, ಮೇದಗಳ ಶೋಷಣೆ ಮಾಡುವದು, ಗ್ರಾಹಿ, ಗುರು, ಶೀತ ಗುಣಗಳಿಂದ ಸ್ತಂಭನ ಕಾರ್ಯವನ್ನು ಮಾಡುವದು. ಶ್ಲೇಷ್ಮ, ರಕ್ತ, ಪಿತ್ತಗಳನ್ನು ಪ್ರಶಮನ ಮಾಡುವದು. ಕಷಾಯ ರಸವು ಅತಿತ್ವಕ್ ಪ್ರಸಾದಕವಿರುವದು. ಶುದ್ಧ ರಕ್ತದ ಯೋಗ್ಯ ಪೂರೈಕೆಯು ತ್ವಚೆಗೆ ಆಗುವದರಿಂದ ತ್ವಚೆಯಲ್ಲಿ ವೃಣಾದಿ, ಕುಷ್ಠ ಇವು ಇಲ್ಲದಂತಾಗುವವು.

ಕಷಾಯ ರಸಾತಿ ಸೇವನೆಯಿಂದ ಆಗುವ ಪರಿಣಾಮ:—

स एवं गुणोऽप्येक एवात्यर्थमुपयुज्यमान आस्यं शोषयति, हृदयं पीडयति, उदरमाध्मापयति, वाचं निगृह्णाति, स्रोतांस्यवबध्नाति, श्यावत्व-मापादयति, पुंस्त्वमुपहंति, विष्टभ्यजरां गच्छति, वातमूत्र पुरीष रेतांस्य-वगृह्णाति, कर्शयति, ग्लापयति, तर्षयति, स्तंभयति, खर विशद-रूक्षत्वात् पक्षवध, ग्रहापतानकार्दित प्रभृतींश्च वात विकारानुपजनयति । (च. सू. अ. २६)

करोति शीलितः सोऽति विष्टम्भाध्मान हृद्ग्रुजः ।
तृट्-कार्श्य-पौरुषभ्रंश स्रोतोरोध मलग्रहान् ॥ (अ. हृ. सू. १०)

ಕಷಾಯ ರಸದ ಅತಿಸೇವನೆಯಿಂದ ಮುಖಶೋಷ, ಹೃತ್ಪೀಡಾ, ಉದರದಲ್ಲಿ ಆಧ್ಮಾನ, ಜಿಹ್ವಾಜಾಡ್ಯತಾ ಇದರಿಂದ ವಾಕ್‌ಪ್ರವೃತ್ತಿ ಕಡಿಮೆಯಾಗುವದು, ಸ್ರೋತೋರೋಧ, ಸ್ರೋತಸ್ಸುಗಳ ಕಾರ್ಯದಲ್ಲಿ ವ್ಯತ್ಯಯ ಬರೋಣ, ಶರೀರವು ಕಪ್ಪು ಆಗುವದು, ಕಾರ್ಶ್ಯತ್ವ, ಬಲಕ್ಷಯ, ಪುರುಷತ್ವ ನಷ್ಟವಾಗುವದು, ಅವಷ್ಟಂಭ, ವಾತ, ಮೂತ್ರ ಪುರೀಷಗಳ ವೀರ್ಯದ ರೋಧವಾಗುವದು, ಮೇದದ ಕ್ಷಯವಾಗುವದರಿಂದ ಶರೀರವು ಕೃಶವಾಗುವದು, ಗ್ಲಾನಿ, ತೃಷ್ಣಾ, ಶರೀರಸ್ತಬ್ಧತಾ ಇವು ಉಂಟಾಗುವವು. ಕಷಾಯ ರಸದ ಖರ, ರೂಕ್ಷ, ವಿಶದ ಗುಣಗಳಿಂದ ಪಕ್ಷಾಘಾತ, ಹನುಗ್ರಹ, ಮನ್ಯಾಗ್ರಹ, ಅಪತಾನಕಾದಿ ವಾತವಿಕಾರಗಳು ಉತ್ಪನ್ನವಾಗುವವು.

ರಸ ಭೇದ ವಿಕಲ್ಪಃ—

ರಸಭೇದದ ಸೂಕ್ಷ್ಮವಿಚಾರ ಅಂಶಾಂಶ ಕಲ್ಪನೆಗೆ ರಸಭೇದ ವಿಕಲ್ಪವೆನ್ನುವರು. ಚಿಕಿತ್ಸೆಯಲ್ಲಿ ಅಥವಾ ಸ್ವಸ್ಥವೃತ್ತದಲ್ಲಿ ರಸಗಳ ಪ್ರಯೋಗವು ದೋಷಗಳ ಅನುಸಾರವಾಗುತ್ತದೆ. ಯಾಕಂದರೆ ದೋಷ ಸಾಮ್ಯವೇ ಆರೋಗತೆಯ ಲಕ್ಷಣವಿರುತ್ತದೆ. ಅಂಶಾಂಶ ಕಲ್ಪನೆಯಿಂದ ದೋಷಗಳ ಅರವತ್ಮೂರು ಭೇದಗಳನ್ನು ಮಾಡಿದ್ದಾರೆ; ಧಾತು ಮತ್ತು ಮಲಗಳ ಸಂಯೋಗದಿಂದ ಅಸಂಖ್ಯವಾಗುತ್ತವೆ. ಅದರಂತೆ ರಸಗಳಲ್ಲಿಯೂ ಅರವತ್ಮೂರು ಭೇದಗಳನ್ನು ಮಾಡಿದ್ದಾರೆ. ರಸ, ಅನುರಸಾದಿ ಕಲ್ಪನೆಯಿಂದ ಅಸಂಖ್ಯ ಭೇದಗಳಾಗುತ್ತವೆ. ಈ ಪ್ರಕಾರ ರಸಭೇದವಿಕಲ್ಪ, ದೋಷಭೇದವಿಕಲ್ಪ ಎಳ್ಳಷ್ಟೂ ಸಮಾನಾಂತರವಿರುತ್ತದೆ. ದೋಷದ ಯಾವ ಪ್ರಕಾರದ ಸ್ಥಿತಿಯು ಇರುತ್ತದೆಯೋ ಮತ್ತು ದೋಷದ ಯಾವ ಪ್ರಕಾರದ ವಿದ್ಯಮಾನ ಇರುತ್ತದೆಯೋ ಅಲ್ಲಿ ರಸವ ಆ ಪ್ರಕಾರದ ಪ್ರಯೋಗವನ್ನು ಮಾಡುವದೇ ಇದರ (ರಸಭೇದವಿಕಲ್ಪದ) ಪ್ರಯೋಜನವಾಗಿದೆ.

ಈ ರಸದ ವಿಕಲ್ಪವು ದ್ರವ್ಯ, ದೇಶ ಮತ್ತು ಕಾಲದ ಪ್ರಭಾವದಿಂದ ಆಗುತ್ತದೆ. ದ್ರವ್ಯದ ಪಾಂಚಭೌತಿಕ ಸಂಘಟನೆಯ ವಿವಿಧತೆಯ ಅನುಸಾರ ಅದರಲ್ಲಿ ಅದಕ್ಕನುಸಾರ ರಸದ್ದೂ ನಿಷ್ಪಾದನವಾಗುತ್ತದೆ. ದೇಶಭೇದದಿಂದ ಒಂದೇ ದ್ರವ್ಯದಲ್ಲಿ ಅನೇಕ ರಸಗಳು ಉತ್ಪನ್ನವಾಗುತ್ತವೆ ಉದಾ:– ಅನ್ಯಪ್ರದೇಶಗಳಿಗಿಂತ ಹಿಮಾಲಯ ಪ್ರದೇಶದಲ್ಲಿ ದ್ರಾಕ್ಷಾ ಮತ್ತು ದಾಡಿಮ ಇವು ಮಧುರವಾಗುತ್ತವೆ. ಕಾಲಭೇದದಿಂದಲೂ ರಸಭೇದಗಳು ಉತ್ಪತ್ತಿಯಾಗುತ್ತವೆ. ಉದಾ:– ಆಮ್ರವು (ಮಾವು) ಬಾಲ್ಯಾವಸ್ಥೆಯಲ್ಲಿ ಕಷಾಯ ರಸದ್ದಿರುತ್ತದೆ; ತರುಣಾವಸ್ಥೆಯಲ್ಲಿ ಅಮ್ಲ ರಸದ್ದಾಗುತ್ತದೆ. ಮತ್ತು ಪ್ರೌಢಾವಸ್ಥೆಯಲ್ಲಿ ಮಧುರ ರಸದ್ದಾಗುತ್ತದೆ. ಇದೇ ಪ್ರಕಾರ ಹೇಮಂತ ಋತುವಿನಲ್ಲಿ ಔಷಧಿಗಳು ಮಧುರವಿರುತ್ತವೆ. ಮತ್ತು ವರ್ಷಾ ಋತುವಿನಲ್ಲಿ ಅಮ್ಲವಿರುತ್ತವೆ. ಇದು ಕಾಲಪ್ರಭಾವದಿಂದ ಆಗುತ್ತದೆ.

भेदश्चैषां त्रिषष्ठि विकल्पो द्रव्य देश काल प्रभावाद्भवति। च. सू.

ಅಂಶಾಂಶ ಕಲ್ಪನೆಯಿಂದ ರಸಗಳ ಭೇದಗಳು ಅರವತ್ಮೂರು ಆಗುತ್ತವೆ.

ಒಂದು ರಸದ ಭೇದ	6
ಎರಡು ರಸಗಳ ಭೇದಗಳು	15
ಮೂರು ರಸಗಳ ಭೇದಗಳು	20
ನಾಲ್ಕು ರಸಗಳ ಭೇದಗಳು	15
ಐದು ರಸಗಳ ಭೇದಗಳು	6
ಆರು ರಸಗಳ ಭೇದ	1
	63

ಷಡ್ರಸಗಳ ಅಂಶಾಂಶ ಕಲ್ಪನೆಯಿಂದ ಅವುಗಳ ಭೇದಗಳು 63 ಆದಂತಾಯಿತು.

ಇನ್ನು ಇವುಗಳ ವಿವರಣೆಯನ್ನು ಸೋದಾಹರಣ ಸಹಿತ ಕೆಳಗೆ ಕೊಟ್ಟಿದೆ.

	ರಸ	ಉದಾಹರಣೆ
ಏಕಃ–	1) ಮಧುರ	ಗೋದುಗ್ಧ, ದ್ರಾಕ್ಷಾ.
	2) ಅಮ್ಲ	ಅಮ್ಲಿಕಾ.
	3) ಲವಣ	ಸೈಂಧವ
	4) ಕಟು	ಪಿಪ್ಪಲಿ, ಚವ್ಯ.
	5) ತಿಕ್ತ	ಪರ್ಪಟ, ಕಿರಾತತಿಕ್ತ, ನಿಂಬ.
	6) ಕಷಾಯ	ಪದ್ಮ, ರೋಧ್ರ, ನ್ಯಗ್ರೋಧಾಂಕುರ.
ದ್ವಿಕಃ–	7) ಮಧುರಾಮ್ಲ	ಬದರ, ಕಪಿತ್ಥ ಫಲ.
	8) ಮಧುರ ಲವಣ	ಒಂಟಿಯ ಹಾಲು, ಕುರಿ ಮಾಂಸ.
	9) ಮಧುರ ಕಟು	ನಾಯಿ, ನರಿಯ ಮಾಂಸ.
	10) ಮಧುರ ತಿಕ್ತ	ಗಂಧಾಭಿರೋಜಾ, ರಾಲ.
	11) ಮಧುರ ಕಷಾಯ	ತಿಲತೈಲ, ಮಧು, ಧಾಮನಫಲ.
	12) ಅಮ್ಲ ಲವಣ	ಊಷಕ (ಕ್ಷಾರಮೃತ್ತಿಕಾ)
	13) ಅಮ್ಲ ಕಟು	ಚುಕ್ರ (ಶುಕ್ತ)
	14) ಅಮ್ಲ ತಿಕ್ತ	ಸುರಾ.
	15) ಅಮ್ಲ ಕಷಾಯ	ಆನೆಯ ಮೊಸರು, ಶುಕಮಾಂಸ.
	16) ಲವಣಕಟು	ಗೋಮೂತ್ರ, ಸಜ್ಜಿ ಕ್ಷಾರ.
	17) ಲವಣ ತಿಕ್ತ	ರಾಂಗಾ, ಸೀಸಾ.
	18) ಲವಣ ಕಷಾಯ	ಸಮುದ್ರಫೇನ.
	19) ಕಟು ತಿಕ್ತ	ಕರ್ಪೂರ, ಜಾತೀಫಲ (ಜಾಜಿಕಾಯಿ).
	20) ಕಟು ಕಷಾಯ	ಭಲ್ಲಾತಕ, ಹರತಾಲ.

ರಸ	ಉದಾಹರಣೆ
21) ತಿಕ್ತ ಕಷಾಯ	ಆನೆಯ ತುಪ್ಪ.
ತ್ರಿಕಃ- 22) ಮಧುರ, ಅಮ್ಲ, ಲವಣ	ಹಸ್ತಿಮಾಂಸ.
23) ಮಧುರಾಮ್ಲ ಕಟು	ಶಲ್ಯಕ ಮಾಂಸ.
24) ಮಧುರಾಮ್ಲ ತಿಕ್ತ	ಧೂಮಸುರಾ.
25) ಮಧುರಾಮ್ಲ ಕಷಾಯ	ಮಸ್ತು, ತಕ್ರ.
26) ಮಧುರ ಲವಣ ಕಟು	ಅಡವೀ ಪಾರಿವಾಳದ ಮಾಂಸ.
27) ಮಧುರ ಲವಣ ತಿಕ್ತ	ಘೋಂಘೆಯ ಮಾಂಸ.
28) ಮಧುರ ಲವಣ ಕಷಾಯ	ಗುಡಸಂಯುಕ್ತ ಕಮಲಕಂದ.
29) ಮಧುರ ಕಟು ತಿಕ್ತ	ಕೇತಕೀಫಲ.
30) ಮಧುರ ಕಟು ಕಷಾಯ	ಗೋಧಾಮಾಂಸ, ಏರಂಡತೈಲ.
31) ಮಧುರ ತಿಕ್ತ ಕಷಾಯ	ಗುಡೂಚಿ, ವಾನರಮಾಂಸ, ತುವರಕತೈಲ.
32) ಅಮ್ಲ ಲವಣ ಕಟು	ರೌಪ್ಯ, ಶಿಲಾಜತು.
33) ಅಮ್ಲ ಲವಣ ತಿಕ್ತ	ಆನೆಯ ಮೂತ್ರ.
34) ಅಮ್ಲ ಲವಣ ಕಷಾಯ	ಸಾಂಭರ, ಲವಣಯುಕ್ತ, ಆನೆಯಮೊಸರು
35) ಅಮ್ಲ ಕಟು ತಿಕ್ತ	ಮರಿಚ ಯುಕ್ತ, ಸುರಾ.
36) ಅಮ್ಲ ಕಟು ಕಷಾಯ	ಅಮ್ಲ ವೇತಸ.
37) ಅಮ್ಲ ತಿಕ್ತ ಕಷಾಯ	ಶುಕಮಾಂಸಯುಕ್ತ, ಸುರಾ.
38) ಲವಣ ಕಟು ತಿಕ್ತ	ಕುರಿಯ ಮೂತ್ರ.
39) ಲವಣ ಕಟು ಕಷಾಯ	ಸಾಂಭರ ಲವಣಯುಕ್ತ, ಭಲ್ಲಾತಕ.
40) ಲವಣ ತಿಕ್ತ ಕಷಾಯ	ಸಮುದ್ರಫೇನ.
41) ಕಟು ತಿಕ್ತ ಕಷಾಯ	ದೇವದಾರು ತೈಲ, ಕೃಷ್ಣಅಗರು.
ಚತುಷ್ಕಃ-42) ಮಧುರಾಮ್ಲ ಲವಣ ಕಟು	ಗೋಮೂತ್ರಯುಕ್ತ ಶಿಲಾಜತು.
43) ಮಧುರಾಮ್ಲ ಲವಣ ತಿಕ್ತ	ಗೋಮೂತ್ರ, ಕುದುರೆ ದುಗ್ಧ.
44) ಮಧುರಾಮ್ಲ ಲವಣ ಕಷಾಯ	ಸೈಂಧವಯುಕ್ತ, ತಕ್ರ.
45) ಮಧುರಾಮ್ಲ ಕಟು ತಿಕ್ತ	ಲಶೂನಯುಕ್ತ, ಸುರಾ.
46) ಮಧುರಾಮ್ಲ ಕಟು ಕಷಾಯ	ಕಾಂಜೀಯುಕ್ತ ಏರಂಡತೈಲ, ಖದಿರಯುಕ್ತ ಶಿಲಾಜಿತು.
47) ಮಧುರಾಮ್ಲ ತಿಕ್ತ ಕಷಾಯ	ತ್ರಿರಂಜಿಬೀನ ಕೂಡಿದ ಗೂಲರಫಲ.

ರಸ	ಉದಾಹರಣೆ
48) ಮಧುರ ಲವಣ ತಿಕ್ತ ಕಟು	ಬೈಂಗನದ ಫಲ.
49) ಮಧುರ ಲವಣ ಕಟು ಕಷಾಯ	ಗೋಮೂತ್ರಯುಕ್ತ ತಿಲತೈಲ.
50) ಮಧುರ ಕಟು ತಿಕ್ತ ಕಷಾಯ	ತಿಲ, ಗುಗ್ಗುಲ.
51) ಮಧುರ ಲವಣ ತಿಕ್ತ ಕಷಾಯ	ಸಮುದ್ರಫೇನ, ಸಕ್ಕರೆ ಮತ್ತು ಚಿತ್ರಕ ಕೂಡಿದ ಬದರ.
52) ಅಮ್ಲ ಲವಣ ಕಟು ತಿಕ್ತ	ಸೊಂಚಲಕೂಡಿದ ಆನೆಯ ಮೊಸರಿನಿಂದ ತಯಾರಿಸಿದ ಸುರಾ.
53) ಅಮ್ಲ ಲವಣ ಕಟು ಕಷಾಯ	ಸೌಂಚಲ ಕೂಡಿದ ಆನೆಯ ಮೊಸರು.
54) ಅಮ್ಲ ಲವಣ ತಿಕ್ತ ಕಷಾಯ	ಕೀಹಲವಣ ಕೂಡಿದ ಕಚ್ಚಾ ಬಿಲ್ವ ಫಲ.
55) ಅಮ್ಲ ಕಟು ತಿಕ್ತ ಕಷಾಯ	ಎಳೆ ಮೂಲಂಗಿ, ಆನೆಯ ಮೊಸರು.
56) ಲವಣ ಕಟು ತಿಕ್ತ ಕಷಾಯ	ಸಾಂಭರ ಲವಣ ಕೂಡಿದ ಕಚ್ಚಾ ಬಿಲ್ವಫಲ.
ಪಂಚಕಃ- 57) ಮಧುರಾಮ್ಲ ಲವಣ ಕಟು ತಿಕ್ತ.	
58) ಮಧುರಾಮ್ಲ ಲವಣ ತಿಕ್ತ ಕಷಾಯ	ಔದ್ಭಿದ ಲವಣಯುಕ್ತ ತಕ್ರ.
59) ಮಧುರಾಮ್ಲ ಲವಣ ಕಟು ಕಷಾಯ	ತ್ರಿಕಟು ಮತ್ತು ಯವಕ್ಷಾರಯುಕ್ತ ತಕ್ರ.
60) ಮಧುರಾಮ್ಲ ಕಟು ತಿಕ್ತ ಕಷಾಯ	ಹರಿತಕಿ, ಆಮಲಕಿ.
61) ಮಧುರ ಲವಣ ಕಟು ತಿಕ್ತ ಕಷಾಯ	ಲಶೂನ.
62) ಅಮ್ಲ ಲವಣ ಕಟು ತಿಕ್ತ ಕಷಾಯ	ಭಲ್ಲಾತಕ ಮತ್ತು ರೌಪ್ಯಶಿಲಾಜತು ಮಿಶ್ರಿತ ನಿಂಬ.
ಷಟ್ಕಃ- 63) ಮಧುರಾಮ್ಲ ಲವಣ ಕಟು ತಿಕ್ತ ಕಷಾಯ	ಕೃಷ್ಣ ಚಿಗರೆಯ ಮಾಂಸ.

ರಸ ಪ್ರಾಧಾನ್ಯತೆ:—

रसास्तु प्रधानं; कस्मात् ? आगमात्, आगमो हि शास्त्रम् उच्यते; शास्त्रे हि रसा अधिकृता:, यथा-रसायत्त आहार इति, तस्मिस्तु प्राणा:; इति उपदेशाच्च, उपदिश्यन्ते हि रसा:, यथा—मधुराम्ल लवणा वातं शमयंति, अनुमानाच्च, रसेन ह्यनुमीयते द्रव्यं, यथा—मधुरमिति, ऋषिवचनाच्च ऋषि वचनं वेद: यथा किंचिदिज्यार्थं मधुरमाहरेदिति, तस्माद्रसा: प्रधानं ॥

(सु. सू.)

ಕೆಲವು ಆಚಾರ್ಯರು ದ್ರವ್ಯವು ಪ್ರಧಾನವೆಂದು ಹೇಳುತ್ತಾರೆ. ಅದು ಯೋಗ್ಯ ವಲ್ಲ. ರಸವೇ ಪ್ರಧಾನವಾದುದು. ಯಾಕೆಂದರೆ

1) **ಆಗಮಾತ್**:— ಆಗಮವೇ ಶಾಸ್ತ್ರವಿರುತ್ತದೆ. ಮತ್ತು ಶಾಸ್ತ್ರದಲ್ಲಿ ರಸಕ್ಕೆ ಹೆಚ್ಚು ಪ್ರಶಸ್ತಿ ಕೊಟ್ಟಿದ್ದಾರೆ. ಹೇಗೆಂದರೆ ಆಹಾರವು ರಸಗಳ ಆಧೀನವಿದೆ. ಆಹಾರ ದಲ್ಲಿ ಪ್ರಾಣಗಳಿರುತ್ತವೆ. ಆದ್ದರಿಂದ ರಸವು ಪ್ರಧಾನವು.

2) **ಉಪದೇಶಾತ್**:— (ಶಾಸ್ತ್ರದಲ್ಲಿ ರಸಗಳದೇ) ಉಪದೇಶವಾಗುವದರಿಂದ ರಸವೇ ಪ್ರಧಾನವು. ಶಾಸ್ತ್ರದಲ್ಲಿ ರಸಗಳ ಮುಖಾಂತರವೇ ಉಪದೇಶವನ್ನು ಮಾಡ ಲಾಗುತ್ತದೆ. ಉದಾ:— ಮಧುರ, ಅಮ್ಲ, ಲವಣ ರಸಗಳು ವಾತವನ್ನು ಶಮನ ಮಾಡುತ್ತವೆ.

3) **ಅನುಮಾನಾತ್**:—ಅನುಮಿತಿಯ ಸಾಧನವಾಗುವದರಿಂದ ರಸವೇ ಪ್ರಧಾ ನವು. ಯಾಕೆಂದರೆ ರಸದ ಮುಖಾಂತರವೇ ದ್ರವ್ಯದ ಅನುಮಾನವು ಮಾಡಲ್ಪಡು ತ್ತದೆ. ಉದಾ:— ದ್ರವ್ಯವು ಮಧುರ ರಸವಿರುವ ಕಾರಣ ಕಫವರ್ಧಕವಿರುತ್ತದೆ.

4) **ಋಷಿವಚನಾತ್**:— ಋಷಿಗಳ ವಚನದಿಂದಲೂ ರಸವು ಪ್ರಧಾನವಿರು ತ್ತದೆ. ವೇದವು ಋಷಿಗಳ ವಚನವಿರುತ್ತದೆ. ಉದಾ:— ಯಜ್ಞಕ್ಕಾಗಿ ಸ್ವಲ್ಪ ಮಧುರ (ದ್ರವ್ಯ) ತಾ ಇತ್ಯಾದಿ.

5) **ವ್ಯಾಪತ್ತಿನಿಮಿತ್ತತಾ**:— ರಸವು ವಿಕೃತವಾಗುವದರಿಂದ ದ್ರವ್ಯವು ವಿಕೃತ ವಾಗುತ್ತದೆ. ಮತ್ತು ಅದರಿಂದ ವಿಪಾಕಾದಿಗಳು ದೂಷಿತವಾಗುತ್ತವೆ. ಆದ್ದರಿಂದ ರಸವು ದ್ರವ್ಯದ ಜೀವನದ ಆಧಾರವಾಗುವದರಿಂದ ಪ್ರಧಾನವಿರುತ್ತದೆ.

6) **ಪ್ರವೃತ್ತಿ ನಿಮಿತ್ತತಾ**:— ಆಹಾರ ದ್ರವ್ಯಗಳಲ್ಲಿ ರುಚಿಯನ್ನು ಉತ್ಪನ್ನ ಮಾಡಲು ಮತ್ತು ಪ್ರವೃತ್ತಿಯನ್ನು ಉತ್ಪನ್ನ ಮಾಡುವದರ ಕಾರಣ ರಸವು ಪ್ರಧಾನ ವಿರುತ್ತದೆ. ಲೋಕದಲ್ಲಿ ಆಹಾರ ದ್ರವ್ಯಗಳ ಪ್ರವೃತ್ತಿಯನ್ನು ತಮ್ಮ ತಮ್ಮ ರುಚಿ ಗಳಿಗನುಸಾರವಾಗಿ ಮಧುರ, ಆಮ್ಲ ಮುಂತಾದವುಗಳಲ್ಲಿ ಮಾಡುತ್ತಾರೆ.

7) **ಅಪದೇಶಃ**– ರಸವು ದ್ರವ್ಯದ ನಿದರ್ಶಕವಾಗುತ್ತದೆ. ಉದಾಃ– ಮಧುರ ಫಾಣಿ, ಕಟು ಸರ್ಷಪ ಆದಿ.

8) **ಅನೇಕ ವಿಷಯತ್ವಃ**– ರಸದ ವಿಷಯಭೂತ ದ್ರವ್ಯ ಅನೇಕ ಇರುತ್ತವೆ. ಉದಾಃ– ಮಧುರ ರಸದ ಇಕ್ಷು, ಶರ್ಕರಾ, ಬೆಲ್ಲ, ಕ್ಷೀರ ಆದಿ.

9) **ಆಶುಕಾರಿತ್ವಃ**– ನಾಲಿಗೆಗೆ ದ್ರವ್ಯದ ಸಂಯೋಗವಾಗುತ್ತಲೇ ರಸದ ಕರ್ಮವು ಪ್ರಾರಂಭವಾಗುತ್ತದೆ. ಉದಾಃ– ಮಧುರ ರಸದ ಉಪಲೇಪ, ಕಟುರಸದಿಂದ ರಸನೋದ್ವೇಜನ ಮತ್ತು ತಿಕ್ತರಸದಿಂದ ಮುಖವೈಶದ್ಯ ಆದಿ.

10) **ಗುಣವ್ಯಪದೇಶಃ**– ವಿಪಾಕ, ವೀರ್ಯ ಮುಂತಾದವುಗಳ ನಿರ್ಧಾರಣವು ರಸದ ಅನುಸಾರವಾಗುತ್ತದೆ. ಉದಾಃ– ಮಧುರ ದ್ರವ್ಯದ ಅರ್ಥ ಕೇವಲ ಮಧುರ ರಸವಲ್ಲ. ಆದರೆ ಗುರು, ಸ್ನಿಗ್ಧ ಆದಿ ಗುಣಯುಕ್ತ, ಮಧುರ ವಿಪಾಕ ಮತ್ತು ಶೀತ ವೀರ್ಯ ಇಷ್ಟು ಆಗುತ್ತದೆ.

ರಸ ಮತ್ತು ಅನುರಸಃ—

व्यक्तः शुष्कस्य चादौ च रसो द्रव्यस्य लक्ष्यते ।
विपर्ययेणानुरसो रसो नास्तीह सप्तमः ॥ (च. सू. २६)

तत्र व्यक्तो रसः ।
अनुरसस्तु रसेनाभिभूतत्वादव्यक्तो व्यक्तो वा किंचिदन्ते ।
(अ. सं. सू. १७)

तत्र व्यक्तो रसः स्मृतः ।
अव्यक्तोऽनुरसः किंचिदन्ते व्यक्तोऽपि चेष्यते ॥
(अ. हृ. सू. ९)

ರಸಗಳು ಒಟ್ಟಿಗೆ ಆರು ಇರುವವು. ಅನುರಸವೆಂದಕೂಡಲೇ ಏಳನೆ ರಸವೆಂದು ತಿಳಿಯಬಾರದು. ಈ ಆರು ರಸಗಳಲ್ಲಿಯೇ ಯಾವದಾದರೊಂದು ಅನುರಸವಿರುವದು. ರಸವು ಪೂರ್ಣತಃ ವ್ಯಕ್ತಸ್ವರೂಪದಲ್ಲಿರುವದು. ಉದಾಃ– ಪಿಪ್ಪಲಿಯ ಕಟುರಸ, ಹರಿತಕಿಯ ಕಷಾಯ ರಸ ಇತ್ಯಾದಿ. ಆದರೆ ಅನುರಸವು ಅವ್ಯಕ್ತ ಅಥವಾ ಕಿಂಚಿತ್ ವ್ಯಕ್ತ ಸ್ವರೂಪದಲ್ಲಿ ಇರುವದು. ಉದಾಃ– ಹರಿತಕಿಯ ಮಧುರ ಇತ್ಯಾದಿ ರಸಗಳು. ರಸವು ದ್ರವ್ಯದ ಶುಷ್ಕಾವಸ್ಥೆಯಲ್ಲಿಯೂ ಕೂಡಾ ಸ್ಪಷ್ಟರೂಪದಿಂದ ಪ್ರತೀತವಾಗುವದು. ಅಂದರೆ ಯಾವ ದ್ರವ್ಯದ ರುಚಿಯು ಆದ್ರ್ರ ಮತ್ತು ಶುಷ್ಕಾವಸ್ಥೆಗಳಲ್ಲಿ ಒಂದೇ ಇರುವದೋ ಅದಕ್ಕೆ ರಸವೆಂದು ಅನ್ನುವರು. ಮತ್ತು ಯಾವ ದ್ರವ್ಯದ ಆದ್ರ್ರಾವಸ್ಥೆಯಲ್ಲಿದ್ದಂತಹ ರುಚಿಯು ಶುಷ್ಕಾವಸ್ಥೆಯಲ್ಲಿ ಇರದಿದ್ದರೆ ಅದಕ್ಕೆ ಅನುರಸವೆಂದು ಅನ್ನುವರು. ಉದಾಃ ಪಿಪ್ಪಲಿಯು ಆದ್ರ್ರವಿದ್ದಾಗ ಮಧುರ ರಸದ್ದು ಇರುವದು. ಮತ್ತು ಅದು ಒಣಗಿದ ನಂತರ ಕಟುವಾಗುವದು. ಆದ್ದರಿಂದ ಪಿಪ್ಪಲಿಯ ಅನುರಸವು ಮಧುರವಿರುವದು.

ದ್ರವ್ಯದ ಮತ್ತು ರಸನೇಂದ್ರಿಯದ ಸಂಯೋಗ ಉಂಟಾದಕೂಡಲೇ ಮೊದಲು ಪ್ರಮುಖ ಅಥವಾ ಪ್ರಧಾನ ರಸದ ಜ್ಞಾನವಾಗುವದು. ಆದರೆ ಅನುರಸದ ಜ್ಞಾನವು ಅಂತ್ಯದಲ್ಲಿ ಆಗುವದು.

"तत्र द्रव्ये कश्चिद्धर्मः सद्यो व्यक्तः, कश्चिदव्यक्तः कश्चिदीषद्व्यक्तः। कश्चिदन्ते व्यक्तः। तेष्वाद्यो रसाख्यः इतरे त्रयोऽनुरसाख्याः"। (हि)

ರಸ ಮತ್ತು ಅನುರಸದ ಭೇದ ನಿರೂಪಕ ತುಲನಾ:—

ರಸ	ಅನುರಸ
1) ವ್ಯಕ್ತ	1) ಅವ್ಯಕ್ತ ಇಲ್ಲವೆ ಈಷದ್ ವ್ಯಕ್ತ.
2) ಶುಷ್ಕಾವಸ್ಥೆಯಲ್ಲಿ ಸ್ಥಾಯಿ	2) ಶುಷ್ಕಾವಸ್ಥೆಯಲ್ಲಿ ಅಸ್ಥಾಯಿ.
3) ಮೊದಲಿಗೆ ಪ್ರತೀತವಾಗುತ್ತದೆ.	3) ಕೊನೆಗೆ ಪ್ರತೀತವಾಗುತ್ತದೆ.

अनुरसस्य अभिव्यक्तिस्तु अन्ते।

ರಸವು ವ್ಯಕ್ತವಾದನಂತರ ಕೊನೆಗೆ ಅನುರಸವು ಅಭಿವ್ಯಕ್ತವಾಗುತ್ತದೆ. ಅನುರಸವು ರಸದ ವಿಪರೀತವಿರುತ್ತದೆ.

ಅನುರಸ ಲಕ್ಷಣಮ್:—

रसलक्षण विपर्ययेण अनुरसः व्यक्तः शुष्कस्य चादौ इति रस लक्षणं तद्विपर्ययश्च अव्यक्तः, आर्द्रस्य च अन्ते य इति रसलक्षण विपरीत लक्षणोऽनुरसः।

ರಸನೇಂದ್ರಿಯ ಗ್ರಾಹ್ಯವು ಸ್ಪಷ್ಟ ರಸವು. ಶುಷ್ಕದ್ರವ್ಯವನ್ನು ಬಾಯಿಯಲ್ಲಿ ಹಾಕಿಕೊಂಡಕೂಡಲೇ ರಸನೇಂದ್ರಿಯವು ಯಾವುದನ್ನು ಗ್ರಹಣ ಮಾಡುತ್ತದೆಯೋ ಅದು ರಸವು. ಆ ಶುಷ್ಕ ದ್ರವ್ಯವು ಆರ್ದ್ರವಾದಮೇಲೆ ರಸನೇಂದ್ರಿಯವು ಯಾವುದನ್ನು ಗ್ರಹಣ ಮಾಡುವದೋ ಅದು ಅನುರಸವು. ಸರ್ವದ್ರವ್ಯಗಳು ಪಂಚಮಹಾಭೂತಗಳ ಸಮವಾಯದಿಂದಲೇ ಉತ್ಪನ್ನವಾಗಿರುತ್ತವೆ ಆದ್ದರಿಂದ ಅನೇಕ ರಸಗಳಿರುತ್ತವೆ. ಪ್ರಾಮುಖ್ಯವಾಗಿ ಮಧುರಾದಿ ಭೇದದಿಂದ ಆರು ರಸಗಳಿರುತ್ತವೆ. ಈ ಆರು ರಸಗಳಲ್ಲಿ ಯಾವ ರಸವು ದ್ರವ್ಯದಲ್ಲಿದ್ದು ಅದು ರಸನೇಂದ್ರಿಯದಿಂದ ಗ್ರಹಣವಾಗುತ್ತದೆಯೋ (ವ್ಯಕ್ತವಾಗುತ್ತದೆಯೋ) ಅದು ರಸವು. ಅಂತ್ಯದಲ್ಲಿ ಯಾವದು ವ್ಯಕ್ತವಾಗುತ್ತದೆಯೋ ಅದು ಅನುರಸವು.

एवं हि मधुरादीनां षण्णां व्यक्तानुव्यक्त रूपाणां रसानुरस संज्ञा। तस्मात् सप्तमां रसोऽनुरसाख्यो नास्ति (यो)।

ಆದ್ದರಿಂದ ಏಳನೆಯ ಅನುರಸವು ಇಲ್ಲ.

ದೋಷ ಪ್ರಕೋಪ-ಪ್ರಶಮನ ರಸಗಳು:—

स्वाद्वम्ल लवणाः वायुं कषाय स्वादु तिक्तकाः ।
जयन्ति पित्तं श्लेष्माणं कषाय कटु तिक्तकाः ।
कट्वम्ल लवणाः पित्तं स्वाद्वम्ल लवणाः कफम् ।
कटु तिक्त कषायाश्च कोपयन्ति समीरणम् ॥ (च. सू. अ. १)
तत्राद्या मारुतं घ्नन्ति त्रयस्तिक्तादयः कफम् ।
कषाय तिक्त मधुराः पित्तमन्ये तु कुर्वते ॥ (अ. हृ. सू. १)

ದೋಷ	ಪ್ರಕೋಪಕ ರಸ	ಪ್ರಶಮನ ರಸ
1) ಕಫ.	ಮಧುರ ರಸ	ಕಟು ರಸ
	ಅಮ್ಲ ರಸ	ತಿಕ್ತ ರಸ
	ಲವಣ ರಸ	ಕಷಾಯ ರಸ
2) ಪಿತ್ತ	ಅಮ್ಲ ರಸ	ಮಧುರ ರಸ
	ಲವಣ ರಸ	ತಿಕ್ತ ರಸ
	ಕಟು ರಸ	ಕಷಾಯ ರಸ
3) ವಾತ	ಕಟು ರಸ	ಮಧುರ ರಸ
	ತಿಕ್ತ ರಸ	ಅಮ್ಲ ರಸ
	ಕಷಾಯ ರಸ	ಲವಣ ರಸ

ರಸಗಳ ಪ್ರಕೋಪನ ಮತ್ತು ಪ್ರಶಮನ ಕಾರ್ಯಗಳು ಅವುಗಳಲ್ಲಿರುವ ಗುಣಗಳ ಮೇಲೆ ಅವಲಂಬಿಸಿರುವವು. ಷಡ್ರಸಗಳ ಪ್ರಾಕೃತ ಗುಣಗಳು ಈ ರೀತಿಯಾಗಿರುವವು.

ಗುಣಗಳು	ರಸ
ಸ್ನಿಗ್ಧ, ಶೀತ, ಗುರು	ಮಧುರ
ಸ್ನಿಗ್ಧ, ಉಷ್ಣ, ಲಘು	ಅಮ್ಲ
ಸ್ನಿಗ್ಧ, ಉಷ್ಣ, ಗುರು	ಲವಣ
ರೂಕ್ಷ, ಉಷ್ಣ, ಲಘು	ಕಟು
ರೂಕ್ಷ, ಶೀತ, ಲಘು	ತಿಕ್ತ
ರೂಕ್ಷ, ಶೀತ, ಗುರು	ಕಷಾಯ

ತರತಮ ಭಾವದಿಂದ ನೋಡಲಾಗಿ ಕೆಳಗಿನಂತೆ ಇರುವವು.

रौक्ष्यात् कषायो रूक्षाणामुत्तमो मध्यमः कटुः ।
तिक्तोऽवरस्तथोष्णानामुष्णत्वाल्लवणः परः ॥
मध्योऽम्लः कटुकश्चान्त्यः स्निग्धानां मधुरः परः।
मध्योऽम्लो लवणश्चान्त्यो रसः स्नेहान्निरुच्यते ॥
मध्योत्कृष्टावराः शैत्यात् कषाय स्वादु तिक्तकाः ।
स्वादुर्गुरुत्वादधिकः कषायाल्लवणोऽवरः ॥
अम्लात् कटुस्ततस्तिक्तो लघुत्वादुत्तमोत्तमः । (च. सू. २६)

ಗುಣ	ಉತ್ತಮ	ಮಧ್ಯಮ	ಕನಿಷ್ಠ
ರೂಕ್ಷ	ಕಷಾಯ	ಕಟು	ತಿಕ್ತ
ಸ್ನಿಗ್ಧ	ಮಧುರ	ಅಮ್ಲ	ಲವಣ
ಉಷ್ಣ	ಲವಣ	ಅಮ್ಲ	ಕಟು
ಶೀತ	ಮಧುರ	ಕಷಾಯ	ತಿಕ್ತ
ಗುರು	ಮಧುರ	ಕಷಾಯ	ಲವಣ
ಲಘು	ತಿಕ್ತ	ಕಟು	ಅಮ್ಲ

ತರತಮ ಭಾವದಿಂದ ರಸಗಳಲ್ಲಿರುವ ಗುಣಗಳನ್ನು ನೋಡಲಾಗಿ ಕಷಾಯ ರಸವು ರೂಕ್ಷಗುಣ ಬಾಹುಲ್ಯವುಳ್ಳದ್ದು ಇರುವದು. ಆದ್ದರಿಂದ ತನ್ನ ವಿರುದ್ಧ ಗುಣಾತ್ಮಕವುಳ್ಳಂತಹ ಕಫದೋಷದ ಹರಣವನ್ನು ಮತ್ತು ಸಮಾನಗುಣಯುಕ್ತ ವಾತ ದೋಷದ ವರ್ಧನವನ್ನು ಮಾಡುವದು. ಸ್ನಿಗ್ಧಗುಣ ಬಾಹುಲ್ಯವುಳ್ಳ ಮಧುರ ರಸವು ಕಫ ದೋಷದ ವರ್ಧನವನ್ನು ಮತ್ತು ವಾತದ ಹರಣವನ್ನು ಮಾಡುವದು. ಉಷ್ಣ ಗುಣಬಾಹುಲ್ಯವುಳ್ಳ ಲವಣ ರಸವು ಪಿತ್ತವರ್ಧನ ಮಾಡುವದರಲ್ಲಿ ಶ್ರೇಷ್ಠವಿರುವದು. ಮತ್ತು ವಾತಶಾಮಕವಿರುವದು. ಲಘು ಗುಣ ಬಾಹುಲ್ಯವುಳ್ಳ ತಿಕ್ತರಸವು ಕಫಹರಣ ಮತ್ತು ವಾತವರ್ಧನ ಮಾಡುವದು.

ರಸದ ರಸಾಂತರತ್ವ:—

1) ಕಾಲಸ್ಥಿತಿ:—

ಕೆಲವು ಸಮಯದ ನಂತರ ರಸದ ರೂಪಾಂತರವಾಗುವದು. ಉದಾ:— ಮಧುರ ರಸವುಳ್ಳ ಶಾಲಿ ಅಕ್ಕಿಯ ಅನ್ನವು ಕೆಲವು ಸಮಯದ ನಂತರ ಹುಳಿಯಾಗುತ್ತದೆ.

2) ಪಾತ್ರಸ್ಥಿತಿ:—

ಪಾತ್ರೆ ವಿಶೇಷದಿಂದಲೂ ಸಹ ರಸ ಪರಿವರ್ತನೆಯಾಗುವದು. ಉದಾ:-ತಾಮ್ರದ ಪಾತ್ರೆಯಲ್ಲಿ ಮೊಸರು ಹಾಕಿ ಇಟ್ಟರೆ ಕಟು ರಸದ್ದಾಗುವದು.

3) ಸಂಯೋಗಃ-

ಕೆಲವು ದ್ರವ್ಯಗಳ ಸಂಯೋಗದಿಂದ ರಸಾಂತರವಾಗುವದು. ಉದಾಃ- ಸುಣ್ಣದ ಸಂಯೋಗದಿಂದ ಹುಳಿ ಇರುವ ಹುಣಿಸೆ ಹಣ್ಣು ಮಧುರ ರಸದ್ದಾಗುತ್ತದೆ.

4) ಪಾಕಃ-

ಅಗ್ನಿಯ ಸಂಯೋಗದಿಂದ ಅನೇಕ ದ್ರವ್ಯಗಳ ರಸ ಬದಲಾಗುತ್ತದೆ. ಉದಾಃ- ಹುಣಿಸೆಯನ್ನು ಬೆಂಕಿಯಲ್ಲಿ ಪಚನ ಮಾಡಿದರೆ ಮಧುರ ರಸದ್ದಾಗುತ್ತದೆ.

5) ಆತಪಃ-

ಕೆಲವು ದ್ರವ್ಯಗಳನ್ನು ಬಿಸಿಲಿನಲ್ಲಿಟ್ಟು ಒಣಗಿಸುವದರಿಂದ ಅಮ್ಲ ರಸಾಂತರವನ್ನು ಹೊಂದುವವು. ಉದಾಃ- ತುಂಬುರು ಹಣ್ಣು ಕಷಾಯ ರಸದ್ದಿದ್ದು; ಅದನ್ನು ಬಿಸಿಲಿನಲ್ಲಿಟ್ಟು ಒಣಗಿಸಿದರೆ ಮಧುರ ರಸದ್ದಾಗುವದು.

6) ಭಾವನಾ:-

ಕೆಲವು ದ್ರವ್ಯಗಳಿಗೆ ಭಾವನೆ ಕೊಡುವದರಿಂದ ಅವುಗಳ ರಸ ಬದಲಾಗುವದು. ಉದಾಃ- ಎಳ್ಳು ಇದು ಕಷಾಯ, ತಿಕ್ತ, ಮಧುರ ರಸದ್ದಿರುತ್ತದೆ. ಇದಕ್ಕೆ ಜೇಷ್ಠಮಧು ಕ್ವಾಥದ ಭಾವನೆಯನ್ನು ಕೊಡುವದರಿಂದ ಮಧುರ ರಸದ್ದಾಗುತ್ತದೆ.

7) ದೇಶಃ-

ದೇಶ ವಿಶೇಷದಿಂದಲೂ ಕೆಲವು ದ್ರವ್ಯಗಳ ರಸವು ಬದಲಾಗುತ್ತದೆ. ಉದಾಃ- ಕೆಲವು ದೇಶಗಳಲ್ಲಿ ಆಮಲಕಿ (ನೆಲ್ಲಿ) ಯು ಮಧುರ ರಸದ್ದಿರುವದು.

8) ಕಾಲ:-

ಕಾಲ ಪ್ರಭಾವದಿಂದ ರಸದ ರೂಪಾಂತರವಾಗುವದು. ಉದಾಃ- ಬಾಳೆಯ ಹಣ್ಣು ಕಷಾಯ ರಸದ್ದಿರುವದು. ಆದರೆ ಕಾಲ ಪ್ರಭಾವದಿಂದ ಪಕ್ವವಾದ ಮೇಲೆ ಮಧುರ ರಸದ್ದಾಗುತ್ತದೆ.

9) ಪರಿಣಾಮ:-

ದ್ರವ್ಯದ ರೂಪಾಂತರವಾಗುವದರಿಂದ ರಸವು ಬದಲಾಗುತ್ತದೆ. ಉದಾಃ- ಹಾಲು ಮೊಸರಿನಲ್ಲಿ ಪರಿವರ್ತನೆಯಾದನಂತರ ಅಮ್ಲ ರಸದ್ದಾಗುತ್ತದೆ.

10) ಉಪಸರ್ಗಃ-

ಕೃಮಿ ಮೊದಲಾದವುಗಳ ಸಂಪರ್ಕದಿಂದ ರಸದ ರೂಪಾಂತರವಾಗುವದು. ಉದಾಃ- ಕಬ್ಬಿಗೆ ಹುಳ ಹತ್ತಿದ್ದರೆ ಕಹಿ ಇಲ್ಲವೆ ಹುಳಿ ರಸದ್ದಾಗುತ್ತದೆ.

11) ವಿಕ್ರಿಯಾ:-

ಕೆಲವು ವಿಶಿಷ್ಠ ಕ್ರಿಯೆಗಳಿಂದಲೂ ರಸವು ಬದಲಾಗುತ್ತದೆ. ಉದಾಃ- ತಾಲಫಲವನ್ನು ಬೆಂಕಿಯಲ್ಲಿ ಪಚನಮಾಡಿ ಭೂಮಿಯ ಮೇಲೆ ಒಗೆಯುವದರಿಂದ ತಿಕ್ತ ರಸದ್ದಾಗುತ್ತದೆ. ಲಿಂಬೆಕಾಯಿಯನ್ನು ಕೊಯ್ದು ಇಟ್ಟರೆ ತಿಕ್ತ ರಸದ್ದಾಗುತ್ತದೆ.

ಪ್ರಕರಣ ೪
ವಿಪಾಕ ವಿಜ್ಞಾನ

ಜಠರಾಗ್ನಿಯ ಸಂಯೋಗದಿಂದ ದ್ರವ್ಯದ ಪಚನವಾಗಿ ನಂತರ ನಿರ್ಮಾಣವಾಗುವ ರಸಾನುರೂಪ ಭಾಗಕ್ಕೆ ವಿಪಾಕ ಅನ್ನುವರು. ತಿಂದ ಪದಾರ್ಥವು ಪಾಚಕ ಪಿತ್ತದಿಂದ ಪಚನವಾಗುವದು. ಈ ಕ್ರಿಯೆ ಉಂಟಾಗಲು ರಸದ ರೂಪಾಂತರ ಅಥವಾ ರಸಾಂತರ ವಾಗುವದು. ಈ ರೂಪಾಂತರಕ್ಕೆ ವಿಪಾಕವೆಂದು ಸಂಜ್ಞೆ.

ಲಕ್ಷಣ:–

जाठरेणाग्निना योगाद्यदुदेति रसान्तरम् ।
रसानां परिणामान्ते स विपाक इति स्मृतः ॥
(अ. हृ. सू. अ. ९)

रसानां परिणमान्ते जरणनिष्ठाकाले, यद् रसान्तरं
रसविशेषः उदेति उत्पद्यते स विपाकः । (अ. द.)
परिणामलक्षणो विपाकः । (र. वै)
पाकः पचनं द्रव्याणां स्वरुपरसयोः परावृत्तिः ।
सा च स्वरूपान्तरत्वेन रसान्तरत्वेन च
परिणतिः, तस्या विशेषो विपाकः । (ग)
अवस्थापाकापेक्षया विशिष्टः पाकः विपाकः । (शि.)

ಈ ರೀತಿಯಾಗಿ ವಿವಿಧ ಶಾಸ್ತ್ರಕಾರರು ವಿಪಾಕದ ಲಕ್ಷಣವನ್ನು ಹೇಳಿದ್ದಾರೆ. ಸೇವನ ಮಾಡಿದ ಮಧುರಾದಿ ರಸಯುಕ್ತ ದ್ರವ್ಯಗಳು ಜಠರಾಗ್ನಿಯ ಮೂಲಕ ಪಚನವಾಗಿ ನಂತರ ಒಂದು ವಿಶಿಷ್ಠ ಪ್ರಕಾರದ ರಸವಿಶೇಷದ ಉತ್ಪತ್ತಿಯಾಗುವದೋ ಅದಕ್ಕೆ ವಿಪಾಕ ಅನ್ನುವರು. ವಿಶಿಷ್ಠಃ ಜರಣನಿಷ್ಠಾಕಾಲೆ ರಸವಿಶೇಷಸ್ಯ ಪಾಕಃ ಪ್ರಾದುರ್ಭಾವಃ ವಿಪಾಕಃ ಈ ರೀತಿಯಾಗಿ ವಿಪಾಕದ ನಿರುಕ್ತಿ ಇರುವದು. ದ್ರವ್ಯಗಳ ಗುಣಧರ್ಮ ಜ್ಞಾನಮಾಡಿಕೊಳ್ಳುವದರ ಸಲುವಾಗಿ ದ್ರವ್ಯಗಳು ಅಂತ್ರಾಶಯದಲ್ಲಿ ಹೋದನಂತರ ಜಠರಾಗ್ನಿಯ ಸಂಯೋಗದಿಂದ ಉಂಟಾಗುವ ರಸಾಂತರ ಬಗ್ಗೆ ಜ್ಞಾನವಿರುವದು ಅವಶ್ಯ ವಿರುವದು.

ಆಯುರ್ವೇದದಲ್ಲಿ ಆಹಾರದ ಪಾಕ ಎರಡು ರೀತಿಯಿಂದ ಆಗುವದೆಂದು ಹೇಳುವರು. ಒಂದು ಅವಸ್ಥಾಪಾಕ ಮತ್ತೊಂದು ನಿಷ್ಠಾಪಾಕ ಅಥವಾ ವಿಪಾಕ, ಅನ್ನವಹ ಸ್ರೋತಸದ ಬೇರೆ ಬೇರೆ ಸ್ಥಾನಗಳಲ್ಲಿ ಅನ್ನದ ಯಾವ ಪಾಕವಾಗುವದೋ ಅದಕ್ಕೆ ಅವಸ್ಥಾಪಾಕ ಅನ್ನುವರು. ಇದಕ್ಕೆ ಪ್ರಪಾಕವೆಂದು ಅನ್ನುವರು. ಮಹಾಸ್ರೋತಸದ ಅವಸ್ಥಾನುಸಾರ ದ್ರವ್ಯದ ಪರಿವರ್ತನವಾಗುವದರಿಂದ ಇದಕ್ಕೆ ಅವಸ್ಥಾಪಾಕ ಅನ್ನುವರು.

ಆದರೆ ನಿಷ್ಠಾಪಾಕ ಅಥವಾ ವಿಪಾಕದಲ್ಲಿ; ತೆಗೆದು ಕೊಂಡಂತಹ ಷಡ್ರಸಾತ್ಮಕ ದ್ರವ್ಯ... ಅಂತಿಮ ಪರಿಣಾಮ ಧಾತುವಿನಲ್ಲಿ ಮಧುರ, ಅಮ್ಲ ಮತ್ತು ಕಟು ರೂಪಗಳೊಂದು... ಆಗುವದು. ನಿಷ್ಠಾಪಾಕವೆಂದರೆ ಆಹಾರದ ಅಂತಿಮ ಪರಿಣಾಮ.

ಅವಸ್ಥಾಪಾಕ:-

अन्नमादानकर्मा तु प्राणः कोष्ठं प्रकर्षति ।
तद्द्रवैर्भिन्नसंघातं स्नेहेन मृदुतां गतम् ॥
समानेनावधूतोऽग्निरूदर्यः पवनेन तु ।
काले भुक्तं समं सम्यक् पचत्यायुर्विवृद्धये ॥
एवं रसमलायान्नमाशयस्थमधः स्थितः ।
पचत्यग्निर्यथा स्थाल्यामोदनायाम्बु-तण्डुलम् ॥
अन्नस्य भुक्तमात्रस्य षड्रसस्य प्रपाकतः ।
मधुराद्यात् कफो भावात् फेनभूत उदीर्यते ॥
परं तु पच्यमानस्य विदग्धस्याम्लभावतः ।
आशयाच्च्यवमानस्य पित्तमच्छमुदीर्यते ॥
पक्वाशयं तु प्राप्तस्य शोष्यमाणस्य वन्हिना ।
परिपिण्डितपक्वस्य वायुः स्यात् कटुभावतः ॥

(च. चि. अ. १५)

ಅನ್ನವನ್ನು ಒಳಗೆ ತೆಗೆದು ಕೊಳ್ಳುವ ಕಾರ್ಯವನ್ನು ಪ್ರಾಣವಾಯು ಮಾಡು... ವದು. ಸೇವನಮಾಡಿದ ಆಹಾರವು ಪ್ರಾಣವಾಯುವಿನಿಂದ ಆಮಾಶಯದ ... ಒಯ್ಯಲ್ಪಡುವದು ಮತ್ತು ಅಲ್ಲಿಯ ಕ್ಲೇದಕ ಕಫದ ದ್ರವತ್ವದ ಮೂಲಕ ಅನ್ನ... ತೆಳ್ಳಗೆ ಆಗುವದು. ಅಲ್ಲದೆ ಕ್ಲೇದಕ ಕಫದ ಸ್ನಿಗ್ಧ ಗುಣದ ಮೂಲಕ ಅನ್ನಕ್ಕೆ ಮೃದು... ಉಂಟಾಗುವದು. ಆ ಮೇಲೆ ಸಮಾನವಾಯುವಿನಿಂದ ಪ್ರದೀಪ್ತವಾದ ಅಗ್ನಿಯು... ಸಮಮಾತ್ರೆ (ಭುಕ್ತಂ ಸಮಮಿತಿಮಾತ್ರಾ ಪ್ರಕೃತ್ಯಾದಿ ಸಮಮ್) ಯಿಂದ ಮತ್ತು ಯೋಗ್ಯಕಾಲ (ಕಾಲೇ ಇತಿ ಬುಭುಕ್ಷಾ ಕಾಲೆ) ದಲ್ಲಿ ತೆಗೆದುಕೊಂಡ ಆಹಾರವನ್ನು ಪಚನಮಾಡುವದು. ಮತ್ತು ಅದರಿಂದ ಧಾತುಗಳನ್ನು ಪೋಷಿಸಿ ಆಯುಷ್ಯವರ್ಧನ ಮಾಡುವದು. ಯಾವರೀತಿಯಾಗಿ ಗಡಿಗೆಯಲ್ಲಿ ಅಕ್ಕಿ ಮತ್ತು ನೀರು ಹಾಕಿ ಬೆಂಕಿ... ಮೇಲೆ ಇಟ್ಟರೆ ಹೇಗೆ ಅನ್ನ ತಯಾರಾಗುವದೋ ಅದರಂತೆ ಜಠರಾಗ್ನಿಯಿಂದ ಆಹಾರ... ಪಚನವಾಗಿ ಅದರಿಂದ ರಸ ಮತ್ತು ಮಲಗಳ ಉತ್ಪತ್ತಿಯಾಗುವದು. ಆಹಾರ... ಪಚನ ಸರಿಯಾಗಿ ಆಗಬೇಕಾದರೆ ಕೆಳಗಿನವುಗಳ ಅವಶ್ಯಕತೆ ಇರುವದು.

1) ಅಗ್ನಿ (ಊಷ್ಮಾ):- ಇದು ಪಚನಕ್ಕೆ ಬೇಕಾಗುವ ಮುಖ್ಯ ಸಾಧನವಾಗಿದೆ. ಮುಖ್ಯ ಪಚನವು ಜಠರಾಗ್ನಿಯ ಮುಖಾಂತರವಾಗುವದು. ಆದ್ದರಿಂದ ಅದಕ್ಕೆ 'ಭಗ... ವಾನ್' ಎಂದು ವಿಶೇಷ ಹೆಸರನ್ನು ಕೊಟ್ಟಿರುವರು.

2) **ವಾಯುಃ**– ಅನ್ನ ಪಚನಕ್ಕೆ ಅಗ್ನಿಯ ಅವಶ್ಯಕತೆ ಇದ್ದಂತೆ ವಾಯುವಿನ ಅವಶ್ಯಕತೆಯೂ ಇರುವದು. ಆಮಾಶಯದಲ್ಲಿಯ ಪಚನಕ್ಕೆ ಸಮಾನ ವಾಯು ಸಹಾಯ ಮಾಡುವದು. ಸಮಾನ ವಾಯುವಿನ ಮೂಲಕ ಆಮಾಶಯದಲ್ಲಿ ಗತಿ ಉಂಟಾಗುವದರಿಂದ ಅನ್ನದ ಪಚನವು ಯೋಗ್ಯರೀತಿಯಿಂದ ಯೋಗ್ಯವೇಳೆಯಲ್ಲಿ ಉಂಟಾಗುವದು.

3) **ಕ್ಲೇದಃ**– ಆಮಾಶಯದಲ್ಲಿ ಕ್ಲೇದಕ ಕಫವಿರುವದು. ಇದರಿಂದ ಅನ್ನವು ತೆಳ್ಳಗೆ ಮತ್ತು ಮೃದುವಾಗುವದು. ಮತ್ತು ಅಗ್ನಿಗೆ ಪಚನ ಮಾಡಲಿಕ್ಕೆ ಅನುಕೂಲವಾಗುವದು.

4) **ಕಾಲ**:– ಆಮಾಶಯದಲ್ಲಿ ಆಹಾರ ಪಚನವಾಗಬೇಕಾದರೆ ಒಂದು ವಿಶಿಷ್ಟ ವೇಳೆ ಇರುವದು. ತೆಗೆದುಕೊಂಡ ಆಹಾರದ ಪಚನವಾಗಬೇಕಾದರೆ ಕನಿಷ್ಠ 3–4 ತಾಸುಗಳು ಬೇಕಾಗುವವು. ಕಾಲಮರ್ಯಾದೆಯು ತೆಗೆದುಕೊಂಡ ಆಹಾರ ಗುಣದ ಮತ್ತು ಅಗ್ನಿಯ ಬಲಾ–ಬಲದ ಮೇಲೆ ಅವಲಂಬಿಸಿರುವದು.

5) **ಸಮಯೋಗಃ**– ಮೇಲೆ ಹೇಳಿದೆಲ್ಲವುಗಳ ಸಮ್ಯಕ್‌ಯೋಗವಿರುವದು ಅವಶ್ಯವಿರುವದು. ಅದಿಲ್ಲದಿದ್ದರೆ ಪಚನಕ್ರಿಯೆಯಲ್ಲಿ ವ್ಯತ್ಯಯ ಉಂಟಾಗುವದು.

ಅವಸ್ಥಾಪಾಕದ ಮೂರು ಅವಸ್ಥೆಗಳು ಇರುವವು. ಮೊದಲನೆಯ ಅವಸ್ಥೆ ಆಮಾಶಯದಲ್ಲಿ ಆಗುವದು. ಇಲ್ಲಿ ಮಧುರ ರಸದ ಬಾಹುಲ್ಯದಿಂದ ಮೂಲಭೂತ ಕಫದ ಉತ್ಪನ್ನವಾಗುವದು. ನಂತರ ಆಮಾಶಯದಲ್ಲಿ ಪಚನ ಆರಂಭವಿದ್ದಾಗ ಮತ್ತು ಅನ್ನವು ಕೆಳಗೆ ಸರಿಯುತ್ತಿರುವಾಗ ಅಂದರೆ ಪಚ್ಯಮಾನಾಶಯದಲ್ಲಿ ಅನ್ನಕ್ಕೆ ಅಮ್ಲತ್ವ ಉಂಟಾಗುವದು ಮತ್ತು ಪಿತ್ತದ ಉದೀರಣವಾಗುವದು. ಮೂರನೆಯ ಅವಸ್ಥೆ ಪಕ್ವಾಶಯದಲ್ಲಿ ಆಗುವದು. ಇಲ್ಲಿ ಕಟು ರಸದ ಆಧಿಕ್ಯದಿಂದ ಮೂಲಭೂತ ವಾಯುವಿನ ಉದೀರಣವಾಗುವದು. ಈ ರೀತಿಯಾಗಿ ತೆಗೆದುಕೊಂಡಂತಹ ಷಡ್ರಸಯುಕ್ತ ಆಹಾರವು ಈ ಮೂರು ಅವಸ್ಥೆಯಲ್ಲಿ ದಾಟಬೇಕಾಗುವದು ಈ ರೀತಿಯಲ್ಲಿ ಅವಸ್ಥಾಪಾಕದ ಪ್ರಥಮಾವಸ್ಥೆಯಲ್ಲಿ ಉತ್ಪನ್ನವಾದ ಮಧುರ ಭಾವದಿಂದ ಕಫ, ಪಚ್ಯಮಾನ ಅವಸ್ಥೆಯಲ್ಲಿ ಉತ್ಪನ್ನವಾದ ಅಮ್ಲ ಭಾವದಿಂದ ಪಿತ್ತ ಮತ್ತು ಪಕ್ವಾವಸ್ಥೆಯಲ್ಲಿ ಉತ್ಪನ್ನವಾದ ಕಟುಭಾವದಿಂದ ವಾತದ ಉತ್ಪತ್ತಿ ಯಾಗುವದು; ಅವಸ್ಥಾಪಾಕದಲ್ಲಿ ಬೋಧಕ ಕಫ, ಕ್ಲೇದಕ ಕಫ, ಪಾಚಕ ಪಿತ್ತಗಳಿಂದ ಅನ್ನದ ಪಚನವಾಗುವದು. ಆಮಾವಸ್ಥಾ ಪಚ್ಯಮಾನಾವಸ್ಥಾ ಮತ್ತು ಪಕ್ವಾವಸ್ಥೆಯಲ್ಲಿ ಆರು ರಸಗಳಿಂದ ಕೂಡಿದ ಆಹಾರದಿಂದ ಕ್ರಮವಾಗಿ ಮಧುರ, ಅಮ್ಲ ಮತ್ತು ಕಟುರಸಗಳ ಉದೀರಣವಾಗುವದು. ಮತ್ತು ಅವುಗಳಿಂದ ಕಫ, ಪಿತ್ತ, ವಾತ ದೋಷಗಳ ಉತ್ಪತ್ತಿಯಾಗುವದು.

ವಿಪಾಕ (ನಿಷ್ಠಾಪಾಕ) ವರ್ಣನಃ—

ಮೂರು ಅವಸ್ಥಾಪಾಕಗಳ ಅಂತ್ಯದಲ್ಲಿ ಆದ್ಯ ರಸಧಾತುವಿನಲ್ಲಿ ಯಾವ ಒಂದು ರಸವಿಶೇಷದ ಉತ್ಪತ್ತಿಯಾಗುವದೋ ಅದಕ್ಕೆ ವಿಪಾಕ ಅಥವಾ ನಿಷ್ಠಾಪಾಕ ಅನ್ನುವರು.

'विपाकस्तु रसमलविवेकसमकालो भिन्नकाल एवावस्थापाकैः समम् इति न विरोधः'। (च. द.)

ವಿಪಾಕ ಅಥವಾ ವಿಶೇಷಪಾಕವು ಮೂರು ಅವಸ್ಥಾಪಾಕಗಳ ನಂತರ ರಸ-ಮಲ ಗಳ ವಿವೇಚನಕಾಲದಲ್ಲಿ ರಸಧಾತುವಿನ ಉತ್ಪನ್ನವಾಗುವದು. ಮತ್ತು ಅದರ ಸಂಗಡ ಶರೀರದ ತುಂಬ ಭ್ರಮಣಮಾಡುವದು.

'इमे मधुराम्लकटुरूपेण रसानां त्रयो विपाकाश्च स परिणामाः रसाख्ये आद्यधातौ गुणा भवन्ति, न तु पाकारम्भचरमपर्यन्तं पच्यमाने षड्सद्रव्ये प्रथममध्यमचरमावस्थासु मधुराम्लकटुरूपाः'। (ग)

ಷಡ್ರಸಾತ್ಮಕ ದ್ರವ್ಯಗಳ ವಿಪಾಕವು ಮಧುರ, ಆಮ್ಲ ಮತ್ತು ಕಟುವೆಂದು ಮೂರು ವಿಧವಿರುತ್ತದೆ. ಮಧುರ, ಲವಣ ರಸಾತ್ಮಕ ದ್ರವ್ಯಗಳ ವಿಪಾಕವು ಮಧುರ ವಾಗುತ್ತದೆ. ಈ ವಿಪಾಕವು ಆಮಾಶಯದಲ್ಲಿ ಆಗುತ್ತದೆ. ಆಗ ಪೃಥ್ವಿ ಮತ್ತು ಆಪ ಮಹಾಭೂತ ಪ್ರಾಧಾನ್ಯವುಳ್ಳ ಮಧುರ ರಸಾತ್ಮಕ ದ್ರವ್ಯಗಳ ಪಚನವಾಗಿ ಮಧುರ ಪಾಕವಾಗುತ್ತದೆ. ಇದೇ ಸ್ಥಾನದಲ್ಲಿ ಲವಣ ರಸಾತ್ಮಕ ದ್ರವ್ಯದ ಪಚನವಾಗಿ ಅದು ವಿಪಾಕವಾದರೂ ಮಧುರವೇ ಆಗುತ್ತದೆ. ಅದರಿಂದ ಸ್ನಿಗ್ಧ, ಶೀತ, ಗುರು, ಸ್ಥಿರ, ಪಿಚ್ಛಿಲ ಇತ್ಯಾದಿ ಗುಣಗಳ ಉತ್ಪತ್ತಿಯಾಗುತ್ತದೆ. ಹಾಗೂ ಧಾತುರೂಪ ಕಫ ದೋಷದ ಉದೀರಣವಾಗುತ್ತದೆ. ಸೇವಿಸಿದ ಆಹಾರವು ಆಮಾಶಯದಲ್ಲಿ ಮಧುರ ಭಾವವನ್ನು ಹೊಂದುತ್ತದೆ. ಮುಂದೆ ಪಚ್ಯಮಾನಾಶಯದಲ್ಲಿ ತೇಜ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳ ಪಚನವಾಗುತ್ತದೆ. ಅಲ್ಲಿ ಅಮ್ಲ ರಸದ ಪಚನವಾಗಿ ಅದರ ವಿಪಾಕವು ಅಮ್ಲ ವಾಗುತ್ತದೆ. ಆಗ ಉಷ್ಣ, ತೀಕ್ಷ್ಣ, ಲಘು, ಸರ ಇತ್ಯಾದಿ ಗುಣಗಳ ಉತ್ಪತ್ತಿಯಾಗು ವದು. ಹಾಗೂ ಧಾತುರೂಪ ಪಿತ್ತ ದೋಷದ ಉದೀರಣವಾಗುವದು. ಈ ಸ್ಥಾನದಲ್ಲಿ ಸೇವಿಸಿದ ಆಹಾರವು ಅಮ್ಲ ಭಾವವನ್ನು ಹೊಂದುತ್ತದೆ. ಪಕ್ವಾಶಯದಲ್ಲಿ ಕಟು, ತಿಕ್ತ, ಕಷಾಯ ರಸಗಳ ಪಚನವಾಗಿ ಕಟು ವಿಪಾಕವಾಗುತ್ತದೆ. ಇಲ್ಲಿ ವಾಯು, ಆಕಾಶ ಮಹಾಭೂತ ಪ್ರಾಧಾನ್ಯವುಳ್ಳ ದ್ರವ್ಯಗಳ ಪಚನವಾಗುತ್ತದೆ. ಆಗ ಲಘು, ರೂಕ್ಷ, ಖರ, ಚಲ ಇತ್ಯಾದಿ ಗುಣಗಳ ಉತ್ಪತ್ತಿಯಾಗುವದು. ಮತ್ತು ಧಾತುರೂಪ ವಾತ ದೋಷದ ಉದೀರಣವಾಗುವದು. ಸೇವನೆ ಮಾಡಿದ ಆಹಾರವು ಈ ಸ್ಥಾನದಲ್ಲಿ ಕಟು ಭಾವವನ್ನು ಹೊಂದುತ್ತದೆ.

ಈ ರೀತಿಯಾಗಿ ನಿಷ್ಠಾ ಪಾಕದಲ್ಲಿ ಧಾತುರೂಪ ವಾತ, ಪಿತ್ತ ಮತ್ತು ಕಫ ದೋಷಗಳ ಉತ್ಪತ್ತಿಯಾಗುತ್ತದೆ.

ವಿಪಾಕ ಸಂಖ್ಯಾ ವಿನಿಶ್ಚಯಃ—

ವಿಪಾಕ ಸಂಖ್ಯಾ ವಿಷಯದಲ್ಲಿ ಶಾಸ್ತ್ರಕಾರರ ಭಿನ್ನ-ಭಿನ್ನ ಮತಗಳು ಇರುವವು. ಮತ್ತು ಈ ಭಿನ್ನ ಮತಗಳನ್ನು ಸೂಕ್ಷ್ಮರೀತಿಯಿಂದ ಪರಿಶೀಲಿಸಿ ಕೊನೆಗೆ ನಿಶ್ಚಿತ ಸಂಖ್ಯೆಗೆ ಬಂದಿರುವರು,

ಯಥಾರಸ ವಿಪಾಕವಾದಃ-

इह केचिदाचक्षते—प्रतिरसं पाकः अम्लो अम्लस्य, मधुरोमधुरस्य, लवणो लवणस्य, कटुकः कटुकस्य, तिक्तस्तिक्तस्य, कषायः कषायस्येति षडेव विपाकाः। किमत्र प्रमाणमितिचेत्, उच्यते-यथा क्षीरमतिपच्यमानमपि मधुरमेव स्यात्, यथा वा शालियवादयः उप्ताः प्ररूढाश्च फलिताश्च शाल्यादि स्वरूपा एव भवन्ति, तथा मधुरादयोऽपि निष्ठापाकेऽपि मधुरादिस्वरुपा एव भवितुमर्हन्तीति। उक्तं च—उप्ताः षष्टिकमाषाद्याः बाह्यपक्वाश्च षड्रसाः। यान्ति नान्यत्वमित्येवं पाकः प्रतिरसं भवेत्। (शि)

तत्राहुरन्ये प्रतिरसं पाक इति। मधुरो मधुरस्याम्लोऽम्लस्यैवं सर्वेषामिति। दृष्टान्तं चोपदिशन्ति यथा शालियवमुद्गादयः प्रकीर्णाः स्वभावमुत्तरकालेऽपि न परित्यजन्ति तद्वदिति। (सु. सू. ४०)

ಯಥಾ ರಸವಿಪಾಕವಾದಿಗಳ ಪ್ರಕಾರ ಆರು ರಸಗಳ ಆರು ವಿಪಾಕವಾಗುವವು ಅಂದರೆ ಮಧುರ ರಸದ ಮಧುರ ವಿಪಾಕ, ಅಮ್ಲ ರಸದ ಅಮ್ಲ ವಿಪಾಕ, ಲವಣ ರಸದ ಲವಣವಿಪಾಕ, ಕಟುರಸದ ಕಟುವಿಪಾಕ ಮತ್ತು ಕಷಾಯರಸದ ಕಷಾಯವಿಪಾಕ. ಯಾವ ರೀತಿಯಾಗಿ ಶಾಲಿ, ಯವ ಮತ್ತು ಮುದ್ಗ ಆದಿ ಬೀಜಗಳನ್ನು ಬಿತ್ತಿದರೆ ತಮ್ಮ ತಮ್ಮ ಜಾತಿಗಳನ್ನೆ ಬೆಳೆಸುವವು ಆದರೆ ಅನ್ಯ ಜಾತಿಗಳ ವೃಕ್ಷಗಳನ್ನು ಬೆಳೆಸುವದಿಲ್ಲ. ಅದೇ ರೀತಿಯಾಗಿ ಮಧುರ ರಸದಿಂದ ಮಧುರವಿಪಾಕ, ಅಮ್ಲ ರಸದಿಂದ ಅಮ್ಲ ವಿಪಾಕ, ಲವಣ ರಸದಿಂದ ಲವಣವಿಪಾಕ ಈ ರೀತಿಯಾಗಿ ತಮ್ಮ ತಮ್ಮ ರಸಗಳು ತಮ್ಮ ತಮ್ಮ ವಿಪಾಕಗಳೇ ಆಗುವವೆಂದು ಈ ಮತಾನುಯಾಯಿಗಳು ತಮ್ಮ ಮತವನ್ನು ಮಂಡಿಸಿರುವರು. ಅಂದರೆ ಮಧುರಾದಿ ರಸಗಳ ವಿಪಾಕವಾದನಂತರ ಅವು ತಮ್ಮ ಮಧುರಾದಿ ಸ್ವಭಾವಗಳನ್ನು ಬಿಡುವದಿಲ್ಲವೆಂದು ಈ ಮತಾನುಯಾಯಿಗಳು ತಿಳಿಯುವರು. ಈ ಮತದ ಪ್ರಕಾರ ವಿಪಾಕಗಳ ಸಂಖ್ಯೆಯು ಆರು ಇರುವವು. ಆದರೆ ಆಯುರ್ವೇದ ಶಾಸ್ತ್ರದಲ್ಲಿ ವಿಪಾಕಗಳ ಸಂಖ್ಯೆ ಆರು ಇರುವದಿಲ್ಲ. ಆದ್ದರಿಂದ ಈ ಮತವನ್ನು ಶಾಸ್ತ್ರಕಾರರು ಕೆಳಗಿನಂತೆ ಖಂಡಿಸುವರು.

यत् स्वादुर्व्रीहिरम्लत्वं न चाम्लमपि दाडिमम्।
याति तैलं च कटुतां कटुकापि न पिप्पली।
यथारसत्वे पाकानां न स्यादेवं विपर्ययः॥ (अ. सं. सू. १७)

ವ್ರೀಹೀ ಧಾನ್ಯವು ಮಧುರ ರಸದ್ದು ಇದ್ದು ಅದರ ವಿಪಾಕವು ಅಮ್ಲವಾಗುವದು. ದಾಡಿಮವು ಅಮ್ಲ ರಸದ್ದು ಇದ್ದು ಅದರ ವಿಪಾಕ ಮಧುರವಾಗುವದು. ತೈಲ ಮಧುರ ರಸದ್ದು ಇದ್ದು ಕಟುವಿಪಾಕವುಳ್ಳದ್ದಾಗುವದು. ಪಿಪ್ಪಲಿಯು ಕಟು ರಸದ್ದು ಇದ್ದು ಅದರ

ವಿಪಾಕ ಮಧುರ ಇರುವದು. ಶುಂಠಿಯು ಕಟು ರಸವುಳ್ಳದ್ದು ಇದ್ದು ಅದರ ವಿಪಾಕ ಮಧುರವಾಗುವದು. ಈ ಮುಂತಾದ ಉದಾಹರಣೆಗಳಿಂದ ನೋಡಲಾಗಿ ರಸದ ಪ್ರಕಾರ ವಿಪಾಕವಾಗುವದಿಲ್ಲವೆಂದು ತಿಳಿದು ಬರುವದು. ರಸದ ಮತ್ತು ವಿಪಾಕದ ಲಕ್ಷಣಗಳು ಬೇರೆ ಬೇರೆ ಇರುವವು. ಅದರಂತೆ ರಸದ ಜ್ಞಾನವು ಪ್ರತ್ಯಕ್ಷ ಗಮ್ಯವಿರುವದು. ಆದರೆ ವಿಪಾಕವು ಅನುಮಾನ ಗಮ್ಯವಿರುವದು. ಆದ್ದರಿಂದ ವಿಪಾಕಗಳು ಯಥಾ ರಸವಿಪಾಕ ವಾದಿಗಳ ಪ್ರಕಾರ ಆರು ಇರುವದಿಲ್ಲ.

ಅನಿಯತ ವಿಪಾಕವಾದಃ—

केचित् पुनरबलवन्तो बलवतां वशमायान्ति, तस्मादनवस्थितः पाक इति । (सु. सू. ४०)

रसाद्विविधा बलवन्तोऽबलवन्तश्च; बलवत्त्वं च व्यक्तत्वेन मात्राबाहुल्येन वा, अबलवत्त्वं पुनरेतद्विपर्ययेण; तत्राल्पतयाऽबलवन्तो रसा बलवतां वशमायान्तीति । (शि)

ಈ ಮತದ ಪ್ರಕಾರ ಕೂಡಾ ವಿಪಾಕಗಳು ಆರು ಇರುವವು. ಆದರೆ ದ್ರವ್ಯದಲ್ಲಿಯ ಬಲವಾನ್ ರಸದಂತೆ ವಿಪಾಕವಾಗುವದು. ಅಂದರೆ ದ್ರವ್ಯದಲ್ಲಿಯ ಪ್ರಬಲ ರಸವು ಉಳಿದ ರಸಗಳನ್ನು ಮೀರಿಸಿ ಅದರಂತೆ ವಿಪಾಕವಾಗುವದು. ಈ ಮತ ವಾದವೂ ಕೂಡಾ ಗ್ರಾಹ್ಯವಿರುವದಿಲ್ಲ. ಯಾಕಂದರೆ ಅನಿಯಮ ಅಥವಾ ಅನವಸ್ಥಾಕ್ಕೆ ಯಾವದೂ ಸ್ಥಾನವಿರುವದಿಲ್ಲ.

ಪಂಚವಿಧ ವಿಪಾಕವಾದಃ—

पञ्चभूतात्मके देहे आहारः पाञ्चभौतिकः ।
विपक्वः पञ्चधा सम्यक् स्वान् गुणानभिवर्धयेत् । (सु. सू. ४६)

ಸೃಷ್ಟಿಯಲ್ಲಿಯ ದ್ರವ್ಯಗಳು ಪಾಂಚಭೌತಿಕವಿರುವದರಿಂದ ವಿಪಾಕಗಳೂ ಐದು ಪ್ರಕಾರದವು ಇರುವವೆಂದು ಕೆಲವರ ಮತವಿರುವದು. ಆದರೆ ಪಂಚಮಹಾಭೂತಗಳ ಗುಣ ಸ್ವರೂಪಗಳನ್ನು ವಿಚಾರಮಾಡಲಾಗಿ ಪೃಥ್ವಿ ಮತ್ತು ಜಲ ಈ ಎರಡು ಮಹಾಭೂತಗಳು ಗುರು ಗುಣಾತ್ಮಕವುಳ್ಳವು ಮತ್ತು ಅಗ್ನಿ, ವಾಯು, ಆಕಾಶ ಇವು ಲಘು ಗುಣಾತ್ಮಕವುಳ್ಳವು ಇರುವವು. ಈ ರೀತಿಯಾಗಿ ವಿಚಾರಮಾಡಲಾಗಿ ಪಂಚವಿಧ ವಿಪಾಕಗಳು ದ್ವಿವಿಧ ವಿಪಾಕದ ಸ್ವರೂಪವೆಂದು ತಿಳಿಯಲು ಅಡ್ಡಿ ಇಲ್ಲ.

ತ್ರಿವಿಧ ವಿಪಾಕಃ—

कटुतिक्तकषायाणां विपाकः प्रायशः कटुः ।
अम्लोऽम्लं पच्यते स्वादुर्मधुरं लवणस्तथा । (च. सू. २६)
त्रिधा विपाको द्रव्यस्य स्वाद्वम्ल कटुकात्मकः ।
(अ. सं. सू. अ. १)

वस्तुतस्तु दोषाणां त्रैविध्याद्विपाकस्यापि तदनुगुणतया त्रैविध्यमेवोचितम् । (यो)

ಅತ್ರೇಯ ಸಂಪ್ರದಾಯದ ಪ್ರಕಾರ:—

ವಿಪಾಕಗಳು ಮೂರು ಇರುವವು. ಮಧುರ ವಿಪಾಕ, ಅಮ್ಲವಿಪಾಕ ಮತ್ತು ಕಟು ವಿಪಾಕ. ಕಟು, ತಿಕ್ತ ಮತ್ತು ಕಷಾಯ ಈ ಮೂರು ರಸಗಳುಳ್ಳ ದ್ರವ್ಯಗಳ ವಿಪಾಕ ಪ್ರಾಯಶಃ ಕಟುವಾಗುವದು. ಅಮ್ಲರಸ ದ್ರವ್ಯಗಳ ವಿಪಾಕ ಅಮ್ಲವಾಗುವದು. ಮತ್ತು ಮಧುರ, ಲವಣ ರಸಗಳ ವಿಪಾಕ ಪ್ರಾಯಃ ಮಧುರವಾಗುವದು. ಎಲ್ಲ ಕಟು ರಸ ದ್ರವ್ಯಗಳ ವಿಪಾಕ ಕಟು ಆಗುತ್ತದೆಂದು ಹೇಳಲಿಕ್ಕೆ ಬರುವದಿಲ್ಲ. ಅದರಂತೆ ಎಲ್ಲ ಮಧುರ ರಸ ದ್ರವ್ಯಗಳ ವಿಪಾಕ ಮಧುರವಾಗುತ್ತದೆಂದು ಹೇಳಲಿಕ್ಕೆ ಬರುವದಿಲ್ಲ. ಆದ್ದರಿಂದ ಪ್ರಾಯಃ ಈ ಶಬ್ದವನ್ನು ಪ್ರಯೋಗಿಸಿರುವರು.

ಉದಾ:- यथा शुण्ठीपिप्पल्यादीनां कटूनां मधुरो विपाकः, कषायस्य कुलत्थस्याम्लः, कषाया हरीतकी अम्लमामलकं च मधुरं पच्यते, मधुरोव्रीहिश्चाम्लं, तथाविधं तैलं पुनः कटुकम् । (यो)

ಶುಂಠಿ ಮತ್ತು ಹಿಪ್ಪಲಿ ದ್ರವ್ಯಗಳ ರಸ ಕಟುವಿದ್ದು ಅವುಗಳ ವಿಪಾಕವು ನಿಯಮದ ಪ್ರಕಾರ ಕಟು ಆಗಬೇಕಾಗಿತ್ತು ಆದರೆ ಅವುಗಳ ವಿಪಾಕ ಮಧುರ ಆಗುವದು. ಕುಲತ್ಥವು ಕಷಾಯ ರಸದ್ದು ಇದ್ದು ಅಮ್ಲ ವಿಪಾಕವುಳ್ಳದ್ದಾಗುವದು. ಕಷಾಯ ರಸ ಪ್ರಧಾನವುಳ್ಳ ಹರಿತಕಿಯ ವಿಪಾಕ ಮಧುರವಾಗುವದು. ಮಧುರ ರಸಾತ್ಮಕ ವ್ರಿಹೀ ಧಾನ್ಯದ ವಿಪಾಕ ಅಮ್ಲವಾಗುವದು. ಮತ್ತು ಮಧುರ ರಸಾತ್ಮಕ ತೈಲದ ವಿಪಾಕವು ಕಟುವಾಗುವದು. ಆದ್ದರಿಂದ ಶಾಸ್ತ್ರದಲ್ಲಿ ಹೇಳಿದ ನಿಯಮಕ್ಕೆ ಅಪವಾದಾತ್ಮಕ ದ್ರವ್ಯಗಳು ಇರುವದರಿಂದ ಪ್ರಾಯಶಃ ಶಬ್ದದ ಉಪಯೋಗಮಾಡಿರುವರು.

ಪರಾಶರ ಮುನಿಯಾದರೂ ವಿಪಾಕಗಳನ್ನು ಮೂರೇ ಮನ್ನಿಸಿರುವನು. ಆದರೆ ಇವನ ಪ್ರಕಾರ ಸ್ವಲ್ಪ ಅಂತರವಿದ್ದದ್ದು ಕಂಡುಬರುವದು.

पाकास्त्रयो रसानामम्लोऽम्लं पच्यते, कटुः कटुकम् ।
चत्वारोऽन्ये मधुरं, संकीर्णरसास्तु संकीर्णम् । (अ. सं. सू. १७)

ಪರಾಶರ ಮುನಿಯ ಪ್ರಕಾರ ಅಮ್ಲ ರಸದ ವಿಪಾಕ ಅಮ್ಲವಾಗುವದು. ಕಟು ರಸದ ವಿಪಾಕ ಕಟು ಆಗುವದು. ಮತ್ತು ಉಳಿದ ಮಧುರ, ಲವಣ, ತಿಕ್ತ, ಕಷಾಯ ರಸಗಳ ವಿಪಾಕ ಮಧುರವಾಗುವದು. ಅತ್ರೇಯ ಸಂಪ್ರದಾಯದ ಪ್ರಕಾರ ತಿಕ್ತ, ಕಷಾಯ ರಸಗಳ ವಿಪಾಕ ಕಟುವಾಗುವದು. ಆದರೆ ಕಟು ವಿಪಾಕವು ಪಿತ್ತಶಾಮಕ ವಿರುವದಿಲ್ಲ. ಅನುಭವದಿಂದ ನೋಡಲಾಗಿ ತಿಕ್ತ ಕಷಾಯ ರಸಾತ್ಮಕ ದ್ರವ್ಯಗಳು ಪಿತ್ತಶಾಮಕವಿರುವವು. ಆದ್ದರಿಂದ ಇವೆರಡು ರಸಗಳ ವಿಪಾಕವು ಮಧುರವಾಗುವದೆಂದು ಪರಾಶರ ಮುನಿಯು ಪ್ರತಿಪಾದಿಸುವನು. ಚರಕ ಮತಾನುಯಾಯಿಗಳು ಈ ಮತವನ್ನು ಖಂಡಿಸುತ್ತ ತಿಕ್ತ ಕಷಾಯ ರಸಗಳ ವಿಪಾಕ [illegible] ಸ್ವತಃ

ಕಾರ್ಯ ಮಾಡುವದಿಲ್ಲ. ಅಲ್ಲದೇ ಅವುಗಳ ವೀರ್ಯ ಶೀತವಿರುವದರಿಂದ ಪಿತ್ತ ಶಾಮಕ ಕಾರ್ಯವಾಗುವದು. ಉದಾ:- ಬೇವು ಇದು ತಿಕ್ತ ರಸಾತ್ಮಕ ಇರುವದು. ಅದರ ವಿಪಾಕ ನಿಯಮದ ಪ್ರಕಾರ ಕಟುವಾಗುವದು ಮತ್ತು ವೀರ್ಯ ಶೀತವಿರುವದು. ಆದರೆ ಇದು ಕಟು ವಿಪಾಕವುಳ್ಳದ್ದು ಇದ್ದರೂ ಪಿತ್ತಶಮನ ಕಾರ್ಯ ಮಾಡುವದೇ ಹೊರತು ಪಿತ್ತ ಪ್ರಕೋಪಮಾಡುವದಿಲ್ಲ ರಸಾದಿ ಗುಣಗಳು ತಮ್ಮ ನೈಸರ್ಗಿಕ ಬಲದಿಂದ ಕಾರ್ಯಮಾಡುವವು.

ದ್ವಿಧಾ ವಿಪಾಕವಾದಃ—

ಸುಶ್ರುತನು ಆಗಮ ಪ್ರಮಾಣ ಮತ್ತು ಪಂಚಮಹಾಭೂತವಾದಕ್ಕನುಸಾರವಾಗಿ ಎರಡೇ ವಿಪಾಕಗಳನ್ನು ಸ್ವೀಕಾರ ಮಾಡಿರುವನು. ನಾಗಾರ್ಜುನನು ವಿಪಾಕದ ಲಕ್ಷಣದ ಆಧಾರದ ಮೇಲೆ ವಿಪಾಕದ ಸಂಖ್ಯೆಯನ್ನು ನಿರ್ದಿಷ್ಟ ಮಾಡಿರುವನು. ಅವನು ಈ ಪ್ರಕಾರ ಹೇಳುವನು ಏನಂದರೆ ಆಹಾರದ ಪರಿಣಾಮವು ಎರಡು ಪ್ರಕಾರದ್ದಾಗುತ್ತದೆ. ಅಂದರೆ ಕೆಲವು ಪದಾರ್ಥಗಳು ಬೇಗ ಪಚನವಾಗುತ್ತವೆ. ಮತ್ತೆ ಕೆಲವು ಪದಾರ್ಥಗಳು ತಡವಾಗಿ ಪಚನವಾಗುತ್ತವೆ. ಆಹಾರ ಪರಿಣಾಮದ ಈ ದ್ವಿವಿಧತೆಯು ಕಾರಣ ತಲ್ಲಕ್ಷಣ ವಿಪಾಕವಾದರೂ ದ್ವಿವಿಧವೆಂದು ಸಿದ್ಧವಾಗುತ್ತದೆ. ಆಹಾರ ಪರಿಣಾಮಕ್ಕೆ ಮಹಾಭೂತಗಳ ಗುಣಗಳು ಕಾರಣವಾಗುತ್ತವೆ. ಗುರು ಗುಣವುಳ್ಳ ಪದಾರ್ಥಗಳು ತಡವಾಗಿ ಪಚನವಾಗುತ್ತವೆ. ಮತ್ತು ಲಘು ಗುಣಾತ್ಮಕ ದ್ರವ್ಯಗಳು ಬೇಗ ಪಚನವಾಗುತ್ತವೆ. ಈ ಗುಣಗಳ ಸಂಖ್ಯೆಯಾದರೂ ಎರಡೇ (ಗುರು ಮತ್ತು ಲಘು) ಇರುವದರಿಂದ ಅವುಗಳಿಂದುತ್ಪನ್ನವಾಗುವ ವಿಪಾಕಗಳಾದರೂ ಎರಡೇ ಪ್ರಕಾರದವಿರುತ್ತವೆ.

ವಿಪಾಕ ಕರ್ಮ:—

मधुरो लवणाम्लौ च स्निग्ध भावात् त्रयो रसाः ।
वातमूत्र पुरीषाणां प्रायो मोक्षे सुखा मताः ॥
कटु तिक्त कषायास्तु रूक्ष भावात् त्रयो रसाः ।
दुःखाय मोक्षे दृश्यन्ते वात विण्मूत्र रेतसाम् ॥
शुक्रहा बद्ध विण्मूत्रो विपाको वातलः कटुः ।
मधुरः सृष्ट विण्मूत्रः विपाकः कफ शुक्रलः ॥
पित्तकृत् सृष्ट विण्मूत्रः पाकोऽम्लः शुक्रनाशनः ।
तेषां गुरुः स्यान्मधुरः कटुकाम्लावतोऽन्यथा ॥ (च. सू २६)

गुरु लघु विपाकावुक्त गुणौ । गुरुपाको वात पित्तघ्नः लघुपाकः श्लेष्मघ्नः । गुरुपाकः सृष्ट विण्मूत्रतया कफोत्क्लेशेन च, लघुर्बद्ध विण्मूत्रतया मारुतकोपेन च ॥ (सु. सू. ४१)

कटुर्विपाकः शुक्रघ्नो बद्धविड् वातलो लघुः ।
स्वादुर्गुरु सृष्टमलो विपाकः कफ शुक्रलः ॥
पाकोऽम्लः सृष्टविण्मूत्रः पित्तकृच्छुक्रजुल्लघुः । (द्रव्यगुण संग्रह)

ಮಧುರ, ಅಮ್ಲ ಮತ್ತು ಲವಣ ಈ ಮೂರು ರಸಗಳು ಸ್ನಿಗ್ಧವಿರುವದರಿಂದ ವಾತ, ಮೂತ್ರ ಮತ್ತು ಮಲಗಳನ್ನು ಸ್ವಚ್ಛ ಮಾಡುತ್ತವೆ. ಕಟು, ತಿಕ್ತ ಮತ್ತು ಕಷಾಯ ಈ ಮೂರು ರಸಗಳು ರೂಕ್ಷವಿರುವದರಿಂದ ವಾತ, ಮೂತ್ರ ಮತ್ತು ಮಲಗಳ ಅವರೋಧ ಮಾಡುತ್ತವೆ. ಕಟು ವಿಪಾಕವು ಶುಕ್ರ ಕ್ಷಯ ಮಾಡುವಂತಹದು. ಮಲ ಮೂತ್ರಗಳ ಅವರೋಧಮಾಡುವಂಥದು ಹಾಗೂ ವಾಯುವನ್ನು ಉತ್ಪನ್ನ ಮಾಡುವಂತಹದು ಇರುತ್ತದೆ. ಮಧುರ ವಿಪಾಕವು ಮಲ, ಮೂತ್ರಗಳ ಪ್ರವೃತ್ತಿಯನ್ನು ಸರಿಯಾಗಿ ಮಾಡುವಂತಹದು, ಕಫ ಮತ್ತು ಶುಕ್ರಗಳ ವರ್ಧನ ಮಾಡುವಂತಹದಿರುತ್ತದೆ. ಅಮ್ಲ ವಿಪಾಕವು ಮಲ, ಮೂತ್ರಗಳ ಪ್ರವೃತ್ತಿಯನ್ನು ಸರಿಯಾಗಿ ಮಾಡುವಂತಹದು, ಶುಕ್ರಕ್ಷಯ ಮಾಡುವಂತಹದು ಹಾಗೂ ಪಿತ್ತವರ್ಧನ ಮಾಡುವಂತಹದಾಗಿದೆ. ಮಧುರ ವಿಪಾಕವು ಗುರುವಿರುತ್ತದೆ ಕಟು ಮತ್ತು ಅಮ್ಲ ವಿಪಾಕಗಳು ಲಘು ಇರುತ್ತವೆ.

ಮಧುರ, ಅಮ್ಲ ಮತ್ತು ಕಟು ಈ ಮೂರು ವಿಪಾಕಗಳು ಮಧುರ, ಅಮ್ಲ ಮತ್ತು ಕಟು ರಸಗಳ ತುಲ್ಯ ಫಲಗಳಾಗಿವೆ. ಗುರು ವಿಪಾಕವು ವಾತ ಮತ್ತು ಪಿತ್ತದ ಹಾಗೂ ಲಘು ವಿಪಾಕವು ಕಫದ ನಾಶ ಮಾಡುತ್ತವೆ. ಕಫದ ವೃದ್ಧಿ ಹಾಗೂ ಮಲ, ಮೂತ್ರಗಳು ಸ್ವಚ್ಛವಾದರೆ ಗುರು ವಿಪಾಕದ ಅನುಮಾನ ಮಾಡಬೇಕು. ಇದರ ವಿರುದ್ಧವಾಗಿ ಅಂದರೆ ವಾಯುವಿನ ವೃದ್ಧಿ ಮತ್ತು ಮಲ, ಮೂತ್ರಗಳ ಅವರೋಧವಾದರೆ ಲಘು ವಿಪಾಕದ ಅನುಮಾನ ಮಾಡಬೇಕು.

ವಿಪಾಕ ವಿಪರ್ಯಾಸ:—

द्रव्य प्रमाण संस्कार सात्म्याग्नि बलाबल देश काल संयोग पाक विशेषैर्विपाक विपर्यासः । (र. वै. सू. ४)

ದ್ರವ್ಯದ ಪ್ರಮಾಣ, ಸಂಸ್ಕಾರ, ಸಾತ್ಮ್ಯ, ಅಗ್ನಿಬಲ, ದೇಶ, ಕಾಲ, ಸಂಯೋಗ ಮತ್ತು ಪಾಕ ಇವುಗಳ ವಿಶೇಷದಿಂದ ವಿಪಾಕದಲ್ಲಿ ವಿಪರ್ಯಾಸವಾಗುತ್ತದೆ.

1) ಪ್ರಮಾಣ:-

ಪ್ರಮಾಣ ವಿಶೇಷದಿಂದ ವಿಪಾಕವು ಬದಲಾಗುತ್ತದೆ. ಉದಾ:- ಗುರು ವಿಪಾಕವುಳ್ಳ ಹಾಲು ಅಲ್ಪ ಪ್ರಮಾಣದಲ್ಲಿದ್ದರೆ ಶೀಘ್ರ ಪಚನವಾಗುತ್ತದೆ.

2) ಸಂಸ್ಕಾರ:-

ಸಂಸ್ಕಾರ ವಿಶೇಷದಿಂದ ವಿಪಾಕ ಬದಲಾಗುತ್ತದೆ. ಉದಾ:- ಗುರು ವಿಪಾಕವುಳ್ಳ ಹಾಲು ದೀಪನೀಯ ದ್ರವ್ಯಗಳ ಸಂಸ್ಕಾರದಿಂದ ತೀವ್ರ ಪಚನವಾಗುತ್ತದೆ.

3) ಸಾತ್ಮ್ಯ:-

ಸಾತ್ಮ್ಯ ವಿಶೇಷದಿಂದ ವಿಪಾಕ ಬದಲಾಗುತ್ತದೆ. ಉದಾ:- ಹಾಲು ಯಾರಿಗೆ ಸಾತ್ಮ್ಯವಾಗಿರುವದೋ ಅಂಥ ಬಾಲಕರಿಗೆ ಬೇಗ ಪಚನವಾಗುತ್ತದೆ.

4) ಅಗ್ನಿಬಲಃ-

ಅಗ್ನಿಬಲ ವಿಶೇಷದಿಂದ ವಿಪಾಕ ಬದಲಾಗುತ್ತದೆ. ಉದಾಃ- ತೀಕ್ಷ್ಣಾಗ್ನಿಯುಳ್ಳವರಿಗೆ ಗುರು ವಿಪಾಕವುಳ್ಳ ದ್ರವ್ಯಗಳು ಬೇಗ ಪಚನವಾಗುತ್ತವೆ.

5) ದೇಶಃ-

ದೇಶ ವಿಶೇಷದಿಂದ ವಿಪಾಕ ಬದಲಾಗುತ್ತದೆ. ಉದಾಃ- ಜಾಂಗಲ ದೇಶದಲ್ಲಿ ಗುರು ವಿಪಾಕವುಳ್ಳ ದ್ರವ್ಯ ಬೇಗ ಪಚನವಾಗುತ್ತದೆ. ಮತ್ತು ಅನೂಪದೇಶದಲ್ಲಿ ಲಘು ವಿಪಾಕವುಳ್ಳ ದ್ರವ್ಯ ತಡವಾಗಿ ಪಚನವಾಗುತ್ತದೆ.

6) ಕಾಲಃ-

ಕಾಲ ವಿಶೇಷದಿಂದ ವಿಪಾಕ ಬದಲಾಗುತ್ತದೆ. ಉದಾಃ- ವರ್ಷಾ ಕಾಲದಲ್ಲಿ ಲಘು ದ್ರವ್ಯ ತಡವಾಗಿ ಪಚನವಾಗುತ್ತದೆ. ಮತ್ತು ಹೇಮಂತ ಕಾಲದಲ್ಲಿ ಗುರು ದ್ರವ್ಯ ಬೇಗ ಪಚನವಾಗುತ್ತದೆ.

7) ಸಂಯೋಗಃ-

ಸಂಯೋಗ ವಿಶೇಷದಿಂದ ವಿಪಾಕ ಬದಲಾಗುತ್ತದೆ. ಉದಾಃ- ಶುಂಠಿಯನ್ನು ಕೂಡಿಸಿದ ಹಾಲು ಗುರು ವಿಪಾಕದ್ದಾಗುತ್ತಿದ್ದರೂ ಬೇಗ ಪಚನವಾಗುತ್ತದೆ.

8) ಪಾಕಃ-

ಪಾಕ ವಿಶೇಷದಿಂದ ವಿಪಾಕ ಬದಲಾಗುತ್ತದೆ. ಉದಾಃ- ಅರ್ಧ ಪಚನವಾದ ದ್ರವ್ಯವು ತಡವಾಗಿ ಪಚನವಾಗುತ್ತದೆ. ಮತ್ತು ಸರಿಯಾಗಿ ಕಾಯಿಸಿದ ಹಾಲು ಬೇಗ ಪಚನವಾಗುತ್ತದೆ.

ರಸ ವಿಪಾಕಗಳಲ್ಲಿ ಭೇದಃ—

ರಸ ಮತ್ತು ವಿಪಾಕ ಇವು ದ್ರವ್ಯದ ಎರಡು ಬೇರೆ ಬೇರೆ ಗುಣಗಳಾಗಿವೆ. ರಸ ಮತ್ತು ವಿಪಾಕ ಎರಡೂ ಒಂದೇ ಇರುವದಿಲ್ಲ. ಇವೆರಡರಲ್ಲಿಯ ಅಂತರವನ್ನು 1) ಲಕ್ಷಣ 2) ಕಾಲ 3) ಕರ್ಮ 4) ಕರ್ಮಾಧಿಷ್ಠಾನ 5) ಉಪಲಬ್ಧಿ. ಈ ಐದು ಭೇದಗಳಿಂದ ಕಂಡುಕೊಳ್ಳಲು ಬರುವದು.

1) ಲಕ್ಷಣಃ-

ರಸನೇಂದ್ರಿಯದಿಂದ ಗ್ರಹಣವಾಗುವ ಗುಣಕ್ಕೆ ರಸವೆನ್ನುವರು. ಆಹಾರವು ಜಠರಾಗ್ನಿಯಿಂದ ಪಚನವಾದ ನಂತರ ಉಂಟಾಗುವ ಪರಿಣಾಮ ಲಕ್ಷಣವುಳ್ಳ ಗುಣಕ್ಕೆ ವಿಪಾಕವೆನ್ನುವರು.

2) **ಕಾಲಭೇದಃ—**

ಮೊದಲು ರಸದ ಪ್ರತೀತವಾಗುತ್ತದೆ. ಪಚನಕ್ರಿಯೆಯ ನಂತರ ವಿಪಾಕದ ಪ್ರಾದುರ್ಭಾವವಾಗುತ್ತದೆ.

3) **ಕರ್ಮಭೇದ:—**

ರಸದ ಕಾರ್ಯವು ಸ್ಥಾನಿಕ. ವಿಪಾಕದ ಕಾರ್ಯವು ಸಾರ್ವದೇಹಿಕವಿರುವದು.

4) **ಕರ್ಮಾಧಿಷ್ಠಾನ ಭೇದಃ—**

ರಸವು ಶರೀರ ಮತ್ತು ಮನಸ್ಸು ಇವೆರಡು ಅಧಿಷ್ಠಾನಗಳಲ್ಲಿ ತನ್ನ ಕಾರ್ಯವನ್ನು ಮಾಡುತ್ತದೆ. ವಿಪಾಕವು ಶರೀರದ ಮೇಲೆ ತನ್ನ ಕಾರ್ಯವನ್ನು ಮಾಡುತ್ತದೆ. ಮನಸ್ಸಿನ ಮೇಲೆ ವಿಪಾಕವು ಕಾರ್ಯ ಮಾಡುವದಿಲ್ಲ.

5) **ಉಪಲಬ್ಧಿ ಭೇದ:—**

ರಸವು ಪ್ರತ್ಯಕ್ಷವಾಗಿ ರಸನೇಂದ್ರಿಯದಿಂದ ಪ್ರತೀತವಾಗುತ್ತದೆ. ಆದರೆ ವಿಪಾಕವು ಶರೀರದಲ್ಲಾಗುವ ಕ್ರಿಯೆಗಳ ಅನುಮಾನದಿಂದ ಗೊತ್ತಾಗುತ್ತದೆ.

ರಸ	ವಿಪಾಕ
1) ಆಸ್ವಾದ ರೂಪ	1) ಪರಿಣಾಮ ಲಕ್ಷಣ
2) ಆಶುಕರ್ಮ	2) ವಿಲಂಬಿತಕರ್ಮ
3) ಸ್ಥಾನಿಕ ಪ್ರಭಾವ	3) ಸಾರ್ವದೇಹಿಕ ಪ್ರಭಾವ
4) ಶಾರೀರ, ಮಾನಸ ಪ್ರಭಾವ	4) ಶಾರೀರ ಪ್ರಭಾವ
5) ಪ್ರತ್ಯಕ್ಷ ಗಮ್ಯ	5) ಅನುಮೇಯ

ವಿಪಾಕ ಪ್ರಾಧಾನ್ಯ ನಿರೂಪಣ:—

नेत्याहुरन्ये, विपाक: प्रधानमिति । कस्मात् ? सम्यङ्मिथ्याविपाकत्वात् इह सर्वद्रव्याण्यभ्यवहृतानि सम्यङ्मिथ्या विपक्वानि गुणं दोषं वा जनयंति । (सु. सू. अ. ४०)

ಕೆಲವು ಆಚಾರ್ಯರು ದ್ರವ್ಯ, ರಸ, ವೀರ್ಯಗಳ ಪ್ರಾಧಾನ್ಯತೆಯನ್ನು ಮನ್ನಿಸುವದಿಲ್ಲ, ವಿಪಾಕವೇ ಪ್ರಾಧಾನ್ಯವೆಂದು ಅವರು ಹೇಳುತ್ತಾರೆ. ಸೇವಿಸಿದ ಆಹಾರದ ಯೋಗ್ಯ ಪಾಕ (ಪಚನ) ವಾದರೆ ತ್ರಿದೋಷಗಳು ಸಾಮ್ಯಾವಸ್ಥೆಯಲ್ಲಿ ಉಳಿಯುತ್ತವೆ. ಮತ್ತು ಆರೋಗ್ಯವೂ ಲಭಿಸುತ್ತದೆ. ಆದ್ದರಿಂದ ವಿಪಾಕವು ಪ್ರಧಾನವಿರುತ್ತದೆ. ಮಂದಾಗ್ನಿಯ ಕಾರಣದಿಂದ ಸೇವಿಸಿದ ಆಹಾರವು ಯೋಗ್ಯ ರೀತಿಯಿಂದ ಪಚನವಾಗದಿದ್ದರೆ ಆಮವಿಕಾರಗಳುಂಟಾಗುತ್ತವೆ ಮತ್ತು ತೀಕ್ಷ್ಣ ಅಗ್ನಿಯಿಂದ ತೀಕ್ಷ್ಣ ಪಾಕವಾದದ್ದಾದರೆ ಭಸ್ಮಕ ವಿಕಾರಗಳಾಗುತ್ತವೆ. ಮಿಥ್ಯಾವಿಪಾಕವಾಗುವದರಿಂದ ಈ ರೀತಿಯ ದೋಷಗಳು ಉತ್ಪನ್ನವಾಗುತ್ತವೆ. ನಾವು ಸೇವಿಸಿದ ಆಹಾರದ ಸಮ್ಯಕ್ ಪಾಕದಿಂದ ಗುಣ ಹಾಗೂ ಮಿಥ್ಯಾ ಪಾಕದಿಂದ ದೋಷಗಳು ಉತ್ಪನ್ನವಾಗುತ್ತವೆ.

ನಾಗಾರ್ಜುನನು ವಿಪಾಕದ ಪ್ರಾಧಾನ್ಯತೆಯಲ್ಲಿ ಕೆಳಗಿನ ಯುಕ್ತಿಗಳನ್ನು ಹೇಳಿದ್ದಾನೆ.

1) ದೋಷಗಳ ಶಮನ ಮತ್ತು ವರ್ಧನವು ವಿಪಾಕದ ಆಧೀನವಿರುತ್ತದೆ.

2) ಶರೀರದಲ್ಲಿ ಧಾತುಗಳ ನಿರ್ಮಾಣಕ್ರಮವು ವಿಪಾಕ ದ್ವಾರಾ ಆಗುತ್ತದೆ.

3) ಎಲ್ಲ ಆಹಾರ ಮತ್ತು ಔಷಧ ದ್ರವ್ಯಗಳು ತಮ್ಮ ಗುಣ ಇಲ್ಲವೆ ದೋಷಗಳಿಗಾಗಿ ವಿಪಾಕವನ್ನೇ ಅವಲಂಬಿಸಿರುತ್ತವೆ. ಸಮ್ಯಕ್ ಪಕ್ವ ಆಹಾರ ಇಲ್ಲವೆ ಔಷಧ ದ್ರವ್ಯಗಳು ಗುಣಕಾರಿ ಇರುತ್ತವೆ. ಹಾಗೂ ಅಸಮ್ಯಕ್‌ಪಕ್ವ ಆಹಾರ ಇಲ್ಲವೆ ಔಷಧ ದ್ರವ್ಯಗಳು ದೋಷಕರವಾಗುತ್ತವೆ.

विपाक तालिका

	सुश्रुत मतानुसार		चरक मतानुसार		
1) विपाक भेद	गुरु विपाक	लघु विपाक	मधुर विपाक	अम्ल विपाक	कटु विपाक
2) रस पाक	मधुर–लवण	अम्ल–कटु तिक्त–कषाय	मधुर–लवण	अम्ल रस	कटु–तिक्त कषाय रस
3) पंच महाभूत	पृथ्वी–जल	आकाश–वायु तेज	पृथ्वी–जल	पृथ्वी–अग्नि	वायु–आकाश
4) गुण विशेष	गुरु	लघु	गुरु	लघु	लघु
5) दोष स्थिति	कफवर्धंक वात–पित्तहर	वातपित्तवर्धंक कफहर	कफ वर्धंक	पित्तवर्धंक	वात वर्धंक
6) धातु स्थिति	शुक्रवर्धन	शुक्र नाशन	शुक्ल	शुक्रनाशन	शुक्र नाशन
7) मल स्थिति	सृष्ट विण्मूत्र	बद्ध विण्मूत्र	सृष्ट विण्मूत्र	सृष्ट विण्मूत्र	बद्ध विण्मूत्र.

ಪ್ರಕರಣ ೫

ವೀರ್ಯ ವಿಜ್ಞಾನ

ಲಕ್ಷಣ ಮತ್ತು ಸ್ವರೂಪಃ—

'येन कुर्वन्ति तद्वीर्यम्' । (च. सू. २६)

'वीर्यं तु क्रियते येन या क्रिया' । (च. सू. २६)

ರಸವಿಪಾಕದಂತೆ ಇಲ್ಲವೇ ಅವುಗಳಿಗಿಂತಲೂ ಅಧಿಕ ಮಹತ್ವ ದ್ರವ್ಯಗಳ ವೀರ್ಯಕ್ಕೆ ಇರುವದು. ದ್ರವ್ಯದಲ್ಲಿಯ ಮುಖ್ಯ ಕಾರ್ಯಮಾಡುವ ಶಕ್ತಿಗೆ ವೀರ್ಯ ಅನ್ನುವರು. 'ಏನ ಯಾ ಕ್ರಿಯತೆ ಕ್ರಿಯಾ' ಅಂದರೆ ಯಾವದರಿಂದ ಯಾವ ಕಾರ್ಯ ಮಾಡಲ್ಪಡುವದೊ ಅದು ಆ ದ್ರವ್ಯದ ವೀರ್ಯವು. ದ್ರವ್ಯವು ಪಂಚಮಹಾಭೂತದಿಂದ ಆಗಿರುವದು. ಪೃಥಿವ್ಯಾದಿ ಮಹಾಭೂತಗಳ ವಿಯೋಜನ (ವಿಭಾಗ) ಶರೀರಾಂತರ್ಗತ ಪಚನದಲ್ಲಿ ಆಗುವದು. ನಂತರ ಅದರ ಸಾರಭಾಗದ ಶೋಷಣ ಆಗುವದು. ದ್ರವ್ಯದಲ್ಲಿ ಎರಡು ಪ್ರಕಾರಗಳಿವೆ. ಒಂದು ಆಹಾರೀಯ ದ್ರವ್ಯ ಮತ್ತೊಂದು ಔಷಧೀ ದ್ರವ್ಯ. ಆಹಾರ ದ್ರವ್ಯ ಪಚನವಾದನಂತರ ಶರೀರದಲ್ಲಿಯ ಆಯಾಗುಣ ಸಮಾನಯುಕ್ತ ರಸಾದಿ ಧಾತುಗಳಲ್ಲಿ ಶೋಷಣವಾಗುವದು. ಈ ರೀತಿಯಾಗಿ ಧಾತು ಮತ್ತು ಆಹಾರ ದ್ರವ್ಯದಲ್ಲಿಯ ಸಾರಭಾಗ ಇವುಗಳ ಸಂಯೋಗವಾಗುವದು. ಶರೀರ ಪೋಷಣ ಕಾರ್ಯವು ಆಹಾರ ದ್ರವ್ಯದ ವಿಶೇಷ ಕಾರ್ಯವಿರುವದು. ಧಾತು ಪೋಷಣ ಕ್ರಮದಲ್ಲಿ ಈ ಕಾರ್ಯವು ಮಹತ್ವದ್ದು ಇರುವದು. ಸಾರಭಾಗ ಯಾವ ಯಾವ ಕಾರ್ಯ ಮಾಡುವದೊ ಅದು ಅದರ ವೀರ್ಯದಿಂದ ಆಗುವದು. ಆಹಾರ ದ್ರವ್ಯದಂತೆ ಔಷಧೀ ದ್ರವ್ಯದ ವಿಭಜನವಾಗುವದು. ಇವುಗಳಲ್ಲಿ ಸಾರಭಾಗ ಅಧಿಕವಿರುವದು ಮತ್ತು ಅವುಗಳ ಶೋಷಣವಾಗುವದು. ಔಷಧೀ ದ್ರವ್ಯಗಳ ಯೋಗದಿಂದ ಶರೀರದಲ್ಲಿಯ ಘಟಕಗಳಿಗೆ ಉತ್ತೇಜನ ಅಥವಾ ಕ್ಷೋಭ ಉತ್ಪನ್ನವಾಗುವದು. ಉದಾ:– ವಿಷದ ವೀರ್ಯದಿಂದ ಕ್ಷೋಭ ಉತ್ಪನ್ನವಾಗುವದು. ಆದರೆ ಚಿತ್ರಕ, ಹಿಪ್ಪಲಿ, ಶುಂಠಿ ಇವುಗಳಿಂದ ಉತ್ತೇಜನವಾಗುವದು. ಇವೆಲ್ಲ ಕಾರ್ಯಗಳು ವಾತವಾಹಿನಿಗಳ ಮುಖಾಂತರವಾಗುವವು. ಔಷಧೀ ದ್ರವ್ಯಗಳ ವೀರ್ಯದಿಂದ ಶರೀರ ಘಟಕಗಳ ಕಾರ್ಯದಲ್ಲಿ ಹೆಚ್ಚುಕಡಿಮೆಯಾಗುವದು. ಆದರೆ ಅವುಗಳ ಸ್ವಾಭಾವಿಕ ಕಾರ್ಯದಲ್ಲಿ ಮಾತ್ರ ಎಂದೂ ಆತ್ಯಂತಿಕ ಬದಲಾವಣೆಯನ್ನು ಮಾಡಿಕೊಡುವದಿಲ್ಲ. ದ್ರವ್ಯದಲ್ಲಿಯ ಪಾಂಚಭೌತಿಕ ಅಂಶದ ವಿಭಜನವಾದನಂತರ ಶರೀರ ಧಾತುಗಳಲ್ಲಿಯ ಸಚೇತನ ಪರಮಾಣುಗಳ ಸಂಗಡ ಅವುಗಳ ಸಂಯೋಗವಾಗಿ ಯಾವ ಒಂದು ಪ್ರಕಾರದ ಶಕ್ತಿ ಉತ್ಪನ್ನವಾಗುವದೋ ಅದಕ್ಕೆ ವೀರ್ಯ ಅನ್ನುವರು. ಔಷಧೀ ದ್ರವ್ಯಗಳ ವೀರ್ಯ ಉತ್ತೇಜಕ ಸ್ವರೂಪದ್ದಿರುವದು. ಧಾತು ಸಾಮ್ಯವನ್ನು ತಂದುಕೊಡುವದು. ಇದು ಚಿಕಿತ್ಸೆಯ ಮೂಲ ಉದ್ದೇಶವಿರುವದರಿಂದ ಅತ್ಯಂತ ಕ್ಷೋಭಕ ಅಥವಾ ಅತ್ಯಂತ ಉತ್ತೇಜಕ ವೀರ್ಯ ದ್ರವ್ಯಗಳ ಯೋಗದಿಂದ ಧಾತು ವೈಷಮ್ಯ ಉತ್ಪನ್ನವಾಗದಂತೆ ಕಾಳಜೀ ತೆಗೆದುಕೊಳ್ಳಬೇಕು.

ವೀರ್ಯ ಶಬ್ದದ ನಿರುಕ್ತಿಃ—

वीरयते विक्रांतः कर्म समर्थो भवति अनेन इति वीर्यम् ।

ಯಾವುದರಿಂದ ದ್ರವ್ಯವು ಕರ್ಮ ಸಂಪಾದನೆಯಲ್ಲಿ ಸಮರ್ಥವಾಗುತ್ತದೆಯೋ ಅದಕ್ಕೆ ವೀರ್ಯ ಅನ್ನುವರು.

ದ್ರವ್ಯಗುಣ ಶಾಸ್ತ್ರವಲ್ಲಿ " ವೀರ್ಯ " ಶಬ್ದದ ಅರ್ಥವನ್ನು ಎರಡು ರೀತಿಯಿಂದ ಮಾಡುವರು. 1) ದ್ರವ್ಯದ ಶಕ್ತಿರೂಪ ವೀರ್ಯ 2) ಪಾರಿಭಾಷಿಕ ವೀರ್ಯ. ಶಕ್ತಿರೂಪವೀರ್ಯವಾದಿಗಳ ಪ್ರಕಾರ ಜಗತ್ತಿನಲ್ಲಿಯ ಎಲ್ಲ ಕಾರ್ಯಗಳು ಶಕ್ತಿಯಿಂದಲೇ ಆಗುತ್ತವೆ. ಯಾವದೇ ಕಾರ್ಯವಾಗಬೇಕಾದರೂ ಒಂದು ವಿಶಿಷ್ಟ ಶಕ್ತಿಯ ವಿನಃ ಕಾರ್ಯವಾಗುವದಿಲ್ಲ. ಆದ್ದರಿಂದ ದ್ರವ್ಯದ ಕಾರ್ಯವು ಯಾವದೊಂದು ವಿಶಿಷ್ಟ ಸ್ವಭಾವ ಅಥವಾ ಶಕ್ತಿಯಿಂದ ಶರೀರದ ಮೇಲೆ ಕಾರ್ಯಮಾಡುವದು. ಅದಕ್ಕೆ ಶಕ್ತಿ ರೂಪ ವೀರ್ಯ ಅನ್ನುವರು. ಪಾರಿಭಾಷಿಕ ವೀರ್ಯವಾದಿಗಳ ಪ್ರಕಾರ ದ್ರವ್ಯಸ್ವಭಾವ, ರಸ, ಗುಣ ಮತ್ತು ವಿಪಾಕ ಇವುಗಳ ವಿಷಯವಾಗಿ ಆಯುರ್ವೇದದಲ್ಲಿ ಸ್ವತಂತ್ರ ವರ್ಣನೆಯನ್ನು ಮಾಡಿದ್ದಾರೆ. ಆದ್ದರಿಂದ ಇವುಗಳನ್ನು ಹೊರತು ಪಡಿಸಿ, ಉತ್ಕೃಷ್ಟ ಶಕ್ತಿ ಸಂಪನ್ನ ಮತ್ತು ಪ್ರಭೂತ ವಿಶೇಷ ಕಾರ್ಯಮಾಡುವಂಥ ಗುರ್ವಾದಿ ಗುಣಗಳಿ ಗೇನೇ ವೀರ್ಯವನ್ನು ಕೊಡುವದು ಉಚಿತವಿರುತ್ತದೆ. ಈ ಪಾರಿಭಾಷಿಕ ವೀರ್ಯ ವಾದಿಗಳಲ್ಲಿ ಎರಡು ಪಕ್ಷಗಳಿರುವವು. 1) ಅಷ್ಟವಿಧ ವೀರ್ಯವಾದಿ 2) ದ್ವಿವಿಧ ವೀರ್ಯವಾದಿ.

अष्टविधवीर्यः— मृदु तीक्ष्ण गुरु लघु स्निग्ध रूक्षोष्ण शीतलम् ।
वीर्यमष्टविधं केचित्, (च. सू. २६)

ಕೆಲವರು ಮೃದು, ತೀಕ್ಷ್ಣ, ಗುರು, ಲಘು, ಸ್ನಿಗ್ಧ, ರೂಕ್ಷ, ಉಷ್ಣ ಮತ್ತು ಶೀತ ಈ ರೀತಿಯಾಗಿ ಎಂಟು ವೀರ್ಯಗಳಿರುವವೆಂದು ಹೇಳಿರುವರು. ಈ ವೀರ್ಯಗಳು ತಮ್ಮ ಶಕ್ತಿರೂಪ ಗುಣಗಳ ಉತ್ಕೃಷ್ಟತೆಯ ಮೂಲಕ ರಸಗಳ ಮತ್ತು ವಿಪಾಕಗಳ ಪರಾಭವ ಮಾಡಿ ತಮ್ಮ ಕಾರ್ಯ ಮಾಡುವವು. ಈ ಎಂಟು ಗುಣಗಳು ಸರ್ವ ಗುಣ ಗಳಲ್ಲಿ ಸಾರ ರೂಪ ಅಥವಾ ಚಿರಸ್ಥಾಯಿ ಇರುವವು. ಅಂದರೆ ಜಠರಾಗ್ನಿಯ ಯೋಗ ದಿಂದ ಮಧುರಾದಿ ರಸ, ಗುಣ ತಮ್ಮ ಸ್ವಭಾವ ಬಿಟ್ಟು ಅನ್ಯ ಸ್ವಭಾವವನ್ನು ಹೊಂದ ಬಹುದು. ಆದರೆ ಗುರ್ವಾದಿ ಗುಣಗಳು ತಮ್ಮ ಸ್ವಭಾವವನ್ನು ಬಿಡುವದಿಲ್ಲ. ಗುಣಗಳ ಗಣನೆಯಲ್ಲಿ ಗುರ್ವಾದಿ ಗುಣಗಳ ಗಣನೆಯು ಮೊದಲಿಗೇ ಆಗಿರುತ್ತದೆ. ಮತ್ತು ಈ ಗುಣಗಳು ರಸ ವಿಪಾಕ ಮತ್ತು ಅನ್ಯ ಗುಣಗಳ ಪರಾಭವ ಮಾಡಿ ತಮ್ಮ ಕಾರ್ಯ ಗಳನ್ನು ಮಾಡುತ್ತವೆ. ಉಳಿದ ಗುಣಗಳಿಗಿಂತ ಈ ಗುರ್ವಾದಿ ಗುಣಗಳು ದ್ರವ್ಯದಲ್ಲಿ ಅಧಿಕವಾಗಿ ಇರುತ್ತವೆ. ದೇಹೋಪಯೋಗಿ ಕಾರ್ಯದಲ್ಲಿ ಶ್ರೇಷ್ಠ ಇರುವವು. ಹಾಗು ಇವು ಉಳಿದ ಗುಣಗಳಿಗಿಂತ ಉತ್ಕೃಷ್ಟ ಶಾಲಿಯಿರುವವು. ಆದ್ದರಿಂದ ಗುರ್ವಾದಿ ಎಂಟು ಗುಣಗಳಿಗೆ ವೀರ್ಯವೆಂದು ಅನ್ನುವರು. ಈ ಎಂಟು ಗುಣಗಳು ಯಾವಾಗ ದ್ರವ್ಯದಲ್ಲಿ ಅಧಿಕ ಶಕ್ತಿ ಸಂಪನ್ನ ಸ್ವರೂಪದಲ್ಲಿರುವವೋ ಆಗ ಅವುಗಳಿಗೆ ವೀರ್ಯ ಅನ್ನುವರು.

ಅವು ಶಕ್ತಿ ಸಂಪನ್ನವಿರದಿದ್ದರೆ ಅವುಗಳಿಗೆ ಸಾಮಾನ್ಯ ಗುಣಗಳೆಂದು ಅನ್ನುವರು. ಈ ಅಷ್ಟವಿಧ ವೀರ್ಯಗಳು ರಸಾದಿಗಳ ವಿರುದ್ಧ ಕಾರ್ಯ ಮಾಡುವವು. ಉದಾಃ- ಹಿಪ್ಪಲಿ ಇದು ಕಟು ರಸಾತ್ಮಕವಿರುವದು. ಆದ್ದರಿಂದ ಅದರ ಸೇವನೆಯಿಂದ ಪಿತ್ತ ಪ್ರಕೋಪವಾಗಬೇಕಾಗಿತ್ತು ಆದರೆ ಹಿಪ್ಪಲಿಯ ವೀರ್ಯವು ಮೃದು ಮತ್ತು ಶೀತವಿರುವದರಿಂದ ಅದು ಪಿತ್ತದ ಶಮನ ಮಾಡುವದು. ಇದರಂತೆ ಆಮಲಕಿಯು ಆಮ್ಲ ರಸದ್ದಿದ್ದು ಪಿತ್ತಪ್ರಕೋಪ ಮಾಡಬೇಕಿತ್ತು. ಆದರೆ ಅದು ಮೃದು ಮತ್ತು ಶೀತವೀರ್ಯದ್ದಿರುವದರಿಂದ ಪಿತ್ತದ ಶಮನವನ್ನು ಮಾಡುತ್ತದೆ.

द्विविध वीर्य:– केचिद्विधमा स्थिता: ।

शीतोष्णामिति वीर्यं तु क्रियते येन या क्रिया ।
ना वीर्यं कुरुते किंचित् सर्वा वीर्यं कृता क्रिया ।। (च. सू.)

ಕೆಲವರು ಎರಡು ವೀರ್ಯ ಇರುವವೆಂದು ಹೇಳಿರುವರು. ಒಂದು ಶೀತವೀರ್ಯ ಮತ್ತೊಂದು ಉಷ್ಣವೀರ್ಯ. ಯಾವದೇ ಇತರ ಗುಣಗಳ ಸಮಾವೇಶ ಉಷ್ಣ ಮತ್ತು ಶೀತ ಈ ಎರಡು ಮುಖ್ಯ ಗುಣಗಳಲ್ಲಿ ಸಮಾವೇಶವಾಗುವವು. ಅಥವಾ ಸರ್ವ ಶರೀರ ಕ್ರಿಯಾದೃಷ್ಟಿಯಿಂದ ವಿಚಾರ ಮಾಡಲಾಗಿ ಶರೀರದಲ್ಲಿ ಸಂಯೋಜನ ಅಥವಾ ಸಂಘಟನಾಕಾರ್ಯ, ಇನ್ನೊಂದು ವಿಯೋಜನಾ ಅಥವಾ ವಿಘಟನಾ ಕಾರ್ಯವುಂಟಾದದ್ದು ಕಂಡುಬರುವದು. ಶರೀರ ಘಟಕದ ಉತ್ಪತ್ತಿ ಅಥವಾ ಬೆಳವಣಿಗೆಯ ಕಾರ್ಯ ಮತ್ತು ವಿಯೋಜನ ಕಾರ್ಯ ಇವೆರಡು ಕಾರ್ಯಗಳು ನಡೆದಿರುತ್ತವೆ. ಇದರಲ್ಲಿ ಸಂಘಟನಾ ಕಾರ್ಯವು ಶೀತವೀರ್ಯದಿಂದ ಮತ್ತು ವಿಯೋಜನಾಕಾರ್ಯವು ಉಷ್ಣವೀರ್ಯದಿಂದ ಆಗುವವು. ಸರ್ವ ದ್ರವ್ಯಗಳು ಪಾಂಚಭೌತಿಕವಿದ್ದರೂ ಕೂಡ ಅದರಲ್ಲಿ ಅಗ್ನಿ ಮತ್ತು ಸೋಮ ಬಲವಾನ ಇರುವದರಿಂದ ಅವುಗಳ ಪ್ರಭಾವ ವಿಶೇಷವಾಗಿ ಬೀಳುವದು. ಅಂದರೆ ಅಗ್ನಿಗುಣ ಪ್ರಧಾನ ಉಷ್ಣ ಮತ್ತು ಸೋಮಗುಣ ಪ್ರಧಾನ ಶೀತ. ಆದ್ದರಿಂದ ಪ್ರಾಮುಖ್ಯವಾಗಿ ಶೀತ ಮತ್ತು ಉಷ್ಣ ಇವೆರಡು ವೀರ್ಯಗಳನ್ನು ಮನ್ನಿಸಿದ್ದಾರೆ. ರಸ, ವಿಕಾಪಗಳ ಕಾರ್ಯವು ಯಾವಾಗಲೂ ಸಾಮರ್ಥ್ಯ ಸಂಪನ್ನ ಇರುವದಿಲ್ಲ. ಆದರೆ ವೀರ್ಯದ ಕಾರ್ಯವು ಸಾಮರ್ಥ್ಯ ಸಂಪನ್ನ ಇರುವದು. ಆದ್ದರಿಂದ ರಸ, ವಿಪಾಕಗಳಿಗಿಂತಲೂ ಹೆಚ್ಚು ಮಹತ್ವ ದ್ರವ್ಯದ ವೀರ್ಯಕ್ಕೆ ಇರುವದು.

वीर्य विज्ञानोपाय:– वीर्यं यावदधीवासान्निपाताच्चोपलभ्यते ।

(च. सू. अ. २६)

ರಸದ ಜ್ಞಾನವು ಪ್ರತ್ಯಕ್ಷ ಜಿಹ್ವೇಂದ್ರಿಯದ ಮುಖಾಂತರವಾಗುವದು. ವಿಪಾಕದ ಜ್ಞಾನವು ಯಾವಾಗಲೂ ಅಪ್ರತ್ಯಕ್ಷ ಅಥವಾ ಅನುಮಾನದಿಂದ ಆಗುವದು. ಉದಾಃ- ಹಾಲಿನ ವಿಪಾಕ ಮಧುರವಿರುವದು. ಇದು ಯಾವದೇ ಇಂದ್ರಿಯಗಳ ಮೂಲಕ ತಿಳಿಯುವದಿಲ್ಲ. ಆದರೆ ಅದರಿಂದ ಆಗುವ ಕಾರ್ಯ ಮಲ, ಮೂತ್ರಗಳ ನಿಃಸರಣ ಸುಖರೂಪದಿಂದ ಆಗುವದು, ಶುಕ್ರವೃದ್ಧಿಯಾಗುವದು ಇತ್ಯಾದಿ ಕಾರ್ಯಗಳ ಮೇಲಿಂದ

ಮಧುರ ವಿಪಾಕದ ಜ್ಞಾನವಾಗುವದು. ಆದರೆ ವೀರ್ಯದ ಜ್ಞಾನ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಅಥವಾ ಅನುಮಾನ ಎರಡೂ ರೀತಿಯಿಂದ ಆಗುವದು. ಕೆಲವು ಉಪಯುಜ್ಯಮಾನ ದ್ರವ್ಯಗಳ ವೀರ್ಯಜ್ಞಾನ ಶರೀರದ ಸಂಬಂಧ ಬಂದ ಕೂಡಲೇ ಅರ್ಥಾತ್ ಜಿವ್ಹಾ ಅಥವಾ ತ್ವಕ್ ಇತ್ಯಾದಿಗಳ ಸಂಯೋಗದಿಂದ ಆಗುವದು. ಉದಾ: ಮೆಣಸಿನ ತೀಕ್ಷ್ಣ ವೀರ್ಯದ ಜ್ಞಾನವು ಶರೀರಕ್ಕೆ ಅದರ ಸಂಬಂಧ ಬಂದ ಕೂಡಲೇ ಆಗುವದು. ಅಂದರೆ ಶರೀರದಲ್ಲಿ ದ್ರವ್ಯವು ವಾಸ್ತವ್ಯಮಾಡಿ ಇರುವವರೆಗೆ ವೀರ್ಯದ ಪ್ರತ್ಯಯವಾಗುವದು. ಉದಾ:- ಅನೂಪ ಮಾಂಸದ ಉಷ್ಣ ವೀರ್ಯ ಜ್ಞಾನವು ಅದು ಎಲ್ಲಿಯವರೆಗೆ ಶರೀರದಲ್ಲಿರುವದೋ ಅಲ್ಲಿಯವರೆಗೆ ಅದರಿಂದ ಆಗುವ ಕಾರ್ಯ ದಿಂದ ಅನುಮಾನ ಮಾಡಲು ಬರುವದು. ಅದರಂತೆ ಸೈಂಧವದ ಶೀತ ವೀರ್ಯದ ಜ್ಞಾನವನ್ನು ಅನುಮಾನದಿಂದ ಮಾಡಿಕೊಳ್ಳಬೇಕಾಗುವದು.

ಭೌತಿಕ ಸಂಘಟನಾ:—

ವೀರ್ಯದ ಉತ್ಪತ್ತಿಯು ಪಂಚಮಹಾಭೂತಗಳಿಂದ ಆಗುತ್ತದೆ. ಆದ್ದರಿಂದ ಯಾವ ಮಹಾಭೂತದ ಉತ್ಕರ್ಷದಿಂದ ಯಾವ ವೀರ್ಯದ ಉತ್ಪತ್ತಿಯಾಗುತ್ತದೆ ಎಂಬುದರ ಅಧ್ಯಯನವು ಅವಶ್ಯಕವಿರುತ್ತದೆ.

ಸಂಖ್ಯಾ	ವೀರ್ಯ	ಭೂತೋತ್ಕರ್ಷ
1	ಶೀತ	ಪೃಥ್ವಿ+ಜಲ
2	ಉಷ್ಣ	ಅಗ್ನಿ
3	ಸ್ನಿಗ್ಧ	ಜಲ
4	ರೂಕ್ಷ	ವಾಯು
5	ಗುರು	ಪೃಥ್ವಿ+ಜಲ
6	ಲಘು	ಅಗ್ನಿ+ವಾಯು+ಆಕಾಶ
7	ಮೃದು	ಜಲ+ಆಕಾಶ
8	ತೀಕ್ಷ್ಣ	ಅಗ್ನಿ

ಈ ಪ್ರಕಾರ ಅಷ್ಟವಿಧ ವೀರ್ಯಗಳ ಭೌತಿಕ ಸಂಘಟನೆ ಇರುತ್ತದೆ.

अष्ट विध वीर्य कर्म:– (1) उष्ण वीर्य:– तत्रोष्णं दहन–पचनस्वेदन विलयनानिल कफ शमनानि करोति । (अ. सं. अ. १७)

तत्रोष्णं भ्रम तृड् ग्लानि स्वेद दाहाशुपाकिता: । शमं च वात कफयो: । (वा. सू. ९)

ಉಷ್ಣ ವೀರ್ಯವು ದಾಹ, ಪಚನ, ಸ್ವೇದನ, ವಿಲಯನ, ವಮನ, ವಿರೇಚನ ವಾತನಾಶನ, ಕಫನಾಶನ, ಭ್ರಮ, ತೃಷ್ಣಾ, ಗ್ಲಾನಿ, ಪಿತ್ತಪ್ರಕೋಪ ಇತ್ಯಾದಿ ಕಾರ್ಯಗಳನ್ನು ಮಾಡುವದು. ಉಷ್ಣ ವೀರ್ಯವು ಲಘು ಇರುವದು. ಮತ್ತು ಶುಕ್ರ

ನಾಶನ ಕಾರ್ಯವನ್ನು ಮಾಡುತ್ತದೆ. ಕಟು, ಅಮ್ಲ ಮತ್ತು ಲವಣ ರಸಗಳುಳ್ಳ ದ್ರವ್ಯಗಳು ಹೆಚ್ಚಾಗಿ ಉಷ್ಣವೀರ್ಯದವಿರುತ್ತವೆ.

(2) शीत वीर्य:– शीतं ह्लादन स्तंभन जीवन रक्तपित्तप्रसादनादीनि।
(अ. सं. सू. अ. १७)

शिशिरं पुनः ह्लादनं जीवनं स्तंभं प्रसादं रक्तपित्तयोः।
(वा. सू. अ. ९)

ಶೀತ ವೀರ್ಯವು ಸುಖ ಉತ್ಪನ್ನಮಾಡುವದು. ವಿಷ್ಯಂದನ, ಮೂರ್ಛಾನಾಶನ, ಸ್ತಂಭನ, ಪಿತ್ತಶಾಮಕ, ರಕ್ತ ದೋಷಹರವಿರುವದು. ಇದು ಕಫ ಮತ್ತು ವಾತ ವೃದ್ಧಿಯನ್ನು ಮಾಡುತ್ತದೆ. ಇದು ಗುರು ಮತ್ತು ವೃಷ್ಯವಿರುವದು. ಹಾಗೂ ತಿಕ್ತ, ಕಷಾಯ ಮತ್ತು ಮಧುರ ರಸಗಳುಳ್ಳ ದ್ರವ್ಯಗಳು ಹೆಚ್ಚಾಗಿ ಶೀತವೀರ್ಯದವು ಇರುತ್ತವೆ.

(3) स्निग्ध वीर्य:– स्निग्धस्य स्नेहन–बृंहण–संतर्पण-वाजीकरण-वयः स्थापनानि। (सु. सू. अ. ४१)

ಸ್ನಿಗ್ಧವು ಸ್ನೇಹನ, ಬೃಂಹಣ, ಸಂತರ್ಪಣ, ವಾಜೀಕರಣ, ವಯಃಸ್ಥಾಪನ ಮತ್ತು ವಾತನಾಶನ ಕಾರ್ಯವನ್ನು ಮಾಡುತ್ತದೆ.

(4) रूक्ष वीर्य:–रूक्षस्य अनिलवृद्धि-संग्रहण-पीडन-विरूक्षणोपरोपणानि
(सु. सू. ४१)

ರೂಕ್ಷ ವೀರ್ಯವು ವಾತವರ್ಧನವನ್ನು ಮಾಡುತ್ತದೆ. ಸಂಗ್ರಹಣ, ಪೀಡನ, ರೂಕ್ಷತೆಯನ್ನು ತರುವಂಥಹದು, ವ್ರಣವನ್ನು ತುಂಬಿ ತರುವಂಥಹದಿದ್ದು ಕಫನಾಶಕ ವಿರುತ್ತದೆ.

(5) गुरु वीर्य:–

ಗುರು ವೀರ್ಯವು ಕಫ ವರ್ಧನವನ್ನು ಮಾಡುತ್ತದೆ. ಉಪಲೇಪ ಹಾಗೂ ಬೃಂಹಣ ಕಾರ್ಯಗಳನ್ನು ಮಾಡುತ್ತದೆ ಮತ್ತು ವಾತಶಮನ ಮಾಡುತ್ತದೆ. ಅಮ್ಲ, ಲವಣ ಮತ್ತು ಮಧುರ ರಸಗಳುಳ್ಳ ದ್ರವ್ಯಗಳು ಹೆಚ್ಚಾಗಿ ಗುರು ವೀರ್ಯದವು ಇರುತ್ತವೆ.

(6) लघु वीर्य:–

ಲಘು ವೀರ್ಯವು ಕಫಶಾಮಕವಿದ್ದು ವಾತ ಮತ್ತು ಪಿತ್ತವರ್ಧಕವಿದೆ. ಇದು ಲೇಖನ ಕಾರ್ಯವನ್ನು ಮಾಡುತ್ತದೆ. ಕಷಾಯ, ಕಟು ಮತ್ತು ತಿಕ್ತ ರಸಗಳುಳ್ಳ ದ್ರವ್ಯಗಳು ಲಘುವೀರ್ಯದವು ಇರುತ್ತವೆ.

(7) मृदु वीर्य:–मृदो रक्तमांस प्रसादन सुस्पर्शनानि।

ಮೃದು ವೀರ್ಯವು ರಕ್ತ ಮತ್ತು ಮಾಂಸದ ಪ್ರಸಾದನ ಕಾರ್ಯವನ್ನು ಮಾಡುವದು. ಹಾಗೂ ಸ್ಪರ್ಶದಿಂದ ಸುಖವನ್ನು ಉತ್ಪನ್ನಮಾಡುವದು. ಮತ್ತು ಪಿತ್ತಶಾಮಕ ವಿರುವದು.

(8) तीक्ष्ण वीर्यः–तीक्ष्णस्य संग्रहाच्चूषणावदारण–स्त्रावणानि ।

(सु. सू. अ. ४१)

ತೀಕ್ಷ್ಣ ವೀರ್ಯದಿಂದ ಗ್ರಾಹಿ ಕಾರ್ಯವಾಗುವದು. ಮತ್ತು ವ್ರಣಶೋಥಗಳನ್ನು ಒಡೆಯುವದು ಹಾಗೂ ಕಫಶಾಮಕವಿರುವದು, ಪಿತ್ತವರ್ಧಕವಿರುವದು.

ಮೃದು, ಶೀತ, ಉಷ್ಣ ವೀರ್ಯಗಳ ಜ್ಞಾನವು ಸ್ಪರ್ಶದಿಂದ ಆಗುವದು. ಗುರು ಮತ್ತು ಲಘು (ಪಿಚ್ಛಿಲ ಮತ್ತು ವಿಶದ) ವೀರ್ಯಗಳ ಜ್ಞಾನವು ದರ್ಶನ, ಸ್ಪರ್ಶನದಿಂದ ಆಗುವದು. ಸ್ನಿಗ್ಧ ಹಾಗೂ ರೂಕ್ಷ ವೀರ್ಯಗಳ ಜ್ಞಾನವು ದರ್ಶನದಿಂದ ಆಗುವದು. ಮತ್ತು ತೀಕ್ಷ್ಣವೀರ್ಯದ ಜ್ಞಾನವು ಅದು ಬಾಯಿಯಲ್ಲಿ ಮತ್ತು ಮೂಗಿನಲ್ಲಿ ಕ್ಷೋಭ ಉತ್ಪನ್ನಮಾಡುವದರ ಮೇಲಿಂದ ಆಗುವದು.

ಸುಶ್ರುತಾಚಾರ್ಯರು ಅಷ್ಟವಿಧ ವೀರ್ಯಗಳನ್ನು ಹೇಳಿದ್ದರೂ ಗುರು ಹಾಗೂ ಲಘು ವೀರ್ಯಗಳ ವಿವೇಚನೆಯನ್ನು ಅಷ್ಟವಿಧ ವೀರ್ಯಗಳಲ್ಲಿ ಮಾಡಿರುವದಿಲ್ಲ. ಅವುಗಳ ಸ್ಥಾನದಲ್ಲಿ ಅವರು ಪಿಚ್ಛಿಲ ಹಾಗೂ ವಿಶದ ವೀರ್ಯಗಳ ವಿವೇಚನೆಯನ್ನು ಮಾಡಿದ್ದಾರೆ.

ದೋಷಗಳ ಮೇಲೆ ಕರ್ಮ:—

1) ಶೀತವೀರ್ಯ:–	ಪಿತ್ತಶಾಮಕ	ಕಫ, ವಾತವರ್ಧಕ
2) ಉಷ್ಣ ವೀರ್ಯ:–	ಕಫವಾತ ಶಾಮಕ	ಪಿತ್ತವರ್ಧಕ
3) ಸ್ನಿಗ್ಧ ವೀರ್ಯ:–	ವಾತಶಾಮಕ	ಕಫವರ್ಧಕ
4) ರೂಕ್ಷ ವೀರ್ಯ:–	ಕಫಶಾಮಕ	ವಾತವರ್ಧಕ
5) ಗುರು ವೀರ್ಯ:–	ವಾತಶಾಮಕ	ಕಫಕಾರಕ
6) ಲಘು ವೀರ್ಯ:–	ಕಫನಾಶಕ	ಪಿತ್ತ, ವಾತವರ್ಧಕ
7) ಮೃದು ವೀರ್ಯ:–	ಪಿತ್ತಹರ	
8) ತೀಕ್ಷ್ಣ ವೀರ್ಯ:–	ಕಫಹರ	ಪಿತ್ತಕರ

ಉಪಲಬ್ಧಿ:—

ವೀರ್ಯದ ಜ್ಞಾನವು ಪ್ರತ್ಯಕ್ಷ ಮತ್ತು ಅನುಮಾನ ಇವೆರಡರಿಂದ ಆಗುತ್ತದೆ. ಕೆಲವು ದ್ರವ್ಯಗಳ ವೀರ್ಯ ಜ್ಞಾನವು ಜಿಹ್ವಾ ಇಲ್ಲವೆ ತ್ವಚೆಯ ಸಂಗಡ ಸಂಪರ್ಕ (ನಿಪಾತ) ವಾಗುತ್ತಲೇ ಆಗುತ್ತದೆ. ಕೆಲವು ದ್ರವ್ಯಗಳ ವೀರ್ಯ ಜ್ಞಾನವು ಶರೀರದಲ್ಲಿ ಅವುಗಳ ಉಪಸ್ಥಿತಿಯ (ಅಧೀವಾಸ) ಕಾರಣ ಉತ್ಪನ್ನವಾದ ಕರ್ಮಗಳ

ಮುಖಾಂತರ ಅನುಮಾನದಿಂದ ಆಗುತ್ತದೆ. ಹಾಗೂ ಕೆಲವು ದ್ರವ್ಯಗಳ ವೀರ್ಯ ಜ್ಞಾನವು ಸಂಪರ್ಕ ಮತ್ತು ಅಧೀವಾಸ ಇವೆರಡರಿಂದ ಆಗುತ್ತದೆ. ಈ ಪ್ರಕಾರ ವೀರ್ಯಗಳ ಉಪಲಬ್ಧಿಯು ಮೂರು ಪ್ರಕಾರಗಳಿಂದ ಆಗುತ್ತದೆ.

ಕ್ರಿಯಾ	ಪ್ರಮಾಣ	ಉದಾಹರಣ
1) ನಿಪಾತ (ಸಂಪರ್ಕ)	ಪ್ರತ್ಯಕ್ಷ	ಮರಿಚ (ತೀಕ್ಷ್ಣ)
2) ಅಧೀವಾಸ	ಅನುಮಾನ	ಅನೂಪಮಾಂಸ (ಉಷ್ಣ)
3) ನಿಪಾತ+ಅಧೀವಾಸ	ಪ್ರತ್ಯಕ್ಷ+ಅನುಮಾನ	ಮರಿಚ (ಉಷ್ಣ)

ಇವುಗಳಲ್ಲಿ ಬೇರೆ ಬೇರೆ ವೀರ್ಯಗಳ ಸಂಪರ್ಕದಿಂದ ಬೇರೆ ಬೇರೆ ಇಂದ್ರಿಯಗಳ ಮುಖಾಂತರ ಜ್ಞಾನವಾಗುತ್ತದೆ. ಹೇಗೆಂದರೆ 1) ಮೃದು, ಶೀತ, ಉಷ್ಣ ವೀರ್ಯಗಳ ನಿಪಾತದಿಂದ ಸ್ಪರ್ಶನೇಂದ್ರಿಯ ಗ್ರಾಹ್ಯ 2) ಪಿಚ್ಛಿಲ, ವಿಶದ, ಚಕ್ಷು ಮತ್ತು ಸ್ಪರ್ಶನೇಂದ್ರಿಯ ಗ್ರಾಹ್ಯ 3) ಸ್ನಿಗ್ಧ, ರೂಕ್ಷ ಚಕ್ಷುರಿಂದ್ರಿಯಗ್ರಾಹ್ಯ 4) ತೀಕ್ಷ್ಣ ಬಾಯಿಯಲ್ಲಿ ದುಃಖೋತ್ಪಾದನ ಮಾಡುವದರಿಂದ ಜ್ಞಾನವಾಗುತ್ತದೆ.

ವೀರ್ಯ ವಿನಿಶ್ಚಯಃ—

ಯಾವ ದ್ರವ್ಯವು ರಸದಲ್ಲಿ ಹಾಗೂ ವಿಪಾಕದಲ್ಲಿ ಮಧುರವಿರುತ್ತದೆಯೋ ಆ ದ್ರವ್ಯದ ವೀರ್ಯವು ಹೆಚ್ಚಾಗಿ ಶೀತವಿರುತ್ತದೆ. ಹಾಗೂ ಯಾವ ದ್ರವ್ಯವು ರಸದಲ್ಲಿ ಅಮ್ಲ ಮತ್ತು ವಿಪಾಕದಲ್ಲಿ ಅಮ್ಲ ಇರುವದೋ ಮತ್ತು ಯಾವ ದ್ರವ್ಯವು ರಸದಲ್ಲಿ ಕಟು ಹಾಗೂ ವಿಪಾಕದಲ್ಲಿ ಕಟು ಇರುವದೋ ಆ ದ್ರವ್ಯಗಳ ವೀರ್ಯವು ಹೆಚ್ಚಾಗಿ ಕಟು ಆಗುತ್ತದೆ. ಇದಲ್ಲದೆ ಲವಣ ರಸದ ವೀರ್ಯವು ಉಷ್ಣವಿರುತ್ತದೆ. ಮತ್ತು ತಿಕ್ತ, ಕಷಾಯ ರಸಗಳ ವೀರ್ಯವು ಶೀತವಿರುತ್ತದೆ. ಈ ಪ್ರಕಾರ ರಸಗಳ ಮೇಲಿಂದ ವೀರ್ಯದ ವಿನಿಶ್ಚಯವನ್ನು ಮಾಡಿಕೊಳ್ಳಬೇಕು. ಹೀಗಿದ್ದರೂ ಕೆಲವು ದ್ರವ್ಯಗಳ ವೀರ್ಯಗಳು ರಸಗಳಿಗನುಸಾರವಾಗಿರದೇ ಅಪವಾದವಾಗಿರುತ್ತವೆ. ಅಂದರೆ ಮಧುರ ರಸ ದ್ರವ್ಯಗಳ ವೀರ್ಯವು ಶೀತವಿರದೇ ಉಷ್ಣವಿರುವಿಕೆ ಹಾಗೂ ಲವಣ ರಸ ದ್ರವ್ಯದ ವೀರ್ಯವು ಉಷ್ಣವಿಲ್ಲದಿರುವಿಕೆ (ನೋಷ್ಣ), ಅಮ್ಲ ರಸ ದ್ರವ್ಯದ ವೀರ್ಯವು ಶೀತ ವಿರುವಿಕೆ ಮತ್ತು ತಿಕ್ತ, ಕಷಾಯ ರಸ ದ್ರವ್ಯಗಳ ವೀರ್ಯವು ಶೀತವಿರದೇ ಉಷ್ಣ ವಿರುವಿಕೆ. ಈ ಪ್ರಕಾರ ಇರುವ ಕೆಲವು ಅಪವಾದಗಳನ್ನು ಕೆಳಗೆ ಕೊಟ್ಟಿದೆ.

ದ್ರವ್ಯ	ರಸ	ವೀರ್ಯ
ಬೃಹತ್ ಪಂಚಮೂಲ	ಕಷಾಯ, ತಿಕ್ತ	ಉಷ್ಣ
ಅಶ್ವಗಂಧಾ	ಕಷಾಯ, ತಿಕ್ತ	ಉಷ್ಣ
ಪಿಪ್ಪಲಿ	ಕಟು	ಅನುಷ್ಣ (ಮೃದುಶೀತ)
ಆಮಲಕಿ	ಆಮ್ಲ	ಶೀತ
ಸೈಂಧವ	ಲವಣ	ನೋಷ್ಣ (ಶೀತ)

ದ್ರವ್ಯ	ರಸ	ವೀರ್ಯ
ಅನೂಪಮಾಂಸ	ಮಧುರ	ಉಷ್ಣ
ಭಲ್ಲಾತಕ	ಕಷಾಯ, ಮಧುರ	ಉಷ್ಣ
ಗುಲಾಬ	ಕಟು, ತಿಕ್ತ	ಶೀತ
ಪಲಾಂಡು	ಕಟು	ಶೀತ
ನಿಂಬ, ಚಂಪಕ	ಕಟು, ತಿಕ್ತ	ಶೀತ
ವಜ್ರವಲ್ಲಿ	ಮಧುರ	ಉಷ್ಣ

ಈ ಪ್ರಕಾರ ಇನ್ನೂ ಎಷ್ಟೋ ವೀರ್ಯದಲ್ಲಿ ಅಪವಾದ ದ್ರವ್ಯಗಳಿರುತ್ತ[illegible] ಆದ್ದರಿಂದ ನಾವು ವೀರ್ಯದ ವಿನಿಶ್ಚಯವನ್ನು ಮಾಡಿಕೊಳ್ಳಬೇಕಾಗಿದ್ದರೆ ಇ[illegible] ಅಪವಾದ ದ್ರವ್ಯಗಳ ವೀರ್ಯಜ್ಞಾನವು ಅವಶ್ಯಕವಾಗಿರುತ್ತದೆ.

ವೀರ್ಯ ಪ್ರಾಧಾನ್ಯ ನಿರೂಪಣಮ್—

वीर्यम् प्रधानमिति । कस्मात् ? तद्वशेनौषध कर्मनिष्पत्तेः । इहौष[illegible] कर्माण्यूर्ध्वाधोभागोभयभाग संशोधन संशमन सांग्राहिकाग्निदीपन पीड[illegible] लेखन बृंहण रसायन वाजीकरण श्वयथुकर विलयन दहन दारण माद[illegible] प्राणघ्न विष प्रशमनादीनि वीर्यं प्राधान्याद्भवंति । (सु. सू. ४०)

ಕೆಲವು ಆಚಾರ್ಯರು ದ್ರವ್ಯ ಇಲ್ಲವೆ ರಸದ ಪ್ರಾಧಾನ್ಯತೆಯನ್ನು ಮನ್ನಿಸುವದಿ[illegible] ಅವರು ವೀರ್ಯವೇ ಪ್ರಧಾನವಿದೆ ಎಂದು ಹೇಳುತ್ತಾರೆ. ಯಾಕಂದರೆ ಔಷಧಿ ದ್ರ[illegible] ಗಳ ಬೇರೆ ಬೇರೆ ಕಾರ್ಯಗಳು ಇದರಿಂದಲೆ ಆಗುತ್ತವೆ. ಉದಾ:– ವಮನ, ವಿರೇಚ[illegible] ಸಂಶಮನ, ಅಗ್ನಿದೀಪನ, ಪೀಡನ, ಲೇಖನ, ಬೃಂಹಣ, ರಸಾಯನ, ವಾಜೀಕರ[illegible] ದಹನ, ದಾರಣ, ವಿಷನಾಶನ ಇತ್ಯಾದಿ ಔಷಧಗಳ ಕಾರ್ಯವು ವೀರ್ಯಪ್ರಾಧಾ[illegible] ತೆಯ ಮೂಲಕವೇ ಆಗುವದು. ಕೆಲವರು ಶೀತವೀರ್ಯ ಮತ್ತು ಉಷ್ಣವೀರ್ಯ ಹೀಗೆ ಎರಡು ವೀರ್ಯಗಳನ್ನು ಮನ್ನಿಸುವರು. ಮತ್ತೆ ಕೆಲವರು ಶೀತ, ಉಷ್ಣ, ಸ್ನಿ[illegible] ರೂಕ್ಷ, ಪಿಚ್ಛಿಲ, ವಿಶದ, ಮೃದು ಮತ್ತು ತೀಕ್ಷ್ಣ ಹೀಗೆ ಎಂಟು ವೀರ್ಯಗಳಿರು[illegible] ವೆಂದು ಹೇಳುವರು. ವೀರ್ಯಗಳು ತಮ್ಮ ಬಲ ಮತ್ತು ಗುಣ ಉತ್ಕರ್ಷದಿಂದ ರ[illegible] ಮತ್ತು ವಿಪಾಕಗಳ ಪರಾಭವ ಮಾಡಿ ತಮ್ಮ ಕಾರ್ಯ ಮಾಡುವವು. ಉದಾ:– ಬೃಹತ್ ಪಂಚಮೂಲವು ಕಷಾಯ ಮತ್ತು ತಿಕ್ತ ರಸಗಳುಳ್ಳದ್ದು ಇರುವದರಿ[illegible] ವಾತಪ್ರಕೋಪ ಮಾಡಬೇಕಾಗಿತ್ತು. ಆದರೆ ಅದರ ವೀರ್ಯವು ಉಷ್ಣವಿರುವದರಿ[illegible] ವಾತಶಮನ ಕಾರ್ಯ ಮಾಡುವದು. ಅದರಂತೆ ಕಷಾಯ ರಸಾತ್ಮಕ ಕುಲತ್ಥವು ಉಷ್ಣ ವೀರ್ಯ ಮತ್ತು ಸ್ನಿಗ್ಧ ಗುಣಗಳುಳ್ಳದ್ದು ಇರುವದರಿಂದ ವಾತನಾಶನ ಕಾರ್ಯವನ್ನು ಮಾಡುವದು. ಕಬ್ಬು ಮಧುರ ರಸದ್ದಿರುವದು. ಆದರ ಸೇವನೆಯಿಂದ ವಾತ ಶಮ[illegible] ವಾಗಬೇಕಾಗಿತ್ತು. ಆದರೆ ಅದರ ವೀರ್ಯವು ಶೀತವಿರುವದರಿಂದ ವಾತ ಪ್ರಕೋ[illegible]

ವಾಗುವದು. ಕಟು ರಸಯುಕ್ತ ಹಿಪ್ಪಲಿಯಿಂದ ಸ್ವಾಭಾವಿಕವಾಗಿ ಪಿತ್ತ ಪ್ರಕೋಪ ವಾಗಬೇಕಾಗಿತ್ತು. ಆದರೆ ಅದು ಮೃದು ಶೀತವೀರ್ಯದ್ದಿರುವದರಿಂದ ಪಿತ್ತ ಶಮನ ಕಾರ್ಯವನ್ನು ಮಾಡುವದು. ಆಮಲಕಿಯು ಅಮ್ಲ ರಸದ್ದು ಮತ್ತು ಸೈಂಧವವು ಲವಣ ರಸದ್ದು ಇದ್ದರೂ ಅವುಗಳ ವೀರ್ಯವು ಶೀತ ಮತ್ತು ಮೃದು ಇರುವದರಿಂದ ಪಿತ್ತಶಮನ ಕಾರ್ಯವಾಗುವದು. ಈ ರೀತಿಯಾಗಿ ಅನೇಕ ಕಾರ್ಯಗಳು ವೀರ್ಯ ದಿಂದ ಆಗುವವು.

ये रसा वातशमना भवंति यदि तेषु वै ।
रौक्ष्य लाघव शत्यानि न ते हन्युः समीरणम् ।।
ये रसाः पित्तशमना भवंति यदि तेषु वै ।
तैक्ष्ण्यौष्ण्य लघुताश्चैव न ते तत्कर्मकारिणः ।।
ये रसाः श्लेष्म शमनाः भवंति यदि तेषु वै ।
स्नेहगौरव शैत्यानि न ते तत्कर्मकारिणः ।।
तस्माद्वीर्यं प्रधानमिति ।। (सु. सू. अ. ४०)

ಮಧುರ, ಅಮ್ಲ ಮತ್ತು ಲವಣ ಈ ಮೂರು ರಸಗಳು ಸ್ವಾಭಾವಿಕವಾಗಿ ವಾಯುವಿನ ಶಮನ ಮಾಡುವವು. ಆದರೆ ಅವು ರೂಕ್ಷ, ಲಘು, ಶೀತ ಗುಣಗಳುಳ್ಳವು ಗಳಿದ್ದರೆ ವಾತದ ಶಮನವನ್ನು ಮಾಡುವದಿಲ್ಲ. ಮಧುರ, ತಿಕ್ತ ಮತ್ತು ಕಷಾಯ ಈ ಮೂರು ರಸಗಳು ಪಿತ್ತ ಶಮನ ಮಾಡುವವು. ಆದರೆ ಅವು ಅರ್ಥಾತ್ ಆ ರಸ ಯುಕ್ತ ದ್ರವ್ಯಗಳು ತೀಕ್ಷ್ಣ, ಉಷ್ಣ ಮತ್ತು ಲಘು ಗುಣಯುಕ್ತವಿದ್ದರೆ ಪಿತ್ತ ಶಮನ ಕಾರ್ಯವನ್ನು ಮಾಡುವದಿಲ್ಲ. ಕಟು, ತಿಕ್ತ ಮತ್ತು ಕಷಾಯ ಈ ಮೂರು ರಸಗಳು ಕಫ ಶಮನ ಕಾರ್ಯವನ್ನು ಮಾಡುವವು. ಆದರೆ ಆ ರಸಯುಕ್ತ ದ್ರವ್ಯಗಳು ಸ್ನಿಗ್ಧ, ಗುರು ಮತ್ತು ಶೀತ ಗುಣವುಳ್ಳವು ಇದ್ದರೆ ಕಫ ಶಮನ ಕಾರ್ಯವನ್ನು ಮಾಡುವದಿಲ್ಲ. ಈ ರೀತಿಯಾಗಿ ವೀರ್ಯಗಳು ರಸದ ಪರಾಭವಮಾಡಿ ತಮ್ಮ ಕಾರ್ಯಗಳನ್ನು ಮಾಡುವವು. ಆದ್ದರಿಂದ ರಸಾದಿಗಳಲ್ಲಿ ವೀರ್ಯ ಪ್ರಧಾನವಿರುವದು.

ನಾಗಾರ್ಜುನನು ವೀರ್ಯದ ಪ್ರಾಧಾನ್ಯತೆಯಲ್ಲಿ ಕೆಳಗಿನ ಯುಕ್ತಿಗಳನ್ನು ಕೊಟ್ಟಿದ್ದಾನೆ.

1) **ವೀರ್ಯವಾನ್ ದ್ರವ್ಯದ ಪ್ರಾಧಾನ್ಯತೇ**- ಚಿಕಿತ್ಸೆಯಲ್ಲಿ ವೀರ್ಯವಾನ್ ದ್ರವ್ಯಗಳದ್ದೇ ಪ್ರಯೋಗವಾಗುತ್ತದೆ. ನಿರ್ವೀರ್ಯ ದ್ರವ್ಯಗಳದ್ದು ಇಲ್ಲ.

2 **ಕರ್ಮ ನಿಷ್ಪತ್ತಿಃ**– ವೀರ್ಯಗಳ ಮುಖಾಂತರವೇ ಔಷಧಗಳ ಕಾರ್ಯ ವಾಗುತ್ತದೆ.

3) **ರಸಾಭಿಭವಃ**– ವೀರ್ಯವು ರಸಾದಿಗಳನ್ನು ಪರಾಭವಮಾಡಿ ತನ್ನ ಕಾರ್ಯವನ್ನು ಮಾಡುತ್ತದೆ.

4) **ಆಪ್ತೋಪದೇಶಃ**– ಆಚಾರ್ಯರು ತಮ್ಮ ಸಂಹಿತೆಗಳಲ್ಲಿ ವೀರ್ಯದ ಪ್ರಾಧಾನ್ಯತೆಯನ್ನು ಹೇಳಿದ್ದಾರೆ.

ಪ್ರಕರಣ ೬

ಪ್ರಭಾವ ವಿಜ್ಞಾನ

ಲಕ್ಷಣಃ–

रसवीर्यं विपाकानां सामान्यं यत्र लक्ष्यते ।
विशेषः कर्मणां चैव प्रभावस्तस्य स स्मृतः ।। (च. सू. अ. २६)
रसादि साम्ये यत् कर्म विशिष्टं तत् प्रभावजम् ।
(अ. हृ. सू. अ. ९)

रसवीर्यं विपाकादि गुणातिशयवानलम् ।
द्रव्यस्वभावो निर्दिष्टः यः प्रभावः स कीर्तितः ।। (अ. द.)

ರಸ, ವಿಪಾಕ ಮತ್ತು ವೀರ್ಯ ಸಮಾನವಿದ್ದು ಕಾರ್ಯ ಮಾತ್ರ ಭಿನ್ನವಿದ್ದರೆ ಅದು ಆ ದ್ರವ್ಯದ ಸ್ವಭಾವ ಅಥವಾ ಪ್ರಭಾವ ಅನ್ನುವರು. ದ್ರವ್ಯದ ವಿಶಿಷ್ಟ ಶಕ್ತಿಗೆ ಪ್ರಭಾವವೆನ್ನುವರು.

ವಿವರಣಃ–

ದ್ರವ್ಯದ ಕಾರ್ಯಮಾಡುವ ಶಕ್ತಿಗೆ ವೀರ್ಯ ಅನ್ನುವರು. ಈ ಶಕ್ತಿಯು ಎರಡು ಪ್ರಕಾರದ್ದು ಇರುವದು.

अत्र च वीर्यशब्देन द्रव्यस्य द्विविधापि चिन्त्याऽचिन्त्या च शक्ति रुच्यते। तत्राचिन्त्या शक्तिर्या तंत्रांतरे " प्रभाव " इत्युच्यते। (च. द.)

ಒಂದು ಚಿಂತ್ಯ ಶಕ್ತಿ ಮತ್ತೊಂದು ಅಚಿಂತ್ಯ ಶಕ್ತಿ. ಯಾವ ದ್ರವ್ಯದ ಪಂಚ ಮಹಾಭೂತದ ಸಂಘಟನ, ರಸ, ಗುಣ, ವಿಪಾಕಗಳ ಮತ್ತು ಅವುಗಳ ಕರ್ಮಗಳ ಕಾರ್ಯ-ಕಾರಣ ಸಂಬಂಧವನ್ನು ತೋರಿಸಲು ಬರುವದೊ ಅದಕ್ಕೆ ಚಿಂತ್ಯ ಶಕ್ತಿ ಅಥವಾ ಆಯುರ್ವೇದ ಪರಿಭಾಷೆಯಲ್ಲಿ ವೀರ್ಯವೆಂದು ಅನ್ನುವರು. ಆದರೆ ಯಾವ ದ್ರವ್ಯದ ಪಾಂಚಭೌತಿಕ ಸಂಘಟನ, ಗುಣ, ರಸ, ವಿಪಾಕಗಳ ಮತ್ತು ಅವುಗಳ ಕರ್ಮಗಳ ಕಾರ್ಯ-ಕಾರಣ ಸಂಬಂಧ ತೋರಿಸಲು ಬರುವದಿಲ್ಲವೊ ಅದಕ್ಕೆ ಅಚಿಂತ್ಯ ಶಕ್ತಿ ಅಥವಾ ಪ್ರಭಾವ ಅನ್ನುವರು. ದ್ರವ್ಯದ ಸರ್ವ ಗುಣಗಳಲ್ಲಿ ಪ್ರಭಾವವು ಶ್ರೇಷ್ಠವಿರುವದು. ರಸ, ವೀರ್ಯ ಮತ್ತು ವಿಪಾಕಗಳ ಮೂಲಕ ದ್ರವ್ಯದಕಾರ್ಯ ಉಂಟಾಗದೆ ಸ್ವತಂತ್ರ ರೀತಿಯಿಂದ ಕಾರ್ಯ ಉಂಟಾದದ್ದು ಕಂಡುಬರುವದು. ಎರಡು ದ್ರವ್ಯಗಳ ರಸ, ವೀರ್ಯ ಮತ್ತು ವಿಪಾಕ ಒಂದೇ ಇದ್ದು ಅವುಗಳ ಕಾರ್ಯದಲ್ಲಿ ಮಾತ್ರಭಿನ್ನತೆ ಕಂಡು ಬಂದರೆ ಅರ್ಥಾತ್ ಆ ಎರಡು ದ್ರವ್ಯಗಳಲ್ಲಿ ವಿಶೇಷಕಾರ್ಯ ಯಾವ ದ್ರವ್ಯದಿಂದ ಕಂಡುಬರುವದೊ ಅದು ಆದ್ರವ್ಯದ ಪ್ರಭಾವಿ ಕಾರ್ಯವಿರುವದು. ಕಟುರಸ ಕಟು.ವಿಪಾಕ ಇದ್ದಂತಹ ಚಿತ್ರಕ ಉಷ್ಣ ವೀರ್ಯದ್ದು ಇರುವದು ಸ್ವಾಭಾವಿಕ ಮತ್ತು

ಸೂತ್ರಯುಕ್ತವಿರುವದು. ಇದಕ್ಕೇನೇ ಚಿಂತ್ಯ ಕ್ರಿಯಾ ಅನ್ನುವರು. ಆದರೆ ಪ್ರಭಾವವನ್ನು ಹಾಗೆ ಸ್ಪಷ್ಟಮಾಡಲು ಬರುವದಿಲ್ಲ. ಅದರ ಕಾರ್ಯ-ಕಾರಣ ತಂತ್ರವನ್ನು ತಿಳಿಯಲು ಶಕ್ಯವಾಗುವದಿಲ್ಲ. ಕೇವಲ ದ್ರವ್ಯದ ಉಪಯೋಗದಿಂದ ಅದರ ಅನುಭವ ಉಂಟಾಗುವದು. ಆದ್ದರಿಂದ ಪ್ರಭಾವ ಅಚಿಂತ್ಯವಿರುವದು. ಮತ್ತು ವಿಶಿಷ್ಟ ಕರ್ಮಹೇತುಃ ಪ್ರಭಾವಃ ಎಂದು ಹೇಳಿರುವರು.

रसेन वीर्येण गुणैश्च कर्म द्रव्यं विपाकेन च यद्विदध्यात् ।
सद्योऽन्यथा तत् कुरुते प्रभावात् हेतोस्ततस्तत्र न गोचरोऽस्ति ।।
(अ. सं. सू. १७)

ಸಾಮಾನ್ಯವಾಗಿ ದ್ರವ್ಯವು ರಸದಿಂದ, ವೀರ್ಯದಿಂದ, ಗುಣದಿಂದ ಅಥವಾ ಅದರ ವಿಪಾಕದಿಂದ ಕಾರ್ಯಮಾಡುವದು. ಆದರೆ ಒಂದುವೇಳೆ ದ್ರವ್ಯವು ರಸಾದಿಗಳ ವ್ಯತಿರಿಕ್ತ ಕಾರ್ಯಮಾಡಿದರೆ ಅದು ಪ್ರಭಾವದಿಂದ ಆಗಿದ್ದೆಂದು ತಿಳಿಯಬೇಕು. ಪ್ರಭಾವದ ಹೇತು ಅರ್ಥಾತ್ ಕಾರ್ಯ-ಕಾರಣ ಸಂಬಂಧ ತಿಳಿಯುವದು ಕಠಿಣವಿರುವದು. ದ್ರವ್ಯದ ರಸ, ವೀರ್ಯ ಮತ್ತು ವಿಪಾಕಗಳಮೇಲಿಂದ ಪ್ರಭಾವದ ಕಲ್ಪನಾ ಮಾಡಲು ಬರುವದಿಲ್ಲವಾದ್ದರಿಂದ ಅದು ಅಂಚಿತ್ಯವಿರುವದು.

ಪ್ರಭಾವದ ಉದಾಹರಣೆ:-

कटुकः कटुकः पाके वीर्योष्णश्चित्रको मतः ।
तद्वद्दन्ती प्रभावात्तु विरेचयति मानवम् ।।
विषं विषघ्नमुक्तं यत् प्रभावस्तत्र कारणम् ।
ऊर्ध्वानुलोमिकं यच्च तत् प्रभावप्रभावितम् ।।
मणीनां धारणीयानां कर्म यद्विविधात्मकम् ।
तत् प्रभावकृतं तेषां प्रभावोऽचिन्त्य उच्यते ।। (च. सू. अ. २६)

ಚಿತ್ರಕ ಮತ್ತು ದಂತಿ ಇವೆರಡು ದ್ರವ್ಯಗಳ ರಸ (ಕಟು), ವಿಪಾಕ (ಕಟು), ಮತ್ತು ವೀರ್ಯ (ಉಷ್ಣ) ಗಳು ಸಮಾನವಿದ್ದರೂ ದಂತಿ ರೇಚನ ಕಾರ್ಯ ಮಾಡುವದು; ಆದರೆ ಚಿತ್ರಕಮಾಡುವದಿಲ್ಲ. ದಂತಿಯಲ್ಲಿರುವ ವಿಶಿಷ್ಟ ಶಕ್ತಿ ಚಿತ್ರಕದಲ್ಲಿ ಇರುವದಿಲ್ಲ. ಆದ್ದರಿಂದ ವಿರೇಚನ ಕಾರ್ಯವು ದಂತಿಯ ಪ್ರಭಾವವಿರುವದು. ಒಂದು ವಿಷವು ಮತ್ತೊಂದು ವಿಷದಿಂದ ನಷ್ಟವಾಗುವದು ಪ್ರಭಾವಿ ಕಾರ್ಯದಿಂದ ಆಗುವದು. ವಾಂತಿ ಮಾಡುವ ಮತ್ತು ವಿರೇಚನ ಕಾರ್ಯಮಾಡುವ ವಾಮಕ ಮತ್ತು ವಿರೇಚನ ದ್ರವ್ಯಗಳಲ್ಲಿಯೂ ಪ್ರಭಾವಿ ಕಾರ್ಯ ಇದ್ದದ್ದು ಕಂಡುಬರುವದು. ಯಾಕಂದರೆ ಇವುಗಳ ಸಮಾನ ರಸ, ವೀರ್ಯ, ವಿಪಾಕವಿದ್ದಂತಹ ಅನ್ಯ ದ್ರವ್ಯಗಳು ವಮನ ಅಥವಾ ವಿರೇಚನ ಕಾರ್ಯಮಾಡುವದಿಲ್ಲ. ಅದರಂತೆ ನಾನಾ ಪ್ರಕಾರದ ರತ್ನ, ಮಣಿಗಳನ್ನು ಧಾರಣಮಾಡುವದರಿಂದ ಆಗುವ ವಿವಿಧ ಪ್ರಕಾರದ ಕಾರ್ಯವು ಪ್ರಭಾವಿ ಗುಣದಿಂದ ಆಗುವದು. ಆದ್ದರಿಂದ ಪ್ರಭಾವ ಅಚಿಂತ್ಯವಿರುವದು.

दन्ती रसाद्यैस्तुल्यापि चित्रकस्य विरेचनी ।
मधुकस्य च मृद्वीका घृतं क्षीरस्य दीपनम् ।। (अ सं सू. १७)

ಚಿತ್ರಕ ಮತ್ತು ದಂತಿ ಇವೆರಡು ದ್ರವ್ಯಗಳ ರಸ ಕಟು, ವಿಪಾಕ ಕಟು ಮತ್ತು ವೀರ್ಯ ಉಷ್ಣವಿದ್ದರೂಕೂಡಾ ದಂತೀವಿರೇಚನ ಕಾರ್ಯಮಾಡುವದು. ಆದರೆ ಚಿತ್ರಕ ಮಾಡುವದಿಲ್ಲ. ಆದ್ದರಿಂದ ವಿರೇಚನ ಇದು ದಂತಿಯ ಪ್ರಭಾವಿ ಕಾರ್ಯ ವಿರುವದು.

ಜೇಷ್ಠಮಧ ಮತ್ತು ದ್ರಾಕ್ಷೆ ಇವೆರಡು ದ್ರವ್ಯಗಳ ರಸ, ವಿಪಾಕ ಮತ್ತು ವೀರ್ಯ ಒಂದೇ ಇರುವವು ದ್ರಾಕ್ಷೆಯು ವಿರೇಚನ ಕಾರ್ಯಮಾಡುವದು. ಜೇಷ್ಠ ಮಧ ವಿರೇಚನ ಕಾರ್ಯ ಮಾಡುವದಿಲ್ಲ. ಆದ್ದರಿಂದ ವಿರೇಚನ, ದ್ರಾಕ್ಷೆಯ ಪ್ರಭಾವಿ ಕಾರ್ಯವಿರುವದು.

ಘೃತ ಮತ್ತು ದುಗ್ಧ ಇವೆರಡರ ರಸ ಮಧುರ, ವಿಪಾಕ ಮಧುರ ಮತ್ತು ವೀರ್ಯ ಶೀತವಿರುವವು. ಘೃತವು ಅಗ್ನಿದೀಪನ ಕಾರ್ಯಮಾಡುವದು. ಆದರೆ ದುಗ್ಧ ದಿಂದ ಈ ಕಾರ್ಯವಾಗುವದಿಲ್ಲ. ಆದ್ದರಿಂದ ದೀಪನ ಕಾರ್ಯವು ಘೃತದ ಪ್ರಭಾವಿ ಗುಣದಿಂದ ಆಗುವದು.

कटुपाक रस स्निग्ध गुरुत्वैः कफवातजित् ।
लशुनो वात कफ कृन्न तु तैरेव यद्गुणैः ।।
मिथो विरुद्धा वातादीन् लोहिताद्या जयन्ति यत् ।
कुर्वन्ति यवकाद्याश्च तत् प्रभाव विजृम्भितम् ।।
शिरीषादि विषं हन्ति स्वप्नाद्यं तद्विवृद्धये ।
मणि–मन्त्रौषधीनां च यत् कर्म विविधात्मकम् ।।
शल्याहरण पुंजन्य रक्षायुर्धी वशादिकम् ।
दर्शनाद्यैरपि विषं यन्नियच्छति चागदः ।।
विरेचयति यद्वृष्यमाशु शुक्रं करोति च ।
ऊर्ध्वाधोभागिकं यच्च द्रव्यं यच्छमनादि च ।।
मात्रादि प्राप्य तत्तच्च यत् प्रपञ्चेन वर्णितम् ।
तच्च प्रभावजं सर्वमतोऽचिन्त्यः स उच्यते ।। (अ. सं सू. १७)

ಲಶುನದ ಕಟು ವಿಪಾಕ, ಕಟು ರಸಗಳಿಂದ ಕಫದ ನಾಶಮಾಡುವದು ಮತ್ತು ಸ್ನಿಗ್ಧ, ಗುರು ಗುಣಗಳಿಂದ ವಾತದ ನಾಶಮಾಡುವದು. ಆದರೆ ಅವೇ ರಸಾದಿ ಗುಣ ಗಳಿಂದ ವಾತ ಅಥವಾ ಕಫದ ಪ್ರಕೋಪಮಾಡುವದಿಲ್ಲ.

ಪರಸ್ಪರ ವಿರುಧ್ಧ ಗುಣವಿರುವಂತಹ ವಾತ, ಪಿತ್ತ, ಕಫಗಳನ್ನು ರಕ್ತಶಾಲಿಯು ಶಮನ ಮಾಡುವದು. ಆದರೆ ಅವೇ ಗುಣಗಳಿಂದ ಕೂಡಿದ ಯವವು ದೋಷಗಳನ್ನು ಪ್ರಕೋಪಮಾಡುವದು.

ಶಿರೀಷಾದಿ ದ್ರವ್ಯಗಳು ವಿಷದ ನಾಶಮಾಡುವವು. ಮತ್ತು ನಿದ್ರಾ ಮೊದಲಾದವು ವಿಷ ವೃದ್ಧಿಮಾಡುವವು. ಮಣಿ, ಮಂತ್ರ ಮತ್ತು ಔಷಧಿಗಳ ಧಾರಣಮಾಡುವದರಿಂದ ನಾನಾ ಪ್ರಕಾರದ ಕಾರ್ಯಗಳು ಆದದ್ದು ಕಂಡುಬರುವವು. ಇವೆಲ್ಲವು ಪ್ರಭಾವದ ಮೂಲಕ ಆಗುವವು.

ಶಲ್ಯಗಳನ್ನು ಆಕರ್ಷಣ ಮಾಡುವದು, ಪುತ್ರೋತ್ಪತ್ತಿ ಆಗುವದು, ರಾಕ್ಷಸಾದಿಗಳಿಂದ ರಕ್ಷಣಮಾಡುವದು, ರಸಾಯನಗಳಿಂದ ಆಯುಷ್ಯ ವರ್ಧನವಾಗುವದು, ಶಂಖಪುಷ್ಪಿ ಇತ್ಯಾದಿಗಳಿಂದ ಬುದ್ಧಿವರ್ಧನ ವಾಗುವದು, ಮಂತ್ರಗಳಿಂದ ಜನರನ್ನು ವಶ ಮಾಡಿಕೊಳ್ಳುವದು, ಔಷಧ ದರ್ಶನದಿಂದ ವಿಷದ ನಾಶವಾಗುವದು ಇತ್ಯಾದಿ ಕಾರ್ಯಗಳು ಪ್ರಭಾವ ಜನ್ಯವಿರುವವು.

ವಾಜೀಕರ ದ್ರವ್ಯಗಳಿಂದ ವೀರ್ಯ ಉತ್ಪತ್ತಿಯಾಗುವದು, ವಾಮಕ ದ್ರವ್ಯಗಳಿಂದ ವಮನವಾಗುವದು, ವಿರೇಚನ ದ್ರವ್ಯಗಳಿಂದ ವಿರೇಚನವಾಗುವದು, ಆಮಲಕಿಯ ಸೇವನದಿಂದ ತ್ರಿದೋಷ ನಾಶವಾಗುವದು ಇತ್ಯಾದಿ ಕಾರ್ಯಗಳು ಪ್ರಭಾವದಿಂದ ಆಗುವವು. ಇತ್ಯಾದಿ ಮೇಲಿನ ಉದಾಹರಣೆಗಳಿಂದ ನೋಡಲಾಗಿ ಪ್ರಭಾವವು ಅಚಿಂತ್ಯವಿರುವದು.

अमीमांस्यान्यचिन्त्यानि प्रसिद्धानि स्वभावतः ।
आगमेनोपयोज्यानि भेषजानि विचक्षणैः ॥
प्रत्यक्षलक्षणफलाः प्रसिद्धाश्च स्वभावतः ।
नौषधीर्हेतुभिर्विद्वान् परीक्षेत कदाचन ॥
सहस्रेणापि हेतूनां नाम्बष्ठादिर्विरेचयेत् ।
तस्मात्तिष्ठेत्तु मतिमानागमे न तु हेतुषु ॥ (सु. सू. अ. ४०)

ಯಾವ ದ್ರವ್ಯದ ವಮನ, ವಿರೇಚನ ಇತ್ಯಾದಿ ಕರ್ಮಗಳು ಯುಕ್ತಿಯಿಂದ ಅಥವಾ ತರ್ಕದಿಂದ ತಿಳಿದು ಬರುವದಿಲ್ಲವೋ ಅವು ತಮ್ಮ ಸ್ವಭಾವದಿಂದಲೇ ಪ್ರಸಿದ್ಧವಿರುತ್ತವೆ. ಮತ್ತು ಅವುಗಳ ಉಪಯೋಗವನ್ನು ವೈದ್ಯರು ಶಾಸ್ತ್ರದಲ್ಲಿ ಹೇಳಿದಂತೆ ಮಾಡಬೇಕು. ಯಾವ ದ್ರವ್ಯಗಳ ಕಾರ್ಯವು ಅವುಗಳ ಸ್ವಭಾವದಿಂದಲೇ ಪ್ರಸಿದ್ಧವಿರುವವೊ ಅಂಥ ದ್ರವ್ಯಗಳನ್ನು ವೈದ್ಯರು ತರ್ಕ ಅಥವಾ ಯುಕ್ತಿಯಿಂದ ಪರೀಕ್ಷಿಸುವದಕ್ಕೆ ಹೋಗಬಾರದು. ಯಾಕಂದರೆ ಅಂಬಷ್ಠಾದಿಗಣವಲ್ಲಿಯ ದ್ರವ್ಯಗಳ ಬಗ್ಗೆ ಅನೇಕ ರೀತಿಯಿಂದ ತರ್ಕಮಾಡಲಾಗಿ ಅವು ವಿರೇಚನಕಾರ್ಯ ಮಾಡಬಹುದು ಎಂದು ಸಿದ್ಧವಾಗುವದು. ಆದರೂ ಕೂಡಾ ಅವುಗಳಿಂದ ವಿರೇಚನ ಕಾರ್ಯ ಉಂಟಾಗುವದಿಲ್ಲ. ಆದ್ದರಿಂದ ಚಿಕಿತ್ಸಾ ತಜ್ಞರು ಸ್ವಭಾವದಿಂದಲೇ ಕಾರ್ಯಮಾಡುವ ದ್ರವ್ಯಗಳ ವಿಷಯವಾಗಿ ವಿಶೇಷರೀತಿಯಿಂದ ವಿಚಾರಮಾಡದೇ ಶಾಸ್ತ್ರದಲ್ಲಿ ಹೇಳಿದಂತೆ ಅವುಗಳ ಉಪಯೋಗ ಮಾಡಬೇಕು.

ರಸ, ವಿಪಾಕ ಮತ್ತು ವೀರ್ಯಗಳಿಗಿಂತ ಪ್ರಭಾವವು ಶ್ರೇಷ್ಠವಿರುವದು. ಯಾಕಂದರೆ ಅದು ಅಚಿಂತ್ಯವಿರುವದು. ಅಚಿಂತ್ಯತ್ವಾತ್, ದೈವಪ್ರತೀಘಾತಾತ್, ವಿಷ

ಪ್ರತಿ ಘಾತಾತ್ ಕರ್ಮವೈಶಿಷ್ಟ್ಯಾತ್, ಆಗಮಾಚ್ಚ ಇತ್ಯಾದಿ ಕಾರಣಗಳಿಂದ ಪ್ರಭಾವ ರಸಾದಿಗಳಿಗಿಂತ ಶ್ರೇಷ್ಠವಿರುವದು.

ಸಮ ಮತ್ತು ವಿಚಿತ್ರ ಪ್ರತ್ಯಯಾರಬ್ಧ ದ್ರವ್ಯಗಳು:—

'क्वचिद् द्रव्ये यादृगेव भूतसंघातो द्रव्यस्यारम्भकः, तादृगेव रसादीनां, तत् समानप्रत्ययारब्धं, तत् सामान्य गुणान्नातिक्रामति; क्वचिदन्यादृग्भूतसंघातो द्रव्यस्यारम्भकोऽन्यादृग्रसस्यान्याहग्गुणस्येत्यादि, तद्, विचित्रप्रत्ययारब्धं, तत् सामान्यगुणामाक्रामति।' (हे)

ದ್ರವ್ಯ ರಚನೆಯ ಎರಡು ಪ್ರಕಾರಗಳನ್ನು ಆಯುರ್ವೇದ ಶಾಸ್ತ್ರಕಾರರು ಹೇಳಿರುವರು. ಅವು ಅಂದರೆ ಸಮಪ್ರತ್ಯಯಾರಬ್ಧ ಮತ್ತು ವಿಚಿತ್ರ ಪತ್ಯಯಾರಬ್ಧ. ಸಮ ಪ್ರತ್ಯಯಾರಬ್ಧಕ್ಕೆ ಪ್ರಕೃತಿ ಸಮಸಮವಾಯವೆಂದೂ ವಿಚಿತ್ರ ಪ್ರತ್ಯಯಾರಭ್ದಕ್ಕೆ ವಿಕೃತಿ ವಿಷಯ ಸಮವಾಯವೆಂದೂ ಕರೆಯುವರು. ದ್ರವ್ಯವು ಪಂಚಮಹಾಭೂತಗಳಿಂದ ತಯಾರಾಗಿರುವದು. ಪಂಚಮಹಾಭೂತ ವಿಕಾರ ಸಮುದಾಯಕ್ಕೆ ಭೂತ ಸಂಘಾತವೆಂದು ಅನ್ನುವರು. ಕೇವಲ ಒಂದೇ ಮಹಾಭೂತದಿಂದ ದ್ರವ್ಯದ ನಿರ್ಮಿತಿಯಾಗುವದಿಲ್ಲ. ಒಂದು ಮಹಾಭೂತವು ಪ್ರಧಾನ್ಯವಾಗಿದ್ದು ಉಳಿದ ಮಹಾಭೂತಗಳು ಅದರಲ್ಲಿ ಅಪ್ರಧಾನವಾಗಿರುತ್ತವೆ. ಅಂದರೆ ಪಾರ್ಥಿವ ದ್ರವ್ಯಗಳಲ್ಲಿ ಪೃಥ್ವಿಮಹಾಭೂತವು ಪ್ರಧಾನವಾಗಿದ್ದು ಉಳಿದ ಮಹಾಭೂತಗಳು ಅಪ್ರಧಾನವಾಗಿರುತ್ತವೆ. ಅದರಂತೆ ಆಪ್ಯ ಇತ್ಯಾದಿ ಉಳಿದ ದ್ರವ್ಯಗಳಲ್ಲಿಯೂ ತಿಳಿಯಬೇಕು. ಈ ರೀತಿಯಾಗಿ ನೋಡಲಿಕ್ಕಾಗಿ ಪ್ರತಿಯೊಂದು ದ್ರವ್ಯಗಳಲ್ಲಿರುವ ಮಹಾಭೂತಗಳ ರಚನೆ ಬೇರೆ ಬೇರೆ ರೀತಿಯಾಗಿ ಇದ್ದದ್ದು ಕಂಡುಬರುವದು. ಇದಕ್ಕೇನೆ ಭೂತಸಂಘಾತ ಅಥವಾ ಭೂತಗಳ ಸಂಘಟನೆ ಎಂದು ಅನ್ನುವರು. ಯಾವ ಪ್ರಕಾರದ ಭೂತ ಸಂಘಾತ ದ್ರವ್ಯಾರಂಭಕ ಇರುವದೋ ಅದೇ ಪ್ರಕಾರದ ಭೂತಸಂಘಾತ ರಸಾರಂಭಕವೂ ಇದ್ದರೆ ಅಂಥ ದ್ರವ್ಯಗಳಿಗೆ ಸಮಾನ ಪ್ರತ್ಯಯಾರಬ್ಧ ದ್ರವ್ಯಗಳೆಂದು ಅನ್ನುವರು.

तदेवं द्रव्याणां द्वैविध्यं, यतः कानिचिद् द्रव्याणि यैरेव महाभूतैर्यथाविधैः रसदयः आरब्धास्तैरेव तथाभूतैर्महाभूतैः तदाश्रयाणि द्रव्याण्यारब्धानि, तानि च रसादिसमानप्रत्ययारब्धान्युच्यन्ते। तानि च यथायथं तत् कर्मरसाद्यनुगुणं सामान्यात् कुर्वंते यथा–क्षीरेक्षु शर्करादीनि।

कानिचित् पुनस्तदाश्रितरसादिसमारम्भकमहाभूतान्यन्यानि, तदाश्रयद्रव्यारम्भकाण्यन्यानि च महाभूतानि तैरारब्धानि तानि विचित्रप्रत्ययारब्धानि द्रव्याणि, तानि च यथायथं रसाद्यनुगुणं कर्म न कुर्वंन्ति, भिन्नत्वाद्धेतुभावस्य–यथा–मकुष्ठ यव मत्स्य–सिंहादीनि'। (अ. द.)

ದ್ರವ್ಯ ಮತ್ತು ಗುಣ ನಿರ್ಮಿತಿಯಲ್ಲಿ ಎರಡು ಪ್ರಕಾರ ಇದ್ದದ್ದು ಕಂಡುಬರುವದು. ಮೊದಲನೆಯ ಪ್ರಕಾರದಲ್ಲಿ ದ್ರವ್ಯದ ರಚನೆ ಮತ್ತು ಅದರ ಆಶ್ರಯದಿಂದ ಇರುವಂಥಹ ರಸಾದಿ ಗುಣಗಳಲ್ಲಿಯ ಪಂಚಮಹಾಭೂತಗಳ ಸಂಘಟನೆ (ಕೂಡುವಿಕೆ) ಒಂದೇ ಪದ್ಧತಿಯಿಂದ ಇರುವದು ಇಂಥ ದ್ರವ್ಯಗಳಿಗೆ ಸಮಪ್ರತ್ಯಯಾರಬ್ಧ ದ್ರವ್ಯಗಳೆಂದು ಅನ್ನುವರು. ಮತ್ತು ಅವುಗಳ ಕಾರ್ಯವೂ ಕೂಡಾ ಒಂದಕ್ಕೊಂದು ಅವಲಂಬಿಸಿರುವದು. ಅಂದರೆ ಒಂದು ದ್ರವ್ಯದ ರಸ ಮಧುರ ಇದ್ದರೆ ಅದರ ವಿಪಾಕವೂ ಮಧುರವಾಗುವದು ಮತ್ತು ವಿಪಾಕಕ್ಕೆ ಅನುಸರಿಸಿ ವೀರ್ಯವೂ ಶೀತವಾಗುವದು. ಆದ್ದರಿಂದ ಇಂಥ ದ್ರವ್ಯಗಳ ರಸಜ್ಞಾನವಾದರೆ ಅವುಗಳ ವಿಪಾಕ ಮತ್ತು ವೀರ್ಯಗಳ ಅನುಮಿತಿ ಮಾಡಲು ಬರುವದು.

ಎರಡನೆಯ ಪ್ರಕಾರದಲ್ಲಿ ದ್ರವ್ಯದಲ್ಲಿರುವ ಭೂತಗಳ ರಚನೆ ಮತ್ತು ಆ ದ್ರವ್ಯದಲ್ಲಿ ಆಶ್ರಯ ರೂಪದಿಂದ ಇರುವ ರಸಾದಿಗಳ ಭೂತಗಳ ರಚನೆ ಬೇರೆ ಬೇರೆ ರೀತಿಯಾಗಿರುವದು. ಇಂಥ ದ್ರವ್ಯಗಳಿಗೆ ವಿಚಿತ್ರ ಪ್ರತ್ಯಯಾರಬ್ಧ ದ್ರವ್ಯಗಳೆಂದು ಅನ್ನುವರು. ಅಂದರೆ ದ್ರವ್ಯನಿರ್ಮಿತಿಯಲ್ಲಿ ಯಾವ ಪಂಚಮಹಾಭೂತ ಸಂಘಟನೆ ಇರುವದೊ ಅವಕ್ಕಿಂತಲೂ ಆ ದ್ರವ್ಯದ ಆಶ್ರಯದಿಂದ ಇರುವ ರಸ, ವೀರ್ಯ, ವಿಪಾಕ ಮತ್ತು ಅನ್ಯ ಗುಣಗಳ ನಿರ್ಮಿತಿ ಬೇರೆ ಪಂಚಮಹಾಭೂತಗಳ ಸಂಘಟನೆಯಿಂದ ಆಗಿರುವದು. ಆದ್ದರಿಂದ ಅಂಥ ದ್ರವ್ಯಗಳ ರಸ, ವೀರ್ಯ, ವಿಪಾಕಾದಿ ಗುಣಗಳು ಒಂದಕ್ಕೊಂದು ಅನುರೂಪವಾಗಿ ಇರುವದಿಲ್ಲ. ಮತ್ತು ಅವುಗಳ ಕಾರ್ಯದ ಅನುಮಿತಿ ಕೇವಲ ಅವುಗಳ ರಸಜ್ಞಾನದಿಂದಲೇ ಮಾಡಲು ಬರುವದಿಲ್ಲ. ಆದ್ದರಿಂದ ಅಂಥ ದ್ರವ್ಯಗಳ ಕಾರ್ಯದ ಜ್ಞಾನವನ್ನು ಶಾಸ್ತ್ರಕಾರರು ಹೇಳಿದಂತೆ ಮಾಡಿಕೊಳ್ಳಬೇಕು. ವಿಚಿತ್ರ ಪ್ರತ್ಯಯಾರಬ್ಧ ದ್ರವ್ಯಗಳಲ್ಲಿ, ದ್ರವ್ಯಾರಂಭಕ ಮಹಾಭೂತ ಮತ್ತು ರಸ, ವೀರ್ಯ, ವಿಪಾಕಾರಂಭಕ ಮಹಾಭೂತ ಇವೆರಡು ಸಮಾನವಿರುವದಿಲ್ಲ.

स्वादुर्गुरुश्च गोधूमो वातजिद्वातकृद्यवः ।
उष्णा मत्स्याः, पयः शीतं, कटुः सिंहो, न शूकरः ॥
(अ. हृ. सू. अ. ९)

यस्माद् दृष्टो यवः स्वादुर्गुरुण्यनिलप्रदः ।
दीपनं शीतमप्याज्यं वसोष्णाऽप्यग्निसादनी ॥
कटुपाकोऽपि पित्तघ्नो मुद्गः माषस्तु पित्तलः ।
स्वादुपाकोऽपि, चलकृत् स्निग्धोष्णं गुरु फाणितम् ॥
कुरुते दधि गुर्वेव वह्निं पारावतेन तु ।
कपित्थं दाडिमं ग्राहि साम्लं नामलकीफलम् ॥
कषाया ग्राहिणी शीता धातकी, न हरीतकी ।

अप्रधानाः पृथक् तस्माद्रसाद्याः, संश्रितास्तु ते ।
प्रभावश्च यतो द्रव्ये, द्रव्यं श्रेष्ठमतो मतम् । (अ. सं. सू. अ. १७)

ದ್ರವ್ಯ	ಪ್ರಕಾರ	ಗುಣ	ಕರ್ಮ
1) ಗೋಧೂಮ	ಸಮಾನ ಪ್ರತ್ಯಯಾರಬ್ಧ	ಮಧುರ ಗುರು	ವಾತಕರ
ಯವ	ವಿಚಿತ್ರ "	" "	"
2) ದುಗ್ಧ	ಸಮಾನ "	" "	ಶೀತವೀರ್ಯ
ಮತ್ಸ್ಯ	ವಿಚಿತ್ರ "	" "	ಉಷ್ಣವೀರ್ಯ
3) ಶೂಕರ	ಸಮಾನ "	" "	ಮಧುರವಿಪಾಕ
ಸಿಂಹ	ವಿಚಿತ್ರ "	" "	ಕಟುವಿಪಾಕ
4) ಘೃತ	" "	ಶೀತವೀರ್ಯ	ದೀಪನ
5) ವಸಾ	" "	ಉಷ್ಣ "	ಅಗ್ನಿಮಾಂದ್ಯ
6) ಮುದ್ಗ	" "	ಕಟುವಿಪಾಕ	ಪಿತ್ತಶಾಮಕ
7) ಮಾಷ	" "	ಮಧುರ ವಿಪಾಕ	ಪಿತ್ತವರ್ಧಕ
8) ಫಾಣಿತ	" "	ಸ್ನಿಗ್ಧ,ಉಷ್ಣ,ಗುರು	ವಾತವರ್ಧಕ
9) ದಧಿ	" "	ಗುರು	ದೀಪನ
10) ಪಾರಾವತ	" "	ಗುರು	ಅಗ್ನಿದೀಪನ ಮಾಡುವದಿಲ್ಲ
11) ಕಪಿತ್ಥ	" "	ಅಮ್ಲರಸ	ಗ್ರಾಹಿ
12) ದಾಡಿಮ	" "	"	ಗ್ರಾಹಿ
ಧಾತ್ರಿ	ಸಮಾನ "	"	ಸರ
13) ಧಾತಕಿ ಪುಷ್ಪ	" "	ಕಷಾಯ ರಸ	ಗ್ರಾಹಿ
ಹರಿತಕಿ	ವಿಚಿತ್ರ "	"	ವಿರೇಚನ

ಪ್ರಭಾವ ಪ್ರಾಧಾನ್ಯತೆ:—

ರಸ, ವೀರ್ಯ, ವಿಪಾಕಗಳಿಗಿಂತ ಪ್ರಭಾವವು ಶ್ರೇಷ್ಠವಿದೆ. ರಸ, ವೀರ್ಯಾದಿಗಳು ದ್ರವ್ಯಾಶ್ರಿತವಿರುತ್ತವೆ. ಆದರೆ ಪ್ರಭಾವವು ದ್ರವ್ಯದ ಸ್ವಭಾವವಿರುವದು. ದ್ರವ್ಯದ

ಸ್ವಭಾವವೇ ಪ್ರಭಾವವು ಇರುವದರಿಂದ ರಸಾದಿಗಳಿಗೆ ಇದೇ ಆಧಾರವಾಗಿರುತ್ತದೆ. ಆದ್ದರಿಂದ ಇದು ಸರ್ವಶ್ರೇಷ್ಠವಿದೆ.

ನಾಗಾರ್ಜುನನು ಪ್ರಭಾವದ ಪ್ರಾಧಾನ್ಯತೆಯನ್ನು ಈ ಕೆಳಗಿನ ಯುಕ್ತಿಗಳಿಂದ ಮಾಡಿರುವನು.

1) अचिन्त्यत्वात् 2) दैव प्रतीघातात् 3) विष प्रतीघातात् 4) दर्शनाच्छ्रवणात् । (र. वै. सू. १)

1) ಅಚಿಂತ್ಯಃ–

ಪ್ರಭಾವವು ಅಚಿಂತ್ಯವಿರುವದರಿಂದ ಉಳಿದ ರಸಾದಿಗಳಿಗಿಂತ ಪ್ರಧಾನವಿದೆ.

2) ದೈವ ಪ್ರತೀಘಾತಃ–


ರಾಕ್ಷಸ, ಪಿಶಾಚ ಮೊದಲಾದವುಗಳ ನಾಶ ಮಾಡುವದರಿಂದ ಪ್ರಭಾವವು ಪ್ರಧಾನವಿದೆ.

3) ವಿಷ ಪ್ರತೀಘಾತಃ–

ವಿಷ ನಾಶನಮಾಡುವದರಿಂದ ಪ್ರಭಾವವು ಪ್ರಧಾನವಿದೆ.

4) ಕರ್ಮ ವೈಶಿಷ್ಟ್ಯಃ–

ದ್ರವ್ಯಗಳ ರಸ, ಗುಣಾದಿಗಳು ಸಮಾನವಿದ್ದರೂ ಅವುಗಳ ಕರ್ಮದಲ್ಲಿ ವಿಶೇಷತೆಯು ಕಂಡುಬರುವದು. ಉದಾಃ– ಬೇವು, ತಿಕ್ತ ರಸ, ಶೀತವೀರ್ಯ, ಮೃದು ಮತ್ತು ಲಘು ಗುಣಾತ್ಮಕವಿದ್ದು ತನ್ನ ಪ್ರಭಾವದಿಂದ ಕುಷ್ಠ ರೋಗವನ್ನು ಕಳೆಯುತ್ತದೆ. ಆದರೆ ಶ್ಯೋನಾಕವು (ಹೆಮ್ಮರವು) ಬೇವಿನಲ್ಲಿರುವ ಗುಣಾತ್ಮಕಗಳುಳ್ಳದ್ದಿದ್ದರೂ ತನ್ನ ಪ್ರಭಾವದಿಂದ ಸ್ತಂಭನ ಕಾರ್ಯವನ್ನು ಮಾಡುತ್ತದೆ.



ಪ್ರಕರಣ ೭

ದ್ರವ್ಯ ಪ್ರತಿನಿಧಿ ವಿಜ್ಞಾನೀಯ ಅಧ್ಯಾಯ

योज्यमेकतराभावे परं वैद्येन जानता ॥
रस वीर्य विपाकाद्यैः समं द्रव्यं विचिन्त्य च ।
युञ्ज्यात्तद्विधमन्यच्च द्रव्याणां च रसादिवत् ॥
योगे यद् प्रधानं स्यात्तस्य प्रतिनिधिर्मतः ।
यत्तु प्रधानं तस्यापि सदृशं नैव गृह्यते ॥ (निघण्ट रत्नाकर)

ಔಷಧಿ ಕಲ್ಪಗಳಲ್ಲಿ ಯಾವ ಯಾವ ದ್ರವ್ಯಗಳನ್ನು ಉಪಯೋಗ ಮಾಡಲಿಕ್ಕೆ ಹೇಳಿರುವರೋ ಅವು ಒಂದುವೇಳೆ ಸಿಗದಂತೆ ಇದ್ದರೆ ಅಂಥ ಪರಿಸ್ಥಿತಿಯಲ್ಲಿ ಅಭಾವವಿದ್ದ ದ್ರವ್ಯಗಳ ಗುಣಗಳುಳ್ಳಂತಹ ಇತರ ದ್ರವ್ಯಗಳನ್ನು ಉಪಯೋಗ ಮಾಡಬೇಕು. ಉಪಯೋಗ ಮಾಡುವ ಮೊದಲು ಅವುಗಳ ರಸ, ವೀರ್ಯ, ವಿಪಾಕ ಮತ್ತು ಪ್ರಭಾವ ಇವುಗಳ ಬಗ್ಗೆ ವಿಚಾರಿಸಿ ಉಪಯೋಗಿಸಬೇಕು. ಔಷಧಿ ಕಲ್ಪಗಳಲ್ಲಿ ಯಾವಾಗಲೂ ಪ್ರಧಾನ ದ್ರವ್ಯಗಳ ಪ್ರತಿನಿಧಿ ದ್ರವ್ಯಗಳನ್ನು ಉಪಯೋಗ ಮಾಡಬಾರದು. ಕಲ್ಪದಲ್ಲಿ ಹೇಳಿದ ಪ್ರಧಾನ ದ್ರವ್ಯಗಳನ್ನು ದೊರಕಿಸಿಕೊಂಡು ಅವುಗಳ ಉಪಯೋಗ ಮಾಡಬೇಕಾಗುತ್ತದೆ. ಒಂದು ವೇಳೆ ಕಲ್ಪದಲ್ಲಿ ಹೇಳಿದ ಆ ಪ್ರಧಾನ ದ್ರವ್ಯಗಳು ಸಿಗದಿದ್ದರೆ ಮಾತ್ರ ಅಂಥಲ್ಲಿ ಪ್ರತಿನಿಧಿ ದ್ರವ್ಯಗಳ ಉಪಯೋಗ ಮಾಡಬೇಕು. ರೋಗವೃದ್ಧಿಕರ ದ್ರವ್ಯಗಳನ್ನು ಕಲ್ಪದಲ್ಲಿ ಉಪಯೋಗ ಮಾಡಬಾರದು. ಕೆಲವು ದ್ರವ್ಯಗಳ ಪ್ರತಿನಿಧಿ ದ್ರವ್ಯಗಳನ್ನು ಕೆಳಗೆ ಕೊಡಲಾಗಿದೆ.

चित्रकाभावतो दन्तीक्षारः शिखरिजोऽथवा ।
अभावे धन्वयासस्य प्रक्षेप्तव्या दुरालभा ॥
तगरस्याप्यभावे तु कुष्ठं दद्याद्भिषग्वरः ।
मूर्वाभावे त्वचो ग्राह्या झिञ्झिनीप्रभवा बुधैः ॥
अहिंस्राया अभावे तु मानकन्दः प्रकीर्तितः ।
लक्ष्मणाया अभावे तु नीलकण्ठशिखा मता ॥
बकुलाभावतो देयं कह्लारोत्पल पङ्कजम् ।
नीलोत्पलस्याभावे तु कुमुदं देयमिष्यते ॥
जातीपुष्पं न यत्रास्ति लवङ्गं तत्र दीयते ।
अर्कपर्णादिपयसो ह्यभावे तद्रसो मतः ॥

ದ್ರವ್ಯ	ಪ್ರತಿನಿಧಿ ದ್ರವ್ಯ
ಚಿತ್ರಕ	ದಂತೀ ಮೂಲ
ಕ್ಷಾರ	ಅಪಾಮಾರ್ಗ ಕ್ಷಾರ
ಧನ್ವಯಾಸ	ದುರಾಲಭಾ
ತಗರ	ಕುಷ್ಠ
ಮೂರ್ವಾ	ತ್ವಕ್, ಮಂಜಿಷ್ಠಾ
ಅಹಿಂಸ್ರಾ	ಮಾನಕಂದ
ಲಕ್ಷ್ಮಣಾ	ಮಯೂರಶಿಖಾ (ನೀಲಕಂಠಶಿಖಾ)
ಬಕುಲ ಪುಷ್ಪ	ಸುಗಂಧಿ ಶ್ವೇತಕಮಲ
ನೀಲೋತ್ಪಲ	ಕುಮುದ (ಶ್ವೇತಕಮಲ)
ಜಾತೀ ಪುಷ್ಪ	ಲವಂಗ
ಅರ್ಕಪರ್ಣಾದಿಪಯ	ಅರ್ಕಪರ್ಣಾದಿ ಸ್ವರಸ

पौष्कराभावतः कुष्ठं तथा लाङ्गल्यभावतः ।
स्थौणेयकस्य चाभावे भिषग्भिर्दीयतेऽगदः ॥
चविकागजपिप्पल्यौ पिप्पलीमूलवत्स्मृते ।
अभावे सोमराज्यास्तु प्रपुन्नाटफलं स्मृतम् ॥
यदि न स्याद्दारुनिशा तदा देया निशा बुधैः ।
रसाञ्जनस्याभावे तु सम्यग्दार्वी प्रयुज्यते ॥
सौराष्ट्र्यभावतो देया स्फटिका तद्गुणा जनैः ।
तालीसपत्रकाभावे स्वर्णताली प्रशस्यते ॥
भार्ङ्ग्यभावे तु तालीसं कण्टकारिजटाथवा ।
रुचकाभावतो दद्याल्लवणं पांसुपूर्वकम् ॥
अभावे मधुयष्ट्यास्तु धातकीं तु प्रयोजयेत् ।
अम्लवेतसकाभावे चुक्रं दातव्यमिष्यते ॥
द्राक्षा यदि न लभ्येत प्रदेयं काश्मरीफलम् ।
तयोरभावे कुसुमं मधूकस्य मतं बुधैः ॥
लवङ्गकुसुमं दद्यान्नखस्याभावतः पुमान् ।
कस्तूर्यभावे कङ्कोलं क्षेपणीयं विदुर्बुधाः ॥
कङ्कोलस्याप्यभावे तु जातीपुष्पं प्रदीयते ।
सुगन्धमुस्तकं देयं कर्पूराभावतो बुधैः ॥

कर्चूराभावतो देयं ग्रन्थिपर्णं विशेषतः ।
कुङ्कुमाभावतो दद्यात्कुसुम्भकुसुमं नवम् ॥

ದ್ರವ್ಯ	ಪ್ರತಿನಿಧಿ ದ್ರವ್ಯ
ಪುಷ್ಕರಮೂಲ, ಲಾಂಗಲಿ	ಕುಷ್ಠ
ಸ್ಥೌಣೇಯ	ಸುಗಂಧಿ ಕುಷ್ಠ
ಪಿಪ್ಪಲಿ ಮೂಲ	ಚವಕ, ಗಜ ಪಿಪ್ಪಲಿ
ಬಾಕುಚಿ	ಪ್ರಪುನ್ನಾಟ ಫಲ
ದಾರು ಹರಿದ್ರಾ	ಹರಿದ್ರಾ
ರಸಾಂಜನ	ದಾರುಹರಿದ್ರಾ
ಸೌರಾಷ್ಟ್ರಿ	ಸ್ಫಟಿಕ
ತಾಲೀಸಪತ್ರ	ಸ್ವರ್ಣತಾಲಿ
ಭಾರಂಗಿ	ತಾಲೀಸಪತ್ರ, ಕಂಟಕಾರಿಮೂಲ
ಪಾದೇ ಲವಣ	ಪಾಂಸು ಲವಣ
ಯಷ್ಟಿ ಮಧು	ಧಾತಕಿ ಪುಷ್ಪ
ಅಮ್ಲವೇತಸ	ಚುಕ್ರ
ದ್ರಾಕ್ಷಾ	ಕಾಶ್ಮರಿಫಲ
ದ್ರಾಕ್ಷಾ, ಕಾಶ್ಮರಿ	ಮಧೂಕಪುಷ್ಪ
ನಖ (ಸುಗಂಧಿ ದ್ರವ್ಯ)	ಲವಂಗಪುಷ್ಪ
ಕಸ್ತೂರಿ	ಕಂಕೋಲ
ಕಂಕೋಲ	ಜಾತೀಪುಷ್ಪ
ಕರ್ಪೂರ	ಸುಗಂಧಿಮುಸ್ತಾ
ಕಚೋರ	ಗ್ರಂಥಿಪರ್ಣ (ಸ್ಥೌಣೇಯ)
ಕುಂಕುಮ	ಕುಸುಂಭಪುಷ್ಪ

श्रीखण्डं चन्दनाभावे कर्पूरं देयमिष्यते ।
अभावे त्वेतयोर्वैद्यः प्रक्षिपेद्रक्तचन्दनम् ॥
रक्तचन्दनकाभावे नवोशीरं विदुर्बुधाः ।
मुस्ता चातिविषाभावे शिवाभावेऽमलक्यपि ॥
अभावे नागपुष्पस्य पद्मकेसरमिष्यते ।
मेदा जीवक काकोली ऋद्धिद्वन्द्वेपि चासति ।

वरीविदार्यश्वगन्धावाराहीश्च क्रमात्क्षिपेत् ॥
वाराह्याश्च तथाभावे चर्मकारालुको मतः ।
वाराहीकन्दसंज्ञस्तु पश्चिमे गृष्टिसंज्ञकः ॥
वाराहीकन्द एवान्यैश्चर्मकारालुका मता ।
अनूपसंभवे देशे वाराह इव लोमवान् ॥ (नि. र.)

ದ್ರವ್ಯ	ಪ್ರತಿನಿಧಿ ದ್ರವ್ಯ
ಶ್ರೀಖಂಡ ಚಂದನ	ಕರ್ಪೂರ
ಶ್ರೀಖಂಡ ಚಂದನ, ಕರ್ಪೂರ	ರಕ್ತ ಚಂದನ
ರಕ್ತ ಚಂದನ	ನವ ಉಶೀರ
ಅತಿವಿಷಾ	ಮುಸ್ತಾ
ಹರಿತಕಿ	ಆಮಲಕಿ
ನಾಗಕೇಶರ	ಕಮಲ ಕೇಶರ
ಮೇದಾ, ಮಹಾ ಮೇದಾ	ಶತಾವರಿ
ಜೀವಕ, ಋಷಭಕ	ವಿದಾರಿಕಂದ
ಕಾಕೋಲಿ, ಕ್ಷೀರಕಾಕೋಲಿ	ಅಶ್ವಗಂಧಾ
ಋದ್ಧಿ, ವೃದ್ಧಿ	ವಾರಾಹಿಕಂದ
ಭೂಕೂಷ್ಮಾಂಡ	ವಾರಾಹಿಕಂದ

भल्लातकासहत्वे तु रक्तचन्दनमिष्यते ।
भल्लाताभावतश्चित्रं नलश्चेक्षोरभावतः ॥
सुवर्णाभावतो वैद्यो माक्षिकं प्रक्षिपेद्बुधः ।
श्वेतं तु माक्षिकं ज्ञेयं बुधै रजतवध्रुवम् ॥
माक्षिकस्याप्यभावे तु प्रदद्यात्स्वर्णगैरिकम् ।
सुवर्णमथवा रौप्यं मृतं यत्र न लभ्यते ॥
तत्र लोहेन कर्माणि भिषक्कुर्याद्विचक्षणः ।
कान्ताभावे तीक्ष्णलोहं योजयेद्वैद्यसत्तमः ।
अभावे मौक्तिकस्यापि मुक्ताशुक्तिं च योजयेत् ।
मधु यत्र न लभ्येत तत्र जीर्णो गुडो मतः ॥

मत्स्यण्डयभावतो दद्युर्भिषजःसितशर्कराम् ।
असंभवे सितायास्तु बुधैः खण्डं प्रयुज्यते ॥
क्षीराभावे रसो मौद्गो मासुरो वा प्रदीयते ॥ (नि. र.)

ದ್ರವ್ಯ	ಪ್ರತಿನಿಧಿ ದ್ರವ್ಯ
ಭಲ್ಲಾತಕ (ರೋಗಿಶರೀರಕ್ಕೆ ಸಹನವಾಗದಿದ್ದರೆ)	ರಕ್ತಚಂದನ
ಭಲ್ಲಾತಕ	ಚಿತ್ರಕ
ಇಕ್ಷು	ನಲತೃಣ
ಸುವರ್ಣ	ಸುವರ್ಣಮಾಕ್ಷಿಕ
ರಜತ (ರೌಪ್ಯ)	ರೌಪ್ಯಮಾಕ್ಷಿಕ
ಮಾಕ್ಷಿಕ	ಸುವರ್ಣಗೈರಿಕ
ಸುವರ್ಣ ಭಸ್ಮ, ರೌಪ್ಯ ಭಸ್ಮ	ಲೋಹ ಭಸ್ಮ
ಕಾಂತಲೋಹ	ತೀಕ್ಷ್ಣಲೋಹ
ಮುಕ್ತಾ (ಮುತ್ತು)	ಮುಕ್ತಾಶುಕ್ತಿ
ಮಧು (ಜೇನುತುಪ್ಪ)	ಹಳೆಬೆಲ್ಲ (ಪುರಾಣಗುಡ)
ಕಾಕವಿ (ಮತ್ಸ್ಯಂಡ)	ಸಿತಶರ್ಕರಾ
ಕ್ಷೀರ	ಮುದ್ಗರಸ (ಹೆಸರುಕಟ್ಟು), ಮಸೂರರಸ (ಚನ್ನಂಗಿಕಟ್ಟು)
ಸಿತಶರ್ಕರಾ	ಖಂಡಶರ್ಕರಾ

ಪ್ರಕರಣ ೮

ಸಂಜ್ಞಾ ಪರಿಭಾಷಾ ವಿಜ್ಞಾನ

ಬೃಹತ್ ಪಂಚಮೂಲ:—

बिल्वाग्निमंथ टिण्टुक पाटलाः काश्मर्यश्चेति महत् ।
सतिक्तं कफवातघ्नं पाके लघ्वग्निदीपनम् ॥
मधुरानुरसंचैव पंचमूलं महत् स्मृतम् ॥ (सु. सू. अ. ३८)
श्रीफलः सर्वतोभद्रा पाटला गणिकारिका ।
श्योनाकः पञ्चभिश्चैतैः पञ्चमूलं महन् मतम् ॥ (भा.)

पञ्चमूलं महत्तिक्तं कषायं कफवातनुत् ।
मधुरं श्वासकासघ्नमुष्णं लघ्वग्निदीपनम् (भा.)

ಬಿಲ್ವ, ಅಗ್ನಿಮಂಥ, ಟೊಂಟುಕ, ಪಾಟಲಾ, ಕಾಶ್ಮರ್ಯ ಇವುಗಳ ಮೂಲಗಳನು ಕೂಡಿ ತೆಗೆದುಕೊಂಡರೆ ಅವಕ್ಕೆ 'ಬೃಹತ್ಪಂಚಮೂಲ' ಅನ್ನುವರು.

ರಸ-ತಿಕ್ತಮಧುರ, ವೀರ್ಯ-ಉಷ್ಣ, ವಿಪಾಕ-ಕಟು, ದೋಷಘ್ನತೆ-ಕಫವಾತ.

ಗುಣಕರ್ಮ:– ಲಘು, ಅಗ್ನಿದೀಪಕ, ಶ್ವಾಸ, ಕಾಸನಾಶಕ.

ಲಘುಪಂಚಮೂಲ:—

शालपर्णी पृश्निपर्णी वार्ताकी कंटकारिका ।
गोक्षुरः पंञ्चभिश्चैतैः कनिष्ठं पञ्चमूलकम् ।
पञ्चमूलं लघु स्वादु बल्यं पित्तानिलापहम् ।
नात्युष्णं बृंहणं ग्राहि ज्वरश्वासाश्मरी प्रणुत् ॥ (भा.)
त्रिकंटक बृहती द्वय पृथक् पर्ण्यो विदारिगंधा चेति कनीयः ।
कषायतिक्त मधुरं कनीयः पञ्चमूलकम् ।
वातघ्नं पित्तशमनं बृंहणं बलवर्धनम् ॥ (सु. सू. अ. ३८)

ಶಾಲಪರ್ಣಿ, ಪೃಶ್ನಿಪರ್ಣಿ, ವಾರ್ತಾಕಿ, ಕಂಟಕಾರಿ, ಗೋಕ್ಷುರ ಇವುಗಳ ಮೂಲಗಳನ್ನು ಕೂಡಿ ತೆಗೆದುಕೊಂಡರೆ ಅವಕ್ಕೆ 'ಲಘುಪಂಚಮೂಲ' ಅನ್ನುವರು.

ರಸ-ಸ್ವಾದು, ಕಷಾಯ, ತಿಕ್ತ. ವೀರ್ಯ-ಉಷ್ಣ. ವಿಪಾಕ-ಕಟು. ದೋಷಘ್ನತೆ-ವಾತಪಿತ್ತ.

ಗುಣಕರ್ಮ:– ಲಘು, ಗ್ರಾಹಿ, ಬಲ್ಯ, ಬೃಂಹಣ, ಜ್ವರ, ಶ್ವಾಸ, ಅಶ್ಮರಿನಾಶಕ

ದಶಮೂಲ:—

उभाभ्यां पंचमूलाभ्यां दशमूलमुदाहृतम् ।
दशमूलं त्रिदोषघ्नं श्वास कास शिरोरुजः ॥
तंद्रा शोथ ज्वरानाह पार्श्वपीडाऽरुचि हरेत् । (भा.)
गणः श्वासहरो ह्येष कफपित्तानिलापहः ।
आमस्य पाचनश्चैव सर्वज्वर विनाशनः ॥ (सु. सू. ३५)

ಬೃಹತ್ಪಂಚಮೂಲ, ಲಘುಪಂಚಮೂಲ ಎರಡರಲ್ಲಿಯ ಮೂಲಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ದಶಮೂಲ' ಅನ್ನುವರು.

ರಸ-ಸ್ವಾದು, ತಿಕ್ತ, ಕಷಾಯ, ಕಟು. ವೀರ್ಯ-ಉಷ್ಣ. ವಿಪಾಕ-ಕಟು, ದೋಷಘ್ನತಾ-ತ್ರಿದೋಷ.

ಗುಣಕರ್ಮ:– ಬಲ್ಯ: ಆಮಪಾಚಕ, ಶ್ವಾಸ, ಕಾಸ, ಶಿರಃಶೂಲ, ತಂದ್ರಾ ಶೋಥ, ಜ್ವರ, ಆನಾಹ, ಪಾರ್ಶ್ವಶೂಲ ಅರುಚಿನಾಶಕ ಇರುವದು.

ಕಂಟಕ ಪಂಚಮೂಲ:–

करमर्द त्रिकंटक सैरीयक शतावरी गृध्रनख्य इति कंटक संज्ञः।
(सु.)

ಕರಮರ್ದ, ಗೋಕ್ಷುರಕ, ಸೈರೀಯಕ, ಶತಾವರಿ, ಹಿಂಸ್ರಾ ಇವುಗಳ ಕಂಟಕಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ಕಂಟಕಪಂಚಮೂಲ' ಅನ್ನುವರು.

ವಲ್ಲೀಪಂಚಮೂಲ:–

विदारी सारिवा रजनी गुडूच्योऽजश्रृंगी चेति वल्ली संज्ञः।

ವಿದಾರಿ, ಸಾರಿವಾ, ಹರಿದ್ರಾ, ಗುಡೂಚಿ, ಮೇಷಶೃಂಗಿ ಈ ದ್ರವ್ಯಗಳ ವಲ್ಲಿಯನ್ನು ತೆಗೆದುಕೊಂಡರೆ ಅದಕ್ಕೆ 'ವಲ್ಲೀಪಂಚಮೂಲ' ಅನ್ನುವರು.

ಗುಣಕರ್ಮ:– ಇವೆರಡರ ಗುಣಧರ್ಮಗಳು ಒಂದೇ ಇವೆ.

रक्तपित्तहरौ ह्येतौ शोफत्रय विनाशनौ ।
सर्वमेहहरौ चैव शुक्रदोष विनाशनौ । (सु. सू.)

ಕಂಟಕ ಪಂಚಮೂಲ ಮತ್ತು ವಲ್ಲೀ ಪಂಚಮೂಲಗಳ ಗುಣಕರ್ಮ:–

ರಸಃ–ಕಟು, ತಿಕ್ತ. ವೀರ್ಯಃ–ಉಷ್ಣ. ವಿಪಾಕ:– ಕಟು. ದೋಷಘ್ನತಾ– ತ್ರಿದೋಷ.

ಉಪಯೋಗಃ– ರಕ್ತಪಿತ್ತಹರ, ಶೋಥಹರ, ಪ್ರಮೇಹಘ್ನ ಹಾಗೂ ಶುಕ್ರ ದೋಷನಾಶಕ ಇರುತ್ತವೆ.

ತೃಣ ಪಂಚಮೂಲಃ–

कुश काश नल दर्भ काण्डेक्षुका इति तृण संज्ञकः । (सु.)
मूत्रदोष विकारं च रक्तपित्तं तथैव च ।
अन्त्यः प्रयुक्तः क्षीरेण शीघ्रमेव विनाशयेत् ॥

ಕುಶ, ಕಾಶ, ನಲ, ದರ್ಭ, ಕಾಂಡೇಕ್ಷು ಇವುಗಳ ಮೂಲಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ತೃಣ ಪಂಚಮೂಲ' ಅನ್ನುವರು.

ಗುಣಕರ್ಮಃ– ತ್ರಿದೋಷಶಾಮಕ, ಮೂತ್ರಜನನ, ಮೂತ್ರಕೃಚ್ಛ್ರಘ್ನ ಹಾಗೂ ರಕ್ತಪಿತ್ತಶಾಮಕ ಇರುತ್ತದೆ.

ಮಧ್ಯಮ ಪಂಚಮೂಲಃ—

बलापुनर्नवैरंड शूर्पपर्णी द्वयेन तु ।
मध्यमं कफवातघ्नं नाति पित्तकरं स्मृतम् । (अ. हृ. सू. ६)

ಬಲಾ, ಪುನರ್ನವಾ, ಏರಂಡ, ಮುದ್ಗಪರ್ಣಿ, ಮಾಷಪರ್ಣಿ ಇವುಗಳ ಮೂಲಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ಮಧ್ಯಮ ಪಂಚಮೂಲ' ಎಂದು ಅನ್ನುವರು.

ಮಧ್ಯಮ ಪಂಚಮೂಲವು ಕಫವಾತ ದೋಷನಾಶಕವಿದ್ದು ಕಿಂಚಿದ್ ಉಷ್ಣ ಹಾಗೂ ಸರ ಗುಣಗಳುಳ್ಳದ್ದು ಇರುತ್ತದೆ. ಮತ್ತು ಅತಿ ಹೆಚ್ಚು ಪಿತ್ತಕಾರಕ ಇರುವದಿಲ್ಲ.

ಜೀವನ ಪಂಚಮೂಲಃ—

अभीरु वीरा जीवंती जीवकर्षभकैः स्मृतम् ।
जीवनाख्यं तु चक्षुष्यं वृष्यं पित्तानिलापहम् । (अ. हृ. सू. ६)

ಅಭೀರು, ವೀರಾ, ಜೀವಂತಿ, ಜೀವಕ ಹಾಗೂ ಋಷಭಕ ಇವುಗಳ ಮೂಲಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ಜೀವನ ಪಂಚಮೂಲ' ಎಂದು ಅನ್ನುವರು.

ಜೀವನ ಪಂಚಮೂಲವು ವಾತ, ಪಿತ್ತಶಾಮಕವಿದ್ದು; ಜೀವನೀಯ, ವೃಷ್ಯ, ಚಕ್ಷುಷ್ಯ ಇರುವದು.

ಪಂಚ ವಲ್ಕಲಃ—

न्यग्रोधोदुंबराश्वत्थ, पारीष प्लक्ष पादपाः ।
पञ्च ते क्षीरिणो वृक्षास्तेषां त्वक् पञ्चवल्कलम् ॥ (भा.)
क्षीरि वृक्षा हिमा वर्ण्या योनिरोग व्रणापहाः ।
रूक्षाः कषाया मेदोघ्ना विसर्पामय नाशनाः ॥
शोथ पित्त कफास्रघ्नाः स्तन्या भग्नास्थियोजकाः । (भा.)

ನ್ಯಗ್ರೋಧ, ಉದುಂಬರ, ಅಶ್ವತ್ಥ, ಪಾರೀಷ, ಪ್ಲಕ್ಷ ಈ ಕ್ಷೀರೀವೃಕ್ಷಗಳ ತೊಗಟೆಯನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ಪಂಚ ವಲ್ಕಲ' ಎಂದು ಅನ್ನುವರು.

ಪಂಚವಲ್ಕಲವು ತಿಕ್ತ, ಕಷಾಯ ರಸವುಳ್ಳದ್ದು, ಶೀತವೀರ್ಯದ್ದು ಇರುವದು. ಹಾಗೂ ಕಫ, ಪಿತ್ತ ದೋಷನಾಶಕವಿದ್ದು ವರ್ಣ್ಯ, ರೂಕ್ಷ, ಮೇದೋಘ್ನ ಯೋನಿರೋಗನಾಶಕ, ಶೋಥ, ರಕ್ತರೋಗನಾಶಕ, ಅಸ್ಥಿಸಂಧಾನಕರ ಹಾಗೂ ಸ್ತನ್ಯದೋಷ ನಾಶಕವಿರುವದು.

ತ್ರಿವಲ್ಕಲ:—

पूतीकः कृष्णगंधा च तिल्वकश्च तथा तरुः ।
विरेचने प्रयोक्तव्यः पूतिकः तिल्वकस्तथा ॥
कृष्णगंधा परीसर्पे शोथेष्वर्शःसु चोच्यते । (च. सू. अ. १)

ಪೂತಿಕಾ, ತಿಲ್ವಕ, ಕೃಷ್ಣಗಂಧಾ ಈ ವೃಕ್ಷಗಳ ತೊಗಟೆಯನ್ನು ಕೂಡಿಸಿ ತೆಗೆದುಕೊಂಡರೆ ಅವಕ್ಕೆ 'ತ್ರಿವಲ್ಕಲ' ಎಂದು ಅನ್ನುವರು.

ಇವರಲ್ಲಿಯ ಪೂತಿಕ ಹಾಗೂ ತಿಲ್ವಕ ಇವು ವಿರೇಚಕವಿರುವವು. ಕೃಷ್ಣಗಂಧಾ ಇದು ಪರೀಸರ್ಪ, ಶೋಥ, ಅರ್ಶಗಳಲ್ಲಿ ಉಪಯೋಗವಾಗುವದು.

ತ್ರಿಫಳಾ:—

हरीतक्यामलक बिभीतकानि त्रिफला । (सु. सू. ३८)
पथ्या बिभीतधात्रीणां फलैः स्यात्त्रिफला समैः ।
फलत्रिकं च त्रिफला सा वरा च प्रकीर्तिता ॥ (भा.)
त्रिफला कफपित्तघ्नी मेह कुष्ठहरा सरा ।
चक्षुष्या दीपनी रूच्या विषमज्वर नाशिनी ।

ಹರೀತಕಿ, ಬಿಭೀತಕಿ, ಆಮಲಕಿ ಈ ಮೂರು ಫಲಗಳನ್ನು ಕೂಡಿಸಿ ತೆಗೆದುಕೊಂಡರೆ 'ತ್ರಿಫಲಾ' 'ಫಲತ್ರಿಕ' 'ವರಾ' ಎಂದು ಅನ್ನುವರು.

ತ್ರಿಫಳಾದಲ್ಲಿ ಲವಣ ರಸವೊಂದನ್ನುಳಿದು ಉಳಿದ ಪಂಚರಸಗಳಿರುತ್ತವೆ. ಉಷ್ಣ ವೀರ್ಯದ್ದು ಇದ್ದು; ವಿಪಾಕದಿಂದ ಮಧುರ ಇರುವದು.

ತ್ರಿಫಳಾ ತ್ರಿದೋಷಶಾಮಕವಿದ್ದು, ಅಗ್ನಿದೀಪಕ, ಸರ, ಮಲಾನುಲೋಮಕ, ವಾತಾನುಲೋಮಕ, ಪ್ರಮೇಹ, ರಕ್ತವಿಕಾರ, ಕುಷ್ಠ, ಅರುಚಿ, ವಿಷಮಜ್ವರ ನಾಶಕವಿದ್ದು ಚಕ್ಷುಷ್ಯ ಇರುವದು.

ಮಧುರ ತ್ರಿಫಳಾ:—

द्राक्षा काश्मर्य खर्जूरी फलानि मिलितानि तु ।
मधुर त्रिफला ज्ञेया मधुरादि फलत्रयम् । (रा.)

ದ್ರಾಕ್ಷಿ, ಕಾಶ್ಮರ್ಯ, ಖರ್ಜೂರ ಈ ಮೂರು ಫಲಗಳನ್ನು ಕೂಡಿಸಿ ತೆಗೆದುಕೊಂಡರೆ ಅವಕ್ಕೆ 'ಮಧುರ ತ್ರಿಫಳಾ' ಅನ್ನುವರು.

ಮಧುರ ತ್ರಿಫಳಾವು ಮಧುರ ರಸದ್ದು ಇದ್ದು ಶೀತವೀರ್ಯದ್ದಿರುವದು. ಹಾಗೂ ವಿಪಾಕದಿಂದ ಮಧುರವಿರುವದು.

ಇದು ಬಲ್ಯ, ಪಿತ್ತಶಾಮಕ, ತೃಷ್ಣಾ ಹರವಿರುವದು.

ಸುಗಂಧ ತ್ರಿಫಳಾ:—

जातीफलं पूगफलं लवंग कलिका फलम् ।
सुगंधि त्रिफला ज्ञेया सुरभित्रिफला च सा ॥(रा.)

ಜಾತೀಫಲ, ಲವಂಗ ಹಾಗೂ ಪೂಗಫಲ ಈ ಮೂರು ಫಲಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ಸುಗಂಧಿ ತ್ರಿಫಳಾ' ಎಂದು ಎನ್ನುವರು.

ಸುಗಂಧಿ ತ್ರಿಫಳಾವು ರುಚಿಕರ, ವರ್ಣ್ಯ, ಮುಖ ದುರ್ಗಂಧನಾಶಕ ಇರುವದು.

ಸ್ವಲ್ಪ ತ್ರಿಫಳಾ:—

स्वल्पा काश्मर्य खर्जूर परूषक फलैः भवेत् ।

ಕಾಶ್ಮರ್ಯ, ಖರ್ಜೂರ, ಪರೂಷಕ ಈ ಮೂರು ಫಲಗಳನ್ನು ಕೂಡಿಸಿ ತೆಗೆದು ಕೊಂಡರೆ ಅದಕ್ಕೆ 'ಸ್ವಲ್ಪ ತ್ರಿಫಳಾ' ಎಂದು ಅನ್ನುವರು.

ಸ್ವಲ್ಪ ತ್ರಿಫಳಾವು ಮಧುರರಸ, ಶೀತವೀರ್ಯದ್ದಿದ್ದು; ವಿಪಾಕದಿಂದ ಮಧುರ ವಿರುವದು. ಹಾಗೂ ದಾಹ, ತೃಷ್ಣಾ ಪ್ರಶಾಮಕ, ಪಿತ್ತಶಾಮಕವಿರುವದು.

ಮಧುರತ್ರಯಃ—

सिता माक्षिक सर्पीषि मिलितानि यदा तदा ।
मधुर त्रयमाख्यातं त्रिमधु स्यान्मधुरत्रयम् ॥ (रा.)

ಸಿತಾ, ಮಾಕ್ಷಿಕ (ಜೇನುತುಪ್ಪ), ಸರ್ಪಿ ಈ ಮೂರು ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ಮಧುರ ತ್ರಯ' ಎಂದು ಅನ್ನುವರು.

ಇದು ಅಗ್ನಿದೀಪಕ, ವಿಷದೋಷನಾಶಕವಿರುವದು.

ಸಮತ್ರಿತಯು:—

हरीतकी नागरं च गुडश्चेति त्रयं समम् ।

ಹರೀತಕಿ, ಶುಂಠಿ, ಗುಡ ಇವುಗಳನ್ನು ಸಮಪ್ರಮಾಣದಲ್ಲಿ ಕೂಡಿಸಿ ತೆಗೆದು ಕೊಂಡರೆ ಅದಕ್ಕೆ 'ಸಮತ್ರಿತಯು' ಎಂದು ಅನ್ನುವರು.

ತ್ರಿಕರ್ಷಿಕಃ—

नागरातिविषा मुस्ता त्रयमेतत् त्रिकर्षिकम् ।

ಶುಂಠಿ, ಅತಿವಿಷಾ, ಮುಸ್ತಾ ಇವನ್ನು ಒಂದೊಂದು ಕರ್ಷ ಪ್ರಮಾಣದಲ್ಲಿ ಕೂಡಿಸಿ ತೆಗೆನುಕೊಂಡರೆ ಅದಕ್ಕೆ 'ತ್ರಿಕರ್ಷಿಕ' ಎಂದು ಅನ್ನುವರು.

ತ್ರಿಮದಃ—

विडंग मुस्ता चित्रैश्च त्रिमदः समुदाहृतः । (प.)

ವಾಯವಿಡಂಗ, ಚಿತ್ರಕ ಮತ್ತು ಮುಸ್ತಾ ಇವನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ತ್ರಿಮದ' ಎಂದು ಅನ್ನುವರು.

ಚಾತುರ್ಭದ್ರಃ—

नागरातिविषा मुस्ता त्रयमेतत् त्रिकर्षिकम् ।
गुडूच्या मिलितं तच्च चातुर्भद्रकमुच्यते ॥

ತ್ರಿಕರ್ಷಿಕದಲ್ಲಿ ಗುಡೂಚಿಯನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ಚಾತುರ್ಭದ್ರ' ಎಂದು ಅನ್ನುವರು.

ಚತುರ್ಬೀಜ:—

मेथिका चंद्रशूरश्च कालाजाजि यवानिका ।
एतच्चतुष्टयं युक्तं चतुर्बीजमिति स्मृतम् ॥
तच्चूर्णं भक्षितं नित्यं निहंति पवनामयम् ।
अजीर्णं शूलमाध्मानं पार्श्वशूलं कटिव्यथाम् ॥ (भा.)

ಮೇಥಿಕಾ, ಚಂದ್ರಶೂರ, ಕಾಲಾಜಾಜಿ, ಯವಾನಿಕಾ (ಅಜವಾನ) ಈ ಬೀಜಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ಚತುರ್ಬೀಜ' ಎಂದು ಅನ್ನುವರು.

ಚತುರ್ಬೀಜವು ಉಷ್ಣವೀರ್ಯ, ಕಟುರಸದ್ದಿದ್ದು ವಾತ, ಕಫಘ್ನ, ಅಜೀರ್ಣ, ಶೂಲ, ಆಧ್ಮಾನ, ಪಾರ್ಶ್ವಶೂಲ, ಕಟಿಶೂಲನಾಶಕವಿರುವದು.

ತ್ರಿಕಟುಃ—

विश्वोपकुल्या मरीचं त्रयंत्रिकटु कथ्यते ।
कटुत्रिकं तु त्रिकटु त्र्यूषणं व्योष मुच्यते ॥ (भा.)
त्र्यूषणं दीपनं हंति श्वास कास त्वगामयान् ।
गुल्म मेह कफ स्थौल्य मेदः श्लीपद पीनसान् ॥ (भा.)

ಶುಂಠಿ, ಪಿಪ್ಪಲಿ, ಮರೀಚ ಈ ಮೂರು ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ತ್ರಿಕಟು', 'ಕಟುತ್ರಿಕ', 'ತ್ರ್ಯೂಷಣ' ಹಾಗೂ 'ವ್ಯೋಷ' ಎಂದು ಅನ್ನುವರು.

ತ್ರಿಕಟು ಇದು ಕಟು ರಸದ್ದಿದ್ದು ಉಷ್ಣವೀರ್ಯವಿರುವದು. ಹಾಗೂ ವಿಪಾಕವು ಕಟು ಆಗುವದು.

ವಾತ ಕಫದೋಷನಾಶಕ, ಸ್ವೇದಜನಕ, ಅಗ್ನಿದೀಪಕ, ಶ್ವಾಸ, ಕಾಸ, ಗುಲ್ಮ, ಪ್ರಮೇಹ, ಸ್ಥೌಲ್ಯ, ಮೇದೋರೋಗನಾಶಕ, ಶ್ಲೀಪದ ಹಾಗೂ ಪೀನಸ ರೋಗನಾಶಕ ಇರುತ್ತದೆ.

ಚತುರೂಷಣ:—

त्र्यूषणं सकणामूलं कथितं चतुरूषणम् ।
व्योषस्यैव गुणाः प्रोक्ता अधिकाश्चतुरूषणे ।। (भा.)

ಶುಂಠಿ, ಪಿಪ್ಪಲಿ, ಮರೀಚ ಹಾಗೂ ಪಿಪ್ಪಲಿಮೂಲ ಇವುಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಚತುರೂಷಣ" ಎಂದು ಅನ್ನುವರು.

ಚತುರೂಷಣವಾದರೂ ತ್ರಿಕಟುವಿನ ಗುಣಕರ್ಮಗಳಂತೆಯೇ ಇದ್ದರೂ ಅಧಿಕ ಪ್ರಮಾಣದಲ್ಲಿ ಇರುತ್ತದೆ.

ಪಂಚಕೋಲ:—

पिप्पली पिप्पलीमूल चव्य चित्रकनागरैः ।
पंचभिः कोलमात्रं यत् पंचकोलं तदुच्यते ।। (भा.)
पंचकोल रसे पाके कटुकं रुचिकृन्मतम् ।
तीक्ष्णोष्णं पाचनं श्रेष्ठं दीपनं कफवातनुत् ।
गुल्म प्लीहोदरानाह शूलघ्नं पित्तकोपनम् ।

ಪಿಪ್ಪಲೀ, ಪಿಪ್ಪಲೀಮೂಲ, ಚವ್ಯ, ಚಿತ್ರಕ ಹಾಗೂ ಶುಂಠಿ ಈ ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಪಂಚಕೋಲ" ಎಂದು ಅನ್ನುವರು.

ಪಂಚಕೋಲವು ವಾತಕಫ ದೋಷನಾಶಕವಿದ್ದು ಪಿತ್ತವನ್ನು ಬೆಳೆಸುವಂಥದು ಇರುತ್ತದೆ.

ಇದು ಕಟು ರಸ, ಉಷ್ಣವೀರ್ಯದ್ದಿದ್ದು ವಿಪಾಕದಿಂದ ಕಟು ಇರುತ್ತದೆ. ಪಂಚಕೋಲವು ತೀಕ್ಷ್ಣ, ದೀಪನ, ಪಾಚನ, ರುಚಿಕರ ಇದ್ದು ಗುಲ್ಮ, ಪ್ಲೀಹ, ಉದರ, ಆನಾಹ ಹಾಗೂ ಶೂಲಘ್ನ ಇರುತ್ತದೆ.

ಷಡೂಷಣ:—

पंचकोलं समरिचं षडूषणमुदाहृतम् ।
पंचकोलगुणं तत्तु रूक्षमुष्णं विषापहम् ।।

ಪಂಚಕೋಲದಲ್ಲಿ ಮರೀಚವನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಷಡೂಷಣ" ಎಂದು ಅನ್ನುವರು.

ಷಡೂಷಣವು ಕಟುರಸ, ಉಷ್ಣವೀರ್ಯದ್ದಿದ್ದು ವಿಪಾಕದಿಂದ ಕಟು ಇರುವದು. ಪಂಚಕೋಲದಂತೆ ಇದರ ಗುಣಕರ್ಮಗಳಾದರೂ ಇರುತ್ತವೆ. ಇದು ರೂಕ್ಷ ಹಾಗೂ ಉಷ್ಣವಿದ್ದು ವಿಷನಾಶಕವಿರುತ್ತದೆ.

ತ್ರಿಜಾತಕ:—

त्वगेलापत्रकैस्तुल्यैस्त्रि सुगंधि त्रिजातकम् ।

ದಾಲಚಿನ್ನಿ, ಏಲಾ, ತಮಾಲಪತ್ರ ಈ ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ತ್ರಿಸುಗಂಧಿ", "ತ್ರಿಜಾತಕ" ಎಂದು ಅನ್ನುವರು.

ತ್ರಿಜಾತಕವು ವಾತಕಫ ದೋಷನಾಶಕವಿದ್ದು ವಿಷನಾಶಕ, ವೀರ್ಯ ವೃದ್ಧಿಕರ ವಿರುತ್ತದೆ.

ಚತುರ್ಜಾತಕ:—

नागकेशर संयुक्तं चतुर्जातकमुच्यते ।
तद्द्वयं रोचनं रूक्षं तीक्ष्णोष्णं मुख गंधहृत् ।
लघु पित्ताग्नि कृद्वर्ण्यं कफवात विषापहम् । (भा.)

ತ್ರಿಜಾತಕದಲ್ಲಿ ನಾಗಕೇಶರವನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಚತುರ್ಜಾತಕ" ಎಂದು ಅನ್ನುವರು.

ಚತುರ್ಜಾತಕವು ಕಟುರಸ, ಉಷ್ಣವೀರ್ಯದ್ದಿದ್ದು ವಿಪಾಕದಿಂದ ಕಟು ಇರುವದು.

ಇದು ವಾತ, ಕಫದೋಷನಾಶಕವಿದ್ದು ರೂಕ್ಷ, ರುಚ್ಯ, ಅಗ್ನಿದೀಪಕ, ತೀಕ್ಷ್ಣ, ಲಘು, ವರ್ಣ್ಯ, ವೃಷ್ಯ ಹಾಗೂ ಬಲ್ಯವಿರುವದು. ಹಾಗೂ ವಿಷದೋಷನಾಶಕವಿರುವದು.

ಕಟು ಚತುರ್ಜಾತಕ:—

एलात्वक् पत्रकैस्तुल्यैर्मरिचेन समन्वितैः ।
कटुपूर्वमिदं चान्यच्चातुर्जातक मुच्यते । (रा.)

ಏಲಾ, ದಾಲಚಿನ್ನಿ, ತಮಾಲಪತ್ರ ಹಾಗೂ ಮರೀಚ ಇವನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಕಟುಚತುರ್ಜಾತಕ" ಎಂದು ಅನ್ನುವರು.

ಕ್ಷಾರದ್ವಯಃ—

स्वर्जिका यवशूकस्य क्षारद्वयमुदाहृतम् । (भा.)

ಸರ್ಜಿಕ್ಷಾರ ಹಾಗೂ ಯವಕ್ಷಾರವನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಕ್ಷಾರದ್ವಯ" ಅನ್ನುವರು.

ಕ್ಷಾರತ್ರಯಃ—

टंकणेन युतं तत्तु क्षारत्रयमुदीरितम् । (रा.)

ಸರ್ಜಿಕ್ಷಾರ, ಯವಕ್ಷಾರ ಹಾಗೂ ಟಂಕಣವನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಕ್ಷಾರತ್ರಯ" ಎಂದು ಅನ್ನುವರು.

ಕ್ಷಾರಪಂಚಕಃ—

यवमुष्कक सर्जानां पलाश तिलयोस्तथा ।
क्षारैस्तु पंचभिः प्रोक्तः पञ्चक्षाराभिधो गणः ॥ (भा)

ಯವಕ್ಷಾರ, ಮುಷ್ಕಕ, ಸರ್ಜಿಕ್ಷಾರ ಹಾಗೂ ತಿಲಕ್ಷಾರಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಕ್ಷಾರಪಂಚಕ" ಎಂದು ಅನ್ನುವರು.

ಕ್ಷಾರಷಟ್ಕಃ—

धवापामार्ग कुटज लांगली तिलमुष्कजैः ।
क्षारैरेतैस्तु मिलितैः क्षारषट्कमुदाहृतम् ।

ಧವ, ಅಪಾಮಾರ್ಗ, ಕುಟಜ, ಲಾಂಗಲೀ, ತಿಲ, ಮುಷ್ಕಕ ಈ ಕ್ಷಾರಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಕ್ಷಾರಷಟ್ಕ" ಎಂದು ಅನ್ನುವರು.

ಕ್ಷಾರಾಷ್ಟಕಃ—

पलाश वज्रि शिखरि चिंचार्क तिलनालजाः ।
यवजः स्वर्जिका चेति क्षाराष्टकमुदाहृतम् ॥ (भा)

ಪಲಾಶ, ವಜ್ರಿ, ಶಿಖರಿ (ಅಪಾಮಾರ್ಗ), ಚಿಂಚಾ, ಅರ್ಕ, ತಿಲನಾಲ, ಸರ್ಜಿಕ್ಷಾರ ಹಾಗೂ ಯವಕ್ಷಾರ ಈ ಕ್ಷಾರಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಕ್ಷಾರಾಷ್ಟಕ" ಎಂದು ಅನ್ನುವರು.

ಕ್ಷಾರದಶಕಃ—

शिग्रुमूलक पलाश चुक्रिका चित्रकाद्रक सनिंब संभवैः ।
इक्षुशैखरिक मोचिकोद्भवैः क्षारपूर्वदशकं प्रकीर्तितम् ॥ (रा.)

ಶಿಗ್ರು, ಮೂಲಕ, ಪಲಾಶ, ಚುಕ್ರಿಕಾ, ಚಿತ್ರಕ, ಆರ್ದ್ರಕ, ನಿಂಬ, ಇಕ್ಷು, ಅಪಾಮಾರ್ಗ ಹಾಗೂ ಕದಲೀ ಇವುಗಳ ಕ್ಷಾರಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಕ್ಷಾರದಶಕ" ಎಂದು ಅನ್ನುವರು.

ಎಲ್ಲ ಕ್ಷಾರಗಳ ಗುಣಕರ್ಮ:—

ರಸ-ಲವಣ, ಕಟು. ವೀರ್ಯ-ಉಷ್ಣ. ವಿಪಾಕ-ಕಟು. ದೋಷಘ್ನತಾ-ವಾತಕಫ,

ಗುಣಕರ್ಮ:—

ಕ್ಷಾರವು ಅಗ್ನಿಸಮವಿರುವದು. ತೀಕ್ಷ್ಣ, ಛೇದನಿ, ಭೇದಿನಿ, ದೀಪನಿ, ಪಾಚನಿ ಗುಲ್ಮ ಹಾಗೂ ಶೂಲನಾಶಕ ಇರುವದು.

ಪಂಚಶೂರಣ:—

अत्यम्ल पर्णी कांडीर मालाकंद द्विशूरणैः ।
प्रोक्तो भवति योगोऽयं पञ्चशूरण संज्ञकः ।। (रा. नि.)

ಅತ್ಯಮ್ಲಪರ್ಣಿ, ಕಾಂಡೀರ, ಮಾಲಕಂದ, ಗ್ರಾಮ್ಯ ಹಾಗೂ ವನ್ಯಶೂರಣ ಈ ಕಂದಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಪಂಚಶೂರಣ" ಎಂದು ಅನ್ನುವರು. ಪಂಚಶೂರಣದ ಉಪಯೋಗವು ಯಕೃತ್ ಹಾಗೂ ಅರ್ಶವಿಕಾರದಲ್ಲಿ ಆಗುವದು.

ಪಂಚತಿಕ್ತ:—

गुडूची निंबमूलत्वक् भिषक् माता निदिग्धिका ।
पटोल पत्रमित्येतत् पञ्चतिक्तं प्रकीर्तितम् ।। (र. त. २)

ಗುಡೂಚಿ, ನಿಂಬಮೂಲತ್ವಕ್, ವಾಸಾ, ಕಂಟಕಾರಿ, ಪಟೋಲ ಈ ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಪಂಚತಿಕ್ತ" ಎಂದು ಅನ್ನುವರು.

ಅಮ್ಲಪಂಚಕ:—

अम्लवेतस जंबीर लुंग नारंग निंबुकैः ।
फलं पंचाम्लकं ख्यातं कीर्तितं चाम्लपंचकम् ।। (र. त. २)

ಅಮ್ಲವೇತಸ, ಜಂಬೀರ, ಮಾತುಲುಂಗ, ನಾರಂಗ, ನಿಂಬುಕ ಈ ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಅಮ್ಲಪಂಚಕ" ಎಂದು ಅನ್ನುವರು.

ಪಂಚಸುಗಂಧಿಕ:—

कर्पूर कंकोल लवंगपुष्प गुवाक जातीफल पंचकेन ।
समांशभागेन च योजितेन मनोहरं पंचसुगंधिकं स्यात् ।। (रा.)

ಕರ್ಪೂರ, ಕಂಕೋಲ, ಲವಂಗಪುಷ್ಪ, ಗುವಾಕ, ಜಾತೀಫಲ ಈ ಸುಗಂಧಿ ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಪಂಚಸುಗಂಧಿಕ" ಎಂದು ಅನ್ನುವರು.

ಪಂಚಸಾರ:—

शृतम्पयः शर्करा च पिप्पल्यो मधु सर्पिषी ।
पंचसारमिदं पेयं मथितं विषमज्वरे ।।
क्षतक्षीणे क्षये श्वासे हृद्रोगे चैतदिष्यते । (सु. उ. ३९)

ಕುದಿಸಿದ ಹಾಲು, ಶರ್ಕರಾ, ಪಿಪ್ಪಲೀ, ಮಧು ಹಾಗೂ ಘೃತ ಈ ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಪಂಚಸಾರ" ಎಂದು ಅನ್ನುವರು.

ಉಪಯೋಗಃ-

ಇದು ವಿಷಮಜ್ವರ, ಕ್ಷತಕ್ಷೀಣ, ಕ್ಷಯ, ಶ್ವಾಸ, ಹೃದ್ರೋಗಗಳಲ್ಲಿ ಉಪಯೋಗ ವಾಗುವದು.

ಪಂಚಾಮೃತಃ—

गुडूची गोक्षुरश्चैव मुसली मुंडिका तथा ।
शतावरीति पंचानां योगः पंचामृताभिधः ॥ (रा.)

ಗುಡೂಚಿ, ಗೋಕ್ಷುರ, ಮುಸಲೀ, ಗೋರಖಮುಂಡೀ ಹಾಗೂ ಶತಾವರಿ ಈ ದ್ರವ್ಯಗಳನ್ನು ಕೂಡಿಸಿ ತಗೆದುಕೊಂಡರೆ "ಪಂಚಾಮೃತ" ಎಂದು ಅನ್ನುವರು.

ಪಂಚಗವ್ಯಃ—

गव्यं क्षीरं दधि घृतं गोमूत्रं गोमयं तथा ।
एकत्र योजितं तुल्यं पंचगव्यमिहोच्यते ॥ (र. त.)

ಆಕಳ ಹಾಲು, ಮೊಸರು, ತುಪ್ಪ, ಮೂತ್ರ ಹಾಗೂ ಗೋಮಯ ಇವುಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಪಂಚಗವ್ಯ" ಎಂದು ಅನ್ನುವರು.

ಉಪಯೋಗಃ-

ದೇಹಶೋಧಕ, ಕಫನಾಶಕ, ಅಜೀರ್ಣ, ಅಪಸ್ಮಾರ, ಜ್ವರ ಹಾಗೂ ಭೂತ ಬಾಧಾನಾಶಕ ಇರುತ್ತದೆ.

ಪಂಚಾಮೃತಃ—

गव्यं क्षीरं दधि घृतं माक्षिकं चाथ शर्करा ॥
पंचामृतं समाख्यातं रसकर्म प्रसाधकम् । (र. त.)

ಆಕಳ ಹಾಲು, ಮೊಸರು, ಘೃತ, ಮಧು ಹಾಗೂ ಶರ್ಕರಾ ಇವುಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಪಂಚಾಮೃತ" ಎಂದು ಅನ್ನುವರು.

ಪಿತ್ತಪಂಚಕಃ—

पित्तं पंचविधं मत्स्यगवाश्व नरबर्हिजम् । (रसार्णव)

ಮೀನು, ಆಕಳು, ಕುದುರೆ, ಮನುಷ್ಯ ಹಾಗೂ ನವಿಲು ಇವುಗಳ ಪಿತ್ತವನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಪಿತ್ತಪಂಚಕ" ಅನ್ನುವರು.

ಮೂತ್ರಪಂಚಕಃ—

गवामजानां मेषीणां महिषीणां च मिश्रितम् ।
मूत्रेण गर्दभीनां यत्तत् मूत्रं मूत्रपंचकम् ॥ (रा.)

ಆಕಳು, ಕುರಿ, ಆಡು, ಎಮ್ಮೆ ಹಾಗೂ ಕತ್ತೆ ಇವುಗಳ ಮೂತ್ರವನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಮೂತ್ರಪಂಚಕ" ಎಂದು ಅನ್ನುವರು.

ಮೂತ್ರಾಷ್ಟಕಃ—

मूत्रैर्गोजावि महिषी गजाश्वोष्ट्र खरोद्भवैः ।
मूत्राष्टकमिति प्रोक्तं मूत्रवर्गं स्तथैव च । (प.)

ಆಡು, ಕುರಿ, ಆಕಳು, ಎಮ್ಮೆ, ಆನೆ, ಒಂಟೆ, ಕುದುರೆ ಮತ್ತು ಕತ್ತೆ ಇವುಗಳ ಮೂತ್ರವನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಮೂತ್ರಾಷ್ಟಕ" ಎಂದು ಅನ್ನುವರು.

ಮೂತ್ರದಶಕಃ—

मूत्राणि हस्ति महिषोष्ट्र गवाजकानां मेषाश्वरासभक
मानुष मानुषीणाम् ।
यत्नेन यत्र मिलितानि दशेति तानि शास्त्रेषु
मूत्रदशकाह्वयभाञ्जिभांति ॥ (रा.)
उष्णं तीक्ष्णमथो रूक्षं कटुकं लवणान्वितम् ।
दीपनीयं विषघ्नं च क्रिमिघ्नं चोपदिश्यते ॥ (च. सू. १३)

ಆಡು, ಕುರಿ, ಆಕಳು, ಎಮ್ಮೆ, ಆನೆ, ಒಂಟೆ, ಕುದುರೆ, ಕತ್ತೆ, ಹಾಗೂ ಸ್ತ್ರೀ ಮತ್ತು ಪುರುಷ ಇವುಗಳ ಮೂತ್ರವನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ 'ಮೂತ್ರ ದಶಕ' ಎಂದು ಅನ್ನುವರು.

ಮೂತ್ರವರ್ಗವು ಸಾಮಾನ್ಯವಾಗಿ ಉಷ್ಣ, ತೀಕ್ಷ್ಣ, ರೂಕ್ಷ, ಕಟು ಹಾಗೂ ಲವಣ ರಸಾತ್ಮಕ ಹಾಗೂ ದೀಪನ, ಕ್ರಿಮಿಘ್ನ, ವಿಷಘ್ನ, ಮೂತ್ರಜನನ ಹಾಗೂ ರಕ್ತವರ್ಧಕ ಇರುತ್ತದೆ.

ಕ್ಷೀರಾಷ್ಟಕಃ—

गव्यं माहिषमाजं च कारभं स्त्रैणमाविकम् ।
ऐभमैकशफं चेति क्षीराष्टक मिहोच्यते ॥
प्रायशो मधुरं स्निग्धं शीतं स्तन्यं पयो मतम् ।
प्रीणनं बृंहणं वृष्यं मेध्यं बल्यं मनस्करम् ॥ (च. सू. अ. १)

ಆಕಳು, ಎಮ್ಮೆ, ಕುರಿ, ಆಡು, ಒಂಟೆ, ಕುದುರೆ, ಆನೆ ಹಾಗೂ ಸ್ತ್ರೀ ಇವುಗಳ ಹಾಲನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಕ್ಷೀರಾಷ್ಟಕ" ಎಂದು ಅನ್ನುವರು.

ಉಪಯೋಗ:–

ಬಹುತರವಾಗಿ ಇದು ಮಧುರ, ಸ್ನಿಗ್ಧ, ಶೀತ, ಸ್ತನ್ಯವರ್ಧಕ, ಪ್ರೀಣನ ಮಾಡುವಂಥದು ಬೃಂಹಣ, ವೃಷ್ಯ, ಮೇಧ್ಯ, ಬಲ್ಯವಿರುವದು.

ತ್ರಿಸಮ:–

ಹರೀತಕಿ, ಶುಂಠಿ ಹಾಗೂ ಅಮೃತಾ ಈ ಮೂರು ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ತ್ರಿಸಮ" ಎಂದು ಅನ್ನುವರು.

ಗುಣಕರ್ಮ:–

ರುಚ್ಯ, ನೇತ್ರ್ಯ, ಮಲಶೋಧಕ ಹಾಗೂ ವಾತ, ಪಿತ್ತನಾಶಕವಿರುವದು.

ತ್ರಿಕಂಟಕ:–

ಶುಂಠಿ, ಅಮೃತಾ ಹಾಗೂ ಧನ್ವಯಾಸ ಈ ಮೂರು ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ತ್ರಿಕಂಟಕ" ಎಂದು ಅನ್ನುವರು.

ಗುಣಕರ್ಮ:–

ಪಿತ್ತಜ್ವರ, ನೇತ್ರರೋಗ, ಶಿರೋರೋಗನಾಶಕವಿರುತ್ತದೆ.

ಬಲಾಚತುಷ್ಟಯ: –

ಬಲಾ, ಅತಿಬಲಾ, ನಾಗಬಲಾ ಹಾಗೂ ಮಹಾಬಲಾ ಈ ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಬಲಾಚತುಷ್ಟಯ" ಎಂದು ಅನ್ನುವರು.

ಗುಣಕರ್ಮ:–

ಪಾಚಕ, ಜ್ವರ, ಜೀರ್ಣಜ್ವರ, ಕಂಠರೋಗ, ಶೋಥ, ಅರುಚಿ ಹಾಗೂ ವಾತ ಶಮನ ಮಾಡುತ್ತದೆ.

ಚತು:ಸಮ:–

ಜಾತೀಫಲ, ಲವಂಗ, ಜೀರಕ ಹಾಗೂ ಟಂಕಣ ಈ ದ್ರವ್ಯಗಳನ್ನು ಕೂಡಿಸಿ ತೆಗೆದುಕೊಂಡರೆ ಅವಕ್ಕೆ "ಚತು:ಸಮ" ಎಂದು ಅನ್ನುವರು.

ಗುಣಕರ್ಮ:–

ಚತು:ಸಮವನ್ನು ಶರ್ಕರಾ ಹಾಗೂ ಮಧುವಿನೊಡನೆ ಕೂಡಿಸಿ ತೆಗೆದುಕೊಳ್ಳುವದರಿಂದ ಆಮಾತಿಸಾರ ಹಾಗೂ ಶೂಲ ನಾಶಕವಾಗುತ್ತದೆ.

ಮಿತ್ರಪಂಚಕಃ—

ಮಧು, ಗುಡ, ಘೃತ, ಗುಂಜಾ, ಟಂಕಣ ಈ ದ್ರವ್ಯಗಳನ್ನು ಕೂಡಿಸಿ ತೆಗೆದು ಕೊಂಡರೆ ಅದಕ್ಕೆ "ಮಿತ್ರಪಂಚಕ" ಎಂದು ಅನ್ನುವರು.

ಇದರ ಉಪಯೋಗವು ಭಸ್ಮವನ್ನು ನಿರುತ್ಥ ಮಾಡುವದರಸಲುವಾಗಿ ಆಗುತ್ತದೆ.

ಪಂಚಲವಣ:—

ಸೈಂಧವ, ಪಾದೇಲವಣ, ಬಿಡಲವಣ, ಉದ್ಭಿದಲವಣ ಹಾಗೂ ಸಾಮುದ್ರಲವಣ ಈ ಲವಣಗಳನ್ನು ಕೂಡಿಸಿ ತೆಗೆದುಕೊಂಡರೆ ಅದಕ್ಕೆ "ಪಂಚಲವಣ" ಎಂದು ಅನ್ನುವರು.

ಗುಣಕರ್ಮ:-


ರುಚ್ಯ, ಮಲಾನುಲೋಮಕ, ವಾತಾನುಲೋಮಕ, ದಾಹಜನಕ, ನೇತ್ರಕ್ಕೆ ಅಹಿತಕರ ಇದ್ದು ವಾತಕಫ ಹಾಗೂ ಶೂಲನಾಶಕ ಇರುತ್ತದೆ.

ಪಂಚಾಂಗಲೇಪಃ—

ಪುನರ್ನವಾ, ದಾರುಹರಿದ್ರಾ, ಶುಂಠಿ, ಶಿಗ್ರು ಹಾಗೂ ದೇವದಾರು ಈ ದ್ರವ್ಯ ಗಳನ್ನು ಕೂಡಿಸಿ ಮಾಡಿದ ಲೇಪಕ್ಕೆ "ಪಂಚಾಂಗಲೇಪ" ಎಂದು ಅನ್ನುವರು.

ಗುಣಕರ್ಮಃ-

ಇದು ಶೋಥನಾಶಕ ಇರುತ್ತದೆ.



ಪ್ರಕರಣ ೯

ದ್ರವ್ಯ ಶುದ್ಧಿ ವಿಜ್ಞಾನೀಯ ಅಧ್ಯಾಯ

ವತ್ಸನಾಭ:—

खण्डीकृतो वत्सनाभः पोट्टलीगर्भ संस्थितः ।
अजा दुग्धेन सुस्विन्नो यामतः शुद्धिमाप्नुयात् ॥ (रस तरंगिणि)

ವತ್ಸನಾಭದ ಸಣ್ಣ ಸಣ್ಣ ತುಂಡುಗಳನ್ನು ಮಾಡಿಕೊಂಡು ಇವನ್ನು ಒಂದು ಅರಿವೆಯಲ್ಲಿ ಕಟ್ಟಿ ಪೋಟಲಿಯನ್ನು ತಯಾರ ಮಾಡಿಕೊಳ್ಳಬೇಕು. ದೋಲಾಯಂತ್ರದಲ್ಲಿ ಆಡಿನ ಹಾಲನ್ನು ಹಾಕಿ ಅಗ್ನಿಯಮೇಲೆ ಇಡಬೇಕು. ನಂತರ ದೋಲಾಯಂತ್ರದ ಬಾಯಿಗೆ ಪೋಟಲಿಯನ್ನು ತೂಗುಬಿಡಬೇಕು. ಆಮೇಲೆ ಕ್ರಮವಾಗಿ ಅಗ್ನಿಯನ್ನು ಕೊಡಬೇಕು. ಈ ಪ್ರಕಾರ ಮೂರು ತಾಸುಗಳವರೆಗೆ ಸ್ವೇದನವನ್ನು ಕೊಡುವದರಿಂದ ವತ್ಸನಾಭವು ಶುದ್ಧವಾಗುವದು.

ವಿಷತಿಂದುಕ (ಕುಚಲಾ) ಶುದ್ಧಿ:—

विषतिंदुक बीजानि पोट्टल्यां विन्यसेत् भिषक् ।
स्वेदयेत् गव्य पयसा दोलिका यन्त्रमार्गतः ॥
एवं यामेक मात्रेण शुद्धिमायान्त्यनुत्तमाम् ।
शोधितं तिंदुकं त्वेवं वीतशंकः प्रयोजयेत् ॥ (र. त.)

ವಿಷತಿಂದುಕ ಬೀಜಗಳನ್ನು ತೆಗೆದುಕೊಂಡು ಅರಿವೆಯಲ್ಲಿ ಹಾಕಿ ಪೋಟಲಿಯನ್ನು ಕಟ್ಟಬೇಕು. ದೋಲಾಯಂತ್ರದಲ್ಲಿ ಗೋದುಗ್ಧವನ್ನು ಹಾಕಿ ಅಗ್ನಿಯಮೇಲೆ ಇಡಬೇಕು. ಆಮೇಲೆ ವಿಷತಿಂದುಕ ಪೋಟಲಿಯನ್ನು ದೋಲಾಯಂತ್ರದ ಬಾಯಿಗೆ ಕಟ್ಟಿ ಮೂರು ತಾಸುಗಳವರೆಗೆ ಸ್ವೇದನವನ್ನು ಕೊಡಬೇಕು. ನಂತರ ಪೋಟಲಿಯನ್ನು ಬಿಚ್ಚಿ ವಿಷತಿಂದುಕ ಬೀಜಗಳನ್ನು ಚನ್ನಾಗಿ ನೀರಿನಿಂದ ತೊಳೆದುಕೊಂಡು ಔಷಧೀಕರ್ಮದಲ್ಲಿ ಉಪಯೋಗಿಸಬೇಕು.

ಎರಡನೆಯ ರೀತಿ:—

ಒಂದು ಖಲ್ವೀಯಂತ್ರದಲ್ಲಿ ಗೋಮೂತ್ರವನ್ನು ಹಾಕಿ ಅದರಲ್ಲಿ ಕುಚಲಾ ಬೀಜಗಳನ್ನು ಏಳು ದಿವಸಗಳವರೆಗೆ ನೆನೆಯಿಡಬೇಕು. ದಿನಾಲು ಗೋಮೂತ್ರವನ್ನು ಬದಲಾಯಿಸಬೇಕು. ಏಳುದಿನಗಳನಂತರ ಕುಚಲಾ ಬೀಜಗಳಮೇಲಿನ ತೊಗಟೆಯನ್ನು ತೆಗೆದು, ಒಣಗಿಸಿಕೊಂಡು ತುಪ್ಪದಲ್ಲಿ ಹುರಿಯಬೇಕು. ಅಂದರೆ ಕುಚಲಾ ಶುದ್ಧಿಯಾಗುವದು.

ಅಹಿಫೇನ ಶುದ್ಧಿಃ—

निर्मलं त्वहिफेनं तु श्रृंगवेरस्य वारिणा ।
विभावितं सप्तवारं शुद्धिमायात्यनुत्तमाम् ॥ (र. त.)

ಗೋದುಗ್ಧ ಹಾಗೂ ಜಲದಿಂದ ಶುದ್ಧ ಮಾಡಿದಂಥ ಅಹಿಫೇನವನ್ನು ತೆಗೆದು ಕೊಂಡು ಅದನ್ನು ಖಲ್ವದಲ್ಲಿ ಹಾಕಿ ಆರ್ದ್ರಕರಸದ ಏಳು ಭಾವನೆಗಳನ್ನು ಕೊಡು ವದರಿಂದ ಅಹಿಫೇನವು ಶುದ್ಧಿಯಾಗುವದು.

ಜಯಪಾಲ ಶುದ್ಧಿಃ—

जयपालं त्वग्रसंज्ञा रहितं पोट्टलीगतम् ।
दोलायन्त्रे तु यामैकं स्वेदयेद गव्य दुग्धतः ॥
सम्पेष्य खल्वे मूलेषु खर्परेषु प्रलेपयेत् ।
विज्ञाय विगत स्नेहं जयपालं समाहरेत् ॥
न्यसेद्वा यत्नतो मध्ये मषी शोषकपत्रयोः ।
एवं तु विगत स्नेहो रेचकः शुद्धिमाप्नुयात् ॥ (र. त.)

ಜಯಪಾಲ ಬೀಜಗಳನ್ನು ತೆಗೆದುಕೊಂಡು ಅವುಗಳಮೇಲಿನ ತ್ವಚಾ ಹಾಗೂ ಬೀಜಗಳ ನಡುವಿನ ಜಿವ್ಹಾ ತೆಗೆದೊಗೆಯಬೇಕು. ನಂತರ ಈ ಬೀಜಗಳನ್ನು ಅರಿವೆ ಯಲ್ಲಿ ಕಟ್ಟಿ ಪೋಟಲಿಯನ್ನು ತಯಾರಿಸಬೇಕು, ದೋಲಾಯಂತ್ರದಲ್ಲಿ ಗೋದುಗ್ಧ ವನ್ನು ಹಾಕಿ ಅಗ್ನಿಯಮೇಲಿಡಬೇಕು. ಜಯಪಾಲ ಪೋಟಲಿಯನ್ನು ದೋಲಾ ಯಂತ್ರದ ಬಾಯಿಗೆ ಕಟ್ಟಿ ಮೂರು ತಾಸುಗಳವರೆಗೆ ಸ್ವೇದನವನ್ನು ಕೊಡಬೇಕು. ಆಮೇಲೆ ಸ್ವಿನ್ನ ಬೀಜಗಳನ್ನು ಖಲ್ವೀಯಂತ್ರದಲ್ಲಿ ಹಾಕಿ ಚನ್ನಾಗಿ ಅರೆದು ಸೂಕ್ಷ್ಮ ಕಲ್ಕವನ್ನು ತಯಾರಿಸಬೇಕು. ಈ ಕಲ್ಕವನ್ನು ಹೊಸ ಮಣ್ಣಿನಪಾತ್ರೆಗೆ ತೆಳುವಾಗಿ ಲೇಪಿಸ ಬೇಕು. ಇಲ್ಲವೆ ಮಸಿಶೋಷಕ ಪತ್ರ (Blotting Paper) ಗಳ ನಡುವೆ ಇಟ್ಟು ಒತ್ತಬೇಕು. ಈ ಪ್ರಕಾರ ಕಲ್ಕವು ನಿಸ್ನೇಹವಾಗುವವರೆಗೆ ಮಾಡಬೇಕು. ವಿಗತ ಸ್ನೇಹಹೊಂದಿದ ಜೇಪಾಲವು ಶುದ್ಧಿಯಾಗಿದೆಯೆಂದು ತಿಳಿಯಬೇಕು.

ಎರಡನೆಯ ರೀತಿಃ—

ಜಯಪಾಲ ಬೀಜಗಳನ್ನು ಆಕಳ ಇಲ್ಲವೆ ಎಮ್ಮೆಯ ಸೆಗಣಿಯಲ್ಲಿ ಏಳು ದಿವಸಗಳ ವರೆಗೆ ನೆನೆಯಿಡಬೇಕು. ನಂತರ ಈ ಬೀಜಗಳನ್ನು ಸ್ವಚ್ಛವಾಗಿ ನೀರಿನಿಂದ ತೊಳೆದು ಕೊಳ್ಳಬೇಕು. ಹಾಗೂ ಬೀಜಗಳ ಮೇಲಿನ ತ್ವಚ್ ಮತ್ತು ನಡುವಿನ ಅಂಕುರವನ್ನು ತೆಗೆದೊಗೆಯಬೇಕು. ಆಮೇಲೆ ಈ ಬೀಜಗಳ ಕಲ್ಕವನ್ನು ತಯಾರಿಸಿ ವಿಗತ ಸ್ನೇಹ ವಾಗುವವರೆಗೆ ಹೊಸ ಮಣ್ಣಿನ ಮಡಕೆಗೆ ಲೇಪಿಸಬೇಕು. ನಂತರ ಲಿಂಬುರಸದಲ್ಲಿ ಮೂರು ದಿನಗಳವರೆಗೆ ಮರ್ದನ ಮಾಡಿಕೊಂಡು ಶುಷ್ಕವಾದನಂತರ ಉಪಯೋಗಿಸ ಬೇಕು.

ಧತ್ತೂರ ಶುದ್ಧಿಃ—

नवानि धूर्त्त बीजानि दोलिका यन्त्रयोगतः ।
स्वेदयेद् गव्य मूत्रेण यामैकं पोट्टलीगतम् ॥
खल्वेऽथ खलु सम्पेष्य वस्त्रपूतं तु कारयेत् ।
इत्थं शुद्धानि बीजानि वीतशंकः प्रयोजयेत् ॥ (र. त.)

ಹೊಸ ಧತ್ತೂರ ಬೀಜಗಳನ್ನು ತೆಗೆದುಕೊಂಡು ಅರಿವೆಯಲ್ಲಿ ಕಟ್ಟಿ ಪೋಟಲಿಯನ್ನು ತಯಾರಿಸಿಕೊಳ್ಳಬೇಕು. ದೋಲಾಯಂತ್ರದಲ್ಲಿ ಗೋಮೂತ್ರವನ್ನು ಹಾಕಿ ಅಗ್ನಿಯಮೇಲೆ ಇಡಬೇಕು. ಧತ್ತೂರ ಬೀಜಗಳ ಪೋಟಲಿಯನ್ನು ದೋಲಾಯಂತ್ರದ ಬಾಯಿಗೆ ಕಟ್ಟಿ ಮೂರು ತಾಸುಗಳವರೆಗೆ ಸ್ವೇದನವನ್ನು ಕೊಡಬೇಕು. ನಂತರ ಪೋಟಲಿಯನ್ನು ಬಿಚ್ಚಿ ಬೀಜಗಳನ್ನು ಒಣಗಿಸಿಕೊಳ್ಳಬೇಕು. ಈ ಬೀಜಗಳನ್ನು ಚೆನ್ನಾಗಿ ಕುಟ್ಟಿ ವಸ್ತ್ರಗಾಲಿತ ಚೂರ್ಣ ಮಾಡಿಕೊಂಡು ಉಪಯೋಗಿಸಬೇಕು.

ಎರಡನೆಯ ರೀತಿ:-

ಒಂದು ಪಾತ್ರೆಯಲ್ಲಿ ಗೋಮೂತ್ರವನ್ನು ಹಾಕಿ ಅದರಲ್ಲಿ ಧತ್ತೂರ ಬೀಜಗಳನ್ನು ಹಾಕಿ ಒಂದು ದಿವಸ ನೆನೆಯಿಡಬೇಕು. ಎರಡನೇ ದಿವಸ ನೀರಿನಿಂದ ತೊಳೆಯಬೇಕು. ಆಮೇಲೆ ಒಂದು ಪ್ರಹರ ದೋಲಾಯಂತ್ರದಲ್ಲಿ ಆಕಳ ಹಾಲನ್ನು ಹಾಕಿ ಅದರಲ್ಲಿ ಈ ಬೀಜಗಳನ್ನು ಕುದಿಸಬೇಕು. ಆಮೇಲೆ ಬಿಸಿನೀರಿನಿಂದ ತೊಳೆಯಬೇಕು. ನಂತರ ಒಣಗಿಸಿ ಸ್ವಲ್ಪ ಕುಟ್ಟಿದ ಮೇಲೆ ತ್ವಕ್ಕನ್ನು ತೆಗೆಯಬೇಕು. ಆ ಮೇಲೆ ಚೂರ್ಣ ಮಾಡಿಕೊಂಡು ಉಪಯೋಗಿಸಬೇಕು. ಈ ಪ್ರಕಾರ ಶೋಧನದಿಂದ ಧತ್ತೂರದಲ್ಲಿಯ ಅವಸಾದಕ ಹಾಗೂ ಮಾದಕ ಧರ್ಮವು ಕಡಿಮೆಯಾಗುತ್ತದೆ.

ಭಂಗಾ ಶುದ್ಧಿಃ—

मातुलानीं शुष्कपत्रां सलिले तु निमज्जयेत् ।
निष्पीड्य शुष्कां गव्याज्ये भर्जयेन्मंद वह्निना ॥
सुभृष्टामथ विज्ञाय सत्वरं तु समाहरेत् ।
इत्थं विशोधितां भंगां सर्वत्र विनियोजयेत् ॥ (र. त.)

ಭಂಗಾದ ಒಣಗಿದ ಎಲೆಗಳನ್ನು ತೆಗೆದುಕೊಂಡು ನೀರಿನಲ್ಲಿ ಮುಳುಗಿಸಿಡಬೇಕು. ಕೆಲಹೊತ್ತಿನಮೇಲೆ ಈ ಪತ್ರಗಳನ್ನು ನಿರ್ಜಲವಾಗುವಂತೆ ಚೆನ್ನಾಗಿ ಹಿಂಡಬೇಕು. ಹಾಗೂ ಶುಷ್ಕ ಮಾಡಬೇಕು. ನಂತರ ಒಂದು ಲೋಹಪಾತ್ರೆಯಲ್ಲಿ ಗೋಘೃತವನ್ನು ಹಾಕಿ ಅಗ್ನಿಯಮೇಲೆ ಇಡಬೇಕು. ಅದರಲ್ಲಿ ಶುಷ್ಕ ಭಂಗಾ ಪತ್ರಗಳನ್ನು ಹಾಕಿ ಭರ್ಜಿತ ಮಾಡಬೇಕು. ಚೆನ್ನಾಗಿ ಭರ್ಜಿತವಾದಮೇಲೆ ಅಗ್ನಿಯಿಂದ ಕೆಳಗಿಳಿಸಬೇಕು. ಈ ಪ್ರಕಾರ ಶುದ್ಧಿಗೊಂಡ ಭಂಗಾ ಪತ್ರಗಳನ್ನು ಉಪಯೋಗಿಸಬೇಕು.

ಎರಡನೆಯ ಪ್ರಕಾರ:-

ಭಂಗಾ ಪತ್ರಗಳನ್ನು ಅರಿವೆಯಲ್ಲಿ ಕಟ್ಟಿ ಒಂದು ಅಗಲವಾದ ಪಾತ್ರೆಯಲ್ಲಿ ನೀರನ್ನು ಹಾಕಿ ತೊಳೆಯಬೇಕು. ಹಸಿರು ನೀರು ಹೋಗುವವರೆಗೆ ಚೆನ್ನಾಗಿ ತೊಳೆಯ ಬೇಕು. ನಂತರ ಪತ್ರಗಳನ್ನು ಹೊರತೆಗೆದು ಶುಷ್ಕಮಾಡಿ ಉಪಯೋಗಿಸಬೇಕು.

ಗುಂಜಾಶುದ್ಧಿಃ—

गुञ्जाबीजं पोट्टलीस्थं दोलायन्त्रे सकाञ्जिकम् ।
यामैकं स्वेदनादेव शुद्धिमायात्यनुत्तमाम् । (र. त.)

ಗುಂಜಾಬೀಜಗಳನ್ನು ತೆಗೆದುಕೊಂಡು ಅರಿವೆಯಲ್ಲಿ ಹಾಕಿ ಪೋಟಲಿಯನ್ನು ಕಟ್ಟಬೇಕು. ಆಮೇಲೆ ದೋಲಾಯಂತ್ರದಲ್ಲಿ ಕಾಂಜಿಯನ್ನು ಹಾಕಿ ಅಗ್ನಿಯಮೇಲೆ ಇಡಬೇಕು. ದೋಲಾಯಂತ್ರದ ಬಾಯಿಗೆ ಗುಂಜಾಬೀಜದ ಪೋಟಲಿಯನ್ನು ಕಟ್ಟಿ ಮೂರು ತಾಸುಗಳವರೆಗೆ ಸ್ವೇದನವನ್ನು ಕೊಡಬೇಕು. ನಂತರ ಪೋಟಲಿಯಿಂದ ಗುಂಜಾಬೀಜಗಳನ್ನು ಹೊರತೆಗೆದು ಬೀಜಗಳಮೇಲಿನ ತ್ವಚೆಯನ್ನು ತೆಗೆದು ಒಣಗಿಸಿ ಕೊಂಡು ಉಪಯೋಗಿಸಬೇಕು.

ಎರಡನೆಯ ಪ್ರಕಾರ:-

ಗುಂಜಾ ಬೀಜಗಳ ಪೋಟಲಿಯನ್ನು ತಯಾರಿಸಿಕೊಳ್ಳಬೇಕು. ದೋಲಾಯಂತ್ರ ದಲ್ಲಿ ಹಾಲನ್ನು ಹಾಕಿ ಅಗ್ನಿಯಮೇಲೆ ಇಡಬೇಕು. ದೋಲಾಯಂತ್ರದಲ್ಲಿ ಪೋಟಲಿ ಯನ್ನು ಮುಳುಗಿಸಿ ಮೂರು ತಾಸುಗಳವರೆಗೆ ಪಚನ ಮಾಡಿಕೊಳ್ಳಬೇಕು. ನಂತರ ಬೀಜಗಳನ್ನು ಹೊರಗೆ ತೆಗೆದು ಅವುಗಳ ತ್ವಚೆಯನ್ನು ತೆಗೆದು ಒಣಗಿಸಿಕೊಂಡು ಉಪ ಯೋಗಿಸಬೇಕು.

ಕರವೀರ ಶುದ್ಧಿಃ—

हयारि विषवत् शोध्यो गोदुग्धे दोलकेन तु । (योग रत्नाकर)

ಕರವೀರ ಮೂಲವನ್ನು ತೆಗೆದುಕೊಂಡು ಕುಟ್ಟಿ ಚೂರ್ಣಮಾಡಬೇಕು. ನಂತರ ಈ ಚೂರ್ಣದ ಪೋಟಲಿಯನ್ನು ತಯಾರಿಸಬೇಕು. ಈ ಪೋಟಲಿಯನ್ನು ಮಣ್ಣಿನ ಇಲ್ಲವೇ ಕಾಚಿನ ಪಾತ್ರೆಯಲ್ಲಿ ಹಾಕಿ ಅದರಲ್ಲಿ ಗೋಮೂತ್ರವನ್ನು ಹಾಕಬೇಕು. ನಂತರ ಒಂದು ದಿವಸ ಅಗ್ನಿಯನ್ನು ಕೊಡಬೇಕು. ಈ ಪ್ರಕಾರ ಮೂರು ದಿವಸ ಅಗ್ನಿ ಯನ್ನು ಕೊಡಬೇಕು. ನಾಲ್ಕನೆಯದಿವಸ ಪೋಟಲಿಯನ್ನು ತೆಗೆದು ಕರವೀರ ಚೂರ್ಣ ವನ್ನು ನೀರಿನಿಂದ ತೊಳೆದುಕೊಳ್ಳಬೇಕು. ಆಮೇಲೆ ಒಣಗಿಸಿಕೊಂಡು ಉಪಯೋಗಿಸ ಬೇಕು.

ಲಾಂಗಲೀ ಶುದ್ಧಿಃ—

लांगली शुद्धिमायाति दिनं गोमूत्र संस्थिता । (यो. र.)

ಲಾಂಗಲೀ ಮೂಲಗಳನ್ನು ತೆಗೆದುಕೊಳ್ಳಬೇಕು. ಒಂದು ಪಾತ್ರೆಯಲ್ಲಿ ಗೋಮೂತ್ರವನ್ನು ಹಾಕಿ ಇಡೀ ದಿವಸ ಲಾಂಗಲಿಯನ್ನು ಅದರಲ್ಲಿ ನೆನೆಯಿಡಬೇಕು. ನಂತರ ಹೊರಗೆ ತೆಗೆದು ನೀರಿನಿಂದ ತೊಳೆದುಕೊಂಡು ಒಣಗಿಸಿಕೊಳ್ಳಬೇಕು. ಆಮೇಲೆ ಉಪಯೋಗಿಸಬೇಕು.

ಭಲ್ಲಾತಕ ಶುದ್ಧಿಃ—

भल्लातक फलानीह नारिकेलाम्बुयोगतः ।
स्विन्नानि दोलिकायन्त्रे शुद्धिमायान्त्यनुत्तमाम् ॥ (र. त.)

ಭಲ್ಲಾತಕ ಫಲಗಳನ್ನು ತೆಗೆದುಕೊಂಡು ಸಣ್ಣ ಸಣ್ಣ ತುಂಡಗಳನ್ನು ಮಾಡಬೇಕು. ಈ ತುಂಡುಗಳನ್ನು ಅರಿವೆಯಲ್ಲಿ ಕಟ್ಟಿ ಪೋಟಲಿಯನ್ನು ತಯಾರಿಸ ಬೇಕು. ದೋಲಾಯಂತ್ರದಲ್ಲಿ ನಾರಿಕೇಲ ಜಲವನ್ನು ಹಾಕಿ ಅಗ್ನಿಯಮೇಲೆ ಇಡಬೇಕು. ಪೋಟಲಿಯನ್ನು ದೋಲಾಯಂತ್ರದ ಬಾಯಿಗೆ ತೂಗುಬಿಟ್ಟು ಎರಡು ತಾಸುಗಳವರೆಗೆ ಸ್ವೇದನಕೊಡಬೇಕು. ಸ್ವಿನ್ನ ಭಲ್ಲಾತಕ ತುಂಡುಗಳನ್ನು ಹೊರತೆಗೆದು ನೀರಿನಿಂದ ತೊಳೆದು ಒಣಗಿಸಿ ಯೋಗಗಳಲ್ಲಿ ಉಪಯೋಗಿಸಬೇಕು.

ಕರ್ಪೂರ ಶುದ್ಧಿಃ—

गोदुग्धे त्रिफला क्वाथे भृंगद्रावे समांशके ।
मर्दयेत् याममात्रं तु कर्पूरं शुद्धिमाप्नुयात् । (यो. र.)

ಕರ್ಪೂರವನ್ನು ಖಲ್ವೀಯಂತ್ರದಲ್ಲಿ ಹಾಕಿ ಅದರ ಸಮಭಾಗ ಗೋದುಗ್ಧ, ತ್ರಿಫಳಾಕ್ವಾಥ, ಭೃಂಗರಾಜ ಸ್ವರಸಗಳ ಭಾವನೆಯನ್ನು ಒಂದೊಂದು ಪ್ರಹರದವರೆಗೆ ಕೊಡಬೇಕು. ಆಗ ಕರ್ಪೂರವು ಶುದ್ಧವಾಗುತ್ತದೆ.

ಟಂಕಣ ಶುದ್ಧಿಃ—

अशुद्ध टंकणो वांतिभ्रांतिकारी प्रयोजितः ।
अतस्तं शोधयेदेवं गोमयेनाऽऽप्लुतः शुचिः ॥ (यो. र.)

ಅಶುದ್ಧ ಟಂಕಣಸೇವನೆಯಿಂದ ವಾಂತಿ, ಭ್ರಾಂತಿ ಆದಿ ವಿಕಾರಗಳು ಆಗುತ್ತವೆ. ಆದ್ದರಿಂದ ಟಂಕಣವನ್ನು ಗೋಮಯದಲ್ಲಿ ಒಂದು ಹಗಲು ಹಾಗೂ ಒಂದು ರಾತ್ರಿ ನೆನೆಯಿಡಬೇಕು. ಮರುದಿನ ಟಂಕಣವನ್ನು ಹೊರಗೆ ತೆಗೆದು ತೊಳೆದುಕೊಂಡು ಒಣಗಿಸಿಕೊಳ್ಳಬೇಕು. ಆಮೇಲೆ ಉಪಯೋಗಿಸಬೇಕು.

ಏರಂಡಬೀಜ ಹಾಗೂ ದಂತೀಶುದ್ಧಿಃ—

गंधर्व हस्त बीजानां नारिकेलोदकेन च ।
याम मात्रात् भवेत् शुद्धिः दंतीबीजं पचेत् यथा ॥ (यो. र)

ಏರಂಡ ಬೀಜಗಳ ಪೋಟಲಿಯನ್ನು ತಯಾರಿಸಿಕೊಳ್ಳಬೇಕು. ದೋಲಾಯಂತ್ರದಲ್ಲಿ ನಾರಿಕೇಲ ಜಲವನ್ನು ಹಾಕಿ ಅಗ್ನಿಯಮೇಲೆ ಇಡಬೇಕು. ಪೋಟಲಿಯನ್ನು ದೋಲಾಯಂತ್ರದಲ್ಲಿ ಮುಳುಗಿಸಿ ಒಂದು ಪ್ರಹರದವರೆಗೆ ಪಚನ ಮಾಡಿಕೊಳ್ಳಬೇಕು. ನಂತರ ಹೊರಗೆ ತೆಗೆದು ನೀರಿನಿಂದ ತೊಳೆದುಕೊಳ್ಳಬೇಕು. ಈ ಬೀಜಗಳನ್ನು ಆತಪ ಶುಷ್ಕ ಮಾಡಿಕೊಂಡು ಉಪಯೋಗಿಸಬೇಕು.

ಇದೇ ರೀತಿಯಿಂದ ದಂತೀ ಶುದ್ಧಿಯನ್ನು ಮಾಡಿಕೊಳ್ಳಬೇಕು.

ಮರೀಚ ಶುದ್ಧಿಃ—

मरीचं चाम्लतक्रेण भावितं घटिकात्रयम् ।
मरीचं निस्तुषं कृत्वा शुद्धं भवति निश्चितम् ॥ (यो. र.)

ಮರೀಚ ಬೀಜಗಳ ಚೂರ್ಣವನ್ನು ಮಾಡಿಕೊಳ್ಳಬೇಕು. ಈ ಚೂರ್ಣವನ್ನು ಖಲ್ವೀಯಂತ್ರದಲ್ಲಿ ಹಾಕಿ ಒಂದು ಪ್ರಹರದವರೆಗೆ ಅಮ್ಲತಕ್ರದ ಭಾವನೆಯನ್ನು ಕೊಡಬೇಕು. ನಂತರ ನೀರಿನಿಂದ ತೊಳೆದುಕೊಂಡು ಮರೀಚತ್ವಕ್ ತೆಗೆಯಬೇಕು. ಆಮೇಲೆ ಒಣಗಿಸಿಕೊಂಡು ಉಪಯೋಗಿಸಬೇಕು.

ಗುಗ್ಗುಲು ಶುದ್ಧಿ:—

ಪೇಟಿಯಲ್ಲಿ ಸಿಗುವಂಥ ಗುಗ್ಗುಲುವನ್ನು ತೆಗೆದುಕೊಂಡು ಉಸುಕು, ಕಲ್ಲು, ಹರಳುಗಳನ್ನು ತೆಗೆದು ಸ್ವಚ್ಛಮಾಡಬೇಕು. ದೋಲಾಯಂತ್ರದಲ್ಲಿ ಗೋದುಗ್ಧವನ್ನು ಹಾಕಿ ಅಗ್ನಿಯಮೇಲೆ ಇಡಬೇಕು. ಗುಗ್ಗುಲು ಪೋಟಲಿಯನ್ನು ತಯಾರಿಸಿ ದೋಲಾಯಂತ್ರದ ಬಾಯಿಗೆ ತೂಗುಬಿಡಬೇಕು, ಮೂರು ತಾಸುಗಳವರೆಗೆ ಸ್ವೇದನವನ್ನು ಕೊಡಬೇಕು. ಗೋದುಗ್ಧದ ಸ್ವೇದನದಿಂದ ಗುಗ್ಗುಲುದಲ್ಲಿರುವ ತೀಕ್ಷ್ಣ ಗುಣವು ಕಡಿಮೆಯಾಗಿ ಅದು ಶುದ್ಧವಾಗುವದು, ಹಾಗೂ ಮೃದುವಾಗುವದು. ಇದನ್ನು ಔಷಧೀ ಕರ್ಮದಲ್ಲಿ ಉಪಯೋಗಿಸಬೇಕು.

ಎರಡನೆಯ ಪ್ರಕಾರಃ—

ಸ್ವಚ್ಛ ಗುಗ್ಗುಲುವನ್ನು ತೆಗೆದುಕೊಳ್ಳಬೇಕು. ಒಂದು ಲೋಹಪಾತ್ರೆಯನ್ನು ತೆಗೆದುಕೊಂಡು ಅದರಲ್ಲಿ ಹರೀತಕಿ, ಆಮಲಕಿ, ಬಿಭೀತಕಿ ಈ ಫಲಗಳ ಚೂರ್ಣವನ್ನು ಸಮಭಾಗ ತೆಗೆದುಕೊಂಡು ಅದರ ಹದಿನಾರುಪಟ್ಟು ನೀರನ್ನು ಹಾಕಿ ಅಗ್ನಿಯ ಮೇಲೆ ಇಡಬೇಕು. ಚತುರ್ಥಾಂಶ ಕ್ವಾಥವುಳಿದಮೇಲೆ ಅದರಲ್ಲಿ ಸ್ವಚ್ಛಮಾಡಿದ ಗುಗ್ಗುಲುವನ್ನು ಹಾಕಿ ಲೋಹ ಶಲಾಕೆಯಿಂದ ತಿರುವಬೇಕು. ಇದರಿಂದ ಗುಗ್ಗುಲು ತ್ರಿಫಲಾ ಕ್ವಾಥದಲ್ಲಿ ಏಕರೂಪವಾಗುವದು. ಅಗ್ನಿಯ ಸಂಸ್ಕಾರದಿಂದ ಇದು ಕ್ರಮೇಣ ಘನವಾಗುತ್ತ ಬರುವದು. ಸಾಧಾರಣ ರೀತಿಯಿಂದ ಘನವಾದಮೇಲೆ ಅಗ್ನಿಯಿಂದ ಕೆಳಗಿಳಿಸಬೇಕು. ಕೈಗೆ ತುಪ್ಪವನ್ನು ಹಚ್ಚಿಕೊಂಡು ಇದರ ಸಣ್ಣ ಸಣ್ಣ ವಟಗಳನ್ನು ತಯಾರಿಸಿಕೊಳ್ಳಬೇಕು. ಇವನ್ನು ಆತಪಶುಷ್ಕ ಮಾಡಿಕೊಂಡು ಉಪಯೋಗಿಸಬೇಕು,

---

ಪ್ರಕರಣ ೧೦

ಅನುಕ್ತ ಕಾಲಾದಿ ಪರಿಭಾಷಾ ವಿಜ್ಞಾನ

ಔಷಧೀ ಗ್ರಹಣಕಾಲಃ—

ಅಶ್ವಿನ, ಕಾರ್ತಿಕ ಈ ತಿಂಗಳುಗಳಲ್ಲಿ ಸರ್ವದ್ರವ್ಯಗಳು ರಸ, ವೀರ್ಯ, ವಿಪಾಕಗಳಿಂದ ಸಂಪನ್ನವಿರುತ್ತವೆ. ಆದ್ದರಿಂದ ಈ ತಿಂಗಳುಗಳಲ್ಲಿಯೇ ಔಷಧೀ ದ್ರವ್ಯಗಳನ್ನು ತಂದು ಸಂಗ್ರಹಿಸಿ ಇಡಬೇಕು.

सौम्यानि औषधानि सौम्येषु ऋतुषु गृहीतानि सोमगुण भूयिष्ठायां भूमौ जातानि अति मधुर स्निग्ध शीतानि जायते एतेन शेष व्याख्यातम् । (सु. सू. अ. ३७)

ಶೀತ ವೀರ್ಯವುಳ್ಳ ವನಸ್ಪತಿಗಳನ್ನು ಶೀತಕಾಲದಲ್ಲಿ ಸಂಗ್ರಹಿಸಬೇಕು. ಯಾಕಂದರೆ ಈ ಕಾಲದಲ್ಲಿ ದ್ರವ್ಯಗಳು ಸ್ನಿಗ್ಧ, ಮಧುರ, ಶೀತಗುಣ ಪ್ರಧಾನ ಇರುತ್ತವೆ. ಉಷ್ಣವೀರ್ಯ ದ್ರವ್ಯಗಳನ್ನು ಉತ್ತರಾಯಣ ಕಾಲದಲ್ಲಿ ಸಂಗ್ರಹಿಸಿ ಇಡುವದರಿಂದ ಅವುಗಳ ಗುಣಗಳಲ್ಲಿ ಬದಲಾವಣೆ ಆಗುವದಿಲ್ಲ ಎಂದು ಸುಶ್ರುತದಲ್ಲಿ ಹೇಳಿದ್ದಾರೆ.

ವಿಧಿಃ—

ग्रह्णीयात्तानि सुमनाः शुचिः प्रातः सुवासरे ।
आदित्य संमुखो मौनी नमस्कृत्य शिवं हृदि ॥
साधारणधरा द्रव्यं गृह्णीयात् उत्तराश्रितम् ।
(शा. स. पूर्वखण्ड)

ಪ್ರಶಸ್ತವಾದ ದಿನಸ ಒಳ್ಳೆಯ ಮುಹೂರ್ತ ನೋಡಿಕೊಂಡು ಆದಿನ ಪ್ರಾತಃ ಕಾಲದಲ್ಲಿ ಎದ್ದು ಶುಚಿರ್ಭೂತನಾಗಿ ಪ್ರಸನ್ನ ಮನವುಳ್ಳವನಾಗಿ ಸೂರ್ಯನಿಗೆ ನಮಸ್ಕರಿಸಿ ಮನಸ್ಸಿನಲ್ಲಿ ಶಿವನ ಧ್ಯಾನವನ್ನು ಮಾಡುತ್ತ ಮೌನಿಯಾಗಿ ಯಾವ ದ್ರವ್ಯವನ್ನು ಸಂಗ್ರಹಿಸಬೇಕಾಗಿದೆಯೋ ಆ ದ್ರವ್ಯದ ಮೂಲ ಅಥವಾ ಅದರ ಉಪಯುಕ್ತ ಅಂಗವನ್ನು ಉತ್ತರ ದಿಕ್ಕಿನ ಕಡೆಗೆ ಹೋಗಿ ಸಂಗ್ರಹಿಸಬೇಕು.

शरद्यखिल कार्यार्थं ग्राह्यं सरसमौषधम् ।
विरेक वमनार्थं च वसंतांते समाहरेत् ॥ (निघंट रत्नाकर)

ಶರದ್ ಋತುವಿನಲ್ಲಿ ಔಷಧೀ ದ್ರವ್ಯಗಳು ರಸಭರಿತವಿರುತ್ತವೆ. ಆದ್ದರಿಂದ ಎಲ್ಲ ಕಾರ್ಯಗಳಿಗಾಗಿ ಈ ಋತುವಿನಲ್ಲಿಯೇ ದ್ರವ್ಯಗಳನ್ನು ಸಂಗ್ರಹಣಮಾಡಬೇಕು. ವಿರೇಚನ ಹಾಗೂ ವಮನ ಕಾರ್ಯದ ಸಲುವಾಗಿ ದ್ರವ್ಯಗಳನ್ನು ವಸಂತ ಋತುವಿನ ಕೊನೆಯಲ್ಲಿ ಸಂಗ್ರಹಣ ಮಾಡಬೇಕು.

ದೇಶಭೇದದಿಂದ ಔಷಧೀಭೇದಃ—

आग्नेया विंध्य शैलाद्याः सौम्यो हिमगिरिमंतः ।
अतस्तदौषधानि स्युरनुरूपाणि हेतुभिः ।
अन्येष्वपि प्ररोहंति वनेषूपवनेषु च । (नि. र.)

ವಿಂಧ್ಯ ಪರ್ವತಾದಿ ಪ್ರದೇಶದಲ್ಲಿಯ ಔಷಧೀ ದ್ರವ್ಯಗಳು ಉಷ್ಣವೀರ್ಯಾತ್ಮಕ ಇರುತ್ತವೆ. ಮತ್ತು ಹಿಮಾಲಯ ಪ್ರದೇಶದಲ್ಲಿಯ ಔಷಧೀ ದ್ರವ್ಯಗಳು ಸೌಮ್ಯ ವೀರ್ಯದ್ದು ಇರುತ್ತವೆ. ಈ ಪ್ರದೇಶಗಳಲ್ಲಿಯ ವನ ಉಪವನಗಳಲ್ಲಿಯ ದ್ರವ್ಯಗಳನ್ನು ಸಂಗ್ರಹಿಸಬೇಕು. ಯಾವ ಪ್ರಕಾರದ ಭೂಮಿ ಇರುತ್ತದೆಯೋ ಆ ಪ್ರಕಾರದ ಔಷಧೀ ಇರುತ್ತದೆ.

ನಿಷಿದ್ಧ ಔಷಧಃ—

वल्मीक कुत्सितानूप श्मशानोषर मार्गजा ।
जंतु वन्हि हिम व्याप्ता नौषधिः कार्यं सिद्धिदा । (नि. र.)

ಹುತ್ತಿನಿಂದ ಕೂಡಿದ, ಅಪವಿತ್ರ ಪ್ರದೇಶದಲ್ಲಿಯ; ಜವುಳು ಭೂಮಿಯಲ್ಲಿಯ ಸ್ಮಶಾನದಲ್ಲಿಯ ಜಂತು, ಹಿಮ, ಅಗ್ನಿಗಳಿಂದ ನಾಶವಾದ ಔಷಧಿಯು ಹೀನವಿದ್ದು ಅದರಿಂದ ಕಾರ್ಯಸಿದ್ಧಿಯಾಗುವದಿಲ್ಲ, ಆದ್ದರಿಂದ ಇಂಥ ದ್ರವ್ಯಗಳ ಸಂಗ್ರಹಣವನ್ನು ಮಾಡಬಾರದು.

ದ್ರವ್ಯಸಂಗ್ರಹಣಾರ್ಥ ಉಚಿತ ಭೂಮಿ ವಿಚಾರಃ—

धन्वे साधारणे देशेसमे सन्मृत्तिके शुचौ ।
श्मशान चैत्यायतन श्वभ्रम वल्मीक वर्जिते ।
मृदौ प्रदक्षिण जले कुशरोहिष संस्तृते ।।
अफालकृष्टे अनाक्रांते पादपैः बलवत्तरैः । (अ. हृ. क. ६)

तत्र देशे साधारणे जांगले वा यथाकालं शिशिरातपपवन सलिल-सेविते समे शुचौ प्रदक्षिणोदके श्मशान चैत्य देवयजनागार सभाश्व भ्राराम वल्मीकोषरविरहिते कुशरोहिषास्तीर्णे स्निग्धकृष्ण मधुर मृत्तिके वा मृत्रात्रफालकृष्टे अनुपहतेऽन्यैर्बलवत्तरैः द्रुमैः औषध द्रव्याणि जातानि प्रशस्यंते । (चरक कल्पस्थान १.)

ಧನ್ವದೇಶ, ಸಾಧಾರಣದೇಶ, ಎತ್ತರ ತಗ್ಗುಗಳಿರದೇ ಅನುಕೂಲವಾದ ಮಣ್ಣಿನಿಂದ ಕೂಡಿದ, ಕುಶ, ರೋಹಿಷಾದಿ ಹುಲ್ಲುಗಳು ಬೆಳೆಯುತ್ತಿರುವ, ಬೀಸುಗಾಳಿಗಳಿಂದ ಚಲಾಯಮಾನವಾಗದ ಭೂಮಿಯಲ್ಲಿ ಬೆಳೆದಂಥ ಬಲವತ್ತರವಾದ ಮಹಾನ್ ವೃಕ್ಷ

ಗಳಿಂದ ಕೂಡಿದಂಥ ಭೂಮಿಯು ಉಚಿತವಿದ್ದು ಇಂಥಭೂಮಿಯಲ್ಲಿ ಬೆಳೆದಂಥ ಔಷಧೀ ದ್ರವ್ಯಗಳನ್ನು ಸಂಗ್ರಹಿಸಬೇಕು.

ಮಹಾಭೂತಾನುಸಾರ ಪಂಚಭೂಮಿಯ ವಿಚಾರಃ–

1) ಪಾರ್ಥಿವಃ–

विशेषतस्तु तत्र अश्मवती स्थिरा गुर्वी श्यामा कृष्णा वा स्थूल वृक्षाशस्य प्राया स्वगुण भूयिष्ठा । (सु. सू. ३७)

ಕಲ್ಲುಗಳಿಂದ ಕೂಡಿದ ಸ್ಥಿರ, ಗುರು, ಶ್ಯಾಮವರ್ಣ, ಕೃಷ್ಣವರ್ಣ ಭೂಮಿಯಲ್ಲಿ ದೊಡ್ಡ ದೊಡ್ಡ ವೃಕ್ಷಗಳು ಬೆಳೆದಿರುವ ಭೂಮಿಯು ಪಾರ್ಥಿವ ಗುಣಭೂಯಿಷ್ಠ ವಿರುತ್ತದೆ.

2) ಜಲೀಯಃ–

स्निग्धा शीतलाऽऽसन्नोदका स्निग्ध शस्य तृण कोमलवृक्ष प्रायःऽम्बुगुण भूयिष्ठा । (सु. सू. ३७)

ಯಾವ ಭೂಮಿಯು ಸ್ನಿಗ್ಧ, ಶೀತಲ ಸ್ವಲ್ಪ ಆಳ ಅಗಿದರೆ ನೀರು ಬರುವಂಥ ಕೋಮಲ ಸಸ್ಯ, ವೃಕ್ಷ, ತೃಣಗಳಿಂದ ಕೂಡಿದ ಶುಕ್ಲ ವರ್ಣದ ಭೂಮಿಯು ಪ್ರಾಯಃ ಅಂಬುಗುಣ ಭೂಯಿಷ್ಠವಿರುತ್ತದೆ.

3) ಅಗ್ನೇಯಃ–

नानावर्णा लघ्वश्मवती प्रविरलाल्प पांडु वृक्ष प्ररोहा अग्निगुण भूयिष्ठा । (सु. सू. ३७)

ಅನೇಕ ವರ್ಣಗಳಿಂದ ಕೂಡಿದ ಆ ಸಣ್ಣ ಸಣ್ಣ ಕಲ್ಲುಗಳಿಂದ ಕೂಡಿದ ಅಲ್ಲಲ್ಲಿಗೆ ಪಾಂಡುವರ್ಣದ ವೃಕ್ಷಗಳಿಂದ ಕೂಡಿದ ಭೂಮಿಯು ಅಗ್ನೇಯ ಗುಣ ಭೂಯಿಷ್ಠ ವಿರುತ್ತದೆ.

4) ವಾಯವೀಯಃ–

रूक्षा भस्म रासभवर्णा तनुवृक्षाऽल्परस कोटरवृक्ष प्राया अनिल गुण भूयिष्ठा । (सु. सू. अ ३७)

ಯಾವ ಭೂಮಿಯು ರೂಕ್ಷವಿರುವದೋ ಭಸ್ಮ ಅಥವಾ ರಾಸಭದಂತೆ ಧೂಸರ ವರ್ಣವುಳ್ಳ ಸಣ್ಣ ಗಿಡಗಂಟಿಗಳಿಂದ ಕೂಡಿದ ಅಲ್ಪ ರಸವುಳ್ಳ ವನಸ್ಪತಿಗಳಿಂದ ಕೂಡಿದ ಭೂಮಿಯು ಅನಿಲಗುಣ ಭೂಯಿಷ್ಠವಿರುತ್ತದೆ.

5) ಆಕಾಶೀಯಃ–

मृद्वचअसमा श्वभ्रवती अव्यक्त रस जला सर्वतोऽअसार वृक्षा महा-पर्वत वृक्ष प्राया श्यामा चाकाश गुण भूयिष्ठा । (सु. सू. अ. ३७)

ಮೃದು ಅಸಮತಲವುಳ್ಳ, ವನಸ್ಪತಿಗಳ ರಸ ಅಲ್ಪ ಇರುವ ಜಲ ಅಲ್ಪ ಹಾಗೂ ಅವ್ಯಕ್ತರಸವುಳ್ಳ, ಸಾರಹೀನ ದೊಡ್ಡ ವೃಕ್ಷಗಳಿಂದ ಕೂಡಿದ ಶ್ಯಾಮವರ್ಣದ ಭೂಮಿಯು ಆಕಾಶಗುಣ ಪ್ರಧಾನವಿರುತ್ತದೆ.

ಇಂಥ ಭೂಮಿಗಳಲ್ಲಿಯ ವನಸ್ಪತಿಗಳನ್ನು ತಮಗೆ ಯಾವ ಗುಣದ ದ್ರವ್ಯಗಳನ್ನು ಸಂಗ್ರಹಿಸಬೇಕಾಗಿದೆಯೋ ಅವನ್ನು ಯೋಗ್ಯಕಾಲದಲ್ಲಿ ಗ್ರಹಣ ಮಾಡಬೇಕು.

तत्र पृथिव्यम्बु गुण भूयिष्ठायां भूमौ जातानि विरेचन द्रव्याण्याददीत । अग्न्याकाश गुण भूयिष्ठायां वमन द्रव्याणि उभय गुण भूयिष्ठायां उभयतो भागानि । आकाश गुण भूयिष्ठायां संशमनानि । एवं बलवत्तराणि भवंति । (सु. सू. अ. ३७)

ಪೃಥ್ವೀ, ಜಲ, ಗುಣ, ಭೂಯಿಷ್ಠ ಭೂಮಿಯಲ್ಲಿ ಬೆಳೆದ ದ್ರವ್ಯಗಳು ಬಹುತರವಾಗಿ ವಿರೇಚನ ಕಾರ್ಯ ಮಾಡುವಂಥವು ಇರುತ್ತವೆ. ಅಗ್ನಿ, ಆಕಾಶ, ವಾಯು ಗುಣ ಭೂಯಿಷ್ಠ ಭೂಮಿಯಲ್ಲಿ ಬೆಳೆದಂಥ ದ್ರವ್ಯಗಳು ಪ್ರಾಯಃ ವಮನ ಕಾರ್ಯ ಮಾಡುವಂಥವು ಇರುತ್ತವೆ. ಉಭಯ ಗುಣ ಭೂಯಿಷ್ಠ ದ್ರವ್ಯಗಳು ವಮನ ವಿರೇಚನ ಕಾರ್ಯಗಳನ್ನು ಮಾಡುತ್ತವೆ. ಆಕಾಶ ಗುಣ ಭೂಯಿಷ್ಠ ಭೂಮಿಯಲ್ಲಿ ಬೆಳೆದಂಥ ದ್ರವ್ಯಗಳು ಪ್ರಶಮನ ಕಾರ್ಯವನ್ನು ಮಾಡುತ್ತವೆ. ಆಯಾ ಗುಣ ಭೂಯಿಷ್ಠ ಭೂಮಿಯಲ್ಲಿಯ ದ್ರವ್ಯಗಳನ್ನು ಯೋಗ್ಯಕಾಲದಲ್ಲಿ ಸಂಗ್ರಹಮಾಡುವದರಿಂದ ಅವು ತಮ್ಮ ಗುಣಗಳಿಂದ ಸಂಪನ್ನ ಇರುತ್ತವೆ.

ಔಷಧೀ ಸೇವನಕಾಲಃ–

भैषज्यमभ्यवहरेत् प्रभाते प्रायशो बुधः ।
कषायांश्च विशेषेण तत्र भेदस्तु दर्शितः ।। (नि. र.)

ಸಾಮಾನ್ಯವಾಗಿ ಬುದ್ಧಿಶಾಲಿಯಾದ ವೈದ್ಯನು ಪ್ರಾತಃಕಾಲದಿಲ್ಲಿಯೇ ರೋಗಿಗೆ ಔಷಧವನ್ನು ಕೊಡಬೇಕು. ಕಷಾಯ ಭೇದಗಳಾದ ಸ್ವರಸ, ಕಲ್ಕ, ಕ್ವಾಥ, ಹಿಮ ಹಾಗೂ ಫಾಂಟ ಇವುಗಳನ್ನು ಪ್ರಾತಃಕಾಲದಲ್ಲಿಯೇ ಕೊಡಬೇಕು. ಇದು ಔಷಧ ಸೇವನೆಯ ಸಾಮಾನ್ಯ ನಿಯಮವಿರುತ್ತದೆ. ಇನ್ನು ವಿಶೇಷವಾಗಿ ರೋಗ ಹಾಗೂ ರೋಗಿಯ ಬಲಾಬಲಗಳ ದೃಷ್ಟಿಯಿಂದ ಔಷಧ ಸೇವನಕಾಲವು ಪಂಚವಿಧವಿರುತ್ತದೆ.

ज्ञेयः पंचविधः कालो भैषज्यग्रहणे नृणाम् ।
किंचित् सूर्योदये जाते तथा दिवस भोजने ।।
सायंतने भोजने च मुहुश्चापि तथा निशि । (शा. सं.)

ಔಷಧವನ್ನು ಸೇವನ ಮಾಡುವ ಕಾಲಗಳು ಐದು ಇರುತ್ತವೆ. ಅವು ಕೆಳಗಿನಂತೆ ಇವೆ.

ಪ್ರಥಮಕಾಲಃ— ಸೂರ್ಯೋದಯವಾದಮೇಲೆ
ದ್ವಿತೀಯಕಾಲಃ— ದಿವಸದ ಊಟದ ಸಮಯದಲ್ಲಿ
ತೃತೀಯಕಾಲಃ— ರಾತ್ರಿಯ ಊಟದ ಸಮಯದಲ್ಲಿ
ಚತುರ್ಥಕಾಲ:— ಮೇಲಿಂದಮೇಲೆ
ಪಂಚಮಕಾಲಃ— ರಾತ್ರಿಯ ವೇಳೆಯಲ್ಲಿ
ಈ ಕಾಲಗಳಬಗ್ಗೆ ವಿಸ್ತಾರವಾಗಿ ಈ ಪ್ರಕಾರ ವರ್ಣನೆಮಾಡಿದ್ದಾರೆ.

1) **ಪ್ರಥಮಕಾಲಃ–**

प्राय: पित्तकफोद्रेके विरेक वमनार्थयो: ।
लेखनार्थं च भैषज्यं प्रभातेतत्समाहरेत् ॥
एवं स्यात् प्रथम: कालो भैषज्य ग्रहणे नृणाम् । (शा. सं.)

ಪಿತ್ತ ಹಾಗೂ ಕಫ ಪ್ರಕುಪಿತ ವ್ಯಾಧಿಗಳಲ್ಲಿ ಪಿತ್ತವನ್ನು ವಿರೇಚನದಿಂದ ಹಾಗೂ ಕಫವನ್ನು ವಮನ ದ್ವಾರಾ ದೂರ ಮಾಡುವದರ ಸಲುವಾಗಿ ಪ್ರಾತಃಕಾಲದಲ್ಲಿ ಔಷಧವನ್ನು ಕೊಡಬೇಕು. ಪ್ರಾಯಃ ಶಬ್ದದಿಂದ ಕೇವಲ ಪ್ರಾತಃಕಾಲದಲ್ಲಿಯೇ ಅಲ್ಲದೇ ಉಳಿದ ವೇಳೆಯಲ್ಲಿ ರೋಗದ ಬಲವು ಹೆಚ್ಚಿದ್ದರೆ ವಮನ ವಿರೇಚನಗಳನ್ನು ಕೊಡಲು ಬರುತ್ತದೆ. ದೋಷಗಳನ್ನು ಲೇಖನ ಮಾಡಿ ಹೊರತೆಗೆಯುವದರಸಲುವಾಗಿ ಪ್ರಾತಃಕಾಲದಲ್ಲಿ ಔಷಧವನ್ನು ಕೊಡಬೇಕು.

2) **ದ್ವಿತೀಯಕಾಲಃ–**

भैषज्यं विगुणेऽपाने भोजनाग्रे प्रशस्यते ।
अरुचौ चित्रभोज्यैश्च मिश्रं रुचिरमाहरेत् ॥
समान वाते विगुणे मंदेऽग्नावग्नि दीपनम् ।
दद्यात् भोजन मध्ये च भैषज्यं कुशलो भिषक् ।
व्यान कोपे च भैषज्यं भोजनांते समाहरेत् ।
हिक्काऽऽक्षेपक कम्पेषु पूर्वमंते च भोजनात् ॥
एवं द्वितीय कालश्च प्रोक्तो भैषज्य कर्मणि । (शा. सं)

ದ್ವಿತೀಯ ಕಾಲವು ದಿನದ ಊಟದ ಸಮಯದಲ್ಲಿಯ ಕಾಲವಿರುತ್ತದೆ. ಇಲ್ಲಿ ಊಟದ ಮೊದಲು, ಊಟದ ಸಂಗಡ, ಊಟದ ನಡುವೆ ಹಾಗೂ ಊಟವಾದಮೇಲೆ ಔಷಧವನ್ನು ಸೇವಿಸಲು ಹೇಳಿದ್ದಾರೆ.

ಊಟದ ಮೊದಲು:– ಅಪಾನ ವಾತವು ವಿಗುಣವಾಗಿದ್ದರೆ ಅಲ್ಲಿಗೆ ಊಟದ ಮೊದಲು ಔಷಧವನ್ನು ಕೊಡಬೇಕು.

ಊಟದ ಸಂಗಡ:– ಅರುಚಿಯಿದ್ದರೆ ಅಲ್ಲಿಗೆ ವಿವಿಧ ಸುಸ್ವಾದು ಅಲ್ಹಾದಕರ ಭೋಜನದೊಡನೆ ಔಷಧವನ್ನು ಕೂಡಿಸಿ ಕೊಡಬೇಕು.

ಊಟದ ನಡುವಿನಕಾಲ:– ಸಮಾನ ವಾತವು ವಿಗುಣವಾಗಿದ್ದರೆ, ಅಗ್ನಿಮಾಂದ್ಯವಿದ್ದರೆ ಸಮಾನವಾತದ ಗತಿಯನ್ನು ಸಮ್ಯಕ್‌ಮಾಡಲು ಹಾಗೂ ಅಗ್ನಿದೀಪ್ತ ಮಾಡುವಂಥ ಔಷಧವನ್ನು ಊಟದ ನಡುವೆ ಸೇವಿಸಬೇಕು.

ಊಟದ ನಂತರದಕಾಲ:– ವ್ಯಾನವಾತ ಪ್ರಕುಪಿತವಾಗಿದ್ದರೆ ಹಿಕ್ಕಾ, ಆಕ್ಷೇಪಕ ಕಂಪ ಈ ವಿಕಾರಗಳಲ್ಲಿ ಊಟವಾದಮೇಲೆ ಔಷಧವನ್ನು ಕೊಡಬೇಕು.

3) ತೃತೀಯಕಾಲ:–

उदाने कुपिते वाते स्वरभंगादि कारिणि ।
ग्रासे ग्रासांतरे देयं भैषज्यं सान्ध्य भोजने ।।
प्राणे प्रदुष्टे सांध्यस्य भुक्तस्यांते च दीयते ।
औषधं प्रायशो धीरः कालेऽयं स्यात्तृतीयकः ।। (शा. सं.)

ತೃತೀಯ ಕಾಲವು ರಾತ್ರಿಯ ಭೋಜನದ ಕಾಲವಿರುತ್ತದೆ. ಉದಾನ ವಾಯು ಪ್ರಕುಪಿತವಾಗಿದ್ದರೆ, ಸ್ವರಭಂಗ, ಮೂಕತ್ವ, ಕಂಠರೋಗಗಳಲ್ಲಿ ಪ್ರತಿಯೊಂದು ತುತ್ತಿಗೆ ಔಷಧವನ್ನು ಕೊಡಬೇಕು.

ಪ್ರಾಣವಾಯುವಿನ ಪ್ರಕೋಪದಲ್ಲಿ ಸಾಯಂಕಾಲದ ಭೋಜನಾನಂತರ ಔಷಧ ಸೇವನೆಮಾಡಬೇಕು.

4) ಚತುರ್ಥ ಕಾಲ:–

मुहुर्मुहुश्च तृट् च्छर्दि हिक्काश्वास गरेषु च ।
सान्नं च भेषजं दद्यात् इति कालश्चतुर्थकः ।। (शा. सं.)

ಚತುರ್ಥಕಾಲವು ಮೇಲಿಂದಮೇಲೆ ಔಷಧ ಸೇವನೆ ಮಾಡುವದು. ತೃಷ್ಣಾ, ಛರ್ದಿ, ಹಿಕ್ಕಾ, ಶ್ವಾಸಗಳಲ್ಲಿ, ವಿಷಸೇವನೆ ಮಾಡಿದವನಿಗೆ ಮೇಲಿಂದಮೇಲೆ ಅನ್ನದೊಡನೆಯಾಗಲಿ, ಕೇವಲ ಔಷಧವನ್ನಾಗಲಿ ಕೊಡಬೇಕು.

5) ಪಂಚಮಕಾಲ:–

ऊर्ध्वजत्रु विकारेषु लेखने बृंहणे तथा ।
पाचनं शमनं देयमनन्नं भेषजं निशि ।।
इति पंचम कालः स्यात् प्रोक्तो भैषज्य कर्मणि । (शा. सं.)

ಜತ್ರುವಿನ ಊರ್ಧ್ವಭಾಗದಲ್ಲಿ ಆಗುವಂಥ ಕರ್ಣರೋಗ, ನಾಸಾರೋಗ, ಮುಖ ರೋಗ, ಕಂಠರೋಗ, ಅಕ್ಷಿರೋಗಗಳಲ್ಲಿ ಲೇಖನಮಾಡುವದರ ಸಲುವಾಗಿ ಬೃಂಹ ಣಾರ್ಥ ರಾತ್ರಿಯಲ್ಲಿ ಅನನ್ನ ಅಂದರೆ ಭೋಜನ ಮಾಡದೇ ಔಷಧವನ್ನು ಕೊಡಬೇಕು. ರಾತ್ರಿ ಎಂದರೆ ರಾತ್ರಿಯ ಮೊದಲನೆಯ ಪ್ರಹರ ಎಂದು ಅರ್ಥ ಮಾಡಬೇಕು.

ಸುಶ್ರುತೋಕ್ತ ದಶ ಔಷಧ ಸೇವನಕಾಲ:—

अत ऊर्ध्वं दशौषध कालान् वक्ष्याम: ।
तत्राभक्तं प्राग्भक्त मधोभक्तं मध्येभक्त मंतराभक्तं सभक्तं ।
सामुद्गं मुहुः मुहुः ग्रासं, ग्रासांतरं चेति दशौषध काला: ।
(सु. उ. अ. ६४)

ದಶ ಔಷಧಿ ಸೇವನ ಕಾಲಗಳು:—

1) ಅಭಕ್ತ 2) ಪ್ರಾಗ್ಭಕ್ತ 3) ಅಧೋಭಕ್ತ 4) ಮಧ್ಯಭಕ್ತ 5) ಅಂತರಾ ಭಕ್ತ 6) ಸಾಮುದ್ಗ 7) ಮುಹುಃ ಮುಹುಃ 8) ಗ್ರಾಸೆ 9) ಗ್ರಾಸಾಂತರೆ 10) ಸಭಕ್ತ

1) ಅಭಕ್ತ:—

तत्राभक्तं तु यत् केवलमेवौषधमुपयुज्यते ।
वीर्याधिकं भवति भेषजं अन्नहीनं ।
हन्यात्तथाऽऽमयमसंशयमाशु चैव ।।
तद्बालवृद्ध वनिता मृदवस्तु पीत्वा ।
ग्लानिं परां समुपयाति बलक्षयं च ।

ಅನ್ನಸೇವನೆ ಮಾಡದೆ ಕೇವಲ ಔಸಧ ಸೇವನೆ ಮಾಡುವದರಿಂದ ಔಸಧವು ಅಧಿಕ ಶಕ್ತಿಶಾಲಿಯಾಗುವದು. ಈ ಪ್ರಕಾರ ತೆಗೆದುಕೊಂಡಂಥ ಔಷಧವು ಶೀಘ್ರವಾಗಿ ನಿಶ್ಚಯವಾಗಿ ರೋಗಹರಣ ಮಾಡುವದು.

ಈ ವಿಧಿಯಂತೆ ಬಾಲ, ವೃದ್ಧ, ಕೋಮಲ ಪ್ರಕೃತಿಯವರಿಗೆ ಔಷಧವನ್ನು ಕೊಟ್ಟರೆ ಗ್ಲಾನಿ, ಬಲಕ್ಷಯಗಳು ಉಂಟಾಗುತ್ತವೆ.

2) ಪ್ರಾಗ್ಭಕ್ತ:—

प्राग्भक्तं नाम प्रोक्तं यत् प्राग्भक्तस्य उपयुज्यते ।
शीघ्रं विपाकमुपयाति बलं नहिंस्या ।
दन्नावृतं न च मुखाद्वदनाद्विरेति ।
प्राग्भक्त सेवितमथौषध मेतदेव ।
दद्याच्च वृद्धशिशु भीरु कृशांगनाभ्यः ।

ಭೋಜನ ಪೂರ್ವ ಔಷಧ ಸೇವನೆ ಮಾಡುವದು ಪ್ರಾಗ್ಭಕ್ತ ಕಾಲವು. ಈ ಕಾಲದಲ್ಲಿ ಔಷಧ ಸೇವನೆ ಮಾಡುವದರಿಂದ ಔಷಧದ ಪಚನವು ತೀವ್ರವಾಗಿ ಆಗುತ್ತದೆ. ಈ ಔಷಧವು ಅನ್ನಾವೃತವಾಗುವದರಿಂದ ಬಲಕ್ಷಯವನ್ನು ಮಾಡುವದಿಲ್ಲ. ಹಾಗೂ ಮುಖದಿಂದ ತಿರುಗಿಬರುವ ಸಂಭವವಿರುವದಿಲ್ಲ. ಆದ್ದರಿಂದ ಈ ಕಾಲದಲ್ಲಿ ವೃದ್ಧ, ಬಾಲಕ, ಸ್ತ್ರೀ, ಭೀರುಗಳಿಗೆ ಔಷಧವನ್ನು ಕೊಡಬೇಕು.

3) ಅಧೋಭಕ್ತ:-

अधोभक्तं नाम यदधो भक्तस्येति ।
पीतं यदन्न उपयुज्य तदूर्ध्वं काये ।
हन्याद् गदान् बहुविधांश्च बलं ददाति ।

ಭೋಜನಾನಂತರ ಔಷಧ ಸೇವನೆಮಾಡುವದು ಅಧೋಭಕ್ತ ಕಾಲವು. ಭೋಜನ ಮಾಡಿ ಸೇವನೆ ಮಾಡಿದ ಔಷಧಿಯು ಶರೀರದ ಊರ್ಧ್ವಭಾಗದಲ್ಲಿ (ಶಿರ, ಜತ್ರು, ಕರ್ಣ, ನಾಸಾದಿ) ಆದಂಥ ರೋಗಗಳನ್ನು ನಾಶಮಾಡುತ್ತದೆ. ಮತ್ತು ಬಲಪ್ರದ ವಿರುತ್ತದೆ.

4) ಮಧ್ಯಭಕ್ತ:-

मध्ये भक्तं नाम यन्मध्ये भक्तस्य पीयते ।
मध्ये तु पीतमपहंति अविसारि भावा ।
ये मध्यदेहमभिभूय भवंति रोगाः ।

ಮಧ್ಯಭಕ್ತವೆಂದರೆ ಊಟದ ನಡುವೆ ಔಷಧ ಸೇವನೆಮಾಡುವದು. ಭೋಜನ ಮಧ್ಯದಲ್ಲಿ ಸೇವಿಸಿದ ಔಷಧವು ಅತ್ತ ಇತ್ತ ಪಸರಿಸದೇ ಕೋಷ್ಠದಲ್ಲಿಯ ವ್ಯಾಧಿಗಳನ್ನು ಶಮನ ಮಾಡುತ್ತದೆ.

5) ಅಂತರಾಭಕ್ತ:-

अंतराभक्तं नाम यदंतरा पीयते पूर्वापरयोर्भक्तयोः ।
हृद्यं मनोबलकरं त्वथ दीपनं च ।
पथ्यं सदा भवति चांतरभक्तकं यत् ।

ಪ್ರಾತಃಕಾಲದ ಭೋಜನ ಹಾಗೂ ಸಾಯಂಕಾಲದ ಭೋಜನದ ನಡುವೆ ಔಷಧ ವನ್ನು ಸೇವಿಸುವ ಕಾಲವು ಅಂತರಾಭಕ್ತವು.

ಅಂತರಾಭಕ್ತ ಕಾಲದಲ್ಲಿ ಸೇವಿಸಿದ ಔಷಧವು ಹೃದ್ಯ, ಮನಸ್ಸಿಗೆ ಬಲವನ್ನು ಕೊಡುವಂಥದು. ದೀಪನೀಯ ಇರುತ್ತದೆ.

6) ಸಭಕ್ತಃ-

सभक्तं नाम यत् सहभक्तेन ।
पथ्यं सभक्तमबलाबल योर्हि नित्यं ।
तद् द्वेषिणां अपि तथा शिशु वृद्धयोश्च ।

ಭೋಜನದಲ್ಲಿ ಮಿಶ್ರಮಾಡಿ ತೆಗೆದುಕೊಂಡಂಥ ಔಷಧವು ಸ್ತ್ರೀ ದುರ್ಬಲಪುರುಷ, ಔಷಧೀದ್ವೇಷಿ, ಬಾಲಕ, ವೃದ್ಧರಿಗೆ ಪಥ್ಯಕರವಿರುತ್ತದೆ.

7) ಸಾಮುದ್ಗಃ-

सामुद्गं नाम यत् भक्तस्य आदौ अंतौ च पीयते ।
दोषे द्विधा प्रविसृते च सामुद्ग संज्ञ-
माद्यंतयोर्यदशनस्य निषेव्यते तु ।

ದೋಷಗಳು ಶರೀರದ ಊರ್ಧ್ವ ಅಧೋಭಾಗದಲ್ಲಿ ಪಸರಿಸಿದ್ದರೆ ಮೊದಲು ಔಷಧ, ನಂತರ ಊಟ ಆಮೇಲೆ ಪುನಃ ಔಷಧ ಸೇವನೆ ಮಾಡಬೇಕು.

8) ಮುಹುಃ ಮುಹುಃ :-

मुहुर्मुहुः नाम सभक्तमभक्तं वा यदौषधं मुहुःमुहुः उपयुज्यते ।
श्वासे मुहुर्मुहुः अति प्रसृते च कासे ।
हिक्कावमीषु स वदंति उपयोज्यमेतत् ।

ಶ್ವಾಸ, ಕಾಸಗಳ ತೀವ್ರವೇಗದಲ್ಲಿ ಮೇಲಿಂದಮೇಲೆ ಛರ್ದಿಯಾಗುತ್ತಿದ್ದರೆ ಹಿಕ್ಕಾದಲ್ಲಿ, ಊಟದೊಡನೆ ಅಥವಾ ಊಟಮಾಡದೇ ಮೇಲಿಂದಮೇಲೆ ಔಷಧ ಸೇವನೆಯನ್ನು ಮಾಡಬೇಕು.

9) ಗ್ರಾಸಃ-

ग्रासं तु यत् पिण्ड व्यामिश्रम् ।
ग्रासेषु चूर्णमबलाग्निषु दीपनीयं ।
वाजीकराण्यपि तु योजयितुं यतेत ।

ಯಾವ ವ್ಯಕ್ತಿಯು ದುರ್ಬಲನಿರುವನೋ, ಅವನ ಅಗ್ನಿಯನ್ನು ಬೆಳಸುವದರ ಸಲುವಾಗಿ ದೀಪನೀಯ ಔಷಧಿಗಳನ್ನು ಪ್ರಥಮ ಕವಲದಲ್ಲಿ ಕೂಡಿಸಿ ಕೊಡಬೇಕು. ಅದರಂತೆ ವಾಜೀಕರಣಕ್ಕಾಗಿ ಪ್ರತಿಯೊಂದು ತುತ್ತಿನಲ್ಲಿ ಔಷಧ ಚೂರ್ಣವನ್ನು ಕೂಡಿಸಿ ಕೊಡಬೇಕು.

10) ಗ್ರಾಸಾಂತರೇ:-

ग्रासांतरं तु यद् ग्रासांतरेषु ।
ग्रासांतरेषु वितरेद्वमनीय भूमान् ।
श्वासादिषु प्रथितदृष्ट गुणांश्च लेहान् ।

ಶ್ವಾಸಾದಿ ರೋಗಗಳಲ್ಲಿ ವಾಮಕ ದ್ರವ್ಯಗಳ ಧೂಮವನ್ನು ಕೊಡಬೇಕು. ಅದರಂತೆ ಲೇಹಗಳನ್ನಾದರೂ ಎರಡು ತುತ್ತಿನ ನಡುವೆ ಸೇವಿಸಬೇಕು.

ಈ ಪ್ರಕಾರ ಸುಶ್ರುತದಲ್ಲಿ ಹತ್ತು ಔಷಧೀ ಸೇವನಕಾಲಗಳನ್ನು ಹೇಳಿದ್ದಾರೆ.

ವಾಗ್ಭಟೋಕ್ತ ದಶ ಔಷಧ ಸೇವನ ಕಾಲಗಳು:—

युञ्ज्यादनन्नमन्नादौ मध्येऽन्ते कवलांतरे ।
ग्रासे ग्रासे मुहुःसान्नं सामुद्गं निशि चौषधम् ।। (अ. हृ. सू. १३)

1) ಅನನ್ನ 2) ಅನ್ನಾದೌ 3) ಊಟದ ನಡುವೆ 4) ಊಟದನಂತರ 5) ಕವಲಾಂತರೆ 6) ಗ್ರಾಸೆ (ತುತ್ತುತುತ್ತಿಗೆ) 7) ಮುಹುಃ ಮುಹುಃ 8) ಸಾನ್ನಂ 9) ಸಾಮುದ್ಗ 10) ರಾತ್ರಿಯ ವೇಳೆಯಲ್ಲಿ.

कफोद्रेके गदेऽनन्नं बलिनो रोग रोगिणोः ।
अन्नादौ विगुणेऽपाने, समाने मध्य इष्यते ॥
व्यानेऽन्ते प्रातराशस्य सायमाशस्य तूत्तरे ।
ग्रास ग्रासांतयोः प्राणे प्रदुष्टे मातरिश्वनि ॥
मुहुःमुहुः विषश्छार्दि हिध्मातृट् श्वास कासिषु ।
योज्यं सभोज्यं भैषज्यं भोज्यैश्चित्रैररोचके ।।
कम्पाक्षेपक हिध्मासु सामुद्गं लघु भोजिनाम् ।
ऊर्ध्वं जत्रु विकारेषु स्वप्नकाले प्रशस्यते । (वा. सू. अ. १३)

1) ಕಫಜ ರೋಗಗಳಲ್ಲಿ ರೋಗ ರೋಗಿಯ ಬಲಾಬಲಗಳನ್ನು ನೋಡಿಕೊಂಡು ಪ್ರಾತಃಕಾಲದಲ್ಲಿ ಔಷಧವನ್ನು ಕೊಡಬೇಕು. ಇದು ಅನನ್ನ ಕಾಲವು.
2) ಊಟದ ಮೊದಲು (ಅನ್ನಾದೌ) ಅಪಾನವಾತದ ವಿಗುಣತೆಯಲ್ಲಿ ಭೋಜನದ ಮೊದಲು ಔಷಧವನ್ನು ಕೊಡಬೇಕು.
3) ಸಮಾನ ವಾಯುವಿನ ವೈಗುಣದಲ್ಲಿ ಭೋಜನದ ಮಧ್ಯದಲ್ಲಿ ಔಷಧವನ್ನು ಕೊಡಬೇಕು.
4) ವ್ಯಾನ ವಾತದ ವಿಗುಣತೆಯಲ್ಲಿ ಊಟವಾದಮೇಲೆ ಔಷಧವನ್ನು ಕೊಡಬೇಕು.

5) ಉದಾನ ಪ್ರಕೋಪದಲ್ಲಿ ಸಾಯಂಕಾಲದ ಊಟದ ನಂತರ ಔಷಧವನ್ನು ಕೊಡಬೇಕು.

6) ಪ್ರಾಣವಾತದ ದುಷ್ಟಿಯಲ್ಲಿ ತುತ್ತಿನಲ್ಲಿ ಕೂಡಿಸಿ ಹಾಗೂ ಎರಡು ತುತ್ತುಗಳ ನಡುವೆ ಔಷಧವನ್ನು ಕೊಡಬೇಕು.

7) ವಿಷಜುಷ್ಟ, ಛರ್ದಿ, ಹಿಕ್ಕಾ, ತೃಷ್ಣಾ, ಶ್ವಾಸಕಾಸ ರೋಗಗಳಲ್ಲಿ ಮೇಲಿಂದ ಮೇಲೆ ಔಷಧವನ್ನು ಕೊಡಬೇಕು.

8) ಅರೋಚಕದಲ್ಲಿ ಅನೇಕವಿಧ ಭೋಜ್ಯ ಪದಾರ್ಥಗಳೊಡನೆ ಔಷಧವನು ಕೂಡಿಸಿ ಕೊಡಬೇಕು. ಇದು ಸಾನ್ನ ಔಷಧ ಕಾಲವು.

9) ಹಿಕ್ಕಾ ರೋಗದಲ್ಲಿ ಕಂಪ ಆಕ್ಷೇಪಕಗಳಲ್ಲಿ ಮೊದಲು ಔಷಧ, ನಂತರ ಲಘುಭೋಜನ ಪುನಃ ಔಷಧ ಸೇವನೆ ಮಾಡಬೇಕು. ಇದು ಸಾಮುದ್ಗ ಔಷಧ ಸೇವನೆಯ ರೀತಿಯಿರುತ್ತದೆ.

10) ಊರ್ಧ್ವಜತ್ರು ವಿಕಾರಗಳಲ್ಲಿ ರಾತ್ರಿಯಲ್ಲಿ ಮಲಗುವ ವೇಳೆಗೆ ಔಷಧವನ್ನು ಕೊಡಬೇಕು. ಇದು ಸ್ವಪ್ನಕಾಲವು.

ಅನುಪಾನ ವಿಷಯ ವಿಚಾರಃ—

यथा तैलं जले क्षिप्तं क्षणेनैव प्रसर्पति ।
अनुपान बलादंगे तथा सर्पति भेषजम् । (शा. स.)

ನೀರಿನಲ್ಲಿ ಹಾಕಿದ ತೈಲಬಿಂದುವು ಕ್ಷಣದಲ್ಲಿ ನೀರಿನತುಂಬ ಪಸರಿಸುವಂತೆ ಅನ್ನುಪಾನದಿಂದ ತೆಗೆದುಕೊಂಡಂಥ ಔಷಧಿಯು ದೇಹದಲ್ಲಿ ಪಸರಿಸಿ ಕಾರ್ಯ ಮಾಡುತ್ತದೆ.

ಅನುಪಾನವೆಂದರೆ:-

अनुपश्चात् पीयते इत्यनुपानम् ।
अनुपान यत् नियतकालं विधिवशात् पीयते तत् ।
(हेमाद्रि टीका)

ಊಟವಾದಮೇಲೆ ಯಾವದೇ ಪದಾರ್ಥ ಸೇವನೆಯನಂತರ ಅಥವಾ ಔಷಧ ಸೇವನೆಯ ನಂತರ ತೆಗೆದುಕೊಳ್ಳುವ ದ್ರವ ವಿಶೇಷಪಾನವು ಅನುಪಾನವು.

ಅನುಪಾನದ ಗುಣಧರ್ಮ:-

रोचनं बृंहणं वृष्यं दोष संघात भेदनम् ।
तर्पणं मार्दवकरं श्रमक्लमहरं सुखम् ॥
दीपनं दोषशमनं पिपासाच्छेदनं परम् ।
बल्यं वर्णकरं सम्यगनुपानं सदोच्यते ॥ (सु सू. ४६)

अनुपानं करोत्यूर्जां तृप्ति व्याप्ति दृढांगताम् ।
अन्न संघात शैथिल्य विक्लित्ति जरणानि च ।। (अ. सू. ८)

ಆಯಾ ರೋಗಗಳಲ್ಲಿ ಔಷಧ, ಅನ್ನಗಳವಿಚಾರಮಾಡಿ, ಅವುಗಳಿಗೆ ಅನುಗುಣ ವಾಗಿ ಕೊಟ್ಟಂಥ ಅನುಪಾನವು ರುಚಿಕರ, ಶರೀರ ಪುಷ್ಟಿಕರ, ವೃಷ್ಯ, ದೋಷಗಳ ಸಂಘಾತವನ್ನು ನಾಶಮಾಡುವಂಥದು, ತೃಪ್ತಿಕಾರಕ, ಮಾರ್ದವತೆಯನ್ನು ಉಂಟು ಮಾಡುವಂಥದು, ಅಗ್ನಿದೀಪಕ, ದೋಷಶಾಮಕ, ತೃಷ್ಣಾನಾಶಕ, ಬಲ, ವರ್ಣಗಳ ನ್ನುಂಟು ಮಾಡುವಂಥದು ಇರುತ್ತದೆ.

तदादौ कर्शयेत् पीतं स्थापयेन्मध्य सेवितम् ।
पश्चात् पीतं बृंहयति तस्मात् वीक्ष्य प्रयोजयेत् ।
(सु. सू, अ. ४६)

सम स्थूल कृशा भुवतमध्यांत प्रथमांब्रुपाः ।। (वा. सू. अ. ५)

ಭೋಜನ ಪೂರ್ವದಲ್ಲಿ ಸೇವಿಸಿದ ಅನುಪಾನವು ಶರೀರಕಾರ್ಶಕ್ಕೆ ಕಾರಣ ವಾಗುತ್ತದೆ. ಭೋಜನ ಮಧ್ಯದಲ್ಲಿ ಸೇವಿಸಿದ ಅನುಪಾನವು ಶರೀರವನ್ನು ಸ್ಥಿರವಾಗಿ ಇಡುತ್ತದೆ. ಭೋಜನಾನಂತರ ಸೇವಿಸಿದ ಅನುಪಾನವು ಬೃಂಹಣ ಮಾಡುತ್ತದೆ.

ಅನುಪಾನವನ್ನು ಹೇಳದಿದ್ದರೆ ಅಲ್ಲಿಗೆ ಜಲವನ್ನು ಅನುಪಾನವೆಂದು ತಿಗೆದು ಕೊಳ್ಳಲು ಹೇಳಿದ್ದಾರೆ.

सर्वेषामनुपानानां माहेंद्रं तोयमुत्तमम् ।
सात्म्यं वा यस्य यत्तोयं तत् तस्मै हितमुच्यते ।।
उष्णं वाते कफे तोयं पित्ते रक्ते च शीतलम् । (सु. सू. अ. ४६)

ಎಲ್ಲ ಅನುಪಾನಗಳಲ್ಲಿ "ಅಂತರಿಕ್ಷ" ಜಲವು ಶ್ರೇಷ್ಠವಿರುತ್ತದೆ. ಅಥವಾ ಯಾವ ಜಲವು ಸಾತ್ಮ್ಯವಿರುತ್ತದೆಯೋ ಅದನ್ನು ಉದಾ:- ನದೀ, ತಡಾಗ ಆದಿಗಳ ಜಲ ವನ್ನು ಸೇವಿಸಬೇಕು. ವಾತ ಹಾಗೂ ಕಫಾತ್ಮಕ ರೋಗದಲ್ಲಿ ಉಷ್ಣ ಜಲವನ್ನು ಪಿತ್ತ ಹಾಗೂ ರಕ್ತಜ ರೋಗಗಳಲ್ಲಿ ಶೀತ ಜಲವನ್ನು ಸೇವಿಸಬೇಕು.

ಅನುಪಾನ ನಿಷಿದ್ಧ:-

न पिबेत् श्वासकासार्तो रोगे चाप्यूर्ध्व जत्रुगे ।
क्षतोरस्क : प्रसेकी च यस्य चोपहतः स्वरः ।। (सु. सू. ४६)
नोर्ध्व जत्रु गदश्वास कासोरः क्षत पीनसे । (अ. सू. अ. ८)

ಶ್ವಾಸ ಕಾಸ ಪೀಡಿತ, ಊರ್ಧ್ವಜತ್ರು ರೋಗವುಳ್ಳವರು, ಉರಃಕ್ಷತ ರೋಗಿಗಳು ಸ್ವರಭಂಗ ರೋಗಿಗಳು ಅನುಪಾನವನ್ನು ಸೇವಿಸಬಾರದು.

ಅನುಪಾನಾನಂತರ ಮಾಡುವವಿಧಿಃ—

पीत्वाऽध्व भाष्याध्ययन गेय स्वप्नान्न शीलयेत् ।
प्रदूष्यामाशयं तद्धि तस्य कण्ठोरसि स्थितम् ।
स्यंदाग्निसादच्छर्द्यादीनामयाञ्जनयेत् बहून् । (सु. सू. अ. ४६)
सर्वश्च भाष्याध्वशयनं त्यजेत् । (अ. सू. अ. ८)

ಅನುಪಾನವನ್ನು ಸೇವಿಸಿದ ನಂತರ ಮಾರ್ಗಕ್ರಮಣ ಮಾಡುವದು, ಅತಿ ಒದರಿ ಮಾತನಾಡುವದು, ಹಾಡುವದು, ಮಲಗುವದನ್ನು ಮಾಡಬಾರದು. ಒಂದು ವೇಳೆ ಮಾಡಿದಲ್ಲಿ ಅನುಪಾನವು ಆಮಾಶಯದಲ್ಲಿಯೇ ಉಳಿದು ದೂಷಿತವಾಗಿ ಅಗ್ನಿಮಾಂದ್ಯ ಛರ್ದಿ, ಅಭಿಷ್ಯಂದವನ್ನುಂಟು ಮಾಡುವದು.

ಅನುಪಾನಗಳುः—

शीतोष्ण तोयासव मद्ययूष फलाम्ल धान्याम्ल पयोरसानाम् ।
(सु, सू. अ. ४६)

ಶೀತಜಲ, ಉಷ್ಣಜಲ, ಆಸವ, ಮದ್ಯ, ಯೂಷ, ಫಲಾಮ್ಲ, ಕಾಂಜಿ, ದುಗ್ಧ, ಮಾಂಸರಸ ಈ ಅನುಪಾನಗಳನ್ನು ಆಯಾ ಭಕ್ಷ್ಯ ಭೋಜ್ಯಗಳಿಗೆ ಅನುಸಾರವಾಗಿ ಸೇವಿಸಬೇಕು.

यस्यानुपानं तु हितं भवेद्यत्तस्मै प्रदेयं त्विह मात्रया तत् ।
व्याधिं च कालं च विभाव्य धीरै–
र्द्रव्याणि भोज्यानि च तानि तानि । (सु. सू. अ. ४६)

ಮೇಲಿನ ಅನುಪಾನಗಳಲ್ಲಿ ಯಾವ ರೋಗದಲ್ಲಿ, ಯಾವ ಅನ್ನದಲ್ಲಿ, ಯಾವುದು ಯೋಗ್ಯವೋ ಅದನ್ನು ಯೋಜಿಸಬೇಕು. ಧೀರನಾದ ವೈದ್ಯನು ರೋಗ, ಕಾಲ, ಔಷಧ, ಭಿನ್ನ ಭಿನ್ನ ಪ್ರಕಾರದ ಭೋಜ್ಯದ್ರವ್ಯ ಇವುಗಳ ಬಗ್ಗೆ ಸಂಪೂರ್ಣ ವಿಚಾರ ಮಾಡಿ ಉಪಯೋಗಿಸಬೇಕು.

ಇನ್ನು ವಿಸ್ತಾರವಾಗಿ ಯಾವರೀತಿಯಲ್ಲಿ ಅನುಪಾನವನ್ನು ಸೇವಿಸಬೇಕು ಎಂಬುದನ್ನು ಹೇಳುತ್ತಾರೆ.

उष्णोदकानुपानं तु स्नेहानामथ शस्यते ।
ऋते भल्लातक स्नेहात् स्नेहात्तौवरकात्तथा ॥
अनुपानं वदंत्येके तैले यूषाम्ल काञ्जिकम् ।
शीतोदकं माक्षिकस्य पिष्टान्नस्य च सर्वशः ॥
दधिपायस मद्यार्ति विषजुष्टे तथैव च ।
केचित् पिष्टमयस्याहुः अनुपानं सुखोदकम् । (सु. सू. अ. ४६)

ದ್ರವ್ಯ	ಅನುಪಾನ
ಸ್ನೇಹ	ಉಷ್ಣ ಜಲ
ಭಲ್ಲಾತಕ, ತುವರಕ ಸ್ನೇಹ	ಶೀತಜಲ
ತೈಲ	ಕಾಂಜಿ, ಯೂಷ
ಮಧು, ಪಿಷ್ಟಾನ್ನ	ಶೀತಲಜಲ
ದಧಿ, ಪಾಯಸ, ಮದ್ಯ ಮದಾತ್ಯಯ, ವಿಷಜುಷ್ಟ	ಸುಖೋದಕ

पयो मांसरसो वाऽपि शालिमुद्गादि भोजिनाम् ।
युद्धाध्वातप संताप विष मद्य रुजासु च ।।
माषादेरनुपानं तु धान्याम्लं दधि मस्तु वा ।
मद्यं मद्योचितानां तु सर्वं मांसेषु पूजितम् ।
अमद्यपानामुदकं फलाम्लं वा प्रशस्यते ।
क्षीरं घर्माध्व भाष्य स्त्री क्लांतानाममृतोपमम् ।।
सुरा कृशानां स्थूलानामनुपानं मधूदकम् ।
निरामयानां चित्रं तु भुक्तमध्ये प्रकीर्तितम् ।।
स्निग्धोष्णं मारुते पथ्यं, कफे रूक्षोष्ण मिष्यते ।
अनुपानं हितं चापि पित्ते मधुर शीतलम् ।
हितं शोणित पित्तिभ्यः क्षीरमिक्षु रसस्तथा ।।
अर्क शेलु शिरीषाणामासवास्तु विषार्तिषु । (सु. सू. ४६)

1) ಶಾಲಿಧಾನ್ಯ, ಮುದ್ಗ ಯುದ್ಧ, ಆತಪ, ಅಗ್ನಿಸಂತಾಪ ವಿಷ, ಮದ್ಯಪೀಡಿತರು	ಪಯ, ಮಾಂಸರಸ
2) ಉದ್ದು, ಉದ್ದಿನ ಪದಾರ್ಥದಲ್ಲಿ	ದಧಿ, ದಧಿಮಸ್ತು, ಕಾಂಜಿ, ಮದ್ಯ
3) ಮಾಂಸ	ಮದ್ಯ
4) ಅಮದ್ಯಪಾನಸೇವಿ, ಮಾಂಸಸೇವಿ ಅಧ್ವ, ಆತಪ, ಭಾಷ್ಯ, ಸ್ತ್ರೀ ಸೇವನ ದಿಂದ ಕ್ಲಾಂತರಾದವರಿಗೆ	ಕ್ಷೀರ
5) ಕೃಶ ಮನುಷ್ಯರಿಗೆ	ಸುರಾ
6) ಸ್ಥೂಲ ಮನುಷ್ಯರಿಗೆ	ಮಧೂದಕ
7) ಸ್ವಸ್ಥರಿಗೆ	ಊಟದ ಮಧ್ಯದಲ್ಲಿ ಸ್ನಿಗ್ಧೋಷ್ಣ ರೂಕ್ಷ ಅನೇಕವಿಧ ಅನುಪಾನ
8) ವಾತರೋಗಿ	ಸ್ನಿಗ್ಧ, ಉಷ್ಣ

9) ಕಫರೋಗಿ — ರೂಕ್ಷ, ಉಷ್ಣ
10) ಪಿತ್ತರೋಗಿ — ಮಧುರ, ಶೀತಲ
11) ರಕ್ತಪಿತ್ತ ರೋಗಿ — ಮುಗ್ಧ, ಇಕ್ಷುರಸ
12) ವಿಷಜುಷ್ಟ ರೋಗಿ — ಅರ್ಕ, ಶಿರೀಷಗಳಿಂದ ಮಾಡಿದ ಆಸವ

ಅಷ್ಟಾಂಗ ಹೃದಯ ಸೂತ್ರಸ್ಥಾನದಲ್ಲಿ ಅನುಪಾನ ವಿಷಯವಬಗ್ಗೆ ಹೀಗೆ ಹೇಳಿದ್ದಾರೆ.

अनुपानं हिमं वारि यवगोधूमयोर्हितम् ।
दध्निमद्ये विषे क्षौद्रे, कोष्णं पिष्टमयेषु तु ॥
शाक मुद्गादि विकृतौ मस्तु तक्राम्ल काञ्जिकम् ।
सुरा कृशानां पुष्टचर्थं, स्थूलानां तु मधूदकम् ।
शोषे मांसरसो, मद्यं मांसे स्वल्पे च पावके ।
व्याध्यौषधाध्व भाष्य स्त्री लंघनातप कर्मभिः ।
क्षीणेवृद्धे बाले च पयः पथ्यं यथाऽमृतम् ॥ (अ. सू. अ. ८)
विपरीतं यदन्नस्य गुणैः स्यादविरोधि च ।
अनुपानं समासेन, सर्वदा तत् प्रशस्यते ॥ (अ. सू. अ. ८)
अम्लेन केचिद्विहता मनुष्यामाधुर्य योगे प्रणयी भवंति ।
तथाऽम्लयोगे मधुरेण तृप्तास्तेषां यथेष्टं प्रवदंति पथ्यम् ।
(सु सू. अ. ४६)

ಸಾಮಾನ್ಯವಾಗಿ ಅನ್ನದ ವಿರುದ್ಧ ಗುಣವುಳ್ಳ, ಅವಿರೋಧಿಯಾದಂಥ ಅನುಪಾನವನ್ನು ಸೇವಿಸಬೇಕು. ಸ್ನಿಗ್ಧದಲ್ಲಿ ರೂಕ್ಷ, ರೂಕ್ಷದಲ್ಲಿ ಸ್ನಿಗ್ಧ, ಶೀತದಲ್ಲಿ ಉಷ್ಣ, ಉಷ್ಣದಲ್ಲಿ ಶೀತ, ಮಧುರದಲ್ಲಿ ಆಮ್ಲ, ಆಮ್ಲದಲ್ಲಿ ಮಧುರ ಅನುಪಾನಗಳನ್ನು ಸೇವಿಸಬೇಕು. ಆದರೆ ಈ ಅನುಪಾನವು ಅನ್ನವನ್ನು ದೂಷಿತ ಮಾಡುವಂಥದು ಇರಬಾರದು.

ಇನ್ನು ಕೆಲವೊಂದು ರೋಗಗಳಲ್ಲಿ ವಿಶಿಷ್ಟ ಅನುಪಾನವನ್ನು ಹೇಳಿದ್ದಾರೆ. ಅವನ್ನು ನೋಡೋಣ.

शूले हिंगुघृतान्वितं मधुयुता कृष्णा पुराण ज्वरे, वाते साज्य रसोनकः, श्वसनके क्षौद्रान्वितं त्र्यूषणं । शोथे व्याळजतादलं, समरीचं मेहे वरा सोपला, दोषाणां त्रितये अनुपानमुचित सक्षौद्रनाद्रोदकम् । घन पर्पटकं ज्वरे, ग्रहण्यां मथितं, हेम गरे वमीषु लाजाः । कुटजोऽतिसृतौ वृषोऽस्रपित्ते, गुडकोलेऽनलः, कृमौ कृमिघ्नः । (वै. जी.)

ರೋಗ	ಅನುಪಾನ
ಶೂಲ	ಹಿಂಗು ಹಾಗೂ ಘೃತ (ಘೃತಾನ್ವಿತಹಿಂಗು),
ಜೀರ್ಣಜ್ವರ	ಪಿಪ್ಪಲೀ ಮತ್ತು ಮಧು
ವಾತವ್ಯಾಧಿ	ರಸೋನ ಹಾಗೂ ಘೃತ
ಶ್ವಾಸ	ತ್ರಿಕಟು ಮತ್ತು ಮಧು
ಶೀತ	ತಾಂಬೂಲ ಮತ್ತು ಮರೀಚ
ಪ್ರಮೇಹ	ತ್ರಿಫಳಾ ಹಾಗೂ ಶರ್ಕರಾ
ಛರ್ದಿ	ಲಾಜಾ
ಅತಿಸಾರ	ಕುಟಜ
ರಕ್ತಪಿತ್ತ	ವಾಸಾ
ಅರ್ಶ	ಚಿತ್ರಕಮೂಲ
ಕೃಮಿ	ವಿಡಂಗ
ಅಜೀರ್ಣ	ಉಷ್ಣೋದಕ
ಸನ್ನಿಪಾತಜ್ವರ	ಆರ್ದ್ರಕ ಮತ್ತು ಮಧು
ಜ್ವರ	ನಾಗರಮೋಥಾ ಹಾಗೂ ಪರ್ಪಟ
ಗ್ರಹಣೀ	ತಕ್ರ
ವಿಷ	ಸ್ವರ್ಣಪತ್ರ
ಕ್ಷಯ	ಕ್ಷೀರ, ಮಾಂಸರಸ
ಪಾಂಡು	ಪುನರ್ನವಾ
ಕಾಸ	ವಾಸಾ

—: ಅನುಕ್ತಕಾಲ ಪರಿಭಾಷಾ :—

कालेऽनुक्ते प्रभातं स्यादंगेऽनुक्ते जटा भवेत् ।
भागेऽनुक्ते तु साम्यं स्यात्पात्रेऽनुक्ते च मृण्मयम् ॥
द्रवेऽनुक्ते जलं ग्राह्यं तैलेऽनुक्ते तिलोद्भवम् । (शा. सं.)

ಔಷಧ ಸೇವನ ಕಾಲವನ್ನು ಹೇಳಿರದಿದ್ದರೆ ಪ್ರಾತಃಕಾಲದಲ್ಲಿ ಔಷಧವನ್ನು ಸೇವಿಸಬೇಕು. ಔಷಧೀ ದ್ರವ್ಯದ ಅಂಗವನ್ನು ಹೇಳಿರದಿದ್ದರೆ ಅದರ ಮೂಲವನ್ನು ಗ್ರಹಣಮಾಡಬೇಕು. ಔಷಧೀ ದ್ರವ್ಯಗಳ ಪ್ರಮಾಣವನ್ನು ಹೇಳಿರದಿದ್ದರೆ ಎಲ್ಲ ದ್ರವ್ಯಗಳನ್ನು ಸಮಭಾಗ ತೆಗೆದುಕೊಳ್ಳಬೇಕು. ಔಷಧೀ ನಿರ್ಮಾಣದ ಸಲುವಾಗಿ ಪಾತ್ರೆಗಳನ್ನು ಹೇಳಿರದಿದ್ದರೆ ಅಲ್ಲಿಗೆ ಮೃತ್ತಿಕಾಪಾತ್ರೆಯನ್ನು ತೆಗೆದುಕೊಳ್ಳಬೇಕು. ನಿರ್ಮಾಣದ ಸಲುವಾಗಿ ದ್ರವವನ್ನು ಹೇಳಿರದಿದ್ದರೆ ಜಲವನ್ನು ಗ್ರಾಹ್ಯ ಮಾಡಬೇಕು. ಕೇವಲ ತೈಲವೆಂದಿದ್ದರೆ ಅಲ್ಲಿಗೆ ತಿಲತೈಲವನ್ನು ಉಪಯೋಗಿಸಬೇಕು.

एकमप्यौषधं योगे यस्मिन्यत्पुनरुच्यते ।
मानतो द्विगुणं प्रोक्तं तद् द्रव्यं तत्वदर्शिभिः ।। (शा. सं.)

ಯೋಗಗಳಲ್ಲಿ ಒಂದೇ ಔಷಧೀ ದ್ರವ್ಯವನ್ನು ಪುನಃ ಹೇಳಿದ್ದರೆ ಆ ದ್ರವ್ಯವನ್ನು ಎರಡುಪಟ್ಟು ತೆಗೆದುಕೊಳ್ಳಬೇಕು.

नवान्येव हि योज्यानि द्रव्याण्यखिल कर्मसु ।
विना विडंग कृष्णाभ्यां गुडधान्याज्य माक्षिकैः ।। (शा. सं.)

ಔಷಧೀ ಕರ್ಮದಲ್ಲಿ ವಿಡಂಗ, ಪಿಪ್ಪಲಿ, ಗುಡ, ಧಾನ್ಯ, ಘೃತ, ಮಧು ಇವುಗಳ ಹೊರತಾಗಿ ಯಾವಾಗಲೂ ಹೊಸ ದ್ರವ್ಯಗಳನ್ನೇ ಉಪಯೋಗಿಸಬೇಕು.

शुष्कं नवीनं यद् द्रव्यं योज्यं सकलकर्मसु ।
आर्द्रं च द्विगुणं युञ्ज्यादेष सर्वत्र निश्चयः ।। (शा. सं.)

ಔಷಧೀ ಕರ್ಮಗಳಲ್ಲಿ ಯಾವಾಗಲೂ ಶುಷ್ಕ ದ್ರವ್ಯಗಳನ್ನೇ ಉಪಯೋಗಿಸಬೇಕು. ಶುಷ್ಕ ದ್ರವ್ಯಸಿಗದಿದ್ದರೆ ಆ ದ್ರವ್ಯ ಹಸಿ ಇದ್ದರೆ ಅದನ್ನು ಎರಡುಪಟ್ಟು ತೆಗೆದುಕೊಳ್ಳಬೇಕು.

गुडूची कुटजो वासा कूष्मांडश्च शतावरी ।
अश्वगंधा सहचरी शतपुष्पा प्रसारिणी ।।
प्रयोक्तव्या सदैवार्द्रा द्विगुणा नैव कारयेत् । (शा. सं.)

ಗುಡೂಚಿ, ಕುಟಜ, ವಾಸಾ, ಕೂಷ್ಮಾಂಡ, ಶತಾವರಿ, ಅಶ್ವಗಂಧಾ, ಸಹಚರ, ಶತಪುಷ್ಪಾ, ಪ್ರಸಾರಿಣಿ ಈ ಔಷಧೀ ದ್ರವ್ಯಗಳನ್ನು ಸದೈವ ಆರ್ದ್ರ ಇದ್ದವುಗಳನ್ನೇ ತೆಗೆದುಕೊಳ್ಳಬೇಕು. ಆರ್ದ್ರ ಇದ್ದರೂ ದುಪ್ಪಟ್ಟು ತೆಗೆದುಕೊಳ್ಳಬಾರದು. ಹಿಂದಿನ ಶ್ಲೋಕದಲ್ಲಿ ಆರ್ದ್ರ ದ್ರವ್ಯಗಳನ್ನು ಎರಡುಪಟ್ಟು ತೆಗೆದುಕೊಳ್ಳಲು ಹೇಳಿದ್ದಾರೆ. ಅದಕ್ಕೆ ಇದು ಅಪವಾದ ಇರುವದು.

ರೋಗಾನುಸಾರ ಯುಕ್ತಾಯುಕ್ತ ದ್ರವ್ಯವಿಚಾರಃ—

व्याधेरयुक्तं यद् द्रव्यं गणोक्तमपि तत्त्यजेत् ।
अनुक्तमपि यद्युक्तं योजयेत्तत्र तद् बुधः ।। (शा. सं.)

ಯಾವದೇ ಯೋಗದಲ್ಲಿ ಯಾವದಾದರೊಂದು ದ್ರವ್ಯವು ಉಪಯುಕ್ತವಿಲ್ಲದಿದ್ದರೆ ಆಯಾ ರೋಗಾನುಸಾರವಾಗಿ ಆಯಾ ರೋಗಘ್ನ ದ್ರವ್ಯಗಳನ್ನು ಹೇಳಿರದಿದ್ದರೂ ತೆಗೆದುಕೊಳ್ಳಬೇಕು.

ದ್ರವ್ಯಗಳು ಹೀನವೀರ್ಯವಾಗುವ ಕಾಲಃ—

गुणहीनं भवेद्वर्षादूर्ध्वं तद्रूपमौषधम् ।
मासद्वयात्तथा चूर्णं हीन वीर्यत्वमाप्नुयात् ।

हीनत्वं गुटिका लेहौ लभ्यते वत्सरात्परम् ॥
हीनाः स्युः घृत तैलाद्याः चतुर्मासाधिकास्तथा ।
औषध्यो लघुपाकाः स्युर्निर्वीर्या वत्सरात्परम् ॥
पुराणाः स्युः गुणैर्युक्ता आसवा धातवो रसाः । (नि. र.)

ಯಾವದೇ ದ್ರವ್ಯವು ಒಂದು ವರ್ಷಾನಂತರ ಹೀನವೀರ್ಯದ್ದು ಆಗುತ್ತದೆ. ಚೂರ್ಣಿತ ಔಷಧಗಳು ಎರಡು ತಿಂಗಳುಗಳ ನಂತರ ಹೀನವೀರ್ಯ ಆಗುತ್ತವೆ. ಗುಟಿಕಾ ಹಾಗೂ ಅವಲೇಹಗಳು ಒಂದು ವರ್ಷದ ನಂತರ ಹೀನವೀರ್ಯ ಆಗುತ್ತವೆ. ಘೃತ, ತೈಲಾದಿಗಳು ನಾಲ್ಕು ತಿಂಗಳ ನಂತರ ಹೀನವೀರ್ಯವುಳ್ಳವಾಗುತ್ತವೆ.

ಪಾಕವು ಒಂದು ವರ್ಷದ ನಂತರ ಹೀನವೀರ್ಯವಾಗುತ್ತದೆ. ಆಸವ ಹಾಗೂ ಸುವರ್ಣ, ರೌಪ್ಯ, ಲೋಹಾದಿ ಧಾತುಗಳ ಭಸ್ಮ, ರಸಾಯನಗಳು ಪುರಾಣವಾದಂತೆ ಅವುಗಳ ಗುಣಗಳಲ್ಲಿ ವರ್ಧನೆಯಾಗುತ್ತದೆ.

चूर्णं स्नेहासवा लेहाः प्रायशश्चंदनान्विताः ।
कषाय लेपयोः प्रायो युज्यते रक्तचंदनम् ॥ (शा. सं.)

ಚೂರ್ಣ, ಸ್ನೇಹ, ಆಸವ, ಅವಲೇಹ, ಗುಟಿಕಾಗಳಲ್ಲಿ ಹಾಗೂ ಸ್ವರಸಾದಿ ಪಂಚಕಷಾಯಗಳಲ್ಲಿ, ಲೇಪಗಳಲ್ಲಿ ಚಂದನವನ್ನು ಹೇಳಿದ್ದರೆ ಅಲ್ಲಿಗೆ ರಕ್ತಚಂದನವನ್ನು ಗ್ರಾಹ್ಯ ಮಾಡಬೇಕು.

घृतं तैलं च पानीयं कषायं व्यंजनादिकम् ।
पक्वा शीतीकृतं तप्तं तत्सर्वं स्याद्विषोपमम् । (नि. र.)

ಘೃತ, ತೈಲ, ಜಲ, ಕಷಾಯ, ಕಲ್ಕ ಇತ್ಯಾದಿ ಪದಾರ್ಥಗಳು ಒಮ್ಮೆ ಕುದಿಸಿ ಪಕ್ವಮಾಡಿ ಆರಿದ ಮೇಲೆ ಪುನಃ ಬಿಸಿಮಾಡಿ ಉಪಯೋಗಿಸಿದರೆ ಅದು ವಿಷಸಮಾನ ವಾಗುತ್ತದೆ.

ಔಷಧೀ ಗ್ರಾಹ್ಯ ಅಂಗವಿಶೇಷ:—

अतिस्थूल जटायाः स्युस्तासाम् ग्राह्यास्त्वचो बुधैः ।
गृह्णीयात् सूक्ष्म मूलानि सकलान्यपि बुद्धिमान् । (नि. र.)

ಯಾವ ವೃಕ್ಷದ ಮೂಲವು ದೊಡ್ಡದಿರುತ್ತದೆಯೋ ಅದರ ಮೂಲದ ತ್ವಕ್ಕನ್ನು ತೆಗೆದುಕೊಳ್ಳಬೇಕು. ಉದಾ:—ನಿಂಬ, ಆಮ್ರ, ಮುಂತಾದವುಗಳು ಯಾವ ವನಸ್ಪತಿಯ ಮೂಲವು ಸಣ್ಣದಿರುತ್ತದೆಯೋ ಅದರ ಸಂಪೂರ್ಣ ಮೂಲವನ್ನು ಗ್ರಹಣ ಮಾಡಬೇಕು. ಸಕಲ, ಅಪಿ, ಶಬ್ದಗಳಿಂದ ಸಣ್ಣ ವನಸ್ಪತಿಗಳ ಪಂಚಾಂಗವನ್ನು ಗ್ರಹಣ ಮಾಡಬೇಕು ಎಂದು ಅರ್ಥವಾಗುತ್ತದೆ.

ವನಸ್ಪತಿಗಳ ಅಂಗಗಳು:-

क्वचिन्मूलं क्वचित्कंद: क्वचित्पत्रं क्वचित् फलम् ।
क्वचित् पुष्पं क्वचित् सर्वं क्वचित् सार: क्वचित्त्वच: ।
(नि. र.)

ಮೂಲ, ಕಂದ, ಪತ್ರ, ಫಲ, ಪುಷ್ಪ, ಪಂಚಾಂಗ, ಸಾರ (ನಿರ್ಯಾಸ) ತ್ವಕ್ ಎಂದು ವನಸ್ಪತಿಗಳ ಅಂಗಗಳು ಇರುತ್ತವೆ. ಕೆಲವು ದ್ರವ್ಯಗಳ ಮೂಲ, ಕೆಲವು ದ್ರವ್ಯಗಳ ಕಂದ ಇತ್ಯಾದಿಗಳು ರೋಗನಾಶನ ಕಾರ್ಯದಲ್ಲಿ ಉಪಯೋಗವಾಗುತ್ತವೆ. ಉದಾ:- ಕೆಳಗೆ ಕೊಟ್ಟಿದೆ.

ಮೂಲ:- ವತ್ಸನಾಭ, ಅತಿವಿಷ, ದಾರುಹರಿದ್ರಾ, ಯಷ್ಟಿಮಧು, ಮಂಜಿಷ್ಠಾ, ಆಕಾರಕರಭ, ಜಟಾಮಾಂಸಿ, ಚಿತ್ರಕ, ಸರ್ಪಗಂಧಾ, ಕುಟಕೀ, ಶತಾವರಿ, ಮುಸಲೀ, ಮುಸ್ತಾ, ಉಶೀರ, ಸಪ್ತಚಕ್ರಾ.

ಕಂದ:- ಶೃಂಗಾಟಕ, ಹರಿದ್ರಾ, ವಾರಾಹಿ, ವಿದಾರಿ, ಮುಸ್ತಾ, ಪಲಾಂಡು, ಕರ್ಚೂರ, ಶುಂಠಿ, ರಸೋನ, ಚೋಪಚೀನಿ ಪ್ರಾಮುಖ್ಯವಾಗಿ ಈ ದ್ರವ್ಯಗಳ ಕಂದಗಳನ್ನು ಔಷಧದಲ್ಲಿ ಉಪಯೋಗಿಸುವರು.

ಕಾಂಡ:- ಗುಡೂಚಿ, ದಾರುಹರಿದ್ರಾ, ಯಷ್ಟಿಮಧು, ರಕ್ತಚಂದನ, ಮಂಜಿಷ್ಠಾ, ಆಕಾರಕರಭ, ಸ್ನುಹಿ, ಸಪ್ತಚಕ್ರ, ಚಂದನ, ದೇವದಾರು, ಕಿರಾತತಿಕ್ತ ಇತ್ಯಾದಿ ದ್ರವ್ಯಗಳ ಕಾಂಡಗಳನ್ನು ಔಷಧೀ ಕರ್ಮದಲ್ಲಿ ಉಪಯೋಗಿಸುತ್ತಾರೆ.

ಪತ್ರ:- ಗುಡೂಚಿ, ವರುಣ, ಕಾರ್ಪಾಸಿ, ಕಾಂಚನಾರ, ಶಿರೀಷ, ಶಾಲ್ಮಲೀ, ಬಿಲ್ವ, ಶೋಭಾಂಜನ, ನಿಂಬ, ಪಲಾಶ, ಮೇಥಿಕಾ, ಆಮ್ಲಿಕಾ, ಜಂಬೂ, ದಾಡಿಮ, ಕರವೀರ, ವಾಸಾ, ಭೃಂಗರಾಜ, ತುಲಸೀ, ನಿರ್ಗುಂಡಿ, ವಟ, ಪ್ಲಕ್ಷ, ಅಶ್ವತ್ಥ, ಮಧೂಕ, ಪಾರಿಜಾತ, ಅರ್ಕ, ಭಂಗಾ, ಏರಂಡ, ತಾಲೀಸ, ತಮಾಲಪತ್ರ, ಜಾತೀ, ಬ್ರಾಹ್ಮೀ ಆದಿಗಳ ಪತ್ರಗಳನ್ನು ಔಷಧೀ ಕರ್ಮದಲ್ಲಿ ಉಪಯೋಗಿಸುವರು.

ಪುಷ್ಪ:- ಶಿರೀಷ, ಧಾತಕೀ, ಕಮಲ, ಗೋರಖಮುಂಡಿ, ಬಬ್ಬುಲ, ಕರವೀರ, ವಾಸಾ, ತುಲಸೀ, ಅರ್ಕ, ಮಧೂಕ, ಧತ್ತೂರ, ಗುಂಜಾ, ಜಪಾ, ಚಂಪಕ ಇತ್ಯಾದಿಗಳ ಪುಷ್ಪಗಳನ್ನು ಔಷಧೀ ಕರ್ಮದಲ್ಲಿ ಉಪಯೋಗ ಮಾಡುವರು.

ಫಲ:- ಕಾರ್ಪಾಸಿ, ಶಿರೀಷ, ಗೋರಖಚಿಂಚ, ಗೋಕ್ಷುರ, ಮಾತುಲುಂಗ, ಜಂಬೀರ, ನಿಂಬುಕ, ಬಿಲ್ವ, ಕಪಿತ್ಥ, ಇಂಗುದಿ, ದ್ರಾಕ್ಷಾ, ಅರಿಷ್ಟಕ, ಭಲ್ಲಾತಕ, ಪ್ರಿಯಾಲ, ಶೋಭಾಂಜನ, ಕರಂಜ, ಆಮ್ಲಿಕಾ, ದಾಡಿಮ,

ಪೂತಿಕರಂಜ, ಇಂದ್ರವಾರುಣಿ, ಕಟುತುಂಬೀ, ಪಟೋಲ, ಕೂಷ್ಮಾಂಡ, ಮದನ, ವಿಡಂಗ,ವಿಷತಿಂದುಕ, ಜಾತೀಫಲ, ಆಮಲಕಿ, ಹರೀತಕಿ, ಬಿಭೀತಕಿ, ಉದುಂಬರ, ಏಲಾ, ಕಂಪಿಲ್ಲಕ, ಆರಗ್ವಧ, ಮರೀಚ, ಏರಂಡ, ಜೇಪಾಲ, ಹಿಪ್ಪಲೀ ಇತ್ಯಾದಿಗಳ ಫಲಗಳು ಔಷಧದಲ್ಲಿ ಉಪ ಯೋಗವಾಗುತ್ತವೆ.

ಬೀಜಃ– ಬಾಕುಚಿ, ಮಿಶ್ರೇಯಾ, ಜೀರಕ, ಯವಾನಿ, ಧಾನ್ಯಕ, ಅಜಮೋದ, ಶಿರೀಷ, ಹರಮಲ, ಅತಸೀ, ಕರಂಜ, ಪಲಾಶ, ಗುಂಜಾ, ಮೇಥಿಕಾ, ಚಂದ್ರಶೂರ, ಪಾರಸೀಕಯವಾನಿ, ಜೇಪಾಲ, ಇಷದ್‌ಗೋಲ, ಏರಂಡ, ಕೀಟಮಾರಿ ಯವಾನಿ ಇವುಗಳ ಬೀಜಗಳನ್ನು ಔಷಧೀ ಕರ್ಮದಲ್ಲಿ ಉಪಯೋಗಿಸುತ್ತಾರೆ.

ತ್ವಕ್ಃ– ಕುಟಜ, ಕಟ್‌ಫಲ ಹಾಗೂ ಬೃಹತ್ ವೃಕ್ಷಗಳ ಮೂಲಗಳ ತ್ವಕ್ಕನ್ನು ಗ್ರಹಣ ಮಾಡಬೇಕು.


ಕ್ಷುಪಃ– ಸ್ವರ್ಣಕ್ಷೀರಿ, ಪರ್ಪಟ, ಶರಪುಂಖಾ, ಚಕ್ರಮರ್ದ, ಲಜ್ಜಾಲು, ಬಲಾ, ಗೋಕ್ಷುರ, ಧನ್ವಯಾಸ, ಚಾಂಗೇರಿ, ಭೃಂಗರಾಜ,ಬ್ರಾಹ್ಮೀ, ಧಮನಕ, ಭೂನಿಂಬ, ಕಂಟಕಾರಿ, ಪುನರ್ನವಾ, ಅಪಾಮಾರ್ಗ, ಭೂಮ್ಯಾಮಲಕಿ, ಕುಮಾರೀ, ದೂರ್ವಾ.

ಪ್ರರೋಹಃ– ವಟ.

ಕೇಶರಃ– ನಾಗಕೇಶರ, ಕುಂಕುಮ, ಕಂಪಿಲ್ಲ.

ನಿರ್ಯಾಸಃ- ಶಾಲ್ಮಲೀ, ನಿಂಬ, ಬಬ್ಬೂಲ.

ಕ್ಷೀರಃ– ಸ್ನುಹಿ, ಸ್ವರ್ಣಕ್ಷೀರಿ, ಅರ್ಕ ಹಾಗೂ ಪಂಚಕ್ಷೀರಿ ವೃಕ್ಷಗಳ ಕ್ಷೀರ.



ಪ್ರಕರಣ ೧೧

ಪಂಚವಿಧ ಕಷಾಯ ಕಲ್ಪನಾ ವಿಜ್ಞಾನೀಯ ಅಧ್ಯಾಯಃ—

ಪಂಚವಿಧ ಕಷಾಯ ಕಲ್ಪನಾಃ—

ಆಯುರ್ವೇದ ಶಾಸ್ತ್ರದಲ್ಲಿ ವನಸ್ಪತಿಗಳ ಉಪಯೋಗವನ್ನು ಸಾಮಾನ್ಯ ರೀತಿಯಿಂದ ಐದು ವಿಧದಲ್ಲಿ ಮಾಡಿಕೊಳ್ಳಲು ಹೇಳಿದ್ದಾರೆ. ವನಸ್ಪತಿಗಳನ್ನು ಅವುಗಳ ಪ್ರಾಕೃತಿಕ ರೂಪದಲ್ಲಿಯೇ ಶರೀರದಲ್ಲಿ ಉಪಯೋಗಿಸಲು ಬರುವದಿಲ್ಲ. ಅವನ್ನು ಕುಟ್ಟಿ ಮರ್ದನಮಾಡಿ ವಸ್ತ್ರಗಾಲಿತ ಮಾಡಿಕೊಂಡು ಇಲ್ಲವೇ ನೀರಲ್ಲಿ ಹಾಕಿ ಕುದಿಸಿಕೊಂಡು ಈ ಪ್ರಕಾರ ಅನೇಕ ಸಂಸ್ಕಾರಗಳನ್ನು ಆಯಾ ವನಸ್ಪತಿಗಳಿಗೆ ತಕ್ಕಂತೆ ಶರೀರದಲ್ಲಿ ಉಪಯೋಗವಾಗುವಂತೆ ವಿವಿಧ ವ್ಯಾಧಿಗಳಿಗೆ ಅನುಸಾರವಾಗಿ ತಯಾರು ಮಾಡಿ ಕೊಳ್ಳಬೇಕಾಗುತ್ತದೆ.

कल्पनं उपयोगार्थं प्रकल्पनं संस्करणं इति ।

ಯಾವ ಕ್ರಿಯೆಗಳಿಂದ ಔಷಧ ದ್ರವ್ಯಗಳ ವಿವಿಧ ಯೋಗಗಳನ್ನು ತಯಾರು ಮಾಡಲು ಬರುವದೋ ಆ ಕ್ರಿಯೆಗಳಿಗೆ "ಕಲ್ಪನಾ" ಅನ್ನುವರು. ಉದಾಃ- ಕುಟ್ಟುವದು, ಅರೆಯುವದು, ಕುದಿಸುವದು.

ಈ ಕಲ್ಪನಾಗಳು ಐದೇ ಇರುತ್ತವೆ. ಕಷಾಯ ಕಲ್ಪನೆಗಳನ್ನು ಆಶ್ರಯಿಸಿ ಕೊಂಡ ಯೋನಿಗಳು ಪಂಚ ಇರುತ್ತವೆ.

पञ्च कषाय योनयः– मधुर कषायः आम्ल कषायः, कटु कषाय, तिक्त कषायः, कषाय कषायश्च, कषाय योनयः पञ्च रसा लवण वर्जिताः । (च. सू अ. ४)

ಷಡ್ರಸಗಳಲ್ಲಿ ಲವಣ ರಸವೊಂದನ್ನುಳಿದು ಉಳಿದ ಪಂಚರಸಗಳುಳ್ಳ ದ್ರವ್ಯಗಳ ಕಷಾಯ ಕಲ್ಪನೆಗಳನ್ನು ಮಾಡುತ್ತಾರೆ. ಇಲ್ಲಿಗೆ ಲವಣರಸ ಕಷಾಯದ ಉಲ್ಲೇಖ ಇರುವದಿಲ್ಲ. ಯಾಕಂದರೆ ಲವಣದಿಂದ ಸ್ವರಸವನ್ನು ತೆಗೆಯಲು ಬರುವದಿಲ್ಲ. ಅದರ ಕಲ್ಕವನ್ನು ಮಾಡಲು ಬರುವದಿಲ್ಲ. ಕ್ವಾಥವನ್ನು ಮಾಡಬೇಕೆಂದರೆ ಅದು ನೀರಿನೊಡನೆ ಏಕರೂಪವಾಗುವದು. ಲವಣದ ಚೂರ್ಣ ಕಲ್ಪನಾ ಮಾಡಲು ಬರುತ್ತಿದ್ದರೂ ಅದು ಶಾಸ್ತ್ರಸಮ್ಮತವಿರುವದಿಲ್ಲ.

ಶಾಸ್ತ್ರಕಾರರು ಈ ಪ್ರಕಾರ ಪಂಚವಿಧಕಷಾಯಗಳನ್ನು ಹೇಳಿದ್ದಾರೆ.

स्वो रसः स्वरसः प्रोक्तः कल्को दृषादि पेषितः ।
क्वथितस्तु श्रृतः, शीतः शर्वरीमुषितो मतः ॥

क्षिप्तोष्ण तोये मृदितः फाण्ट इत्यभिदीयते ।
पञ्चैताश्च समुद्दिष्टाः कषायाणां प्रकल्पना ॥
(वै. प. प्र. द्वि. ख. १-२)

पञ्चविधं कषाय कल्पनमिति तद्यथा–स्वरसः कल्कः शृतः शीतः फाण्टश्च कषाय इति । (च. सू. अ. ४)

ಸ್ವರಸ, ಕಲ್ಕ, ಶೃತಃ (ಕ್ವಾಥ), ಶೀತ (ಹಿಮ), ಫಾಂಟಗಳೆಂದು ಐದು ವಿಧ ಕಷಾಯಗಳು.

ಪಂಚವಿಧ ಕಷಾಯ ಕಲ್ಪಗಳ ಮಹತ್ವವುಃ–

ಯಾವ ದ್ರವ್ಯದಲ್ಲಿ ಯಾವ ಮಹಾಭೂತದ ಆಧಿಕ್ಯವಿರುತ್ತದೆಯೋ ಅದಕ್ಕೆ ತಕ್ಕಂತೆ ಕಷಾಯವನ್ನು ಮಾಡಬೇಕಾಗುತ್ತದೆ. ಒಂದು ದ್ರವ್ಯದಲ್ಲಿ ಪಾರ್ಥಿವಾಂಶವು ಹೆಚ್ಚು ಇದ್ದರೆ ಅದರ ಕಲ್ಕವನ್ನು ಮಾಡುವದು ಶ್ರೇಯಸ್ಕರವಿರುತ್ತದೆ. ಅದರಂತೆ ಯಾವ ದ್ರವ್ಯದಲ್ಲಿ ಜಲೀಯ ಅಂಶವು ಆಧಿಕ್ಯವಿರುತ್ತದೆಯೋ ಅದರ ಸ್ವರಸವನ್ನು ಮಾಡಬೇಕಾಗುತ್ತದೆ. ಇದರಂತೆ ಯಾವ ದ್ರವ್ಯದಲ್ಲಿ ತೇಜ ಹಾಗೂ ವಾಯವೀಯ ಮಹಾಭೂತ ಆಧಿಕ್ಯವಿರುತ್ತದೆಯೋ ಅವುಗಳ ಚೂರ್ಣ, ಹಿಮ, ಫಾಂಟ, ಅರ್ಕಗಳನ್ನು ಮಾಡಿ ಉಪಯೋಗಿಸಬೇಕಾಗುತ್ತದೆ. ಚಂದನ, ತ್ವಕ್ (ದಾಲಚಿನ್ನಿ), ಲವಂಗ, ಕೇಶರ ಆದಿ ದ್ರವ್ಯಗಳ ಉಪಯೋಗವನ್ನು ಹಿಮ. ಫಾಂಟ, ಕಲ್ಪನೆಗಳನ್ನು ಮಾಡಿ ಉಪಯೋಗಿಸಬೇಕಾಗುತ್ತದೆ.

ಕೆಲವು ವೇಳೆ ಒಂದೊಂದು ದ್ರವ್ಯದಲ್ಲಿ ಹಾನಿಕಾರಕ ಘಟಕಗಳೂ, ಲಾಭದಾಯಕ ಘಟಕಗಳೂ ಇರುತ್ತವೆ. ಔಷಧೀ ಕಲ್ಪನೆಯಲ್ಲಿ ಲಾಭದಾಯಕ ಗುಣಾಂಶಗಳು ಬರುವಂತೆಯೂ ಹಾನಿಕಾರಕ ಘಟಕಗಳ ನಿರಾಕರಣ ಅಥವಾ ಶಮನ ಮಾಡಿಕೊಂಡು ವ್ಯಾಧಿಗಳಲ್ಲಿ ಉಪಯೋಗಿಸಬೇಕಾಗುತ್ತದೆ.

ಉದಾಃ– ಭಲ್ಲಾತಕ ಇದರ ತೀಕ್ಷ್ಣ ಗುಣವು ಹಾನಿಕಾರಕವಿರುವದರಿಂದ ಈ ಗುಣವನ್ನು ಕಡಿಮೆಮಾಡಿ ದೇಹದಲ್ಲಿ ಉಪಯೋಗಿಸಬೇಕಾದರೆ ಕ್ಷೀರಪಾಕವನ್ನು ಮಾಡಿ ಉಪಯೋಗಿಸಬೇಕಾಗುತ್ತದೆ. ಅರ್ಜುನ ಈ ದ್ರವ್ಯವು ಹೃದ್ಯವಿರುವದು. ಆದರೆ ಇದು ಕಷಾಯ ರಸದ್ದಿರುವದು. ಇದನ್ನು ಹಾಗೆಯೇ ಸೇವಿಸಲು ಬರುವದಿಲ್ಲ. ಅದ್ದರಿಂದ ಇದರ ಕ್ಷೀರಪಾಕವನ್ನು ಮಾಡಿಯೇ ಉಪಯೋಗಿಸುತ್ತಾರೆ.

ಘೃತ, ತೈಲಾದಿಗಳ ಸ್ನೇಹಪಾಕವನ್ನು ಮಾಡುವಾಗ ಶಾಸ್ತ್ರೋಕ್ತ ದ್ರವ್ಯಗಳ ಕ್ವಾಥ, ಕಲ್ಕಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಕಲ್ಕ, ಕ್ವಾಥಗಳ ಸಹಾಯ ತೆಗೆದುಕೊಂಡು ತೈಲ, ಘೃತಗಳ ಪಾಕವನ್ನು ಮಾಡಬೇಕಾಗುತ್ತದೆ.

ಆಸವ, ಅರಿಷ್ಟಗಳನ್ನು ಉಕ್ತದ್ರವ್ಯಗಳ ಚೂರ್ಣವನ್ನು, ಕ್ವಾಥವನ್ನು ಮಾಡಿಕೊಂಡೇ ಸಂಧಾನ ಕಾರ್ಯದ ಸಲುವಾಗಿ ಇಡಬೇಕಾಗುತ್ತದೆ.

ಇನ್ನು ಪಂಚವಿಧ ಕಷಾಯುಗಳಲ್ಲಿ ಬಲಾಬಲವು ಈ ರೀತಿಯಾಗಿರುತ್ತದೆ.

अथातः स्वरसः कल्कः क्वाथश्च हिमफांटकौ ।
ज्ञेयाः कषायाः पञ्चैते लघवः स्युः यथोत्तरम् ॥
(शा. सं. म. खं.)

ಸ್ವರಸ, ಕಲ್ಕ, ಕ್ವಾಥ, ಹಿಮ, ಫಾಂಟ ಇವು ಉತ್ತರೋತ್ತರ ಲಘು ಇರುತ್ತವೆ. ಅಂದರೆ ಸ್ವರಸಕ್ಕಿಂತ ಕಲ್ಕ, ಕಲ್ಕಕ್ಕಿಂತ ಕ್ವಾಥ, ಕ್ವಾಥಕ್ಕಿಂತ ಹಿಮ, ಹಿಮಕ್ಕಿಂತ ಫಾಂಟ ಲಘು ಇರುತ್ತವೆ. ಆದ್ದರಿಂದ

अतः कषाय कल्पना व्याध्यातुर बलापेक्षिणी, नत्वेवं खलु सर्वाणि सर्वत्रोपयोगीनि भवंति । (च. सू. अ. ४)

ರೋಗಿ ಹಾಗೂ ರೋಗದ ಬಲಾಬಲಗಳನ್ನು ವಿಚಾರಮಾಡಿ ಇವುಗಳ ಉಪಯೋಗವನ್ನು ಮಾಡಬೇಕು. ರೋಗಿ ಹಾಗೂ ವ್ಯಾಧಿ ಬಲವುಳ್ಳದ್ದು ಇದ್ದರೆ ಅಲ್ಲಿಗೆ ಸ್ವರಸದ ಉಪಯೋಗವನ್ನು ಮಾಡಬೇಕು. ರೋಗ, ರೋಗಿಗಳ ಮಧ್ಯಮ ಬಲವಿದ್ದರೆ ಕ್ವಾಥವನ್ನು, ಅಲ್ಪಬಲವಿದ್ದರೆ ಹಿಮ, ಫಾಂಟಗಳನ್ನು ಕೊಡಬೇಕಾಗುತ್ತದೆ. ಅದರಂತೆ ಯಾವ ದ್ರವ್ಯವನ್ನು ಯಾವ ರೀತಿ ಉಪಯೋಗಿಸಬೇಕೋ ಇದನ್ನು ವಿಚಾರಮಾಡಿ ಲಾಭದಾಯಕವಾಗುವಂತೆ ಅವುಗಳ ಕಲ್ಪನೆಗಳನ್ನು ಮಾಡಬೇಕಾಗುತ್ತದೆ.

ಉದಾಹರಣಾರ್ಥವಾಗಿಃ-

मण्डूकपर्ण्याः स्वरसः प्रयोज्यः ।
क्षीरेण यष्टीमधुकस्य चूर्णम् ।
रसो गुडूच्यास्तु समूल पुष्प्याः, कल्कः प्रयोज्यः खलु
शंखपुष्प्याः................ (च. चि. अ. १)

ದ್ರವ್ಯದ ವಿಚಾರಮಾಡಿಕೊಂಡು ಕಲ್ಪಗಳನ್ನು ಮಾಡಬೇಕೆಂದು ಶಾಸ್ತ್ರವು ಉಪದೇಶಿಸುತ್ತದೆ. ಕೆಲವು ದ್ರವ್ಯಗಳು ಆರ್ದ್ರ ಅವಸ್ಥೆಯಲ್ಲಿಯೇ ಅಧಿಕ ವೀರ್ಯವಾನ್ ಇರುವದರಿಂದ ಅದರ ಸ್ವರಸದ ಉಪಯೋಗವನ್ನು ಮಾಡಿಕೊಳ್ಳಬೇಕು. ಅದರಂತೆ ವನಸ್ಪತಿಯ ಯಾವ ಅಂಗದಲ್ಲಿ ವೀರ್ಯವು ಅಧಿಕವಿರುತ್ತದೆಯೋ ಆ ಅಂಗದ ಉಪಯೋಗವನ್ನು ಮಾಡಿಕೊಳ್ಳಬೇಕು. ಸುಗಂಧ ದ್ರವ್ಯಗಳಲ್ಲಿ ವಾಯವೀಯ, ತೈಜಸ ಅಂಶಗಳಿರುವದರಿಂದ ಅವುಗಳ ಕ್ವಾಥವನ್ನು ಮಾಡಿದರೆ ಅದರ ವೀರ್ಯ ನಾಶವಾಗುವದರಿಂದ ಇವುಗಳ ಹಿಮ, ಫಾಂಟಗಳನ್ನೇ ಮಾಡಬೇಕಾಗುತ್ತದೆ.

ಔಷಧೀ ದ್ರವ್ಯಗಳಲ್ಲಿ ಸ್ವರಸಾದಿ ಪಂಚ ಕಲ್ಪಗಳೇ ಮುಖ್ಯವಾಗಿರುತ್ತ . . ಉಳಿದ ಯಾವದೇ ಕಲ್ಪಗಳನ್ನು ತಯಾರು ಮಾಡುವದಾದರೆ ಮೊದಲು ಈ ಪಂಚಕಷಾಯಗಳಲ್ಲಿ ಯಾವುದಾದರೊಂದನ್ನು ತಯಾರು ಮಾಡಿಕೊಳ್ಳಬೇಕಾಗುತ್ತದೆ.

ಉದಾ:- ಗುಟಿಕಾವನ್ನು ತಯಾರಿಸಲು ಮೊದಲು ಕಲ್ಕವನ್ನು ತಯಾರು ಮಾಡಿಕೊಳ್ಳಬೇಕಾಗುತ್ತದೆ. ಅದರಂತೆ ಲೇಹ ಅಥವಾ ರಸಕ್ರಿಯಾ ತಯಾರು ಮಾಡಿಕೊಳ್ಳಬೇಕಾದರೆ ಮೊದಲು ಕ್ವಾಥವನ್ನು ಮಾಡಿಕೊಳ್ಳಬೇಕಾಗುತ್ತದೆ. ಅಂದರೆ ಈ ಪಂಚಕಲ್ಪಗಳನ್ನು ಬಿಟ್ಟು ಉಳಿದ ಕಲ್ಪಗಳು ಅಂದರೆ ಚೂರ್ಣ, ಲೇಹ, ಆಸವಾದಿ ಕಲ್ಪಗಳು ಇವುಗಳ ಅಂತರ್ಗತ ಸ್ವರೂಪದಲ್ಲಿರುವವು.

ಅ) **ಸ್ವರಸದ ಅಂತರ್ಗತ ಕಲ್ಪಗಳು:-** ಪುಟಪಕ್ವರಸ (ಪುಟಪಾಕ).

ಆ) **ಕಲ್ಕದಲ್ಲಿಯ ಅಂತರ್ಗತ ಕಲ್ಪಗಳು:-** ಚೂರ್ಣ ಆದಿ.

ಇ) **ಕ್ವಾಥದ ಅಂತರ್ಗತ ಕಲ್ಪಗಳು:-** ಪ್ರಮಥ್ಯಾ, ಕ್ಷೀರಪಾಕ, ಭೇಷಜ ಸಿದ್ಧ ಪಾನೀಯ ಕಲ್ಪನಾ (ಮಂಡ, ಪೇಯ, ವಿಲೇಪಾದಿ), ಯವಾಗೂ, ಯೂಷ, ಮಾಂಸರಸ.

ಈ) **ಹಿಮದ ಅಂತರ್ಗತ ಕಲ್ಪಗಳು:-** ಮಂಥ, ತಕ್ರ, ಪೋಲ, ತಂಡುಲೋದಕ.

ಈ ರೀತಿಯಾಗಿ ಪಂಚವಿಧ ಕಷಾಯಗಳು ಔಷಧೀ ಕಲ್ಪನೆಯಲ್ಲಿಯ ಮುಖ್ಯ ಮತ್ತು ಪ್ರಾಥಮಿಕ ಅಂದರೆ ಮೂಲಭೂತ ಕಲ್ಪನೆಗಳಿರುತ್ತವೆ. ವೈದ್ಯರು ದ್ರವ್ಯಗಳ ಉಪಯೋಗವನ್ನು ಅವುಗಳ ಉಪಯುಕ್ತ ಅಂಗದ ವಿಚಾರ ಮಾಡಿಕೊಂಡು ಅವುಗಳಿಂದ ಯಾವ ವಿಧದ ಕಲ್ಪನೆಯಿಂದ ಶರೀರದಲ್ಲಿ ಉಪಯೋಗಿಸಲು ಸಮರ್ಥವಾಗುವವೋ ಹಾಗೆ ಅವುಗಳ ಯೋಗ್ಯ ಉಪಯೋಗವನ್ನು ಮಾಡಿಕೊಳ್ಳಬೇಕು.

ಸ್ವರಸ ಕಲ್ಪನಾ:-

यंत्रप्रपीडिनाद् द्रव्याद्रसः स्वरस उच्यते । (च. सू. अ. ४)
तत्र सद्यः समुद्धृत प्रक्षालित क्षुण्णस्य तांतव निष्पीडितस्य निर्यासा स्वरसः (अ. स. क. अ. ८)
सद्यः समुद्धृतात् क्षुण्णाद्यः स्रवेत् पट पीडितात् स्वरसः स समुद्धिष्टः । (अ. हृ. क अ. ६)
अहतात्तत्क्षणाकृष्टाद्द्रव्यात् क्षुण्णात् समुद्धरेत् ।
वस्त्रनिष्पीडितो यः स रसः स्वरसः उच्यते ॥
(शा. सं. म. खं. अ. १)

ಕೃಮಿ ಆದಿಗಳಿಂದ ದೂಷಿತವಾಗಿರದ ಅದೇ ತೆಗೆದುಕೊಂಡು ಬಂದ ದ್ರವ್ಯವನ್ನು ನೀರಿನಿಂದ ತೊಳೆದು ಸಣ್ಣ ಸಣ್ಣ ತುಂಡುಗಳನ್ನು ಮಾಡಿ ಖಲ್ವಯಂತ್ರದಲ್ಲಿ ಹಾಕಿ ಸಣ್ಣಗೆ ಅರೆದು ನಂತರ ಈ ಮುದ್ದೆಯನ್ನು ಸ್ವಚ್ಛ ವಸ್ತ್ರದಲ್ಲಿ ಹಾಕಿ ಯಂತ್ರದಿಂದಾಗಲಿ ಹಸ್ತದಿಂದಾಗಲಿ ಹಿಂಡಿದಾಗ ಆ ವಸ್ತ್ರದಿಂದ ಪರಿಸ್ರುತವಾಗುವಂಥ ರಸಕ್ಕೆ ಸ್ವರಸ ಅನ್ನುತ್ತಾರೆ.

ಮೇಲಿನ ರೀತಿಯಂತೆ ಸ್ವರಸವನ್ನು ತೆಗೆಯಬೇಕಾಗುತ್ತದೆ. ಆದರೆ ಎಲ್ಲ ಕಾಲ ಗಳಲ್ಲಿ ಹಸಿ ದ್ರವ್ಯಗಳು ಸಿಗುತ್ತಿರುವದಿಲ್ಲ. ಆಗ್ಗೆ ಶುಷ್ಕ ದ್ರವ್ಯಗಳಿಂದ ಸ್ವರಸವನ್ನು ತಯಾರು ಮಾಡಿಕೊಳ್ಳಬೇಕಾಗುತ್ತದೆ. ಈ ಶುಷ್ಕ ದ್ರವ್ಯಗಳು ಮಾತ್ರ ಒಂದು ವರುಷದೊಳಗಿನವು ಇರಬೇಕಾಗುತ್ತದೆ.

स्वरसानामलाभे त्वयं स्वरस विधिः-

चूर्णानामाढकमाढकमुदकस्याहो रात्र स्थितं मृदितपूतं स्वर-
सवत् प्रयोज्यम् । (च. चि. अ. अ. १ पा. १)
कुडवं चूर्णितं द्रव्यं क्षिप्तं च द्विगुणे जले ।
अहो रात्रं स्थितं तस्मात् भवेद्वा रस उत्तमः ॥ (शा. सं. म. खं.)

ಆರ್ದ್ರ ವನಸ್ಪತಿಯು ದುರ್ಲಭವಿದ್ದರೆ ಈ ಪ್ರಕಾರ ಸ್ವರಸವನ್ನು ತಯಾರಿಸ ಬೇಕು. ಶುಷ್ಕ ವನಸ್ಪತಿಗಳ ಚೂರ್ಣವನ್ನು ಒಂದು ಆಢಕ ತೆಗೆದುಕೊಂಡು ಒಂದು ಆಢಕ ಜಲದಲ್ಲಿ ಒಂದು ಹಗಲು ರಾತ್ರಿ ನೆನೆಯಿಡಬೇಕು. ಮರುದಿನ ಹಸ್ತದಿಂದ ಚೆನ್ನಾಗಿ ಮರ್ದಿಸಿ ನಂತರ ವಸ್ತ್ರಗಾಲಿತ ಮಾಡಿಕೊಂಡು ಉಪಯೋಗಿಸಬೇಕು. ಶಾರ್ಙ್ಗಧರ ಸಂಹಿತೆಯಲ್ಲಿ ದ್ರವ್ಯವನ್ನು ಕುಡವ ಪ್ರಮಾಣದಲ್ಲಿ ಜಲವನ್ನು ದುಪ್ಪಟ್ಟು ತೆಗೆದುಕೊಳ್ಳಲು ಹೇಳಿದ್ದಾರೆ. ಕೃತಿ ಮಾತ್ರ ಒಂದೇ ರೀತಿಯದು ಇರುತ್ತದೆ.

ಅದರಂತೆ ಇನ್ನೊಂದು ರೀತಿಯನ್ನು ಹೇಳುತ್ತಾರೆ.

आदाय शुष्क द्रव्यं वा स्वरसानामसंभवे ।
जलेऽष्टगुणिते साध्यं पादशेषं च गृह्यते ॥ (शा. सं. म. ख.)

ಒಂದುವೇಳೆ ರಸವಾನ್ ದ್ರವ್ಯವು ಸಿಗದಿದ್ದರೆ, ಅಹೋರಾತ್ರಿ ಇಡುವಷ್ಟು ಕಾಲದ ಅಭಾವವಿದ್ದರೆ, ಶುಷ್ಕ ವನಸ್ಪತಿಯನ್ನು ತೆಗೆದುಕೊಂಡು ತುಂಡುಮಾಡಿ, ಕುಟ್ಟಿ ಈ ದ್ರವ್ಯವನ್ನು ಮೃತ್ತಿಕಾಪಾತ್ರೆಯಲ್ಲಿ ಹಾಕಿ ದ್ರವ್ಯದ ಎಂಟು ಪಟ್ಟು ಜಲವನ್ನು ಹಾಕಿ ಜಲವು ನಾಲ್ಕನೇ ಪಾಲು ಉಳಿಯುವವರೆಗೆ ಕುದಿಸಿಕೊಳ್ಳಬೇಕು. ಆಮೇಲೆ ಇದನ್ನು ವಸ್ತ್ರಗಾಲಿತ ಮಾಡಿಕೊಂಡು ಉಪಯೋಗಿಸಬೇಕು.

ಸ್ವರಸ ಮಾತ್ರಾ ಪ್ರಮಾಣಃ-

स्वरसस्य गुरुत्वाच्च पलमर्धं प्रयोजयेत् ।
निशोषितं चाग्निसिद्धं पलमात्रं रसं पिबेत् ॥
(शा. सं. म. खं.)

ಸ್ವರಸವು ಪಚನಕ್ಕೆ ಜಡವಿರುವದರಿಂದ ಇದರ ಮಾತ್ರಾ ಪ್ರಮಾಣವು ಅರ್ಧ ಪಲ ಅಂದರೆ ಎರಡು ತೊಲಿ ಇರುತ್ತದೆ. ಮತ್ತು ಇದನ್ನು ಅಹೋರಾತ್ರಿ ಇಟ್ಟು, ಅಗ್ನಿ ಸಿದ್ಧ ಸ್ವರಸವನ್ನು ಒಂದು ಪಲ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು.

ಸ್ವರಸದಲ್ಲಿ ಹಾಕುವ ಪ್ರಕ್ಷೇಪ ದ್ರವ್ಯಗಳ ಪ್ರಮಾಣಃ–

मधुश्वेता गुडक्षाराञ्जीरकं लवणं तथा ।
घृतं तैलं चूर्णादीन्कोलमात्रान् रसे क्षिपेत् ॥
(शा. सं. म. खं.)

ಸ್ವರಸದಲ್ಲಿ ಮಧು, ಶರ್ಕರಾ, ಗುಡ, ಕ್ಷಾರ, ಜೀರಕ, ಲವಣ, ಘೃತ, ತೈಲ, ಚೂರ್ಣ ಆದಿಗಳನ್ನು ಒಂದು ಕೋಲ ಮಾತ್ರೆಯಲ್ಲಿ (ಅರ್ಧ ತೊಲಿ ಪ್ರಮಾಣ) ಹಾಕಬೇಕು. ಈ ಬಗ್ಗೆ ಮತ್ತೆ ಕೆಲವು ಶಾಸ್ತ್ರಕಾರರು ಹೀಗೆ ಹೇಳುತ್ತಾರೆ.

घृतं सितां गुडं क्षौद्रं कोलमात्रं रसे क्षिपेत् ।
लवण क्षार चूर्णानि योग्यमानानि दापयेत् ।

ಘೃತ, ಸಿತಾ, ಗುಡ, ಕ್ಷೌದ್ರ ಇವುಗಳನ್ನು ಕೋಲಪ್ರಮಾಣದಲ್ಲಿ ಹಾಕಬೇಕು. ಲವಣ, ಕ್ಷಾರ, ಚೂರ್ಣಗಳನ್ನು ರೋಗ ಮತ್ತು ರೋಗಿಯ ಬಲಾದಿಗಳನ್ನು ನೋಡಿ ಕೊಂಡು ಯೋಗ್ಯ ಪ್ರಮಾಣದಲ್ಲಿ ಉಪಯೋಗಿಸಬೇಕು.

ಸ್ವರಸದ ಉಪಯೋಗಃ–

भूयश्चेषां बलाधानं कार्यं स्वरस भावनैः ।
सुभावितं ह्यल्पमपि द्रव्यं स्याद्बहुकर्मकृत् ॥ (च. क. अ. १२)

ಸ್ವರಸದ ಭಾವನೆಯನ್ನು ಕೊಡುವದರಿಂದ ಆಯಾ ಕಲ್ಪಗಳ ಗುಣ ವರ್ಧನೆ ಯಾಗುವದು. ಮತ್ತು ಅಲ್ಪ ಮಾತ್ರೆಯಲ್ಲಿ ಕೊಟ್ಟರೂ ಕೂಡ ಅದರಿಂದ ಬಹಳ ಕಾರ್ಯಗಳುಆಗುವವು. ಸ್ವರಸವನ್ನು ಅನುಪಾನಕ್ಕಾಗಿ ಉಪಯೋಗಿಸುವರು. ಸ್ವರಸವು ಧಾತುಗಳ ಮಾರಣ ಮಾಡಲು ಉಪಯೋಗವಾಗುವದು.

ಪುಟಪಾಕ ವಿಧಿಃ–

ಸ್ವರಸದಲ್ಲಿ ಅಂತರ್ಗತವಾಗುವ ಕಲ್ಪವೆಂದರೆ ಪುಟಪಾಕವು. ಇದಕ್ಕೆ ಅಗ್ನಿಯ ಸಂಬಂಧ ಬರುತ್ತದೆ.

पुटपाकस्य कल्कस्य स्वरसो गृह्यते यतः ।
अतस्तु पुटपाकानां युक्तिरत्रोच्यते मया ॥ (शा. सं. म. खं.)

ಪುಟಪಾಕದ ಸಲುವಾಗಿ ದ್ರವ್ಯವು ಆರ್ದ್ರವಿದ್ದರೆ ಅದರ ಕಲ್ಕವನ್ನು ದ್ರವ್ಯವು ಶುಷ್ಕವಿದ್ದರೆ ಅದರ ಚೂರ್ಣಮಾಡಿ ಅವರಲ್ಲಿ ನೀರು ಕೂಡಿಸಿ ಕಲ್ಕವನ್ನು ತಯಾರಿಸಿ ಕೊಂಡು ಪುಟಪಾಕವಿಧಿಯಿಂದ ಸ್ವರಸವನ್ನು ತೆಗೆದುಕೊಳ್ಳಬೇಕಾಗುತ್ತದೆ.

द्रव्यामार्द्रं शिलापिष्टं शुष्कं वा सजलं ततः ।
गोलं विधाय, वृक्षाणां पत्रैरावेष्टयेद्दृढम् ॥

सूत्रेण बद्धवा, गोधूम पिष्टेन परिवेष्टयेत् ।
तत अर्द्रमृदा लिप्त्वा, गोमयाग्नौ प्रदापयेत् ।
अंगारवर्णं च मृदं दृष्टवा वह्नेः समुद्धरेत् ।
ततो रसं वस्त्रपूतं पुटपक्वं प्रदापयेत् ॥ (शा.)

ದ್ರವ್ಯವು ಆರ್ದ್ರವಿದ್ದರೆ ಸ್ವಚ್ಛಮಾಡಿ ಖಲ್ವದಲ್ಲಿ ಹಾಕಿ ಅರೆದು ಅದರ ಮುದ್ದೆಯನ್ನು ತಯಾರು ಮಾಡಿಕೊಳ್ಳಬೇಕು. ದ್ರವ್ಯವು ಶುಷ್ಕವಿದ್ದರೆ ಅದರ ಚೂರ್ಣವನ್ನು ಮಾಡಿ ಅದರಲ್ಲಿ ನೀರು ಕೂಡಿಸಿ ಕಲ್ಕವನ್ನು ತಯಾರಿಸಿ ಮುದ್ದೆಯನ್ನು ತಯಾರಿಸಿ ಕೊಳ್ಳಬೇಕು. ಈ ಮುದ್ದೆಯನ್ನು ದುಂಡಗೆ ಮಾಡಿಕೊಳ್ಳಬೇಕು.

ನಂತರ ವೃಕ್ಷಗಳ ಪತ್ರಗಳಿಂದ ಅಂದರೆ ಕಾಶ್ಮರಿ, ವಟ, ಜಂಬೂ ಆದಿವೃಕ್ಷಗಳ ಪತ್ರಗಳಿಂದ ಮುದ್ದೆಯನ್ನು ಸುತ್ತಿ ಬಂದುಮಾಡಿ ಅದರ ಸುತ್ತಲೂ ದಾರವನ್ನು ಬಿಗಿಯಾಗಿ ಸುತ್ತಬೇಕು. ಆಮೇಲೆ ಮೃತ್ತಿಕಾ ಲೇಪವನ್ನು ಒಂದು ಅಂಗುಲ ಅಥವಾ ಎರಡು ಅಂಗುಲ ದಪ್ಪವಾಗಿ ಮಾಡಬೇಕು.

लेपं च द्वयंगुलं स्थूलं कुर्यात् वा अंगुष्टमात्रकम् ।
(शा. सं. म खं.)

ನಂತರ ಈ ರೀತಿ ತಯಾರಾದ ಗೋಲವನ್ನು ಗೋಮಯದಿಂದ ತಯಾರಿಸಿದ ಅಗ್ನಿಯಲ್ಲಿ ಇಡಬೇಕು. ಗೋಲದ ಮೃತ್ತಿಕಾದ ವರ್ಣವು ಅಗ್ನಿಸಮ ವರ್ಣವಾಗುವವರೆಗೆ ಅಗ್ನಿಯನ್ನು ಕೊಡಬೇಕು. ನಂತರ ಅವನ್ನು ಹೊರಗೆ ತೆಗೆಯಬೇಕು. ಮೇಲಿನ ಮೃತ್ತಿಕಾವನ್ನು ತೆಗೆದು ಪತ್ರಗಳನ್ನು ಬಿಚ್ಚಿ ಒಳಗಿನ ಪಕ್ವ ಕಲ್ಕವನ್ನು ಸ್ವಚ್ಛವಾದ ವಸ್ತ್ರದಲ್ಲಿ ಹಾಕಿ ಹಿಂಡಿಕೊಳ್ಳಬೇಕು. ಈ ಪರಿಸ್ರುತವಾದಂಥ ರಸವೇ ಪುಟಪಕ್ವ ರಸವು.

ಮಾತ್ರಾ ಪ್ರಮಾಣ:-

रसो पलमात्रं ग्राह्यः (शा. सं. म. खं.)

ಪುಟಪಾಕ ರಸದ ಮಾತ್ರಾಪ್ರಮಾಣವು ಒಂದು ಪಲ ಅಂದರೆ ನಾಲ್ಕು ತೊಲಿ ಇರುತ್ತದೆ.

ಪ್ರಕ್ಷೇಪ ಮಾತ್ರಾ ಪ್ರಮಾಣ:-

कर्ष मात्रं मधु क्षिपेत् ।
कल्कचूर्ण द्रवाद्यास्तु देयाः स्वरसवद् बुधैः॥ (शा. सं. म खं.)

ಪುಟಪಾಕ ರಸದಲ್ಲಿ ಮಧುವನ್ನು ಒಂದು ಕರ್ಷ ಪ್ರಮಾಣದಲ್ಲಿ ಹಾಕಬೇಕು. ಮತ್ತು ಉಳಿದ ಚೂರ್ಣ, ದ್ರವ್ಯಾದಿಗಳನ್ನು ಸ್ವರಸದಲ್ಲಿ ಹೇಳಿದ ಪ್ರಮಾಣದಲ್ಲಿ ಹಾಕಬೇಕು.

ಪುಟಪಾಕ ಹೇತು:-

ನಿಂಬ, ಬಿಲ್ವ, ವಾಸಾ ಮೊದಲಾದ ವನಸ್ಪತಿಗಳ ಪರ್ಣಾದಿಗಳ ಸ್ವರಸವು ಬಿಸಿ ಮಾಡದೇ ಹೊರಡುವದಿಲ್ಲ. ಆದ್ದರಿಂದ ಅವುಗಳಿಂದ ಸ್ವರಸವನ್ನು ತೆಗೆಯಲು ಪುಟಪಾಕ ವನ್ನು ಮಾಡುವರು.

ಕಲ್ಕ:—

ಸಾಮಾನ್ಯವಾಗಿ ಪಾರ್ಥಿವಾಂಶ ಆಧಿಕ್ಯವಿರುವ ದ್ರವ್ಯಗಳ ಕಲ್ಕವನ್ನು ಮಾಡಿ ಉಪಯೋಗಿಸುತ್ತಾರೆ.

यत्पिडं रसपिष्टानां कल्कं परिकीर्तितम्: । (च. सू. अ. ४)

उपल दशनादि पिष्टस्तु कल्क: । (अ. सं. म. खं. ८)

द्रव्यमार्द्रं शिलापिष्टं शुष्कं वा सजलं भवेत् ।

प्रक्षेपावाप कल्कास्ते...... (शा. सं. म. खं.)

ಆರ್ದ್ರ ದ್ರವ್ಯವನ್ನಾಗಲಿ ಶುಷ್ಕ ದ್ರವ್ಯಚೂರ್ಣದಲ್ಲಿ ಜಲವನ್ನು ಮಿಶ್ರಮಾಡಿ ಯಾಗಲಿ ಶಿಲಾಖಲ್ವದಲ್ಲಿ ಮರ್ದನಮಾಡಿ ಪಿಷ್ಟರೂಪ ಮಾಡಿಕೊಳ್ಳುವದಕ್ಕೆ ಕಲ್ಕ ಅನ್ನುವರು. ಇದಕ್ಕೆ "ಆವಾಪ", "ಪ್ರಕ್ಷೇಪ" ಎಂದು ಪರ್ಯಾಯ ನಾಮಗಳಿರುತ್ತವೆ. ಸ್ವರಸವೆಂದರೆ ಕೇವಲ ಸಾರಭಾಗವನ್ನೇ ತೆಗೆದುಕೊಳ್ಳುವದು. ಕಲ್ಕದಲ್ಲಿ ಸಾರ ಭಾಗ ಹಾಗೂ ಕಾಷ್ಠ ಭಾಗ ಇವೆರಡರ ಉಪಯೋಗವನ್ನು ತೆಗೆದುಕೊಳ್ಳಲು ಬರುತ್ತದೆ. ದ್ರವ್ಯದ ವೀರ್ಯವು ಸಾರಭಾಗ (ರಸ) ಹಾಗೂ ಕಾಷ್ಠಭಾಗದಲ್ಲಿ ಇದ್ದರೆ ಅವೆರಡ ರಿಂದಲೂ ಲಾಭವಾಗಲು ಕಲ್ಕವನ್ನು ಮಾಡಿಕೊಡಲು ಹೇಳಿದ್ದಾರೆ. ಹಾಗೂ ಕಲ್ಕವು ಸ್ವರಸಕ್ಕಿಂತ ಲಘುವಿರುತ್ತದೆ.

ಕಲ್ಕಮಾತ್ರಾ:-

तन्मात्रं कर्ष संमितम् (शा. सं. म. खं.)

ಕಲ್ಕದ ಮಾತ್ರಾ ಪ್ರಮಾಣವು ಒಂದು ಕರ್ಷ ಅಂದರೆ ಒಂದು ತೊಲಿ ಇರುತ್ತದೆ. ಮಧ್ಯಮವೀರ್ಯವಿದ್ದ ದ್ರವ್ಯದ ಕಲ್ಕವನ್ನು ಅರ್ಧತೊಲಿ ಪ್ರಮಾಣದಲ್ಲಿ ತೀಕ್ಷ್ಣ ವೀರ್ಯವುಳ್ಳ ಕಲ್ಕವನ್ನು ಕಾಲುತೊಲಿ ಪ್ರಮಾಣದಲ್ಲಿ ಕೊಡಬೇಕು.

ಪ್ರಕ್ಷೇಪ ದ್ರವ್ಯ ಪ್ರಮಾಣ:-

कल्के मधु घृतं तैलं देयं द्विगुण मात्रया ।

सितागुडं समंदद्याद्द्रवां देयाश्चतुर्गुणा: ॥ (शां. सं. म. खं.)

ಮಧು, ಘೃತ, ತೈಲಗಳನ್ನು ಕಲ್ಕದ ದುಪ್ಪಟ್ಟು, ಸಿತಾ ಹಾಗೂ ಗುಡವನ್ನು ಸಮಪ್ರಮಾಣದಲ್ಲಿ, ಯಾವದೇ ದ್ರವ ದ್ರವ್ಯವನ್ನು ಹಾಕುವದಾದರೆ ನಾಲ್ಕು ಪಟ್ಟು ಹಾಕಬೇಕು.

ಕ್ವಾಥಃ—

ಪರ್ಯಾಯ ನಾಮಃ— ಕ್ವಾಥ, ಶೃತ, ನಿರ್ಯೂಹ.

वह्नौ तु क्वथितं द्रव्यं शृतमाहुश्चिकित्सकाः । (च. सू. अ. ४)

तत्रान्यतमपरिमाण संमितानां यथायोगं त्वक्-पत्र-फल-मूलादीनामातपपरिशोषितानां छेद्यानि खण्डशश्छेदयित्वा, भेद्यान्यणुशो-भेदयित्वा अवकुटच, अष्टगुणेन, षोडशगुणेन वाऽम्भसाऽभिषिच्य स्थाल्यां चतुर्भागावशिष्टं क्वाथयित्वाऽपहरेदित्येष कषाय पाक कल्पः, अथवा द्विद्रोणे तत्रोदकद्रोणे त्वक्-पत्र-फल मूलादीनां तुलामावाप्य चतुर्भागावशिष्टं निष्क्वाथ्यापहरेदित्येष कषाय पाक कल्पः (सु. चि. अ ३१)

पानीयं षोडशगुणं क्षुण्णे द्रव्यपले क्षिपेत् ।
मृत्पात्रे क्वाथयेद् ग्राह्यमष्टमांशावशेषितम् ॥
तज्जलं पाययेद्धीमान् कोष्णं मृद्वग्नि साधितम् ।
(शा. सं. म. खं.)

ಉತ್ತಮ ರೀತಿಯಿಂದ ಕುಟ್ಟಿದ ದ್ರವ್ಯವನ್ನು ನಾಲ್ಕು ತೊಲಿ ತೆಗೆದುಕೊಂಡು ಅದರಲ್ಲಿ ಹದಿನಾರು ಪಟ್ಟು ಅಂದರೆ ಅರವತ್ನಾಲ್ಕು ತೊಲಿ ಜಲವನ್ನು ಮೃತ್ತಿಕಾ ಪಾತ್ರೆಯಲ್ಲಿ ಹಾಕಿ ಮಂದಾಗ್ನಿಯಮೇಲೆ ಕುದಿಸಿಕೊಳ್ಳಬೇಕು. $\frac{1}{8}$ ಶೇಷ ಉಳಿದೊಡನೆ ಕೆಳಗೆ ಇಳಿಸಿ ಸುಖೋಷ್ಣವಿರುವಾಗಲೇ ವಸ್ತ್ರಗಾಳಿತ ಮಾಡಿ ಅದರ ಉಪಯೋಗವನ್ನು ಮಾಡಿಕೊಳ್ಳಬೇಕು.

चतुर्गुणं मृदु द्रव्ये कठिनेऽष्ट गुणं जलम् ।
तथा च मध्यमे द्रव्ये दद्यादष्टगुणं पयः ।
अत्यंत कठिने द्रव्ये नीरं षोडशकं मतम् ॥
(शा. सं. म. खं. अ. ९)

ದ್ರವ್ಯವು ಮೃದು ವೀರ್ಯದ್ದು ಇದ್ದರೆ ನಾಲ್ಕು ಪಟ್ಟು ನೀರನ್ನು, ಮಧ್ಯಮ ವೀರ್ಯವುಳ್ಳ ದ್ರವ್ಯದ ಕ್ವಾಥ ತಯಾರಿಸುವಾಗ ಎಂಟು ಪಟ್ಟು ನೀರನ್ನು, ತೀಕ್ಷ್ಣ ವೀರ್ಯ ದ್ರವ್ಯವಿದ್ದರೆ ಹದಿನಾರು ಪಟ್ಟು ನೀರನ್ನು ಹಾಕಬೇಕು.

ಕ್ವಾಥವನ್ನು ತಯಾರು ಮಾಡುವಾಗ ದ್ರವ್ಯ ಹಾಗೂ ಜಲ ಪ್ರಮಾಣವನ್ನು ಈ ರೀತಿಯಾಗಿಯೂ ಹೇಳಿದ್ದಾರೆ.

कर्षादौ तु पलं यावत् दद्यात् षोडशिकं जलम् ।
ततस्तु कुडवं यावत्तोयमष्टगुणं भवेत् ॥
क्वाथ्य द्रव्यपले कुर्यात् प्रस्थार्धं पाद शेषितम् । (च. सं.)

द्रव्यमापोत्थितं कृत्वा कर्षाधिक पलांततः ।
जले षोडशिके पक्त्वा क्वाथः स्यात् पाद शेषितः ॥ (गं. प.)

ದ್ರವ್ಯದ ಪ್ರಮಾಣವು ನಾಲ್ಕು ತೊಲಿಗಳಷ್ಟು ಇದ್ದರೆ ಜಲವನ್ನು ಹದಿನಾರು ಪಟ್ಟು ಹಾಕಬೇಕು. ಐದರಿಂದ ಹದಿನಾರು ತೊಲಿಯುವರೆಗೆ ದ್ರವ್ಯವಿದ್ದರೆ ಎಂಟು ಪಟ್ಟು ಜಲವನ್ನು ಮತ್ತು ಹದಿನಾರು ತೊಲಿಗಳಿಗಿಂತ ಹೆಚ್ಚು ಪ್ರಮಾಣದಲ್ಲಿ ದ್ರವ್ಯವಿದ್ದರೆ ನಾಲ್ಕು ಪಟ್ಟು ಜಲವನ್ನು ಹಾಕಬೇಕು.

ಕ್ವಾಥವನ್ನು ತಯಾರು ಮಾಡುವಾಗ ಈ ಸಂಗತಿಗಳನ್ನು ಲಕ್ಷ್ಯದಲ್ಲಿಡಬೇಕು.

अपिधान मुखे पात्रे जलं दुर्जरतां व्रजेत् ।
तस्मादावरणं त्यक्त्वा क्वाथादीनां विनिश्चयः ।
(शा. सं. म. खं.)

ಕುದಿಯುತ್ತಿರುವಾಗ ಪಾತ್ರೆಯನ್ನು ಮುಚ್ಚಬಾರದು. ದ್ರವ್ಯವು ಹಸಿ ಇದ್ದರೆ ತೊಳೆಯಬೇಕು. ಶುಷ್ಕವಿದ್ದರೆ ಕುಟ್ಟಿ ಪುಡಿ ಮಾಡಿ ಉಪಯೋಗಿಸಬೇಕು. ವಿಶಿಷ್ಠ ರೋಗಗಳಲ್ಲಿ ಕ್ವಾಥವನ್ನು ತಯಾರಿಸಿ ಉಪಯೋಗ ಮಾಡುವದಾದರೆ ಕಫಜ ರೋಗಗಳಲ್ಲಿ $\frac{1}{8}$ ಶೇಷವನ್ನೂ, ಪಿತ್ತಜ ರೋಗಗಳಲ್ಲಿ $\frac{1}{2}$ ಶೇಷವನ್ನೂ, ವಾತ ರೋಗದಲ್ಲಿ $\frac{1}{4}$ ಶೇಷವನ್ನೂ ಉಳಿಸಿಕೊಡಬೇಕು.

ಮಾತ್ರಾ ಪ್ರಮಾಣ:—

क्वाथस्य मध्यमा मात्रा पलमाना प्रकीर्तिता ।

ಕ್ವಾಥದ ಮಾತ್ರಾ ಪ್ರಮಾಣವು ಒಂದು ಪಲವಿರುತ್ತದೆ. ಆದರಂತೆ ದೋಷಾಧಿಕದಂತೆ ಕ್ವಾಥದ ಮಾತ್ರಾ ಪ್ರಮಾಣವು ಹೆಚ್ಚು ಕಡಿಮೆ ಇರುತ್ತದೆ.

दीप्तानलं महाकायं पाययेदञ्जलि जलम् ।
अन्ये त्वर्ध्रं परित्यज्या प्रसृति चिकित्सकाः ।

ಕ್ವಾಥದಲ್ಲಿಯು ಪ್ರಕ್ಷೇಪ ದ್ರವ್ಯಗಳ ಪ್ರಮಾಣ:—

1) ಕ್ವಾಥದಲ್ಲಿ ಹಾಕುವ ಸಿತಾ, ಮಧುಗಳ ಪ್ರಮಾಣ:-

क्वाथे क्षिपेत्सितामंशैश्चतुर्थाष्टम षोडशैः ।
वातपित्त कफातंके विपरीतं मधु स्मृतम् (शा. सं म. खं.)

೨) ಸಿತಾ ಪ್ರಮಾಣ:- ವಾತದಲ್ಲಿ $\frac{1}{4}$ ಭಾಗ (ಕ್ವಾಥದ),
ಪಿತ್ತದಲ್ಲಿ $\frac{1}{8}$ ಭಾಗ
ಕಫದಲ್ಲಿ $\frac{1}{16}$ ಭಾಗ.

ಆ) ಮಧು ಪ್ರಮಾಣಃ– ವಾತದಲ್ಲಿ $\frac{1}{16}$ ಭಾಗ,
ಪಿತ್ತದಲ್ಲಿ $\frac{1}{8}$ ಭಾಗ,
ಕಫದಲ್ಲಿ $\frac{1}{4}$ ಭಾಗ ಹಾಕಬೇಕು.

2) ಚೂರ್ಣ ದ್ರವ್ಯಗಳ ಪ್ರಕ್ಷೇಪ ಪ್ರಮಾಣಃ–

जीरकं गुग्गुलं क्षारं लवणं च शिलाजतु ।
हिंगु त्रिकटुकं चैव क्वाथे शाणोन्मितं क्षिपेत् । (शा. सं. म. खं.)

ಜೀರಕ, ಗುಗ್ಗುಲು, ಕ್ಷಾರ, ಲವಣ, ಶಿಲಾಜತು, ಹಿಂಗು, ತ್ರಿಕಟು ಇವುಗಳ ಚೂರ್ಣವನ್ನು ನಾಲ್ಕು ನಾಲ್ಕು ಮಾಸಿ ಪ್ರಮಾಣದಲ್ಲಿ ಹಾಕಬೇಕು.

3) ದ್ರವ ದ್ರವ್ಯದ ಪ್ರಮಾಣಃ–

क्षीरं घृतं गुडं तैलं मूत्रं चान्यद् द्रवं तथा ।
कल्कं चूर्णादिकं क्वाथे निक्षिपेत् कर्ष संम्मितम् ।
(शा. सं. म. खं.)

ಕ್ಷೀರ, ಘೃತ, ಗುಡ, ತೈಲ, ಮೂತ್ರ ಮತ್ತು ಇತರ ದ್ರವ್ಯಗಳನ್ನು ಹಾಕುವದಾದರೆ ಒಂದು ಕರ್ಷ ಪ್ರಮಾಣದಲ್ಲಿ, ಚೂರ್ಣಕಲ್ಕಗಳನ್ನಾದರೂ ಕರ್ಷ ಪ್ರಮಾಣದಲ್ಲಿ ಹಾಕಬೇಕು.

ಕ್ವಾಥದ ಉಪಯೋಗಃ–

1) ವಿವಿಧ ರೋಗಗಳಲ್ಲಿ ಸೇವಿಸಲು 2) ವ್ರಣ ಪ್ರಕ್ಷಾಲನ
3) ಪರಿಷೇಚನ 4) ಘೃತ, ತೈಲ, ಅವಲೇಹ ಆಸವ, ಅರಿಷ್ಟ, ರಸಕ್ರಿಯಾ
ಇತ್ಯಾದಿ [illegible] ಉಪಯೋಗಿಸುತ್ತಾರೆ.

ಹಿಮ ವಿಧಿಃ–

द्रव्यादापोथितात्तोये प्रतप्ते निशि संस्थितात् ।
कषायो योऽभिनिर्याति स शीतः समुदाहृतः ॥ (च. सू अ. ४)

शीत सलिल प्लुतस्तु निशा पर्युषितः शीतः ।
(अ. स. क. अ. ८)

क्षुण्णं द्रव्यपलं सम्यक् षड्भिर्नीर पलैः प्लुतम् ।
निशोषितं हिमः स स्यात्तथा शीत कषायकः ॥
(शा. सं. म. खं.)

ಉತ್ತಮವಾದ ದ್ರವ್ಯವನ್ನು ತೆಗೆದುಕೊಂಡು ಚೆನ್ನಾಗಿ ಕುಟ್ಟಿ ಇದನ್ನು ಆರು ಪಟ್ಟು ನೀರಲ್ಲಿ ಮಣ್ಣಿನ ಇಲ್ಲವೆ ಕಾಜಿನಪಾತ್ರೆಯಲ್ಲಿ ಒಂದು ರಾತ್ರಿ ನೆನೆಯಿಡಬೇಕು. ಮುಂಜಾನೆ ಕೈಯಿಂದ ಮರ್ದಿಸಿ ಅರಿವೆಯಿಂದ ಸೋಸಿ ತೆಗೆದುಕೊಳ್ಳಬೇಕು. ಇದಕ್ಕೆ 'ಹಿಮ' ಅಥವಾ 'ಶೀತಕಷಾಯ' ಅನ್ನುವರು.

ಸಾಮಾನ್ಯವಾಗಿ ಶೀತವೀರ್ಯವುಳ್ಳ ಸುಗಂಧ ಹಾಗೂ ಮೃದು ದ್ರವ್ಯಗಳ ಹಿಮವನ್ನು ಮಾಡುತ್ತಾರೆ. ಇದನ್ನು ಪಿತ್ತಶಾಮಕವೆಂದು ಉಪಯೋಗಿಸುತ್ತಾರೆ.

ಮಾತ್ರಾ ಪ್ರಮಾಣ:-

तन्मानं फांट वज्ज्ञेयं सर्वत्रैवैष निश्चयः । (शा. सं. म. खं.)

ಹಿಮವನ್ನು ಎರಡು ಪಲ ಪ್ರಮಾಣದಲ್ಲಿ (ಫಾಂಟದಲ್ಲಿ ಹೇಳಿದ) ತೆಗೆದುಕೊಳ್ಳಬೇಕು.

ಪ್ರಕ್ಷೇಪ ದ್ರವ್ಯಗಳ ಪ್ರಮಾಣ:-

सिता मधु गुडादींस्तु क्वाथवत् प्रक्षिपेद्भिषक् ।

ಶೀತಕಷಾಯದಲ್ಲಿ ಸಿತಾ, ಮಧು, ಗುಡಗಳನ್ನು ಕ್ವಾಥದಲ್ಲಿ ಹೇಳಿದ ಪ್ರಮಾಣದಲ್ಲಿ ಹಾಕಬೇಕು.

ಫಾಂಟ:-

क्षिप्तोष्णतोये मृदितं तत् फांटपरिकीर्तितम् । (च. सू. अ. ४)
क्षुण्णे द्रव्यपले सम्यक् जलमुष्णं विनिक्षिपेत् ।
मृत्पात्रे कुडवोन्मानं ततस्तु स्रावयेत्पटात् ।
स स्याच्चूर्णं द्रवः फांटः......... ॥ (शा. सं. म. खं.)

ಚೆನ್ನಾಗಿ ಕುಟ್ಟಿ ಪುಡಿ ಮಾಡಿದ ದ್ರವ್ಯವನ್ನು ನಾಲ್ಕು ತೊಲಿ ತೆಗೆದುಕೊಂಡು ಹದಿನಾರು ತೊಲಿ ಕುದಿಯುವ ನೀರಿನಲ್ಲಿ ಹಾಕಿ ಆ ಪಾತ್ರೆಯ ಮುಖವನ್ನು ಮುಚ್ಚಿ ಅಗ್ನಿಯ ಮೇಲಿಂದ ಆ ಪಾತ್ರೆಯನ್ನು ಕೆಳಗೆ ಇಳಿಸಬೇಕು. ಆಮೇಲೆ ಕುಸು ಹೊತ್ತು ಹಾಗೆಯೇ ಇಡಬೇಕು.

ಅಥವಾ ಮೊದಲೇ ಒಂದು ಮೃತ್‌ಪಾತ್ರೆಯಲ್ಲಿ ದ್ರವ್ಯಚೂರ್ಣವನ್ನು ಹಾಕಿ ಆ ಪಾತ್ರೆಯಲ್ಲಿ ಕುದಿಯುತ್ತಿರುವ ನೀರನ್ನು ಹಾಕಬೇಕು. ನಂತರ ಪಾತ್ರೆಯ ಮುಖವನ್ನು ಮುಚ್ಚಿ ಕೆಲವು ವೇಳೆ ಹಾಗೆಯೇ ಇಡಬೇಕು. ಆಮೇಲೆ ಸ್ವಾಂಗಶೀತವಾದ ಮೇಲೆ ಅದನ್ನು ಕೈಯಿಂದ ಮರ್ದಿಸಿ ಸೋಸಿಕೊಂಡು ಉಪಯೋಗಿಸಬೇಕು. ಇದಕ್ಕೆ 'ಫಾಂಟ' ಅಥವಾ 'ಚೂರ್ಣ ದ್ರವ್ಯ' ಅನ್ನುವರು.

ಫಾಂಟವನ್ನಾದರೂ ಹಿಮದಂತೆಯೇ ಮೃದು ಹಾಗೂ ಸುಗಂಧ ದ್ರವ್ಯಗಳಿಂದ ಮಾಡುತ್ತಾರೆ.

ಮಾತ್ರಾ ಪ್ರಮಾಣ:-

.... तन्मानं द्विपलोन्मितम् । (शा. सं. म. खं.)

ಫಾಂಟವನ್ನು ಎರಡು ಪಲ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು.

ಪ್ರಕ್ಷೇಪ ದ್ರವ್ಯ ಪ್ರಮಾಣ:-

सितामधु गुडादींश्च क्वाथवत्तत्र निक्षिपेत् । (शा सं. म. खं.)

ಫಾಂಟದಲ್ಲಿ ಸಿತಾ, ಮಧು, ಗುಡಾದಿಗಳನ್ನು ಕ್ವಾಥದಲ್ಲಿ ಹೇಳಿದ ಪ್ರಮಾಣದಲ್ಲಿ ಹಾಕಬೇಕು.

ಚೂರ್ಣ:—

अत्यंत शुष्कं यद् द्रव्यं सुपिष्टं वस्त्रगालितम् ।
तत्स्याच्चूर्णं रजः क्षोदस्तन्मात्रा कर्ष संमिता ॥
(शा सं. म. खं.)

शुष्क पिष्टः सूक्ष्म तांतव पटच्युतश्चूर्णः ।
तस्य समस्त द्रव्य परित्यागादाप्लुतोपयोगाच्च कल्काद्भेदः ।
(अ. स. क. अ. ८)

ಚೆನ್ನಾಗಿ ಒಣಗಿದಂಥ ದ್ರವ್ಯವನ್ನು ತಂದು ಅಥವಾ ದ್ರವ್ಯವನ್ನು ಉತ್ತಮ ರೀತಿಯಿಂದ ಆತಪ ಶುಷ್ಕ ಮಾಡಿಕೊಂಡು ಚನ್ನಾಗಿ ಕುಟ್ಟಿ ಪುಡಿ ಮಾಡಿಕೊಳ್ಳಬೇಕು. ನಂತರ ವಸ್ತ್ರಗಾಲಿತ ಮಾಡಿಕೊಂಡು ಉಪಯೋಗಿಸಿಕೊಳ್ಳಬೇಕು. ಇದಕ್ಕೆ ರಜ, ಕ್ಷೋದ, ಚೂರ್ಣ ಎಂದು ಪರ್ಯಾಯದಿಂದ ಕರೆಯುತ್ತಾರೆ.

ಚೂರ್ಣವನ್ನು ಮಾಡುವಾಗ ಕಲ್ಕದಂತೆಯೇ ಮಾಡಬೇಕಾಗುತ್ತದೆ. ಆದರೆ ಕಲ್ಕವು ಹಸಿ ಇದ್ದು ಚೂರ್ಣವು ಶುಷ್ಕವಿರುತ್ತದೆ. ಚೂರ್ಣವನ್ನು ದ್ರವಪದಾರ್ಥದೊಡನೆ ಸೇವಿಸಬೇಕಾಗುತ್ತದೆ. ಆದ್ದರಿಂದ ಚೂರ್ಣವು ಕಲ್ಕದ ಒಂದು ಭೇದವೆಂದು ಅಷ್ಟಾಂಗ ಸಂಗ್ರಹದಲ್ಲಿ ಹೇಳಿದ್ದಾರೆ.

ಪ್ರಕ್ಷೇಪ ದ್ರವ್ಯಗಳು:-

ಚೂರ್ಣದಲ್ಲಿ ಗುಡ, ಸಿತಾ, ಮಧು, ಹಿಂಗು ಮುಂತಾದವುಗಳನ್ನು ಹಾಕುವಾಗ ವಿಶಿಷ್ಟ ಪ್ರಮಾಣದಲ್ಲಿಯೇ ಹಾಕಬೇಕೆಂದು ಹೇಳಿದ್ದಾರೆ.

ಗುಡಾದಿ ಮಾನ:-

चूर्णे गुडः समो देयः शर्करा द्विगुणा भवेत् ।
चूर्णेषु भर्जितं हिंगु देयं नोत्क्लेदकृद्भवेत् ॥ (शा. सं. म. खं.)

ಚೂರ್ಣದಲ್ಲಿ ಗುಡವನ್ನು ಕೂಡಿಸುವದಿದ್ದರೆ ಸಮ ಪ್ರಮಾಣದಲ್ಲಿ, ಸಕ್ಕರೆಯನ್ನು ದುಪ್ಪಟ್ಟು ಕೂಡಿಸಬೇಕು.

ಚೂರ್ಣದಲ್ಲಿ ಹಿಂಗು ಹಾಕಬೇಕಿದ್ದರೆ ಅದನ್ನು ಭರ್ಜಿತಮಾಡಿ ಹಾಕಬೇಕು. ಹಾಗೆಯೇ ಹಾಕಿದರೆ ಅದು ಉತ್ಕ್ಲೇಶಿತವಾಗುವದು.

ದ್ರವ ದ್ರವ್ಯಗಳ ಮಾನ:-

लिहेच्चूर्णं द्रवैः सर्वैर्घृताद्यैर्द्विगुणोन्मितैः ।
पिबेच्चतुर्गुणैरेव चूर्णमालोडितं द्रवैः ॥ (शा. सं. म. खं.)

ಘೃತ, ತೈಲ, ಮಧುಗಳನ್ನು ಚೂರ್ಣದಲ್ಲಿ ದುಪ್ಪಟ್ಟು ಹಾಕಿ ನೆಕ್ಕಬೇಕು. ಚೂರ್ಣವನ್ನು ಹಾಲು, ಜಲದೊಡನೆ ಸೇವಿಸಬೇಕಾಗಿದ್ದರೆ ಅದರ ನಾಲ್ಕು ಪಟ್ಟು ದ್ರವ ವನ್ನು ಅದರಲ್ಲಿ ಹಾಕಿ ಕುಡಿಯಬೇಕು.

ಅನುಪಾನ ಹೇತು:-

यथा तैलं जले क्षिप्तं क्षणेनैव प्रसर्पति ।
अनुपान बलादंगे तथा सर्पति भेषजम् ।। (शा. सं. म. खं.)

ನೀರಿನಲ್ಲಿ ಹಾಕಿದ ತೈಲಬಿಂದುವು ಕ್ಷಣದಲ್ಲಿ ನೀರಿನತುಂಬ ಪಸರಿಸುವಂತೆ ಅನು ಪಾನದೊಡನೆ ತೆಗೆದುಕೊಂಡ ಚೂರ್ಣವು ದೇಹದಲ್ಲಿ ಪಸರಿಸುವದು. ಮತ್ತು ರೋಗ ನಾಶ ಮಾಡುವದು.

ದೋಷಾನುಸಾರ ಅನುಪಾನ ವಿಧಿ:-

चूर्णावलेहगुटिका कल्कानामनुपानकम् ।
वातपित्त कफातंके त्रिद्व्येक पलमाहरेत् ।। (शा. सं. म खं.)

ಚೂರ್ಣ, ಅವಲೇಹ, ಗುಟಿಕಾ, ಕಲ್ಕಗಳ ಸಲುವಾಗಿ ಅನುಪಾನವು ದೋಷಾನು ಸಾರವಾಗಿ ಅಂದರೆ ವಾತದಲ್ಲಿ ಮೂರು ಪಲ, ಪಿತ್ತದಲ್ಲಿ ಎರಡು ಪಲ ಹಾಗೂ ಕಫ ರೋಗಗಳಲ್ಲಿ ಒಂದು ಪಲ ತೆಗೆದುಕೊಳ್ಳಬೇಕು.

ಚೂರ್ಣ ಮಾತ್ರಾ ಪ್ರಮಾಣ:-

....तन्मात्रा कोल संमिता । (शा. म. सं. खं.)

ಚೂರ್ಣದ ಮಾತ್ರಾಪ್ರಮಾಣವು ಒಂದು ಕೋಲವಿರುತ್ತದೆ. ಚೂರ್ಣಕ್ಕೆ ಭಾವನೆಯನ್ನು ಕೊಡಬೇಕಾಗಿದ್ದರೆ,

द्रवेण यावता सम्यक् चूर्णं सर्वं प्लुतं भवेत् ।
भावनायाः प्रमाणं तु चूर्णे प्रोक्तं भिषग्वरैः ।। (शा. सं. म. खं.)

ಚೂರ್ಣವನ್ನು ಖಲ್ವದಲ್ಲಿ ಹಾಕಿ ಅದು ಮುಳುಗುವವರೆಗೆ ದ್ರವ್ಯವನ್ನು ಹಾಕಿ ಮರ್ದನ ಮಾಡಬೇಕು.

-: ವಟಕ :-

ಪರ್ಯಾಯ ನಾಮ:-

वटिकाश्चाथ कथ्यंते तन्नाम गुटिका वटी ।
मोदको वटिका पिण्डी गुडो वर्तिस्तथोच्यते ॥ (शा. सं. म. खं.)

ಗುಟಿಕಾ ಇದಕ್ಕೆ ವಟಕ, ವಟಿ, ಮೋದಕ, ವಟಿಕಾ, ಪಿಂಡೀ, ಗುಡ, ವರ್ತಿ ಎಂಬ ಪರ್ಯಾಯ ನಾಮಗಳಿವೆ.

लेहवत्साध्यते वह्नौ गुडो वा शर्करा तथा ।
गुग्गुलुर्वा क्षिपेत्तत्र चूर्णं तन्निर्मिता वटी ॥
कुर्यादवह्नि सिद्धेन क्वचिद् गुग्गुलुना वटीम् ।
द्रवेण मधुना वाऽपि गुटिकां कारयेद् बुधः । (शा. सं. म. खं.)

ಗುಟಿಕಾಗಳನ್ನು ವಿವಿಧ ರೀತಿಯಿಂದ ತಯಾರಿಸುತ್ತಾರೆ.

1) ದ್ರವ್ಯಚೂರ್ಣದಲ್ಲಿ ಸಿತಾಲೇಹ ಕೂಡಿಸಿ ಮರ್ದನ ಮಾಡಿ ಗುಟಿಕಾ ತಯಾರಿಸುವರು.

2) ದ್ರವ್ಯ ಚೂರ್ಣಕ್ಕೆ ಉಕ್ತ ದ್ರವ್ಯದ ಸ್ವರಸ, ಕ್ವಾಥ, ಹಿಮ, ಫಾಂಟ ಇವುಗಳಲ್ಲಿ ಯಾವದಾದರೊಂದರ ಭಾವನೆಯನ್ನು ಕೊಟ್ಟು ಗುಟಿಕಾ ತಯಾರಿಸುವದು.

3) ದ್ರವ್ಯ ಚೂರ್ಣದಲ್ಲಿ ಗುಡವನ್ನು ಹಾಕಿ ಮರ್ದನಮಾಡಿ ಗುಟಿಕಾವನ್ನು ತಯಾರಿಸುವದು.

4) ಶುದ್ಧ ಗುಗ್ಗುಲುವನ್ನು ತೆಗೆದುಕೊಂಡು ಅದನ್ನು ತ್ರಿಫಳಾ ಕ್ವಾಥದಲ್ಲಿ ದ್ರವ ಮಾಡಿಕೊಂಡು ಅದರಲ್ಲಿ ಉಕ್ತ ದ್ರವ್ಯಗಳ ಚೂರ್ಣವನ್ನು ಹಾಕಿ ಅಗ್ನಿಯ ಮೇಲಿಟ್ಟು ಘನ ಮಾಡಿಕೊಂಡು ಗುಟಿಕಾ ತಯಾರಿಸುವದು.

5) ದ್ರವ ದ್ರವ್ಯವು ಹೆಚ್ಚಿಗಿದ್ದರೆ ಅದರಲ್ಲಿ ಉಕ್ತದ್ರವ್ಯ ಚೂರ್ಣಗಳನ್ನು ಹಾಕ್ಕಿ ಅಗ್ನಿಯ ಮೇಲಿಟ್ಟು ಪಚನಮಾಡಿ ಘನ ಮಾಡಿಕೊಂಡು ಗುಟಿಕಾವನು ತಯಾರಿಸುವದು.

6) ಅನಗ್ನಿಸಿದ್ಧ ಗುಗ್ಗುಲುಯುಕ್ತ ವಟಕ:-
ತ್ರಿಫಳಾ ಕ್ವಾಥವನ್ನು ತಯಾರು ಮಾಡಿಕೊಂಡು ಅದನ್ನು ಒಂದು ಖಲ್ವದಲ್ಲಿ ಹಾಕಬೇಕು. ಇದರಲ್ಲಿ ಶುದ್ಧ ಗುಗ್ಗುಲುವನ್ನು ಹಾಕಿ ಅದು ಏಕರೂಪವಾಗಿ ಘನ ವಾಗುವವರೆಗೆ ಮರ್ದನಮಾಡಬೇಕು. ಸಾಧಾರಣ ರೀತಿಯಿಂದ ಘನವಾದ ಮೇಲೆ

ಆದರಲ್ಲಿ ಉಕ್ತ ದ್ರವ್ಯಗಳ ಸೂಕ್ಷ್ಮ ವಸ್ತ್ರಗಾಲಿತ ಚೂರ್ಣವನ್ನು ಹಾಕಿ ಮರ್ದನ ಮಾಡಬೇಕು. ನಂತರ ಕೈಗೆ ತುಪ್ಪವನ್ನು ಹಚ್ಚಿಕೊಂಡು ವರ್ತಿಯನ್ನು ತಯಾರಿಸಿ ಪ್ರಮಾಣ ಬದ್ಧವಾದ ಗುಟಿಕಾಗಳನ್ನು ತಯಾರಿಸಬೇಕು.

ಈ ಪ್ರಕಾರ ಗುಟಿಕಾಗಳನ್ನು ತಯಾರಿಸಿ ಅವನ್ನು ಶುಷ್ಕಮಾಡಿಕೊಂಡು ಕಾಜಿನ ಭರಣಿಯಲ್ಲಿ ಹಾಕಿಡಬೇಕು.

ಪ್ರಕ್ಷೇಪ ದ್ರವ್ಯ ಪ್ರಮಾಣ:–

सिता चतुर्गुणा देया वटीषु द्विगुणो गुडः ।
चूर्णाच्चूर्णं समः कार्यो गुग्गुलुर्मधु तत्समम् ।।
द्रवं च द्विगुणं देयं मोदकेषु भिषग्वरैः । (शा. सं. म. खं.)

ಗುಟಿಕಾವನ್ನು ತಯಾರಿಸುವಾಗ ಸಿತಾವನ್ನು ಹಾಕಬೇಕಾಗಿದ್ದರೆ ಚೂರ್ಣದ ನಾಲ್ಕು ಪಟ್ಟು ಹಾಕಬೇಕು. ಗುಡವನ್ನು ಹಾಕುವದಿದ್ದರೆ ಎರಡು ಪಟ್ಟು ಹಾಕಬೇಕು. ಗುಗ್ಗುಲು ಮತ್ತು ಮಧು ಇವನ್ನು ಸಮ ಪ್ರಮಾಣದಲ್ಲಿ ಹಾಕಬೇಕು. ದ್ರವ ಹಾಗೂ ಜಲ, ಸ್ವರಸ, ಕ್ವಾಥಾದಿಗಳನ್ನು ಚೂರ್ಣವು ಮುಳುಗುವವರೆಗೆ ಹಾಕಬೇಕು. ಇಲ್ಲವೇ ಚೂರ್ಣದ ಎರಡು ಪಟ್ಟು ಹಾಕಬೇಕು.

ಗುಟಿಕಾ ಮಾತ್ರಾ ನಿರ್ದೇಶ:–

कर्षप्रमाणा तन्मात्रा बलं दृष्टवा प्रयुज्यताम् । (शा. सं. म. खं.)

ಗುಟಿಕಾ ಮಾತ್ರಾಪ್ರಮಾಣವನ್ನು ಹೇಳಿರದಿದ್ದರೆ ಅಲ್ಲಿಗೆ ಒಂದು ಕರ್ಷ ಪ್ರಮಾಣದಲ್ಲಿ ಕೊಡಬೇಕು. ಗುಟಿಕಾಗಳನ್ನು ಕೊಡುವಾಗ ದೇಹಬಲ, ವ್ಯಾಧಿಯ ಬಲ ಇವುಗಳ ವಿಚಾರ ಮಾಡಿ ಕೊಡಬೇಕು.

ಕ್ಷೀರಪಾಕ:—

क्षीरमष्टगुणं द्रव्यात्क्षीरान्नीरं चतुर्गुणम् ।
क्षीरावशेषं तत्पीतं शूलमामोद्भवं जयेत् ।। (शा. सं. म. खं.)

ದ್ರವ್ಯ ಚೂರ್ಣ ಹಾಗೂ ದ್ರವ್ಯಚೂರ್ಣದ ಎಂಟು ಪಟ್ಟು ಕ್ಷೀರ, ಕ್ಷೀರದ ನಾಲ್ಕು ಪಟ್ಟು ನೀರನ್ನು ಹಾಕಿ ಒಂದು ಮೃತ್ತಿಕಾ ಪಾತ್ರೆಯಲ್ಲಿಹಾಕಿ ಕ್ಷೀರಾವಶೇಷವಾಗುವ ವರೆಗೆ ಅಗ್ನಿಯ ಮೇಲಿಟ್ಟು ಪಚನ ಮಾಡಿಕೊಳ್ಳಬೇಕು. ಇದು ಕ್ಷೀರಪಾಕ ಮಾಡುವ ಒಂದು ವಿಧಾನವು.

क्षीरादि सहितं च द्रव्यं न सम्यक् भुक्तरसं भवति वारि क्वाथ पूर्वकं क्षीराद्यैस्तदुपदेशोऽनुपदग्ध क्वाथयेत् । (अ स. क. ८)

ಹಾಲಿನಲ್ಲಿ ವನಸ್ಪತಿಯನ್ನು ಕೂಡಿಸುವದರಿಂದ ಸಂಪೂರ್ಣ ಸಾರಭಾಗವು ಬರುವ ದಿಲ್ಲ. ಆದ್ದರಿಂದ ಪ್ರಥಮ ಜಲದಲ್ಲಿ ದ್ರವ್ಯದ ಕ್ವಾಥವನ್ನು ತಯಾರಿಸಿಕೊಂಡು ನಂತರ

ಕ್ವಾಥದಷ್ಟೇ ದುಗ್ಧವನ್ನು ಹಾಕಿ ದುಗ್ಧಾವಶೇಷ ಉಳಿಯುವವರೆಗೆ ಪಚನ ಮಾಡಿಕೊಳ್ಳಬೇಕು. ನಂತರ ವಸ್ತ್ರಗಾಲಿತ ಮಾಡಿ ಉಪಯೋಗ ಮಾಡಿಕೊಳ್ಳಬೇಕು. ಎಂದು ವೃದ್ಧ ವಾಗ್ಭಟಾಚಾರ್ಯರು ಹೇಳಿದ್ದಾರೆ.

ಕ್ಷೀರಪಾಕ ಹೇತು:–

ತೀಕ್ಷ್ಣವೀರ್ಯ ಮತ್ತು ಕಷಾಯ ರಸಪ್ರಧಾನ ದ್ರವ್ಯಗಳ ಕ್ಷೀರಪಾಕ ಮಾಡಿ ಕೊಡಬೇಕಾಗುತ್ತದೆ. ಹಾಗೂ ಆಹಾರ, ಔಷಧವೆಂದು ಎರಡೂ ರೀತಿಯಿಂದ ಉಪಯೋಗ ಮಾಡುವದರ ಸಲುವಾಗಿ ಕ್ಷೀರಪಾಕವನ್ನು ಮಾಡಬೇಕು.

ಸ್ನೇಹ ಪಾಕ: —

ಸ್ನೇಹ ಪಾಕವೆಂದರೆ ಘೃತ, ತೈಲ ಇವುಗಳನ್ನು ಸ್ವರಸ, ಕ್ವಾಥ ಆದಿ ದ್ರವ ಪದಾರ್ಥಗಳೊಡನೆ ಪಚನ ಮಾಡಿಕೊಂಡು ತೈಲ ಇಲ್ಲವೆ ಘೃತವನ್ನು ಸಿದ್ಧಮಾಡುತ್ತಾರೆ.

जलस्नेहौषधानां तु प्रमाणं यत्र नेरितम् ।
तत्र स्यादौषधात् स्नेहः स्नेहात्तोयं चतुर्गुणम् ।
(च. क. अ. १२)

स्नेहात् चतुर्गुणो द्रवः स्नेहचतुर्थांशो भेषज कल्कः तदैकध्यं संसृज्य विपचेत् इत्येष स्नेहपाक कल्पः । (सु. चि. अ. ३१)

कल्काच्चतुर्गुणीकृत्य घृतं वा तैलमेव वा ।
चतुर्गुणे द्रवे साध्यं........... (शा. सं. म. खं.)
अनुक्ते द्रव कार्ये तु सर्वत्र सलिलं मतम् ।
कल्क क्वाथावनिर्देशे गणात्तस्मात् प्रयोजयेत् ।।
(सु. चि. अ. ३१)

ಸ್ನೇಹಪಾಕವನ್ನು ಮಾಡುವಾಗ ಅಲ್ಲಿಗೆ ಪ್ರಮಾಣವನ್ನು ಹೇಳಿರದಿದ್ದರೆ ದ್ರವ್ಯದ ನಾಲ್ಕು ಪಟ್ಟು ಸ್ನೇಹವನ್ನು, ಸ್ನೇಹದ ನಾಲ್ಕು ಪಟ್ಟು ಜಲವನ್ನು ತೆಗೆದುಕೊಂಡು ಸ್ನೇಹ ಶೇಷ ಉಳಿಯುವವರೆಗೆ ಪಚನ ಮಾಡಿಕೊಳ್ಳಬೇಕು.

ಸ್ನೇಹಪಾಕವನ್ನು ಮಾಡುವಾಗ ನಿರ್ದಿಷ್ಟ ಕ್ವಾಥಾದಿಗಳನ್ನು ಹೇಳಿರದಿದ್ದರೆ ಅಲ್ಲಿಗೆ ಜಲವನ್ನು ತೆಗೆದುಕೊಳ್ಳಬೇಕು. ಕಲ್ಕವನ್ನು ಹೇಳಿರದಿದ್ದರೆ ಯಾವ ಗಣದ ದ್ರವ್ಯಗಳ ಕ್ವಾಥವನ್ನು ಗ್ರಹಣ ಮಾಡಿರುತ್ತೇವೆಯೋ ಅದೇ ಗಣ ದ್ರವ್ಯಗಳ ಕಲ್ಕವನ್ನು ಮಾಡಿಕೊಂಡು ಸ್ನೇಹಪಾಕದ ಸಲುವಾಗಿ ಉಪಯೋಗಿಸಬೇಕು.

ಸ್ನೇಹಪಾಕ ಮಾಡುವ ಮತ್ತೊಂದು ವಿಧಾನವನ್ನು ಹೇಳುತ್ತಾರೆ.

निक्षिप्य क्वाथयेत्तोयं क्वाथ्यद्रव्याच्चतुर्गुणम् ।
पादशिष्टं गृहीत्वा च स्नेहं तेनैव साधयेत् ॥ (शा. सं. म. खं.)

ದ್ರವ್ಯಚೂರ್ಣದ ನಾಲ್ಕು ಪಟ್ಟು ನೀರನ್ನು ಹಾಕಿ ಚತುರ್ಥಾಂಶ ಜಲ ಶೇಷ ಉಳಿಯುವವರೆಗೆ ಪಚನ ಮಾಡಿಕೊಂಡು ಶೇಷ ಕ್ವಾಥದಷ್ಟೇ ಸ್ನೇಹವನ್ನು ಹಾಕಿ ಸ್ನೇಹ ಶೇಷ ಉಳಿಯುವವರೆಗೆ ಪಚನ ಮಾಡಿಕೊಳ್ಳಬೇಕು.

ಸ್ನೇಹದ ಅನುಕ್ತ ಪರಿಭಾಷಾ:—

दुग्धे दध्नि रसे तक्रे कल्को देयोऽष्टमांशकः ॥
कल्कस्य सम्यक् पाकार्थं तोयमत्र चतुर्गुणम् । (शा. सं. म. खं.)

ದುಗ್ಧ, ದಧಿ, ಮಾಂಸರಸ, ತಕ್ರಗಳಲ್ಲಿ ಸ್ನೇಹಪಾಕ ಮಾಡುವದಿದ್ದರೆ ಕಲ್ಕವನ್ನು ಸ್ನೇಹದ ಎಂಟನೆಯ ಭಾಗ ಹಾಗೂ ನೀರನ್ನು ಸ್ನೇಹದ ನಾಲ್ಕು ಪಟ್ಟು ತೆಗೆದುಕೊಳ್ಳಬೇಕು.

द्रवाणि यत्र स्नेहेषु पञ्चादीनि भवंति हि ।
तत्र स्नेहसमान्याहुर्यथापूर्वं चतुर्गुणम् । (शा. सं. म. खं.)

ದುಗ್ಧ, ಮೂತ್ರ, ದಧಿ, ತಕ್ರ ಆದಿ ದ್ರವ ಪದಾರ್ಥಗಳು ಐದು ಇಲ್ಲವೇ ಐದಕ್ಕಿಂತ ಹೆಚ್ಚು ಇದ್ದರೆ ಪ್ರತ್ಯೇಕ ದ್ರವ ದ್ರವ್ಯವನ್ನು ಸ್ನೇಹದ ಸಮ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು. ಒಂದೇ ದ್ರವ ದ್ರವ್ಯವಿದ್ದರೆ ಸ್ನೇಹದ ನಾಲ್ಕು ಪಟ್ಟು, ಎರಡು ದ್ರವ ದ್ರವ್ಯವಿದ್ದರೆ ಸ್ನೇಹದ ಎರಡು ಪಟ್ಟು ಗ್ರಹಣ ಮಾಡಬೇಕು.

द्रवेण केवलेनैव स्नेहपाको भवेद्यदि ।
तत्राम्बु पिष्टः कल्कः स्याज्जलं चात्रचतुर्गुणम् ।
(शा. सं. म. खं.)

ಸ್ನೇಹಪಾಕವನ್ನು ಮಾಡುವಾಗ ದ್ರವ ದ್ರವ್ಯವನ್ನು ಹೇಳಿರದಿದ್ದರೆ ಅಲ್ಲಿಗೆ ದ್ರವ್ಯವನ್ನು ನೀರಿನಲ್ಲಿ ತೇಯ್ದು ಸ್ನೇಹವ ನಾಲ್ಕು ಪಟ್ಟು ನೀರನ್ನು ಹಾಕಿ ಸ್ನೆಹಪಾಕವನ್ನು ಸಿದ್ಧ ಮಾಡಬೇಕು.

क्वाथेन केवलेनैव पाको यत्रेरितः क्वचित् ।
क्वाथ्य द्रव्यस्य कल्कोऽपि तत्र स्नेहे प्रयुज्यते ॥
(शा सं. म. खं.)

ಕೇವಲ ಕ್ವಾಥದಿಂದಲೇ ಸ್ನೇಹಪಾಕವನ್ನು ಸಿದ್ಧ ಮಾಡುವದಾದರೆ ಅಲ್ಲಿಗೆ ಕ್ವಾಥ ಹಾಗೂ ಕ್ವಾಥ್ಯ ದ್ರವ್ಯಗಳ ಕಲ್ಕವನ್ನು ಗ್ರಾಹ್ಯ ಮಾಡಬೇಕು.

कल्क हीनस्तु यः स्नेहः स साध्यः केवले द्रवे ।
(शा. सं. म. खं.)

ಸ್ನೇಹಪಾಕವನ್ನು ಮಾಡುವಾಗ ಕಲ್ಕವನ್ನು ಹೇಳಿರದಿದ್ದರೆ ಅಲ್ಲಿಗೆ ದ್ರವದಲ್ಲಿಯೇ ಸ್ನೇಹಪಾಕವನ್ನು ಮಾಡಿಕೊಳ್ಳಬೇಕು.

पुष्प कल्कस्तु यः स्नेहस्तत्र तोयं चतुर्गुणम् ।
स्नेहे स्नेहाष्टमांशश्च पुष्प कल्कः प्रयुज्यते । (शा. सं. म. खं.)

ಪುಷ್ಪಕಲ್ಕದ ಸ್ನೇಹಪಾಕವನ್ನು ಮಾಡುವದಿದ್ದರೆ ಸ್ನೇಹದ ನಾಲ್ಕು ಪಟ್ಟು ನೀರನ್ನು. ಸ್ನೇಹದ ಎಂಟನೆಯ ಭಾಗ ಪುಷ್ಪ ಕಲ್ಕವನ್ನು ತೆಗೆದುಕೊಳ್ಳಬೇಕು.

ಸ್ನೇಹಪಾಕ ವಿವೇಚನ:—

अथैकध्यं प्रति संसृज्याधिश्रित्य च निर्यूहवत् साधयेत् । तत्र यदा विरमति शब्दः, प्रसादमापद्यतो स्नेहः, यथास्वं गंधवर्णरसोत्पत्तिः, भैवज्यमंगुलिभ्यां मृद्यमानति मृद्वनति दारुणमनंगुलि ग्राहि च स्यात्, स कालस्तस्यावतरणाय । (अ. सं. क. अ. ८)

अपि च घृतस्य फेनोपशमः तैलस्य तु तदुद्भवः ।(अ. सं. क. ८)

यदा फेनोद्गमस्तैले फेन शांतिश्च सर्पिषि ।
गंधवर्ण रसोत्पत्तिः स्नेहः सिद्धस्तदा भवेत् ।। (शा. सं म. खं.)

ದ್ರವ್ಯದ ಕಲ್ಕ, ಜಲ, ಸ್ನೇಹವನ್ನು ಉಕ್ತ ಪ್ರಮಾಣದಲ್ಲಿ ತೆಗೆದುಕೊಂಡು ಒಂದು ಮೃತ್ತಿಕಾ ಪಾತ್ರೆಯಲ್ಲಿ ಹಾಕಿ ಮಂದಾಗ್ನಿಯ ಮೇಲೆ ಪಚನ ಮಾಡಿಕೊಳ್ಳಬೇಕು. ಸ್ನೇಹವು ಪ್ರಸಾದ ರೂಪದಲ್ಲಿ ತಯಾರಾಗಲು ಅದರಲ್ಲಿ ಹಾಕಿದ ದ್ರವ್ಯಗಳ ಗಂಧ, ವರ್ಣ, ರಸೋತ್ಪತ್ತಿಯು ಯೋಗ್ಯರೀತಿಯಿಂದ ಉಂಟಾದಮೇಲೆ ಅದರಲ್ಲಿಯ ಕಲ್ಕ ವನ್ನು ಅಂಗುಲಿಯಿಂದ ಸ್ಪರ್ಶಮಾಡಿ ಅದು ಅಂಗುಲಿಗೆ ಅಂಟಕೊಳ್ಳದಿದ್ದರೆ ಹಾಗೂ ಕಲ್ಕವನ್ನು ವರ್ತಿ ಮಾಡಲು ಬರುವಂತಿದ್ದರೆ ಅದನ್ನು ಕೆಳಗೆ ಇಳಿಸಬೇಕು.

ಸ್ನೇಹಪಾಕ ಸಿದ್ಧ ಲಕ್ಷಣ:-

नांगुलि ग्राहिका कल्के न स्नेहेऽग्नौ स शब्दता ।
(अ. हृ.. क. अ. ६)

ಅಂಗುಲಿಯಿಂದ ಸ್ನೇಹ ಕಲ್ಕವನ್ನು ಒತ್ತಿದರೆ ಅದು ಅರತೀಕೊಳ್ಳಬಾರದು. ಹಾಗೂ ಈ ಕಲ್ಕವನ್ನು ಅಗ್ನಿಯಲ್ಲಿ ಹಾಕಿದರೆ ಚಟ್‌ಚಟ್ ಎಂದು ಸಪ್ಪಳವು ಬರ ಬಾರದು. ಈ ಪರೀಕ್ಷೆಗಳನ್ನು ಮಾಡಿ ಸ್ನೇಹವನ್ನು ಅಗ್ನಿಯಮೇಲಿಂದ ಕೆಳಗಿಳಿಸಬೇಕು.

वर्तिवत् स्नेह कल्कः स्याद्यदांगुल्या विमर्दितः ।
शब्द हीनोऽग्निक्षिप्तः स्नेहःसिद्धो भवेत्तदा ।। (शा. सं. म. खं.)

ಈ ಸ್ನೇಹಪರಿಕ್ಷಾವಿಧಿಯನ್ನು ಶಾರ್ಙ್ಗಧರ ಸಂಹಿತೆಯಲ್ಲಿ ಹೇಳಿದ್ದಾರೆ. ಈ ಪ್ರಕಾರ ಸ್ನೇಹಪರೀಕ್ಷೆಯನ್ನು ಮಾಡಿಕೊಂಡು :-

अथावतार्यं शीतीभूतमहतेन वाससा परिपूय, शुचौ दृढे कलशे समासिच्य, अपिधानेन पिधाय, शुक्लेन वस्त्रेणाच्छाद्य सूत्रेण सुबद्धं स्वनुगुप्तं शुचौ देशे सुस्थितं स्थापयेत् । (अ. सं. क. अ. ८)

ನಂತರ ಸ್ನೇಹಪಾಕವು ಸ್ವಾಂಗ ಶೀತವಾದಮೇಲೆ ಸ್ವಚ್ಛವಾದ ವಸ್ತ್ರದಿಂದ ಸೋಸಿಕೊಂಡು ಸ್ವಚ್ಛವಾದ ಕಾಚಿನ ಕೂಪಿಯಲ್ಲಿ ಹಾಕಿ ವಸ್ತ್ರದಿಂದ ಮುಚ್ಚಿ ದಾರ ವನ್ನು ಬಿಗಿದು ಯೋಗ್ಯವಾದ, ಸ್ವಚ್ಛವಾದ ಸ್ಥಳದಲ್ಲಿ ಇಡಬೇಕು.

ಸ್ನೇಹಪಾಕವನ್ನು ತಯಾರು ಮಾಡುವಾಗ ಅದನ್ನು ಒಂದು ದಿವಸ ಅರ್ಧಪಾಕ ಮತ್ತೊಂದು ದಿವಸ ಅರ್ಧಪಾಕ ಮಾಡಿಕೊಳ್ಳಲು ಹೇಳಿದ್ದಾರೆ. ಯಾಕಂದರೆ ದ್ರವ್ಯದ ಸಂಪೂರ್ಣ ವೀರ್ಯವು ಸ್ನೇಹದಲ್ಲಿ ಬರಲು ಸಹಾಯವಾಗುವದು.

घृत तैल गुडादींश्च साधयेन्नैकवासरे ।
प्रकुर्वंत्युषिता ह्येते विशेषाद् गुण सञ्चयम् ।। (शा. सं. म. खं.)

ಸ್ನೇಹಪಾಕದ ಪ್ರಕಾರಗಳು:—

स्नेहपाकस्त्रिधा प्रोक्तो मृदुर्मध्यः खरस्तथा । (शा. सं. म. खं.)
ಮೃದು, ಮಧ್ಯ, ಖರ ಎಂದು ತ್ರಿವಿಧ ಸ್ನೇಹಪಾಕಗಳು.

1) ಮೃದುಪಾಕ:-

ईषत्सरस कल्कस्तु स्नेहपाको मृदुर्भवेत् । (शा. सं. म. खं.)
ಪಾಕದಲ್ಲಿಯ ಕಲ್ಕವು ರಸಯುಕ್ತವಿದ್ದರೆ ಮೃದುಪಾಕವೆಂದು ತಿಳಿಯಬೇಕು.

2) ಮಧ್ಯಪಾಕ:-

मध्यपाकस्य सिद्धिश्च कल्के नीरस कोमले । (शा. सं. म. खं.)
ಪಾಕದಲ್ಲಿಯ ಕಲ್ಕವು ಮೃದು ಇದ್ದು ರಸದ ಅಂಶವು ಸಂಪೂರ್ಣವಾಗಿ ಇರದೆ ಕಲ್ಕವು ಕೋಮಲವಾಗಿರಬೇಕು. ಇದು ಮಧ್ಯಪಾಕವು.

3) ಖರಪಾಕ:-

ईषत्कठिन कल्कश्च स्नेहपाको भवेत् खरः । (शा. सं. म. खं.)
ಪಾಕದಲ್ಲಿಯ ಕಲ್ಕವು ಕಠಿಣವಾಗಿದ್ದರೆ ಅದಕ್ಕೆ ಖರಪಾಕವೆನ್ನುವರು.

तदूर्ध्वं दग्ध पाकः स्याद्दाहकृन्निष्प्रयोजनः । (शा. सं. म. खं.)
ಖರಪಾಕಕ್ಕಿಂತ ಅಧಿಕವಾಗಿ ಪಾಕವಾಗಿದ್ದರೆ ಅದಕ್ಕೆ ದಗ್ಧ ಪಾಕವೆನ್ನುವರು. ಇದು ದಾಹಕಾರಕವಿದ್ದು ಇದರ ಉಪಯೋಗವಾಗುವದಿಲ್ಲ.

4) ಆಮಪಾಕ ಸ್ನೇಹ ಗುಣ:-

आमपाकश्च निर्वीर्यो वह्निमांद्यकरो गुरुः ॥ (शा. सं म. खं.)

ಪಾಕವಾಗದ ಸ್ನೇಹವು ಶಕ್ತಿಹೀನವಿದ್ದು ಅಗ್ನಿಮಾಂದ್ಯವನ್ನುಂಟು ಮಾಡುವದು. ಮತ್ತು ಗುರುಸ್ವಭಾವದ್ದು ಆಗುವದು.

ಸ್ನೇಹದ ಉಪಯೋಗ:-

नस्यार्थं स्यान्मृदुः पाको मध्यमः सर्वकर्मसु ।
अभ्यंगार्थं खरः प्रोक्तो युञ्जादेवं यथोचितम् ॥
(शा. सं. म. खं.)

ಮೃದುಪಾಕ ಸ್ನೇಹವನ್ನು ನಸ್ಯದ ಸಲುವಾಗಿ, ಮಧ್ಯಪಾಕದ ಸ್ನೇಹವನ್ನು ಎಲ್ಲ ಕರ್ಮಗಳಲ್ಲಿ ಹಾಗೂ ಖರಪಾಕ ಸ್ನೇಹವನ್ನು ಅಭ್ಯಂಗದ ಸಲುವಾಗಿ ಉಪಯೋಗಿಸಬೇಕು.

ಅವಲೇಹ:—

क्वाथादीनां पुनः पाकात् घनत्वं सा रसक्रिया ।
सोऽवलेहश्च लेहश्च तन्मात्रा कर्ष संमिता ॥
(सु. सू.)

क्वाथादीनां पुनः पाकात् घनत्वं सा रसक्रिया ।
सोऽवलेहश्च लेहः स्यात्तन्मात्रा स्यात् पलोन्मिता ॥
(शा. सं. म. खं.)

ಅವಲೇಹ ಪರ್ಯಾಯ ನಾಮ:- ಲೇಹ, ರಸಕ್ರಿಯಾ.

ಸ್ವರಸ, ಕ್ವಾಥ, ಫಾಂಟ ಆದಿಗಳನ್ನು ಪುನಃ ಪಚನಮಾಡಿ ಘನ ಮಾಡುವದಕ್ಕೆ 'ರಸಕ್ರಿಯಾ' ಅನ್ನುವರು. ಕ್ವಾಥಾದಿಗಳನ್ನು ಘನ ಮಾಡುವಾಗ ಸಿತಾ ಅಥವಾ ಗುಡವನ್ನು ಹಾಕಬೇಕಾಗುತ್ತದೆ.

ಅವಲೇಹ, ರಸಕ್ರಿಯಾ, ಪಾಕ ಇವುಗಳಲ್ಲಿ ಸ್ವಲ್ಪ ಅಂತರ ಇರುತ್ತದೆ. ಅವಲೇಹದಲ್ಲಿ ಸಿತಾ, ಮಧು ಘೃತಗಳಿದ್ದು ಅದು ಪ್ರಾಶವಿರುತ್ತದೆ. ರಸಕ್ರಿಯಾದಲ್ಲಿ ಈ ಮಧುರ ದ್ರವ್ಯಗಳು ಇರುವದಿಲ್ಲ, ಪಾಕದಲ್ಲಿ ಸಿತಾದ ಪ್ರಮಾಣವು ಹೆಚ್ಚು ಇರುತ್ತದೆ.

ಲೇಹದಲ್ಲಿ ಹಾಕುವ ಸಿತಾದಿ ಪ್ರಮಾಣ:—

सिता चतुर्गुणा कार्या चूर्णाच्च द्विगुणो गुडः ।
द्रवं चतुर्गुणं दद्यादिति सर्वत्र निश्चयः ॥ (शा. सं म. खं.)

ಅವಲೇಹವನ್ನು ಮಾಡುವಾಗ ಸಕ್ಕರೆಯನ್ನು ಹಾಕುವದಿದ್ದರೆ ಚೂರ್ಣದ ನಾಲ್ಕು ಪಟ್ಟು ಹಾಕಬೇಕು. ಗುಡವನ್ನು ಹಾಕುವದಾದರೆ ಚೂರ್ಣದ ಎರಡು ಪಟ್ಟು ಹಾಕಬೇಕು. ದ್ರವ ಪದಾರ್ಥವನ್ನು ಹಾಕುವದಾದರೆ ಚೂರ್ಣದ ನಾಲ್ಕು ಪಟ್ಟು ಹಾಕಬೇಕು.

ಅವಲೇಹ ವಿವೇಚನ:-

ಉಕ್ತ ದ್ರವ್ಯಗಳ ಕ್ವಾಥವನ್ನು ಮಾಡಿಕೊಳ್ಳಬೇಕು. ಈ ಕ್ವಾಥವನ್ನು ವಸ್ತ್ರಗಾಲಿತ ಮಾಡಿಕೊಳ್ಳಬೇಕು. ಇದರಲ್ಲಿ ಪ್ರಮಾಣಿತ ಶರ್ಕರಾ ಅಥವಾ ಗುಡವನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಬೇಕು. ನಂತರ ಅಗ್ನಿಯ ಮೇಲಿಟ್ಟು ಪಾಕವನ್ನು ಮಾಡಿಕೊಳ್ಳಬೇಕು. ಪಾಕವನ್ನು ಮಾಡುವಾಗ ಮಂದಾಗ್ನಿಯನ್ನು ಕೊಡಬೇಕು. ಪಾಕವಾಗುವಾಗ ಆಯಾ ಲೇಹದಲ್ಲಿ ಹೇಳಿದ ವಸ್ತ್ರಗಾಲಿತ ಚೂರ್ಣವನ್ನು ಮಿಶ್ರಣ ಮಾಡಿ ಚಮಚೆಯಿಂದ ಚೆನ್ನಾಗಿ ತಿರುವಬೇಕು. ನಂತರ ಲೇಹ ಪರೀಕ್ಷಾ ಮಾಡಿಕೊಂಡು ಅಗ್ನಿಯ ಮೇಲಿಂದ ಇಳಿಸಬೇಕು.

ಅವಲೇಹ ಪರೀಕ್ಷಾ:-

सुपक्वे तंतुमत्त्वं स्यादवलेहोऽप्सु मज्जति ।
खरत्वं पीडिते मुद्रा गंधवर्ण रसोद्भव: ।। (शा. सं. म. खं.)
लेहस्य तंतुमहाप्सु मज्जनं सरणं न च ।
अंगुल्या पीडिते मुद्रा गंधवर्ण रसोद्भव: ।। (सुश्रुत)

1) ಉತ್ತಮ ರೀತಿಯಿಂದ ಪಾಕವಾಗಿದ್ದರೆ ಎಳೆದರೆ ದಾರದಂತೆ ಸಾಗಿಬರುವದು.
2) ಆರಿದಂತೆ ಘಟ್ಟಿಯಾಗುವದು, ನೀರಲ್ಲಿ ಮುಳುಗುವದು.
3) ಬೆರಳಿನಿಂದ ಒತ್ತಿದರೆ ಬೆರಳಿನ ರೇಖೆಗಳು ಲೇಹದಮೇಲೆ ಮೂಡುತ್ತವೆ.
4) ಸುವಾಸನೆಯುಳ್ಳದ್ದು ಆಗುವದು.
5) ಉತ್ತಮವಾದ ವರ್ಣ ಉಂಟಾಗುವದು.
6) ಬಾಯಲ್ಲಿ ಹಾಕಿದರೆ ಸರಿಯಾದ ರಸದ ಅನುಭವವಾಗುವದು.

ಈ ಮೇಲಿನ ಲಕ್ಷಣಗಳಿದ್ದರೆ ಲೇಹವು ಸರಿಯಾಗಿ ಪಕ್ವವಾಯಿತೆಂದು ತಿಳಿಯಬೇಕು.

ಲೇಹವು ತಯಾರಾದಮೇಲೆ ಅದನ್ನು ಅಗ್ನಿಯಿಂದ ಕೆಳಗೆ ಇಳಿಸಬೇಕು. ನಂತರ ಅದರಲ್ಲಿ ಪ್ರಕ್ಷೇಪ ದ್ರವ್ಯ ಚೂರ್ಣವನ್ನು ಹಾಕಬೇಕಾಗುತ್ತದೆ.

ಪಾಕವು ಸ್ವಾಂಗಶೀತವಾದಮೇಲೆ ಅದರಲ್ಲಿ ತ್ವಕ್, ಏಲಾದಿ ಪ್ರಕ್ಷೇಪ ಚೂರ್ಣಗಳನ್ನು ಹಾಗೂ ಮಧುವನ್ನು ಹಾಕಬೇಕು.

ಅವಲೇಹ ಮಾತ್ರಾ ಪ್ರಮಾಣಃ—

.........तन्मात्रा स्यात्पलोन्मिता । (शा. सं. म. खं.)

ಅವಲೇಹ ಮಾತ್ರಾ ಪ್ರಮಾಣವು ಒಂದು ಪಲ ಅಂದರೆ ನಾಲ್ಕು ತೊಲಿ ಇರುವದು.

ಅವಲೇಹ ಅನುಪಾನಃ-

दुग्धमिक्षुरसो यूषः पञ्चमूली कषायजम् ।
वासा क्वाथो यथायोग्यमनुपानं प्रशस्यते ।। (शा. सं. म. खं.)

ಲೇಹವನ್ನು ತೆಗೆದುಕೊಂಡ ಮೇಲೆ ಅದರ ಅನುಪಾನವೆಂದು ದುಗ್ಧ, ಇಕ್ಷುರಸ, ಪಂಚಮೂಲ ಕಷಾಯ, ವಾಸಾಕ್ವಾಥ ಇವುಗಳನ್ನು ಯಥಾಯೋಗ್ಯವಾಗಿ ರೋಗಾನುಸಾರವಾಗಿ ತೆಗೆದುಕೊಳ್ಳಬೇಕು.

ಆಸವಃ---

द्रवेषु चिरकालस्थं द्रव्यं यत्संधितं भवेत् ।
आसवारिष्ट भेदैस्तु प्रोच्यते भेषजोचितम् ।।(शा. सं. म. खं.)

ಸ್ವರಸ, ಕ್ವಾಥ ಆದಿ ದ್ರವ್ಯಗಳನ್ನು, ಗುಡಾದಿಗಳನ್ನು ಮಿಶ್ರಮಾಡಿ ಚಿರಕಾಲದವರೆಗೆ ಸಂಧಾನ ಕಾರ್ಯದ ಸಲುವಾಗಿ ಇಟ್ಟು ತಯಾರಾಗುವ ದ್ರವಕ್ಕೆ ಆಸವ, ಅರಿಷ್ಟಗಳೆಂದು ಅನ್ನುವರು.

क्वाथादौ भेषज द्रव्यं शर्करां मधुं वा गुडम् ।
सम्यगासवनिष्पत्त्यै किञ्चत् किण्वं तथैव च ।।
धाय स्थापयेज्जातरसं वस्त्र परिस्रुतम् ।
मांसी मरीच लौहैस्तु प्रलिप्ते धूपितेऽथवा ।।
शुचौ भाण्डे मुखं रुद्ध्वा स्थापितं भेषजोचितम् ।
आसवारिष्ट संज्ञं तं कल्पमाहुश्चिकित्सकाः ।।
अरिष्टो द्रव्य संयोग संस्कारादधिको गुणैः ।।

ಆಸವ ಅರಿಷ್ಟಗಳನ್ನು ತಯಾರು ಮಾಡಬೇಕಾದರೆ ಈ ಕೆಳಗಿನ ಸಾಧನಗಳು ಅವಶ್ಯವಿರುವವು.

ಶುಷ್ಕ ಅಥವಾ ಆರ್ದ್ರ ದ್ರವ್ಯ, ಜಲ, ಪಾತ್ರಗಳು, ಖಲ್ವ, ಅಗ್ನಿ, ವಸ್ತ್ರ, ಗುಡ, ಸಿತಾ, ಮಧು, ಮೃತ್ತಿಕಾಪಾತ್ರೆಗಳು ಹಾಗೂ ಪ್ರಕ್ಷೇಪ ದ್ರವ್ಯಚೂರ್ಣ.

ವಿವೇಚನ:–

ಆರ್ದ್ರ ದ್ರವ್ಯವನ್ನು ಸ್ವಚ್ಛಮಾಡಿ ನಿರ್ಜಲವನ್ನಾಗಿ ಮಾಡಿ ಕುಟ್ಟಬೇಕು. ನಂತರ ಸ್ವರಸವನ್ನು ತೆಗೆಯಬೇಕು, ಸ್ವರಸವನ್ನು ವಸ್ತ್ರದಿಂದ ಸೋಸಿಕೊಳ್ಳಬೇಕು. ಆಮೇಲೆ ಇದನ್ನು ಒಂದು ಕಲಾಯಿ ಮಾಡಿದ ಪಾತ್ರೆಯಲ್ಲಿ ಹಾಕಬೇಕು. ಆಯಾ ಆಸವದಲ್ಲಿ ಹೇಳಿದ ಪ್ರಮಾಣದಂತೆ ಸ್ವಚ್ಛ ಗುಡವನ್ನು ಈ ಸ್ವರಸದಲ್ಲಿ ಮಿಶ್ರ ಮಾಡಬೇಕು. ನಂತರ ಪುನಃ ಇದನ್ನು ವಸ್ತ್ರಗಾಲಿತ ಮಾಡಿಕೊಳ್ಳಬೇಕು. ಈ ಮಿಶ್ರಣದಲ್ಲಿ ಪ್ರಕ್ಷೇಪ ಚೂರ್ಣವನ್ನು ಹಾಕಬೇಕು.

ಈ ಮಿಶ್ರಣವನ್ನು ಮಾಂಸೀ, ಮರೀಚಾದಿಗಳಿಂದ ಧೂಪಿತ ಒಂದು ದೊಡ್ಡ ಮೃತ್ತಿಕಾ ಪಾತ್ರೆಯಲ್ಲಿ ಹಾಕಿ ಬಾಯಿ ಮುಚ್ಚಿ ಸಂಧಿಲೇಪ ಮಾಡಬೇಕು. ಇದನ್ನು ಸಂಧಾನ ಕಾರ್ಯಡಸಲುವಾಗಿ ಧಾನ್ಯದ ಋತುಗಳಿಗನುಸಾರವಾಗಿ ರಾಶಿಯಲ್ಲಿ ಹದಿನೈದರಿಂದ ಎರಡು ತಿಂಗಳುಗಳವರೆಗೆ ಇಡಬೇಕು.

ನಂತರ ಆಸವದ ಪರೀಕ್ಷೆಯನ್ನು ಮಾಡಿಕೊಂಡು ಯೋಗ್ಯ ರೀತಿಯಿಂದ ತಯಾರಾಗಿದ್ದರೆ ಅದನ್ನು ಮತ್ತೊಂದು ಪಾತ್ರೆಯಲ್ಲಿ ಸೋಸಿಕೊಂಡು ಕಾಜಿನ ಬಾಟಲಿಯಲ್ಲಿ ಹಾಕಿ ಸಂರಕ್ಷಣೆ ಮಾಡಬೇಕು.

ಆಸವ ಅರಿಷ್ಟ ಪರೀಕ್ಷಾ:–

1) ಪಾತ್ರೆಯಲ್ಲಿ ಯಾವದೇ ತರಪ ಸ್ಪಸ್ಫಳವು ಬರಬಾರದು.
2) ಉರಿಯುವ ಜ್ವಾಲೆಯನ್ನು ಪಾತ್ರೆಯಲ್ಲಿ ಬಿಟ್ಟಾಗ ಅದು ಆರಬಾರದು.
3) ಪಾರದರ್ಶಕ ವಿರಬೇಕು.
4) ಪ್ರತಿಬಿಂಬವು ಯೋಗ್ಯರೀತಿಯಿಂದ ಕಾಣಬೇಕು.
5) ಗಂಧ, ರುಚಿ ಇತ್ಯಾದಿಗಳು ಆಸವದಲ್ಲಿ ಹಾಕಿದ ಪ್ರಕ್ಷೇಪ ದ್ರವ್ಯಗಳಂತೆ ಇರಬೇಕು. ಬಹುಶಃ ಆಸವ ಅರಿಷ್ಟಗಳ ವರ್ಣವು ಆರಕ್ತ, ಕೃಷ್ಣವಿರುತ್ತದೆ.

ಆಸವಾರಿಷ್ಟ ಭೇದಃ–

यदपक्वौषधाम्बुभ्यां सिद्धं मद्यं स आसवः ।
अरिष्टः क्वाथ सिद्धः स्यात्तयोर्मानं पलोन्मितम् ।
(शा. सं. म. खं.)

ಆಸವದಂತೆಯೇ ಅರಿಷ್ಟವನ್ನು ಮಾಡುವ ರೀತಿಯಿದ್ದರೂ ಕೂಡ ಆಸವವನ್ನು ವನಸ್ಪತಿಯ ಸ್ವರಸ (ಅಪಕ್ವ) ಮಾಡಿಕೊಂಡು ಅದರಲ್ಲಿ ಗುಡಾದಿಗಳ ಮಿಶ್ರಣ ಮಾಡಿ ತಯಾರಿಸುತ್ತಾರೆ. ಆದರೆ ಅರಿಷ್ಟವನ್ನು ಮಾಡುವಾಗ ದ್ರವ್ಯದ ಕ್ವಾಥವನ್ನು ಮಾಡಿ ಅದರಲ್ಲಿ ಗುಡಾದಿ ದ್ರವ್ಯಗಳನ್ನು ಹಾಕಿ ತಯಾರಿಸುತ್ತಾರೆ.

ಆಸವದ ಅನುಕ್ತ ಪರಿಭಾಷಾ:—

अनुक्तमानारिष्टेषु द्रवद्रोणे तुलां गुडम् ।
क्षौद्रं क्षिपेद् गुडादर्धं प्रक्षेपं दशमांशिकम् ॥ (शा. सं. म. खं.)

ಒಂದು ದ್ರೋಣ ಅಂದರೆ 1024 ತೊಲಿ ದ್ರವ ದ್ರವ್ಯವಿದ್ದರೆ ಅದರಲ್ಲಿ ಒಂದು ತುಲಾ ಅಂದರೆ 400 ತೊಲಿ ಗುಡವನ್ನು, 200 ತೊಲಿ ಮಧುವನ್ನು ಹಾಕಬೇಕು. ಹಾಗೂ ಪ್ರಕ್ಷೇಪ ದ್ರವ್ಯಗಳ ಚೂರ್ಣವನ್ನು ಗುಡದ ಹತ್ತನೆಯ ಭಾಗದಷ್ಟು ಅಂದರೆ 40 ತೊಲಿ ಹಾಕಬೇಕು.

ಆಸವಾರಿಷ್ಠ ತಯಾರು ಮಾಡುವ ಸಲುವಾಗಿ ತೆಗೆದುಕೊಳ್ಳುವ ಮೃತ್ತಿಕಾ ಪಾತ್ರೆಯು ಹೀಗಿರಬೇಕು.

मांसीमरीच लौहैस्तु प्रलिप्ते धूपितेऽथवा ।
शुचौ भाण्डे मुखं रुद्ध्वा स्थापितं भेषजोचितम् ॥

ಆ ಮಣ್ಣಿನ ಪಾತ್ರೆಯನ್ನು ಸ್ವಚ್ಛಮಾಡಿ 3–4 ದಿನ ನೀರನ್ನು ಹಾಕಿ ಕುದಿಸಬೇಕು. ಆಮೇಲೆ ಒಣಗಿಸಿ ಒಳಬದಿಗೆ ಘೃತಲೇಪ ಮಾಡಬೇಕು. ಇಲ್ಲವೇ ಜಟಾಮಾಂಸಿ, ಮರೀಚ ಈ ದ್ರವ್ಯಗಳ ಧೂಪವನ್ನು ಕೊಡಬೇಕು. ಆಸವಾರಿಷ್ಠಗಳನ್ನು ತಯಾರು ಮಾಡುವಸಲುವಾಗಿ ಇಂಥ ಪಾತ್ರೆಯನ್ನು ಉಪಯೋಗಿಸಬೇಕು.

ಮಾತ್ರಾ ಪ್ರಮಾಣ:—

.... तयो: मानं पलोन्मिता । (शा. सं. म. खं.)

ಆಸವ ಹಾಗೂ ಅರಿಷ್ಠ ಇವುಗಳ ಮಾತ್ರಾ ಪ್ರಮಾಣವು ಒಂದು ಪಲ ಅಂದರೆ 4 ತೊಲಿ ಇರುತ್ತದೆ.

ಆಸವ ಅರಿಷ್ಠಗಳನ್ನು ಮಾಡುವಾಗ ಲಕ್ಷ್ಯದಲ್ಲಿಡತಕ್ಕ ಸಂಗತಿಗಳು :–

1) ಆಸವ ಅರಿಷ್ಠಗಳನ್ನು ಗ್ರೀಷ್ಮ ಋತುವಿನಲ್ಲಿ, ತಂಪಾದ ಆರ್ದ್ರ ಹವೆಯಿದ್ದಾಗ ಮಾಡಬಾರದು.
2) ಕ್ವಾಥ್ಯ ದ್ರವ್ಯಗಳನ್ನು ಮೊದಲನೇ ದಿವಸ ಕುಟ್ಟಿ ನೀರಲ್ಲಿ ಒಂದು ರಾತ್ರಿ ನೆನೆಯಿಡಬೇಕು. ಅಂದರೆ ಅವುಗಳ ರಸ, ವೀರ್ಯ, ಗುಣಾದಿಗಳು ಯೋಗ್ಯ ರೀತಿಯಿಂದ ಕ್ವಾಥದಲ್ಲಿ ಬರುತ್ತವೆ.
3) ಕ್ವಾಥವನ್ನು ಮಂದಾಗ್ನಿಯಮೇಲೆ ತಯಾರಿಸಿಕೊಂಡು ಬಿಸಿಯಿರುವಾಗಲೇ ಸೋಸಿಕೊಳ್ಳಬೇಕು. ನಂತರ ಗುಡಾದಿ ದ್ರವ್ಯಗಳನ್ನು ಹಾಕಬೇಕು. ಪುರಾಣ ಗುಡವನ್ನು ಹಾಕಬೇಕು.
4) ಆಮೇಲೆ ಈ ಮಿಶ್ರಣದಲ್ಲಿ ಆಸವ ಕ್ರಿಯೆ ನಡೆಯಲು ಧಾತಕೀ ಪುಷ್ಪಗಳನ್ನು ಹಾಕಬೇಕು.

5) ಆಸವ ತಯಾರು ಮಾಡುವದರ ಸಲುವಾಗಿ ಚೀನೀ ಮಣ್ಣಿನ ಪಾತ್ರೆಯನ್ನು ತೆಗೆದುಕೊಳ್ಳಬೇಕು. ಹಾಗೂ ಈ ಪಾತ್ರೆಗೆ ಜಟಾಮಾಂಸಿ, ಮರೀಚ, ಚಂದನ ಇವುಗಳ ಧೂಪವನ್ನು ಕೊಡಬೇಕು.

6) ಪಾತ್ರೆಯಲ್ಲಿ ಧೂಪನ ದ್ರವ್ಯಗಳ ಹೊಗೆಯಿರುವಾಗಲೇ ಮಿಶ್ರಣವನ್ನು ಹಾಕಬೇಕು. ಈ ಮಿಶ್ರಣವು ಪಾತ್ರೆಯ ¾ ಭಾಗ ತುಂಬುವಷ್ಟು ಹಾಕಿ ¼ ಭಾಗ ಖಾಲಿ ಸ್ಥಳವಿಡಬೇಕು. ನಂತರ ಮೃತ್ತಿಕಾ ಲಿಪ್ತ ಅರಿವೆಯಿಂದ, ಮುಚ್ಚಳವನ್ನು ಹಾಕಿ ಚೆನ್ನಾಗಿ ಬಾಯಿಯನ್ನು ಬಂದು ಮಾಡಬೇಕು. ಆಮೇಲೆ ನೆಲದಲ್ಲಿಯಾಗಲಿ, ಧಾನ್ಯರಾಶಿಯಲ್ಲಾಗಲಿ ಇಡಬೇಕು.

7) ನಿಶ್ಚಿತ ಸಂಧಾನ ಕಾಲವು ಮುಗಿದಮೇಲೆ ಪಾತ್ರೆಯನ್ನು ಹೊರಗೆ ತೆಗೆದು ಬಾಯಿಯನ್ನು ಸ್ವಚ್ಛವಾಗಿ ಒರೆಸಿ ಮುಚ್ಚಳವನ್ನು ತೆರೆದು ಆಸವ ಪರೀಕ್ಷೆಯನ್ನು ಮಾಡಬೇಕು.

8) ಆಸವ, ಅರಿಷ್ಟಗಳನ್ನು ದಪ್ಪ ಅರಿವೆಯಲ್ಲಿ ಸೋಸಿಕೊಂಡು ಕಾಜಿನ ಬಾಟಲಿಗಳಲ್ಲಿ ಹಾಕಿಡಬೇಕು. ಬಾಟಲಿಯ ಮುಕ್ಕಾಲು ಭಾಗದಷ್ಟು ಆಸವ ಅರಿಷ್ಟಗಳನ್ನು ತುಂಬಿ ¼ ಭಾಗ ಖಾಲಿ ಉಳಿಸಬೇಕು.

ಶುಕ್ತ ಸೌವೀರ:—

ಶುಕ್ತ ಕಲ್ಪನಾ:–

विनष्टमम्लतां यातं मद्यं, वा मधुर द्रवः ।
विनष्टः संधितो यस्तु तच्चुक्तमित्यभिदीयते ।।
कंदमूल फलादीनि सस्नेह लवणानि च ।
यत्र द्रवेऽभिषूयंते तच्छुक्तमित्यभिधीयते ।। (शा सं. म. खं.)

ಆಸವ ಅರಿಷ್ಟಗಳು ಮಧುರತೆಯನ್ನು ಕಳೆದುಕೊಂಡು ಅವು ಅಮ್ಲತ್ವವನ್ನು ಹೊಂದಿದರೆ, ಇಕ್ಷುರಸವನ್ನು ಹಾಗೆಯೇ ಇಟ್ಟು, ಅದರ ಮಧುರ ರಸವು ಆಮ್ಲರಸದಲ್ಲಿ ತಿರುಗಿದರೆ ಅದಕ್ಕೆ ಶುಕ್ತವೆನ್ನುವರು.

ಕಂದ, ಮೂಲ, ಫಲಾದಿಗಳನ್ನು ಸಂಧಾನ ಕ್ರಿಯೆಯಿಂದ ಸಂಧಾನಮಾಡಿ ಅದರಲ್ಲಿ ಸ್ನೇಹ ಹಾಗೂ ಲವಣಗಳನ್ನು ಕೂಡಿಸಿದರೆ ಅದೂ ಸಹಿತ ಶುಕ್ತವೆಂದು ಕರೆಯಲ್ಪಡುತ್ತದೆ.

ಸೌವೀರ ಕಲ್ಪನಾ:–

तुषाम्बु संधितं ज्ञेयमामैर्विदलितैर्यवैः ।
यवैस्तु निस्तुषैः पक्वैः सौवीरं संधितं भवेत् ।
(शा. सं. म. खं)

तुषोदके यवैरामैः सतुषैः शकलीकृतैः ।
सौवीरं तु यवैरामैः पक्वैर्वा निस्तुषीकृतैः ।
गोधूमैरपि सौवीरमाचार्याः केचिदूचिरे ।
(योगमहोदधि, संधनवर्ग)
षड्रात्रात् सप्तरात्राद्वा ते च पेये प्रकीर्तिते । (सु. सू. अ. ४४)

ಯವಾದಿ ಧಾನ್ಯಚೂರ್ಣ ಹಾಗೂ ಜಲ ಇವನ್ನು ಒಂದು ಮೃತ್ತಿಕಾ ಪಾತ್ರೆಯಲ್ಲಿ ಹಾಕಿ ಪಚನ ಮಾಡಬೇಕು. ನಂತರ ಅದರಲ್ಲಿ ಪ್ರಕ್ಷೇಪ ದ್ರವ್ಯಚೂರ್ಣಗಳನ್ನು ಹಾಕಿ ಸಂಧಾನಕ್ಕಾಗಿ ಇಡಬೇಕು. ಇದಕ್ಕೆ ತುಷಾಂಬು ಅನ್ನುವರು.

ಆದರೆ ಇವನ್ನೇ ಧಾನ್ಯದ ತುಷ ಅಂದರೆ ತೌಡು ತೆಗೆದು ಜಲದಲ್ಲಿ ಹಾಕಿ ಪಕ್ವಮಾಡಿ ಆರು ದಿವಸ ಇಲ್ಲವೆ ಏಳು ದಿವಸ ಸಂಧಾನಕ್ಕಾಗಿ ಇಡಬೇಕು, ಆಮೇಲೆ ಉಪಯೋಗಿಸಬೇಕು. ಇದಕ್ಕೆ ಸೌವೀರ ಅನ್ನುವರು.

ವರ್ತಿಃ–

ವರ್ತಿಯಲ್ಲಿ ನೇತ್ರವರ್ತಿ, ಗುದವರ್ತಿ, ಫಲವರ್ತಿ ಎಂಬ ಮೂರು ಪ್ರಕಾರಗಳು. ಮೂರರ ನಿರ್ಮಾಣ ವಿಧಿಯು ಒಂದೇ ಇದ್ದರೂ ಅವುಗಳ ಗಾತ್ರದ ಮೇಲಿಂದ ಬೇರೆ ಬೇರೆ ಹೆಸರುಗಳು ಬಂದಿವೆ.

घृताश्यक्ता गुदे क्षेप्या श्लक्ष्णा स्वांगुष्ठ सन्निभा ।
मलप्रवर्तिनि वर्तिः फलवर्तिस्तु सा स्मृता ॥

ಗುಡಪಾಕದಲ್ಲಿ ದ್ರವ್ಯ ಅಂದರೆ ತ್ರಿಫಳಾದಿ ಚೂರ್ಣವನ್ನು ಹಾಕಿ ವರ್ತಿಯನ್ನು ತಯಾರಿಸುವರು. ಯವಾಕಾರದ ವರ್ತಿಯನ್ನು ತಯಾರಿಸಿದರೆ ಅದಕ್ಕೆ 'ನೇತ್ರವರ್ತಿ' ಅನ್ನುವರು.

ಫಲವರ್ತಿಯನ್ನು ಮಾಡುವಾಗ ದ್ರವ್ಯಚೂರ್ಣಕ್ಕೆ ವನಸ್ಪತಿಯ ಸ್ವರಸ 'ಕ್ವಾಥ' ಇಲ್ಲವೆ ದುಗ್ಧ, ಮೂತ್ರಗಳ ಭಾವನೆಯನ್ನು ಕೊಟ್ಟು ಮರ್ದನಮಾಡಿ ಸ್ವಅಂಗುಷ್ಠ ಪ್ರಮಾಣ ವರ್ತಿಯನ್ನು ತಯಾರಿಸಬೇಕು.

ಮಲವನ್ನು ತೆಗೆಯುವದರ ಸಲುವಾಗಿ ತುಪ್ಪವನ್ನು ಹಚ್ಚಿದ, ರೋಗಿಯ ಹೆಬ್ಬರಳಿನಷ್ಟು ಗಡುತರವಾದ ವರ್ತಿಯನ್ನು ರೋಗಿಯ ಗುದದ್ವಾರದಲ್ಲಿ ಇಡಬೇಕು. ಇದರ ಉಪಯೋಗವು ವಾಯುವಿನ ಅನುಲೋಮನ ಹಾಗೂ ಮಲವನ್ನು ಹೊರಗೆ ಹಾಕಲು ಅನುಕೂಲ ಆಗುವದು.

ಅದರಂತೆ ಉತ್ತರ ಬಸ್ತಿಯನ್ನು ಕೊಟ್ಟನಂತರ ಸ್ನೇಹವು ಯೋಗ್ಯ ವೇಳೆಯಲ್ಲಿ ಬರದಿದ್ದರೆ ವರ್ತಿಯ ಉಪಯೋಗ ಮಾಡಬೇಕು.

ರಸಕ್ರಿಯಾಃ—

क्वाथादीनां पुनः पाकात् घनत्वं सा रसक्रिया ।
(शा. सं. म. खं.)

ಯಷ್ಟಿಮಧು, ಬಬ್ಬುಲ, ಗುಡೂಚಿ ಆದಿ ದ್ರವ್ಯಗಳನ್ನು ತಂದು ಅವುಗಳನ್ನು ತುಂಡುಮಾಡಿ ಅವುಗಳ ಕ್ವಾಥವನ್ನು ಮಾಡಿಕೊಳ್ಳಬೇಕು. ಇದೇ ಕ್ವಾಥವನ್ನು ಪುನಃ ಘನವಾಗುವವರೆಗೆ ಅಗ್ನಿಯಿಂದ ಪಚನ ಮಾಡಿಕೊಂಡರೆ ಅದಕ್ಕೆ 'ರಸಕ್ರಿಯಾ' ಅನ್ನುವರು.

ರಸಕ್ರಿಯಾದಲ್ಲಿ ವನಸ್ಪತಿಗಳ ಪಂಚಾಂಗಗಳ ಸತ್ವವು ಬರುವದು.

ರಸಕ್ರಿಯಾವನ್ನು ಮಾಡುವಾಗ ಪ್ರತ್ಯಕ್ಷ ಅಗ್ನಿಯನ್ನು ಕೊಟ್ಟು ಘನ ಮಾಡುವರು. ಅದರಂತೆ ಸ್ವರಸ, ಕ್ವಾಥಾದಿಗಳನ್ನು ಬಾಷ್ಪದಮೇಲೆ ಕುದಿಸಿ ಘನ ಮಾಡುವರು. ಇಲ್ಲವೆ ಈ ಸ್ವರಸ ಕ್ವಾಥಾದಿಗಳನ್ನು ಆತಪದಲ್ಲಿಟ್ಟು ಘನ ಮಾಡಿಕೊಳ್ಳುವರು.

ಇವಕ್ಕೆ ರಸಕ್ರಿಯಾ ಅನ್ನುವರು. ಇದರ ವರ್ಣವು ಬಹುಶಃ ಕೃಷ್ಣವಿರುವದು.

ಮಾತ್ರಾ ಪ್ರಮಾಣಃ-

4 ಗುಂಜಿಯಿಂದ 12 ಗುಂಜಿಯವರೆಗೆ ಕೊಡಲು ಬರುತ್ತದೆ.

ಸತ್ವಃ—

ಯಾವ ದ್ರವ್ಯದ ಸತ್ವವನ್ನು ತೆಗೆಯುವದಿದೆಯೋ ಆ ದ್ರವ್ಯವನ್ನು ತೆಗೆದುಕೊಂಡು ನೀರಿನಿಂದ ಚೆನ್ನಾಗಿ ತೊಳೆಯಬೇಕು. ಅದನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡಬೇಕು. ನಂತರ ಖಲ್ವದಲ್ಲಿ ಹಾಕಿ ಚೆನ್ನಾಗಿ ಕುಟ್ಟಬೇಕು. ಇವನ್ನು ಒಂದು ಪಾತ್ರೆಯಲ್ಲಿ ಹಾಕಿ ದ್ರವ್ಯದ ನಾಲ್ಕು ಪಟ್ಟು ನೀರನ್ನು ಹಾಕಿ ಕೈಯಿಂದ ಮರ್ದನ ಮಾಡಬೇಕು. ಇದನ್ನು ವಸ್ತ್ರಗಾಲಿತ ಮಾಡಿಕೊಂಡು ಮೇಲಿನ ನೀರನ್ನು ಇಡೀ ರಾತ್ರಿ ಹಾಗೆಯೇ ಇಡಬೇಕು. ಮರುದಿವಸ ಮೇಲಿನ ತಿಳಿನೀರನ್ನು ಬಸಿದು ಹೊರಗೆ ಚೆಲ್ಲಬೇಕು. ಕೆಳಗೆ ಉಳಿದ ಘನ, ಶ್ವೇತ ವರ್ಣದ ದ್ರವ್ಯವನ್ನು ಆತಪ ಶುಷ್ಕಮಾಡಿ ವಸ್ತ್ರಗಾಲಿತ ಮಾಡಿಕೊಂಡು ಉಪಯೋಗಿಸಬೇಕು. ಇದು ಸತ್ವವು.

ಉದಾಹರಣಾರ್ಥವಾಗಿ:-

ಗುಡೂಚಿ ಸತ್ವ:—

गुडूचीं खण्डशः कृत्वा क्षालयित्वा सुकुट्टयेत् ।
चतुर्गुणं जलं दत्वा हस्ताभ्यां मर्दयेद्दृढम् ।।
वस्त्रेण गालितं तोयं रात्रिं संस्थापयेत् बुधः ।।
उपरिस्थं जलं त्यक्त्वा सत्वं ग्राह्यमधः स्थितम् ।

ಗುಡೂಚಿಯನ್ನು ತೆಗೆದುಕೊಂಡು ತುಂಡುಗಳನ್ನು ಮಾಡಿ ಮೇಲಿನ ಸಿಪ್ಪೆಯನ್ನು ತೆಗೆದು ನೀರಿನಿಂದ ತೊಳೆದು ಕುಟ್ಟಬೇಕು. ಇದನ್ನು ಒಂದು ಅಗಲವಾದ ಪಾತ್ರೆಯಲ್ಲಿ ಹಾಕಿ ಅದರಲ್ಲಿ ನಾಲ್ಕು ಪಟ್ಟು ನೀರನ್ನು ಹಾಕಿ ಕೈಯಿಂದ ಮರ್ದಿಸಬೇಕು. ನಂತರ ವಸ್ತ್ರಗಾಲಿತ ಮಾಡಿಕೊಂಡು ದ್ರವ ದ್ರವ್ಯವನ್ನು ಒಂದು ರಾತ್ರಿ ಹಾಗೆಯೆ ಇಡಬೇಕು. ಮರುದಿವಸ ಮೇಲಿನ ತಿಳಿನೀರನ್ನು ಬಸಿದು ಚೆಲ್ಲಬೇಕು. ಕೆಳಗೆ ಕೂತಂಥ ಘನಭಾಗ ವನ್ನು ಆತಪ ಶುಷ್ಕ ಮಾಡಿಕೊಂಡು ವಸ್ತ್ರಗಾಲಿತ ಮಾಡಿಕೊಂಡು ಉಪಯೋಗಿಸ ಬೇಕು.

ಅರ್ಕ:—

ಸುಗಂಧೀ ದ್ರವ್ಯಗಳ ಸುಗಂಧೀ ಗುಣವನ್ನಷ್ಟೇ ಉಪಯೋಗ ಮಾಡಿಕೊಳ್ಳು ವದರ ಸಲುವಾಗಿ ಅರ್ಕವನ್ನು ತೆಗೆಯುತ್ತಾರೆ. ಗುಲಾಬ, ಚಂದನ, ಮಿಶಿ, ಅನಂತ ಮೂಲ, ಶತಪುಷ್ಪಾ ಆದಿ ದ್ರವ್ಯಗಳ ವೀರ್ಯವು ಅವುಗಳ ಸುಗಂಧೀ ಗುಣದಲ್ಲಿ ಹೆಚ್ಚು ಇರುವದರಿಂದ ಈ ಗುಣವನ್ನು ಪ್ರತ್ಯೇಕ ಮಾಡಿಕೊಳ್ಳುವದರ ಸಲುವಾಗಿ ಅರ್ಕವನ್ನು ತೆಗೆಯಬೇಕು.

ವಿಧಿ:—

ಯಾವ ಸುಗಂಧಿತ ದ್ರವ್ಯದ ಅರ್ಕವನ್ನು ತೆಗೆಯುವದಿದೆಯೋ ಅದನ್ನು ತಾಜಾ ಇಲ್ಲವೇ ಆರ್ದ್ರವಿದ್ದವುಗಳನ್ನು, ಮಿಶಿಯಂಥ ದ್ರವ್ಯಗಳ ಚೂರ್ಣವನ್ನು ತೆಗೆದುಕೊಂಡು ಅವುಗಳ ಹತ್ತು ಪಟ್ಟು ನೀರನ್ನು ಹಾಕಿ ಒಂದು ರಾತ್ರಿ ನೆನೆಯಿಡಬೇಕು. ಮರುದಿನ ಈ ದ್ರವ ದ್ರವ್ಯವನ್ನು ಅರ್ಕಯಂತ್ರದಲ್ಲಿ ಹಾಕಿ ಮಂದಾಗ್ನಿಯನ್ನು ಕೊಡಬೇಕು. ಇದರಿಂದ ದ್ರವ್ಯದ ಸುಗಂಧೀ ಗುಣವು ಬಾಷ್ಪರೂಪದಿಂದ ಕ್ರಮೇಣ ಅರ್ಕಯಂತ್ರದ ಬದಿಗಿಟ್ಟ ಪಾತ್ರೆಯಲ್ಲಿ ಸಂಗ್ರಹವಾಗುವದು. ಇದನ್ನು ಪುನಃ ವಸ್ತ್ರಗಾಲಿತ ಮಾಡಿ ಕೊಂಡು ಉಪಯೋಗಿಸಬೇಕು. ಇದು ಅರ್ಕವು.

ಯವಾಗೂ ಕಲ್ಪನಾ:—

साध्यं चतुष्पलं द्रव्यं चतुःषष्टिपले जले ।
तत्क्वाथेनार्धशिष्टेन यवागूं साधयेद्धनाम् । (शा. सं. म. खं.)

4 ಪಲ ಮುದ್ಗ, ಯವ ಆದಿ ದ್ರವ್ಯಗಳನ್ನು ತೆಗೆದುಕೊಂಡು ಅವುಗಳನ್ನು 64 ಪಲ ನೀರಿನಲ್ಲಿ ಹಾಕಿ ಅಗ್ನಿಯಮೇಲಿಟ್ಟು ಅರ್ಧ ಉಳಿಯುವವರೆಗೆ ಪಚನ ಮಾಡಿ ಕೊಳ್ಳಬೇಕು. ನಂತರ ವಸ್ತ್ರಗಾಲಿತ ಮಾಡಿಕೊಂಡು ಈ ಕ್ವಾಥದಲ್ಲಿ ತಂಡುಲವನ್ನು ಹಾಕಿ ಪಕ್ವಮಾಡಿಕೊಂಡು ಉಪಯೋಗಿಸಬೇಕು.

ಕ್ವಾಥ ಸಾಧ್ಯ ಯವಾಗೂ ಕಲ್ಪನಾ:—

यवागू स्त्रिविधा प्रोक्ता मण्डः पेया विलेप्यपि ।
" सिक्थैर्विरहितो मण्डः, पेया सिक्थ समन्विता ।
यवागूर्बहु सिक्था स्याद्विलेपी विरल द्रवा । (सु. सू. अ. ४६)

ಮೇಲಿನ ಕ್ರಮದಂತೆ ಮಾಡಿದ ಅರ್ಧ ಉಳಿದ ಕ್ವಾಥದಲ್ಲಿ ತಂಡುಲವನ್ನು ಹಾಕಿ ಪಕ್ವಮಾಡಿಕೊಳ್ಳಬೇಕು. ತಂಡುಲ ರಹಿತ ದ್ರವ ಭಾಗವು ಮಂಡವು. ತಂಡುಲ ಹಾಗೂ ದ್ರವ ಭಾಗವು ಸಮ ಉಳಿಯುವಂತೆ ಪಚನ ಮಾಡಿಕೊಂಡರೆ ಅದು ಪೇಯಾ. ತಂಡುಲ ಭಾಗವು ಹೆಚ್ಚು ಹಾಗೂ ದ್ರವ ಭಾಗವು ಕಡಿಮೆಯಿದ್ದರೆ ಅದು ಯವಾಗೂ ಹಾಗೂ ಕೇವಲ ತಂಡುಲವುಳಿದರೆ ಅದು ವಿಲೇಪಿ ಎಂದು ಸುಶ್ರುತ ಸಂಹಿತೆಯಲ್ಲಿ ಹೇಳಿದ್ದಾರೆ.

ಯೂಷ ಕಲ್ಪನಾಃ—

कल्क द्रव्यपलं शुण्ठी पिप्पली चार्धकार्षिकी ।
वारिप्रस्थेन विपचेत्स द्रवो यूष उच्यते ॥ (शा. सं. म. खं.)
द्रवैर्बहुविधैर्द्रव्यैस्तथा चान्नैरतण्डुलैः ।
यूष इत्युच्यते सिद्धो, यवागूस्तण्डुलैः सह ॥
(काश्यप संहिता खिलपर्व, अ. ७)

ದ್ರವ್ಯಗಳ ಕಲ್ಕವನ್ನು ಒಂದು ಪಲ ತೆಗೆದುಕೊಂಡು ಅದರಲ್ಲಿ ಶುಂಠಿ ಪಿಪ್ಪಲಿ ಗಳನ್ನು ಅರ್ಧತೊಲಿ ಹಾಕಿ ಕಲ್ಕವನ್ನು ತಯಾರಿಸಿಕೊಂಡು ಅದರಲ್ಲಿ ಒಂದು ಪ್ರಸ್ಥ ಜಲವನ್ನು ಹಾಕಿ ಪಕ್ವ ಮಾಡಿಕೊಳ್ಳಬೇಕು. ಅರ್ಧ ಶೇಷ ಉಳಿದ ಮೇಲೆ ವಸ್ತ್ರಗಾಲಿತ ಮಾಡಿಕೊಂಡು ಉಪಯೋಗ ಮಾಡಬೇಕು. ಇವಕ್ಕೆ ಯೂಷ ಅನ್ನುತ್ತಾರೆ.

कर्षार्धं वा कणा शुण्ठोः कल्क द्रव्यस्य वा पलम् ।
विनीय पचयेत् युक्त्या वारिप्रस्थेन चापरम् ॥
यूषाश्च रसकाश्चैव कल्पेनानेन साधयेत् ।
अर्धशिष्टे भवेद् यूषः क्वचित् पादावशेषितः ।
क्वाथ्यद्रव्याञ्जलि क्षुण्णं श्रापयित्वा जलाढके ।
पादावशेषे तेनाथ यवाग्वादुपकल्पयेत् ।
यूषाश्च रसकांश्चैव कल्पनानेन साधयेत ।(वैद्य परिभाषा।)

ಮಂಥಃ—

जले चतुष्पले शीते क्षुण्णं द्रव्य पलं क्षिपेत् ।
मृत्पात्रे मंथयेत् सम्यक् तस्माच्च द्विपलं पिबेत् ॥
(शा. सं. म. खं. अ. ३)
मंथोऽपि फांटभेदः स्यात् .....। (शारंगधर)
सत्कवः सर्पिषाऽभ्यक्ताः शीतवारि परिप्लुताः ।
नातिद्रवा नातिसांद्रा वा मन्थ इत्युपदिश्यते ॥
(सु. सू. अ. ४६)

16 ತೊಲಿ ನೀರನ್ನು ಮೃತ್ಪಾತ್ರೆಯಲ್ಲಿ ಹಾಕಿ ಅದರಲ್ಲಿ 4 ತೊಲಿ ದ್ರವ್ಯವನ್ನು ಕುಟ್ಟಿ ಹಾಕಬೇಕು. ನಂತರ ಅದನ್ನು ಕಡಗೋಲಿ (ಖಜ) ನಿಂದ ಕಡೆಯಬೇಕು. ನಂತರ ವಸ್ತ್ರಗಾಲಿತ ಮಾಡಿಕೊಂಡು ಉಪಯೋಗಿಸಬೇಕು. ಮಂಥವು ಫಾಂಟ ಭೇದ ವೆಂದು ಹೇಳಿದ್ದಾರೆ. ಇದನ್ನು ಯಾವಾಗಲೂ ಶೀತಜಲದಲ್ಲಿಯೇ ತಯಾರಿಸುತ್ತಾರೆ.

ಮಂಥ ಗುಣಧರ್ಮಃ–

मन्थः सद्योबलकरः पिपासा श्रमनाशनः ।
साम्ल स्नेह गुडो मूत्र कृच्छ्रोदावर्त नाशनः ॥
शर्करेक्षु रस द्राक्षायुक्तः पित्तविकारनुत् ।
द्राक्षा मधूक संयुक्तः कफरोग निबर्हणः ॥
वर्गत्रयेणोपहितो मलदोषानुलोमनः ।
(सु सू. अ. ४६ श्लोक ३८५–३८७)

ಕ್ಷಾರವಿಧಿಃ—

क्षीरवृक्षस्य पञ्चागं शुष्काण्यग्नौ प्रदीपयेत् ।
नीत्वा तत् भस्म मृत्पात्रे क्षिप्त्वा नीरे षतुर्गुणे ॥
विमर्द्य धारयेद्रात्रौ प्रातरच्छं जलं नयेत् ।
तन्नीरं क्वाथयेद्वह्नौ यावत् सर्वं विशुष्यति ।
ततः पात्रात् समुल्लिख्य क्षारो ग्राह्यः सितप्रभः ॥
(शा. सं. म. खं.)

ಅಪಾಮಾರ್ಗ, ಕದಲಿ ಆದಿ ಕ್ಷಾರೀಯ ದ್ರವ್ಯಗಳ ಪಂಚಾಂಗವನ್ನು ತೆಗೆದು ಕೊಂಡು ನೆರಳಲ್ಲಿ ಶುಷ್ಕ ಮಾಡಿಕೊಳ್ಳಬೇಕು. ಶುಷ್ಕವಾದನಂತರ ಇವನ್ನು ಸುಟ್ಟು ಭಸ್ಮ ಮಾಡಬೇಕು. ಈ ಭಸ್ಮವನ್ನು ಮೃತ್ಪಾತ್ರೆಯಲ್ಲಿ ಹಾಕಿ ಹದಿನಾರು ಪಟ್ಟು ನೀರನ್ನು ಹಾಕಬೇಕು. ಇದನ್ನು ಚೆನ್ನಾಗಿ ಕಲಸಿ ಒಂದು ರಾತ್ರಿ ನೆನೆಯಿಡಬೇಕು. ಮರುದಿನ ಮೇಲಿನ ತಿಳಿನೀರನ್ನು ಸಾವಕಾಶವಾಗಿ ಮತ್ತೊಂದು ಪಾತ್ರೆಯಲ್ಲಿ ಬಸಿದು ಕೊಳ್ಳಬೇಕು. ಈ ರೀತಿಯಾಗಿ ಇಪ್ಪತ್ತೊಂದು ಸಾರೆ ಮಾಡಿಕೊಳ್ಳಬೇಕು. ನಂತರ ಈ ನೀರನ್ನು ಮಂದಾಗ್ನಿಯ ಮೇಲೆ ಪಚನ ಮಾಡಿಕೊಳ್ಳಬೇಕು. ಸ್ವಲ್ಪ ಘನವಾದ ನೇಲೆ ಅಗ್ನಿಯಿಂದ ಕೆಳಗಿಳಿಸಿ ಆತಪ ಶುಷ್ಕ ಮಾಡಿಕೊಳ್ಳಬೇಕು. ಆ ಮೇಲೆ ವಸ್ತ್ರ ಗಾಲಿತ ಮಾಡಿ ಉಪಯೋಗಿಸಬೇಕು. ಇದರ ವರ್ಣವು ಶ್ವೇತವಿರುತ್ತದೆ.

ಲೇಪಃ—

द्रव्यमार्द्रं शिलापिष्टं शुष्कं वा सद्रवं तनु ।
देहे प्रलेपनार्थं तल्लेप इत्युच्यते बुधैः । (शा. सं. म. खं.)

ವನಸ್ಪತಿಯು ಶುಷ್ಕವಿದ್ದರೆ ಅದನ್ನು ಶಿಲಾಖಲ್ವದ ಮೇಲೆ ತೇಯ್ದಾಗಲಿ, ಅದರ ಚೂರ್ಣವನ್ನು ಗೋಮೂತ್ರ, ಕಾಂಜಿ ಆದಿ ದ್ರವಪದಾರ್ಥಗಳನ್ನು ಆಯಾ ಲೇಪದಲ್ಲಿ ಹೇಳಿದ ಪ್ರಮಾಣದಲ್ಲಿ ತೆಗೆದುಕೊಂಡು ಖಲ್ವದಲ್ಲಿ ಹಾಕಿ ಅರೆಯಬೇಕು. ಇದನ್ನು ಲೇಪನಕಾರ್ಯಕ್ಕಾಗಿ ಉಪಯೋಗಿಸಬೇಕು.

ಪ್ರಕಾರಗಳು:-

प्रलेपश्च प्रदेहश्च तस्य भेदद्वयं स्मृतम् ।

ಪ್ರಲೇಪ ಹಾಗೂ ಪ್ರದೇಹಗಳೆಂದು ಲೇಪಗಳಲ್ಲಿ ಎರಡು ಪ್ರಕಾರಗಳು.

शीतस्तनुः प्रलेपः स्याद्रक्तपित्त विकारहा ।
कफावात विकारेषु घनश्योष्णः प्रदेहकः ॥

ರಕ್ತ ಮತ್ತು ಪಿತ್ತವಿಕಾರದಲ್ಲಿ ಶೀತವೀರ್ಯ ದ್ರವ್ಯಗಳ ಲೇಪ ಮಾಡುವದಕ್ಕೆ "ಪ್ರಲೇಪ" ಅನ್ನುವರು. ಕಫ ಮತ್ತು ವಾತ ವಿಕಾರದಲ್ಲಿ ಉಷ್ಣವೀರ್ಯ ದ್ರವ್ಯಗಳ ಲೇಪ ಮಾಡುವದಕ್ಕೆ "ಪ್ರದೇಹ" ಅನ್ನುವರು. ರಕ್ತ ಹಾಗೂ ಪಿತ್ತ ವಿಕಾರದಲ್ಲಿ ಮಾಡುವ ಪ್ರಲೇಪವು ಶೀತವಿದ್ದು ತನು ಅಂದರೆ ತೆಳ್ಳಗಿರುತ್ತದೆ. ಕಫ ಹಾಗೂ ವಾತ ವಿಕಾರದಲ್ಲಿ ಮಾಡುವ ಪ್ರದೇಹವು ಘನವಿದ್ದು ಉಷ್ಣವಿರುತ್ತದೆ.

ಲೇಪಗಳಲ್ಲಿ ಸ್ನೇಹ ಕೂಡಿಸುವದು ಹೀಗೆ,

षड्भागं पैत्तिके स्नेहं चतुर्भागं तु वातिके ।
अष्टभागं तु कफजे स्नेहमात्रां प्रदापयेत् ॥

ಪಿತ್ತರೋಗದಲ್ಲಿ ಲೇಪದ $\frac{1}{6}$ ನೇ ಭಾಗ, ವಾತಿಕ ರೋಗದಲ್ಲಿ $\frac{1}{4}$ ನೇ ಭಾಗ ಹಾಗೂ ಕಫಜ ರೋಗದಲ್ಲಿ $\frac{1}{8}$ ನೇ ಭಾಗ ಸ್ನೇಹನವನ್ನು ಕೂಡಿಸಬೇಕು.

ಗುಣಕರ್ಮ ದೃಷ್ಟಿಯಿಂದ ಲೇಪದಲ್ಲಿಯ ಪ್ರಕಾರಗಳು.

आलेपस्य च नामानि लिप्तो लेपश्च लेपनम् ।
दोषघ्नो विषहा वर्ण्यो मुखलेपस्त्रिधा मतः ।

(शा. सं. उ. खं.)

ದೋಷಘ್ನ, ವಿಷಘ್ನ ಹಾಗೂ ವರ್ಣ್ಯ ಎಂದು ಲೇಪವು ಮಾಡುವ ಕಾರ್ಯದ ಮೇಲಿಂದ ಮೂರು ವಿಧವು.

ಲೇಪ ಮಾತ್ರಾ:—

त्रिप्रमाण श्चतुर्भाग स्त्रिभागोऽर्धांगुलोन्नतः ।
आर्द्रो व्याधिहरः स स्याच्छुष्को दूषयतिच्छविम् ॥

(शा. सं. उ. खं.)

ದೋಷಘ್ನ ಲೇಪವು ಅಂಗುಲಿಯ $\frac{1}{4}$ ದಪ್ಪ
ವಿಷಘ್ನ ಲೇಪವು ಅಂಗುಲಿಯ $\frac{1}{3}$ ದಪ್ಪ
ವರ್ಣ್ಯಲೇಪವು ಅಂಗುಲಿಯ ಅರ್ಧದಷ್ಟು ದಪ್ಪವಾಗಿ ಮಾಡಬೇಕು.

ಲೇಪವು ಹಸಿ ಇದ್ದಾಗ ಶರೀರದ ಮೇಲೆ ಲೇಪ ಮಾಡಿದರೆ ಅದು ವ್ಯಾಧಿ ನಾಶಕವಾಗುವದು. ಶುಷ್ಕ ಲೇಪದ ಉಪಯೋಗವನ್ನು ಮಾಡಬಾರದು.

ಲೇಪ ವಿಧಿಃ–

तत्र प्रतिलोममालिम्पेन्नानुलोमं, प्रतिलोमे हि सम्यगौषधमवतिष्टते अनुप्रविश्यति रोमकूपान् स्वेदवाहिभिः शिरामुखैश्च वीर्यं प्राप्नोति । न च शुष्यमाणमुपेक्षेतान्यत्र पीडयितव्यात् शुष्को ह्यपार्थकोऽरुष्करश्च ।

(सुश्रुत.)

ಲೇಪವನ್ನು ಮಾಡುವಾಗ ರೋಮಕೂಪಗಳ ವಿರುದ್ಧವಾಗಿ ಲೇಪ ಮಾಡಬೇಕು. ಇದರಿಂದ ಔಷಧವಾದರೂ ಅಲ್ಲಿ ಸಮ್ಯಕ್ ರೀತಿಯಿಂದ ಉಳಿದು ರೋಮ ಕೂಪ ಗಳನ್ನು ಪ್ರವೇಶಿಸಿ ಸ್ವೇದವಾಹಿನಿಗಳ ಮುಖಾಂತರ ಶರೀರದಲ್ಲಿ ಪ್ರವೇಶಿಸಿ ದೋಷಗಳ ನಾಶ ಮಾಡುತ್ತದೆ. ಅದು ಸಂಪೂರ್ಣ ಶುಷ್ಕವಾಗುವವರೆಗೆ ಅಲ್ಲಿ ಇಡದೇ ಹಸಿಯಿರು ವಾಗಲೇ ಲೇಪವನ್ನು ತೆಗೆಯಬೇಕು. ಶುಷ್ಕವಾದರೆ ಅದು ಪೀಡಾಕಾರಕವಾಗುವದು.

ಲೇಪವನ್ನು ಮಾಡುವಾಗಿನ ಸೂಚನೆಗಳುಃ–

न च पर्युषितं लेपं कदाचिदुपचारयेत् ।
उश्माणं वेदनां दाइं घनत्वाज्जनयेत्स हि ॥
न च तेनैव लेपेन पुनर्जातु प्रलेपयेत् ॥
विशोषीं चाविशोषिं च वीक्ष्य कार्यं प्रयोजयेत्।
रक्यपित्त विकारेषु व्रणशोथे तथैव च ।
पूर्वं मुद्धृत्य लेपं तु पुनर्लेपं प्रदापयेत् ॥
अभिधाते तथा वातरुजि लेपं विशोपयेत् ।

न चालेपं रात्रौ प्रयुञ्जीत माभूच्छैत्यपिहितोष्मण स्तदनिर्गमाद्विकार प्रवृत्तिरिति ।

ಲೇಪವನ್ನು ಮಾಡಿಟ್ಟು ಒಂದು ದಿನದ ಮೇಲೆ ಅದನ್ನು ಉಪಯೋಗಿಸ ಬಾರದು. ಒಮ್ಮೆ ಹಚ್ಚಿದ ಲೇಪವನ್ನು ತೆಗೆದು ಅದನ್ನೇ ಹಸಿ ಮಾಡಿ ಮತ್ತೊಮ್ಮೆ ಉಪಯೋಗಿಸಬಾರದು. ಲೇಪವನ್ನು ಆಯಾ ರೋಗಗಳಿಗೆ ಅನುಸಾರವಾಗಿ ಹಸಿ ಯಿದ್ದಾಗಲೇ ತೆಗೆಯಬೇಕು. ಇಲ್ಲವೇ ಒಣಗುವವರೆಗೆ ಅಲ್ಲಿಯೇ ಇಡಬೇಕು.

ರಕ್ತ ಹಾಗೂ ಪಿತ್ತವಿಕಾರಗಳಲ್ಲಿ, ವೃಣಶೋಥದಲ್ಲಿ ಹಚ್ಚಿದ ಲೇಪವನ್ನು ಶುಷ್ಕ ವಾಗುವಮೊದಲೇ ತೆಗೆಯಬೇಕು. ಮತ್ತು ಬೇರೆ ಲೇಪ ಮಾಡಬೇಕು. ವಾಯುವಿನಿಂದ ಉಂಟಾದ ಶೂಲದಲ್ಲಿ, ಅಭಿಘಾತದಲ್ಲಿ ಲೇಪವನ್ನು ಶುಷ್ಕವಾಗುವವರೆಗೆ ಇಡಬೇಕು.

ಉಪನಾಹ:—

अतसी यव गोधूमचूर्ण मालोढ़ितं द्रवैः ।
सपक्वं सौषध स्नेहं वस्त्रेणांतरितं यथा ।
बध्यते व्रण शोथादावुपनाहः स उच्यते ।।

ಅತಸಿ, ಯವ, ಗೋಧೂಮ ಆದಿ ದ್ರವ್ಯಗಳನ್ನು ಘೃತಭರ್ಜಿತ ಮಾಡಿ ಚೂರ್ಣ ಮಾಡಿಕೊಳ್ಳಬೇಕು. ಈ ಚೂರ್ಣವನ್ನು ಒಂದು ಪಾತ್ರೆಯಲ್ಲಿ ಹಾಕಿ ಅದರಲ್ಲಿ ಜಲ ವನ್ನು ಹಾಕಿ ಅತಿ ತಿಳುವಾಗಿಯೂ, ಅತಿ ಘನವಾಗಿಯೂ ಅಲ್ಲದೇ ಅಗ್ನಿಯ ಮೇಲಿಟ್ಟು ಪಚನ ಮಾಡಿಕೊಳ್ಳಬೇಕು. ಇದನ್ನು ಬಿಸಿಯಿರುವಾಗಲೇ ಒಂದು ಸ್ವಚ್ಛವಾದ ಅರಿವೆಯ ಮೇಲೆ ಲೇಪಮಾಡಿ ಅದರ ಮೇಲೆ ಮತ್ತೊಂದು ಅರಿವೆಯನ್ನಿಟ್ಟು ವ್ರಣ ಶೋಥಾದಿಗಳಲ್ಲಿ ಕಟ್ಟುವದಕ್ಕೆ 'ಉಪನಾಹ' ಅನ್ನುವರು.

ಮಲಹರವ್:—

ಮಷ್ಠ ವ್ರಣಾದಿ ವ್ಯಾಧಿಗಳಲ್ಲಿ ಅವುಗಳ ಶೋಧನ ರೋಪಣ ಮಾಡುವ ದಕ್ಕಾಗಿಯೂ ಅವುಗಳ ನಾಶಕ್ಕಾಗಿಯೂ ಯಾವ ಔಷಧವು ಬಾಹ್ಯಲೇಪನಕ್ಕಾಗಿ ಉಪಯೋಗಿಸಲ್ಪಡುತ್ತದೆಯೋ ಆ ಔಷಧಕ್ಕೆ "ಮಲಹರವ್" ಎಂಬ ಸಂಜ್ಞೆ ಇದೆ.

ಹೇತುಃ– ವ್ರಣಾದಿ ಕುಷ್ಠರೋಗಗಳ ನಾಶಕ್ಕಾಗಿ,

ಸ್ಥಾನ:– ಬಾಹ್ಯ ಉಪಯೋಗ.

ಉಪಾದಾನ ಅಥವಾ ಮಾಧ್ಯಮ:– ಘೃತ, ನವನೀತ, ತಿಲತೈಲ, ಮೇಣ.

ಸಾಧನಃ– ದ್ರವ್ಯ, ಘೃತಾದಿ ಸ್ನೇಹ, ಪಾತ್ರೆ, ಚೂರಿ, ಅಗ್ನಿ, ಜಲ, ಕೂಪಿಕಾ.

ಕೃತಿಃ– ಸ್ನೇಹವನ್ನು ಪಾತ್ರೆಯಲ್ಲಿ ಹಾಕಿ ಅಗ್ನಿಯಿಂದ ಪಾಕ ಮಾಡಿಕೊಳ್ಳಬೇಕು. ಅದು ದ್ರವವಾದಮೇಲೆ ವಸ್ತ್ರಗಾಲಿತ ಮಾಡಿಕೊಳ್ಳಬೇಕು. ಆ ದ್ರವದಲ್ಲಿ ದ್ರವ್ಯಗಳ ಸೂಕ್ಷ್ಮ ಚೂರ್ಣ ಕೂಡಿಸಿ ಚೆನ್ನಾಗಿ ತಿಕ್ಕಬೇಕು. ಸ್ವಾಂಗ ಶೀತವಾದ ಮೇಲೆ ಕಾಜಿನ ಕೂಪಿಯಲ್ಲಿ ಹಾಕಿ ಉಪಯೋಗಿಸಬೇಕು. ಅಥವಾ ಇನ್ನೊಂದು ವಿಧದಿಂದಲೂ ಮಲಹರವ್ ತಯಾರಿಸುತ್ತಾರೆ.

ಸ್ನೇಹವನ್ನು ಒಂದು ಪ್ಲೇಟಿನಮೇಲೆ ಹಾಕಿ ಚೆನ್ನಾಗಿ ತಿಕ್ಕಬೇಕು. ಮತ್ತು ಅದರಲ್ಲಿ ದ್ರವ್ಯಚೂರ್ಣ ಕೂಡಿಸಿ ಚೆನ್ನಾಗಿ ಮಿಶ್ರಣ ಮಾಡಬೇಕು. ಇದನ್ನು ಬಾಹ್ಯ ಉಪಯೋಗಕ್ಕಾಗಿ ಉಪಯೋಗಿಸಬೇಕು.

ಪ್ರಕರಣ ೧೨

ಮಾನ, ಪರಿಭಾಷಾ ವಿಜ್ಞಾನ

ಮಾನಪರಿಭಾಷಾ (Weights & Measures) ಃ—

मियतेऽनेनेति मानम् ।
न मानेन विना युक्तिर्द्रव्याणां जायते क्वचित् ।
अतः प्रयोगार्थं मानमत्रोच्यते मया ।। (शा. सं.)

ದ್ರವ್ಯಗಳ ಭಾರವನ್ನು ತೂಕ ಮಾಡುವದು, ದ್ರವಪದಾರ್ಥಗಳನ್ನು ಅಳೆಯುವದು ಮತ್ತು ದ್ರವ್ಯಗಳ ಉದ್ದಳತೆಗಳನ್ನು ತಿಳಿದುಕೊಳ್ಳುವ ಸಾಧನಕ್ಕೆ 'ಮಾನ' ವೆನ್ನುವರು.

ಮಾನವಿಲ್ಲದೆ ಔಷಧಿಕಲ್ಪಗಳನ್ನು ತಯಾರಿಸಲಾಗುವದಿಲ್ಲ. ಹಾಗೂ ವ್ಯಾಧಿಗ್ರಸ್ಥ ಪುರುಷನಿಗೆ ಔಷಧಿ ಪ್ರಯೋಗವನ್ನು ಮಾಡಲಾಗುವದಿಲ್ಲ. ಔಷಧಿಯ ವಿವಿಧ ಕಲ್ಪಗಳಲ್ಲಿ ಅನೇಕ ದ್ರವ್ಯಗಳನ್ನುಪಯೋಗಿಸುತ್ತಿದ್ದು ಅವೆಲ್ಲವುಗಳನ್ನು ಒಂದು ನಿಶಿಷ್ಠ ಪ್ರಮಾಣದಲ್ಲಿಯೇ ತೆಗೆದುಕೊಳ್ಳ ಬೇಕಾಗುತ್ತದೆ.

ಪ್ರಾಚೀನ ಶಾಸ್ತ್ರಕಾರರ ಪ್ರಕಾರ ಮಾನವು ಮೂರು ಪ್ರಕಾರದ್ದಿರುತ್ತದೆ.

पाय्यं हस्तादिभिर्मानं द्रुवयं कुडवादिभिः पौतवं तुलया ।
(वैजयन्ती)

1) ಪಾಯ್ಯ ಮಾನಃ– ಪದಾರ್ಥಗಳ ಉದ್ದಳತೆಯನ್ನು ನೋಡುವದು.
2) ದ್ರವಯಃ– ದ್ರವ ಪದಾರ್ಥಗಳನ್ನು ಅಳೆಯುವದು.
3) ಪೌತವಃ– ದ್ರವ್ಯಗಳ ಭಾರವನ್ನು ತೂಕ ಮಾಡುವದು.

–ಃ ಚರಕೋಕ್ತ ಮಾನ ಃ–

6	ವಂಶಿ (ಧ್ವಂಸಿ)	=	1 ಮರೀಚಿ
6	ಮರೀಚಿ	=	1 ಸರ್ಷಪ
8	ಸರ್ಷಪ	=	1 ತಂಡುಲ
2	ತಂಡುಲ	=	1 ಧಾನ್ಯ ಮಾಷ
2	ಧಾನ್ಯ ಮಾಷ	=	1 ಯವ
4	ಯವ	=	1 ಅಂಡಿಕಾ
4	ಅಂಡಿಕಾ	=	1 ಮಾಷಕ
3	ಮಾಷಕ	=	1 ಶಾಣ = $\frac{1}{4}$ ತೊಲಿ
2	ಶಾಣ	=	1 ದ್ರಂಕ್ಷಣ, ಕೋಲ = $\frac{1}{2}$ ತೊಲ್ಲಿ

2	ದ್ರಂಕ್ಷಣ	=	1 ಕರ್ಷ, ತೊಲಿ = 96 ಗುಂಜಿ
2	ಕರ್ಷ	=	1 ಪಲಾರ್ಧ = 1 ಶುಕ್ತಿ = 2$\frac{1}{2}$ ತೊಲಿ
2	ಪಲಾರ್ಧ	=	1 ಪಲ = 4 ತೊಲಿ
2	ಪಲ	=	1 ಪ್ರಸೃತಿ = 8 ತೊಲಿ
2	ಪ್ರಸೃತಿ	=	1 ಕುಡವ = 16 ತೊಲಿ
2	ಕುಡವ	=	1 ಮಾನಿಕಾ = 32 ತೊಲಿ
4	ಕುಡವ	=	1 ಪ್ರಸ್ಥ = 64 ತೊಲಿ
4	ಪ್ರಸ್ಥ	=	1 ಆಢಕ = 256 ತೊಲಿ
4	ಆಢಕ	=	1 ದ್ರೋಣ = 1024 ತೊಲಿ
2	ದ್ರೋಣ	=	1 ಶೂರ್ಪ = 2048 ತೊಲಿ
2	ಶೂರ್ಪ	=	1 ಖಾರಿ, ಗೋಣಿ
32	ಶೂರ್ಪ	=	1 ವಾಹ
100	ಪಲ	=	1 ತುಲಾ = 400 ತೊಲಿ

—ಃ ಸುಶ್ರುತೋಕ್ತಮಾನ ಃ—

12	ಮಧ್ಯಮ ಧಾನ್ಯ ಮಾಷ	=	1 ಸುವರ್ಣ ಮಾಷಕ = 6 ರತ್ತಿ
16	ಸುವರ್ಣ ಮಾಷಕ	=	1 ಸುವರ್ಣ = 96 ರತ್ತಿ = 1 ತೊಲಿ
19	ನಿಷ್ಪಾವ	=	1 ಧರಣ = 38 ರತ್ತಿ
2$\frac{1}{2}$	ಧರಣ	=	1 ಕರ್ಷ
4	ಕರ್ಷ	=	1 ಪಲ
4	ಪಲ	=	1 ಕುಡವ
4	ಕುಡವ	=	1 ಪ್ರಸ್ಥ
4	ಪ್ರಸ್ಥ	=	1 ಆಢಕ
4	ಆಢಕ	=	1 ದ್ರೋಣ
100	ಪಲ	=	1 ತುಲಾ = 400 ತೊಲಿ
20	ತುಲಾ	=	1 ಭಾರ

—ಃ ಶಾರಂಗಧರೋಕ್ತ ಮಾನ ಃ—

30	ಪರಮಾಣು	=	1 ವಂಶಿ
6	ವಂಶಿ	=	1 ಮರೀಚಿ
6	ಮರೀಚಿ	=	1 ರಾಜಿಕಾ
3	ರಾಜಿಕಾ	=	1 ಸರ್ಷಪ
8	ಸರ್ಷಪ	=	1 ಯವ
4	ಯವ	=	1 ಗುಂಜ = 1 ರತ್ತಿ
6	ರತ್ತಿ	=	1 ಮಾಷಕ

4	ಮಾಷಕ	=	1 ಶಾಣ = $\frac{1}{4}$ ತೊಲಿ
2	ಶಾಣ	=	1 ಕೋಲ = $\frac{1}{2}$ ತೊಲಿ
2	ಕೋಲ	=	1 ಕರ್ಷ = 1 ತೊಲಿ
2	ಕರ್ಷ	=	1 ಶುಕ್ತಿ = 2 ತೊಲಿ = $\frac{1}{2}$ ಪಲ
2	ಶುಕ್ತಿ	=	1 ಪಲ = 4 ತೊಲಿ
2	ಪಲ	=	1 ಪ್ರಸೃತಿ = 8 ತೊಲಿ
2	ಪ್ರಸೃತಿ	=	1 ಕುಡವ (ಅಂಜಲಿ) = 16 ತೊಲಿ
2	ಕುಡವ	=	1 ಮಾನಿಕಾ (ಶರಾವ) = 32 ತೊಲಿ
2	ಶರಾವ	=	1 ಪ್ರಸ್ಥ = 64 ತೊಲಿ
4	ಪ್ರಸ್ಥ	=	1 ಆಢಕ = 256 ತೊಲಿ
4	ಆಢಕ	=	1 ದ್ರೋಣ = 1024 ತೊಲಿ
2	ದ್ರೋಣ	=	1 ಶೂರ್ಪ = 2048 ತೊಲಿ
2	ಶೂರ್ಪ	=	1 ದ್ರೋಣಿ
4	ದ್ರೋಣಿ	=	1 ಖಾರಿ
2000	ಪಲ	=	1 ಭಾರ
100	ಪಲ	=	1 ತುಲಾ = 400 ತೊಲಿ

—: ಶಾರಂಗಧರೋಕ್ತ ಸಂಕ್ಷಿಪ್ತ ಮಾನ :—

4	ಮಾಷ	=	1 ಟಂಕ (ಶಾಣ)
4	ಟಂಕ	=	1 ಅಕ್ಷ (ಕರ್ಷ)
4	ಅಕ್ಷ	=	1 ಬಿಲ್ವ (ಪಲ)
4	ಬಿಲ್ವ	=	1 ಕುಡವ
4	ಕುಡವ	=	1 ಪ್ರಸ್ಥ
4	ಪ್ರಸ್ಥ	=	1 ಆಢಕ
4	ಆಢಕ	=	1 ರಾಶಿ (ದ್ರೋಣ)
4	ರಾಶಿ	=	1 ದ್ರೋಣಿ
4	ದ್ರೋಣಿ	=	1 ಖಾರಿ

—: ಕಲಿಂಗ ಮಾನ :—

12	ಸರ್ಷಪ	=	1 ಯವ.	2	ಯವ	=	1 ಗುಂಜ.
3	ಗುಂಜ	=	1 ವಲ್ಲ.	8	ಗುಂಜ	=	1 ಮಾಷ.
4	ಮಾಷ	=	1 ಶಾಣ.	6	ಮಾಷ	=	1 ಗದ್ಯಾಣ.
10	ಮಾಷ	=	1 ಕರ್ಷ.	4	ಕರ್ಷ	=	1 ಪಲ.
4	ಪಲ	=	1 ಕುಡವ.				

–: ಆಂಗ್ಲ ಮಾನ :–

(Imperial System of Measures & Weights)

1 ಗ್ರೇನ	= ½ ರತ್ತಿ.	60 ಗ್ರೇನ	= 1 ಡ್ರಾಮು.
8 ಡ್ರಾಮ	= 1 ಔಂಸ.	16 ಔಂಸ	= 1 ಪೌಂಡು.
14 ಪೌಂಡು	= 1 ಸ್ಟೋನ.	28 ಪೌಂಡು	= 1 ಕ್ವಾರ್ಟರ.
4 ಕ್ವಾರ್ಟರ	= 1 ಹಂಡ್ರೆಡ್ ವೇಟ.	20 ಹಂಡ್ರೆಡ್ ವೇಟ	= 1 ಟನ್.

–: ಯುರೋಪೀಯ ಮಾನ (Metric System) :–

1 ಗ್ರಾಮ್	= ಸುಮಾರು 15½ ಗ್ರೇನ
1 ಡೇಸಿ ಗ್ರಾಮ್	= $\frac{1}{10}$ ಗ್ರಾಮ್
1 ಸೆಂಟಿ ಗ್ರಾಮ್	= $\frac{1}{100}$ ಗ್ರಾಮ್
1 ಮಿಲಿ ಗ್ರಾಮ್	= $\frac{1}{1000}$ ಗ್ರಾಮ್
1 ಕಿಲೋ ಗ್ರಾಮ್	= 1000 ಗ್ರಾಮ್

–: ಆಯುರ್ವೇದೀಯ ದ್ರವ ಮಾನ :–

1 ಬಿಂದು = ತರ್ಜನಿ ಬೆರಳಿನ ಎರಡು ಗಿಣ್ಣುಗಳನ್ನು ದ್ರವ ಪದಾರ್ಥದಲ್ಲಿ ಎದ್ದಿ ಮೇಲಕ್ಕೆ ಎತ್ತಿದರೆ ಬೀಳುವ ಹನಿ.

8 ಬಿಂದು = 1 ಶಾಣ.

32 ಬಿಂದು = 1 ಶುಕ್ತಿ. 64 ಬಿಂದು = ಪಾಣಿಶಕ್ತಿ.

–: ಆಂಗ್ಲ ದ್ರವ ಮಾನ (Imperial System) :–

1 ಹನಿ (Drop)	= 1 ಮಿನಿಮ್ (Minim)
60 ಮಿನಿಮ್	= 1 ಫ್ಲುಯಿಡ್ ಡ್ರಾಮ್ (Fluid drachm)
8 ಫ್ಲುಯಿಡ್ ಡ್ರಾಮ್	= 1 ಫ್ಲುಯಿಡ್ ಔಂಸ (Fluid Ounce)
16 „ ಔಂಸ	= 1 „ ಪೌಂಡ (Fluid Pound)
20 „ „	= 1 ಪಿಂಟ್ (Pint)
8 ಪಿಂಟ್	= 1 ಗ್ಯಾಲನ್ (Gallon)

–: ಯುರೋಪೀಯ ದ್ರವ ಮಾನ (Metric System) :–

1 ಮಿಲಿ ಲಿಟರ್	= 16·7° ಸೆಂಟಗ್ರೇಡ	ಮೇಲೆ	1	ಗ್ರಾಮ್	ನೀರಿನ	ಪರಿಸ್ರುತ	ಎತ್ತರ
1 ಸೆಂಟಿ ಲಿಟರ್	= „	„	10	„	„	„	„
1 ಡೆಸಿ ಲಿಟರ್	= „	„	100	„	„	„	„
1 ಲಿಟರ್	= „	„	1000	„	„	„	„

ಶುದ್ಧಿ-ಪತ್ರಿಕೆ

ಪೃಷ್ಠ	ಸಾಲು	ಅಶುದ್ಧ	ಶುದ್ಧ
೪	೫	स्मृता	स्मृताः
,,	೨೬	य	ये
,,	೨೮	व ङ्कुरनिभं	दुर्वाङ्कुरनिभं
,,	೨೮	जब्वास्ततः	जम्ब्वास्ततः
,,	೩೧	जंबूलमिति	जम्बूफलमिति
೫	೨೯	पार्थिव	पार्थिवं
೬	೩೦	षङ्गोरिति	पङ्गोरिति
೮	೧೬	लुतमः	लघुतमः
೯	೨-೩	प्रतिघात	प्रतीघात
೯	೬	प्रवानो	प्रधानो
೧೧	೭	मघरमिति	मधुरमिति
೧೧	೧೮	वंघ	बंध
೧೧	೨೦	आप्य	आप्यं
೧೨	೩	विशद	विशदं
೧೨	೩೦	तमार्दव	तन्मार्दव
೧೫	೨೪	शुञ्जा	शुञ्जाः
೧೬	೨೮	सुवर्ण	सुवर्णं
೧೬	೨೯	मनशिलाले	मनःशिलाले
೧೬	೨೯	गैरिकांजन	गैरिकांजने
೧೮	೩	बलत्रयम्	बलात्रयम्
೧೯	೪	त्रायती	त्रायती
೧೯	೭	पचमूल	पंचमूलं
೨೧	೨೪	(सु. सू. ४०)	(सु. सू. ४१)
೨೩	೧೩	सुबहा	सुवहा
೨೪	೫	पियंगु	प्रियंगु
೩೧	೨೫	दर्भ	दर्भ
೩೬	೨೭	स्थापन	आस्थापन
೩೮	೧೩	आम्न	आम्र
೪೩	೧೫	दर्भं	दर्भ
೫೧	೨೪	अमोघ	अमोघा

ಪೃಷ್ಠ	ಸಾಲು	ಅಶುದ್ಧ	ಶುದ್ಧ
೫೧	೩೨	जराभिहत्य	जरामभिहत्य
೫೨	೧೩	तल्लंघन	तल्लंघनं
೫೬	೧೩	स्थवीर्येण	स्ववीर्येण
೫೬	೧೭	पारिप्लव	परिप्लव:
೫೯	೧೬	(अ. हृ. सू. २४)	(अ. हृ. सू. अ. १४)
೫೯	೧೮	स्ववीया	स्ववीर्येण
೫೯	೨೧	स्नेहक्त	स्नेहावत
೫೯	೨೭	(च. मू. १५)	(च. सू. १५)
೫೯	೨೮	घतुस्थिरत्वं	धातुस्थिरत्वं
೬೧	೬	लक्षते	लभते
೬೨	೨೩	देहस्यौजस्कर	देहस्यौजस्कर
೬೨	೨೭	वीजाकरणेमुच्यत	वाजीकरणमुच्यते
೬೩	೧೧	व्यप्नोति	व्याप्नोति
೬೩	೧೮	धतु	धातु
೬೪	೧	स्वप्न	स्वप्न
೬೪	೨೫	ल्वृषथा	ल्वृषभी
೬೫	೨೪	मधुशिग्र	मधुशिग्रु
೬೫	೨೫	दर्मा	दर्भा
೬೭	೨೯	क्षुद्रश्वे	क्षुद्रश्वेता
೬೯	೨೨	भाङ्गी	भार्ङ्गी
೭೦	೧೧	स्थैणेयक	स्थौणेयक
೭೦	೧೧	कुंदुरुकागरु	कुंदुरुकागरु
೭೬	೩೧	त्पल	उत्पल
೮೧	೧೧	द्योतो	द्योतौ
೮೨	೫	द्यावन्स्य:	द्यावत्त्य:
೮೨	೬	परिकीर्तिनौ	परिकीर्तितौ
೮೩	೨	शाङ्खिनी	शङ्खिनी
೮೪	೪	मतुलुङ्गी	मातुलुङ्गी
೮೪	೯	शकृद्रसौ	गोमूत्रशकृद्रसौ
೮೯	೧೬	असमवयित्वाद्	असमवायित्वाद्
೯೪	೩	गौरवं	गुरुत्वं
೯೪	೩	पतन कारणम्	पतनकर्मकारणम्

ಪೃಷ್ಠ	ಸಾಲು	ಅಶುದ್ಧ	ಶುದ್ಧ
೯೫	೧೯	(च. वि. अ. ८)	(च. सू. अ. २६)
೯೭	೧	(सु. सू. ४६)	(सु. सू. ४१)
೯೯	೨೫	खर	खरः
೯೯	೨೪	(ह्वे)	(हे)
೧೦೫	೧೩	पिच्छिलस्ततुलो	पिच्छिलस्तंतुलो
೧೦೫	೧೪	वल्यः	वल्यः
೧೦೭	೨	रोपणो	रोपणे
೧೦೭	೩	स्नहं	स्नेहं
೧೦೯	೧೨	सूक्ष्ममुच्ते	सूक्ष्ममुच्यते
೧೨೦	೨	भवाभ्यसन	भावाभ्यसन
೧೨೦	೨೬	पिक्त	तिक्त
೧೨೫	೫	च	तु
೧೨೫	೨೭	कपोतवल्ली, कपोतवल्ली	कपोतवल्ली
೧೨೮	೧೩	रफूर्जक	स्फूर्जक
೧೨೮	೩೦	षड ि मूर्च्छंति	षडभिमूर्च्छंति
೧೩೪	೨	गुणति	गुणाति
೧೩೪	೨೮	पच्छिंल्यात्	पैच्छिल्यात्
೧೩೫	೧೬	क्षणी क्षत	क्षीण क्षत
೧೩೯	೧೨	(र. वै)	(र. वै.)
೧೪೦	೨೭	सोति	सोऽति
೧೪೨	೧೮	तिक्तादयः	स्तिक्तादयः
೧೪೩	೧೧	वंधानछिनत्ति	वंधान्छिनत्ति
೧೪೩	೨೯	पर्शिव	पार्श्व
೧೫೫	೧೭	य	च
೧೫೫	೨೯	सप्तमां	सप्तमो
೧೬೭	೨	स्वादुर्गुरु	स्वादुर्गुरुः
೧೬೭	೩	पित्तकृच्छुक्रजुल्लघुः	पित्तकृच्छुक्रनुल्लघुः
೧೭೩	೮	केचिद्विधमास्थिताः	केचिद्विविधमास्थिताः
೧೮೪	೨೪	रसदयः	रसादयः
೧೯೩	೧೨	पृथक	पृथक्
೧೯೯	೧೪	पंचकोल	पंचक लं
೨೦೧	೧೭	यवज	यवजः

ಪೃಷ್ಠ	ಸಾಲು	ಅಶುದ್ಧ	ಶುದ್ಧ
೨೦೪	೮	प्रोक्त	प्रोक्तं
೨೧೪	೧೯	श्वभ्रम	श्वभ्र
೨೧೬	೧	सर्वतोऽअसार	सर्वतोऽसार
೨೧೮	೧೪	कालेऽयं	कालोयं
೨೧೯	೨೫	नहिंस्या	न हिंस्या
೨೨೧	೮	अंतौ	अंते
೨೪೧	೮	चतुर्भगावशिष्ठं	चतुर्भागावशिष्टं
೨೪೩	೨೩	सलिलप्लुतस्तु	सलिलाप्लुतस्तु
೨೪೩	೨೩	पर्युषिनः	पर्युषितः
೨೪೮	೭	चतुर्गुणा	चतुर्गुणा
೨೪೮	೧೬	दृप्टवा	दृष्टवा
೨೪೮	೨೭	भवति	भवतीति
೨೪೮	೨೮	अनुदग्ध	अनुपदग्धं
೨೫೭	೨೫	अग्निक्षिप्तः	अग्निनिक्षिप्तः

संदर्भ ग्रंथः–

चरक संहिता, सुश्रुत संहिता, अष्टांग हृदय, शार्ङ्गधर संहिता, काश्यप संहिता, भावप्रकाश, अष्टांग संग्रह, योगरत्नाकर, रसतरंगिणी, निघंटु रत्नाकर.

च. द. = चक्रपाणिदत्त, चरकसंहिता टीकाकार.

डल्हण = सुश्रुत संहिता टीकाकार

अ. द. = अष्टांग हृदय टीकाकार

इंदु = अष्टांग संग्रह टीकाकार.

